ಈ ಸಂಚಿಕೆಯಲ್ಲಿ

ಉದ್ಯಮ ವ್ಯವಹಾರಗಳ ರಾಷ್ಟ್ರೀಕರಣ (ಸಂಪಾದಕೀಯ)
ಸಂಪಾದಕರು ೧

ನಾಡನುಡಿ (ಸಾಂದರ್ಭಿಕ ಟಿಪ್ಪಣಿಗಳು)
'ಕಾಲಭೈರವ' ೩

ನಾಶ್ವಯ ತಪಸ್ಸು (ವಿಚಾರ ಪ್ರಬಂಧ)
ಶ್ರೀ. ನಾರಾಯಣರಾವ್ ಕರ್ಗಲ್ಲು ವಿ. ಕ. ೫

ಅಂದಿನ ಆ ನೆನಪಿಗೆ (ಕವನ)
ಶ್ರೀ. ಸಿದ್ದಣ್ಣ ಮಸಳಿ ಬಿ. ಎ. ಧಾರವಾಡ ೮

ಆಸೆ (ಕವನ)
ಶ್ರೀ. ಸಿ. ಹೊಸಬೆಟ್ಟು ೮

ತಿಮ್ಮನ ದೈನ (ನೀಳ್ಗತೆ)
ಶ್ರೀ. ಸಿ. ಎಸ್. ಕುಲಕರ್ಣಿ ಬಿ. ಎ, ಬಿ. ಟಿ. ಧಾರವಾಡ ೯

ನೂತನನ ವಿಚಾರ (ವಿ. ಹ್ಯ. ಪ್ರಬಂಧ)
ಶ್ರೀ. ಜೋಶಿ ಶಂಕರರಾಯರು, ಧಾರವಾಡ ೧೯

ಅತಿಥಿ ಸಾರ್ವಭೌಮ (ನಗೆಯಾಟ)
ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ ೩೧

ಬಂಧನಾ ಮುಕ್ತಿರಾಯ (ಗೀತರೂಪಕ)
'ಆನಂದಕಂದ' ೩೫

ವಿಚಿತ್ರವಿಧಿ (ಸಣ್ಣಕಥೆ)
ಶ್ರೀ. ವೆಂ. ಮು ಜೋಶಿ, ಧಾರವಾಡ ೩೮

ಪಂಚವಾರ್ಷಿಕ ಯೋಜನೆ (ಲೇಖಾಂಕ ೧)
ಶ್ರೀ. ಎ. ಸಿ. ಹುತ್ತಲಮನಿ ಬಿ. ಎಸ್‌ಸಿ. (ಆಗ್ರಿ) ೪೩

ಸಾಹಿತ್ಯ ಮತ್ತು ಸಾಹಿತಿ (ಸಂಗ್ರಹಿತ ಲೇಖನ)
ಶ್ರೀ ಬ. ಲ. ನೆಲ್ಲಿ 'ವಿದ್ವಾನ್' 'ವಿಶಾರದ' ಮಣಿಸಾಳ ೪೭

ಸಾಹಿತ್ಯ ವಿಮರ್ಶೆಯ ಶಿಕ್ಷಣದಂಗ
ಸಂಪಾದಕರು ೪೯

ಪ್ರಭೆಗೆ (ಕವನ)
ಶ್ರೀ. ಸಿ. ದೇವೇಂದ್ರನಾಯಕ, ಧಾರವಾಡ ೪೦

ಸಾದರ ಸ್ವೀಕಾರ ....

ಜಯಂತಿ

ಸಂಪುಟ ೧೬ ಸಂಚಿಕೆ ೧

ಕುಟುಂಬದಲ್ಲಿಯ
ಪ ತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು:
ಶ್ರೀ. ಬಿಟಿಗೇರಿ ಕೃಷ್ಣಶರ್ಮ

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು:
ಶ್ರೀ. ಡಿ. ಶರಭಕುಮಾರ

**

ಪಂಚಿಕೆ ಪ ತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

**

ವಾರ್ಷಿಕ ವರ್ಗಣಿ ಜಿ ರೂ.
ಬಿಡಿ ಸಂಚಿಕೆ ೦ ಆಣೆ

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

**

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

卐

ವ್ಯವಹಾರೋದ್ಯಮಗಳ ರಾಷ್ಟ್ರೀಕರಣ

ಭಾರತದಲ್ಲಿ ಪ್ರಜಾಸ್ವಭುತ್ವ ಬಂದುಬಿಟ್ಟಿದೆ. ಪ್ರಜೆಗಳಿಗೆ ಬೇಕಾಗಿದೆಯಿಲ್ಲವೋ ಗೊತ್ತಿಲ್ಲ; ಪ್ರಭುತ್ವ ರಾಷ್ಟ್ರದಲ್ಲಿಯ ಎಲ್ಲ ವ್ಯವಹಾರವನ್ನೂ ರಾಷ್ಟ್ರೀಕರಿಸಬೇಕೆಂಬ ವಿಚಾರದಲ್ಲಿದೆ. ಆವರೆ ಈ ರಾಷ್ಟ್ರೀಕರಣ ನಮ್ಮ ಜನತೆಯ ಸಾಮಾಜಿಕ—ಸಾಂಸ್ಕೃತಿಕ ಜೀವನದ ಮೇಲೆ ಎಂತಹ ಪರಿಣಾಮ ಮಾಡಬಹುದೆಂಬುದರ ಬಗೆಗೆ ನಮ್ಮಲ್ಲಿಯ ಬುದ್ಧಿವಂತರೆನಿಸಿಕೊಳ್ಳುವ ಜನರೆಲ್ಲರೂ ಪರಾಮರ್ಶನೇಕ ಬುದ್ಧಿಯಿಂದ ಆಲೋಚಿಸಿ ನೋಡಬೇಕಾಗಿದೆ.

ಇಂದು ಜಗತ್ತಿನಲ್ಲಿಯ ಬಹುಸಂಖ್ಯಾಕ ಪ್ರಭುತ್ವಗಳು ಆರ್ಥಿಕ ಸಮತಾವಾದವನ್ನೇ ಆದರ್ಶವಾಗಿರಿಸಿಕೊಂಡು ತೊರಟುದರಿಂದ, ವ್ಯಕ್ತಿಗಳ ಸಂಪಾದನೆಯ ಮೇಲೆ ನಿಯಂತ್ರಣವನ್ನು ಮಾಡಬೇಕೆಂಬ ಪದ್ಧತಿಯನ್ನು ರೂಢಿಯಲ್ಲಿ ತರುತ್ತಲಿರುವುದು ಸರಿಯಷ್ಟೇ! ಭಾರತದ ಪ್ರಜಾ-ಪ್ರಭುತ್ವವೂ ಇದೇ ಧೋರಣೆಯಿಂದ ತನ್ನ ರಾಜಕಾರ್ಯವನ್ನು ನಡೆಯಿಸುತ್ತಲಿದೆ. ರಾಷ್ಟ್ರದ ಪ್ರಕಿಯೊಂದು ಆರ್ಥಿಕ ವ್ಯವಹಾರವನ್ನೂ ತನ್ನ ತಂತ್ರದಲ್ಲಿಯೇ ತಂದುಕೊಳ್ಳಲು ಬಯಸುತ್ತಲಿದೆ. ಒಂದೊಂದನ್ನಾಗಿ ಕೈಯಲ್ಲಿ ತೆಗೆದುಕೊಳ್ಳುತ್ತಲೂ ಇದೆ. ಇದರ ಪರಿಣಾಮವೆಂದರೆ ಭವಿಷ್ಯದ್ ಭಾರತದ ಜನತೆಯಲ್ಲಿ ಎಜ್ಜೇ ಎರಡು ವರ್ಗಗಳು ನಿರ್ಮಾಣವಾಗಿ ನಿಲ್ಲಬಹುದು. ಒಂದು ಆಡಳಿತವನ್ನು ನಡೆಯಿಸುವ ಪ್ರಭುತ್ವದ ಪ್ರತಿನಿಧಿಗಳ ವರ್ಗ. ಇನ್ನೊಂದು ಕೇವಲ ಮಡಿಯುವವರ ವರ್ಗ.

ರಾಷ್ಟ್ರೀಯ ಭಾವನೆ, ಸಾಮಾಜಿಕಬುದ್ಧಿಗಳು ಜಾಗೃತವಾಗಿರುವ ಜನರಿದ್ದಲ್ಲಿ ಈ ಆರ್ಥಿಕ ವ್ಯವಹಾರಗಳ ರಾಷ್ಟ್ರೀಕರಣವು ಹಿತಕರವಾಗಿ ಪರಿಣಮಿಸೀತು. ಅದು ಇಲ್ಲದಲ್ಲಿ, ವ್ಯಕ್ತಿ-ವ್ಯಕ್ತಿಗಳಲ್ಲಿ ಔದಾಸೀನ್ಯ-ಕೆಲಸಗೇತಿತನಗಳು ಬೆಳೆದು, ಸಮುದ್ದೇಶದಿಂದಲೇ ಪುರಸ್ಕರಿಸಿದ ರಾಷ್ಟ್ರೀಕರಣದ ಪ್ರಯೋಗವು ಸಂಕಟಕಾರಿಯಾಗಿ ಪರಿಣಮಿಸೀತು. ಇದಕ್ಕೆ ದೂರದ ಉದಾಹರಣೆ ಬೇಕಾಗಿಲ್ಲ. ಮುಂಬಯಿ ರಾಜ್ಯದಲ್ಲಿ ಪ್ರಚಾರದಲ್ಲಿ ತಂದ ಮೋಟಾರ ಸಾರಿಗೆಯ ರಾಷ್ಟ್ರೀಕರಣವು ಪ್ರತ್ಯಕ್ಷ ಸಾಕ್ಷಿಯಾಗಿರುವುದು.

ಮೋಟಾರುಸಾರಿಗೆಯ ರಾಷ್ಟ್ರೀಕರಣದ ವಿಚಾರದಲ್ಲಿ ಮುಂಬಯಿ ಸರಕಾರದ ಸದುದ್ದೇಶವನ್ನು ನಾವೇನೂ ಶಂಕೆಯಿಂದ ನೋಡಬೇಕಾಗಿಲ್ಲ. ರಾಜ್ಯದ ಜನರಿಗೆ ಸುಖಕರವಾದ ಪ್ರಯಾಣ ಸೌಕರ್ಯವನ್ನು ಉಂಟುಮಾಡಬೇಕೆಂಬ ಒಳ್ಳೆಯ ಉದ್ದೇಶದಿಂದಲೇ ಇದನ್ನು ಆರಂಭಿಸಲಾಗಿದೆ ಅದರೆ ಈ ವಿಭಾಗದಲ್ಲಿ ಕಾರ್ಯವಾಡುವ ಅಧಿಕಾರಿಗಳು, ನೌಕರರು— ಇವರಲ್ಲಿ ಪ್ರಜಾಹಿತದ ಭಾವನೆ ಜಾಗೃತವಾಗಿರದಿರುವುದರಿಂದ, ಮೊದಲಿದ್ದ—ವ ಕ್ತಿಗಳ ಒಡೆತನಕ್ಕೆ ಸೇರಿ-ಮೋಟಾರ್ ಸಾರಿಗೆಯ ವ್ಯವಸ್ಥೆಗಿಂತ ಹೆಚ್ಚಿನ ಪ್ರತಿಕೂಲತೆಯುಂಟಾಗಿದೆಯೆಂಬುದು ಇಂದಿನ ಬಹುಜನರ ಅನುಭವವಾಗಿದೆ.

ಒಡೆತನದ ಸಾರಿಗೆಯ ವ್ಯವಸ್ಥೆಯಲ್ಲಿ ಒಡೆಯನ ಪ್ರತ್ಯಕ್ಷ ನಿಯಂತ್ರಣವಿರುತ್ತಿದ್ದಿತಲ್ಲದೆ, ಕಾರ್ಯಕ್ಷೇತ್ರವು ಮರ್ಯಾದಿತವಾಗಿರುತ್ತಿದ್ದಿತು. ಎಂತಲೇ ಎಲ್ಲ ವ್ಯವಸ್ಥೆಯನ್ನೂ ಪ್ರತ್ಯಕ್ಷವಾಗಿ ನೋಡಿಕೊಳ್ಳಲು ಸುಲಭವಾಗುತ್ತಲಿದ್ದಿತು. ಸ್ವಂತದ ಬಂಡವಾಳದಿಂದ ನಡೆಯಿಸುವ ವ್ಯವಹಾರವಾದುದರಿಂದ, ಒಡೆಯನು ಎಲ್ಲವನ್ನೂ ಆತ್ಮೀಯತೆಯಿಂದ ನೋಡಿಕೊಳ್ಳುತ್ತಲಿದ್ದನು. ನಂಬುಗೆಯಿಂದಲೂ ದಕ್ಷತೆಯಿಂದಲೂ ಕಾರ್ಯವಾಡುವ ನೌಕರನ್ನು ನಿಯಮಿಸಿಕೊಳ್ಳುತ್ತಿದ್ದನು. ಒಡೆಯನ ವ್ಯವಹಾರವನ್ನು ಲಾಭದಾಯಕವಾಗಿ ಮಾಡಿತೋರಿಸಬೇಕೆಂಬ ಸದ್ಭಾವನೆ ಆ ಕೆಲಸಗಾರರಲ್ಲಿ ಇದ್ದುದರಿಂದ, ಅವರೆಲ್ಲ ವ್ಯವಹಾರಸಂಬಂಧ ಬರುವ ಜನರೊಂದಿಗೆ ಆತ್ಮೀಯತೆಯಿಂದಲೂ ದಾಕ್ಷಿಣ್ಯ-ಪ್ರೀತಿಗಳಿಂದಲೂ ನಡೆದುಕೊಳ್ಳುತ್ತಲಿದ್ದರು. ಇದರಿಂದಾಗಿ

ಆ ಮೋಟಾರುಗಳಲ್ಲಿ ಪ್ರವಾಸ ಮಾಡುವ ಜನರಿಗೆ, ಸುಖ-ಸೌಕರ್ಯ ಇಲ್ಲದೆ ಹೋದರೂ, ಮನುಷ್ಯತ್ವದೊಂದಿಗೆ ವ್ಯವಹರಿಸುತ್ತಲಿದ್ದೇವೆಂಬ ಕಲ್ಪನೆಯಿರುತ್ತಿದ್ದಿತು. ಮೋಟಾರ್ ನಡೆಯಿಸುವ ಡ್ರೈವರನಾಗಲಿ, ಕಂಡಕ್ಟರ್-ಕ್ಲೀನರ್ ಆಗಲಿ, ಮನುಷ್ಯರಲ್ಲವೆಂಬ ಭಾವನೆ ಅಂದಿನ ವರಿಗೆ ಇರುತ್ತಿರಲಿಲ್ಲ. ಪ್ರವಾಸ ಕಾಲದಲ್ಲಿ ಕಷ್ಟದ ಪ್ರಸಂಗಗಳೇನಾದರೂ ಬಂದರೂ, ಡ್ರೈವರ್-ಕಂಡಕ್ಟರರ ಸದಸದ್ವಿವೇಕ ಬುದ್ಧಿಯ ವಿಷಯದಲ್ಲಿ ವಿಶ್ವಾಸವಿಟ್ಟು, ಆತ್ಮೀಯಭಾವದಿಂದ ಕಷ್ಟಗಳನ್ನು ಸಹಿಸಿಕೊಳ್ಳುತ್ತಲಿದ್ದರು.

ಇದರಂತೆಯೆ ಮೋಟಾರ್ ವಾಹನಗಳ ವ್ಯವಸ್ಥೆ. ಒಂದು ವಾಹನದ ಎಲ್ಲ ಹೊಣೆಗಾರಿಕೆಯೂ ಆ ವಾಹನದ ವಾಹಕನ ತಲೆಯ ಮೇಲೆಯೆ ಇರುತ್ತಿದ್ದಿತು. ಆದುದರಿಂದ ತಾನು ನಡೆಯಿಸಬೇಕಾದ ವಾಹನ ಸುರಕ್ಷಿತವೂ ಸುಭದ್ರವೂ ಆಗಿರಬೇಕೆಂದವನು ಅಪೇಕ್ಷಿಸುತ್ತಿದ್ದನು. ಇದರಿಂದ ತಾನು ನಡೆಯಿಸಬೇಕಾದ ಮೋಟಾರ್ ವಾಹನವನ್ನು ಕೇವಲ ಯಂತ್ರವೆಂದು ಕಡೆಗಣಿಸಿ ನೋಡದೆ ಸಾಕಿದ ಪ್ರಾಣಿಯಂತೆ ಪ್ರೀತಿ-ವಿಶ್ವಾಸಗಳಿಂದ ಕಾಣುತ್ತಿದ್ದನು. ಆದುದರಿಂದಲೇ ಆದು ಇದ್ದುದರಲ್ಲಿಯೆ ಸುವ್ಯವಸ್ಥಿತವಾಗಿ ಇರುತ್ತಿದ್ದಿತು. ಇದರಿಂದಾಗಿ ಸಮಯಕ್ಕೆ ಸರಿಯಾಗಿ ಜನರಿಗೆ ಪ್ರಯಾಣ ಮಾಡಲು ಅನುಕೂಲವಾಗುತ್ತಲಿದ್ದಿತು.

ಇಂದು ರಾಷ್ಟ್ರೀಕರಣ ಮಾಡಿದ ಬಸ್ಸುಗಳಿಗೆಯ ವ್ಯವಸ್ಥೆ, ತುಂಬ ಆಡಂಬರದಿಂದ ಕೂಡಿದೆಯಾದರೂ, ಜನತೆಗೆ ಬೇಕಾದ ಅನುಕೂಲತೆಗಳನ್ನು ಒದಗಿಸಿಕೊಡಲು ಸಮರ್ಥವಾಗಿಲ್ಲ. ಇದಕ್ಕೆ ಕಾರಣವೆಂದರೆ ಈ ವಿಭಾಗದಲ್ಲಿ ಕೆಲಸ ಮಾಡುವ ಮನುಷ್ಯರೂ ಯಂತ್ರಗಳಿಗಿಂತ ಹೆಚ್ಚಿನ ಜಡಯಂತ್ರಗಳಂತೆ ಭಾವನಾಹೀನರಾಗಿ ವರ್ತಿಸುತ್ತಿರುವುದು. ಈ ವಿಭಾಗದಲ್ಲಿ ಕೆಲಸ ಮಾಡುವವರೆಲ್ಲ ಮೊದಲಿನಿಂದ ಕೊನೆಯ ವರೆಗೂ ನೌಕರರು. ಬಸ್ಸುಗಳು ಯಾರ ಒಡೆತನವೂ ಅಲ್ಲ; ಸರಕಾರದುವು—ಎಂದರೆ ರಾಷ್ಟ್ರದುವು. ಇದರಲ್ಲಿ ಆಡಳಿತ ವಿಭಾಗವೇ ಬೇರೆ; ತಾಂತ್ರಿಕ ವಿಭಾಗವೇ ಬೇರೆ; ಸಾರಿಗೆಯ ವಿಭಾಗವೇ ಬೇರೆ. ಪ್ರತಿಯೊಂದು ವಿಭಾಗದಲ್ಲಿಯೂ ಕೆಲಸ ಮಾಡುವವನು ಕಡಿದಷ್ಟು ತುರಿಸಿಕೊಳ್ಳುವವನು; ಇಲ್ಲನೆ ತುರಿಸಿಕೊಳ್ಳಲೂ ಮನಸ್ಸು ಮಾಡದ ನೈಗಳ್ಳನು. ಸಂಬಳ ಕೊಡುವುದು ಅನ್ಯಕ್ತವಾದ ಸರಕಾರ. ಎಲ್ಲರಿಗೂ ಕೆಲಸ ಮಾಡದೆಯೇ ಹೆಚ್ಚು ಸಂಬಳ ಗಿಟ್ಟಿಸಬೇಕೆಂದು ಆಂತರಿಕ ಅಪೇಕ್ಷೆ. ಎಲ್ಲ ಕಡೆಗೂ ಹೊರತೋರಿಕೆಯ ಕೆಲಸ. ಇದರಿಂದ ಕೆಲಸಗಾರರಲ್ಲಿಯೆ ಪರಸ್ಪರರಲ್ಲಿ ಸಹಕಾರ-ಸಹಾನುಭೂತಿಗಳಿಲ್ಲ. ಇಂತಹರು ಜನತೆಯನ್ನು ಸಹಕಾರ-ಸಹಾನುಭೂತಿಯಿಂದ ಕಾಣುವರೆ? ಇಂತಹರಿಂದ ಜನತೆಗೆ ಅನುಕೂಲತೆಗಳು ದೊರೆತಾವೆ? ಪ್ರಭುತ್ವದ ಪ್ರಜಾಕಲ್ಯಾಣದ ಸದಿಚ್ಛೆ ಇಂತಹ ಕೆಲಸಗಾರರಿಂದ ಸ್ಫೂರ್ತಿಸೀತೇ? ಬರೀ ಕೆಲಸಗಾರರಷ್ಟೇ ಅಲ್ಲ; ಎಸ್. ಟಿ. ಬಳಿಯಲ್ಲಿ ಇರುವ ಪಪಾಲರು ಕೂಡ ಎಷ್ಟೊಂದು ಹೃದಯ ವಿಹೀನ ಯಂತ್ರವಂತಾಗಿರುವರೆಂಬುದು ಎಲ್ಲ ಕಡೆಗೂ ಅನುಭವಕ್ಕೆ ಬರುವ ಮಾತಾಗಿದೆ.

ರಾಷ್ಟ್ರೀಕರಣಕ್ಕೆ ಇನ್ನೊಂದು ವಿರೋಧಕ ಪರಿಸ್ಥಿತಿಯೆಂದರೆ, ಸರಕಾರಕ್ಕೆ ಅಸಹಕಾರಿಗಳಾಗಿ ನಿಂತ ಬೇರೆ ರಾಜಕೀಯ ಪಕ್ಷಗಳ ಚಟುವಟಿಕೆಗಳದು. ಈ ಪಕ್ಷಗಳು ಯಾವಾಗಲೂ ಕೆಳತರಗತಿಯ ನೌಕರರಲ್ಲಿಯೂ ಕೂಲಿಕಾರರಲ್ಲಿಯೂ ಅಸಂತುಷ್ಟಿ-ಅತೃಪ್ತಿಗಳನ್ನು ಹೆಚ್ಚಿಸುತ್ತಿರುವುವು. ಮೊದಲೇ ಮನುಷ್ಯತ್ವವನ್ನು ಕಳಕೊಂಡ ಆ ಜನರು, ಇದರಿಂದ ಇನ್ನಿಷ್ಟು ಸಭ್ಯತಾವಿಹೀನರಾಗುವರು. ಇದರ ಪರಿಣಾಮವನ್ನು ಪ್ರಭುತ್ವಕ್ಕಿಂತ ಹೆಚ್ಚಾಗಿ ಜನತೆಯೇ ಅನುಭವಿಸಬೇಕಾಗಿ ಬರುವುದು. ಆದುದರಿಂದಲೇ ನಮ್ಮ ಪ್ರಭುತ್ವವು ವ್ಯವಹಾರಗಳ ರಾಷ್ಟ್ರೀಕರಣಕ್ಕಿಂತ ಮೊದಲು, ಅದಕ್ಕೆ ಅನುಕೂಲವಾದ ಪರಿಸ್ಥಿತಿ ದೇಶದಲ್ಲಿದೆಯೇ ಇಲ್ಲವೆ ಎಂಬುದನ್ನು ಸಂಪೂರ್ಣವಾಗಿ ವಿಚಾರ ಮಾಡಿ ನೋಡಬೇಕು. ಸಧ್ಯದ ಪರಿಸ್ಥಿತಿಯನ್ನು ನೋಡಿದರೆ, ರಾಷ್ಟ್ರೀಕರಣದ ಸದುಪಯೋಗವಾಗುವಂತಹ ಜನಮನವು ನಮ್ಮ ದೇಶದಲ್ಲಿ ಇಲ್ಲವೆಂಬ ಮಾತು ಸ್ಪಷ್ಟವಾಗಿ ಕಾಣುಬರುತ್ತಲಿದೆ. ಆದುದರಿಂದ ಪ್ರಭುತ್ವವು ಮೊದಲು ರಾಷ್ಟ್ರೀಕರಣಕ್ಕೆ ಜನಮನವನ್ನು ಹದಗೊಳಿಸುವಂತಹ ಕಾರ್ಯಕ್ರಮಗಳನ್ನು ಕೈಕೊಂಡು ಪ್ರಚಾರಗೊಳಿಸುವ ಅಗತ್ಯವಿದೆ. ಪ್ರಭುತ್ವಸೂತ್ರ ಯಾವ ರಾಜಕೀಯ ಪಕ್ಷದ ಕೈಯಲ್ಲಿಯೆ ಇದ್ದರೂ, ಜನಾನುಕೂಲಕ್ಕಾಗಿ ನಿರ್ಮಿಸಿದ ವಿಭಾಗಗಳಲ್ಲಿ ಕೆಲಸ ಮಾಡುವ ಕೆಲಸಗಾರರು ತಮ್ಮ ಜನಹಿತ ಕಾರ್ಯದ ಧ್ಯೇಯದಿಂದ ಚ್ಯುತರಾಗದಂತಹ ಸಂಸ್ಕಾರ ಅವರಿಗೆ ಸಿಕ್ಕಬೇಕಾಗಿದೆ. ರಾಷ್ಟ್ರೀಕರಣ ಮಾಡಿದ ವ್ಯವಹಾರಗಳಲ್ಲಿ ಕಾರ್ಯಕರ್ತರನ್ನೂ ನೌಕರರನ್ನೂ ಕೂಲಿಕಾರರನ್ನೂ ಆರಿಸುವಾಗ, ಈ ಒರೆಗಲ್ಲಿಗೆ ತಿಕ್ಕಿನೋಡಿ ಪರೀಕ್ಷೆ ಮಾಡಿ, ತೇರ್ಗಡೆ ಹೊಂದಿದವರನ್ನೇ ಆರಿಸುತ್ತಿರಬೇಕು. ಎಂದರೆ ರಾಷ್ಟ್ರೀಕರಣದ ಸದಿಚ್ಛೆ ಸಫಲವಾದೀತು. ಜನತೆಗೂ ಅದರ ಸಾರ್ಥಕವನ್ನು ಅನುಭವಿಸಲಿಕ್ಕಾದೀತು.

ಜಯಂತಿಯ ನಿಯಮಿತತನ

ಕಳೆದ ವರ್ಷದ ಕೊನೆಕೊನೆಯ ೩-೪ ಸಂಚಿಕೆಗಳು ಅನಿವಾರ್ಯ ಕಾರಣದಿಂದ ನಿಯಮಿತ ಅವಧಿಯನ್ನು ನೀರಿ ನಮ್ಮ ವಾಚಕರ ಕೈಗೆ ತಲ್ಪಿದುವು. ಇದಕ್ಕಾಗಿ ವಾಚಕರ ಕ್ಷಮೆಯನ್ನು ಕೋರುವೆನಷ್ಟೆ, ಇನ್ನು ಮೇಲೆ ಈ ಬಗೆಯ ಅನಿಯಮಿತತನವು ನಡೆಯದಂತೆ ಪೂರ್ವಜಾಗೃತೆಯನ್ನು ತೆಗೆದುಕೊಳ್ಳುವ ನಂಬಿಕೆಯನ್ನು ಕೊಡುವೆವು.

ನಡೆದುಹೋದ ಅನಿವಾರ್ಯ ಅಸಂಭವವನ್ನು ನಮ್ಮ ವಾಚಕವರ್ಗ ಪರಿಭಾವಿಸಿ ಕ್ಷಮಿಸಬೇಕು

—ಸಂಪಾದಕ

ನಾಡನಡೆ

●

ಇದ್ದುದರಲ್ಲಿಯೇ ಸಮಾಧಾನ

ನಿಜವಾಗಿಯೂ ಕನ್ನಡಿಗರು, ಬಳ್ಳಾರಿ ಜಿಲ್ಲೆಯ ಅವಮಾನ, ಆಲೂರು, ರಾಯದುರ್ಗಗಳನ್ನು ಉಳಿಸಿಕೊಳ್ಳಲು ಪ್ರಯತ್ನವನ್ನಷ್ಟೇ ಮಾತಬೇಕಾಗುತ್ತಿದ್ದಿತು ಆದರೆ ಕೇಂದ್ರ ಸರಕಾರ ಅವರಿಗೆ ಜೀವಿಯ ಜೀವ-ಸಾವಿನ ಸಮಸ್ಯೆಯನ್ನೊಡ್ಡಿ, ಎಂದರೆ ಕಚ್ಚುಕನ್ನಡ ಪ್ರದೇಶವಾದ ಬಳ್ಳಾರಿ ತಾಲ್ಲೂಕನ್ನೇ ಆಂಧ್ರರಿಗೆ ಕೊಡಲು ಘೋಷಿಸಿ ಕನ್ನಡಿಗರ ಲಕ್ಷ್ಯವನ್ನೆಲ್ಲ ಜೀರೆಯ ಕಡೆಗೆ ಹಜ್ಜೆಬಿಟ್ಟಿತ್ತು. ಮೇಲಿನ ಮೂರು ತಾಲ್ಲೂಕುಗಳಿಗಿಂತ ಮೊದಲು, ಬಳ್ಳಾರಿ ತಾಲ್ಲೂಕನ್ನೆ ಉಳಿಸಿಕೊಳ್ಳುವುದು ಹೆಚ್ಚಿನ ಕರ್ತವ್ಯವಾಗಿ ಕಂಡಿತು. ಅದಕ್ಕಾಗಿ ಚಳವಳಿ ನಡೆಯಿಸಿ, ನ್ಯಾಯ-ನಿರ್ಣಯಕ್ಕಾಗಿ ಬಂದಿದ್ದ ಶ್ರೀಮಾನ್ ಮಿಶ್ರರನ್ನು ಬಳ್ಳಾರಿ ತಾಲ್ಲೂಕಿನ ಕನ್ನಡತನವನ್ನು ಪತ್ಯಕ್ಷ ಪ್ರಮಾಣಗಳಿಂದ ಸಿದ್ಧಮಾಡಿ ತೋರಿಸಿದರು ನಿಜವಾಗಿಯೂ ನ್ಯಾಯಮೂರ್ತಿಗಳಾದ ಮಿಶ್ರರು, ಕನ್ನಡಿಗರ ಸತ್ಯಪಕ್ಷವನ್ನು ಮನವರಿಕೆಮಾಡಿಕೊಂಡು, ಅದಕ್ಕನುಗುಣವಾಗಿ ಕೇಂದ್ರ ಸರಕಾರಕ್ಕೆ ತಮ್ಮ ವರದಿಯನ್ನು ಒಪ್ಪಿಸಿದರು. ಕೇಂದ್ರ ಸರಕಾರವೂ ಒರದಿಯನ್ನು ಒಪ್ಪಿಕೊಂಡು, ಬಳ್ಳಾರಿ ತಾಲ್ಲೂಕು ಕನ್ನಡಿಗರದೇ ಎಂದು ಘೋಷಿಸಿತು. ಇದಕ್ಕಾಗಿ ಇದ್ದುದರಲ್ಲಿಯೇ ಕನ್ನಡಿಗರು ಸಮಾಧಾನದ ನಿಟ್ಟುಸಿರನ್ನು ಬಿಡಬೇಕಾಗಿದೆ.

ನಿಜವಾಗಿಯೂ ವ್ಯರ್ಥಶಕ್ತಿಪಾತ ಕನ್ನಡಿಗರದು. ಕೇಂದ್ರ ಸರಕಾರದ ಧನನ್ಯಯದ ವೈಯರ್ಥ್ಯವಂತೂ ಸರಿಯೆ ಸರಿ ನೀರೆಂದು ಕಣ್ಣಿಗೇ ಕಾಣುವುದನ್ನೇ ನೀರೆಂದು ಸಿದ್ಧ ಮಾಡಲು ತಜ್ಞ ವೈಜ್ಞಾನಿಕರ ಸಮಿತಿಯನ್ನು ನಿಯಮಿಸಿದಂತಹ ಐಬುದೊರೆತನದ ಮಾದರಿಯ ಪ್ರಕರಣ, ಬಳ್ಳಾರಿಯದು. ಒಂದು ರೀತಿಯಿಂದ ಈ ಪ್ರಕರಣ ನಡೆದುದೂ ಕನ್ನಡಿಗರಿಗೆ ಒಳ್ಳೆಯದಾಯಿತೆಂದೇ ಹೇಳಬೇಕು. ನೆರೆಯ ನಾಡಿಗರು ಕರ್ನಾಟಕವನ್ನು ನುಂಗಲೂ ಎಷ್ಟೊಂದು ಅಸತ್ಯದ ಅನ್ಯಾಯದ ದಾರಿಯನ್ನು ಹಿಡಿದು ನಡೆದಿದ್ದಾರೆಂಬುದು ಈ ಬಳ್ಳಾರಿಯ ಪ್ರಕರಣದಿಂದ ಲೋಕದ ಪ್ರತ್ಯಕ್ಷ ನಿದರ್ಶನಕ್ಕೆ ಬಂದಂತಾಯಿತು. ಕನ್ನಡಿಗರ ನ್ಯಾಯ ಬುದ್ಧಿಯೂ ಬೆಳಕಿಗೆ ಬಿದ್ದಂತಾಯಿತು. ಇದೆಲ್ಲ ಒಳಿತೇ ಆಯಿತು!

ಪ್ರಕಾಶಮರ ಪ್ರಲಾಪ

ಇಷ್ಟಾದರೂ ಆಂಧ್ರರು ಇದುವರೆಗೂ ಬಳ್ಳಾರಿಯ ನೀಲಿನ ತೆನ್ನ ದುರಾಶೆಯನ್ನು ಬಿಟ್ಟಿಲ್ಲ ಶ್ರೀಮಾನ್ ಟಿ. ಪ್ರಕಾಶಮಂತಹ ಆಂಧ್ರದ ಹಿರಿಯ ಧುರೀಣರೂ 'ಬಳ್ಳಾರಿಯ ವಿಷಯನಲ್ಲಿ ಕೇಂದ್ರ ಸರಕಾರವು ಕೊಟ್ಟುದಿದು ಕೊನೆಯ ನಿರ್ಣಯವಲ್ಲ!' ಎಂದು ಮಾತನಾಡುತ್ತಲಿರುವರು. ಆಕ್ರಮಣ ಬುದ್ಧಿಯ ದುರಾಶೆ, ಎಂತಹರನ್ನೂ ಎಂತೆಂತಹ ಅನ್ಯಾಯದ—ಪತನದ—ದಾರಿಯಲ್ಲಿ ನಡೆಯಿಸುವುದೆಂಬುದಕ್ಕೆ ಟಿ. ಪ್ರಕಾಶಮರ ಈ ನಡೆನುಡಿಗಳೆ ಪ್ರತ್ಯಕ್ಷ ಸಾಕ್ಷ್ಯನಾಗಿದೆ! ಪ್ರಕಾಶಮರ ಈ ಮಾತು, ಅವರ ಹುಚ್ಚು-ಮುಪ್ಪಿನ ಹುಟ ವಾದದ ಮಾತಾಗಿರಬೇಕು ಒಂದು. ಇಲ್ಲವೆ ಆಂಧ್ರರ ಮನಸ್ಸನ್ನು ರಮಿಸುವುದಕ್ಕಾಗಿ ಆಡಿದ ತಾತ್ಕಾಲಿಕ ಸಂತವಣೆಯ ಮಾತಾಗಿರಬೇಕು ಒಂದು. ಸಮುಂಜಸ ರಾಜಕಾರಣಿಯು ಆದುವಂತಹ ಮಾತು ಇದಲ್ಲ ನೊನ್ನೆ ನೊನ್ನೆ ಬೆಳಗಾಂವಿಯಲ್ಲಿ ಕನ್ನಡಿಗರಿಗೆ ಬುದ್ಧಿಯ ಮಾತನ್ನು ಹೇಳಿದ ನಮ್ಮ ಭಾರತದ ಮುಖ್ಯ ಪ್ರಧಾನರು, ಈ ಸಂಗತಿಯನ್ನು ಮನದೆದುರು ತಂದುಕೊಂಡು ವಿಚಾರ ಮಾಡಿ ನೋಡಬೇಕು. ಅಖಿಲ ಭಾರತದ ಮುಂದಾಳುಗಳೆಂದು ಮನ್ನಣೆ ಪಡೆದ ಹಲವು ಮಹನೀಯರೂ, ಸ್ವಭಾಷಾ ಸ್ವಾಂತದ ವಿಚಾರ ಬಂದಾಗ, ಇನ್ನೊಬ್ಬರಿಗೆ ಎಂತಹ ಅನ್ಯಾಯವನ್ನು ಮಾಡಲೂ ಸಿದ್ಧರಾಗುವರೆಂಬುದಕ್ಕೆ ಶ್ರೀ. ಟಿ. ಪ್ರಕಾಶಮರ ಇದೊಂದೇ ಉದಾಹರಣೆ ಸಾಕಾಗಿದೆ. ಇಂತಹರೇ ಬಹು ಸಂಖ್ಯಾಕರಾಗಿರುವ ರಾಜ್ಯ ಸರಕಾರಗಳಲ್ಲಿ ಅಲ್ಪಸಂಖ್ಯಾಕರಾಗಿರುವ ಕನ್ನಡಿಗರು ಎಷ್ಟೊಂದು ಕಷ್ಟ-ನಷ್ಟಗಳನ್ನೂ, ಹಾನಿ-ಅವಮಾನಗಳನ್ನೂ ಸಹಿಸಬೇಕಾಗಿ ಬರುತ್ತಿರಬಹುದೆಂಬುದನ್ನು ಭಾವಿಸಿ ಮನಗಾಣಬಹುದು. ಒಬ್ಬರೇ ಒಬ್ಬರು ಟಿ. ಪ್ರಕಾಶಮರೇ ಹೀಗೆ ಎಂದಲ್ಲ; ಕರ್ನಾಟಕದ ನೆರೆಯ ನಾಡಿನ ಎಲ್ಲ ಹಿರಿಯ ಕಿರಿಯ ಮುಂದಾಳುಗಳೂ ಕನ್ನಡಿಗರೊಂದಿಗೆ ಹೀಗೆಯೆ ಆಕ್ರಮಣ ಬುದ್ಧಿಯಿಂದ ನಡೆದುಕೊಳ್ಳುವುದು ಬಹುದಿನದಿಂದಲೂ ನಡೆದುಕೊಂಡು ಬಂದ ಪದ್ಧತಿಯಾಗಿದೆ. ಕನ್ನಡಿಗರು ಅಜಾಗೃತರಾಗಿದ್ದಾಗ ಅವರು ತಮ್ಮ ಆಕ್ರಮಣವನ್ನು ಅನಿರ್ಬಂಧವಾಗಿ ಸಾಗಿಸಿ ಸ್ವಾರ್ಥ ಸಾಧಿಸಿಕೊಂಡರು. ಇಂದು ಕನ್ನಡಿಗರು ಜಾಗೃತರಾಗಿ ತನ್ನು ಸ್ವತ್ವವನ್ನು ಉಳಿಸಿಕೊಳ್ಳಲು ಸಿದ್ಧರಾಗಿ ನಿಂತಿರುವುದು ಅವರ ಎದೆಯನ್ನು ಅಳುಕಿಸುತ್ತಲಿದೆ. ಎಂತಲೇ ಟಿ. ಪ್ರಕಾಶಮರಂತಹ ಕುಶಲ ರಾಜಕಾರಣಿಗಳೂ, ಕಂಗೆಟ್ಟ ಮನಸವರಾಗಿ ಅಸಪ್ರಲಾಪಗಳನ್ನು ನಡೆಯಿಸಿರುವುರು.

ಗಡಿಸಮಿತಿ ಈಗಲೇ ಬೇಕು!

ಬಳ್ಳಾರಿ ತಾಲ್ಲೂಕಿನ ವಿಚಾರ ಮುಗಿಯಿತಾದರೂ ಮಿಕ್ಕ ಮೂರು ತಾಲ್ಲೂಕುಗಳ ವಿಚಾರ ಇನ್ನೂ ಮುಗಿದಿಲ್ಲ. ಕನ್ನಡಿಗರ ಮಾತನ್ನು ದರ್ಲಕ್ಷ್ಯಿಸಿ ಕೇಂದ್ರ ಸರಕಾರವು ತನ್ನ ಅಧಿಕಾರ ಬಲದಿಂದ ಈ ಮೂರೂ ತಾಲ್ಲೂಕುಗಳನ್ನು ಆಂಧ್ರರಿಗೆ ಒಪ್ಪಿಸಿಕೊಟ್ಟರೆ, ಕನ್ನಡಿಗರ ವಿಷಯದಲ್ಲಿ ಅಸಹನೀಯವಾದ ಅನ್ಯಾಯವನ್ನು ಮಾಡಿದಂತಾಗುವುದು. ಆದುದರಿಂದ ಕೂಡಲೇ ಗಡಿಸಮಿತಿಯನ್ನು ನಿಯಮಿಸಿ ಆ ತಾಲ್ಲೂಕುಗಳಲ್ಲಿ ನ್ಯಾಯವಾಗಿ ಕನ್ನಡಿಗರಿಗೆ ಸಲ್ಲಬೇಕಾದ ಭಾಗವೆಷ್ಟೆಂಬುದನ್ನು ನಿರ್ಣಯಿಸಿ, ಈಗಲೆ ಮೈಸೂರು ಸರಕಾರಕ್ಕೆ ಅದೂ ಹೊಂದಿಕೊಳ್ಳುವಂತೆ ಮಾಡಬೇಕು. ಅದರಂತೆಯೆ ಅನಂತಪುರ, ಕರ್ನೂಲು, ಕಡಪಾ ಜಿಲ್ಲೆಗಳಲ್ಲಿಯು ಕನ್ನಡ ಪ್ರದೇಶಗಳನ್ನೂ ಪ್ರತ್ಯೇಕಿಸಿ, ಮೈಸೂರಿಗೆ ಸೇರಲಿರುವ ಬಳ್ಳಾರಿ ಜಿಲ್ಲೆಗೆ ಕೂಡಿಸಬೇಕು. ಒಮ್ಮೆ ಒಂದು ವ್ಯವಸ್ಥೆಗೆ ಸೇರಿಕೊಂಡುನೆಂದರೆ, ಆ ಮೇಲೆ ಮತ್ತೆ

ಮತ್ತೆ ಅದರಲ್ಲಿ ಬದಲಾವಣೆ ಮಾಡುವುದೆಂದರೆ ಜಡಳಿತಕ್ಕೂ ತೊಂದರೆ; ಜನತೆಗೂ ತೊಂದರೆ. ಇಷ್ಟೇ ಅಲ್ಲ, ಮಾನವ ಸಹಜ ಮನೋವೃತ್ತಿ-ಗನುಸರಿಸಿ, ಜನ ಸಾಮಾನ್ಯರು ಮತ್ತೆ ಮತ್ತೆ ತೊಂದರೆಯನ್ನು ಅನುಭವಿಸಲು ಸಿದ್ಧರಾಗದೇ, ಇವ್ವಲ್ಲಿಯೆ ಉಳಿಯಲು ಬಯಸಿದರೆ, ಅದರಿಂದ ಕರ್ನಾಟಕ ಪ್ರಾಂತಕ್ಕೂ ಸುಸ್ಥಿತಿಗೂ ತುಂಬ ಹಾನಿ-ಯಾಗುವುದು. ಈಗ ಅಲ್ಲಲ್ಲಿಯ ಕನ್ನಡಿಗರಲ್ಲಿ ಕಸ್ತಡತನದ ಜಾಗೃತಿ ಮೂಡಿದೆ. ಒಂದೆ ಛತ್ರದಡಿಯಲ್ಲಿ ಕನ್ನಡಿಗ ರೆಲ್ಲ ಒಂದುಗೂಡಬೇ-ಕೆಂಬ ಭಾವನೆ ಎಚ್ಚೆತ್ತಿದೆ. ಹೇಗೂ ಈಗ ಪ್ರಾಂತ-ಪ್ರಾಂತಗಳ ಗಡಿಗಳ ಬದಲಾವಣೆ ಆಗಲೇ ಬೇಕಾಗಿದೆ. ಆದುದರಿಂದ, ಈಗಲೇ ಕೇಂದ್ರ ಸರಕಾರವು, ಅಂಧ್ರದ ಗಡಿನಿರ್ಣಯದ ಮಟ್ಟಿಗಾದರೂ ವಿಚಾರಣಾ ಸಮಿತಿಯನ್ನು ನಿಯಮಿಸಿ, ಕೊನೆಯ ನಿರ್ಣಯವನ್ನು ಮಾಡಿಬಿಡಬೇಕೆಂದು ನಮ್ಮ ಅಭಿಪ್ರಾಯ.

ಡಾವಣಗೆರೆಯ ಪರಿಷತ್ತು

ಕಳೆದ ತಿಂಗಳ ದಿನಾಂಕ ೩೦ರಂದು ಡಾವಣಗೆರೆಯಲ್ಲಿ, ಶ್ರೀಮಾನ್ ಕೆ. ಆರ್. ಕಾಂತ ಅವರ ಅಧ್ಯಕ್ಷತೆಯಲ್ಲಿ ಅಖಂಡ ಕರ್ನಾಟಕ ರಾಜ್ಯನಿರ್ಮಾಣ ಪರಿಷತ್ತು ನೇರಿ, ಯೋಗ್ಯ ಕಾರ್ಯ-ಕಲಾಪಗಳನ್ನು ನಡೆಯಿಸಿ ಉತ್ಸಾಹದಲ್ಲಿ ಮುಕ್ತಾಯವಾಯಿತು. ಹೈದರಾಬಾದಿನಿಂದ ಲೋಕಸಭೆಗೆ ಸದಸ್ಯರಾಗಿ ಆಯ್ಕೆ ಪಡೆದಿರುವ ಶ್ರೀ. ಶಿವಮೂರ್ತಿಸ್ವಾಮಿಗಳು ಪರಿಷತ್ತಿನ ಉದ್ಘಾಟಕರಾಗಿ ದಯೆ-ಮಾಡಿಸಿದ್ದರು. ಡಾವಣಗೆರೆಯ ಪ್ರಸಿದ್ಧ ಮುಂದಾಳುಗಳಾದ ಶ್ರೀಮಾನ್ ಬಿ. ದೊಡ್ಡವೀರಪ್ಪನವರು ಸ್ವಾಗತಾಧ್ಯಕ್ಷರಾಗಿದ್ದರು. ಸರ್ವಪಕ್ಷೀಯ ಪರಿಷತ್ತೆಂದು ಇದನ್ನು ಕೂಡಿಸಲಾಗಿದ್ದರೂ ಕರ್ನಾಟಕದಲ್ಲಿಯ ಕಾಂಗ್ರೆಸ್ಸಿಗರು ಈ ಪರಿಷತ್ತಿಗೆ ಬಾರದೆ ಅಪಹ-ಕಾರವನ್ನು ತೋರಿಸಿದುದು ವಿಷಾದದ ಸಂಗತಿಯಾಗಿದೆ. ನಮ್ಮ ನಾಡಿನಲ್ಲಿಯ ಮಿಕ್ಕೆಲ್ಲ ರಾಜಕೀಯ ಪಕ್ಷಗಳಿಗಿಂತ ಕಾಂಗ್ರೆಸ್ ಪಕ್ಷವು ಸುಸಂಘಟಿತವಾಮದೂ ಸತ್ವಶಾಲಿಯೂ ಆಗಿರುವುದೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಮನಸ್ಸು ಮಾಡಿದರೆ ಅದೊಂದೇ ಪಕ್ಷದ ಜನರಿಂದಲೇ ಅಖಂಡ ಕರ್ನಾಟಕರಾಜ್ಯವನ್ನು ಸಾಧಿಸಲಿಕ್ಕಾದೀತು. ಆದರೆ ಈ ಪರಿಷತ್ತಿಗೆ ಹೋಗದೆ ಇವ್ವ ನಮ್ಮ ಕಾಂಗ್ರೆಸ್ ಪಕ್ಷೀಯರು ಉಚಿತಕಾರ್ಯ ಮಾಡಲಿಲ್ಲವೆಂದು ನಾವಿಗೆನಿಸುವುದು. ಡಾವಣಗೆರೆಯಲ್ಲಿ ನೇರಿದುದು ಸರ್ವಪಕ್ಷೀಯ ಪರಿಷತ್ತೆಂದ ಮೇಲೆ, ನಾಡಿನ ಎಲ್ಲ ಪಕ್ಷಗಳೂ ಅಲ್ಲಿ ನೇರಿ, ಅಖಂಡ ಕರ್ನಾಟಕದ ಬೇಡಿಕೆಗೆ ಏಕಕಂಠದ ಬಲವನ್ನು ತಂದುಕೊಡಬೇಕಾದುದು ಕರ್ತವ್ಯವಾಗಿದೆ. ಹೀಗಿರುವಾಗ ಕಾಂಗ್ರೆಸಿಗರು ಪರಿಷತ್ತೆನ್ನು ಬಹಿಷ್ಕರಿಸಿ, ಅದರ ಬೇಡಿಕೆಯ ಬಲಕ್ಕೆ ಕೊಡತಿಯನ್ನು ಒಡ್ಡಿದರೆಂದು ಹೇಳಬೇಕಾಗುವುದು. ಈಗ ಕಾಂಗ್ರೆಸ್ಸಿಗರು ಹೀಗೆ ಗಳಿಸಿರುವ ಯಾವ ಪ್ರಯೋಜನವನ್ನು ನಿರೀಕ್ಷಿಸಿ-ದಂತಾಯಿತು? ತಮ್ಮ ಪಕ್ಷದ ಸಂಘಟನೆ ಲೋಕಪ್ರೀತಿಗಳ ಬಗೆಗೆ ನಿಜವಾದ ನಂಬುಗೆಯುಳ್ಳವರೆ, ಪರಿಷತ್ತಿನಲ್ಲಿ ಭಾಗ ವಹಿಸಿ ನೇರಿದ ಜನಮನನನ್ನು ತಮ್ಮ ಕಡೆಗೆ ಮಾಡಿಕೊಂಡು ಕ. ರಾ. ನಿರ್ಮಾಣ ಚಳವಳಿಯ ಸೂತ್ರವನ್ನು ತಮ್ಮ ಕೈಯಲ್ಲಿಯೆ ಇಳಿಯುವಂತೆ ಮಾಡ-ಬೇಕಾಗಿತ್ತು. ಈಗ ಅದನ್ನು ಬಿಟ್ಟು ಪಲಾಯನವಾದಿಗಳಂತೆ ವರ್ತಿಸಿದುದು, ಕಾಂಗ್ರೆಸ್ಸಿಗರಿಗೆ ತಮ್ಮ ಸಾಮರ್ಥ್ಯದ ವಿಷಯದಲ್ಲಿ ತಮಗೇ ನಂಬಿಗೆಯಿಲ್ಲದಂತಾಗಿದೆಯೆಂದು ಜನರಲ್ಲಿ ಭಾವನೆ ಯುಂಟಾಗುವಂತಿದೆ. ಇದೇನು ಮೈಗೊಳ್ಳುವಂತಾದ ಮಾತಲ್ಲ. ಏನೇ ಆಗಲಿ, ಡಾವಣಗೆರೆಯ ಪರಿತ್ತು ಸಮರ್ಥ ವ್ಯಕ್ತಿಯ ಅಧ್ಯಕ್ಷತೆ-ಯಲ್ಲಿ ವಿಜೃಂಭಣೆಯಿಂದ ನಡೆದುದು ಕನ್ನಡದ ಅಭಿಮಾನಿಗಳಿಗೆಲ್ಲ ಸಮಾಧಾನದ ಮಾತೇ ಸರಿ!

ಕರ್ನಾಟಕದಲ್ಲಿ ಕಾಂಗ್ರೆಸ್ ನಿಷ್ಠೆ

ಕರ್ನಾಟಕವೆಂದರೆ ಹದಿನಾರಾಣೆ ಕಾಂಗ್ರೆಸ್ ಪ್ರಾಂತವೆಂದು ಹೆಸರಾಗಿದ್ದಿತು. ಆದಕ್ಕನುಗುಣವಾಗಿ ಕಾಂಗ್ರೆಸ್ ಪಕ್ಷವನ್ನು ಎದುರಿಸಿ ನಿಂತ ಇನ್ನಾವ ಪಕ್ಷಕ್ಕೂ ಬಹುಜನದ ಸಹಾನುಭೂತಿ ದೊರೆಯುತ್ತಿರಲಿಲ್ಲ. ಈಗೆರಡು ಸಲದ ಮಹಾಚುನಾವಣೆಗಳಲ್ಲಿ ಕರ್ನಾಟಕದವರು ಕಾಂಗ್ರೆಸ್ ಪಕ್ಷೀಯರಿಗೇ ಗೆಲುವನ್ನು ತಂದುಕೊಟ್ಟಿ-ದ್ದರು. ಜಾತಿ-ಸಂಘಗಳ ಯಾವ ಭಾವನೆಯೂ ಕಾಂಗ್ರೆಸ್ ನಿಷ್ಠೆ-ಯನ್ನು ಕಡಿಮೆ ಮಾಡಲು ಶಕ್ತವಾಗಿರಲಿಲ್ಲ. ಆದರೆ ಮೊನ್ನೆ ಮೊನ್ನೆ ಧಾರವಾಡದಲ್ಲಿ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಶ್ರೀಮತಿ ಲೀಲಾವತಿ ಮಾಗಡಿಯವರು ನೋಡಹೋಗಿ ವಿರುದ್ಧವಾಗಿ ನಿಂತ ಶ್ರೀಮಾನ್ ಬಿ. ಎ. ಜೇಸಾಯಿಯವರು ೩೦೦೦ ರಷ್ಟು ಹೆಚ್ಚಿಗೆ ಮತಗಳನ್ನು ಪಡೆದು ಮುಂಬಯಿ ಅಸೆಂಬ್ಲಿಗೆ ಆರಿಸಿಬಂದು, 'ಕರ್ನಾಟ-ಕವು ಕಾಂಗ್ರೆಸ್ ಪ್ರಾಂತ'ವೆಂಬ ಮಾತನ್ನು ಸುಳ್ಳುಮಾಡಿ ತೋರಿಸಿ-ದ್ದಾರೆ. ಹೀಗಾಗಲು ಕಾರಣವೇನಿರಬಹುದು? ನಿಜವಾಗಿಯೂ ಕರ್ನಾಟಕದಲ್ಲಿ ಕಾಂಗ್ರೆಸಿನ ನಿಷ್ಠೆ ಕಡಿಮೆಯಾಗಿದೆಯೆ?

ನಮ್ಮ ಅಭಿಪ್ರಾಯದಂತೆ ಒಂದುಕಾಲದಲ್ಲಿ ಕಾಂಗ್ರೆಸಿನಲ್ಲಿ ಕೆಲಸ ಮಾಡುತ್ತಿದ್ದ ಮುಂದಾಳುಗಳ ತ್ಯಾಗ, ತಪಸ್ಸು, ಸೇವಾ-ಬುದ್ಧಿಗಳು ಕರ್ನಾಟಕದ ಮನಸ್ಸನ್ನೆಲ್ಲ ಮಾಪುಗೊಂಡುದು ನಿಜವೇ ಸರಿ! ಎಂತಲೇ ಹಿಂದಿನ ಚುನಾವಣೆಗಳಲ್ಲಿ ಕಾಂಗ್ರೆಸಿನ ಹೆಸರಿನ ಮೇಲೆ ಯಾವ ಸಾಮಾನ್ಯ ವ್ಯಕ್ತಿ ಕೂಡ ಯಾಕಾಗಿ ನಿಂತರೂ, ಕರ್ನಾ-ಟಕ ಅವರ ವಿಶ್ವಾಸಗಳಿಂದ ಗೆಲಿಸಿಕೊಟ್ಟಿತು. ಇಂದು ಕೂಡ ಅಂತಹ ತ್ಯಾಗ ತಪಸ್ಸು-ಸೇವಾಬುದ್ಧಿಯನ್ನೇ ಜನ ಅಪೇಕ್ಷಿಸುತ್ತಲಿದೆ. ಆದರೆ ಕಾಂಗ್ರೆಸ್ಸಿನ ಹೆಸರು ಬೇಕೆಂತ್ತ ಕಾರ್ಯಮಾಡುವ ಇತ್ತೀಚಿಗಿನ ಕಾರ್ಯಕರ್ತರಲ್ಲಿ ಇಂತಹ ತ್ಯಾಗ-ತಪಸ್ಸು-ಸೇವಾಬುದ್ಧಿಗಳು ಕನ್ನ-ಡಿಗರಿಗೆ ಕಾಣದುಳಿಯಾಗಿವೆ. ಆದುದರಿಂದ ಅವರು ಉದಾಸೀನಭಾವ-ವನ್ನು ತಾಳಿದ್ದಾರೆ. ಹೊರತು, ಕಾಂಗ್ರೆಸ್ ನಿಷ್ಠೆಯನ್ನು ಕಳೆದುಕೊಂಡಿಲ್ಲ. ಮೊನ್ನೆಯ ಉಪಚುನಾವಣೆಯಲ್ಲಿ ಉಂಟಾದ ಕಾಂಗ್ರೆಸ್ ಹುರಿ-ಯಾಳಿನ ಅಜಯಕ್ಕೆ ವ್ಯಕ್ತಿವಿಷಯಕವಾದ ಔದಾಸೀನ್ಯವೇ ಕಾರಣ ವಲ್ಲದೆ, ಜನರಲ್ಲಿ ಕಾಂಗ್ರೆಸ್ ನಿಷ್ಠೆ ಕಡಿಮೆಯಾಗಿದೆಯೆಂದಲ್ಲ. ಪ್ರಾಂತದ ಕಾಂಗ್ರೆಸ್ ಜಡಳಿತದಲ್ಲಿ ಒಂದು ಬಗೆಯ ಜಾತಿಯ ಗಾರಿಕೆ ನಡೆಯುವ, ತಮ್ಮ ಜಾತಿಯ ಅಭಿಮಾನಿಗಳನ್ನೆ ಮುಖ್ಯ ಕಾರಣ-ವಾಗಿದೆ. ಈ ಅವಲಕ್ಷಣದ ಫಲವೇ ಮೊನ್ನೆಯ ಉಪಚುನಾ-ವಣೆಯ ಅಪಜಯ!

ವಾಙ್ಮಯ ತಪಸ್ಸು

ಶ್ರೀ ನಾರಾಯಣರಾವ ಕರ್ಗಲ್ಲು, ದ. ಕ.

ಕಾಯಿಕ ಮಾನಸಿಕ ತಪಸ್ಸು ಇರುವಂತೆ, ವಾಚಿಕ ತಪಸ್ಸೂ ಇರುವುದು. ತಪಸ್ಸಿನ ಉದ್ದೇಶ ಸತ್ಯದ ಸಾಕ್ಷಾತ್ಕಾರ, ಲೋಕಕಲ್ಯಾಣ ಇವೇ ಆಗಿರುವುವು. ಹಿತವಾದ ಸತ್ಯವಚನವೂ ಆಧ್ಯಾತ್ಮಿಕ ಆಧಿ. ಭೌತಿಕ ವಿಜ್ಞಾನದ ಅಭ್ಯಾಸವೂ ವಾಙ್ಮಯ ತಪಸ್ಸೆನಿಸಿಕೊಳ್ಳುವುವು.

ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯ ಹಿತಂಚ ಯತ್ |
ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂ ತಪ ಉಚ್ಯತೇ‖
(ಭಗವದ್ಗೀತೆ.)

ಶ್ರೀಮದ್ಭಗವದ್ಗೀತೆಯಲ್ಲಿ ತಪಸ್ಸನ್ನು ಭಗವಂತನು ಎರಡು ವಿಧವಾಗಿ ವಿಭಾಗಿಸಿದ್ದಾನೆ: ಒಂದು **ಕಾಯಿಕ ವಾಚಿಕ** ಮತ್ತು **ಮಾನಸಿಕ** ಈ ವಿಧದಿಂದ. ಇನ್ನೊಂದು **ಸಾತ್ತ್ವಿಕ,ರಾಜಸ,ತಾಮಸ** ಎಂಬೀ ವಿಧದಿಂದ. ಯೋಗಸೂತ್ರಗಳಲ್ಲಿ ಪತಂಜಲಿಯು ವನದಲ್ಲಿ ಹೋಗಿ ಪ್ರಾಣಾಯಾಮಾದಿಗಳಿಂದ ಪಡುವ ಕಾಯಕ್ಲೇಶವೇ ತಪಸ್ಸೆಂದು ಅಭಿಪ್ರಾಯ ಪಡುವನು. ಆದರೆ, ಭಗವಂತನಿಗೆ ಈ ಸಂಕುಚಿತವಾದ ಅರ್ಥವು ಅಭಿಮತವಿಲ್ಲವಾಗಿ, ಮನುಸ್ಮೃತಿಯಲ್ಲಿ ಹೇಳಿದಂತೆ, ಚಾತುರ್ವರ್ಣ್ಯಕ್ಕೆ ಉಕ್ತವಾದ ಕರ್ಮಗಳು ತಪಸ್ಸೆಂಬ ಅಭಿಪ್ರಾಯವೇ ಇಷ್ಟವಿದೆಯೆಂದು, ಆ ತಪಸ್ಸಿನ ವಿಭಾಗಗಳನ್ನು ಮೇಲಿನಂತೆ ಹೇಳಿರುವುದರಿಂದ ಗೊತ್ತಾಗುತ್ತದೆ. ಇದು ಹೇಗಿದ್ದರೂ ಪಾತಂಜಲತಪಸ್ಸು ಮತ್ತು ಭಾಗವತ (ಭಗವಂತನು ಹೇಳಿದ) ತಪಸ್ಸು ಇವುಗಳಲ್ಲಿ ನಮಗೀಗ ತಾರತಮ್ಯವನ್ನು ಹೇಳಬೇಕಾಗಿಲ್ಲ....ಶಾರೀರ, ವಾಙ್ಮಯ ಮತ್ತು, ಮಾನಸ ಈ ತ್ರಿವಿಧ ತಪಸ್ಸುಗಳಲ್ಲಿ ವಾಙ್ಮಯ ತಪಸ್ಸು ಯಾವುದೋ, ಅದರ ಸ್ವರೂಪವನ್ನು ವಾಚಕರಿಗೆ ಕೊಂಚಮಟ್ಟಿಗೆ ತಿಳಿಸಲು ಯತ್ನಿಸುತ್ತೇನೆ.

೧ (೧) ಅನುದ್ವೇಗಕರವಾದ ಎಂದರೆ ಅನ್ಯರ ಮನಸ್ಸಿಗೆ ಸಂತಾಪಕರವಲ್ಲದ (೨) ಯಥಾರ್ಥವಾದ, (೩) ಪ್ರಿಯ ಮತ್ತು (೪) ಹಿತವಾದ ಮಾತು ಹಾಗೂ ೨ ಸ್ವಾಧ್ಯಾಯದ ಎಂದರೆ ಸ್ವಶಾಖೆಯ ವೇದದ ಅಧ್ಯಯನವು ವಾಙ್ಮಯ ತಪಸ್ಸಾಗಿರುವುದು. ಈ ಭಾಗವತ ವಾಙ್ಮಯದಲ್ಲಿ ಎರಡು ಭೇದಗಳನ್ನು ಕಲ್ಪಿಸಬಹುದು:— ವಚನ ಮತ್ತು ಸ್ವಾಧ್ಯಾಯ.

ವಚನವೆಂದರೆ ಮಾತು. ಆಡುವ ಮಾತಾಗಲಿ ಬರೆಯುವ ಮಾತಾಗಲಿ ಹೇಗಿರಬೇಕೆಂಬುದು ಈ ವಾಙ್ಮಯ ತಪಸ್ಸಿನಲ್ಲಿ ಅದಷ್ಟು ವಿಶದವಾಗಿ ತೋರಿಸಲ್ಪಡುತ್ತದೆ. ಆಡುವ ಮಾತು ಅಥವಾ ಬರೆಯುವ ಮಾತು ಹೇಗಿರಬೇಕು ಈ ವಿಷಯವಾಗಿ ಸಂಸ್ಕೃತದಲ್ಲಿ ಪಾಣಿನ್ಯಾಚಾರ್ಯರು, ಕನ್ನಡದಲ್ಲಿ ಕೇಶಿರಾಜನು, ಇಂಗ್ಲೀಷಿನಲ್ಲಿ ಯಾರೋ ಒಬ್ಬ ಎಕ್ಸ್ ದೊರೆಯು— ಇವರು ಸೂತ್ರಗಳನ್ನು ರಚಿಸಿದ್ದಾರೆ. ಅವುಗಳ ವ್ಯಾಸಂಗದಿಂದ ಮಾತಾಡುವುದು ಹೇಗೆ, ಬರೆಯುವುದು ಹೇಗೆ, ಇದು ಸರಿಯಾಗಿ ಗೊತ್ತಾಗುತ್ತದೆ; ಆದಕ್ಕೆ ಗೀತೋಪದೇಶಕರ ಮಾತು ಯಾಕೆ? ಆಕ್ಷೇಪವು ಸರಿ. ಆದರೆ ಪಾಣಿನಿ ಮೊದಲಾದ ವೈಯಾಕರಣರು ಮಾತಿನ ಒಂದು ಚೆಂದವಾದ ಶರೀರವನ್ನು ಮಾತ್ರ ತಯಾರಿಸುವರು; ಅದರಲ್ಲಿ ಜೀವಕಳೆಯನ್ನು ತುಂಬಿಸಲಾರರು. ವ್ಯಾಕರಣಸೂತ್ರ, ನಾಕ್ಪ್ರಚಾರ, ಅಲಂಕಾರ, ಗಾದೆ ಮೊದಲಾದ ಸಾಮಗ್ರಿಗಳಿಂದ ಭಾಷಾಯುವತಿಯ ಶರೀರವನ್ನು ಅದಷ್ಟು ಚೆಂದವಾಗಿ ಅಲಂಕರಿಸಿದರಿ. ಒಳಗೆ ಜೀವಕಳೆಯಿಲ್ಲ ಆ ಹೆಣವು ಯಾಕೆ ? ಭರ್ತೃಹರಿಯು ಹೇಳುವಂತೆ 'ಶವಶರೀರ'ವನ್ನು ಅಲಂಕರಿಸಿ ಪ್ರಯೋಜನವೇನು ? ಕಾಗದದಿಂದ ಸುಂದರವಾದ ಒಂದು ಹೂವನ್ನು ತಯಾರಿಸಿದಿರಿ, ಪರಿಮಳವಿಲ್ಲ. ಆ ಹೂವು ಯಾಕೆ ? ಒಂದು ವೇಳೆ ಅದನ್ನು ಹುಡುಗರ ಕೈಯಲ್ಲಿ ಆಟಕ್ಕಾಗಿ ಕೊಡಬಹುದು ! ಮಸಾಲೆಯು ಎಲ್ಲ ಜೀನಸುಗಳನ್ನು ಹಾಕಿ ಮಾಡಿದ ಮೇಲೋಗರಕ್ಕೆ ಉಪ್ಪು ಹಾಕದೆ ಇದ್ದರೆ– ಆ ಮೇಲೋಗರವು ಯಾತಕ್ಕೆ ಬಂದೀತು ? ಅನು ನೀರಸವೇ ಸರಿ. ಹಾಗೆಯೇ ಆಡುವ ಮಾತು ಅಥವಾ ಬರೆಯುವ ಮಾತು ಕೇಶಿರಾಜನ ವ್ಯಾಕರಣದಿಂದಲೂ, ನಾಗವರ್ಮನ ಅಲಂಕಾರದಿಂದಲೂ, ಅಲ್ಲಲ್ಲಿಯ ವಾಕ್ಪ್ರಚಾರದಿಂದಲೂ ಸಬಲ್ಧವಾಗಿದ್ದರೂ, ನಿರ್ಜೀವನಾಗಿದ್ದರೆ ಅದು ಅಲಂಕೃತನಾದ ಒಂದು ಶವವು; ನಿರ್ಗಂಧವಾದ ಕುಸುಮವು ಇಲ್ಲವೆ ಉಪ್ಪಿಲ್ಲದ ಮೇಲೋಗರವು. ಇಂಥ ಜೀವಕಳೆಯನ್ನು ತುಂಬಿಸುವುದು ವ್ಯಾಕರಣದಿಂದಾಗಲಿ, ಅಲಂಕಾರದಿಂದಾಗಲಿ, ಇಲ್ಲವೆ ವಾಕ್ಪ್ರಚಾರಾದಿಗಳಿಂದಾಗಲಿ ಸಾಧ್ಯವಾಗಲಾರದು. ಈಕೆಲಸಕ್ಕೆ ಗೀತೋಪದೇಷ್ಟರ ಮಾತೇ ಬೇಕು.

ಗೀತೆಯ ಅಭಿಪ್ರಾಯದಂತೆ ಮಾತು–ಆಡುವಾಗ ಕೇಳುವವರಿಗೆ, ಬರೆಯುವಾಗ ಓದುವವರಿಗೆ ಬೇಸರವನ್ನು ಹುಟ್ಟಿಸುವಂತಿರಬಾರದು – ಕ್ಷೋಭನನ್ನುಂಟು ಮಾಡುವಂತಿರಬಾರದು. ಆಡುವವನ ಅಥವಾ ಬರೆಯುವವನ ವಿವಕ್ಷಿತ ಉದ್ದೇಶವು ಕೈಗೂಡಬೇಕಾದರೆ, ಮೊದಲು ಶ್ರೋತೃಗಳ ಅಥವಾ ವಾಚಕರ ಮನಃಪ್ರಸನ್ನತೆ ಅವಶ್ಯವಿದೆ. ಅವರ ಈ ಮನಃಪ್ರಸಾದವನ್ನು ಸಂಪಾದಿಸುವಂತೆ ವಕ್ತಾರನು ಅಥವಾ ಲೇಖಕನು ಅನುರೂಪವಾದ ಶಬ್ದಗಳನ್ನೇ ಪ್ರಯೋಗಿಸಬೇಕು. ವಿಧವಾ ವಿವಾಹವನ್ನು ಪ್ರಚಾರಗೊಳಿಸಬೇಕೆಂದಿರುವನನು, ವಿಧವೆಯರ ಸಮಾಜದಲ್ಲಿ ಹೋಗಿ ಉಪನ್ಯಾಸವನ್ನು ಕೊಡಲು ಉಪಕ್ರಮಿಸುವಾಗ, ಮೊದಲೇ "ಎಲೌ ×ಂಡೆಗಳೇ! ನೀವು ನಿಮ್ಮ ×ಂಡೆತನದ ದುಃಖ. ವನ್ನು ಬಿಡಿರಿ; ಇನ್ನೊಮ್ಮೆ ಮದುವೆಯನ್ನು ಮಾಡಿಕೊಳ್ಳಿರಿ" ಎಂದು ಎತ್ತಿದ ಬಾಯಿಗೆಯೇ ಅವರನ್ನು ಡೇಕಾರಾಂತದಿಂದ ಸಂಬೋಧಿಸಿದರೆ ಅವನ ಆ ಉಪನ್ಯಾಸವನ್ನು ಅಲ್ಲಿ ಯಾವಳು ಕೇಳುತ್ತ ಕುಳಿತುಕೊಳ್ಳುವಳು? ಸ್ವತಃ ಅಭದ್ರ ಸ್ಥಿತಿಯಲ್ಲಿದ್ದರೂ ಅಭದ್ರ ಭಾಷಣವನ್ನು ಕೇಳುವುದು ಯಾರಿಗೂ ಇಷ್ಟವಿರುವುದಿಲ್ಲ. ಆದರಿಂದ ಕೇಳುವವರಿಗೆ ಅಥವಾ ಓದುವವರಿಗೆ ಮನಸ್ಸಂತಾಪವಾಗುವುದು; ಬೇಸರ

ಬರುವುದು; ತಾಳ್ಮೆ ಬಿಟ್ಟುಹೋಗುವುದು ಅದಕ್ಕಾಗಿಯೇ ಶ್ರೀಕೃಷ್ಣನು ಮಾತು ಅನುದ್ವೇಗಕರವಾಗಿರಬೇಕೆಂದು ಮೊದಲೇ ಹೇಳುತ್ತಾನೆ.

ಹೆರವರಿಗೆ ಬೇಸರ ಹುಟ್ಟಿಸಬಾರದೆಂಬುದಕ್ಕೆ ಸುಳ್ಳನ್ನಾದರೂ ಆಡಬಹುದೆಂದರ್ಥವಲ್ಲ. ಆ ಮಾತು ಹೇಗೆ ಅನುದ್ವೇಗಕರವಾಗಿದೆಯೋ ಹಾಗೆಯೇ ಸತ್ಯವಾಗಿಯೂ ಇರಬೇಕು. ಮಾತಿನ ವಿಷಯದಲ್ಲಿ ಭಗವಂತನ ಈ ಕಟ್ಟಳೆಯನ್ನು ನೋಡಿ ಕೆಲವು ಚತುರಪ್ರವಾಚಕರಿಗೆ ಬಹು ಆಶ್ಚರ್ಯ ತೋರೀತು; ನಿಜವಾಗಿ ಹೇಳುವುದಾದರೆ ಇವರಲ್ಲಿ ಅವರಿಗೆ ಪರಸ್ಪರ ವಿರೋಧವೇ ತೋರೀತು. ಮಾತು ಉದ್ವೇಗಕರವಿರಬಾರದಂತೆ; ಸತ್ಯವಿರಬೇಕಂತೆ! ಅದು ಹೇಗೆ ಸಾಧ್ಯ? ನ್ಯಾಯಾಧೀಶನು ಸಾಮಾನಿಕ ಸಾಕ್ಷಿಗಳನ್ನು ಕೇಳಿ, ಅರ್ಧನಿರ್ಣಯದಿಂದ ತೀರ್ಮಾನ ಕೊಡುವಾಗ, ಅಪರಾಧಿಯನ್ನು ಉದ್ದೇಶಿಸಿ ಹೇಳುತ್ತಾನೆ—"ಇಂಥಿಂಥ ಸಾಕ್ಷಿಗಳಿಂದ ನೀನು ಕಳ್ಳನೇ ಎಂಬುದಕ್ಕೆ ಸಂಶಯವಿಲ್ಲ. ಈ ಕಳ್ಳತನವನ್ನು ಕೂಡ ಸಾಧಿಸುವಾಗ ನೀನು ಬಹು ದುಷ್ಟತನದ ಉಪಾಯಗಳನ್ನು ನಡೆಯಿಸಿದ್ದಿ. ಆದ್ದರಿಂದ ನೀನು ಅತಿ ವಂಚಕನೂ ಹೌದು. ನಿನಗೆ ಇಂಥಿಂಥ ಶಿಕ್ಷೆಯು ವಿಧಿಸಲ್ಪಡುತ್ತದೆ." ನ್ಯಾಯಾಧೀಶನ ಈ ಮಾತು ಆ ಅಪರಾಧಿಗೆ ಉದ್ವೇಗಕರವಲ್ಲವೆ? ಕಟುಕನು ದನದ ತಲೆಯ ಮೇಲೆ ಕತ್ತಿಯನ್ನಿಟ್ಟಾಗ "ಅಯ್ಯೋ! ಘಾತುಕ ಚಂಡಾಲನೆ! ಗೋಮಾತೆಯನ್ನು ಕೊಲ್ಲುವಿಯಾ? ತಾಯಿಯ ಮಾಂಸ ರಕ್ತದಿಂದ ತುಂಬಿಸಿಕೊಳ್ಳುವ ಹೊಟ್ಟೆಯನ್ನು ಸುಡಬಾರದೆ? ಚಡಾಲನೆ! ಬೇಡ! ಬೇಡ! ನಮ್ಮೆದುರಾದರೂ ಈ ಘೋರವಾದ ಕೊಲೆಪಾತಕ ನಡೆಸಬೇಡ" ಎಂದು ಧಾರ್ಮಿಕನು ಕೂಗಿ ಹೇಳಿದರೆ,—ಅದು ಸತ್ಯವಾಗಿದ್ದರೂ ಕಟುಕನಿಗೆ ಉದ್ವೇಗಕರವಲ್ಲವೆ? ಮೇಲಿನ ನ್ಯಾಯಾಧೀಶನ ಮಾತಾಗಲಿ, ಇಲ್ಲಿಯ ಧಾರ್ಮಿಕನ ಮಾತಾಗಲಿ ಇವು ಸತ್ಯವಿದ್ದರೂ ಕಳ್ಳನಿಗೆ ಮತ್ತು ಕಟುಕನಿಗೆ ಉದ್ವೇಗಕರವಾಗಿವೆ, ಈ ವಿರೋಧವನ್ನು ಪರಿಹರಿಸುವುದು ಹೇಗೆ?

ಈ ವಿರೋಧವು "ಅನುದ್ವೇಗಕರ" ಮತ್ತು "ಸತ್ಯ" ಈ ಎರಡು ವಿಶೇಷಣಗಳಲ್ಲಿ ಮಾತ್ರ ಉಂಟಿಂತಲ್ಲ. ಮುಂದೂ "ಮಾತು ಪ್ರಿಯವಾಗಿಯೂ, ಹಿತವಾಗಿಯೂ ಇರಬೇಕು." ಎಂದು ಹೇಳಿದೆ. ಮಾತು ಪ್ರಿಯವಾದುದೆಲ್ಲ ಹಿತವಾಗಿಯೇ ಇದ್ದೀತೆ? ಅಥವಾ ಹಿತವಾಗಿರುವುದೆಲ್ಲ ಪ್ರಿಯವಾಗಿಯೇ ಇರುವುದೆಂದು ನೆನಸಬಹುದೆ? ಹಾಗೆ ನೆನಸಲು ಸಾಧ್ಯವಿಲ್ಲ. ಉಪಾಧ್ಯಾಯರು ವಿದ್ಯಾರ್ಥಿಗಳಿಗೆ "ದುರಭ್ಯಾಸಗಳನ್ನು ಬಿಡಿರಿ, ವಿದ್ಯಾಭ್ಯಾಸವನ್ನು ಮಾಡಿರಿ. ಆಟ ನೋಟಗಳು ಯಾವಾಗಲೂ ಚೆಂದವಲ್ಲ. ಬಾಳೆಹಣ್ಣಿಗಿಂತಲೂ ದುಸ್ಸಂಗವು ನಿಮಗೆ ಸಿಹಿಯಾಗಿ ತೋರಬಹುದು. ಆದರೆ ಅದನ್ನು ತ್ಯಜಿಸಿರಿ." ಎಂದು ಮುಂತಾದ ಹಿತದ ಮಾತುಗಳನ್ನು ಹೇಳಿದರೆ ಎಷ್ಟು ಮಂದಿ ವಿದ್ಯಾರ್ಥಿಗಳಿಗೆ ಅವು ಪ್ರಿಯವಾಗಿ ತೋರುವವು? ಅಕ್ರಮಪೂರ್ತನಿಗೆ "ಅಪ್ಪಾ! ಇದರಿಂದ ಮನೆ ಮಾಡಿನವನು ಯಾರೂ ಇಲ್ಲ; ಎಲ್ಲರೂ ಮಾರಿದನರೇ. ಈ ಕಲಿಯನ್ನು ಬಿಟ್ಟುಬಿಡು, ಎಂದು ಹೇಳಿದರೆ, ಅದು ಅವನಿಗೆ ಪ್ರಿಯವಾಗಿ ತೋರೀತೆ? ಅಥವಾ "ರಾಜನಾದ ದುರ್ಯೋಧನನೆ! ಪಾಂಡವರಿಗೆ ಐದು ಗ್ರಾಮಗಳಲ್ಲ, ಸೂಜಿಯ ಮೊನೆಯಷ್ಟು ಮಣ್ಣು ಕೂಡ ಕೊಡಬಾರದು—ಕಂಡೆಯಾ! ಈ ಹೊತ್ತು ಐದು ಹಳ್ಳಿಗಳನ್ನು ಕೊಡಲು ನೀನು ಒಪ್ಪಿಕೊಂಡರೆ,—ನಾಳೆ ರಾಜ್ಯದ ಅರ್ಧಭಾಗವನ್ನೆ ಕೊಡಬೇಕಾದೀತು. ಆದ್ದರಿಂದ ಈಗಲೇ ಜಾಗ್ರತೆಯಿಂದಿರುವುದು ಒಳ್ಳೆಯದಲ್ಲವೆ?" ಎಂದು ಪ್ರಿಯೋಕ್ತಿಗಳನ್ನು ನುಡಿದ ಶಕುನಿಯು ಈ ಮಾತು,—ದುರ್ಯೋಧನನ ಹಿತಕ್ಕೆ ಬಿತ್ತೆ? ಸಾರಾಂಶ, ಹಿತವಾಗಿರುವುದೆಲ್ಲ ಪ್ರಿಯವಾಗಿರುವುದು ಹೇಗೆ? ಇಲ್ಲವೆ ಪ್ರಿಯವಾಗಿ ತೋರುವುದು ಹಿತಕರವಾಗುವುದು ಹೇಗೆ? ಅನುದ್ವೇಗಕರವಾದ ಮಾತು ಸತ್ಯವಾಗಿಯೂ, ಪ್ರಿಯವಾದುದು ಹಿತವಾಗಿಯೂ ಇರಬೇಕೆಂದು ಹೇಳುವ ಭಗವಂತನು- ಕತ್ತಲೆಯಿರುವಾಗಲೇ ಪ್ರಕಾಶನನ್ನು ತರಲು ಯತ್ನಿಸುತ್ತಾನಲ್ಲವೆ? ಇದು ಸಾಧ್ಯವೆ?

ಈ ವಿರೋಧವು ಬಲವತ್ತರವಾಗಿ ಕಾಣುತ್ತದೆಂಬುದು ನಿಜ. ಆದರೆ ಅದು ಅಷ್ಟೊಂದು ಬಲವತ್ತರವಲ್ಲ. ಭಗವಂತನ ಮುಖ್ಯ ಅಭಿಪ್ರಾಯವೇನೆಂದರೆ: ನಿಮ್ಮ ಮಾತು ಅದಷ್ಟು ಅನುದ್ವೇಗಕರವಾಗಿರಲಿ;

ಆದರೆ ಅಸತ್ಯ ಬೇಡ. ಹಾಗೆಯೇ ಕೂಡಿದಷ್ಟು ಪ್ರಿಯವಾದ ಮಾತನ್ನೇ ಆಡಿರಿ; ಆದರೆ ಅಹಿತವಾದದ್ದನ್ನು ಬಿಟ್ಟುಬಿಡಿರಿ. ನಿಮ್ಮ ಮಾತಿನ ಗುರಿಯು ಸತ್ಯ ಮತ್ತು ಹಿತದ ಕಡೆಗೆಯೇ ಇರಲಿ. ವಿದೂಷಕನ ವೇಷ ಹಾಕಿಕೊಂಡು ಶ್ರೋತೃಗಳ ಅಥವಾ ವಾಚಕರ ಮನೋರಂಜನೆಗಾಗಿ ಅನುದ್ವೇಗಕರ ಹಾಗೂ ಪ್ರಿಯವಾದದ್ದನ್ನೇನಾದರೂ ಕೊಚ್ಚಿದರೆ, ಅದು ವಾಙ್ಮಯತಪಸ್ಸಾಗಲಾರದ; ಅದು ಕೇವಲ ನಿರ್ಮಾಲ್ಯವು. ಅದರಲ್ಲಿ ಜೀವಕಳೆಯು ಇರದು. ರಾಷ್ಟ್ರಕ್ಕೆ ಸತ್ಯ ಮತ್ತು ಹಿತವಾದುದು ಯಾವುದೋ ಅದೇ ಶುದ್ಧವಾದ ವಾಙ್ಮಯಸ್ವರೂಪವು. ಇಂಥ ವಾಙ್ಮಯವು ಒಂದುವೇಳೆ ಉದ್ವೇಗಕರವಾಗಿಯೂ ಇದ್ದೀತು; ಅಪ್ರಿಯವಾಗಿಯೂ ಇದ್ದೀತು; ಅವರೂ ದೋಷವಿಲ್ಲ. ಕಾರಣ, ಇವು ಅಷ್ಟೊಂದು ಪ್ರಧಾನವಾದ ಸಂಗತಿಗಳಲ್ಲ; ಸತ್ಯ ಮತ್ತು ಹಿತ ಇವೇ ಪ್ರಧಾನವಾದ ಸಂಗತಿಗಳೆಂದು ಸೂಚಿಸುವುದಕ್ಕಾಗಿಯೇ ಭಗವಂತನು ಪ್ರಧಾನ ಸಂಗತಿಗಳನ್ನು ಹೇಳಿ, ಅನಂತರ ಇವುಗಳನ್ನು ಉಚ್ಚರಿಸುವನು. ಈ ಸಂಗತಿಯು ಶ್ಲೋಕಗತ ವಿಶೇಷಣಪದಗಳ ಅನುಕ್ರಮವನ್ನು ನೋಡಿದರೆ ಚಾಣಾಕ್ಷರಿಗೆ ತಿಳಿಯದಿರದು. ಭಗವಂತನ ಆಶಯವು ಇದೇ ಎಂಬುದನ್ನು ದೃಢಪಡಿಸಬೇಕಾದರೆ ಮಾತಿನ ವಿಷಯದಲ್ಲಿ ಮನುವು ಹೇಳುವ "ಪ್ರಿಯಂ ಚಾನಾನೃತಂ ಬ್ರೂಯಾದೇಷ ಧರ್ಮಃ ಸನಾತನಃ" ಎಂದರೆ ಮಾತು ಪ್ರಿಯವಾಗಿದ್ದರೂ ಅಸತ್ಯವಾಗಿರಬಾರದೆಂಬರ್ಥದ ಈ ವಚನವನ್ನು ಆಲೋಚಿಸಬಹುದು. ಇಷ್ಟುಮಾತ್ರವಲ್ಲ, ಸಾಮಾನ್ಯವಾಗಿ ಎಲ್ಲ ನೀತಿ ಶಾಸ್ತ್ರಕಾರರ ಸಿದ್ಧಾಂತವು ಸತ್ಯ ಮತ್ತು ಹಿತವಾದ ವಚನವೇ ಎಂದಿರುತ್ತದೆ. ಇದೇ ವಾಙ್ಮಯದ ಜೀವಕಳೆ. ಅದು ಪಾಣಿನಿ ಮೊದಲಾದ ವೈಯಾಕರಣರ ಸೂತ್ರಗಳಲ್ಲಿ ಮತ್ತು ಅಲಂಕಾರಗಳಲ್ಲಿ ಸಿಕ್ಕುವುದಿಲ್ಲ. ಈ ರೀತಿಯಿಂದ ಸತ್ಯ ಮತ್ತು ಹಿತವಾದ ಉಪದೇಶವೇ ಪವಿತ್ರವಾದ ವಾಙ್ಮಯವೆಂಬ ಸಂಗತಿಯು ಪರಂಪರೆಯಿಂದ ಸಿದ್ಧವಾಗುವಲ್ಲಿ ಬುದ್ಧಿವಂತ ಮತ್ತು ದೇಶ-ಹಿತೈಷಿಗಳಾದವರು ದೇಶದೊಳಗಿನ ತರುಣರ ಮತ್ತು ಅಲ್ಪಜ್ಞರ ಬುದ್ಧಿಯಲ್ಲಿ ಚಾಂಚಲ್ಯವನ್ನು ಹುಟ್ಟಿಸುವಂತಹ ವಾಙ್ಮಯವನ್ನು ಹೆಚ್ಚಿಸುವುದು ನ್ಯಾಯವೇ? ಯುವ-ಯುವತಿಯರ ಪ್ರಣಯ ಪ್ರಧಾನವಾದ ಬೇಭರ್ತ್ಸ-ಕಥೆಗಳನ್ನು ಬರೆದು ವಾಚನಾಭಿರುಚಿಯನ್ನು ಕೆಡಿಸುವವರು ದೇಶದ್ರೋಹಿಗಳಲ್ಲವೆ? ಇನ್ನು ಕೆಲವರಂತೂ ಬರೀ ಅಲ್ಪವಾದ ಸಂಗತಿಗಳಿಗೇ ಬಣ್ಣ ಹಾಕಿ ಉದ್ದುದ್ದವಾದ ಶಬ್ದಾಡಂಬರಗಳಿಂದ ಅವುಗಳನ್ನು ವೃಥಾ ಗೋದಾನದಂತೆ ವಾಚಕರ ಸೆರಗಿನಲ್ಲಿ ಕಟ್ಟುವರು. ಇವರಿಗೆ ಯಾವ ಹೆಸರು ಕೊಡಬೇಕೆಂದೂ ಗೊತ್ತಾಗುವುದಿಲ್ಲ, ಇರಲಿ ಹೇಳುವ ತಾತ್ಪರ್ಯವೇನೆಂದರೆ– ದೇಶ ಹಿತನಿಘಾತಕವಾದ ಇಂತಹ ವಾಙ್ಮಯಕ್ಕೆ ಜಲಸಮಾಧಿಯನ್ನು ಕೊಡುವುದೇ ರಾಷ್ಟ್ರಹಿತದ ದೃಷ್ಟಿಯಿಂದ ಯೋಗ್ಯವಾಗಿದೆ.. ಸತ್ಯ ಮತ್ತು ಹಿತವಾದ ಮಾತೇ ವಾಙ್ಮಯ ತಪಸ್ಸು.

ವಾಙ್ಮಯತಪಸ್ಸಿನ ಏಕದೇಶವಾದ "ವಚನ" ದ ಸ್ವರೂಪ. ನನ್ನು ತಿಳಿಸಿದ ಮೇಲೆ "ಸ್ವಾಧ್ಯಾಯಾಭ್ಯಸನ"ದ ವಿವರಣವನ್ನು ಹೇಳುವದು ಈಗ ಕ್ರಮಪ್ರಾಪ್ತವಾಗಿದೆ. ಆದರೆ ದುಃಖದ ಮಾತೇನೆಂದರೆ— ಈಗ ಈ ವಾಙ್ಮಯತಪಸ್ಸನ್ನು ಮಾಡುವವರು ಯಾರೂ ಇಲ್ಲವೆನ್ನಬಹುದು ಈಗ ತನ್ನ ಶಾಖೆಯ ವೇದವನ್ನು ಕಲಿಯುವವರು ಯಾರು? ಮೊದಲು ತನ್ನ ಶಾಖೆ ಯಾವುದು, ಎಂಬುದು ಯಾರಿಗೆ ಗೊತ್ತಿದೆ? ಶಾಖಾಸೂತ್ರ, ಗೋತ್ರ ಇವುಗಳ ಜ್ಞಾನವಾಗುವಂತೆ ಹಿರಿಯರು ಸಂಧ್ಯಾವಂದನೆಯಲ್ಲಿ ಇವುಗಳ ಉಚ್ಚಾರನನ್ನಿಟ್ಟಿರುವರು. ಆದರೆ ಮೊದಲು ಸಂಧ್ಯಾವಂದನೆಯನ್ನೇ ಎಷ್ಟು ಜನರು ಮಾಡುತ್ತಾರೆ? ಶಿಖಾಸೂತ್ರ (ಜನಿವಾರ) ಗಳನ್ನು ಕಡಿದುಕೊಳ್ಳುವ ಈ ಪುಣ್ಯಪರ್ವಕಾಲದಲ್ಲಿ, ಶಾಖಾಸೂತ್ರ (ಆಪಸ್ತಂಭ ಬೋಧಾಯನ ಪ್ರಭೃತಿ) ಗಳನ್ನು ಯಾರು ವಿಸರ್ಜಿಸುವರು? ಶಿಖಾಸೂತ್ರಗಳನ್ನು ವಿಸರ್ಜಿಸಿ ನಾವು ಯಾರನ್ನು ಅನುಕರಿಸಲು ಪ್ರಯತ್ನಿಸುತ್ತೇವೋ, ಅಂಥ ಪಾಶ್ಚಾತ್ಯರಂತೆಯಾದರೂ ಆಧುನಿಕ ಶಾಸ್ತ್ರದ ಸ್ವಾಧ್ಯಾಯನವನ್ನು ಮಾಡುತ್ತೇವೋ? ಇಲ್ಲ ಅಸಡ್ಡೆಯಿಂದ ನಮ್ಮ ಸ್ವಂತ ಸ್ವಾಧ್ಯಾಯವು ಹೋಯಿತು, ಅನಭ್ಯಾಸದಿಂದ ಅವರ ಸ್ವಾಧ್ಯಾಯವೂ ಕೈವಶವಾಗಲಿಲ್ಲ.

ಈ ದುರ್ದಶೆಯನ್ನು ಬಗೆಹರಿಸಲು ಯತ್ನಿಸುವುದೆಂದರೆ ಹಿಂದಿನ ನಮ್ಮ ವೇದಗಳನ್ನು ಕಲಿತು, ಈಗಿನ ಅವರ ಶಾಸ್ತ್ರಗಳನ್ನು ಪರಿಶೀಲಿಸಬೇಕು. ಈ ವಿಷಯದಲ್ಲಿ ಹೇಳತಕ್ಕ ಮಹತ್ತ್ವದ ಸಂಗತಿ ಯಾವುದೆಂದರೆ: ಇದು ಭೌತಿಕ ಶಾಸ್ತ್ರಗಳ ಯುಗವಾಗಿದ್ದುದರಿಂದ, ಅವುಗಳನ್ನೇ ಹೆಚ್ಚಾಗಿ ನಾವು ಕಲಿಯಬೇಕು. "ಸ್ವಾಧ್ಯಾಯಾಭ್ಯಸನ" ವೆಂದರೆ ಇದೇ ಸರಿ. ಈ ವಿಷಯದಲ್ಲಿ ಇನ್ನೂ ಸ್ವಲ್ಪ ಹೇಳುವಹಾಗಿತ್ತು. ಆದರೆ ಈ ಲೇಖನವು ಉದ್ದವಾದ ಕಾರಣ ಅದನ್ನು ಬಿಡಬೇಕಾಗಿದೆ.

ಜನುಖಂಡಿಯಲ್ಲಿ ನಮ್ಮ ಏಜಂಟರು

ಮೆ. ಕುಲಕರ್ಣಿ ಬಂಧುಗಳು, ಸ್ಯೂಜ್ ಏಜಂಟ್ಸ್

ಗುಡಗೇರಿಯಲ್ಲಿ ನಮ್ಮ ಏಜಂಟರು

ಶ್ರೀ ಡಿ. ಎನ್. ಹುಲಕೋಟಿ, ಸ್ಯೂಜ್ ಏಜಂಟ್

ಅಂದಿನ ಆ ನೆನಪಿಗೆ!

ಶ್ರೀ. ಸಿದ್ದಣ್ಣ ಮಸಳಿ, ಧಾರವಾಡ

೧

ಒಂದು ತಿಂಗಳು ಇಂದು ಪೂರ್ಣವಾಯಿತು ಕವಿತೆ
ನಾವೀರ್ವರಾ ಇರುಳು ಅಗಲಿದಂದು,
ಮೌನ ಮೈ ತಳೆದಿತ್ತು ಮೊಗಬಾಡಿ ಹೋಗಿತ್ತು,
ಕಣ್ಣು ಕೊನೆಯಂಚಿನಲಿ ಅಶ್ರುಬಿಂದು!

೨

ಎದೆಗೆದೆಯ ಹೊಂದಿರಿಸಿ ಕುರುಳುಗಳ ನೇವರಿಸಿ
ತುಟಿಗಳಲಿ ಜೇನಿರಿಸಿ ರಮಿಸಿ ರಮಿಸಿ-
ಕಣ್ಣೊರಸಿಕೋ ಕವಿತೆ ಎಂದು ನಾ ನುಡಿದಾಗ
ಅಳಲ ತೊರೆಯೇ ಬಂತು ದಡವ ಸೂಸಿ!

೩

ಕನಸಿನಲ್ಲಾದರೂ ಅಗಲಿಕೆಯು ಬರದಿರಲಿ
ಎಂದು ದಿನವೂ ಹೃದಯ ನುಡಿಯುತಿತ್ತು;
ಅದರೇನೊಂದು ದಿನ ಈ ದುಃಖ ಈ ಮೌನ
ಬರಲೆ ಬೇಕಿತ್ತಲ್ಲ! ಬಂದುದಾಯ್ತು!

೪

ಕರುಳ ಬಳ್ಳಿಯೆ ಹರಿದು ಹೋಯಿತೆನುವಂತೆಯೇ
ಹೋಗಬಾರದ ನೀನು ಹೋದೆಯೇನು!
ಆ ದಿನದ ಆ ಇರುಳು ಆ ಮಾತು ಆ ನೆನಹು
ಆ ಜನ್ಮ ಪರ್ಯಂತ ಕೊನೆಯದೇನು!

೫

ಎದೆಯಾಳ ತಳದಲ್ಲಿ ಏನೊ ತಳಮಳವಲ್ಲಿ
ದೇಹವನೆ ಸುಡುತಿಹುದು ರಕ್ತಹೀರಿ;
ದಿನದಿನವು ಆ ನೆನವೆ ತಪ್ತಾಗ್ನಿರಸದಂತೆ
ತೂರಿ ಬರುತಿಹುದಲ್ಲ ಬೆಂಕಿಕಾರಿ.

೬

ನಿನ್ನ ಪ್ರೀತಿಯೆ ನನಗೆ ಊರುಗೋಲಾಗಿಹುದು,
ಈ ಬಾಳನುದ್ದಕೂ ದಾರಿದೀಪ!
ನಾವಳಿದು ಮಣ್ಣಿನಲಿ ಮಣ್ಣಾಗಿ ಹೋದರೂ
ಪ್ರೀತಿಗಾದರು ಬೇಡ ದೈವಶಾಪ!

ಆಸೆ

ಶ್ರೀ. ಸೀ. ಹೊಸಬೆಟ್ಟು

ಎನಿತು ಬಡತನವಿರಲಿ, ಎಡರು ಕವಿಯುತಲಿರಲಿ
ಮನದಾಸೆಯಳಿಯದಲೆ ನಲಿಯುತಿಹುದು!
ಚಿಂತೆ ನೆಲದೊಳಗೂರಿ, ಮೇಲೆ ಮೇಲಕೆಯೇರಿ
ಆಸೆ, ವೈರಾಟನನು ತಾಳುತಿಹುದು. ॥ ೧ ॥

ಆಸೆಯನು ಮೀರಿಯಿಹ ಶಕ್ತಿಯಿಹುದೇ ಇಲ್ಲಿ?
ಆಸೆಯನತಾರನಿದು ಲೋಕ-ಲೋಕ.
ವಿಧಿಯು ವಿಶ್ವದ ರೂಪ ಬರೆಸಿ ಕಣ್ಣಾಲಿಯಾಸೆ-
ಯಿರಿಸಿಹನೊ, ಎಳೆಸುಳೊಬ ಸಿರಿಯು-ನಾಕ! ॥ ೨ ॥

ಪ್ರಾಣಪಕ್ಷಿಯ ಚಂಚು ಆಸೆಯುಸಿರಲಿ ಕೂಗಿ
ಶ್ರುತಿಹಿಡಿಯುತಿರೆ ನೆಲದ, ಜಲದ ಸೊಲ್ಲು
ಕಡೆದು ಕಡಲನು ಏಳು ಹೋಳು ಮಾಡಿಸಿಯಲ್ಲಿ
ತನ್ನ ಮಂದಿರಕೆಂದು ಇರಿಸಿ ಕಲ್ಲು. ॥ ೩ ॥

ಸೂರ್ಯ-ಚಂದ್ರರು ಹಣ್ಣು ಮುಗಿಲ ಹೊಂಗಿಡದಲ್ಲಿ
ಹೂತಿಹುದು ಎನ್ನುತಿದೆ ಪಾರಿಜಾತ
ಅಲ್ಲಿ ಕಲಶದಿ ಜೀವ-ರಸವು ಸುರಿಯುವುದೆಂದು
ಋತಋತದ ತಪಕೆಂದು ಕಲ್ಪ-ನೇತ. ॥ ೪ ॥

ಆಸೆಯೆನ್ನುವ ಗಾಳಿ ಮಾನಸದ ತುಂಗೆಯಲಿ
ತೇಲಿಸಿತು ಜೀವನದ ದೋಣಿ ವಾಹ.
ಮುಗಿಲಗರಿಯನು ಬಿಚ್ಚಿ, ವೇಲೆಯಳುಕದೆ ಹಾರಿ
ಏರಿಸಿದೆ ಧ್ವಜನನದು ಬೆಳೆಸಿ ದೇಸ! ॥ ೫ ॥

ವಿಶ್ವವೆನ್ನುವ ತೂಗುವಯ್ಯಾಲೆಯನು ಏರಿ
ಸತ್ಯವೆನ್ನುವ ತಾಯಿ ಬೇರು-ನೂಲು
ಸಪ್ತಲೋಕದ ದಿಕ್ಕಿನಂತ್ಯ ಮೇಲಿದಕೆಂದು
ಕಲ್ಪನೆಯು ತೃಪ್ತಿಯಿದೆ ಇರಿಸಿ ಕಾಲ. ॥ ೬ ॥

ಆಸೆ ಬಳವಿನ ಭಾಷೆ, ಮನದ ಬಾಗಿಲ ತೆರೆಸೆ
ಪ್ರಗತಿಗತಿಗಿದು ಬೆಳಕು ಕತ್ತಲಲ್ಲಿ
ಆಸೆ ಸತ್ತರೆಯೊಮ್ಮೆ ಜಗಕೆ ಬದುಕಿಲ್ಲಣ್ಣ
ಆಸೆಯೇ ಉಸಿರಹುದು ಬಾಳಲಿಲ್ಲಿ. ॥ ೭ ॥

ತಿಮ್ಮನ ದೈವ

(ಒಂದು ನೀಳ್ಗತೆ)

"ಚಿದಾನಂದ"

●

ಯಾರ ದೈವ ಒಳ್ಳೆಯದು? ರಾಮುವಿನದೋ? ತಿಮ್ಮನದೊ? ರಾಮುವಿಗೆ ಸಂಸ್ಕೃತಿಯ ಸಂಪತ್ತಿದೆ; ತಿಮ್ಮನಿಗೆ ಲೌಕಿಕ ಸಂಪತ್ತಿದೆ. ಆದರೆ ತಿಮ್ಮನ ಸಾಂಪತ್ತಿಕ. ಜೀವನದಲ್ಲಿ ಸುಖ-ಶಾಂತಿಗಳಿರಬಹುದೆ?

●

"ನೋಡು ಆ ಮಂಕು ತಿಮ್ಮನನ್ನು. ಮಂಕು! ಮಂಕು! ಎಂದು ಚಾಷ್ಟಿ ಮಾಡುತ್ತಿದ್ದರಿ ನೀವೆಲ್ಲ. ಈಗ ನಿಮಗೇ ಮಂಕು ಹಿಡಿಸಿದನು" ರಾಮೂನ ತಾಯಿ ರಾಮೂನನ್ನು ಮೂದಲಿಸುತ್ತಿದ್ದಳು.

"ಅಂಥದೇನಾಗಿದೆ ಈಗ?" ರಾಮೂ ತನ್ನ ಅಭಿಮಾನಕ್ಕೆ ಪೆಟ್ಟು ಬಿದ್ದರೂ ಏನೂ ಆಗದವನಂತೆ ನುಡಿದ.

"ಇನ್ನೂ ಏನಾಗಬೇಕು? ಎಲ್ಲರಿಗಿಂತ ಹಿಂದೆ ಪಾಸಾಗಿ ಎಲ್ಲರಿಗಿಂತ ಮೊದಲಿಗೇ ನೌಕರಿ ಹಿಡಿದ. ಈಗ ನಾಳೆ ಬೆಳಗಾದರೆ ಲಗ್ನ. ನೀ ಮಾತ್ರ ಕೂತೀದಿ ಹಾಂಗ! ನೌಕರೀ ಇಲ್ಲದಿದ್ದರೂ ಇಲ್ಲ. ಮದಿವಿ ಆದರೂ ಆದೀತಂದರ, ನಿನ್ನ ಮುಖಹೀನತನ ನೋಡಿ ಬರುವವರೂ ದೂರು- ಹಾಯಲಿಕ್ಕೆ ಹತ್ಯಾರ....."

ರಾಮೂನ ತಾಯಿಯ ಮಾತುಗಳು ಇನ್ನೂ ಎಲ್ಲಿಯ ವರೆಗೆ ಸಾಗುತ್ತಿದ್ದವೋ! ಸ್ವತಃ 'ಮಂಕು' ತಿಮ್ಮನೇ ಬಂದದ್ದರಿಂದ ಅವುಗಳಿಗೆ ತಾತ್ಪೂರ್ತಿಕವಾಗಿಯಾದರೂ ತಡೆ ಉಂಟಾಯಿತು.

ರಾಮೂ ತಿಮ್ಮನನ್ನು ನಗುಮುಖದಿಂದಲೇ ಸ್ವಾಗತಿಸಿದ.

ತಿಮ್ಮನು ರಾಮೂನನ್ನು ತನ್ನ ಮದುವೆಗೆ ಕರೆದುಕೊಂಡು ಹೋಗಲು ಬಂದಿದ್ದ. ಆ ಹೊತ್ತಿನ ದಿನವೇ ತಿಮ್ಮನ ಮನೆಯವರೆಲ್ಲ ವಧುವಿನ ಊರಿಗೆ ಹೊರಡಬೇಕಾಗಿತ್ತು.

ರಾಮೂ ಮಾತ್ರ ಏನೋ ರಾವಾಯಣ ಹೇಳಿ, ತಿಮ್ಮನ ಆಗ್ರಹದ ಆಮಂತ್ರಣದಿಂದ ಜಾರಿಕೊಂಡ. ತಿಮ್ಮ ನಿರಾಶನಾಗಿ, ಬಂದ ದಾರಿಗೆ ಸುಂಕವಿಲ್ಲವೆಂದು ಮರಳಿದ.

ರಾಮೂನ ತಾಯಿ ಮತ್ತೆ ತನ್ನ ಟೀಕಾಯನವನ್ನು ಪ್ರಾರಂಭ ಮಾಡಿದಳು ರಾಮೂ ಎದ್ದು ಹೋಗಿ ತನ್ನ ಕೋಣೆಯಲ್ಲಿ ಮುಸುಕು ಹಾಕಿಕೊಂಡು ಮಲಗಿಬಿಟ್ಟ.

ರಾಮೂ ತಿಮ್ಮೂ ನಿಕಟ ಸ್ನೇಹಿತರಾಗಿದ್ದರೂ ರಾಮೂ ತಿಮ್ಮನ ಮದುವೆಗೆ ಹೋಗಲಿಲ್ಲ. ಈ ಜಾರಿಕೊಳ್ಳುವಿಕೆಯ ಹಿಂದೆ ಒಂದು ದೊಡ್ಡ ಇತಿಹಾಸವೇ ಇತ್ತು.

ರಾಮೂ ತಿಮ್ಮೂ ಕೂಡಿ ಕಲಿತವರು. ಕನ್ನಡ ಒಂದನೇ ಈಯತ್ತೆಯಿಂದ ಇಂಗ್ಲೀಷು ಏಳನೆಯ ಈಯತ್ತೆಯ ವರೆಗೂ ಕೂಡಿ ಇದ್ದವರು.

ರಾಮೂ ಶಾಲೆಯಲ್ಲಿ ಯಾವಾಗಲೂ ಮೊದಲನೆಯ ನಂಬರು. ತಿಮ್ಮೂ ಮಾತ್ರ ಕೊನೆಯ ನಂಬರು.

ತಿಮ್ಮನ ತಾಯಿ-ತಂದೆಗಳು ಹಲವು ದೇವರಿಗೆ ಹರಕೆ ಹೊತ್ತು, ಹನ್ನೆರಡು ವರುಷದ ಮೇಲೆ ಒಬ್ಬ ಮಗನನ್ನು ಹೆತ್ತಿದ್ದರು. 'ಎಲ್ಲಾದರೂ ತಮ್ಮ ಮಗ ತಿಮ್ಮಪ್ಪನ ಹಾಗೆ ಬಾಳಲಿ' ಎಂದು ಅವನ ತಾಯಿ ತಂದೆಗಳು ತಮ್ಮ ಪುತ್ರರತ್ನಕ್ಕೆ 'ತಿಮ್ಮ' ಎಂದು ನಾಮಕರಣ ಮಾಡಿದ್ದರು. ಆದರೆ ತಿಮ್ಮನ ದಡ್ಡತನವನ್ನೂ ಮುಗ್ಧತನವನ್ನೂ ನೋಡಿ ಮಾಸ್ತರರು 'ಮಂಕು' ಎಂಬ ಬಿರುದನ್ನು ತಿಮ್ಮನಿಗೆ ಕೊಟ್ಟದ್ದರಿಂದ, ತಿಮ್ಮನು ತನ್ನ ಸಾಲೆಯ ಗೆಳೆಯರಿಗೆಲ್ಲ 'ಮಂಕು ತಿಮ್ಮ' ನಾದನು.

ತಿಮ್ಮನು ಸಾಲೆಯಲ್ಲಿ 'ಮಂಕು' ಎನಿಸಿದರೂ ವ್ಯವಹಾರದಲ್ಲಿ ಮಂಕು ಇರಲಿಲ್ಲ. ನಂಬರು ಕೊನೆಯದಾದರೂ ಏನಾದರೂ ಸಾಹಸ ಮಾಡಿ ಪರೀಕ್ಷೆಯಲ್ಲಿ ಮಾತ್ರ ಪ್ರತಿ ವರುಷ ಪಾಸು ಆಗೇ ತೀರುತ್ತಿದ್ದನು. ಆದರೆ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಮಾತ್ರ ತಿಮ್ಮನ ಸಾಹಸ ನಡೆಯಲಿಲ್ಲ. ಪಂಢರಪುರದಂತೆ 'ವಾರಿ' ಹಚ್ಚಬೇಕಾಯಿತು ಮೂರನೆಯ ಬಾರಿಗೆ ತಿಮ್ಮೂ ಮ್ಯಾಟ್ರಿಕ್ ಪಾಸಾದ. ಪರೀಕ್ಷೆಯ ಸರ್ಟಿಫಿಕೇಟು ಬಂದದ್ದೇ ತಡ; ನೌಕರಿಯಲ್ಲಿ ಸೇರಿಕೊಂಡುಬಿಟ್ಟ. ಆ ಮೇಲೆ ಅವನ ಕೈ ಹಿಡಿಯುವವರೇ ಇಲ್ಲ. ಅವನನ್ನು 'ಮಂಕು' ಎಂದು ತಿಳಿದವರೇ ಅವನಿಗೆ ಕನ್ನೆ ಕೊಡಲು ಎಡತಾಕತೆಡೆಗಿದರು. ಮದುವೆಯ ಮಾರ್ಕೆಟಿನಲ್ಲಿ ತಿಮ್ಮನ ದರ ಬಹಳ ಏರಿತು. ಸಮಾಜದಲ್ಲಿಯೂ ಅವನಿಗೆ ಸಾಕಷ್ಟು ಗೌರವ ದೊರೆಯಿತು. ಈಗ ತಿಮ್ಮೂ ಒಬ್ಬ ಆಗರ್ಭ ಶ್ರೀಮಂತರ ಏಕಮಾತ್ರ ಪುತ್ರಿಯನ್ನು ವರಿಸುವವನಿದ್ದ. ಹೀಗಾಗಿ ನೆರೆಹೊರೆಯವರು, ಬಂಧು-ಬಳಗದವರು ತಿಮ್ಮನನ್ನು ಹೊಗಳುವವರೇ ಆಗಿದ್ದರು. ಎಲ್ಲರ ಬಾಯಿಯಲ್ಲೂ "ಏನು ತಿಮ್ಮನ ದೈವ!" ಎಂಬ ಶಬ್ದಗಳೇ. ಶಾಲೆಯಲ್ಲಿ ಹಿಂದಿದ್ದವನು ಜೀವನದಲ್ಲಿ ಮುಂದಾಗಿದ್ದ. ಮಂಕು ತಿಮ್ಮನು ಇಂದು 'ತಿಮ್ಮಣ್ಣ' 'ತಿಮ್ಮರಾಯ' ನಾಗಿದ್ದ.

ರಾಮೂನ ಸ್ಥಿತಿಯು ಮಾತ್ರ ತೀರ ವಿರುದ್ಧವಾಗಿತ್ತು. ಶಾಲೆಯಲ್ಲಿ ಜಾಣನೆನಿಸಿಕೊಂಡ ರಾಮೂ ಜೀವನದಲ್ಲಿ ಪೆದ್ದನೆನಿಸಿಕೊಳ್ಳಬೇಕಾಯಿತು. ತಮ್ಮ ಜಿಲ್ಲೆಗೇ ಗೌರವ ತರುವಂತೆ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಪಾಸಾದ ರಾಮೂ, ಕಾಲೇಜಿನ ಕಟ್ಟೆಯನ್ನೇರುತ್ತಲೇ ಗಾಂಧೀ ಚಳವಳಿಗೆ ಬಿದ್ದನು. ರಾಮೂ ಸೆರೆಮನೆಯಿಂದ ಹೊರಗೆ ಬಂದಾಗ, ತಂದೆ ಸ್ವರ್ಗಸ್ಥನಾಗಿ ಆರು ತಿಂಗಳಾಗಿತ್ತು. 'ಒಂದು ಪದವಿಯಾದರೂ ಇರಲಿ' ಎಂದು ರಾವೂ ಪಾಸ್ ವರ್ಗದ ಒಂದು ಬಿ.ಎ ಪದವಿಯನ್ನು ಹಿಡಿದುಕೊಂಡು ಕಾಲೇಜಿನ ಮೆಟ್ಟಿಲುಗಳನ್ನು ಇಳಿದ. ಅದೇ ಹೊತ್ತಿಗೆ ಯುರೋಪಿನಲ್ಲಿ ಮಹಾಯುದ್ಧದ ಸಿದ್ಧತೆ ನಡೆದಿದ್ದರೆ ಭಾರತದಲ್ಲಿ ನಿರುದ್ಯೋಗ ತಾಂಡವವಾಡುತ್ತಿತ್ತು.

ರಾಮು ಏನೇನೋ ಆದರ್ಶಗಳನ್ನು ಕಟ್ಟಿಕೊಂಡು ಕಾಲೇಜಿನ ವೆಚ್ಚಗಳನ್ನೇನಿದ್ದ. ಕಾಲೇಜಿನಿಂದ ಹೊರಗೆ ಬಂದಾಗ ನಿರುದ್ಯೋಗದ ಬಂಡೆಗಲ್ಲಿಗೆ ಅಪ್ಪಳಿಸಿ ಅವೆಲ್ಲ ಮಾಯವಾಗತೊಡಗಿದುವು. ಕಾಲೇಜಿನಿಂದ ಬಂದ ಹೊಸದರಲ್ಲಿ ಕತೆ ಕವನಗಳನ್ನು ಬರೆದು ನೋಡಿದ. ಅದರಿಂದ ಅನ್ನದ ಸಮಸ್ಯೆ ಬಿಡುವ ಬದಲಾಗಿ, ಅಂಚೆಯ ವೆಚ್ಚ ಮೈಮೇಲೆ ಬಂದಿತು. 'ಉದಯೋನ್ಮಾನ ಕವಿ' ಎಂಬ ಬಿರುದಿನಿಂದ ತಾತ್ತ್ವಿಕ ತೃಪ್ತಿ ದೊರೆಯಿತಲ್ಲದೆ ದೇಹದ ಹಸಿವು ಹಿಂಗಲಿಲ್ಲ.

ತಂದೆ ಮಾಡಿಟ್ಟ ಸಾಲದು ಹಣ ಕರಗಿ ಹೋಗಿತ್ತು. ತಂಗಿಯೊಬ್ಬಳು ಬೆಳೆದು ನಿಂತಿದ್ದಳು. ಒಂದು ಗೇಣುದ್ದ ಹೊಲ ಒಂದು ಚೂರು ಉದ್ದ ಮನೆ ಇಷ್ಟೇ ರಾಮೂನಿಗೆ ದೊರೆತ ಆಸ್ತಿ. ಬಿ. ಎ. ಪಾಸ್ ಆಗಿದ್ದರೂ ಒಂದು ಮಾಸ್ತರಿಕೆ ಕೂಡ ದೊರೆಯಲಿಲ್ಲ. ರಾಮೂನ ತಾಯಿ ಮಗನ ತಲೆಯ ಮೇಲೆ ಆವಷ್ಟು ಬೇಗ ಅಕ್ಷತೆಗಳನ್ನು ಹಾಕಲು ಚಡಪಡಿಸುತ್ತಿದ್ದಳು. ಅವರಿ ನಿರುದ್ಯೋಗಿಗೆ ಹೆಣ್ಣುಕೊಡುವವರಾರು? ರಾಮೂ ಇನ್ನೂ ಕಾಲೇಜಿನಲ್ಲಿದ್ದಾಗ ಅವನಿಗೇ ಮೀಸಲಾಗಿರಿಸಿದ್ದ ಕನ್ಯೆ ಕೂಡ ಇಂದು ಹೆರವರ ಮನೆ ಸೇರಿದ್ದಳು. ಮದುವೆಯ ಸೇಟಿಯಲ್ಲಿ ರಾಮೂನಿಗೆ ಬೆಲೆ ಇರಲಿಲ್ಲ. ಸಮಾಜದಲ್ಲಿ ಸ್ಥಾನ-ಮಾನಗಳಿರಲಿಲ್ಲ. ಹೀಗಾಗಿ ನಾಲ್ಕು ಜನರು ಕೂಡಿದೆಡೆಯಲ್ಲಿ ರಾಮೂ ಒಂದು ಹರಟೆಯ, ಟೀಕೆ ಟಿಪ್ಪಣಿಗಳ ವಿಷಯವಾಗಿದ್ದ.

ಇಂತಹ ಪರಿಸ್ಥಿತಿಯಲ್ಲಿ ರಾಮೂ ತಿಮ್ಮನ ಮದುವೆಗೆ ಹೋಗಿದ್ದರೆ ದೆರಳು ಮಾಡಿ ತೋರಿಸಲ್ಪಡುತ್ತಿದ್ದ. ಪರಿಹಾಸ್ಯಕ್ಕೆ ಗುರಿಯಾಗುತ್ತಿದ್ದ. ಇದನ್ನು ತಪ್ಪಿಸಲೆಂದೇ ಅವನು ಏನೋ ಒಂದು ರಾಮಾಯಣವನ್ನೇ ತಿಮ್ಮನ ಮುಂದೆ ಬಿಚ್ಚಿದ್ದ. ಇಷ್ಟಲ್ಲದೇ ಆರ್ಥಿಕ ಅಡಚಣೆಯೂ ಅವನನ್ನು ಕಾಲುಹಿಡಿದು ಹಿಂದೆಳೆಯುತ್ತಿತ್ತು. ಎಲ್ಲರೂ ಕಾಣಿಕೆ ಕೊಡುವಾಗ, ತಾನು ಹಾಗೇ ಬಿಡುವುದು ಹಾಸ್ಯಾಸ್ಪದವಾಗುವುದಿಲ್ಲವೇ?

ಆದರೆ ತಿಮ್ಮನಿಂದ ತಪ್ಪಿಸಿಕೊಂಡ ರಾಮೂನಿಗೆ ತನ್ನ ತಾಯಿಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ.

ರಾಮೂನ ತಾಯಿಯಾದರೂ ರಾಮೂನನ್ನು ಹೀಯಾಳಿಸಲು ಅವನಿಗೆ ಅಣಕದ ಮಾತುಗಳನ್ನು — ಮೂದಲಿಕೆಯ ನುಡಿಗಳನ್ನು — ಆಡುತ್ತಿರಲಿಲ್ಲ. ನೆರೆಹೊರೆಯವರು ಆಡಿಕೊಂತ ಮಾತುಗಳನ್ನು ಕೇಳಿ ಅವಳಲ್ಲಿ ಉಂಟಾದ ಅತೃಪ್ತಿ, ಅಸಮಾಧಾನ, ಪ್ರತೀಕಾರಗಳು ಪರಾವರ್ತನ ಹೊಂದಿ ಈ ತರದ ಮಾತಿನ ರೂಪದಿಂದ ವ್ಯಕ್ತವಾಗುತ್ತಲಿದ್ದವು. ಅವುಗಳು ಅವಳ ಮನಸ್ಸಿನ ಉದ್ವೇಗವೆಂಬ ಕೆರೆಗೆ ಇಪ್ಪ ಕೋಡಿಗಳಾಗಿದ್ದುವು. ಆಗೀಗ ಏನಾದರೂ ಇಂತಹ ವಿಶೇಷ ಸಂದರ್ಭ ಬಂದಾಗೆಲ್ಲ ಆ ಉದ್ವೇಗವು ರಭಸದಿಂದ ಹೊರಹೊಮ್ಮುತ್ತಿತ್ತು. ಅದು ಅವಳ ಅಸಹಾಯಕತೆಯ ವ್ಯಕ್ತರೂಪವಾಗಿತ್ತಲ್ಲದೆ ರಾಮೂನ ಮೇಲಿನ ದ್ವೇಷವಾಗಿರಲಿಲ್ಲ.

ಆದರೂ ತಾಯಿಯ ಮಾತುಗಳು ಬಾಣಗಳಂತೆ ರಾಮೂನ ಎದೆಯನ್ನು ಇರಿಯುತ್ತಿದ್ದವು. ತಿಮ್ಮನ ಮದುವೆಯಾಗಿ ಮನೆ ತುಂಬಿಸಿಕೊಳ್ಳಲು ವಧುವನ್ನು ತುಂಬ ವಿಜೃಂಭಣೆಯಿಂದ ಮೆರವಣಿಗೆಯಲ್ಲಿ ವರನ ಜೊತೆಗೆ ಕರೆದುಕೊಂಡು ಬಂದನೇಲಂತೂ ರಾಮೂನ ತಾಯಿಯ ವಾಗ್ಬಾಣಗಳು ಬಹಳ ತೀಕ್ಷ್ಣವಾಗಿ ಬಂದುವು. 'ತನ್ನ ಮಗನೂ ಒಳ್ಳೇ ನೌಕರಿ ಮಾಡಿದ್ದರೆ ತನಗೂ ಇಷ್ಟೇ ವೈಭವದಿಂದ ಸೊಸೆ ಬರುತ್ತಿದ್ದಳಲ್ಲವೇ? ತಿಮ್ಮನ ತಾಯಿಗೆ ದೊರೆತ ಮಾನ ಮರ್ಯಾದೆಗಳು ತನಗೂ ಸಂಕನವರಲ್ಲಿ ದೊರೆಯುತ್ತಿದ್ದುವಲ್ಲವೇ?' ಎಂಬ ಅತೃಪ್ತಿ — ಅನಮ್ಯವಾದ ಅತೃಪ್ತಿ ಅವಳನ್ನು ಕ್ಷಣಹೊತ್ತು ಕತೋರ ಹೃದಯಳಾಗಿ ಕೋರುವಂತೆ ಮಾತುತ್ತಿತ್ತು. ಆನಂತರ ಎಷ್ಟೆಂದರೂ ಅವಳದು ತಾಯಿಯ ಕರುಳಲ್ಲವೇ? ಮಗನು ಸಣ್ಣ ಮೊಗವಾಡಿದ್ದು ನೋಡಿ, ತನ್ನ ನಿಷ್ಠುರತೆಗಾಗಿ ತಾನೇ ಅಳುತ್ತಿದ್ದಳು.

ತಾಯಿಯ ಮಾತುಗಳಿಂದ ನೊಂದುಕೊಂತ ರಾಮೂನಿಗೆ ಎರತನೆಯ ಮಹಾಯುದ್ಧವು ಮಾರ್ಗದರ್ಶಕವಾಯಿತು. ಒಂದು ದಿನ ಇನ್ನಕಿದ್ದಂತೆ ರಾಮೂ ಮಾಯವಾದ.

ರಾಮೂ ಬರೆದಿಟ್ಟ ಚೀಟಿಯಿಂದ ಅವನು ಸೈನ್ಯಕ್ಕೆ ಭರತಿ ಆಗಲು ಹೋದ ಸಂಗತಿಯನ್ನು ತಿಳಿದ ಅವನ ತಾಯಿಯು ಹಾಸಿಗೆ ಹಿಡಿದಳು. ಅವಳ ತಮ್ಮನು ಅಕ್ಕನ ಸಹಾಯಕ್ಕಾಗಿ ಓಡಿಬಂದ. ರಾಮೂನನ್ನು ಹೇಗಾದರೂ ಮಾಡಿ ಮನೆಗೆ ಕರೆತರುವೆನೆಂದು ಅಶ್ವಾಸನ ಕೊಟ್ಟು ಗಾಡಿಯನ್ನು ಹತ್ತಿದ.

ರಾಮೂನ ಆರೋಗ್ಯ ಪರೀಕ್ಷೆಯು ಅವನ ಸೈನ್ಯ ಭರತಿಯಲ್ಲಿ ಅತ್ಯಲಾಗಿ ಬಂದಿತು. ಅದನ್ನು ದಾಟುವುದು ರಾಮೂನಿಗೆ ಸಾಧ್ಯವಾಗಲಿಲ್ಲ. ಇನ್ನೇನು ಮಾಡಬೇಕೆಂದು ಚಿಂತಿಸುತ್ತಿರುವಷ್ಟರಲ್ಲಿ ತನ್ನ ಸೋದರಮಾವನನ್ನು ಕಂಡ. ರಾಮೂನ ವಿಷಯವನ್ನೆಲ್ಲ ಕೇಳಿಕೊಂತು, ಈಗ ಆದದ್ದೇ ಒಳಿತಾಯಿತೆಂದು ಹೇಳಿ ರಾಮೂನನ್ನು ಮರಳಿ ಮನೆಗೆ ಕರೆದುಕೊಂಡು ಬಂದ.

ಕೊನೆಗೆ ಸೋದರಮಾವನೇ ರಾಮುವರ ತಂಗಿಗೆ ಒಂದು ವರವನ್ನು ಹುಡುಕಿ ಮದುವೆ ಮಾಡಿದ. ರಾಮೂನಿಗೆ ತನ್ನ ಒಬ್ಬ ಮಗಳನ್ನೇ ಧಾರೆಯೆರೆದುಕೊಟ್ಟ. ರಾಮೂನ ತಾಯಿಯ ಹೊಟ್ಟೆ ತಣ್ಣಗಾಯಿತು. ಮಗನ ಮತ್ತು ಸೊಗಳ ತಲೆಯ ಮೇಲೆ ಅಕ್ಷತೆ ಬಿದ್ದದ್ದು ನೋಡಿ ಅವಳು ಪ್ರಾಣಬಿಟ್ಟಳು. ರಾಮೂ ಗೃಹಸ್ಥ ಜೀವನವನ್ನು ಪ್ರವೇಶಿಸಿದ.

೨

ಹಲವು ಜನರ ಜೀವನವನ್ನು ನಾವು ತುಲನಾತ್ಮಕವಾಗಿ ವಿಮರ್ಶಿಸಿದಾಗ ಎಷ್ಟೋ ಸಾರಿ ನಮಗೆ "ದೈವ" ವೆಂಬುದೊಂದು ಇದೆ ಎಂಬ ಮಾತು ಅನುಭವಕ್ಕೆ ಬರುತ್ತದೆ. ರಾಮೂನ ಬಗ್ಗೆಯೂ ಅವನ ಆಪ್ತ ಜನರು ಇದೇ ಅನುಭವವನ್ನು ಪಡೆದರು.

ಮಗಳನ್ನು ಕೊಟ್ಟ ಸೋದರ ಮಾವ ನಿರುದ್ಯೋಗಿಯಾದ ಅಳಿಯನಿಗೆ ಒಂದು ವಿಮಾ ಕಂಪನಿಯ ಏಜನ್ಸಿ ಹಚ್ಚಿಕೊಟ್ಟ. ಈಗ ಕಳ್ಳಪೇಟೆಯಿಂದ ಜನರ ಕೈಯ್ಯಲ್ಲಿ ನಷ್ಟ ಸಂಗ್ರಹವಾಗಿದೆ. ಇದೇ ಹೊತ್ತಿನಲ್ಲಿ ಪ್ರಯತ್ನ ಮಾಡಿದರೆ ರಾಮೂ ಸಾಕಷ್ಟು ಹಣ ಗಳಿಸಬಹುದೆಂದು ಸೋದರಮಾವನ ಯೋಚನೆ. ಆದರೆ ದೈವಗೇಡಿ

ಸಮುದ್ರವನ್ನು ಹೊಕ್ಕರೂ ಮೊಣಕಾಲಮಟ್ಟ ಮಾತ್ರ ನೀರು ಬಂದಿತೆಂಬ ಗಾದೆಯಂತೆ ಮಾನವ ಹಣದ ಜೀವನವನ್ನು ತೋರಿಸಿದರೂ ರಾಮೂ ಬರಿಗೈಯಾಗಿದ್ದ. ಎರಡನೆಯ ಮಹಾಯುದ್ಧದ ಪರಿಣಾಮವಾಗಿ ಎಂತೆಂತಹ ಅನಾಮಧೇಯ ವ್ಯಕ್ತಿಗಳೂ ಸಿರಿವಂತರಾದರೂ ರಾಮೂ ಮಾತ್ರ ಇನ್ನೂ ಅನ್ನದ ಸಮಸ್ಯೆಯನ್ನು ಬಿಡಿಸಲಾರದೇ ತೊಳಲಾಡುತ್ತಿದ್ದ. ಮಹಾಯುದ್ಧ ಮುಗಿದರೂ ರಾಮೂನ ಅನ್ನದ ಯುದ್ಧ ಮುಗಿಯಲಿಲ್ಲ.

ಅವನ ಏಜನ್ಸಿ ಕುಂಟುತ್ತ ನಡೆದಿತ್ತು. ಕುಟುಂಬವು ಮಾತ್ರ ಬೆಳೆಯುತ್ತ ನಡೆದಿತ್ತು. ದೇಶದ ತುಂಬೆಲ್ಲ ನಿಯಂತ್ರಣ ಹಬ್ಬಿದ್ದರೂ ಅವನ ಪ್ರಜಾ ನಿರ್ಮಾಣ ಶಕ್ತಿಗೆ ಮಾತ್ರ ಯಾವ ನಿಯಂತ್ರಣವೂ ಇರಲಿಲ್ಲ. ಮನೆತುಂಬ ಮಕ್ಕಳಾದರೂ ಕೈತುಂಬ ಸಂಬಳ ಬರದ ಕಾರಣ ರಾಮೂನ ಅನಸ್ಥೆ ಸುಧಾಮನ ಅವಸ್ಥೆಗೆ ಬಂದಿತು.

ಸುಧಾಮನಂತೆ ರಾಮೂ ಕೂಡ ತನ್ನ ಮಿತ್ರರ ಸಹಾಯವನ್ನು ಯಾಚಿಸಲು ವಿಚಾರಿಸಹತ್ತಿದ. ಆಗ ಮೊದಲು ಅವನ ಕಣ್ಣು ಮುಂದೆ ನಿಂತದ್ದು ತಿಮ್ಮನ ಮೂರ್ತಿ. ತಿಮ್ಮನು ಈಗ ತಿಮ್ಮರಾಯನಾಗಿರುವನೆಂದು ರಾಮೂನಿಗೆ ಗೊತ್ತಿತ್ತು. ಆದರೆ ಇಲ್ಲಿಯ ವರೆಗೂ ಯಾವ ಯಾವನ್ನೋ ದೂರದ ಊರುಗಳಲ್ಲಿಯೇ ವಾಸವಾಗಿರುತ್ತಿದ್ದುದರಿಂದ ರಾಮೂನಿಗೆ ಅವನು ನಿಲುಕದ ಹಣ್ಣು ಆಗಿದ್ದ. ಹೀಗಿರುವಾಗ ಒಂದು ದಿನ ಒಬ್ಬ ಪರಿಚಯದವರ ಮುಖಾಂತರವಾಗಿ ರಾಮೂ ತಿಮ್ಮನ ಸಮಾಚಾರವನ್ನು ಅಕಸ್ಮಾತ್ತಾಗಿ ತಿಳಿದು ಹರುಷಗೊಂಡ. ತಿಮ್ಮ ಈಗ ಒಂದು ಸಮೀಪದ ಊರಿಗೇ ಬಂದಿದ್ದ.

ಮಧ್ಯಾಹ್ನಕ್ಕೆ ವರ್ಜ್ಯವಾಗುವ ಪ್ರಸಂಗ ಬಂದದ್ದನ್ನು ನೋಡಿ ಕಳವಳಗೊಂಡ ರಾಮೂ ತಿಮ್ಮರಾಯನ ಕಡೆಗೆ ಒಂದು ದಿನ ಹೊರಟ- ಶ್ರೀಕೃಷ್ಣನ ಮನೆಗೆ ಸುದಾಮನು ಹೊರಟಂತೆ.

ತಿಮ್ಮರಾಯನ ಊರ ಸಮೀಪಕ್ಕೆ ಬಸ್ಸು ಬಂದು, ಇನ್ನೂ ಊರು ನಾಲ್ಕು ಮೈಲು ದೂರವಿರುವಾಗಲೇ ಗಾಲಿಗೆ ತೂತು ಬಿದ್ದು ನಿಂತುಬಿಟ್ಟಿತು. ಉಳಿದವರು ಕೂಡ ರಾಮೂ ಕೆಳಗೆ ಇಳಿದು ಸುತ್ತಲೂ ನೋಡಿದ. ಹೊತ್ತು ಮುಳುಗುವದರಲ್ಲಿತ್ತು.

ರಾಮೂನಿಗೆ ಸ್ವಲ್ಪ ಅಧೈರ್ಯವಾಯಿತು. ತಾನು ಬರುವುದನ್ನು ನೊವಲೇ ಪತ್ರ ಬರೆದು ತಿಳಿಸಿರಲಿಲ್ಲ ಇನ್ನೂ ಊರು ತಲುಪುವದು ಯಾವಾಗೊ ಹೇಳಲು ಬರುವಂತಿರಲಿಲ್ಲ 'ರಾತ್ರಿ ಬಹಳವಾದರೆ ಹೇಗೆ? ಮನೆಯವರೆಲ್ಲ ಮಲಗಿರುತ್ತಾರೋ ಏನೋ! ಒಂದು ವೇಳೆ ಎಚ್ಚರಿದ್ದರೂ ತಿಮ್ಮ ಅಲ್ಲಲ್ಲ ತಿಮ್ಮರಾಯ ತನ್ನ ಗುರುತು ಹಿಡಿಯುವನೋ? ಅಥವಾ ಅವನು ಊರಲ್ಲಿಲ್ಲವೆನು ಮನೆಯವರು ಹೇಳಿದರೆ?' ಹೀಗೆ ಸಂಶಯ ಪಿಶಾಚಿಯಿಂದ ಬಾಧಿಸಲ್ಪಡುತ್ತಿದ್ದ ರಾಮೂ ನೊದಲೇ ಪತ್ರ ಬರೆಯದೇ ಇದ್ದುದು ಪ್ರಮಾದವಾಯಿತೆಂದುಕೊಂಡ.

ಇಷ್ಟರಲ್ಲಿ ಒಂದು ಕಾರು ಬಂದು ಅಲ್ಲಿ ನಿಂತಿತು. ಯಾರದೋ ಶ್ರೀಮಂತರದೆಂದು ತಿಳಿದು ಸುಮ್ಮನಿದ್ದ ರಾಮೂ ಆ ಕಾರಿನಲ್ಲಿ ಕುಳಿತ ವ್ಯಕ್ತಿಯೊಂದನ್ನು ನೋಡಿ ಆಶ್ಚರ್ಯಪಟ್ಟ.

ಸಂಶಯವನ್ನು ನಿವಾರಿಸಲು ಸಮೀಪಕ್ಕೆ ಹೋಗಿ ನೋಡಿದ. ಆ ವ್ಯಕ್ತಿಯೂ ಹುಳುಹುಳು ರಾಮೂವನ್ನೇ ನೋಡುತ್ತಿದ್ದ. ಕೊನೆಗೆ ರಾಮೂ ಧೈರ್ಯ ತಂದುಕೊಂಡು "ತಿಮ್ಮಣ್ಣಾ" ಎಂದ. ಆ ವ್ಯಕ್ತಿಯೂ ರಾಮೂವನ್ನು ಗುರುತಿಸುವಂತೆ "ರಾಮೂ ಏನು?" ಎಂದು ಕೇಳಿದ.

ರಾಮೂನಿಗೆ ಹೋದ ಜೀವ ಬಂದಂತಾಯಿತು. ಬಾಲ್ಯಸ್ನೇಹಿತರು ಬಹು ದಿನಗಳ ನಂತರ ಭೆಟ್ಟಿಯಾದರು. "ಈಗ ಎಲ್ಲಿ ಹೊರಟಿರುವಿ?" ತಿಮ್ಮರಾಯ ಕೇಳಿದ. "ನಿಮ್ಮ..... .....ನಿನ್ನ ಕಡೆಗೇ ಹೊರಟಿದ್ದೆ." ಅರಸುತ್ತಿರುವ ಬಳ್ಳಿ ಕಾಲಿಗೇ ತೊಡಕಿದಂತಾಯಿತು. ರಾಮೂ ತಿಮ್ಮರಾಯನನ್ನು ಏಕವಚನದಲ್ಲಿ ಸಂಬೋಧಿಸಬೇಕೋ ಬಹುವಚನದಲ್ಲಿ ಸಂಬೋಧಿಸಬೇಕೋ ಎಂಬುದನ್ನು ತಿಳಿಯದೇ ತಡವರಿಸುತ್ತಿದ್ದ. ಆವರೆ ತಿಮ್ಮರಾಯನ ಮನಸ್ಸಿನಲ್ಲಿ ಮಾತ್ರ ಇದಾವ ಹೊಯ್ದಾಟವೂ ಇರಲಿಲ್ಲ. ಇದೊಂದೇ ಸಣ್ಣ ಸಂಗತಿಯಿಂದ ಚಾಣಾಕ್ಷರಾದವರು ಅವರಿಬ್ಬರ ಸ್ಥಾನದಲ್ಲಿರುವ ಅಂತರವನ್ನು ಗುರುತಿಸಬಹುದಾಗಿತ್ತು.

ಅಲ್ಲಿ ಕಾರು ನಿಂತ ಕಾರಣವೆಂದರೆ ಅಕಸ್ಮಾತ್ತಾಗಿ ಪೆಟ್ರೋಲ್ ತೀರಿಹೋಗಿತ್ತು. ಅದನ್ನು ಅಲ್ಲಿ ನಿಂತ ಬಸ್ಸಿನಿಂದ ದೊರಕಿಸಲು ಸಾಧ್ಯವಿರುವುದೋ ಹೇಗೆ ಅಥವಾ ಕಾರಿನಲ್ಲಿದ್ದವರನ್ನೇ ಬಸ್ಸು ಊರಿಗೆ ಕರೆದೊಯ್ಯುವುದೋ ಹೇಗೆ ಎಂಬವನ್ನು ಡ್ರೈವ್ವರ ಇಳಿದು ವಿಚಾರಿಸುತ್ತಿದ್ದವನು ಪೆಟ್ರೋಲ್‌ಕ್ಯಾನು ಹಿಡಿದುಕೊಂಡು ಬಂದು ಕಾರಿನಲ್ಲಿ ಸುರಿದ. ಕಾರು ಮತ್ತೆ ಸರ್ರ್ ಎಂದು ಹೊರಟಿತು. ರಾಮೂ ಬಸ್ಸು ಬಿಟ್ಟು ಕಾರನ್ನು ಏರಿದ್ದ.

ರಾಮೂ ಕಾರಿನಲ್ಲಿ ಕಾಲಿಟ್ಟಾಗ ಒಳಗೆ ಒಬ್ಬ ಚಲುವಿ ಸಾಲಂಕೃತಳಾಗಿ ಕುಳಿತಿದ್ದಳು. ಅವಳ ಜೊತೆಗೆ ಒಂದು ಏದು ವರುಷದ ಹುಡುಗಿ ಇತ್ತು.

ರಾಮೂನಿಗೆ ಕಾರಿನಲ್ಲಿ ಕೂಡಲು ಸ್ವಲ್ಪ ಸಂಕೋಚವಾಯಿತು. ಅದನ್ನು ತಿಳಿದ ತಿಮ್ಮಣ್ಣ ಹೇಳಿದ. "ಇವಳು ನನ್ನ ಶ್ರೀಮತಿ— ವಿಲಾಸಿನಿ. ಈ ಹುಡುಗಿ ನನ್ನ ಮಗು— ಪದ್ಮಾ."

ರಾಮೂ "ನಮಸ್ಕಾರ" ಎಂದ.

"ವಿನೀ, ಇವನು ನನ್ನ ಬಾಲ್ಯದ ಸ್ನೇಹಿತ, ರಾಮೂ. ನೀನು ಮದುವೆಯಾದ ಹೊಸದರಲ್ಲಿ ಇವನನ್ನು ನೋಡಿದ ನೆನಪಿರಬಹುದು. ಒಳ್ಳೆ ಕವಿ..... ಈಗೇನು?" "ಈಗ ನಿಮಾ ಏಜಂಟ್ರು; ಅಲ್ಲದೆ ಒಂದು ಗಂಡು, ನಾಲ್ಕು ಹೆಣ್ಣುಮಕ್ಕಳ ತಂದೆ."

ರಾಮೂನ ಮಾತು ಕೇಳಿ ವಿಲಾಸಿನಿ ನಕ್ಕಳು. "ಅಂತೂ ಹತ್ತು ಹನ್ನೆರಡು ವರುಷದ ಮೇಲಾದರೂ ಗೆಳೆಯನ ನೆನಪಾಯಿತು ಎಂದನೆಲೆ ಇನ್ನೂ ನನ್ನ ಭಾಗ್ಯ ಒಳ್ಳೆಯದಿದೆ." ತಿಮ್ಮಣ್ಣ ಮಾತು

ಸುರು ಮಾಡಿದ ಮತ್ತೆ. "ನೀನಾದರೂ ಸನ್ನಿಧಿಯಲ್ಲಿ ಎಲ್ಲಿದ್ದಿ? ಅಲ್ಲದೆ ನೀನು ಭಾಗ್ಯಶಾಲಿಯೆಂದೇ ನನ್ನ ಕಡೆಗೆ ಓಡಿ ಬಂದಿದ್ದೇನೆ." "ಅಂದರೆ?" ತಿಮ್ಮರಾಯ ಅರ್ಥವಾಗದೇ ಕೇಳಿದ. "ಕೃಷ್ಣನ ಮನೆಗೆ ಸುಧಾಮನು ಬಂದಂತೆ—" ಇಷ್ಟು ಹೇಳಬೇಕಾದರೆ ರಾಮೂನ ಮೈ ಬೆವತುಹೋಗಿತ್ತು. ಆದರೆ ತಿಮ್ಮಣ್ಣನಿಗೆ ರಾಮೂನ ಮಾತಿನ ಅರ್ಥ ಹೊಳೆದಂತೆ ತೋರಲಿಲ್ಲ.

ತಿಮ್ಮಣ್ಣ ಹೇಳಿದ "ರಾಮೂ ನೀನು ಮೊದಲಿನ ಮಾತಿನ ಚುರುಕನ್ನು ಇನ್ನೂ ಕಾಯ್ದುಕೊಂಡಿರುವಿ ನೋಡು. ನಿನ್ನ ಅಲಂಕಾರಿಕ ಮಾತುಗಳೇ ನೀನು ಸಾಹಿತಿಯಾಗಲು ಯೋಗ್ಯ ಎಂದು ಸಾರುತ್ತವೆ."

ತಿಮ್ಮಣ್ಣನ ಮಾತು ಕೇಳಿ ರಾಮೂನಿಗೆ ಚೇಳು ಕುಟುಕಿದಂತಾಯಿತು. ಸಿರಿವಂತಿಕೆಯ ಸುಪ್ಪತ್ತಿಗೆಯ ಮೇಲೆ ಉರುಳಾಡುತ್ತಿರುವ ತಿಮ್ಮಣ್ಣನಿಗೆ ತನ್ನ ಬಡತನದ ಅರಿವಾಗುವುದೇ ಸಾಧ್ಯವಿಲ್ಲ, ಎಂದು ತಿಳಿದುಕೊಂಡ ರಾಮೂ ಆದರೂ ಖಿನ್ನತೆಯನ್ನು ವ್ಯಕ್ತಪಡಿಸುವುದು ಸರಿಯೆನಿಸದೆಂದು ಬರೀ ಒಂದು ಹುಸಿ ನಗೆಯನ್ನು ಮಾತ್ರ ನಕ್ಕ. ಆಮೇಲೆ ಹೇಳಿದ, "ಮದುವೆ ಮಾಡಿಕೊಂಡು ಹೋದವನು ತಿರುಗಿ ಊರಿಗೆ ನೀನಾದರೂ ಒಮ್ಮೆ ಬರಬಾರದೇನು?"

"ನನ್ನ ಕೆಲಸದ ಒತ್ತಡನನ್ನೇನು ಹೇಳಲಿ ರಾಮೂ. ಮುಂಜಾನೆಯಿಂದ ಸಂಜೆಯವರೆಗೆ ದುಡಿದರೂ ಮತ್ತೂ ಏನಾದರೊಂದು ಉಳಿದೇ ಉಳಿದಿರುತ್ತದೆ ಅಲ್ಲದೇ ಕ್ಯಾಂಪು, ಟೂರುಗಳು ಬೇರೆ ಇರುತ್ತವೆ. ಹೀಗಾಗಿ ಈ ಹಾಳು ಸರ್ವೀಸಿನಲ್ಲಿ ಬಿತ್ತುವೇ ಆಗುವುದಿಲ್ಲ....."

ಕಾರು ಮನೆಯ ಬಾಗಿಲಿಗೆ ಬಂದಿತ್ತು. ಬಾಗಿಲಿಗೆ ಕಟ್ಟಿದ ತೋಳದಂಥ ನಾಯಿಯೊಂದು ಒದರುತ್ತಲಿತ್ತು.

ಮನೆಯ ಗೇಟನಲ್ಲಿ ಕಾಲಿಟ್ಟಾಗ ತಾನೊಂದು ರಾಜಭವನವನ್ನು ಪ್ರವೇಶಿಸುತ್ತಿರುವಂತೆ ಭಾಸವಾಯಿತು ರಾಮೂನಿಗೆ.

ಮನೆಯ ಮುಂದೆ ಅಂದವಾದ ಕೈದೋಟವಿತ್ತು. ಬಾಗಿಲಿಗೆ ಲತಾವಿಂಟಸವಿತ್ತು. ಮನೆ ಒಂದು ದೊಡ್ಡ ಬಂಗಲೆಯಾಗಿತ್ತು. ಉಳಿದ ಬಂಗಲೆಗಳನ್ನು ಬಿಟ್ಟು ಸ್ವತಂತ್ರವಾಗಿತ್ತು. ಆಧುನಿಕ ಅನುಕೂಲತೆಗಳೆಲ್ಲ ಅದಕ್ಕಿದ್ದವು.

ಗೇಟಿನ ಹತ್ತಿರ ತಿಮ್ಮಣ್ಣನಿಗಾಗಿಯೇ ಕಾದು ನಿಂತ ಇಬ್ಬರು ಅಪರಿಚಿತರು ತಿಮ್ಮಣ್ಣನಿಗೆ ಬಾಗಿ ನಮಸ್ಕರಿಸಿದರು. ತಿಮ್ಮಣ್ಣ ಮಾತ್ರ ತನ್ನ ಗೋಣನ್ನು ಸ್ವಲ್ಪ ಓರೆ ಮಾಡಿ ಹಾಗೆಯೆ ಮುಂದೆ ನಡೆದುಬಿಟ್ಟ.

ಮನೆಯ ಒಳಭಾಗದಲ್ಲಿ ಸುಂದರವಾಗಿ ಅಲಂಕರಿಸಲ್ಪಟ್ಟಿತ್ತು. ಆ ಅಲಂಕಾರದಲ್ಲಿ ಕೂಡ ಪಾಶ್ಚಾತ್ಯ ಸಂಸ್ಕೃತಿಯ ಅಭಿರುಚಿಯೇ ವ್ಯಕ್ತವಾಗುತ್ತಿತ್ತು.

ಎಲ್ಲರೂ ಒಳಗೆ ಪ್ರವೇಶಿಸುವಷ್ಟರಲ್ಲಿ ವಿದ್ಯುದ್ದೀಪಗಳು ಝಗ್ಗನೇ ಬೆಳಗಿದುವು. ಉಪಹಾರವು ಸಿದ್ಧವಾಗಿತ್ತು.

ನಡುಮನೆಯಲ್ಲಿದ್ದ ದುಂಡು ಟೇಬಲಿನ ಸುತ್ತಲೂ ಕುಳಿತು ಚಹ ಕುಡಿಯುವಷ್ಟರಲ್ಲಿ ಬಾಬು— ತಿಮ್ಮಣ್ಣನ ಮೋಟರ ಡ್ರೈವರ್— ಮೂರು ಬುಟ್ಟಿಗಳನ್ನು ಹೊರಿಸಿಕೊಂಡು ಒಂದು ಒಳಗೆ ಇಡಿಸಿದ. ಯಾರೋ ಕಾಣಿಕೆ ಕಳಿಸಿರುವರೆಂದೂ 'ಒಂದು ಮಾವಿನಹಣ್ಣಿನಿಂದ ತುಂಬಿದೆ ಇನ್ನೊಂದು ದ್ರಾಕ್ಷಿ ಅಂಜೀರುಗಳಿಂದ ತುಂಬಿದೆ, ಮೂರನೆಯದು ಪಲ್ಲೆಯಿಂದ ತುಂಬಿದೆ' ಎಂದೂ ವಿವರಣೆಯನ್ನು ಕೊಟ್ಟು ಹೊರಟ.

ಅಷ್ಟರಲ್ಲಿ ನಿಲಾಸಿನಿ ಕೂಗಿದಳು "ಬಾಬೂ" "ಏನು ಬಾಯಿ-ಸಾಹೇಬ?" ಬಾಬು ಕೇಳಿದ. "ನೀನೂ ಚಹಾ ತೆಗೆದುಕೊಂಡು ಹೋಗು, ಒಳಗೆ ಹೋಗಿ."

ಬಾಬೂ ಒಳಗೆ ಹೋದ. ರಾಮೂ ತಿಮ್ಮಣ್ಣ ಮಾತನಾಡುತ್ತ ಹೊರಗೆ ಬಂದರು.

ರಾತ್ರಿ ಊಟಕ್ಕೆ ಕುಳಿತಾಗ ಟೇಬಲ್ಲಿನ ಮೇಲೆ ಬೆಳ್ಳಿಯ ತಾಟು. ಗಳಿದ್ದವು. ಕುಡಿಯಲು ಬೆಳ್ಳಿಯ ತಂಬಿಗೆಯಲ್ಲಿ ನೀರು ಇಟ್ಟಿದ್ದರು. ಅನ್ನಕ್ಕೆ ಸುವಾಸನೆಯಿತ್ತು. ನೀರು ಪರಿಮಳಯುಕ್ತವಾಗಿ ತಂಪಾಗಿತ್ತು. ಆ ಊಟವು ರಾಮೂನಿಗೆ ಮೇಜವಾನಿಯಂತೆ ಅನಿಸಿತು.

ತಾಂಬೂಲವನ್ನು ವೀಳ್ಯುತ್ತ ಗೆಳೆಯರಿಬ್ಬರೂ ಕೈದೋಟದಲ್ಲಿ ಬಂದು ಕುಳಿತರು. ವಿಲಾಸಿನಿಯೂ ಅವರನ್ನು ಕೂಡಿಕೊಂಡಳು. ಮೂವರೂ ಎಷ್ಟೋ ಹೊತ್ತು ಸುಖಸಂಕಥಾ ವಿನೋದದಲ್ಲಿ ಕಾಲ ಕಳೆದರು.

ವಿಲಾಸಿನಿಯು ತಾನು ಬರೀ ವಿಲಾಸಿನಿಯಷ್ಟೇ ಅಲ್ಲದೆ ವಿನೋದಿನಿಯೂ ವಾದ ವಿವಾದ ಚತುರಳೂ ಆಗಿರುವಳೆಂಬದನ್ನು ರಾಮೂನಿಗೆ ಮನಗಾಣಿಸಿಕೊಟ್ಟಳು. ಇಂತಹ ಸುಶಿಕ್ಷಿತ ಸುಂದರ ಪತ್ನಿಯನ್ನು ಪಡೆದ ತಿಮ್ಮಣ್ಣನ ಭಾಗ್ಯವನ್ನು ಕಂಡು ರಾಮೂ ಕ್ಷಣಹೊತ್ತು ಅಸೂಯೆಪಟ್ಟ. ಆದರೆ ಈ ಅಸೂಯೆಯು ಇಷ್ಟರ ಮಟ್ಟಿಗೆ ಮಾತ್ರವಿರದೇ ತಿಮ್ಮಣ್ಣನ ಇಡಿ ಭಾಗ್ಯದ ಬಗ್ಗೆಯೆ ಇದೆ ಎಂಬುದು ರಾಮೂನಿಗೆ ತಿಳಿಯಲಿಲ್ಲ

ನೋಟರ ಪ್ರವಾಸದಿಂದ ದಣಿದ ರಾಮೂನಿಗೆ, ಮಲ್ಲಿಗೆಯ ಪರಿಮಳ ಸೂಸುವ ಆ ವಸಂತದ ತಂಗಾಳಿ ತೂಕಡಿಕೆಯನ್ನು ತಂದಿತು. ರೇಡಿಯೋ ಸಂಗೀತ ಜೋಗುಳವನ್ನು ಹಾಡಿತು.

ರಾಮೂ ತೂಕಡಿಸುತ್ತಿರುವಾಗಲೇ ಅಡಿಗೆಯವ ಬೇರೆ ಬೇರೆ ತಟ್ಟೆಗಳಲ್ಲಿ ಇಮ್ಮಾವು, ದ್ರಾಕ್ಷಾಫಲ, ಅಂಜೂರಿಗಳನ್ನು ತಂದು ಇರಿಸಿದ. ಅವುಗಳನ್ನು ತಿಂದು ತೇಗುವಷ್ಟರಲ್ಲಿ ಕೇಸರೀ ಹಾಲು ಬಂದವು.

ಹಾಲು ಕುಡಿದು ರಾಮೂ ತನಗಾಗಿ ಸೊತ್ತುಪಡಿಸಿದ ಕೋಣೆಗೆ ನುಲಗಲು ಹೋದ.

ಕೋಣೆಯ ತುಂಬ ಊದಬತ್ತಿಯ ವಾಸನೆ ಇಡುಗಿತ್ತು. ಸ್ಪ್ರಿಂಗಿನ ಮಂಚದ ಮೇಲೆ ಮೆತ್ತನ್ನ ಗಾದೆ ಹಾಸಲ್ಪಟ್ಟಿತ್ತು.

ತಂಗಾಳಿಗೆ ಮೈಯೊಡ್ಡಿ ರಾಮೂ ಹಾಯಾಗಿ ಒರಗಿರಲು ನಿದ್ರಾದೇವಿಯ ಮೆಲ್ಲನೇ ಬಂದು ರಾಮೂನ ಕಣ್ಣುಗಳನ್ನು ಮುಚ್ಚಿದಳು.

ರಾಮೂನಿಗೆ ಎಚ್ಚರವಾದಾಗ ಗಡಿಯಾರವೊಂದು ನಾಲ್ಕು ಕೊಡೆದದ್ದು ಕೇಳಿತು.

ಚೆನ್ನಾಗಿ ನಿದ್ರೆಯಾದದ್ದರಿಂದ ಮೈ ಹಗುರಾಗಿತ್ತು. 'ಇಷ್ಟು ಬೇಗನೇ ಎದ್ದು ಏನು ಮಾಡುವುದು' ಎಂದು ರಾಮೂ ಹಾಗೇ ನಿಚಾರಿಸುತ್ತ ಹಾಸಿಗೆಯ ಮೇಲೆ ಬಿದ್ದುಕೊಂಡ.

ಅವನಿಗೆ ಬಂದ ಮೊಟ್ಟಮೊದಲನೆಯ ವಿಚಾರವೆಂದರೆ ತನ್ನ ಮನೆಯದು.

ನಾನೇನೋ ಇಲ್ಲಿ ಸುಖವಾಗಿ ಮಲಗಿದ್ದೇನೆ. ಆದರೆ ಆಕೆ ಇಂದಿನ ದಿನವನ್ನು ಹೇಗೆ ಕಳೆದಿರೋ? ಹುಡುಗರು ಎಷ್ಟು ಅತ್ತಿರುವರೋ? ನಾನು ಇನ್ನೂ ನಾಲ್ಕು ದಿನ ಉಳಿಯುವ ಪ್ರಸಂಗ ಬಂದರೆ ಹೇಗೆ?"

ಮೊನೆಯ ವಿಚಾರದಿಂದ ರಾಮೂ ಸ್ವಲ್ಪ ಉದ್ವಿಗ್ನನಾದ ಅವನು ಬರುವಾಗ ಅವನ ಮನೆಯಲ್ಲಿ ಕಾಳುಕಡಿಗಳ ಸಂಗ್ರಹ ಒಂದೆರಡು ದಿನಗಳ ಮಟ್ಟಿಗೆ ಸಾಲುವಷ್ಟು ಮಾತ್ರ ಇತ್ತು. ತಾನು ಖರ್ಚಿಗೆಂದು ರೂಪಾಯಿ ಕೊಟ್ಟು ಬರುವ ಬದಲು, ಅವನ ಹೆಂಡತಿಯೇ ಕಡತಂದು ರಾಮೂನಿಗೆ ಮೋಟರ ಖರ್ಚಿಗೆ ಹಣ ಕೊಟ್ಟಿದ್ದಳು. ಅಂದ ಮೇಲೆ ತಾನು ಇಲ್ಲಿ ಸ್ವಲ್ಪ ದಿನ ಹೆಚ್ಚಿಗೆ ನಿಲ್ಲುವ ಪ್ರಸಂಗ ಬಂದರೆ ಹೇಗೆ?

ತನ್ನ ಈ ದಾರಿದ್ರ್ಯಕ್ಕಾಗಿ ರಾಮೂ ತನ್ನನ್ನೇ ಹಳಿದುಕೊಂಡ. ಅನಂತರ ತನ್ನ ದೈವವೇ ಹೀಗಿದ್ದರೆ ಯಾರೇನು ಮಾತುವಮು ಎಂದು ಸಮಾಧಾನ ಹೆಚ್ಚಿಕೊಂಡ. ಹೀಗೆ ದೈವವನ್ನು ಅವಲಂಬಿಸಲು ತಿಮ್ಮರಾಯನ ಉದಾಹರಣೆ ರಾಮೂನ ಕಣ್ಣಮುಂದಿತ್ತು.

'ನನ್ನ ಜೀವನಕ್ಕೂ ತಿಮ್ಮನ ಜೀವನಕ್ಕೂ ಎಷ್ಟು ಅಂತರ?' ಎಂದುಕೊಂಡ ರಾಮೂ.

ಹೀಗೆ ಎಂದುಕೊಳ್ಳುವುದು ತೀರ ಸ್ವಾಭಾವಿಕವಾಗಿತ್ತು. ಯಾಕಂದರೆ ರಾಮೂನ ವೈವಾಹಿಕ ಜೀವನಕ್ಕೂ ತಿಮ್ಮನ ವೈವಾಹಿಕ ಜೀವನಕ್ಕೂ ಭೂಮ್ಯಾಕಾಶಗಳಷ್ಟು ಅಂತರವಿತ್ತು. ಈ ಅಂತರ ಉಂಟಾದದ್ದು ಆರ್ಥಿಕ ಪರಿಸ್ಥಿತಿಯಿಂದ

ರಾಮೂ ಈಗ ಐದು ಮಕ್ಕಳ ತಂದೆ. ಅಲ್ಲದೆ ತಾನೂ ತನ್ನ ಹೆಂಡತಿ. ಹೀಗೆ ಏಳು ಜನರ ಕುಟುಂಬವನ್ನು ಅವನು ತನಗೆ ಬರುವ ಅಲ್ಪ ಹಣದಲ್ಲಿ ಸಾಗಿಸಬೇಕಾಗಿತ್ತು. ಮನೆಯಲ್ಲಿ ಒಂದು ಇದ್ದರೆ ಇನ್ನೊಂದು ಇರುತ್ತಿರಲಿಲ್ಲ. ಚಟ್ನಿ ಮಾಡಿದ ದಿನ ಪಲ್ಲೆ ಇಲ್ಲ; ಪಲ್ಲೆ ಮಾಡಿದರೆ ಹುಳಿ ಇಲ್ಲ. ಅನ್ನಕ್ಕೆ ನೀರು ಮಜ್ಜಿಗೆ ಸಿಕ್ಕರೆ ಸಿಕ್ಕೀತು, ಇಲ್ಲದಿದ್ದರೆ ಇಲ್ಲ. ತುಪ್ಪವಂತೂ ಹಬ್ಬಕ್ಕೊಮ್ಮೆ ಹಣಿಕಿಹಾಕುತ್ತಿತ್ತು. ತಾನು ಊಟಕ್ಕೆ ಕುಳಿತರೆ ಸುತ್ತಲೂ ಹಡುಗರೆಲ್ಲ ತನ್ನ ಕೂಡ ಕೂತುತ್ತಿದ್ದರು. ಆ ಮಕ್ಕಳ ಹೊಟ್ಟೆ ತುಂಬಿದ ನಂತರವೇ ತಾನು

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನನಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.
ಅರವಿಂದ ಪಬ್ಲಿಸಿಟಿ ಟ್ರಾಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಊಟಮಾಡುವುದು. ಒಂದೊಂದು ಸಾರೆ ರಾಮೂನ ಹೆಂಡತಿ ಬರೀ ನೀರು ಕುಡಿದು ಇರುವ ಪ್ರಸಂಗ ಬರುತ್ತಿತ್ತು. ಆಗ ಕೂಡ ಅವಳು ತಾನು ಉಂಡಿರುವೆನೆಂದೇ ಹೇಳುತ್ತಿದ್ದಳು. ಈ ಸಂಗತಿ ಮೊದ ಮೊದಲು ಕೆಲವು ದಿನ ರಾಮೂನ ಲಕ್ಷಕ್ಕೆ ಬಂದಿರಲಿಲ್ಲ. ಒಂದುದಿನ ಅದು ತಿಳಿದಾಗ ಹೆಂಡತಿಗೆ ಬುದ್ಧಿಮಾತು ಹೇಳಿದ. ತನಗೂ ಮಕ್ಕಳಿಗೂ ಸ್ವಲ್ಪ ಕಡಿಮೆ ಹಾಕು ಎಂದು ಅವಳಿಗೆ ಅಪ್ಪಣೆ ಮಾಡಿದ. ಆಗ ಆಕೆ ಹೇಳಿದಳು. "ನಿಮಗೂ ಹುಡುಗರಿಗೂ ಹೊಟ್ಟೆಹೊಟ್ಟೆ ಹಾಕಿ ನಾನು ಊಟಕ್ಕೆ ಕುಳಿತರೆ ನನ್ನ ಗಂಟಲಲ್ಲಿ ತುತ್ತೇ ಇಳಿಯುವುದಿಲ್ಲ ನೀವೆಲ್ಲ ಹೊಟ್ಟೆತುಂಬ ಉಂಡು ತೇಗಿದಾಗ ನಾನು ಬರೀ ನೀರು ಕುಡಿದರೂ ನನ್ನ ಹೊಟ್ಟೆ ತುಂಬುತ್ತದೆ." ತನ್ನ ಹೆಂಡತಿಯ ಮಾತು ಕೇಳಿ ರಾಮೂನಿಗೆ ಹರ್ಷ, ದುಃಖಗಳೆರಡೂ ಒತ್ತರಿಸಿ ಬಂದಿದ್ದವು. ಮುತ್ತಿನಂಥ ಎರಡು ಕಣ್ಣೀರ ಹನಿಗಳು ನೆಲಕ್ಕೆ ಉರುಳಿದ್ದವು.

ಹೊಟ್ಟೆಯ ಪಾಡು ಹೀಗಿರುವಾಗ ಬಟ್ಟೆ ಬರೆಗಳ ಬಗ್ಗೆ ಹೇಳುವುದೇ ಬೇಡ. ಹುಡುಗರೆಂತೂ ಹರಕು ಅಂಗಿ ಚಣ್ಣಗಳನ್ನೇ ಹಾಕಿಕೊಂಡು ತಿರುಗುತ್ತಿದ್ದರು. ಉಟ್ಟ ಸೀರೆ ಹರಿದು ಹೆಂಡತಿಯು ಮನೆ ಬಿಟ್ಟು ಹೊರಗೆ ಹೋಗುವುದೂ ಕಷ್ಟವಾದಾಗ ಅವಳಿಗೆ ಎರಡು ಸೀರೆ ತಂದು ಕೊಡಬೇಕಾದರೆ ಒಂದು ಅಶ್ವಮೇಧ ಯಜ್ಞಮಾಡಿದಂತಾಗುತ್ತಿತ್ತು.

ತನ್ನ ಈ ಜೀವನವನ್ನು — ಹೋರಾಟದ ಜೀವನವನ್ನು — ತಿಮ್ಮನ ವಿಲಾಸ ಜೀವನಕ್ಕೆ ಹೋಲಿಸಿ ನೋಡಿದಾಗೆಲ್ಲ ರಾಮೂನಿಗೆ ದೈವವೊಂದೆ ಸಮಾಧಾನಕರವಾಗಿ ಉತ್ತರವನ್ನು ಕೊಡುತ್ತಿತ್ತು. ತಾನು ವಿದ್ಯೆಯಲ್ಲಿ ಚಾರಿತ್ರ್ಯದಲ್ಲಿ ತಿಮ್ಮನಿಗಿಂತ ಮೇಲಾಗಿದ್ದರೂ ತನ್ನ ಜೀವನಕ್ಕೂ ಅವನ ಜೀವನಕ್ಕೂ ನೆಲಬಾನಗಳಷ್ಟು ಅಂತರವೇಕೆ? ಎಂದು ತನ್ನನ್ನೇ ತಾನು ಕೇಳಿಕೊಂಡಾಗ "ಇದು ನನ್ನ ದೈವ" "ಅದು ಅವನ ದೈವ" ಎಂದೇ ಉತ್ತರ ಬರುತ್ತಿತ್ತು. ಮತ್ತೆ ತಿಮ್ಮನ ದೈವವನ್ನು ನೋಡಿ ರಾಮೂನಲ್ಲಿ ಒಮ್ಮೆ ತರವ ಅಸೂಯೆ

ತಲೆದೋರುತ್ತಿತ್ತು. ಆಗ ತನ್ನನ್ನೂ ತನ್ನ ದುರ್ದೈವವನ್ನೂ ಹಳಿದು ರಾಮೂ ಆ ಅಸೂಯೆಯನ್ನು ಅಟ್ಟಿಹಾಕುತ್ತಿದ್ದ.

ಗಂಟೆ ಐದಾದದ್ದನ್ನು ಗಡಿಯಾರವು ಧ್ವನಿಗೈದು ಸೂಚಿಸಿತು. ಮುಂಜಾವಿನ ತಂಗಾಳಿ ಬೀಡಲಾರಂಭಿಸಿತು. ರಾಮೂನಿಗೆ ತಾನು ಇನ್ನೂ ನಾಲ್ಕು ದಿನ ನಿಲ್ಲುವ ಪ್ರಸಂಗ ಬಂದರೆ ಹೇಗೆ ಎಂಬ ಪ್ರಶ್ನೆ ಕಾಡತೊಡಗಿತು. ಕೊನೆಗೆ ತಿಮ್ಮನ ಕಡೆಯಿಂದ ಸ್ವಲ್ಪ ಹಣ ಕಡ ಬೇಡಿ ನಾಳಿಗೆ ಊರಿಗೆ ಕಳಿಸಿಬಿಡೋಣ ಎಂದು ವಿಚಾರಿಸಿದ. ಆದರೆ ಹೇಗೆ ಬೇಡುವದು ? ತನ್ನ ಸ್ಥಿತಿಯನ್ನು ತಿಮ್ಮನ ಮುಂದೆ ಹೇಳಲು ಅವನಿಗೆ ಬಹಳ ಸಂಕೋಚವಾಗಿತ್ತು. ತಿಮ್ಮನ ಭೆಟ್ಟಿಯಾದ ಕೂಡಲೇ ಸುದಾಮನ ಉದಾಹರಣೆಯಿಂದ ತನ್ನ ಸ್ಥಿತಿಯನ್ನು ಸೂಚಿಸಲು ಪ್ರಯತ್ನಿಸಿದ್ದ. ಆದರೆ ಅದು ನಿಷ್ಫಲವಾದದ್ದು ನೋಡಿ ಅವನಿಗೆ ಈಗ ಮತ್ತಷ್ಟು ಸಂಕೋಚಕ್ಕೆ ಆಸ್ಪದವಾಗಿತ್ತು. ಆದರೆ ಸಂಕೋಚ ಸಟ್ಟುಕೊಂಡು ಕುಳಿತರೆ ಅಲ್ಲಿ ಹೆಂಡರು ಮಕ್ಕಳು ಉಪವಾಸ ಬೀಳುತ್ತಿದ್ದರು. ಆ ಚಿತ್ರ ಕಣ್ಣಮುಂದೆ ಬಂದು ನಿಲ್ಲಲು ಅವನ ಹೊಟ್ಟೆಯಲ್ಲಿ ವಿಲಕ್ಷಣ ಸಂಕಟವಾಯಿತು. ಆಗ ಸಂಕೋಚ ಬಿಟ್ಟು ನಾಳೆ ಹಣ ಕೇಳಿಯೇ ತೀರಬೇಕೆಂದು ನಿರ್ಧರಿಸಿ ತನ್ನ ದೈವವನ್ನು ಮತ್ತೆ ಹಳಿದುಕೊಳ್ಳಲಾರಂಭಿಸಿದ. ಇಷ್ಟರಲ್ಲಿ ಬೆಳಗು ಮುಂಜಾವಿನ ಸಕ್ಕರೆಯ ನಿದ್ರೆ ಅವನನ್ನು ತನ್ನ ವಶಕ್ಕೆ ತೆಗೆದುಕೊಂಡದ್ದರಿಂದ ಆ ವಿಚಾರ ಚಕ್ರ ಅಲ್ಲಿಗೇ ನಿಂತಿತು. ರಾಮೂ ಮತ್ತೆ ಆ ಸ್ವಪ್ನಲೋಕದ ಮಂಚದಲ್ಲಿ ಸಿರಿವಂತಿಕೆಯ ಕನಸು ಕಾಣಹತ್ತಿದ.

೪

ರಾಮೂನಿಗೆ ಎಚ್ಚರಾದಾಗ ಯಾರೊ ಬಾಗಿಲು ತಟ್ಟುತ್ತಿದ್ದರು ರಾಮೂ ಬಾಗಿಲು ತೆಗೆದಾಗ ತಿಮ್ಮಣ್ಣ ಎದುರಿಗೆ ನಿಂತಿದ್ದ. "ತಡವಾಯಿತೇ ?" ರಾಮೂ ಪ್ರಮಾದವಾದವರಂತೆ ಕೇಳಿದ. "ಏನಿಲ್ಲ. ರಾತ್ರಿ ಬೇಗ ನಿದ್ದೆ ಬರಲಿಲ್ಲವೇನೋ ?" ತಿಮ್ಮಣ್ಣ ಕೇಳಿದ.

"ಛೇ, ಛೇ ನಿದ್ರೆ ಬಹಳ ಜೋರಾಗಿ ಹತ್ತಿತ್ತೆಂದೇ ಇಷ್ಟು ಹೊತ್ತಾಯಿತು."

"ಪ್ರಾತರ್ವಿಧಿ ತೀರಿಸಿದ ನಂತರ ಚಹ ಬೇಕೋ ಅಥವಾ ಚಹ ಕುಡಿದೇ ಗಾಡಿ ಮುಂದೆ ಸಾಗುವದೋ ?"

"ಮೊದಲು ಪ್ರಾತರ್ವಿಧಿ; ನಂತರ ಚಹದ ವಿಧಿ."

"ಹಾಗೇ ಆಗಲಿ."

ರಾಮೂ ಗಡಿಬಿಡಿಯಿಂದ ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಬಂದಾಗ ಉಪಹಾರ ಸಿದ್ಧವಾಗಿತ್ತು:

ಉಪಹಾರಕ್ಕೆ ಕುಳಿತಾಗ ತಾನು ಚಹ ಕುಡಿಯಲು ಕುಳಿತಿರುವೆನೋ ಊಟ ಮಾಡಲು ಕುಳಿತಿರುವೆನೋ ತಿಳಿಯಲೇ ಇಲ್ಲ ರಾಮೂನಿಗೆ.

ಉಪಹಾರ ಮುಗಿದು ಧೂಮ್ರಪಾನ ಮಾಡುತ್ತ ಕುಳಿತಾಗ ರಾಮೂನಿಗೆ ರಾತ್ರಿಯ ತನ್ನ ನಿರ್ಧಾರ ನೆನಪಾಗಿ ಮೆಲ್ಲನೆ ಮಾತು ತೆಗೆದು ತಾನು ಬಂದ ಕಾರಣವನ್ನೂ ತನ್ನ ಸ್ಥಿತಿಯನ್ನೂ ತಿಮ್ಮಣ್ಣನಿಗೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ | ನೀಲ | ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳಿಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ | ಜೀವಿನಿ | ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ

ಅಜೀರ್ಣ ವಿಕಾರಗಳಿಗೆ | ಪಂಚವಟಿ | ರಾಮಬಾಣ

ಸದ್ವೈದ್ಯ ಶಾಲೆ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ.

ತಿಳಿಸಿದ ಮತ್ತು ತನಗೆ ಸ್ವಲ್ಪ ಬಿಝಿನೆಸ್ ಮಾಡಿಸಿಕೊಟ್ಟರೆ ಎಷ್ಟೋ ಉಪಕಾರ ಮಾಡಿದಂತಾಗುವದೆಂದು ಹೇಳಿದ.

ತಿಮ್ಮಣ್ಣ ಸ್ವಲ್ಪ ವಿಚಾರಿಸಿ ತನಗೆ ಶಕ್ಯವಿದ್ದಷ್ಟು ಬಿಝಿನೆಸ್ ಮಾಡಿಸಿಕೊಡುತ್ತೇನೆಂದು ಹೇಳಿ ನಂತರ ರಾಮುವೂ ಸ್ವಲ್ಪು ಶ್ರಮ ವಹಿಸಲೇಬೇಕಾಗುತ್ತದೆಂದು ಸೂಚಿಸಿದ. ರಾಮೂ ಕೂಡ ಅದಕ್ಕೆ ಒಪ್ಪಿಕೊಂಡು ತಿಮ್ಮನ ಸೂಚನೆಯ ಪ್ರಕಾರ ನಡೆಯಲು ತಾನು ಸಿದ್ಧನಿರುವೆನೆಂದು ಹೇಳಿದ.

ಇಷ್ಟರಲ್ಲಿ ಜಳಕಕ್ಕೆ ಕರೆ ಬಂದಿತು ಅಲ್ಲದೇ ಯಾರಾರೋ ತಿಮ್ಮರಾಯರನ್ನು ಕಾಣಲು ಬಂದಿದ್ದಾರೆ ಎಂದು ಸೂಚನೆ ಬಂದಿತು. ಆಗ ರಾಮೂ ತಡವರಿಸುತ್ತ "ನನಗೆ ಈಗ ಸ್ವಲ್ಪು ರೂಪಾಯಿ ಬೇಕಿತ್ತು ತಿಮ್ಮಣ್ಣಾ" ಎಂದ. ಅದಕ್ಕೆ ತಿಮ್ಮಣ್ಣನು "ಆಕಡೆಗೆ ಹೇಳ ಹೋಗಿರುತ್ತೇನೆ. ನಿನಗೆ ಈಗ ಎಷ್ಟು ಅಗತ್ಯವಿದೆಯೋ ಅಷ್ಟು ತೆಗೆದುಕೊಳ್ಳು ಎಂದು ನಡೆದ.

ರಾಮೂ ಜಳಕಕ್ಕೆ ಹೋದ.

ಮಧ್ಯಾಹ್ನದ ಊಟವು ಮೇಜಾನಿಯೇ ಆಗಿತ್ತು. ವಿಲಾಸಿನಿ ಆಗ್ರಹ ಮಾಡಿ ಹೆಚ್ಚು ಬಡಿಸಿದಳು. ಹೊಟ್ಟೆ ಭಾರವಾಗುವಂತೆ ಉಂಡ ರಾಮೂನಿಗೆ ಊಟವಾದಷ್ಟೇ ತಡ ಕಣ್ಣುಗಳು ಮುಚ್ಚಲಾರಂಭಿಸಿದವು.

ರಾಮೂ ಮಧ್ಯಾಹ್ನದ ನಿದ್ರೆಯಿಂದೆದ್ದಾಗ ಇಳಿಹೊತ್ತಾಗಿತ್ತು; ಮುಖಮಾರ್ಜನ ಮಾಡಿಕೊಂಡು ಬರುವಷ್ಟರಲ್ಲಿ 'ಆಯಿಸ್‌ಕ್ರೀಮು' ಸಿದ್ಧವಾಗಿ ಬಂದಿತ್ತು.

ಆಯಿಸ್ಕ್ರೀಮು ತಿಂದು ತನ್ನ ಕೋಣೆಗೆ ಬರುವಷ್ಟರಲ್ಲಿ ವಿಲಾಸಿನಿ ಬಂದು ರಾಮೂನನ್ನು ಕೇಳಿದಳು "ರೂಪಾಯಿ ಬೇಕೆಂದು ಹೇಳಿದ್ದಿರಂತೆ?" ರಾಮೂ ಸಂಕೋಚದಿಂದಲೇ ಹೇಳಿದ "ಹೌದು" "ಇಷ್ಟು ಸಾಕೇ?" ಎನ್ನುತ್ತ ೨೫ ರೂ. ಆಕೆ ಅವನ ಕೈಗಿಟ್ಟಳು. ರಾಮೂ ಕೃತಜ್ಞತೆಯಿಂದ "ಸಾಕು" ಎಂದ.

ಇನ್ನೂ ಹೊರಗೆ ಬಿಸಿಲಿನ ಝಳ ಕಡಿಮೆಯಾಗಿರಲಿಲ್ಲ. ಆದರೆ ಮನೆಯಲ್ಲಿ ಒಬ್ಬನೇ ಕುಳಿತು ಮಾಡುವದೇನು ಎಂದು ರಾಮೂ ವಿಚಾರಿಸುತ್ತಿರುವಷ್ಟರಲ್ಲಿ ವಿಲಾಸಿನಿ ಕೇಳಿದಳು "ಸ್ವಲ್ಪ ಊರಲ್ಲಿ ಸುತ್ತಾಡಿಕೊಂಡು ಬರೋಣವೇ? ನೀವೂ ಊರನ್ನು ನೋಡಿದಂತಾಗುತ್ತದೆ. ಹೊತ್ತೂ ಕೋಗುತ್ತದೆ."

ರಾಮೂ "ಹೂಂ" ಎಂದ.

ಕೂಡಲೇ ವಿಲಾಸಿನಿ "ಬಾಬೂ" ಎಂದು ಕೂಗಿದಳು.

"ಏನು ಬಾಯಿಸಾಹೇಬ?" ಎಂದು ಬಾಬು ಬಂದು ಕೈಕಟ್ಟಿಕೊಂಡು ನಿಂತ.

"ಗಾಡಿ ಸ್ಟಾರ್ಟು ಮಾಡು ಊರಲ್ಲಿ ಹೋಗಿ ಬರುವದಿದೆ." ವಿಲಾಸಿನಿ ಆಜ್ಞಾಪಿಸಿದಳು.

"ಹೂಂ" ಎಂದು ಬಾಬೂ ಜಿಗಿದ.

"ನಮ್ಮ ಬಾಬು ನೋಡಿರಿ ನಾವು ಹೇಳಿದ ಯಾವ ಮಾತಿಗೂ ಇಲ್ಲ ಎಂದು ಎಂದೂ ಹೇಳಿಲ್ಲ. ನಾನು ಇಷ್ಟು ಊರು ತಿರುಗಿದೆ. ಆದರೆ ಇಂಥ ಒಳ್ಳೇ ಹುಡುಗನನ್ನು ಎಲ್ಲಿಯೂ ನೋಡಲಿಲ್ಲ. ವಿಲಾಸಿನಿ ಬಾಬೂನ ಗುಣಗಾನ ಮಾಡಿದಳು.

"ಒಳ್ಳೇ ಸೇವಕರು ದೊರೆಯಬೇಕಾದರೂ ದೈವ ಬೇಕು" ರಾಮೂ ತನ್ನ ದೈವಾವನ್ನು ಮುಂದೆ ಮಾಡಿ ಮಾತು ಮುಗಿಸಿದ.

ಊರಲ್ಲಿ ಸುತ್ತಾಡಿ ಮನೆಗೆ ಬರುವಷ್ಟರಲ್ಲಿ ಸಂಜೆಯಾಗಿತ್ತು. ಕೈದೋಟದಲ್ಲಿ ಮಾತನಾಡುತ್ತ ಕುಳಿತ ತಿಮ್ಮಣ್ಣ ತನ್ನೊಡನೆ ಕುಳಿತವರಿಗೆ ರಾಮೂನ ಪರಿಚಯವನ್ನು ಸಾಕಷ್ಟು ಮಾಡಿಕೊಟ್ಟ ಆ ಮೇಲೆ ರಾಮೂನಿಗೆ ಹೇಳಿದ. "ಇತರ ಕೂಡ ನೀನು ಅಡ್ಜಸ್ಟು. ನಿನಗೆ ಎಷ್ಟು ಬಿಝಿನೆಸ್ ಬೇಕೋ ಅಷ್ಟು ಮಾಡಿಸಿಕೊಡುತ್ತಾರೆ."

"ಈಗಿನ ದಿನದಾಗ ಬಿಝಿನೆಸ್‌ಗೇನ್ರೀ ಜೇಕಾದಷ್ಟು! ನಾಲ್ಕು ದಿನಾ ನಿಲ್ಲಿರೀ ನಿಮಗ ಐನತ್ತು ಸಾವಿರದ ಬಿಝಿನೆಸ್ ಮಾಡಿಸಿಕೊಡತೇನಿ." ಬಂದ ವ್ಯಕ್ತಿ ಒಳ್ಳೇ ಅಧ್ಯತೆಯಿಂದ ಹೇಳಿದ.

ರಾಮೂ ಬಾಯಿ ತೆರೆದು ಅವನ ಮಾತನ್ನು ಕೇಳುತ್ತಿದ್ದ.

ಸಂಜೆಯ ಊಟವಾದ ಮೇಲೆ ಹೀಗೇ ಮಾತನಾಡುತ್ತ ಕುಳಿತಾಗ ತಿಮ್ಮಣ್ಣ ರಾಮೂನಿಗೆ ಮತ್ತೆ ಎಚ್ಚರಿಕೆ ಕೊಟ್ಟ. "ನೀನು ಆ ಮನುಷ್ಯನನ್ನು ಬಿಡಬೇಡ. ನಾನು ನಾಲ್ಕು ದಿನ ಕ್ಯಾಂಪಿಗೆ ಹೋಗಬೇಕಾಗಿದೆ. ನಾಳೆಗೇ ನಾನು ಹೊರಡುತ್ತೇನೆ. ನಾನು ಆ ಮನುಷ್ಯನಿಗೆ ಏನು ಹೇಳಬೇಕೋ ಅದನ್ನೆಲ್ಲ ತಿಳಿಸಿದ್ದೇನೆ. ನೀನು ಅವನ ಬೆನ್ನು ಹತ್ತಿ ಆಡ್ಡಾಡಿದರೆ ಸಾಕು ನಿನ್ನ ಕೆಲಸವಾಗುತ್ತದೆ."

ರಾಮೂ ತನ್ನ ಕೃತಜ್ಞತೆಯನ್ನು ಹೇಗೆ ವ್ಯಕ್ತಪಡಿಸಬೇಕೆಂಬುದನ್ನು ಅರಿಯದೇ ಹೋದ. ಅಂದು ರಾತ್ರಿ ಅವನಿಗೆ ಬೇಗನೇ ನಿದ್ರೆಯೇ ಬರಲಿಲ್ಲ.

೫

ತಿಮ್ಮಣ್ಣ ಕ್ಯಾಂಪಿಗೆ ಹೊರಟು ನಿಂತಾಗ ಹೇಳಿದ. "ಹನ್ನೆರಡು ಸರುಷಕ್ಕೊಂದು ಸಾರೆ ಅಪರೂಪವಾಗಿ ಬಂದ ಗೆಳೆಯನ ಕೂಡ ನಾಲ್ಕು ದಿನ ಹಾಯಾಗಿ ಹೊತ್ತುಗಳೆಯಬೇಕೆಂದರೆ ಈ ಹಾಳು ಡ್ಯೂಟಿ ತಪ್ಪಿದ್ದಲ್ಲ ರಾಮೂ ನಿಜ ಹೇಳಬೇಕೆಂದರೆ ನೌಕರಿ ಮಾಡುವವರೆಲ್ಲ ಗುಲಾಮರಾಗಿದ್ದಂತೆಯೇ ನೋಡು ಯಾವ ಬ್ರಹ್ಮದೇವರು ಬಂದರೂ ನಮ್ಮ ಗುಲಾಮಗಿರಿ ಬಿಟ್ಟದ್ದಲ್ಲ ನಾನು ಆದಷ್ಟು ಬೇಗನೇ ಬರಲು ಪ್ರಯತ್ನಿಸುತ್ತೇನೆ. ಆದರೂ ನಾಲ್ಕೈದು ದಿನಗಳಾದರೂ ಬೇಕಾಗಬಹುದು. ನಾನು ಬರುವವರೆಗೂ ನೀನು ಯಾವ ಸಂಕೋಚವನ್ನು ಕಟ್ಟುಕೊಳ್ಳದೇ ಹಾಯಾಗಿರು ಒಂದು ವೇಳೆ ನನಗೆ ಮರಳಿ ಬರಲು ಬಹಳ ದಿನ ಹಿಡಿದರೆ ಮತ್ತು ಇಲ್ಲಿ ನಿನಗೆ ಬೇಸರ ಬಂದರೆ ನನ್ನ ಕಡೆಗೆ ಒಂದೆರಡು ದಿನ ಬಾ. ನಿನಗೂ ನಮ್ಮ ಕ್ಯಾಂಪ ಲೈಫ ಹೇಗಿರುತ್ತದೆ ಎಂಬುದನ್ನು ನೋಡಲು ಸಿಗುತ್ತದೆ"

ಕುಟಜಾರಿಷ್ಟ

ಆಮಾಂಶ - ಸಂಗ್ರಹಣೆಗಳಿಗೆ

●

ಕಾಸಶ್ವಾಸಾರಿ

ದಮ್ಮು - ಕೆಮ್ಮುಗಳಿಗೆ

ಎಲ್ಲ ಬಗೆಯ ಆಯುರ್ವೇದ ಔಷಧಗಳಿಗಾಗಿ

ಬರೆಯಿರಿ:

ಶ್ರೀ

ದಿ ನೂತನ

ಆಯುರ್ವೇದ ಕಾರ್ಯಾಲಯ ಲಿ.

ವಿಜಾಪುರ

ತಿಮ್ಮಣ್ಣ ಹೇಳಿದಂತೆ ೪ ಮನುಷ್ಯರು—ತಿಮ್ಮಣ್ಣ ರಾಮೂನಿಗೆ ಗುರುತು ಮಾಡಿಕೊಟ್ಟ ಮನುಷ್ಯರು—ಬಂದು ತಮ್ಮ ಕಾರಿನಲ್ಲಿ ರಾಮೂನನ್ನು ಕೂಡಿಸಿಕೊಂಡು ಊರಲ್ಲಿಯ ದೊಡ್ಡ ದೊಡ್ಡ ವ್ಯಕ್ತಿಗಳ ಕಡೆಗೆ ಕರೆದುಕೊಂಡು ಹೋಗಿ ಬರಲಾರಂಭಿಸಿದರು. ತಿಮ್ಮಣ್ಣನ ಹೆಸರು ಹೇಳಿದ ಕೂಡಲೇ ನಿಮಗೂ ಇಳಿಸಲು ಯಾರೂ "ಇಲ್ಲ" ಎನ್ನಲಿಲ್ಲ ನಾಲ್ಕು ದಿನಗಳಲ್ಲಿ ೫೦-೬೫ ಸಾವಿರದ ವಿಮೆಯ ಗಿರಾಕಿ ರಾಮೂನಿಗೆ ದೊರೆತವು. ಈಗ ಮಾತ್ರ ರಾಮೂನಿಗೆ ತಿಮ್ಮಣ್ಣನ ವರ್ಚಸ್ಸು ಎಷ್ಟಿದೆ ಎಂಬುದು ತಿಳಿಯಿತು. ತಾನು ಎರಡೆರಡು ವರುಷ ಕಷ್ಟಪಟ್ಟರೂ ದೊರೆಯದಿದ್ದಷ್ಟು ಹಣ ಅವನಿಗೆ ನಾಲ್ಕು ದಿನಗಳಲ್ಲಿ ದೊರೆತಿತ್ತು. ಇದು ತಿಮ್ಮಣ್ಣನ ವ್ಯಕ್ತಿತ್ವದ, ದೊಡ್ಡಿಸ್ತಿಕೆಯ, ದ್ಯೋತಕವಲ್ಲವೇ? ತಿಮ್ಮಣ್ಣನ ವ್ಯಕ್ತಿತ್ವದ ಮುಂದೆ ರಾಮೂನಿಗೆ ತನ್ನ ವ್ಯಕ್ತಿತ್ವವು ಅನೆಯ ಮುಂದೆ ನಿಂತ ಆಡಿನಂತೆನಿಸಿತು. ಬರೀ ತಿಮ್ಮಣ್ಣನ ಹೆಸರಿನಿಂದಲೇ ಇಷ್ಟು ಪರಿಣಾಮವಾಗಬೇಕಾದರೆ, ಅವನು ಎಂಥ ದೈವಶಾಲಿ ಇರಬಹುದು? ಒಬ್ಬೊಬ್ಬರು ಹುಟ್ಟಿದ ವೇಳೆಯೇ ಹಾಗಿರುತ್ತದೆ, ಎಂದು ರಾಮೂನಿಗೆ ಅನಿಸಿತು. "ತಾನು ಹುಟ್ಟಿದ ವೇಳೆಯೇ ಹೀಗಿದ್ದ ಮೇಲೆ ಯಾರೇನು ಮಾಡುವುದು?" ಎಂದುಕೊಂಡನು. ಮತ್ತು ತನ್ನ ಗೆಳೆಯನೊಬ್ಬ ಸುದೈವಿಯಾಗಿದ್ದರೆ ತಾನೇಕೆ ಅಸೂಯೆ ಪಡಬೇಕು ಎನಿಸಿತು.

ವಿಲಾಸಿನಿಯಾದರೂ ರಾಮೂನಿಗೆ ಯಾವ ಕೊರತೆ ಸಂಕೋಚಗಳೂ ಉಂಟಾಗದಂತೆ ನೋಡಿಕೊಂಡಳು. ಅವಳ ಸಹವಾಸದಲ್ಲಿ ರಾಮೂನಿಗೆ ತಾನು ಹೆರವರ ಮನೆಯಲ್ಲಿ ಏಕಾಕಿಯಾಗಿರುವನೆಂಬ ಕಲ್ಪನೆಯುಂಟಾಗಲಿಲ್ಲ. ವಿಲಾಸಿನಿ ಸಾಹಿತ್ಯ ಸಂಗೀತದಲ್ಲಿ ಅಭಿರುಚಿಯುಳ್ಳವಳಾಗಿದ್ದಳು. ಪ್ರಚಲಿತ ರಾಜಕಾರಣವನ್ನು ತಿಳಿದವಳಾಗಿದ್ದಳು. ಆದ್ದರಿಂದ ಅಕೆ ಚರ್ಚಿಸದ ವಿಷಯವಿರಲಿಲ್ಲ. ವ್ಯಕ್ತಪಡಿಸದ ಅಭಿಪ್ರಾಯವಿರಲಿಲ್ಲ. ಕಂಟ್ರೋಲಿನಿಂದ ಹಿಡಿದು ಕಮ್ಯುನಿಸ್ಟುಂ ವರೆಗೆ ಎಲ್ಲ ವಿಷಯಗಳು ರಾಮೂ ಮತ್ತು ವಿಲಾಸಿನಿಯರ ಹರಟೆಯಲ್ಲಿ ಬಂದು ಹೋದವು. ಆದರಾತಿಥ್ಯಕ್ಕಂತೂ ಅವಳ ಕೈ ಹಿಡಿದವರೇ ಇಲ್ಲ ಇಂಥ ಹೆಂಡತಿಯನ್ನು ಪಡೆದ ತಿಮ್ಮನು ನಿಜವಾಗಿಯೂ ಧನ್ಯನೆಂದುಕೊಂಡ ರಾಮೂ. ಆಗ ಸ್ವಾಭಾವಿಕವಾಗಿ ತನ್ನ ಹೆಂಡತಿಯದೂ ಅವನಿಗೆ ನೆನಪಾಯಿತು. ಅಕೆಯಾದರೂ ಉತ್ತಮ ಗೃಹಿಣಿಯೇನೋ ಸರಿ. ಆದರೆ ಅಕೆಯಲ್ಲಿ ವಿಲಾಸಿನಿಯ ವಿಲಾಸ ವಿಭ್ರಮಗಳಾಗಲೀ, ವಾಕ್ಚಾತುರ್ಯ, ಸುಶಿಕ್ಷಿತತೆಗಳಾಗಲೀ ಇರಲಿಲ್ಲ. ರಾಮೂನ ಹೆಂಡತಿ ಸುಸಂಸ್ಕೃತಳಾಗಿದ್ದರೂ ಸುಶಿಕ್ಷಿತಳಾಗಿರಲಿಲ್ಲ. ದಾಸರ ಹಾಡುಗಳೇ ಅಕೆಯ ಸಂಗೀತ— ರಾಮಾಯಣ ಮಹಾಭಾರತಗಳೇ ಅಕೆಯ ಸಾಹಿತ್ಯವಾಗಿತ್ತು. ದೇವರ ನಾಮ ಹೇಳುತ್ತಲೇ ಅಕೆಗೆ ಬೆಳಗಾಗುತ್ತಿತ್ತು. ಕಮ್ಯೂನಿಸ್ಟುಂ, ಸ್ತ್ರೀ ಸ್ವಾತಂತ್ರ್ಯ, ಯುಕ್ತರಾಷ್ಟ್ರ ಸಂಘ, ರೆಡ್‌ಕ್ರಾಸ್, ಕ್ಲಬ್ಬು ಲೈಫ್ ಸ್ಟೈಲ್ ಸಮ್ಮೇಲನ ಇವಾವವೂ ಅವಳಿಗೆ ಅರ್ಥವಾಗುತ್ತಿರಲಿಲ್ಲ. ಹೀಗಿದ್ದ ತನ್ನ ಹೆಂಡತಿಯನ್ನೂ ವಿಲಾಸಿನಿಯನ್ನೂ ಹೋಲಿಸಿ ನೋಡಿದ. ರಾಮೂನಿಗೆ ವಿಲಾಸಿನಿಯು ರಾಜೋದ್ಯಾನದಲ್ಲಿ ಬೆಳೆದ ಚಿಂಗುಲಾಬಿಯೆಂದೂ ತನ್ನ ಹೆಂಡತಿ ಕಾಡುಮಲ್ಲಿಗೆಯೆಂದೂ ಎನಿಸಿತು. ಆದರೆ ತನ್ನ ದೈವದಲ್ಲಿ ಇಂತಹ ಹೆಂಡತಿಯೇ ಸಿಗುವದಿದ್ದ ಮೇಲೆ ಯಾರೇನು ಮಾಡುವದು ಎಂದುಕೊಂಡು ಸಮಾಧಾನ ಹಚ್ಚಿಕೊಂಡ

ವಿಲಾಸಿನಿಯ ತರುವಾಯ ರಾಮೂನಿಗೆ ಎಷ್ಟೋ ಅನುಕೂಲವಾದ ವ್ಯಕ್ತಿಯೆಂದರೆ ಬಾಬೂ. ಬಾಬೂ ಮೋಟರ್ ಡ್ರೈವರ್ ಆದರೂ ನೋಡಲಿಕ್ಕೆ ಒಳ್ಳೇ ಸ್ಫುರದ್ರೂಪಿಯಾಗಿದ್ದ. ಇನ್ನೂ ೨೫ ವರುಷದ ತರುಣನಾದ ಬಾಬೂ, ಒಡೆಯರು ಹೇಳಿದ ಯಾವ ಕಾರ್ಯವನ್ನೂ ಮಾಡಲು ಸಿದ್ಧನಾಗಿದ್ದ. ರಾಮೂನಿಗೆ ಸಣ್ಣ ಪುಟ್ಟ ಕಾರ್ಯಗಳಲ್ಲಿ ಬಾಬೂ ಬಹಳೇ ನೆರವಾದ. ಉತ್ಸಾಹ ಮತ್ತು ನಗು ಮೊಗ ಇವೆರಡು ಬಾಬೂನ ವೈಶಿಷ್ಟ್ಯಗಳಾಗಿದ್ದುವು.

ತಿಮ್ಮಣ್ಣನ ಮನೆಯಲ್ಲಿ ಕೊಪದಾಗಿ ಬಂದವರಿಗೆ ಯಾರಿಗೂ ಬಾಬೂ ಒಬ್ಬ ಆಳು ಮನುಷ್ಯ, ಮೋಟರ ಡ್ರೈವ್ವರ ಎಂದು ಎನಿಸುವಂತಿರಲಿಲ್ಲ. ಅಷ್ಟು ಅವನು ಮನೆಯವರ ಕೂಡ ಒಂದಾಗಿಹೋಗಿದ್ದ ಅವನು ಒಬ್ಬ ತಿಮ್ಮಣ್ಣನ ಮನೆಯವನೇ ಆಗಿಬಿಟ್ಟಿದ್ದ. ಬಾಬೂವಿಗೆ ಮನೆಯಲ್ಲಿ ಯಾವ ನಿರ್ಬಂಧವೂ ಇರಲಿಲ್ಲ. ಮತ್ತು ಬಾಬೂ ಇಲ್ಲದೇ ಯಾವ ಕಾರ್ಯವೂ ಅಲ್ಲಿ ಸಾಗುತ್ತಿರಲಿಲ್ಲ. ಪಲ್ಲೆ ತರುವದು ಮೊದಲು ಮಾಡಿ ಮೋಟರ ನಡೆಯಿಸುವ ವರೆಗೂ ಬಾಬೂನೇ ಆಗಬೇಕು.

ಹೀಗೆ ತನ್ನ ವ್ಯವಹಾರಕ್ಕಾಗಿ ಓಡಾಟ, ವಿಲಾಸಿನಿಯ ಆದರಾತಿಥ್ಯ, ಬಾಬೂನ ಸೇವೆ ಇವುಗಳಲ್ಲಿ ನಾಲ್ಕು ದಿನಗಳು ನಾಲ್ಕು ನಿಮಿಷಗಳಂತೆ ಮಾಯವಾದವು. ಆಗಾಗ ಪದ್ಮಾ ತನ್ನ ಹುಡುಗಾಟಿಕೆಯಿಂದ ರಾಮೂನ ಮನರಂಜನೆ ಮಾಡಿಸ್ತಿದ್ದಳು.

ಐದು ದಿನಗಳಾದರೂ ತಿಮ್ಮಣ್ಣ ಮರಳಿ ಬರಲಿಲ್ಲ. ಇನ್ನೆರಡು ದಿನಕ್ಕೆ ಕ್ಯಾಂಪು ಮುಗಿಯುವದೆಂದೂ ನಂತರ ನಿಲ್ಲದೇ ಬರುವೆನೆಂದೂ ಹೇಳಿಕಳಿಸಿದ್ದ.

ತಿಮ್ಮಣ್ಣ ಬರುವ ವರೆಗೂ ತಾನು ನಿಲ್ಲಬೇಕೇ ಹೋಗಬೇಕೇ? ಎಂಬದನ್ನು ನಿರ್ಣಯಿಸಲಿಕ್ಕಾಗದೇ ಹಾಗೇ ದಿನ ನೂಕಲಾರಂಭಿಸಿದ್ದ ರಾಮೂ.

ಒಂದು ಸಂಜೆ ವಿಲಾಸಿನಿ ಕೇಳಿದಳು "ಇಂದು ಸಂಜೆ ಸಿನೇಮಾಕ್ಕೆ ಹೋಗಿ ಬರೋಣವೇ?"

"ಯಾವ ಚಿತ್ರವಿದೆ?" ರಾಮೂ ಅನುಮಾನಿಸುತ್ತಲೇ ಕೇಳಿದ.

"ಸ್ಯಾಮ್ಸನ್ ಅ್ಯಂಡ ಡಿಲೈಲಾ; ಒಳ್ಳೇ ಚಿತ್ರ; ಅಮರಕಲಾಕೃತಿಯೆಂದು ಕೇಳಿದ್ದೇನೆ."

"ಆದರೆ ನನಗೆ ಮೈಯಲ್ಲಿ ಏಕೋ ಸ್ವಸ್ಥವಿಲ್ಲ. ನೀವು ಬೇಕಾದರೆ ಹೋಗಿ ಬರ್ರಿ. ನಾನು ಆದೇ ವೇಳೆಯನ್ನು ನಿದ್ದೆಯಲ್ಲಿ ಕಳೆಯುತ್ತೇನೆ."

"ಏಕೆ ಮನೆಯ ನೆನಪಾಗಿರುವದೇನು? ವಿಲಾಸಿನಿ ಪಾಸ್ಯ ಮಾಡಿದಳು.

" ಹಾಗೇನಿಲ್ಲ. ಆದರೂ ಇನ್ನೂ ಏಕೋ ಪತ್ರ ಬಂದಿಲ್ಲ. ನಾನು ಬರುವಾಗ ಕೊನೆಯ ಮಗುವಿಗೆ ಸ್ವಲ್ಪ ಹುಗುಳು ನೆಗಡಿಯಾಗಿತ್ತು. ಆದರೂ ಚಿಂತೆ ಮಾಡುವಂಥ ಪ್ರಸಂಗವಿಲ್ಲ .... " ಏನೇನೋ ವಿರುದ್ಧಾಭಿಪ್ರಾಯದ ಮಾತುಗಳನ್ನು ಹೇಳಹತ್ತಿದ ರಾಮೂ.

" ನೀವು ಬಂದು ನಾಲ್ಕು ದಿನ ಆಯಿತು; ಮನೆಯ ಕಡೆಗೆ ಇಷ್ಟು ಮನಸ್ಸು ಹರಿಯುತ್ತಿದೆ. ನಮ್ಮವರನ್ನು ನೋಡಿರಿ. ಎಂಟೆಂಟು ಹತ್ತತ್ತು ದಿನ ಕ್ಯಾಂಪಿಗೆ ಹೋಗುತ್ತಾರೆ ಆದರೆ ಒಂದು ನಾಲ್ಕು ಅಕ್ಷರಗಳನ್ನು ಕೂಡ ಗೀಚುವದಿಲ್ಲ. ಇನ್ನು ಬೇಗನೆ ಬರುವದಂತೂ ದೂರೇ ಉಳಿಯಿತು. " ವಿಲಾಸಿನಿ ಗೊಣಗಿದಳು.

" ಆವನಿಗೂ ನನಗೂ ಎಲ್ಲಿಯ ಹೋಲಿಕೆ! ಅವನು ದೊಡ್ಡ ಅಧಿಕಾರಸ್ಥ! ಇಷ್ಟತ್ತೀಟು ಕೈತುಂಬ ಕೆಲಸಗಳು. ಹತ್ತೀಟು ಜನ ಯಾವಾಗಲೂ ದರ್ಶನಕ್ಕಾಗಿ ಕಾದುಕೊಂಡಿರುವರು. ಇದಲ್ಲದೇ ಕಾರ್ಯಕ್ರಮಗಳೋ ಮೇಜವಾನಿಗಳೋ ಬೇರೆ ಒದಗಿಬರುತ್ತವೆ. ಇಷ್ಟೆಲ್ಲ ಗದ್ದಲದಲ್ಲಿ ಮನೆಯ ಕಡೆಗೆ ವಿಚಾರಿಸಲು ಬಿಡುವಾದರೂ ಹೇಗೆ ದೊರೆಯಬೇಕು ? ನನ್ನ ಮಾತು ಹಾಗಲ್ಲ. ನಾನೊಬ್ಬ ಏನಾ-ಮಧ್ಯೇಯ ವ್ಯಕ್ತಿ. ಮನೆಯೇ ನನ್ನ ಕಾರ್ಯಕ್ಷೇತ್ರ. ನನಗೆಲ್ಲಾದರೂ ಸ್ವಾಸವಿದ್ದರೆ ಅದು ಮನೆಯಲ್ಲಿ ಮಾತ್ರ. ಮನೆಯಿಂದ ಹೊರಬಿದ್ದ-ಕೂಡಲೇ ನನಗೆ ಆಸ್ತಿತ್ವವೇ ಇಲ್ಲದಾಗುತ್ತದೆ. ಅದಕ್ಕಾಗಿ ಮನೆಯ ಕಡೆಗೆ ನನ್ನ ಮನಸ್ಸು ಇಷ್ಟು ಹರಿಯುವುದು. " ರಾಮೂ ತನ್ನ ಅಸ್ವಸ್ಥತೆಯ ಕಾರಣವನ್ನು ಹೇಳಿದ.

ಆದರೆ ವಿಲಾಸಿನಿ ಯಾವ ಕಾರಣವನ್ನೂ ಕೇಳಲಿಲ್ಲ ರಾಮೂ ಕೊನೆಗೆ ಹೊರಡಲೇಬೇಕಾಯಿತು. ರಾಮೂ, ಪದ್ಮಾ, ವಿಲಾಸಿನಿ ಮೂವರೂ ಕೂಡಿ ಎರಡನೆಯ ಆಟಕ್ಕೆ ಹೊರಟರು. ಬಾಬೂ ಗಾಡಿ ಸ್ಟಾರ್ಟ್ ಮಾಡಿದ.

ಉಳಿದ ಸ್ಥಳಗಳೆಲ್ಲ "ಫುಲ್ " ಆದದ್ದರಿಂದ, ಮೂವರೂ ಬಾಕ್ಸಿಗೆ ಹೋದರು.

ನಡುವೆ ಪದ್ಮಳನ್ನು ಕುಳ್ಳಿರಿಸಿ ಇತ್ತ ಇತ್ತ ರಾಮೂ ವಿಲಾಸಿನಿ ಕುಳಿತರು. ಚಿತ್ರಪಟ ಸುರುವಾಯಿತು.

ರಾಮೂ ಚಿತ್ರವನ್ನು ನೋಡುವುದರಲ್ಲಿ ತನ್ಮಯನಾದ. ಅವನಿಗೆ ಬಾಯಬಲ್ಲಿನಲ್ಲಿ ಬಂದ ಸ್ಯಾಮ್ಸನ್‌ನ ಕಥೆ ಗೊತ್ತಿತ್ತಲ್ಲದೆ, ಮಹಾಕವಿ ಮಿಲ್ಟನ್ನು ಬರೆದ ಸ್ಯಾಮ್ಸನ್ ಅಗೋನಿಸ್ಟಿಸ್ ಅವನಿಗೆ ಕಾಲೇಜಿನಲ್ಲಿ ಪಠ್ಯವಾಗಿತ್ತು. ಹೀಗಾಗಿ ಮೂಲ ಕೃತಿಗಳನ್ನು ಚಿತ್ರಪಟದೊಂದಿಗೆ ಹೋಲಿಸುತ್ತ ಅವನು ಚಿತ್ರ ನೋಡುವುದರಲ್ಲಿ ಮೈಮರೆದ.

ಈ ತನ್ಮಯತೆಯಲ್ಲಿ ಯಾರೋ ಮೃದುವಾಗಿ ತನ್ನ ಕೈ ಹಿಸುಕುತ್ತಿರುವಂತೆ ಅವನಿಗೆ ಭಾಸವಾಯಿತು.

ಮಕ್ಕಳ ಸದೃಢತೆಗಾಗಿ

" ಬಗನ ಬಾಲಾಮೃತ "

ಹಲ್ಲು ಬರುವಾಗ

" ಎಸ್ಟನ್ ಗ್ರಾಇಪ್ ಹೀಲರ್ "

ಜಂತು ಆದರೆ

" ಪರ್ಮ್ ಆಯಿಲ್"

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು.

The National Pharmacies & Pharmaceuticals Ltd., Dharwar.

ಮೊದಮೊದಲು ಪದ್ಮಾ ಎಂದೇ ತಿಳಿದುಕೊಂಡ ರಾಮೂ, ಆಪನ್ನು ಅಲಕ್ಷ್ಯಿಸಿದ. ಆದರೆ ಆ ಸ್ಪರ್ಶವೇ ಬೇರೆಯಾಗಿತ್ತು. ಅವರ ಮಾರ್ದವತೆ ಮೈಯಲ್ಲಿ ರೋಮಾಂಚನವನ್ನುಂಟು ಮಾಡತೊಡಗಿತು.

ರಾಮೂ ತನ್ನ ಬದಿಗೆ ಚೆನ್ನಾಗಿ ನೋಡಿದ. ನೋಡಿ ಆಶ್ಚರ್ಯ-ಪಟ್ಟ.

ವಿಲಾಸಿನಿ ಪದ್ಮಳ ಜಾಗದಲ್ಲಿದ್ದಳು. ಪದ್ಮಾ ವಿಲಾಸಿನಿಯ ಸ್ಥಳದಲ್ಲಿ ಕುಳಿತು ನಿದ್ರೆ ಹೋಗಿದ್ದಳು.

ರಾಮೂ ವಿಲಾಸಿನಿಯ ಕಡೆಗೊಮ್ಮೆ ತೀಕ್ಷ್ಣವಾಗಿ ನೋಡಿದ.

ವಿಲಾಸಿನಿ ಬರೀ ಒಂದು ಮಂದಹಾಸವನ್ನು ಬೀರಿದಳು. ಮತ್ತು ತನ್ನ ತಲೆಯನ್ನು ರಾಮೂನ ಭುಜದ ಮೇಲಿಟ್ಟಳು

ರಾಮೂ ತಬ್ಬಿಬ್ಬಾದ.

ಇಷ್ಟರಲ್ಲಿ ಮುಧ್ಯಂತರವಾಯಿತು

"ನನಗೆ ತಲೆಶೂಲಿಯೆದ್ದಿದೆ; ನಾನು ಮನೆಗೆ ಹೋಗುತ್ತೀನಿ"

ರಾಮೂ ತನ್ನ ಸ್ಥಳದಿಂದ ಏಳುತ್ತ ಹೇಳಿದ.

"ಏಕೆ, ನಾವೂ ಬರುತ್ತೇವಲ್ಲ!" ವಿಲಾಸಿನಿ ರಾಮೂನ ಕಡೆಗೆ ಅರ್ಥಪೂರ್ಣವಾಗಿ ನೋಡುತ್ತ ನುಡಿದಳು.

"ಬೇಡ. ನೀವು ಪೂರ್ಣ ನೋಡಿ ಬರ್ರಿ." ಎಂದು ಹೇಳಿದವನೇ ಅಲ್ಲಿ ನಿಲ್ಲದೆ ಇಳಿದು ನಡೆದುಬಿಟ್ಟ ರಾಮು.

ರಾಮೂ ಅಷ್ಟು ಸುಲಭಸಾಧ್ಯನಲ್ಲವೆಂದು ನಿಶ್ಚಯಿಸಿದ ವಿಲಾಸಿನಿ, ಚಿತ್ರಪಟ ಮುಗಿಯುವ ವರೆಗೂ ಕುಳಿತುಕೊಳ್ಳುವ ನಿರ್ಧಾರ ಮಾಡಿದಳು.

ರಾಮೂ ನೇರವಾಗಿ ನಡೆಯುತ್ತಲೇ ಮನೆಗೆ ಬಂದ. ಬಂದು ಮುಸುಕುಹಾಕಿ ಮಲಗಿಕೊಂಡ. ಅವನ ಮನಸ್ಸಿನಲ್ಲಿ ದೊಡ್ಡ ವಿಪ್ಲವವೇ ಎದ್ದಿತ್ತು. ಕೊನೆಗೆ ಇಲ್ಲಿ ನಿಲ್ಲುವುದು ಸರಿಯಲ್ಲವೆಂದು ತಿಳಿದು ರಾತ್ರಿಯ ಗಾಡಿಗೇ ಹೊರಟುಬಿಡಬೇಕೆಂದು ನಿಶ್ಚಯಿಸಿ, ಇನ್ನೂ ವೇಳೆ ಇದ್ದುದರಿಂದ ಸ್ವಲ್ಪ ಆಡ್ಡಾದ. ಕೂಡಲೇ ಜೋಂಪು ಹತ್ತಿತು.

ರಾಮೂನಿಗೆ ಎಚ್ಚರವಾದಾಗ ಗಡಿಯಾರವು ಒಂದು ಗಂಟೆಯನ್ನು ಬಾರಿಸಿತು. ಹಾಗೇ ಎದ್ದು ಅವನು ತನ್ನ ಸಾಮಾನುಗಳನ್ನು ಸಾವರಿಸಿಕೊಂಡು ಹೊರಡುವ ಸಿದ್ಧತೆ ಮಾಡಿ, ವಿಲಾಸಿನಿಯು ಬಂದಿರುವಳೋ ಇಲ್ಲವೋ ಬಂದಿದ್ದರೆ ಹೇಳಿ ಹೋಗೋಣವೆಂದು ವಿಚಾರಿಸಿ, ತನ್ನ ಕೋಣೆಯಿಂದ ಮೆಲ್ಲನೇ ಹೊರಗೆ ಬಂದ.

ವಿಲಾಸಿನಿಯ ಕೋಣೆಯಲ್ಲಿ ದೀಪವಿತ್ತು. ಯಾರೋ ಮೆಲ್ಲನೆ ಮಾತನಾಡುತ್ತಿರುವಂತೆ ತೋರಿತು. ಹೋಗಲೋ ಬೇಡವೋ ಎಂದು ಕ್ಷಣಹೊತ್ತು ವಿಚಾರಿಸಿ ರಾಮೂ ಅವಳ ಕೋಣೆಯ ಕಡೆಗೆ ಮೆಲ್ಲನೇ ಪೆಜ್ಜೆಯಿಕ್ಕಿದ.

ವಿಲಾಸಿನಿಯ ಕೋಣೆಯಲ್ಲಿನ ದೃಶ್ಯವನ್ನು ನೋಡಿ ಕ್ಷಣಹೊತ್ತು ರಾಮೂ ಸ್ತಬ್ಧನಾದ.

ಬಾಬೂ ವಿಲಾಸಿನಿಯನ್ನು ತನ್ನ ನಿಡುಪೋಳುಗಳಲ್ಲಿ ಬಂಧಿಸಿದ್ದ. ವಿಲಾಸಿನಿ ಉನ್ಮತ್ತಳಾಗಿ ಬಾಬೂನನ್ನು ಚುಂಬಿಸುತ್ತಿದ್ದಳು.

ರಾಮೂನಿಗೆ ಅಲ್ಲಿ ಬಹಳ ಹೊತ್ತು ನಿಲ್ಲಲಾಗಲಿಲ್ಲ. ಮೆಲ್ಲನೇ ತನ್ನ ಕೋಣೆಗೆ ಮರಳಿ, ತನ್ನ ಒಡವೆಗಳನ್ನೆಲ್ಲ ತೆಗೆದುಕೊಂಡು ಮನೆಯಿಂದ ಸಪ್ಪಳ ಮಾಡದಂತೆ ಹೊರಬಿದ್ದ.

ರಾಮೂ ಊರಬಂಡಿಯ ನಿಲ್ದಾಣದ ಸಮೀಪಕ್ಕೆ ಬಂದಾಗ ಚಂದ್ರೋದಯವಾಯಿತು. ತಂಗಾಳಿ ಬೀಸತೊಡಗಿತು. ಅವನ ಕಾಯ್ದು ತಲೆ ಸ್ವಲ್ಪ ಶಾಂತವಾಯಿತು. 'ಅಯ್ಯೋ ತಿಮ್ಮನ ದೈವವೇ!' ಎನ್ನುತ್ತ ರಾಮೂ ಗಾಡಿ ಹತ್ತಿದ.

ಗಾಡಿಯಲ್ಲಿಲ್ಲ ತನ್ನ ಮನೆಯದೇ ಕನಸು. ಕನಸಿನಲ್ಲಿ "ನನ್ನ ಕಾಡುಮಲ್ಲಿಗೆಯೇ ನನಗಿರಲಿ. ನನ್ನ ದೈವವೇ ನನಗಿರಲಿ' ಎಂದು ರಾಮೂ ಕನವರಿಸುತ್ತಿದ್ದ.

ಇದಾವುದರ ಲಕ್ಷ್ಯವಿಲ್ಲದೇ ಊರಬಂಡಿ ಝಿಕ್ ಝಿಕ್ ಎಂದು ಓಡುತ್ತಲೇ ಇತ್ತು.

"ನೂತನ ಗಣಿತ"ಗಳ ೧೯೫೨ರ ತಿದ್ದಿದ ಆವೃತ್ತಿಗಳು

ಎಲ್ಲಕಡೆಗೂ ದೊರೆಯುವುವು

ಹಲವು ತಜ್ಞರ ನೆರವಿನಿಂದ ತಿದ್ದುಪಡಿಯನ್ನು ಕೈಕೊಂಡು, ಹೊಸ ಆವೃತ್ತಿಗಳನ್ನು ಹೊರಡಿಸಲಾಗಿದೆ. ಮನಶ್ಶಾಸ್ತ್ರ, ಗಣಿತಶಾಸ್ತ್ರ, ವ್ಯವಹಾರ ಇವುಗಳ ತ್ರಿವೇಣೀ ಸಂಗಮವನ್ನು ಇವುಗಳಲ್ಲಿ ಕಾಣಬಹುದು. ಅಲ್ಲದೆ ಗಣಿತದ ಎಲ್ಲ ವಿಭಾಗಗಳನ್ನೂ ಕೊಡಲಾಗಿದೆ.

ಎಲ್ಲ ಜಿಲ್ಲಾ ಸೂ ಬೋ. ಹಾಗು ಮ್ಯುನಸಿಪಲ್ ಸ್ಕೂ. ಬೋ. ಗಳೂ ಮನ್ನಣೆಯನ್ನಿತ್ತಿರುವುವು. ಎಂತಲೇ ೧೯೫೨ರ ಆವೃತ್ತಿಗಳನ್ನು ಕೇಳಿರಿ. ಎಲ್ಲ ಕಡೆಗೂ ದೊರೆಯುವುವು.

ಆಕಳವಾಡಿ ಬುಕ್‌ಡಿಪೊ ಧಾರವಾಡ

ಮಾನವನ ವಿಚಾರ

(ಎರಡು ಮಾತುಗಳು)

ಶ್ರೀ. ಶಂ. ಬಾ. ಜೋಶಿಯವರು, ಧಾರವಾಡ

卐

ಮಾನವನ ವಿಚಾರವಾಗಿ ಹಲವು ಬಗೆಯಿಂದ ಅಭ್ಯಾಸ ನಡೆದಿದೆ ಮಾನವನು ವಿಶ್ವದೊಳಗಿನ ಒಂದೊಂದು ವಿಷಯ, ವಸ್ತುವನ್ನೂ ತಕ್ಕೊಂಡು ಅದರ ಸಂಶೋಧನೆಯನ್ನು ನಡೆಸುತ್ತಿದ್ದ. ತನ್ನನ್ನೇ ಮರೆತು ಉಳಿದುದರ ಎಣಿಕೆ ನಡಸಿದ್ದ ಮಾನವನೂ ಇಂದು ವಿಚಾರ-ಸಂಶೋಧನೆಗಳ ಒಂದು ವಸ್ತು-ವಿಷಯವಾಗಿದ್ದಾನೆ ಇದರ ಫಲವಾಗಿ ಆ ಮೊವಲು ಬಗೆಹರಿಯದೆ ಇದ್ದ ಹಲವು ಕೊಡಕುಗಳಿಗೆ ಈಗ ಸಮರ್ಪಕವಾಗಿ ಉತ್ತರಗಳು ದೊರೆಯತೊಡಗಿವೆ ಮಾನವನ ನಡೆ ಎತ್ತ ?—ಎಂಬ ಮಾತನ್ನು ಗಣಿತ ಶಾಸ್ತ್ರದಷ್ಟು ಸೂಕ್ಷ್ಮ ಮತ್ತು ನಿತ್ಯವಾಗಿ ನಿರ್ಧರಿಸುವ ಶಕ್ಯತೆಯು ತಲೆದೋರಿದೆ

ಮಾನವನ ಅರ್ಥವನ್ನು ಅರಿತುಕೊಳ್ಳುವ ಸಲವಾರು ಪ್ರಯತ್ನಗಳಾಗಿವೆ. ಯಾವುದೊಂದರ ಸಮರ್ಪಕವಾದ ಅರ್ಥವನ್ನು ಅರಿತುಕೊಳ್ಳಬೇಕಾದರೆ, ಅದರ ವ್ಯಾಖ್ಯೆಯನ್ನು ನೂಡಿನೋಡುವುದು ಒಂದು ರೀತಿಯಾಗಿರುತ್ತದೆ. ಅರ್ಥವು ಶಾಬ್ದಿಕ ವ್ಯಾಪ್ತಿಯನ್ನು ಯಾವಾಗಲೂ ವಿಸಾರಿಸುತ್ತದೆ. ವ್ಯಾಖ್ಯೆಯಿಂದ ಸತ್ಯವು ನಿಶ್ಚಿತವಾಗಿ ನಿರ್ಧರಿಸಲ್ಪಟ್ಟು ತಿಳಿಯಲು ಸಾಧ್ಯವಾಗಿದ್ದಾದರೆ, ಮಾನವ-ಮಾನವರೊಳಗಿನ ಕಲಹ ಕೋಲಾಹಲಗಳು ಎಂದೋ ಮಾಯವಾಗಿ ಹೋಗಬಹುದಾಗಿತ್ತು. ನಿಜವಾದ ಅರ್ಥವನ್ನು ಕಬ್ಬಕಡೆಗೆ ಮೌನವ್ಯಾಖ್ಯಾನದಿಂದಲೇ ವಿವರಿಸಬೇಕಾಗುತ್ತದೆ ಮೌನಪದ್ಧತಿಯಿಂದ ವ್ಯಕ್ತವಾದ ಅರ್ಥವನ್ನು ಆದೇ ಬಗೆಯಿಂದ ಗ್ರಹಿಸಿಕೊಳ್ಳಬಲ್ಲವನೇ ನಿಜವಾದ ಬಲ್ಲವನೆನಿಸುತ್ತಾನೆ.

ಯಾರನ್ನಾದರೂ ಪ್ರತಿನಿಕ್ಷೆಯನ್ನು ಗೊಂದಲದಲ್ಲಿ ಕೆಡಹಿ ಬಾಯಿ ಕಟ್ಟಬೇಕಾದರೆ, ಚರ್ಚೆಯ ವಿಷಯವನ್ನು ಕುರಿತು ವಿವಾದ್ಯವಿಷಯದ ವ್ಯಾಖ್ಯೆಯನ್ನು ಮಾಡಲು ಕೇಳಬೇಕೆಂದು ಒಂದು ಸನಾತನಸೂತ್ರ ವಿದೆ. ವ್ಯಾಖ್ಯೆಯನ್ನು ನೂಡಿಮೊತನೆ ಆತನ ವಿಚಾರದ ಇತಿನಿತಿ ತಿಳಿದು ಅದರೊಳಗಿನ ಕುಂದು-ಕೊರತೆಗಳು ನಿಚ್ಚಳವಾಗಿ ಎದ್ದು ಕಾಣುವುವು. ಆಗ ವಿರೋಧಿಯನ್ನು ತಡೆಗಟ್ಟುವುದು ಬಹಳ ಸುಲಭವಾಗುವುದು.

ಯಾವುದೊಂದು ವಿಷಯವನ್ನು ಸಮ್ಯಕ್ ರೀತಿಯಲ್ಲಿ ಗ್ರಹಿಸಿ ಅದು ತನಗೆ ಎಷ್ಟರ ಮಟ್ಟಿಗೆ ತಿಳಿದಿದೆಯೆಂಬುದನ್ನು ಅರಿತುಕೊಳ್ಳುವ ಪ್ರಯತ್ನವೆಂದರೇ ವ್ಯಾಖ್ಯೆಯನ್ನು ಮಾಡಿ ನೋಡುವುದು. ಆದುದರಿಂದ ಸೋಲು-ಗೆಲವಿನ ಒಣ ಹೆಮ್ಮೆಯ ಹುಚ್ಚುಮಾತನ್ನು ಬದಿಗಿರಿಸಿ, ತನ್ನ ತಿಳಿವಿನ ನೆಲೆಯನ್ನು ಅರಿತುಕೊಳ್ಳಲು ವಿಷಯದ ವ್ಯಾಖ್ಯೆ ಮಾಡಿ ನೋಡಿಕೊಳ್ಳುತ್ತಿರಬೇಕು. ಈ ಪ್ರಯತ್ನದಲ್ಲಿ ವಿಷಯವ್ಯಾಪ್ತಿಯ ಕಲ್ಪನೆಯೂ ಬರುವುದು ಶಬ್ದಗಳಿಗೆ ಮೀರಿ ("ಶಿತ್ಯತಿಷ್ಠತ್ ದಶಾಂಗುಲಮ್") ನಿಲ್ಲುವ ಅರ್ಥದ (ಸತ್ಯದ ಭಾಗದ) ಸಂಸ್ಪರ್ಶನದ ಸಂಭವವು ತುಂಬ ಇದೆ.

ವ್ಯಾಖ್ಯೆಯನ್ನು ಮಾಡುವ ಪ್ರಯತ್ನಗಳ ಮೂಲಕವಾಗಿಯೆ ಮಾನವನ ಜ್ಞಾನದ ವಿಕಾಸವಾಗಿದೆ; ಮಾನವನಿಗೆ ತನ್ನ ಗೊತ್ತು ಗುರಿಯು ಅರಿವಾಗತೊಡಗಿದೆ.

ಮಾನವನೆಂದರೆ ಎರಡು ಕಾಲಿನ ಪ್ರಾಣಿ—ಎಂದು ಒಂದು ವ್ಯಾಖ್ಯೆ. ಚತುಷ್ಪಾದ ಪಶುವರ್ಗದಿಂದ ಭಿನ್ನನಾದ ತಾನು ಶ್ರೇಷ್ಠ, ಪಶುವರ್ಗದ 'ಆಹಾರ-ನಿದ್ರಾ-ಭಯ-ಮೈಥುನಕ್ಕಿಂತ ಮಿಗಿಲಾದ ಕರ್ತವ್ಯವು ಮಾನವನ ಪಾಲಿಗೆ ಇವೆ, ಎಂಬ ಧ್ವನಿಯು ಆ ವ್ಯಾಖ್ಯೆಯಿಂದ ಹೊರಹೊಮ್ಮುತ್ತಿದೆ.

ಬಾಲನಿಲ್ಲದ ಪ್ರಾಣಿ ಮಾನವ ಎಂಬ ವ್ಯಾಖ್ಯೆಯಲ್ಲಿಯೂ ಕೋತಿಯಂತೆ ತನ್ನ ಬಾಳಲ್ಲ; ಮಂಗತನದಲ್ಲಿಯೆ ಹಿಗ್ಗಿ ಹೆಮ್ಮೆಬಟ್ಟು ಕೊಂಬುವಲ್ಲಿ ಕೆಲಕಾಲ ಸುಖನೇನೋ ಉಂಟು; ಆದರೆ ಅಂತಹರು ಮುಂಗಮುಪಸತಿಯಾಗಿ ಕೆಲಹೊತ್ತು ಮೆರೆಯಬಲ್ಲರಾದರೂ ಹಗಲು ಕಳೆದು ಇರುಳು ಬರುತ್ತಲೆ ಮಿಡುಕಾಡುವ ಹೊತ್ತು ಬಂದೇ ಬರುತ್ತದೆ. ಎಂಬುದು ಲೋಕಾನುಭವದ ಸಂಗತಿಯಾಗಿದೆ. "ಹಗಲೆಲ್ಲ ಕೊಂಬೆಯಿಂದ ಕೊಂಬೆಗೆ ಹಾರಿ ಕುಣಿವ ಮಂಗನಿಗೆ, ಇರುಳು ಚಳಿಗಾಳಿಗಳಿಂದ ರಕ್ಷಿಸಿಕೊಳ್ಳಲು ಮನೆಯ ಆವಶ್ಯಕತೆಯು ತಿಳಿದು ಮರುದಿನ ಮನೆಕಟ್ಟುವ ನಿಶ್ಚಯನವನ್ನು ಮಾಡುತ್ತದೆ; ಆದರೆ ಬೆಳಗಾಗುತ್ತಲೆ ಅದು ಮತ್ತೆ ತನ್ನ ಮಂಗಾಟದಲ್ಲಿ ಮೈಮರೆಯುವುದು" ಎಂದು ಅನುಭವಿಕರಾದ ಹಿರಿಯರು ತಲೆ ತಲಾಂತರಗಳಿಂದ ತಮ್ಮ ಮಕ್ಕಳಿಗೆ ಹೇಳುತ್ತ ಬಂದಿದ್ದಾರೆ. ಗೃಹಶಿಕ್ಷಣದಲ್ಲಿ ಕಿವಿಗೆ ಬೀಳುವ ಇಂತಹ ಲೋಕಾನುಭವದ ಮಾತುಗಳೇ ಮಾನವನ ಮುನ್ನಡೆಯ ದಾರಿಯು ಬುತ್ತಿಯಾಗುತ್ತವೆ.

'ನಗುವ ಪ್ರಾಣಿ ಎಂದರೇ ಮಾನವನು' ಎಂಬ ಇನ್ನೊಂದು ವ್ಯಾಖ್ಯೆಯಿದೆ. ಇದರಲ್ಲಿಯೂ ಆ ವ್ಯಾಖ್ಯೆ ಕಟ್ಟುವವನ ಜೀವನದ ದೃಷ್ಟಿಯು ಸುವ್ಯಕ್ತವಾಗಿದೆ. ಸಂಸಾರ ಒಂದು ರಂಗಸ್ಥಳ. ಸುಖ-ಸಂಕಷ್ಟಾ ವಿನೋದದಿಂದ ನಾಲ್ಕು ದಿನ ಇರುವಷ್ಟರ ವರೆಗೆ ನಕ್ಕು ಕಳೆದು ಬಾಳುವುದು ಮನುಷ್ಯನ ಗುರಿ; ದ್ವೇಷಾಸೂಯೆಗಳಿಗೆ ಒಳಗಾಗಿ ಅಜನ್ಮ ಶತ್ರುಗಳ ಸುಳಿಯಲ್ಲಿ ನುಗ್ಗಾಗಿ ತಾನೂ ದುಃಖಿಯಾಗಿ, ಇನ್ನುಳಿದವರನ್ನೂ ದುಃಖದಲ್ಲಿ ನೂಕುವುದು ಅಧಮಕಾರ್ಯ. ಸುಪಾಸ್ಯ ಪದನರಾಗಿ ಜೀವನವನ್ನು ಆನಂದಮಯವಾಗಿ ಮಾಡಿಕೊಳ್ಳಬಲ್ಲವರೇ ಮಾನವರು; ಇವರಲ್ಲಿ ಮಾನವನ ವೈಶಿಷ್ಟ್ಯವಿದೆ. ಮಾನವನು ತನ್ನ ಜ್ಞಾನ-ಕಲೆಗಳನ್ನೆಲ್ಲ ಈ ಗುರಿಯನ್ನು ಮುಟ್ಟುವುದಕ್ಕಾಗಿಯೇ ಬಳಸಬೇಕೆಂದು ಮೇಲಣ ವ್ಯಾಖ್ಯೆಯಿಂದ ಸೂಚನೆ ದೊರೆಯುತ್ತದೆ.

'ಮನನಿದ್ದವನು ಮಾನವನು'. ವಿಚಾರಶೀಲನಾಗಿರುವುದು ಮನುಷ್ಯ ಸ್ವಭಾವ, ಎಂಬುದು ಈ ವ್ಯಾಖ್ಯೆಯ ಭಾವವಾಗಿದೆ. ಆದರೆ ಇದೂ ಬಹಳ ಸ್ಥೂಲವಾದ ವ್ಯಾಖ್ಯೆಯಾಗಿದೆ.

ಇದಕ್ಕಿಂತಲು ಇನ್ನೂ ಒಂದು ವ್ಯಾಖ್ಯೆ ಹೆಚ್ಚು ಸಮರ್ಪಕವಾಗಿದೆ: 'ನಿನ್ನೆಯಿಂದ ಅರಿವನ್ನು ಪಡೆದು, ನಾಳೆಯಲ್ಲಿ ಕಣ್ಣಿಟ್ಟು ಇಂದಿನಲ್ಲಿ ಅಡಿಯಿಡುವ ಪ್ರಯತ್ನ ಮಾಡುವ ಪ್ರಾಣಿಯೇ ಮಾನವ'.

ಈ ವ್ಯವಸ್ಥೆಯು ನನಗೆ ಹೆಚ್ಚು ಅರ್ಥಪೂರ್ಣವೆನಿಸುತ್ತಿದೆ. ಮಾನವನು ಅನುಭವದಿಂದ ಮನನವಿಕೆಯಾದುದನ್ನು ಕಡೆಗಣಿಸುವುದು ಎಂದೂ ಸಾಧ್ಯವಿಲ್ಲ. ಎರಡನೆಯವರು ಹೇಳಿದ್ದನ್ನು ಪುಸ್ತಕದಿಂದ ಓದಿದ್ದನ್ನು ಕಲಹೊತ್ತು ಮರುಸ್ಪೃಸಬಹುದು. ಆದರೆ ತಾನೇ ಮನಗಂಡುದನ್ನು ಮರೆತು ನಡೆಯಲಾರ.

ಯಾರಿಗೂ ತಮ್ಮ ಅಹಿತವಾಗಬೇಕೆಂಬ ಅಪೇಕ್ಷೆಯಿರುವುದು ಸಾಧ್ಯವಿಲ್ಲ. ಪ್ರತಿಯೊಬ್ಬನೂ ತನಗೆ ಒಳಿತಾಗಬೇಕೆಂದೇ ಹಂಬಲಿಸಿ ಹೋರೆಗೆ ತೊಡಗಿರುತ್ತಾನೆ. ಯಾವುದೊಂದು ಸಂಗತಿಯಿಂದ ತನ್ನ ಕಲ್ಯಾಣವಾಗದೆಂದು ಮನನವಿಕೆಯಾದ ಬಳಿಕ, ಅಂತಹುದನ್ನು ಬಿಟ್ಟು ಬಿಡಲು ಶಕ್ಯವಿದ್ದ ಪ್ರಯತ್ನಮಾತ್ರದೆ ಇರಲಾರನು.

ಇದರಂತೆ ತನ್ನ ನಿಚಾರ, ಸಂಕಲ್ಪ ಮತ್ತು ಕೃತಿಯು ಪರಿಣಾಮವು ಏನಾಗಬಹುದು? ಎಂಬುದರ ಲೆಕ್ಕಮಾಡದೆ ಇರುವುದೂ ಸಾಧ್ಯವಿಲ್ಲ. ಈ ಲೆಕ್ಕ ಹೇಗೆ ಮಾಡಬೇಕೆಂಬುದು ಗೊತ್ತಾಗದ್ದಕ್ಕೆ ಒದ್ದಾಟ ನಡೆದಿರುವುದೇ ಹೆಲವೆಡೆಗೆ ಕಾಣುತ್ತದೆ. ಈ ಲೆಕ್ಕ ಮಾಡುವ ಹದ ತಿಳಿದರೆ ತಿಳಿಯೂ ತಿಳಿದೂ ಯಾರೂ ಅಡ್ಡದಾರಿಗೆ ಹೋಗುವುದು ಸಾಧ್ಯವಿಲ್ಲ. ನಾಳೆಯ ಲೆಕ್ಕ ಮಾಡುವ ರೀತಿ ತಿಳಿಯದ್ದರಿಂದಲೇ ಗೊಂದಲಬಡಕನಾಗಿ ದೈವ, ಜ್ಯೋತಿಷಾದಿಗಳಿಗೆ ಮೊರೆ ಹೋಗುವುದುಂಟು. ಕೈಕಾಲುಗೆಟ್ಟು – ಕಂಗೆಟ್ಟು ಪಣೇಬರಹವೆಂದು ಒರಲುವುದು ಕಂಡುಬರುವುದು.

ಕಾರ್ಯಕ್ಕೆ ಮೊದಲು ಸಂಕಲ್ಪ. ಸಂಕಲ್ಪವೇ ಮೂಲಕಾರಣವಾಗಿ ಅದು ಮೊಳೆತು ಕಾರ್ಯದಲ್ಲಿ ಪರಿಣಮಿಸಿ ಬಳಿಕ ಅದರ ಇಷ್ಟಾನಿಷ್ಟ ಫಲಗಳು ದೊರೆಯುವುದುಂಟು. ಇಂತು ಕಾರಣ ಮತ್ತು ಕಾರ್ಯಗಳ ಜನ್ಯಜನಕ ನಿಕಟಸಂಬಂಧವುಂಟು. ಆದರೆ ಇದರ ನಿತ್ಯ ಜಾಗೃತವಾದ ಅರಿವು ಇದ್ದವರು ದೊರೆಯುವುದೇ ವಿರಳ. ಅಕ್ಷರಸ್ಥರನ್ನೂ ಸುಶಿಕ್ಷಿತರೆಂದು ಸಾಮಾನ್ಯವಾಗಿ ಬಗೆಯುವುದುಂಟು. ಅಕ್ಷರಸ್ಥರೇ ಏಕೆ, ಒಳ್ಳೊಳ್ಳೆ ಪದವೀಧರರು, ಲೇಖಕರೆಂದು ಖ್ಯಾತಿವೆತ್ತವರಲ್ಲಿ ಕೂಡ ಮಾನವನ ಸಂಕಲ್ಪನೇ ಅತನ ಹಣೆಬರಹವೆಂಬು ಮನನವಿಕೆಯಾದವರು ದೊರೆಯುವುದು ತೀರ ವಿರಳ. ಇದನ್ನೆ ಇನ್ನೊಂದು ಬಗೆಯಾಗಿಯೂ ಹೇಳಬಹುದು: ಶೀಲವೇ ದೈವ ಶೀಲವೆಂದರೆ ವ್ಯಕ್ತಿಯ ನಡೆನುಡಿ. ಆದುದರಿಂದ ಮಾನವನ ಇಂದಿನ ಕೃತಿಗಳೇ ಅತನ ನಾಳೆಯ ದೈವ.

ಇದು ನಿತ್ಯ ಅಬಾಧಿತವಾದ ಸಿದ್ಧಾಂತ. ಇದನ್ನೆ ನಿಯತಿ ಈ ನಿಯತಿನಿಯಮವನ್ನೇ ಅರಿಯದ ಅಜ್ಞಾನಿಗಳ ಮಾತಂತಿರಲಿ; ಇದು ವಿಚಾರದಲ್ಲಿ ಸ್ಥೂಲವಾಗಿ ಹೊಳೆದ ಬಳಿಕವೂ ಅದಕ್ಕನುಸರಿಸಿ ತಮ್ಮ ಸಂಕಲ್ಪ ಹಾಗೂ ಕೃತಿಗಳನ್ನು ತಿದ್ದಿಕೊಳ್ಳದ ದುರ್ದೈವಿಗಳಿಗೆ ಏನೆನ್ನಬೇಕು? ದೈವದ ಈ ರಹಸ್ಯವು ಪೂರ್ವ ವಯಸ್ಸಿನಲ್ಲೇ ಜನಕ್ಕೆ ತಿಳಿದಷ್ಟು ಲೇಸು. ಏಕೆಂದರೆ ಆಚಾರ-ವಿಚಾರಗಳನ್ನು ತಿದ್ದಿಕೊಳ್ಳುವ ಶಕ್ತಿಯು ವಯೋಮಾನದಂತೆ ಕ್ಷೀಣವಾಗುತ್ತ ಹೋಗುತ್ತದೆ. ಆದರೆ ಪೂರ್ವಸಂಕಲ್ಪ, ಕೃತಿಗಳ ಕಹಿಫಲಗಳನ್ನು ಅನುಭವಿಸುವ ಮುಧ್ದರ ಪ್ರಸಂಗವಲ್ಲಿಯೂ ತಾಳ್ಮೆಯಿಂದ ವೇಲಣ ಅಬಾಧಿತ ಸಿದ್ಧಾಂತವನ್ನು ನೆನಪಿನಲ್ಲಿ ಇಟ್ಟುಕೊಂಡು ಮುಂದಿನ ಸಂಕಲ್ಪ ಕೃತಿಗಳ ಬಗೆಗೆ ಎಚ್ಚರಪಡುವ ಪ್ರಸಂಗಾವಧಾನದಿಂದ ನಡೆದುಕೊಂಡರೂ ಪ್ರಾಪ್ತಶಂಕುಗಳ ನೆಳವಿನೊಪಗಿಂದ ಕೆಲಮಟ್ಟಿಗಾದರೂ ಹೊರಬರುವ ಆಶೆಯು ಇಲ್ಲದಿಲ್ಲ.

ನಿನ್ನೆಯಿಂದ ಬಂದ ಅನುಭವದಿಂದ ಬಂದ ತಿಳಿವಳಿಕೆಯನ್ನು ನಾಳೆಯ ಭವ್ಯಜೀವನದ ಗುರಿಗೆ ಪೋಷಕವಾಗುವಂತೆ ಬಳಸಿಕೊಂಡು ಆ ಸಂಯಮ, ವಿಚಾರದಿಂದ ಇಂದಿನ ಹೆಜ್ಜೆಯಿಡುವ ಪ್ರಯತ್ನ ಮಾಡುವುದು ಮಾನವನ ಸ್ವಭಾವವೇ ಆಗಿದೆ.

ಆದರೆ ವೈಚಾರಿಕಗೊಂದಲವುಂಟಾಗಿ, ಅತನ ಈ ಪ್ರಯತ್ನದಲ್ಲಿ ಕೆಲವೊಮ್ಮೆ ಶೈಥಿಲ್ಯ ಅಥವಾ ಪ್ರಮಾದಗಳು ಆಗುತ್ತಿರುವುದುಂಟು. ಈ ಬಗೆಯ ವೈಚಾರಿಕಗೊಂದಲಕ್ಕೆ ಮಾನವನ ಭಾಷೆಯು ಬಹುಮಟ್ಟಿಗೆ ಕಾರಣವಾಗುತ್ತದೆ. ತನ್ನ ವಿಚಾರಗಳನ್ನು ಸುಸ್ಪಷ್ಟಗೊಳಿಸಿಕೊಳ್ಳಲು ನಿರ್ಮಿಸಿಕೊಂಡ ಭಾಷೆ, ಆದರೆ, ಅದುವೆ ರೂಢಿಯಿಂದ ಅರ್ಥಭಾವಶಕ್ತಿಯನ್ನು ಕಳೆದುಕೊಂಡು ಅನರ್ಥಕಾರಿಯಾಗುತ್ತದೆ.

ಶಬ್ದಗಳ ಅರ್ಥದ ದೂರಗಾಮಿಯಾದ ಪರಿಣಾಮಗಳ ಎಚ್ಚರ ವಿಲ್ಲದೆ ಅವನ್ನು ಬಳಸುವುದು ಕಂಡುಬರುತ್ತದೆ. ಈ ಕಾರಣದಿಂದಲೆ ಶಬ್ದಕ್ಕೆ ಮಂತ್ರಶಕ್ತಿಯುಂಟೆಂದು ಪ್ರಾಜ್ಞರು ಭಾವಿಸಿದ್ದಿರಬೇಕು. ಅಡಿಗಡಿಗೆ ಹೆರವರ ವಾಕ್ಯಗಳಿಗೆ, ಗಾದೆಗಳಿಗೆ, ಪತ್ರಿಕೆಗಳ ಕೂಗಿಗೆ, ಬೀದಿಗಳೊಳಗಿನ ಘೋಷಣೆ-ಜಯಕಾರಕ್ಕೆ ಕಿವಿಗೊಡುವವರ ವಿಚಾರ ಶಕ್ತಿಯು ನಷ್ಟವಾಗುವುದು. ತರ್ಕಬದ್ಧವಾಗಿ ಸಮಂಗತ ವಿಚಾರ ಮಾಡುವ ಶಕ್ತಿಯು ಕ್ಷೀಣವಾಗುವುದು. ಯಾವುದೊಂದು ವಿಷಯದ ಪೂರ್ವೋತ್ತರಗಳನ್ನೆಲ್ಲ ಕೂಲಂಕಷವಾಗಿ ನಿರ್ವಿಶಿಸಿ ಸರಿಯಾದ ನಿರ್ಣಯಕ್ಕೆ ಬರುವ ಸಾಮರ್ಥ್ಯವನ್ನು ಪಡೆಯುವುದು ತನ್ನ ಪ್ರಥಮ ಕರ್ತವ್ಯವೆಂದು ಬಗೆದು, ಆ ನಿಟ್ಟಿನಲ್ಲಿ ನಿತ್ಯಸಾಧನೆಯನ್ನು ಇಟ್ಟುಕೊಳ್ಳದೆ ಇರುವುದೇ ಮಾನವರು ದೈವವಾದಿಗಳಾಗಿ ಕಂಗೆಡುವುದಕ್ಕೆ ಮುಖ್ಯಕಾರಣವಾಗಿದೆ.

ನಿನ್ನೆ ಬಿತ್ತಿದ ಬೆಳೆಯನ್ನು ಇಂದಿನ ಅನ್ನ ಅದಷ್ಟು ಉಣ್ಣುವುದು ನಮ್ಮ ದೈವಲಿಖಿತ ನಿಜ. ಆದರೆ ಈ ಪಣೆಬರಹ ಬರಕೊಂಡವರು ಬಹುಮಟ್ಟಿಗೆ ನಾವೇ. ಅದು ಹಿಮುದಾಯ್ತು ಎಂದು ನಾಳೆಯು ಬಗೆಗಾಪರೂ ಎಚ್ಚರವೇಕಪ್ಪೇ? ಸಿಂಧು, ಬ್ರಹ್ಮಪುತ್ರ ನದಿಗಳಂತಹ ಹೆದ್ದೊರೆಗಳ ಹರವ ಬಗೆಯನ್ನು ಲೆಕ್ಕದಿಂದ ಸಿದ್ಧರಿಸಿ ಅವನ್ನು ತಡೆಗಟ್ಟಿ ಜನತೆಯ ಲಾಭಕ್ಕೆ ಉಪಯೋಗಿಸಿಕೊಳ್ಳಲು ಮನುಷ್ಯನು ಸಮರ್ಥನಾಗಿದ್ದಾನೆ. ಇದೇ ತೆರನಾಗಿ ಹಿಂದಿನ ಕರ್ಮಪ್ರವಾಹದ ಸಾಮಾನ್ಯ ಲೆಕ್ಕಮಾಡಿ ಅದರ ಗತಿಯನ್ನು ಅರಿತುಕೊಂಡು, ನಾಳೆಗಾಗಿ ಅದನ್ನು ವಿಶಿಷ್ಟ ರೀತಿಯಲ್ಲಿ ತಿರುಗಿಸಿಕೊಳ್ಳಬಷ್ಟು ಮಾನವನು ಮಂದಬುದ್ಧಿಯಾಗಿಲ್ಲವೆಂದೇ ಜಗತ್ ಇತಿಹಾಸವು ಸಾಕ್ಷ್ಯ ಹೇಳುತ್ತಿದೆ.

ಅತಿಥಿ ಸಾರ್ವಭೌಮ

(ಒಂದು ನಗೆಯಾಟ)

ಪಾತ್ರ

ರಾಮಣ್ಣ	....	.... ಯಜಮಾನ
ಹಣಮಂತರಾಯ	....	.... ರಾಮಣ್ಣನ ಗೆಳೆಯ
ದುರ್ವಾಸ	....	.... ಅತಿಥಿ
ಶಾಂತಿ	....	.... ದುರ್ವಾಸನ ಹೆಂಡತಿ

೧

[ರಾಮಣ್ಣನ ಮನೆ, ರಾಮಣ್ಣ, ಶನಿವಾರ ಎಂದು ಕೆಲಸದಿಂದ ಬೇಗ ಮನೆಗೆ ಬಂದಿದ್ದಾನೆ. ಹಣಮಂತರಾಯ ಹರಟೆ ಕೊಚ್ಚಲು ಬರುತ್ತಾನೆ.]

ಹಣ—ಯಾಕೊ ರಾಮಣ್ಣ, ಒಬ್ಬನೇ ಏನು—ಆಲೋಚನಿ ನಡಸೀದಿ? ಚಿಂತಾಕ್ರಾಂತನಾಗಿ ಕೂತಿದ್ದೀಯಲ್ಲ, ಮಿತ್ರಾ? ಅಂಥ ಸಂಕಟೇನು—ಬಂದಽದೊ?

ರಾಮು—ಬಂದಽದ, ಬಾರಪಾ ಮಾರಾಯ. ಆಫೀಸಿನಿಂದ ಬರೋ ಪುರಸತ್ತಿಲ್ಲದ ಎದೀಗೆ ಗುಂಡು ಹೊಡೆಧಾಂಗ ಪತ್ರ!

ಹಣ—ಎಲ, ಎಲ! ಯಾರದು? ಏನು?

ರಾಮು—ಅದನ್ನ ಕೇಳು ಬ್ಯಾಡ. ಬರೋದು ಅಂದರ ಅತಿಥಿಗಳು ಬರೋದಲ್ಲ ಪತ್ರ. ಹಾಂಗ ಮೃತ್ಯುಪತ್ರ ಸಹಿತ ನಮಗ ಯಾರವೂ—ಬರೋದಿಲ್ಲ ನೋಡು!

ಹಣ—ಅಲ್ಲೊ. ಈ ಅತಿಥಿಗಳ ಉಪಟಳಕ್ಕ ಬ್ಯಾಸತ್ತಽ ನೀ ಮತ್ತ ಈಗ ಊರಹೊರಗ ಮನೀ ಮಾಡಿದಿ. ಮನಿ ಬದಲು ಮಾಡಿದ್ದು ಸಹಿತ ಯಾರಿಗೂ ತಿಳಿಸಲಿಲ್ಲ.....

ರಾಮು—ಇಲ್ಲ. ಅಷ್ಟಽ ಯಾಕ, ಪೋಸ್ಟಮನ್‌ಗ ಸಹಿತ ನಾ ಹೊಸಾಮನಿ ಅಡ್ರೆಸ್ ಕೊಟ್ಟಿಲ್ಲ. ಅವರೂ ಆ ಮಗ ಅಧಿಕ-ಪ್ರಸಂಗತನ ಮಾಡಿ ಪತ್ರ ಇಲ್ಲಿಗೇ ಕಳಿಸ್ಯಾನ! ನನಗ್ಯಾಕೂ ಇತ್ತೀಚೆಗೆ ಇದೊಂದು ಶಾಕ್ ಕೂತ್ಽಾಂಗs ಆಗೇದ! ಮತ್ತ ನನಗನಸ್ತದ: ನಾ ಸಾಯೋದಽ ಅದರ, ಉಳಿದ ಯಾವ ತೊಗದಿಂದಲೂ ಸಾಯೋದಿಲ್ಲ; ಈ ಅತಿಥಿಗಳs ಕೊನೀಗೆ ನನ್ನ ಪ್ರಾಣ-ಹರಣ ಮಾಡ್ತಾರ ಅಂತ!

ಹಣ—ಯಾರಾರೇ ಹುಚ್ಚ ಅಂದಾರು!

ರಾಮು—ಇಲ್ಲ, ನಿನಗಿನ್ನೂ ಅದರ ಕಲ್ಪನಾ ಇಲ್ಲ. ಇತ್ತೀಚೆಗೆ ನನಗ ಬರೋ ಪತ್ರಗಳನ್ನ ನಾ ಓದೋದs ಬಿಟ್ಟುಬಿಟ್ಟೀನಿ. ತಗ್ದು ಯಾಕ, ಊರೊಳಗ ಹೊರಟಾಗ ಯಾವನs ಹೊಸ ಮುಖ ಕಣ್ಣಿಗೆ ಬಿತ್ತು ಅಂದರ, ನನ್ನ ಕಡೆಗೇ ಅತಿಥಿ ಬಂದರೇನೊ ಅಂತನಿಸಿ, ನಾ ಮಾರೀನs ತಪ್ಪಸ್ಕೀನಿ! ಅಲ್ಲೊ, ಈ ಅತಿಥಿಗಳಂದರಾದರೂ ಎಷ್ಟು ನಮೂನಿಬರ್ತಾರಂತೀ? ಸ್ನೇಹಿತ-ಅತಿಥಿಗಳು, ಆಸ್ತ-ಅತಿಥಿಗಳು, ಪ್ರವಾಸಿ ಅತಿಥಿಗಳು, ಪರೀಕ್ಷೆಯ ಅತಿಥಿಗಳು, ವರಾನ್ವೇಷಣದ ಅತಿಥಿಗಳು, ಸಭಾ ಸಮ್ಮೇಲನದ ಅತಿಥಿಗಳು, ಚ್ಯೆನೀ ಅತಿಥಿಗಳು, ದೇಶಭಕ್ತ ಅತಿಥಿಗಳು, ಒಂದಲ್ಲ ಎರಡಲ್ಲ, ಕೆಲವರು ದೂಮುಕೇತುನ್ಹಾಂಗ ಒಮ್ಮೆಲೇ ಮೂಡ್ತಾರ; ಕೆಲವರು ಕಟ್ಟಿನ ಜ್ವರಧಾಂಗ ಸುಟ್ಟು ಹಿಡಿದs ಕೂತುಬಿಡ್ತಾರ!

ಹಣ—ಈಗ ಬರೋವರು ಯಾವ ಸದರಿನೊಳಗ ಬರ್ತಾರಂತೀ ನೀನು?

ರಾಮು—ಈ ಪತ್ತಾನಂ ಓದು. ಫಾಬರಿಯಿಂದ ನಾ ಅದನ್ನ ನೆಟ್ಟಗ ಓದಲೇ ಇಲ್ಲೀನಪಾ! ಫಟ್ಯಾಗೇ ಓದಿಬಿಡು. ನನಗೂ ಅದರ ಮಜಕೂರು ನೆಟ್ಟಗ ಇನ್ನೊಮ್ಮೆ ತಿಳೀಲಿ.

ಹಣ—ಓದಲ್ಯಾ? ಕೇಳು ಹಂಗಾರ. (ಪತ್ರವನ್ನು ತೆರೆದು ಓದುತ್ತಾನೆ.) 'ಪ್ರಿಯ ರಾಮರಾವ.

ಬಹಳ ದಿವಸಗಳಲ್ಲಿ ನಿನ್ನಿಂದ ಪತ್ರಿಲ್ಲ. ನೀನು ಬ್ಯಾರೆ ಮನೀ ಹಿಡಿದೀದಿ ಅಂತ ತಿಳೀತು. ಬದಲಾದ ವಿಳಾಸ ತಿಳಿಸಲಿಲ್ಲ. ಅಂತಃ ಈಗ ಹಳೆ ಅಡ್ರೆಸ್ಸಿಗೇ ಕಾಗದಾ ಬರೆದೀನಿ. ಹೊಸತಾಗಿ ಮದಿವ್ಯಾದ ನನ್ನ ಗೆಳೆಯ ಶ್ರೀ. ದುರ್ವಾಸ ದೇಶಪಾಂಡೆ, ತನ್ನ ಹೆಂಡತಿಗೆ ಊರು ತೋರಿಸಬೇಕು ಅಂತ, ನಾಳೆ ರಾತ್ರೀ ಗಾಡಿಯಿಂದ ಅಲ್ಲಿಗೆ ಬರ್ತಾನ. ಅವನ್ನ ಸ್ಟೇಶನ್‌ನಿಂದ ಕರಕೊಂಡು ಹೋಗಿ, ನಾಲ್ಕು ದಿವಸ ಮನ್ಯಾಗಟ್ಟುಗೊಂಡು, ಎಲ್ಲಾ ವ್ಯವಸ್ಥಾ ಮಾಡಬೇಕು. ಅವರಿಗೆ ಸರಿಯಾಗಿ ಆದರೋಪಚಾರ ಮಾಡು ಅಂತ ನಿನಗ ಬರಿಯೋ ಕಾರಣೆಲ್ಲ. ನಿಮ್ಮೂರಿಗೆ ಬಂದರ ಎಲ್ಲಿ ಇಳೀಬೇಕು—ಅಂತ ಅವರು ಯೋಚನಿಯೊಳಗಿದ್ದಾಗ, ನಾನs ನಿನ್ನ ಹೆಸರು ಹೇಳಿಕಳಿಸೀನಿ ಅಯತಾ ಹೊತ್ತಿಗೆ ಪತ್ರ ಬರದದ್ದಕ್ಕ ಕ್ಷಮಿಸು. ಅತ್ತಿಗ್ಗೆ ನಮಸ್ಕಾರ, ಅರನಿಮಿದಗ ಆಶೀರ್ವಾದ.

ನಿನ್ನ
ನರಸಿಂಹ ಇನಾಮತಿ

ಅಲ್ಲಪಾ ರಾಮಣ್ಣ, ಈ ನಿನ್ನ ಜೀವಶ್ಚ ಮಿತ್ರ ನರಸಿಂಹ, ತನ್ನ ಕಂಠಶ್ಚ ಮಿತ್ರನ್ನ ಕಳಿಸಿ, ನಿನ್ನ ಕೊರಳಿಗೆ ಉರ್ಲು ಮಾಡೋದು ಅಂದರ, ಎಲ್ಲೀ ನ್ಯಾಯ?

ರಾಮು—ಮತ್ತ, ಈ ಮಗ ನರಸಿಂಹ ಇಷ್ಟು ಹಕ್ಕೀಲೆ ಈಗ ಪತ್ರ ಬರೀತಾನಲ್ಲಾ! ಇವನ ಮನೀಗೇ ನಾ ಅಪರೂಪಧಾಂಗ ಒಮ್ಮೆ ಅತಿಥಿ ಅಂತ ಹೋದರ, ನನ್ನ ಮಾರೀ ನೋಡಿ, ಹೆಂಡತೀನ್ನ ಹೊರಗ ಕೂಡಿಸಿಪ, ಲುಚ್ಚಾ!

ಹಣ—ನುಂದ?

ರಾಮು—ನುಂದೇನು? ಎಲ್ಲರೂ ಕೂಡೇ ಖಾನಾವಳೀಗೆ ಹೋದಿವಿ, ಮತ್ತ ಅದರ ಬಿಲ್ಲು ನಮಗs ಬಡಕೊಂಡಿತು!

ಹಣ—ಅಲ್ಲೊ ರಾಮಣ್ಣ, ಈಗ ಆ ನಿನ್ನ ಗೆಳೆಯನ ಗೆಳೆಯ ದುರ್ವಾಸ ಬರ್ತಾನಲ್ಲಾ, ನೀನೂ ಹೀಂಗ, ಮಾಡಿ ಹಿಂದಿನ ಸೇತು ತೀರಿಸು ಅಂತೀನಿ.

ರಾಮು—ಹೋಗೋ ನಿನ್ನ, ನನ್ನ ಹೆಣ್ತಿ ಇಂಥಾವೆಲ್ಲಾ ಮಾಡಲಿಕ್ಕ ತಯಾರಾಗೋದಿಲ್ಲ, ಮಾರಾಯ!

ಹಣ— (ತುಸು ಯೋಚಿಸಿದಂತೆ ಮಾಡಿ) ಒಂದು ಯುಕ್ತಿ ಹೇಳ್ತೀನಿ, ಮಾಡ್ತಿಯೇನು ?

ರಾಮು— ಏನು ? ಈಗ ಹೇಳಿದಂಥಾದು ಹುಚ್ಚುಚ್ಚಾರ ಏನಾರೇ ಹೇಳಬ್ಯಾಡ.

ಹಣ—ಉಂಹುಂ. First Class ಯುಕ್ತಿ ! ಈ ದುರ್ವಾಸ ನಿನ್ನ ಎಂದಾರೆ ನೋಡ್ಯಾನೇನು ?

ರಾಮು—ಎಲ್ಲೀದೊ ? ಈ ಕಾಲದಾಗ ಈ ಹೆಸರಿನವರು ಇರ್ತಾರಂಬೋದು ಸಹಿತ ಇದು ಮೊದಲನೇ ಸಲ ಕೇಳೋದು ನಾನು.

ಹಣ—ಇದೊಂದು ಚೆಲೋನು ಆತು. ಇದು ನೋಡು ಹೀಂಗ ಮಾಡು ಹಂಗಾರ: ಆ ದುರ್ವಾಸ ಇಂದ ರಾತ್ರೀಗಾಡಿಗೆ ಬರ್ತಾನಲ್ಲ, ನೀ ಹೋಗಬ್ಯಾಡ ಸ್ಟೇಶನಕ್ಕ.

ರಾಮು—ಮತ್ತ ? ಅವಗ ಮನಿ ಗೊತ್ತಿಲ್ಲ, ಫಜೀತಿ ಆಗೋದು !

ಹಣ—ಆಗಲಿ.

ರಾಮು—ಛೆ, ಛೆ. ಬೇಕಂತ ಮಾಡಿಧಾಂಗಾಗ್ತದ.

ಹಣ—ಹಂಗಾರ ನಿನ್ನ ಬದಲಾಗಿ ನಾ ಹೋಗ್ತೀನಿ.

ರಾಮು—ಹೋಗಿ ?

ಹಣ—ರಾಮಣ್ಣ ಊರಾಗಿಲ್ಲ ಅಂತ ಹೇಳಿಬಿಡ್ತೀನಿ

ರಾಮು— ನಾ ಊರಾಗಿಲ್ಲದಿದ್ದರೂ ಮನಿ ಇರ್ತಾದಲ್ಲಾ ಅಂತ ಮನೀಗೇ ಬಂದ ಅಂದರ, ನಮ್ಮ ಸುಳ್ಳು ಹೊರಬೀಳೋದು.

ಹಣ—ಅದೂ ಖರೇನ ! ಒಂದೊಂದು ಅಂಥ ಜಿಗಟು ಆಸಾಮೀನಕ ಇರ್ತಾನ ! ನೀವು ಬೇಕಾದ ಯುಕ್ತಿ ಮಾಡಿರಿ, ಎಲ್ಲಕ್ಕೂ ಮೀರಿ ನಿಂತರ ಏನು ಮಾಡೋದು ? ಹಂಗಾರ, ಇದು ನೋಡು, ನಾ ರಾತ್ರೀಗಾಡಿಗೆ ಹೋಗೋ ಹಾಂಗ ಹೋಗ್ತೀನೆನಪಾ ! ಮತ್ತ ರಾಮಣ್ಣ ಊರಾಗಿಲ್ಲ ಅಂತನೂ ಕೇಳ್ತೀನಿ. ಆಷ್ಟಕ್ಕೂ ಅವ ಇಳಕೊಂಬೋ ವಿಚಾರ ಬ್ಯಾರೇ ಮಾಡಿದ, ಪೀಡಾನಕ ಪರಿಹಾರಾತ್ಯ. ಮತ್ತ ಜಗೀನಕ ಬಿದ್ದ, ಅವನ್ನ ಮನೀಗೆ ಕರಕೊಂಡು ಬರ್ತೀನಿ, ನೀನೂ ಒಬ್ಬ ಅತಿಥಿ ಅಂತಽ ಹೇಳಿಬಿಡ್ತೀನಿ ಮತ್ತ ! ನೀನೂ ಅತಿಥಿ ಹಾಂಗ, ಬತಾವಣಿ ಮಾಡು ಆತ್ಯ.

ರಾಮು—ಮತ್ತ ಈಕಿ, ಅರವಿಂದ ? ಅವರ ಗತಿ ಏನು ?

ಹಣ—ಅನಕಾತ ನಾಲ್ಕಾರು ದಿವಸ ಅತ್ತಿಗಿ-ಅರವಿಂದನ್ನ ನಮ್ಮ ಮನೀಗೆ ಕಳಸು. ಅತ್ತಿಗೀನೂ ಬ್ಯಾಸರಾ ಕಳಕೋಬೇಕು ಅಂತಿದ್ದು. ಆಯತಾ ಸಾಧಸ್ತಽದ.

ರಾಮು—ಹೌದು ನೋಡು. ಈ ಹೆಂಚಿಕೆ ಒಂದು ಮೋಜಽ ಆದ, ಹನಮಣ್ಣ ! ಒಪ್ಪಿತು. ಒಂದು ಪ್ರಯೋಗ ಮಾಡಿ ನೋಡೋಣಂತ. ಲಾಗೂ ಬಿತ್ತು, ಗುಣಾನಽ ಆತ್ಯ.

× × × ×

[ಅದೇ ಗಾಡಿ ಬಂದಿದೆ. ಸ್ಲ್ಯಾಟ್ ಫಾರ್ಮಿನ ಮೇಲೆ ಹಣಮಂತರಾಯ ದುರ್ವಾಸ ದಂಪತಿಗಳನ್ನು ಅನುಮಾನದಿಂದ ಗುರುತಿಸಿ ಮಾತನಾಡಿಸುತ್ತಾನೆ]

ಹಣ—ನಮಸ್ಕಾರ. ತಾವು ದುರ್ವಾಸ ದೇಶಪಾಂಡೆಯವರೇನು ?

ದು—ಹೌದು. ನಮಸ್ಕಾರ. ತಾವು ಯಾರು ? ರಾಮರಾಯರೇನು ?

ಹಣ—ಅಲ್ಲ, ನಾನು ರಾಮಣ್ಣನ ಸ್ನೇಹಿತ ಹನಮಣ್ಣಾ. ನೀವು ಬರೋ ಕಾಗದ ರಾಮಣ್ಣನ ಮನೀಗೆ ಬಂದಿತ್ತು. ರಾಮಣ್ಣ ಊರೊಳಗಿಲ್ಲ. ನಾಲ್ಕು ದಿವಸದ ರಜಾದ ಮ್ಯಾಲ ಹೋಗ್ಯಾನ.

ದು—ಎಲಾ ಇವರ! ಅವರ ಮನಿಯವರಿರಬಹುದಲ್ಲ ?

ಹಣ—ಅವರೂ—ಇಲ್ಲ. ಎಲ್ಲಾರೂ ಹೋಗ್ಯಾರ.

ದು—ಹಂಗಾರ....ಏನು ಮಾಡಬೇಕು? (ಯೋಚಿಸಿ) ಹೀಂಗೆ ಮಾಡರಿ. ನಮಗ ಅವರ ಮನೀನಕ ತೋರಿಸಿ ಬಿಡ್ರಿ. ಅದೆಲ್ಲಿ ಬ್ಯಾರೆ ಹೋಗೋದಿಲ್ಲಽ ? ರಾಮರಾಯರು ನಮ್ಮ ನರಸಿಂಹ ಇನಾಮತಿಯ ಕೇವಲ ಸ್ನೇಹಿತರು; ಅಂದರ ನಮಗೂ ಅಷ್ಟಽ ಸ್ನೇಹಿತರು ಅನ್ರಿ. ಅವರು ಬರೋವರಿಗೂ ನಾವು ಅವರಲ್ಲೇ ಇರ್ತೀವಿ. ಅದಕ್ಕೇನು ? ಮೂಲಕರು ಬರೋವರಿಗೂ ಮನೀ ಕಾಯ್ತಿರ್ತೀವಿ. ದಿವಸಕಾಲ ಕಟ್ಟುವು ನೋಡ್ರಿ !

ಹಣ—ಅದಕ್ಕೇನಡ್ಡಿಯಿಲ್ಲ ಬಿಡ್ರಿ ! ಅದರ ಈಗೊಬ್ಬರು ಅತಿಥಿಗಳು ಅವರ ಮನ್ಯಾಗ ಇದ್ದಾರ ! ಅದಕ್ಕಽ ಹ್ಯಾಂಗ ಮಾಡೋದು ?

ದು—ಹೀಂಗಽ ? ಅಂದಮ್ಯಾಲಂತೂ ಬಹಳಽ ಚೆಲೋ ಆತ್ಯು. ನಾವೂ ಅವರ ಜತೀಗೆ ಇರಲಿಕ್ಕೆ ಯಾವ ಹರಕತ್ತೂ ಇಲ್ಲ. ಏ ಶಾಂತೀ ! ಶಾಂತೀ !

ಶಾಂ —ಓ ಽಽ

ದು—ನಡಿ, ರಾಮಣ್ಣನ ಸ್ನೇಹಿತರು ಬಂದಾರ ನಮ್ಮನ್ನ ಕರೀಲಿಕ್ಕೆ. ರಾಮಣ್ಣನವರ ಮನಿ ಖಾಲೀನ. ಅದ ಅಂತ ! ನೆಟ್ಟಗಾತಿಲ್ಲೊ ? ಹನಮಣ್ಣ, ಈಗಿದ್ದ ಅತಿಥಿಗಳು ಒಬ್ಬರಽ ಇದ್ದಾರೊ ?

ಹಣ—ಒಬ್ಬರಽ ಇದ್ದಾರ.

ದು ಹೆಸರು ?

ಹಣ— ಬಲರಾಮಣ್ಣ ಅಂತ. ರಾಮಣ್ಣ ಅಂದರೂ ನಡೀತದ.

ದು—ಅಡ್ಡಿ ಇಲ್ಲ. ನಿಮ್ಮನ್ನ ನೋಡಿದರ ನಮಗ ರಾಮಣ್ಣ ಇಲ್ಲ ಅಂತ ಅನಿಸಽವೊಲ್ಲದು ! ಹನಮಣ್ಣ, ಇದಷ್ಟು ಹೋಲ್ಡಾಲ್ ತೊಗೋತೀರೇನು ? ಸುಮ್ಮಗ ಹಮಾಲಗ್ಯಾಕ ದಂಡ ಬಡೀಬೇಕು ? ನನ್ನ ಕೈ ತೆರವಿಲ್ಲ. ಒಂದು ಕೈಯಾಗ ಕೊಡಿ, ಇನ್ನೊಂದು ಕೈಯಾಗ ಧೋತರದ ಚುಂಗೂ ಇದ !

ಹಣ—ತಥ್ರಿ, ರಾಯರ. ನಿಮ್ಮ ವಜ್ಜಾ ಹಗುರು ಮಾಡಬೇಕಂತೇ ನಾ ಬಂದೀನಿ ! ಮತ್ತ, ಟಾಂಗಾ ಮಾತಬೇಕೂ ?

ದು— ಇನ್ನ ನಮ್ಮನ್ನ ಯಾವುದೂ ಕೇಳಽ ಬ್ಯಾಡರಿ, ಹನಮಣ್ಣಾ. ಅದನ್ನೆಲ್ಲ ನೀವಽ ನೋಡ್ರಿ. ಮನಿ ಬಹಳ ದೂರಿತ್ತು, ಟಾಂಗಾ ಮಾಡ್ರಿ. ಪೈಲೆರಡು ಮೈಲಿನೊಳಗಿದ್ದರೇನು ಕಾರಣಿಲ್ಲ. ಅಷ್ಟಽ ನಡದಷ್ಟಽ ಗಂಟು ಹಿಡಿದ ಕಾಲು ಸಡಿಲಾದಾವು. ಮತ್ತ ಒಂದು ಹಿಡಿ ಅನ್ನಾನೂ ಹೆಚ್ಚು ಹೋದೀತು.

ಹಣ— ಹೋಗದೇನು, ರಾಯರ! ನಡದರ ಹೊಟ್ಟ ಚೆಲೋ ಹಸೀತದ! (ತನ್ನಷ್ಟಕ್ಕೆ) ಎಲಾ ಲುಚ್ಚಾ! ಬರೋ ಪುರಸತ್ತಿಲ್ಲದ ನನ್ನ ಹಮಾಲನ್ನ ಮಾಡಿ ಹೋಲ್ಡಾಲ್ ಹೊರಿಸಿದ್ದಲ್ಲ!

× × × ×

೩

[ದುರ್ವಾಸ ದಂಪತಿಗಳು ರಾಮಣ್ಣನ ಮನೆಯಲ್ಲಿ ತಳ ಊರಿದ್ದಾರೆ. ರಾಮಣ್ಣ ತನ್ನ ಮನೆಯಲ್ಲಿಯೇ ಪರಕೀಯನಂತಿದ್ದಾನೆ. ಈಗ ರಾಮಣ್ಣ ಹೋಗಿದ್ದಾನೆ. ದುರ್ವಾಸ, ಅವನ ಹೆಂಡತಿ ಇಬ್ಬರೇ ಮನೆಯಲ್ಲಿದ್ದಾರೆ.]

ದು— ಶಾಂತಿ, ವ್ಯಾಟ್ಯಾಗ ಕೋಗ್ತಿನಿ, ಏನಾರ ತರಬೇಕೇನು?

ಶಾಂ— ಅಂತೇನು ಕೇಳ್ತಿರಿ? ನುನ್ಯಾಗ ಖಾರಪುಡಿ ಹೊರ್ತು ಏನೂ ಉಳಿದಿಲ್ಲ. ಎಲ್ಲಾ ಝಾಡಿ!

ದು— ಅಂದರ ಇವತ್ತಿನಿಂದ ನಾವು ಇಲ್ಲೆ ಕೈಖರ್ಚು ಮಾಡಿ ತಿಂಬೋ ಪ್ರಸಂಗ ಬಂತು ಅನ್ನು! ಹರಿಹರಿ! ಏನು ವ್ಯಾಳ್ಯಾ ತಂದೆವಾ! ಎಲ್ಲಾ ಸ್ಪಷ್ಟವಾಗ ಆಗ್ತದ ಅಂತ ತಿಳಿದಿದ್ದಿವಿ. ಈಗ ಸ್ವಂತ ಖರ್ಚು ಮಾಡೋ ಪ್ರಸಂಗ ಬಂತಲ್ಲ! ರಾಮಣ್ಣ ಉದ್ದರೀ ತರೋ ಅಂಗಡಿ ಸಹ ಗೊತ್ತಿಲ್ಲ. ಮತ್ತ ನಮ್ಮ ಪುಣ್ಯವಂತ ಸರಕಾರ, ರೇಶನ್ ಕೂಡ ಉದ್ದರೀ ಕೊಡೋದಿಲ್ಲ.

ಶಾಂ— ದೇವರು ರಾಮಣ್ಣನ್ನಽ ಊರಾಗ ಇರೋಹಾಂಗ ಮಾಡಿದ್ದರ ಎಷ್ಟು ಭಂಗಾರಾಗ್ತಿತ್ತು! ಇರಲಿ, ಚಡಪಡಿಸಿದರ ಬರೋದೇನು? ಸಾಮಾನಂತೂ ತಂದುಹಾಕಿರಿ.

ದು— ರಾಮಣ್ಣ ಊರಾಗಿಲ್ಲ. ಆಯತ ಮನಿ ತಾಬಾಕ್ಕ ಸಿಕ್ಕುವಂಗ. ಇಬ್ಬರೂ ಹೊಡಿಯೋಣು ಅಂದರ, ಈ ಬಲರಾಮನೊಬ್ಬ ಅತಿಥಿ ಇದ್ದು ಹೊತ್ತಿಗೇ ಗಂಟು ಬೀಳಬೇಕಽ?

ಶಾಂ— ಮತ್ತ ಕೂಳುರ ಎಷ್ಟು ತಿಂತಾನ ಸುಡ್ಲಿ! ಮೊದಲನೆ ದಿನ ಅವನ ಊಟಾ ನೋಡಿ, ನಾ ಅಂತೂ ಬಟ್ಟುಕಚ್ಚಿದೆ! ಯಾಕಂದರ, ನನ್ನ ಪಾಲಿಗೆ ಏನೂ ಉಳಿದಿದ್ದೇ ಇಲ್ಲ! ಆವತ್ತಿನಿಂದ ನನ್ನದು ಪೂರಾ ತಗದಿಟ್ಟುಗೊಂಡು ಬಡಸ್ತೀನಿ. ಛದರಲಿ, ಇವತ್ತಿಂತೂ ನೀವು ಸಾಮಾನು ತಂದು ಹಾಕಿದಮ್ಯಾಲ, ಒಲೀಗೆ ಬೆಂಕೀ ಹಾಕೋದು!

ದು— ಅಲ್ಲಽ ಶಾಂತಿ, ನಾವಽ ತಂದು ಹಾಕ್ಕೊಂಡು ತಿಂಬೋದು ನಮ್ಮೂರಿಗೆ ಹೋದಮ್ಯಾಲ ಅದನ್ನಽ ಅದ! ಈಗ ಖಾನಾವಳಿ. ಯಿಂದನ್ನಽ ಡಬ್ಬಿ ತರಿಸಿದರ ಹ್ಯಾಂಗಂತೀ?

ಶಾಂ— ನೆಟ್ಟಗಽ ಐತು. ಎರಡೂ ವ್ಯಾಳ್ಯಾ ಅಡಿಗೀ ಮಾಡೋ ಧಾವತಿ ತಪ್ಪಿತು. ಮತ್ತ ಖಾನಾವಳೀ ಬಿಲ್ಲು ನೀವಽ ಕೊಡೋದಾದರ ಅದೇನು ಶಹಣೇತನ?

ದು— ಹುಂ, ಇಷ್ಟಽ ನನ್ನ ಶಹಣೇತನ ಇದ್ದರ ನೀ ನನ್ನ ಮದಿವ್ಯಾಗತಿದ್ಯಾ? ನಾನೂ ಇನ್ಶುರನ್ಸ್ ಏಜಂಟ್ ಇದ್ದೀನಿ. ಅದೇನಿಲ್ಲ; ಈಗ ರಾಮಣ್ಣನ ಹೆಸರಿನ ಮ್ಯಾಲ ಖಾನಾವಳಿಯಿಂದ ಡಬ್ಬಿ ತರಿಸೋದು. ಎರಡೂ ಹೊತ್ತೂ ಹೊಡಿಯೋದು. ಮುಂದ ರಾಮಣ್ಣ ಛಲಾ, ಖಾನಾವಳಿ ಶಾಮಣ್ಣ ಛಲಾ!

ಶಾಂ— ಮತ್ತ ಆ ಡಬ್ಬಿ ನೀವು ತರಬ್ಯಾಡಿರಿ, ಖಾನಾವಳಿಯವಗಽ ಹೇಳಿರಿ. ಇಲ್ಲಽ ಆ ಕೂಳಬಾಕ ಬಲರಾಮಣ್ಣಗಽ ಹೇಳ್ರಿ. ಮತ್ತ ಚಹಾದ್ದು ಹ್ಯಾಂಗ ಮಾಡ್ತೀರಿ? ಅದೂ ಪುಡಿ ಸಕ್ಕರ ತೀರೇದ!

ದು— ಎದುರಿಗೇ ಚಹಾದ ಅಂಗಡಿ ಅದಲ್ಲ! ಅದನ್ನೂ ಊಟಧಾಂಗತ ಉದ್ರಿ ತರಿಸೋದು.

ಶಾಂ— ಮತ್ತ ವರ್ತನೀ ಹಾಲು ತೊಗೋಬೇಕೋ ಬ್ಯಾಡೋ?

ದು— ಏ ಏ ನಿ, ಅವನ್ನೂ ತಗೊಂಬೋ ಹಾಂಗ ತಗೊಳ್ಳೋದಽ! ಬಲರಾಮಣ್ಣನ ಕಣ್ಣು ತಪ್ಪಿಸಿ ನಮ್ಮಿಬ್ಬರಿಗೇ ಕುಡೀಲಿಕ್ಕೆ ಬರ್ತದ! ಆssss ಮತ್ತ, ಕೂದಲಾನೂ ಬಹಳ ಬೆಳದಾವ. ಸಲೂನಿನೊಳಗ ಉದ್ರಿ ನಡೀತಿದ್ದರ, ರಾಮಣ್ಣನ ಹೆಸರೆಲ್ಲಿ ಅದನ್ನೂ ಮುಗಿಸಿಬಿಡ್ತೀನಿ. ಏನಂತೀದಿ?

ಶಾಂ— ಅಗತ್ಯ ಆಗಲಿ. ಅಷ್ಟಽ ಯಾಕ, ಅರಿವೆಲ್ಲಾ ಹೊಲಸಾಗ್ಯಾವ ಅಂತಿದ್ದಿರಿ. ಲಾಂಡ್ರಿಯೊಳಗ ಅರ್ಜಂಟ್ ಕೊಟ್ಟು, ಅವನ್ನೂ ಒಗಿಸಿಬಿಡಿರಿ. ಊರಿಗೆ ಹೋದ ಮ್ಯಾಲ ತಿಂಗಳೆರಡು ತಿಂಗಳು ಅದರ ಉಸಾಬರಿ ಬ್ಯಾಡ.

ದು— ನೀ ಹೇಳೋದೂ ರಾಸ್ತ ಅದ. ಉಳಿದ್ದವನ್ನೆಲ್ಲಾ ರಾಮಣ್ಣನವರ ಮ್ಯಾಲ ಭಾರ ಹಾಕ್ತೀವೀ; ಇದೊಂದs ಯಾಕ ಬಿಡಬೇಕು ಅಂತ ನೀ ಅಂತೀದಿ. ಅದೂ ನಡೀತಿದ್ದರ ಮಾಡಿಬಿಡೋಣು. ಅತಿಥಿಗಳಾಗಿ ಮನ್ಯಾಗಿದ್ದೀವಿ ಅಂದಮ್ಯಾಲ ತಪ್ಪೇನಿಲ್ಲ.

೫೫ ವರ್ಷಗಳಿಂದ ಅನುಭವಪಟ್ಟ.

ಕರ್ಕ್ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು

ವಿಳಾಸ:—

ಗಣೇಶ ರಾಮಚಂದ್ರ ಕರ್ಕ್ ಮತ್ತು ಕಂಪನಿ

ಗಿರಗಾಂವ, ಮುಂಬಯಿ. ೪

ಬಿಡು. ನಾವು ಯಾವುದಕ್ಕೂ ಭಿಡೆ ಮಾಡಿಕೊಂಡು ಭವಣೆ-ಬಟ್ಟರ, ರಾಮಣ್ಣನವರಿಗೇ ನಾಳೆ ಕೆಟ್ಟ ನಿಸೋದು!

ಶಾಂ—ಅಹಾ! ಎಂಥಾ ಮಾತು! ಅನಿಸದೇನು ಪಾಪ.

× × × ×

೪

[ಎರಡು ದಿನಗಳ ನಂತರ. ರಾಮಣ್ಣ ಅಲ್ಲ—ಬಲರಾಮಣ್ಣ ಅತಿಥಿಗಳನ್ನು ಹೊರಗೆ ಹಾಕಲು ಇನ್ನೊಂದು ಯುಕ್ತಿ ಹೂಡಿದ್ದಾನೆ. ದುರ್ವಾಸ ದಂಪತಿಗಳು ಕೋಡಿಯಲ್ಲಿ ಮಲಗಿ ನಿದ್ರೆಹೋಗಿದ್ದಾರೆ. ಬಲರಾಮಣ್ಣ ಅವರನ್ನು ಎಚ್ಚರಿಸುತ್ತಿದ್ದಾನೆ.]

ರಾಮು—ದುರ್ವಾಸರ, ಎಳ್ರೆಪಾ, ಹತ್ತು ಹೊಡೀತು.

ದು—(ಒಳಗಿಂದ ದನಿ) ಯಾರವರು?

ರಾಮು—ನಾನು ಬಲರಾಮಣ್ಣ. ರಾಮಣ್ಣನವರಿಂದ ಕಾಗದ ಬಂದಿದೆ. ಬರ್ರಿ ಹೊರಗ ತುಸು.

ದು—ಏಂಗಕ್ಕ? ಅಂಗಡ್ಯಾಗ ಎರಡು ಚಹ ಹೇಳ್ರೆಪಾ. ನಿಮ್ಮದು ಆಗೇ ಇದ್ದೀತು?

ರಾಮು—ಎದ್ದಂತೂ ಬರ್ರಿ ಮೊದಲು. ಈ ಪತ್ರ ಓದಿಕೊಂಡು ಮುಂದ ಮಾತು.

ದು—(ಅಳಕಸುತ್ತ ಹೊರಗೆ ಬಂದು) ಏನಂತೀರಿ?

ರಾಮು—ಇದು ನೋಡಿರಿ (ಕಾಗದವನು ತೋರಿಸುತ್ತ) ರಾಮಣ್ಣನವರ ಕಾಗದ ಬಂದದ. ಒಬ್ಬರ ಕೈಲೆ ಕಳಸಿಕೊಟ್ಟಾರ. ಅವರು ಅನಕಾತ ಊರಿಗೆ ಬರೋದಿಲ್ಲಂತ. ಮನೀಗೆ ಕೀಲಿ ಹಾಕ್ಕೊಂಡು ಕೂಡಲೆ ಬಾ ಅಂತ ನನಗ ಬರದಾರ. ಅದಕ್ಕ ನಾ ಇನತ್ತಿಕ ಹೋಗಬೇಕು. ಇನ್ನೊಂದು ತಾಸಿಗೆ ಗಾಡಿ ಅದ.

ದು—ಮತ್ತ ನಮ್ಮ ವ್ಯವಸ್ಥಾ.....

ರಾಮು—ನಿಮ್ಮ ವ್ಯವಸ್ಥಾ ಇನ್ನ ನೀವು ನೋಡಿಕೊಳ್ಳರಿ. ರಾಮಣ್ಣನವರ ಮನೀದಂತೂ ಮುಗೀತು; ಇನ್ನ ಭೀಮಣ್ಣನವರ ಮನಿ ..... ಅಲ್ಲಿ ಇದ್ದರ ನೋಡ್ರೆಲ್ಲ.... ....

ದು—ಯಾಕ್ರಿ, ಮಾತು ತುಸು ಕೊಂಕೊಂಕು ಬರಲಿಕ್ಕೆ ಹತ್ತ್ಯಾವ? ನಿಮ್ಮದು ರಾಮಣ್ಣನದು ಆಪ್ತವ್ಯಷ್ಟಕ ಇರಬಹುದು. ಆದರ ನಮ್ಮಮೂ ರಾಮಣ್ಣನದೂ ಚೆಲೋ ಸ್ನೇಹ ಅದ!

ರಾಮು—ಚೆಲೋ ಸ್ನೇಹ? ಅವರ ಮಾರೀನಾದರೂ ನೋಡಿರೇನು ರಾಯರ?

ದು—ನಾ ನೋಡದಿದ್ದರೇನಾತ್ಯ? ನೋಡಿದವರಿಗೂ ನನಗೂ ಸ್ನೇಹ ಅದ, ಸಾಕು!

ರಾಮು—ಸಾಕು, ಸಾಕು. ಬಂದು ತಾನೇ ಹಾಕಲಿಕ್ಕೆ ಹೆಚ್ಚು ಯಾಕ ಬೇಕಾಗ್ತದ?

ದು—ಅಲ್ರಿ, ನೀವೂ ನಮ್ಮ ಹಾಂಗ ತಾನೇ ಹಾಕಿದನರಕ ಅಲ್ಲ! ನಮ್ಮ-ಕಿಂತ ನಾಲ್ಕು ದಿವಸ ಮೊದಲ ಬಂದಿದ್ದೀರಿ.

ರಾಮು—ಒಂದರ್ಥದಿಂದ ಖರೆ ಅದ, ಎಲ್ಲರೂ ನಾಲ್ಕು ದಿವಸ ಬಂದು ಇದ್ದು ಹೋಗುವವರ! ಏನ ಇರ್ಲಿ ರಾಯರ್, ರಾಮಣ್ಣನವರು ಬರದಾರ: ಬಂದ ಅತಿಥಿಗಳಿಗೆ ಒಳ್ಳೆ ಮಾತಿಲೆ ಎಲ್ಲ ತಿಳಿಹೇಳಿ, ಕೀಲಿ ಹಾಕ್ಕೊಂಡು ಬರಬೇಕು ಅಂತ!

ದು—ಛೆ, ಹಾಂಗ ರಾಮಣ್ಣನವರು ಬಹಳ ಸಜ್ಜನರು! ಅತಿಥಿಸತ್ಕಾರ ಅಂದರ ಅವರಿಂದಲೇ ಕಲೀಬೇಕು. ಇಲ್ಲದಿದ್ದರ ಕೆಲವುರಿರ್ತಾರ, ಸ್ವಂತಕ್ಕ ತಾವಂತೂ ಮಾಡೋ ಹಾಂಗಿಲ್ಲ. ಮಂದಿ ಮಾಡಿದ್ದೂ ಸಹನಾಗೋಹಾಂಗಿಲ್ಲ ನಮ್ಮದೇನು ಬಿಡ್ರಿ, ನಾವೇನು ಇಲ್ಲಿ ಅನಗಾಲ ಇರಬೇಕಾಗೇದ? ನಮ್ಮ ಇನಾಮತಿ ನರಸಿಂಹನ ಅಗ್ರಹಕ ನಾ ಇಲ್ಲೆ ಇಳಿದೆ. ನಾ ಹಾಂಗ ಖರ್ಚಿಗೆ ಅಂತ ರೊಕ್ಕ ಕಟ್ಟಗೊಂಡು ಬಂದಿದ್ದೆ. ಅವರ ನರಸಿಂಹನ ಸ್ನೇಹಿತರ ಮನೆಯೊಳಗಿದ್ದು ನಾನ ಎಲ್ಲಾ ಕೈಖರ್ಚು ಮಾಡೋದು ಅಂದರ, ನಾಳೆ ರಾಮಣ್ಣಗ ಕೆಟ್ಟ ನಿಸೋದು, ಅಂತ ನಾ ಕೈ ಬಿಗಿಹಿಡಿದೆ.

ರಾಮು—ಈಗಾದರೂ ಅವರಿಗೆ ಕೆಟ್ಟ ಅನಿಸಿಲ್ಲ ಅಂತ ತಿಳಿದೀರೇನು? ಸಾಕಷ್ಟು ಪಶ್ಚಾತ್ತಾಪ ಆಗೇದ ರಾಯರ!

ದು—ಆ ದ್ದೀತು. ಬಂದ ಅತಿಥಿಗಳನ್ನ ಮನಿಬಿಡಿಸಿ ಕಳಸಬೇಕಾತೆಲ್ಲಾ ಅಂತ ಖರೆ ಅದ. ಆಗಲಿ, ಸವಡು ಮಾಡಿಕೊಂಡು ಇನ್ನೊಮ್ಮೆ ಅಸರಿದ್ದಾಗ ಬರ್ತೀವೇನ್ರೆಪಾ!

ರಾಮು—ಓಹೊ. ಆಗತ್ಯ ಬರ್ರಿ. ಆದರ ಒಕೋ ಮೊದಲು ಕಾಗದ ಹಾಕಿ ಬರ್ರಿ ಆತ್ಯ!

ದು—ಆಗಲಿ, ಹಾಂಗs ಮಾಡೋಣು ರಾಮಣ್ಣನವರಿಗೆ ನಮ್ಮ ನಮಸ್ಕಾರ ತಿಳಿಸಿ, ನಮ್ಮ ನೆನಪಿರ್ಲಿ ಅಂತ ಹೇಳ್ರಿ.

ರಾಮು—ಅದನ್ನ ಎಂದೂ ಮರಿಯೋದಿಲ್ಲ ಬಿಡ್ರಿ, ರಾಯರ.

ದು—ಒಳ್ಳೇದು ಹಂಗಾರ. ನಾವು ಹೊರಡೋ ತಯಾರಿ ಮಾಡ್ತೀವಿ. ಚಹ-ಫರಾಳದ ಜೋತೀಗೆ ಟಾಂಗಾನೂ ಅಷ್ಟು ಹೇಳಬಿಡ್ರಿ; ಮತ್ತ ಅಂವಗ ಏನು ಕೊಡೋದೋ ಕೊಟ್ಟು. ರಾಮಣ್ಣನವರಿಗೆ ತಿಳಿಸ್ರಿ ಆತ್ಯ. ಈ ಟಾಂಗಾದವರು ಹೊಸಬರ್ನ ನೋಡಿದರ ಬಲು ರೊಕ್ಕ ಹಿರೀತಾರ! ಶಾಂತಿ, ಏ ಶಾಂತಿ. ಏಳು ಹೋಲ್ಡಾಲ್ ಕಟ್ಟು. (ಬಾಗಿಲ ಮೇಲಿನ ಫೋಟೋದ ಕಡೆಗೆ ನೋಡುತ್ತ) ಇದೇನ್ರಿ ಬಲರಾಮಣ್ಣ, ಇದು ಯಾರ ಫೋಟೊ? ರಾಮಣ್ಣನದಲ್ಲ?

ರಾಮು—ಹೌದು.

ದು—(ರಾಮಣ್ಣನ ಮುಖ ನೋಡುತ್ತ) ಅವರದೂ ನಿಮ್ಮದೂ ಸೂರೀ ಹೋಲಿಕ ಒಂದs ಅದ ನೋಡ್ರಿ!

ರಾಮು—ನಾನು ಮತ್ತು ರಾಮಣ್ಣ ಎಲ್ಲಾದರೊಳಗೂ ಹಾಂಗs ಇದ್ದೀವಿ ರಾಯರ. ಆಗಲಿ. ಚಹ ಮತ್ತು ಟಾಂಗಾ ಹೇಳಿ ಬರ್ತೀನಿ. ನೀವು ಹೋಲ್ಡಾಲ್ ಕಟ್ಟಿ ತಯಾರಾಗ್ರಿ.

ಬಂದನಾ ಮಳೆರಾಯ

(ಸಂಗೀತರೂಪಕ)

' ಆನಂದಕಂದ '

ಪಾತ್ರವಿವರ

★

ಕಾಲಪುರುಷ (ಕಾಲಾಭಿಮಾನಿದೈವತ). **ಹೊಸವರ್ಷ** (ವರ್ಷಾಭಿಮಾನಿದೈವತ). **ಮಳೆರಾಯ**
ಅಶ್ವಿನಿ, ಭರಣಿ, ಕೃತ್ತಿಕಾ (ವರ್ಷಾವನಿತೆಯರು). **ಒಕ್ಕಲಿಗರ ಗುಂಪು, ಚಿಕ್ಕಮಕ್ಕಳ ಗುಂಪು,**
ಬಾವಿಯ ದಂಡೆಯ ಹೆಂಗುಸರು.

★

ವೃಂದಗೀತ

(ಹಲವಾರು ಹೆಣ್ಣು-ಗಂಡುಗಳ ಧ್ವನಿಯುಳ್ಳಿ)

ಜೀವಕುಲ ಜೀವಿಸುವುದನ್ನದಿಂದೆ....
ಅನ್ನದೊರೆಯುವುದು ಪರ್ಜನ್ಯದಿಂದೆ !
ಮಳೆಯು ಇಳೆಗಿಳಿಯುವುದು ಯಜ್ಞದಿಂದೆ ...
ಯಜ್ಞ ಹೊಸೆವುದು ಕರ್ಮಲೋಕವಿಂದೆ !

(ಗತಿಯನ್ನು ಬದಲಿಸಿ)

ಅನ್ನವನೇ ಕೋರುತಿಹಳು
ಜೀವಜನನಿಯಿಂ ಇಳೆ....
ಬಾ ಮಳೇ ! ಬಾ ಮಳೇ !
ಬಾ ಮಳೇ ! ಬಾ ಮಳೇ !!

(ಅಂತಃಪ್ರೇರಿತ ಕಾಲಪುರುಷನು ಹಾಡುತ್ತ ಬರುವ ರೆಕ್ಕೆಗಳ ಪರಿಯ ಭ್ರಮೆಯ ಹೊಸವರ್ಷನ ಸಪ್ಪಳ ಕೇಳಿಸುತ್ತಿರಬೇಕು. ವಾತಾವರಣದಲ್ಲುಂಟಾಗುವ ಸಹಜ-ಪರಿವರ್ತನೆಗಳೂ ಆಗಾಗ ಕೇಳಿಸುತ್ತಿರಬೇಕು.)

ಕಾಲಪುರುಷ :

(ಗಂಭೀರ ಧ್ವನಿಯುಳ್ಳಿ—ರಾಗ ಕಲ್ಯಾಣಿ)

ಭುವಕೆ ಮೊದಲ ಪುರುಷನಾನು, ನಿಯತಿಯ ಭಟನಾಯಕ –
ನವ-ನವಯುಗನೆಳೆದುತಂದು ನಟಿಸುತಲಿಹೆ ನಾಟಕ ॥ಸಲ್ಲವಿ॥
ಒಂದೆ ಎಡೆಯೊಳಿರ್ದು ನಿನ್ನೆ ಇಂದು ನಾಳೆ ನೋಡುವೆ....
ಒಂದೆ ಭಾವದಲಿಯೆ ಜಗದ ಸುಖ-ದುಃಖವಿ ಕೂಡುವೆ !
ಒಂದೆ ರೂಪಿ ನಾನಾದರು ಹಲವು ವೇಷ ಹೊಡುವೆ....
ತಂದು ತಂದು ವಿವಿಧಋತುವ ಅವರೊಂದಿಗೆ ಆಡುವೆ !!
ಹಳೆಯ ವರ್ಷ ವಿಲಯವಾಯ್ತು
ಮುಗಿಸಿ ತನ್ನ ಲೀಲೆ....
ಕಳುಹಬೇಕು ಹೊಸವರುಷವ
ಇಳೆಗೆ ಇದೊ –ಇದೀಗಲೆ !

(ಕಾಲರಾಯನ ಹಾಡಾಟದ ಗರಿಯ ಸಪ್ಪಳ ನಿಂತುಹೋಗಬೇಕು.)

ಬಾರ್ಯೆಯಾ, ಬಾರ್ಯೆಯಾ, ಬಾ ಹೊಸ ವರುಷ....
ಇಂದಿನಿಂದಿಳೆಯನು ನೀನಾಳುವರಸ !
ಜೊತೆಗೊಯ್ಯ ಕಹಿ, ಸಿಹಿ, ಕಷ್ಟ, ಸಂತೋಷ....
ಅದನೆಲ್ಲರಿಗೆ ಹಂಚುವುದೆ ನಿನ್ನ ಕೆಲಸ !
ಇಳೆಗಿಳಿ ಇಳೆಗಿಳಿ ಹೊಸವರುಷ....
ನಿಯತಿಯ ರಂಗದ ರಸವುರುಷ !

(ಹೊಸವರ್ಷ ಆಗಸದಿಂದ ಭೂಮಿಗೆ ಸರ್ರೆಂದು ಇಳಿಯುತ್ತಿದೆ. ಬೆಳಗಿನ ಕೋಳಿಯ ಕೂಗು, ಹಕ್ಕಿಗಳ ಕಲಕಲನಿನಾದ ಕೇಳಿಸುತ್ತಿರಬೇಕು.)

ಹೊಸವರ್ಷ :

(ವಸಂತಾಗಮನಸೂಚಕ ಧ್ವನಿಗಳ ಹಿನ್ನೆಲೆಯುಳ್ಳಿ ಹಾಡು)

ನಾನು ನವವರುಷ ನಾನು ನವವರುಷ
ಬಾನಿಂದಿಳಿದಿಹೆನೋ....
ಕ್ಷೋಣಿಯ ಸುಖ-ದುಃಖಂಗಳ ಹೊಣೆಯನು
ತಲೆಯಲಿ ತಳೆದಿಹೆನೋ !
ಇಂದಿನಿಂದ ರವಿ-ಚಂದ್ರ-ತಾರೆಗಳು
ಹೊಸ ಹೊಸ ಋತುಕಾಲ....
ತಂದು ತಂದು ಭೂಮಾತೆಯ ಕಾರ್ಯಕೆ
ನೀಡಲಿಹರು ಮೇಲ !
ನೊದಲ ಕಾರ್ಯ ಮಧುಋತುರಾಜನದೇ
ವಸಗೌರಿಯ ಶಿವನೀತ....
ಮಧುಕರ ಕೋಕಿಲೆ ಮಯೂರಿ ಸಾರಿಕೆ
ಉಲಿವುವಿದೋ ಸಂಗೀತ !

(ವಸಂತ ಸೂಚಕ ವಿಧವಿಧ ಧ್ವನಿಗಳು : ಕೋಗಿಲೆಯ ಕೂಗು, ಭ್ರಮರಗಳ ಗುಂಜಾರವ ನವಿಲಿನ ಕೇಕಾರವ, ನೀರ್ವಕ್ಕಿಗಳ ಹೊರತ.)

ಹೊಸವರ್ಷ :

(ಬೆರಗಿನ ಧ್ವನಿಯಲ್ಲಿ)

ಕುಣಿಯುತ ಬರುತಿಹರಾರಿವರು ?—ಅಹ
ಜಣಜಣಿಸುವ ಗೆಜ್ಜೆಯಡಿಯವರು ?
ಅಶ್ವಿನೀ ಭರಣೀ
ಕೃತ್ತಿಕಾರಾಣೀ
ಜಗಕಾಗಿ ಮಳೆಗಾಲ ಕರೆವವರು.
ಜಗಕಾಗಿ ಮಳೆಗಾಲ ಕರೆವವರು—ತಾವು
ಜೊತೆಗೂಡಿ ಕುಣಿಯುತ ಬರುತಿಹರು !

(ಉತ್ಸಾಹಪೂರಿತ ಕುಣಿತದೊಂದಿಗೆ ಹಾಡುತ್ತ ಅಶ್ವಿನಿ, ಭರಣಿ, ಕೃತ್ತಿಕೆಯರು ಪ್ರವೇಶಿಸುವರು.)

ಅಶ್ವಿನೀ, ಭರಣೀ, ಕೃತ್ತಿಕಾ :

ನಂದನವನ ಮಂದಾರ ಸುಮಂಗಳ ಮುಡಿದ ಶಚೀರಮಣಾ,
ಗಂಧರುವರ ಗಾಯನಡಾಲಾಪಕೆ ಬೆರೆತ ಭಾವಶರಣಾ ! ॥ಪಲ್ಲ॥
ನುಗಿಲಿನಾನೆಗಳ ಓಗಿದು ಕಟ್ಟಿದಿರು, ಕಳುಹು ಜವದಲಿಳೆಗೆ—
ಜಗದ ಜೀವಿಗಳ ಜೀವಿತಯೋಜನೆ ಇರುವುದಲೇ ನಿನಗೆ ?—
ಕಡಲ ನೀರ ಕುಡಿ-ಕುಡಿಸಿ ಬಲವ ಕೊಡು ಮುಂಗಾರಿನ ಮಳೆಗೆ
ಕಡತಕ ಧೈ ಕಡತಕ ಧೈ ಕಡತಕ್ ಧಿತ್ತೋಂ ಧೈ,
ಧೈಥಕ ತದಗಿಣತಾ
ಸಿಡಿಲ ನಗಾರೀ ಗುಡುಗಿನ ಭೇರೀ—ಜೊತೆಗೆ ನಮ್ಮ
ಕುಣಿತಾ॥

(ಕುಣಿತವನ್ನು ನಿಲ್ಲಿಸಿದ ಮೇಲೆ)

ಅಶ್ವಿನೀ :

ಉರಿಯುತಿದೆ ಉರಿಯುತಿದೆ ಬೆಂಕಿಯೊಳು ಬಿಸಿಲು,
ಬರಿಹೊಲದ ಕರಿಮಣ್ಣು ಇದೋ—ಹುರಿದ ಮಳಲು !
ಹರಿಗಡಿದು ಹೋಗಿಹವು ಹೊಳೆ-ತೊರೆಯ ಹೊನಲು.
ಕೆರೆಯ ಮಡುಗಳು ಬರತು ಕಾಣುತಿದೆ ಹುದಿಲು !
ಭರಣಿ, ಕೃತ್ತಿಕೆ, ಕೇಳಿರೇ ನಾವೀಗ
ಗೈವುದೇನದ ಹೇಳಿರೇ !

ಭರಣೀ :

ಭೂಮಿತಾಯ ತಣಿಸಲೆಂದು ನಾವು ಬಂದೆವೆ,
ಬರಿಯ ಹುರುಪನೊಂದು ಮಾತ್ರ ಜೊತೆಗೆ ತಂದೆವೆ.
ಭೂಮಿತಾಯ ತಣಿಸಬೇಕು; ತಣಿಸಲಾವ ದಾರಿ ?
ಒಡೆಯ ನಮಗೆ ಕಳುಹಲಿಲ್ಲ, ನೆರವಿಗೆ ಮುಗಿಲೇರಿ !

ಕೃತ್ತಿಕೆ :

ನಮ್ಮ ಹಣೆಯಬರೆಹವಿದೇ ದಾನಬುದ್ಧಿಯುಂಟು—
ಹಣವಿರದಿಹ ದೀನರಂತೆ ಮನೆಯು ಬರಿಯಗಂಟು !

ಆದರೇನು ಸುಮ್ಮಗಿಹುದೆ ?
ರೋಹಿಣಿ-ಮೃಗಶಿರೆಯರಿರದೆ—
ಭೂಮಿಗೆ ತಣಿವೇನು ಬರದೆ !
ಬಂದೆ ಬಹರೆ, ಬಂದೆ ಬಹರೆ, ತಮ್ಮ ಸರದಿಯಲ್ಲಿ
ತಂದೆ ತಹರೆ ಭುವಿಗೆ ತಣಿವ ಸುರಿಸಿ ಮಳೆಯನಿಲ್ಲಿ !

ಭರಣೀ:

ಮುಂದಿಯನು ನಂಬಿದರೆ ಉಪಯೋಗವೇನೆ ?
ಅವರು ಬರುವನಕ ಈ ಜನ ತಡೆವುದೇನೆ ?
ಕೇಳು ಕೇಳದೊ ಕೇಳು ಹೆಂಬಲಿಸುತಿಹರು,
ಬುವಿಯುಡಿಯ ತುಂಬಲಿಕೆ ತವಕಿಸುವ ಜನರು !

ಒಕ್ಕಲಿಗರ ಗುಂಪು :

ಹೊಲದ ಕೆಲಸವೆಲ್ಲಾ ಹಸನಾಗಿ ಹೋಯಿತೊ
ಮಳೆರಾಯ ಮಾತ್ರ ಬರವೊಲ್ಲ....
ಮಳೆರಾಯ ಮಾತ್ರ ಬರವೊಲ್ಲ—ಶಿವಹರ
ಕಳವಳಿಸಿತು ನಮ್ಮ ಜನವೆಲ್ಲ !
ಬರುವ ಕಾಲದ ಕೂಳ ಹಾರಯಿಸಿ ನೀಗಿಲ
ಗೆರೆಯಿಂದ ನೆಲವೆಲ್ಲಾ ಮುಚ್ಚಿದೆವೊ....
ಬರಿದೋ ಬರಿದು ಬಾನು, ಮೋಡದ ಹೊಳವಿಲ್ಲ
ಬರಿದೆ ಮುಂಗಾರನು ನೆಚ್ಚಿದೆವೊ !
ಮುಡಿಯುವ ದನಕೆಲ್ಲಾ ಕುಡಿಯಲಾಕೇ ನೀರಿಲ್ಲ,
ಹುಡಿಗೂಡಿ ಹೋಗೆಯ್ತಿ ಹುಲ್ಲೆಲ್ಲಾ....
ಗಡಿಗ್ಯಾಗಕ ಮುಡಿಕ್ಯಾಗಕ ಜತನ ಮಾಡಿಟ್ಟೆವೊ
ಬಿತ್ತೂ ಬೀಜದ ಅಳತೆಯ ಕಾಳಾ !!

ಒಬ್ಬ ಒಕ್ಕಲಿಗ :

ಬಿಸಿಲಿನಬ್ಬರ ನೋಡು, ದನವು ಬಿತ್ತೈತ್ರೀ....
ಇನ್ನೊಬ್ಬ ಒಕ್ಕಲಿಗ.
ಬಿಸಿಲಗುದರಿಗಕಳು ಸುತ್ತುಮುತ್ತೈತ್ರೀ....
ಮತ್ತೊಬ್ಬ ಒಕ್ಕಲಿಗ
ಸುಂಟರಗಾಳಿಯು ದೆವ್ವಾಯಿತೋ.... !

ಎಲ್ಲರೂ :

ಮಳೆರಾಯ ಬರವೊಲ್ಲ, ಮಳೆನೀರ ತರವೊಲ್ಲ,
ಮಳೆಯಿಲ್ಲದಲೆ ಜೀವ ಸುಣ್ಣಾಯಿತೊ !

ಚಿಕ್ಕಮಕ್ಕಳ ಗುಂಪು :

ಏರಿ ಬನ್ನಿರಿ, ಹಾರಿ ಬನ್ನಿರಿ, ಎಳೆಯ ಮೋಡದ ಮರಿಗಳೇ,
ಏರಿ ಬಾನಲಿ, ಬೆಳಸಿ ಮೈಯನು ಆಗಸ್ಕೆ ಮದಕರಿಗಳೇ !
ಗುಡುಗು ಮೊಳಗಲಿ, ಮಿಂಚು ತೊಳಗಲಿ, ಕಾರಗಾಳಿಯು
ಬೀಸಲಿ,
ಸಿಡಿಲು ಜಡಿಯಲಿ, ಆಲಿಕಲ್ಲುಳು ಬಿಡದೆ ಸುರಿಯಲಿ
ಬಯಲಲಿ !

ಬಿದ್ದ ಮಳೆನೀರೆಲ್ಲ ಹರಿಯುತೆ ಕೆರೆ-ತೊರೆಗಳನು ಬಲಿಯಲಿ,
ಕೆರೆ-ತೊರೆಯ ಕಪ್ಪಣ್ಣ ಭಟ್ಟರು ಒಬರುವೇದವನೊರೆಯಲಿ !
ಮಳೆಯೊಳಾಡಿದ ನಮ್ಮ ಮೈ-ಕೈ ಬಟ್ಟೆ-ಬರೆಗಳು ತೊಯ್ಯಲಿ.
ಮನೆಗೆ ಬಂದರೆ ನಮ್ಮ ಹಿರಿಯರು ಸವಿಯ ಬೈಗುಳ ಬೆಯ್ಯಲಿ !
ಮಳೆಯೆ ಬಾ, ಮಳೆರಾಯ ಬಾ, ಮಳೆಗೆಳೆಯ ಬಾ ನಮ್ಮೂರಿಗೆ—
ನಮ್ಮ ತಾಯ್ಗಳು ತೆರಳದಂತೆಯೆ ಮಾಡು ದೂರದ ನೀರಿಗೆ !

ಭರಣೀ :

ಕೇಳಿದೆಯಾ ಜನರ ಗೋಳ ಅಕ್ಕ ಅಶ್ವಿನೀ,
ಹೇಳು ಹೇಳು ಹೇಳು ಇದಕುಪಾಯವನ್ನು ನೀ !

ಅಶ್ವಿನೀ :

ಅಹೊ, ಅಲ್ಲಿ ಪಾತಾಳದಾಳದೊಳಗಿಂದ
ನೀರೆಳೆದು ತೆಗೆಯುತಿದೆ ನಾರಿಯರ ವೃಂದ,
ಮೈ ಬೆಮರಿ ಬಾಯಾರಿ ಕೈಸೋತು ಹೋದರೂ
ಒಂದೆ ಕೊಡ ತುಂಬಿ ಬಂದಿಲ್ಲ ನೀರಿಂದ!
(ಸೇದುವ ಬಾವಿಯ ಚಕ್ರ-ರಾಟೆಗಳ ಧ್ವನಿಯೊಂದಿಗೆ)

ನೀರೆಳೆಯುವ ಹೆಂಗುಸರು :

ಮಳೆಯಾರು ಮಳೆರಾಯ ಮಳೆರಾಯ—ಬಂದು
ಕಳನಳ ಕಳೆಯಯ್ಯ ಮಳೆರಾಯ !
ಅಂಗೈಯ ಗಾಯವ ಮುಂಗೈಯ ಬಿಗುಬಾವ
ತಡೆಯೆವು ತಡೆಯೆವು ಮಳೆರಾಯ !
(ಗುಡುಗು ಮಿಂಚುಗಳ ಸಪ್ಪಳ, ಮಳೆಗಾಳಿ ಬೀಸುತ್ತಿರುವುದರ ರಭಸದ ಧ್ವನಿ)

ಅಶ್ವಿನೀ :

(ಸಂಜ್ಞೆಮಾಡಿ ಸ್ವರಹಚ್ಚಿ)

ಓಹೊ ರೋಹಿಣಿದೇವಿ ಇಳೆಗಿಳಿದಳು,
ಜೊತೆಗೆ ಮುಗಿಲೊಡ್ಡ ಕರೆತಂದಿರುವಳು.
ಬಾನೆಲ್ಲ ತುಂಬಿಹುದು ನೀರವೋಡ—
ಮಿಂಚು ಹುದುಗಿಹುದಲ್ಲಿ ಹೇಗೆ ನೋಡ !

ಭರಣೀ :

(ಕೃತ್ಯಕೃತ್ಯತಾ ಭಾವದಲ್ಲಿ)

ನಮ್ಮ ಕಾರ್ಯವಾಯಿತಹಾ ನಮ್ಮ ಕಾರ್ಯವಾಯಿತು;
ಧರೆಯ ತಣಿಸುವಂಥ ಹಿರಿಯ ಮಳೆಯು ನೋರೆದೋರಿತು.
(ಗುಡುಗಿನ ಸಪ್ಪಳ, ತುಂತುರು-ಮಳೆಯ ಸಪ್ಪಳ, ನವಿಲುಗಳ ಕೂಗು.)

ಮಕ್ಕಳ ಗುಂಪು :

ಮಳೆಯಪ್ಪಾ ಬಂದೆಯಾ ಮಳೆಯಪ್ಪಾ ?
ಇಳೆಯವರ ಚಿಂತೆಯ ಕಳೆಯಪ್ಪಾ !
ಸೆಜ್ಜಿಯ ರೊಟ್ಟೀ ಮಜ್ಜಿಗೆ ಪಳಿದೇ
ಅಜ್ಜೀ ಮಾಡಿ ಮಾಡಿ ಕೊಡತಾಳೋ....
ಸಜ್ಜಾಗಿ ಹೊಡಿ ಹೊಡಿ, ಸವಿಸವಿ ಮಾಡಿ—
ಹೊಲವೆಲ್ಲಾ ಹಸಿಹಸಿ ಮಾಜೇಳೋ !

ಮಳೆಯಪ್ಪಾ ಬಂದೆಯಾ ಮಳೆಯಪ್ಪಾ—
ಇಳೆಯವರ ಚಿಂತೆಯ ಕಳೆಯಪ್ಪಾ!
ಬಿಸಿಲಿನ ಬೇಗೆಯ ತೊಳೆಯಪ್ಪಾ !
(ಗುಡುಗಿನ ಸಪ್ಪಳ; ಕೋಳ್ಮಿಂಚಿನ ತಾಕಲಾಟ; ಮೊದಲ ಮಳೆಯ ಸನಿಗಳು.)

ಒಕ್ಕಲಿಗರು :

ಮಳೆರಾಯ ಬಂದು ನಿಂತಾನ, ಗುಡುಗು ಹೊಡಿತಾನ, ಕಣ್ಣಿ
ಬಿಡತಾನ!
ಸಳೆಮಿಂಚ ಹೊಳೆಸಿ ಕಾರ್ಗತ್ತಲಳಿಸಿ ಬೆಳಕನ್ನ ಹರಡತಾನ !
ಕೆಳಗಿಳಿಯತಾನ, ನೆಲ ನೆನಸತಾನ, ನಮ್ಮ ಬೆಳೆಯ ಬೆಳಸತಾನ !
ಕಳೆದಿರುವ ಶಕ್ತಿಯೆಳತಂದು ಬಿತ್ತಿ ಜೀವಗಳನುಳಿಸುತಾನ !
ಇದು ನಿನು ಗುಡುಗಿಸಬ್ಬರಾ, ಕವಿಗೆ ನಿಬ್ಬರಾ, ಬರೀ ಸುಳಿದಾಟ,
ಕಣುಮುಚ್ಚಿನಾಟ ಬಿಡು, ನೀರನಿಳಿಸಿ ಕೊಡು, ಹಾಳು-ಬೀಳು
ಹೊಸತೋಟ! —
ಏಸುದಾರಿಕಾಯಬೇಕು ನಿಂದು, ಕರುಣ ಬರಲಿಂದು ಇಳಿಯೊ
ಮಳೆರಾಯಾ,
ಬಳಬಳಸೆ ಸುರಿದು ಹೊಳೆಹಳ್ಳ ಹೊರೆದು, ಸುಖ-ಶಾಂತಿನೀಡು
ನೀ ಜೀಯಾ !

ಮಳೆರಾಯ :

(ಗುಡುಗಿನ ಅಬ್ಬರದೊಂದಿಗೆ)

ಜೀವಕುಲ ಜೀವಿಸುವುದನ್ನದಿಂದೆ—
ಅನ್ನವುದಿಸುವುದು ಪರ್ಜನ್ಯದಿಂದೆ.
ಮಳೆಯು ಮೂಡುವುದು ವರಯಜ್ಞದಿಂದೆ
ಯಜ್ಞ ಹೊಳೆವುದು ಕರ್ಮಲೋಕದಿಂದೆ !
ನೆಲವಸುತ್ತು ಬಿತ್ತಿ ಬೆಳೆವ ನೆಲದ ಅಣುಗರು
ನಿಜದಿ ನಿಜದಿ ನೀವೆ ಕರ್ಮಯೋಗಿವರ್ಯರು !
ಕೊಳ್ಳಿರಿದೊ ಕೊಳ್ಳಿರಿದೊ ಮಳೆಯ ಕೋಳ್ಳಿ !
ಯಜ್ಞಕಾಗಿಯೆ ಇದರ ಫಲವ ಕೊಳ್ಳಿ !!
(ತುಂಬ ಜೋರಿನ ಮಳೆ ಬೀಳಲು ತೊಡಗುವುದು.)

ಅಶ್ವಿನೀ-ಭರಣೀ-ಕೃತ್ತಿಕಾ :

ಓ, ವಂದನವು ವಂದನವು ನಿನಗೆ ದೇವೇಂದ್ರ
ಮಳೆಯಿಳೆಗೆ ಕಳುಹಿಪೆಯೊ ಅನಂತನಾಂದ್ರ !
ನಮ್ಮ ಯಜ್ಞಕೆ ಫಲವನಿತ್ತೆ ನೀನು,
ನಮ್ಮ ಬಾಳ್ ತುಂಬಿಹುದು ಪಾಲು ಜೇನು.
ಬಂದನಾ ಮಳೆರಾಯ, ಬಂದನಾ ಮಳೆರಾಯ,
ತಂದು ಸವಿನೀರನ್ನು ತಂಪುಗೊಳಿಸಿದನು !

ವಿಚಿತ್ರ ವಿಧಿ

(ಕಣ್ಣಕತೆ)

ಶ್ರೀ. ಎಂ. ಯು. ಜೋಶಿ, ಧಾರವಾಡ

★

ಸಿರಿವಂತಿಕೆಯೊಂದಿಗೆ ಮಾನವತೆ ಬೆರೆತು ಕೊಂಡಿದ್ದರೆ, ಸಮಾಜದಲ್ಲಿ ಸಮತೆ-ಶಾಂತಿಗಳು ನೆಲಸಿಕೊಂಡಿರಬಲ್ಲವು. ಮಾನವತೆಯಿಲ್ಲದ ಸಿರಿವಂತಿಕೆ, ವ್ಯಕ್ತಿಯ ದ್ವೇಷ-ನೋಹಗಳಿಂದ ಸವೆದುಹೋಗಿ ವಿಷಮತೆಗೆ ಎಡೆಗೊಡುತ್ತದೆ. ಅರ್ಥ ತಿಳಿಯದವರು ಇದನ್ನು ವಿಧಿಯ ವೈಚಿತ್ರ್ಯವೆನ್ನುವರು.

★

ಅಂದು ಕಾಲೇಜಿನಲ್ಲಿ ಮೊದಲನೆಯ ಟರ್ಮಿನ ಪ್ರಾರಂಭದ ದಿನ. ಫರ್ಸ್ಟ್ ಇಯರ್ ಆರ್ಟ್ಸ್ ಕ್ಲಾಸಿಗೆ ಬಂದವರೆಲ್ಲರಿಗೂ ಕಾಲೇಜಿನ ವಾತಾವರಣ ತೀರ ಹೊಸವಾಗಿತ್ತು. ಎಲ್ಲರೂ ಹಾಯಸ್ಕೂಲಿನಿಂದ ಅದೇ ಹೊಸತಾಗಿ ಬಂದವರಾಗಿದ್ದರು. ಆ ಊರಿಗೆ ಇದೊಂದೇ ಮಹಿಳೆಯರ ಕಾಲೇಜು ಆದುದರಿಂದ, ಸ್ವಾಭಾವಿಕವಾಗಿ ಆ ಊರ ಮಹಿಳಾ ಹಾಯ್-ಸ್ಕೂಲಿನಿಂದ ಎಸ್. ಎಸ್. ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಎಲ್ಲ ಹುಡುಗಿಯರು ಆ ಕಾಲೇಜನ್ನು ಸೇರಿದ್ದರು. ಮೊದಲೇ ಒಂದೆಡೆ ಕೂಡಿ ಆಡಿದ್ದ, ಓದಿದ ಹುಡುಗಿಯರೇ ಪುನಃ ಒಂದೆಡೆ ಕೂಡಿದ್ದರಿಂದ, ಅವರಿಗೆ ಕಾಲೇಜಿನ ವಾತಾವರಣ, ಅಷ್ಟೊಂದು ಅಪರಿಚಿತವೆಂದು ಭಾಸವಾಗಲಿಲ್ಲ. ಬೇರೆ ಊರಿಂದ ಬಂದ ಕೆಲ ಹುಡುಗಿಯರಿಗೆ ಮಾತ್ರ ಅದು ಅಪರಿಚಿತ ಸ್ಥಳವೆನಿಸುತ್ತಿತ್ತು.

ಎಫ್. ವೈ. ಆರ್ಟ್ಸ್ ಕ್ಲಾಸು ಪ್ರಾರಂಭವಾದಾಗ, ಕನ್ನಡ ಪ್ರೊಫೆಸರರು ಮೊದಲು ಪ್ರವೇಶಿಸಿದರು. ಕಾಲೇಜು ಪ್ರಾರಂಭವಾದ ದಿನ! ಕೇಳುವುದೇನು! ಹುಡುಗಿಯರ ಮನೋರಂಜನೆಗಾಗಿ ಆ ಪ್ರೊಫೆಸರರು ಜಾನಪದ ಗೀತೆಗಳಲ್ಲಿಯ ಕೆಲವು ಕವಿತೆಗಳನ್ನು ಓದಿ ತೋರಿಸತೊಡಗಿದರು. ಪ್ರೊಫೆಸರರು ಓದಿ ತೋರಿಸಿದ ಕೆಲವು ಕವನಗಳಿಂದ, ಕ್ಲಾಸಿನ ತುಂಬೆಲ್ಲ ನಗು ವ್ಯಾಪಿಸಿತು. ಮುಂದಿನ ಬೆಂಚಿನಲ್ಲಿ ಕುಳಿತ ಕಮಲಳ ಮುಖ ಮಾತ್ರ ಕೆಳಗಾಯಿತು. ಅವಳ ಪರಿಚಯವಿದ್ದ ಹುಡುಗಿಯರೆಲ್ಲ, ಕಮಲಳತ್ತ ಉಪಹಾಸದ ದೃಷ್ಟಿಯನ್ನು ಬೀರಿ ನಗತೊಡಗಿದರು. ನಗು ಕ್ಲಾಸಿನ ತುಂಬೆಲ್ಲ ಪ್ರತಿಧ್ವನಿಸತೊಡಗಿತು. ಆ ನಗು ಕಮಲಳಿಗೆ ಮಾತ್ರ ಅಸಹ್ಯವಾಗಿ ತೋರಿತು. ಪ್ರೊಫೆಸರರು, ಆ ಹುಡುಗಿಯರಿಗೆ ಆ ಪದ್ಯ ಹಿಡಿಸಿತೆಂದು ಅದನ್ನೇ ಮತ್ತೊಮ್ಮೆ ಓದಿ ತೋರಿಸತೊಡಗಿದರು :

ಸಾಲಸಮುದಾ ಮಾಡಿ ಸೂಳೀಗೆ ಸೀರಿ ತಂದ
ಸಾಲೀಗರಣ್ಣ ಎಳೆವಾಗ....
ಸಾಲೀಗರಣ್ಣ ಎಳೆವಾಗ ಆ ಸೂಳೆ
ಮಾಳಿಗೀ ಏರಿ ನಗತಾಳ ||

ಸಾಲ ಸಮುದಾ ಮಾಡಿ ಸೂಳೀಗೆ ಸೀರಿ ತಂದಾ
ಸಾಲೀಗರಣ್ಣ ಎಳೆವಾಗ....
ಸಾಲೀಗರಣ್ಣ ಎಳೆವಾಗ ಮಸಿಮಡದಿ
ವಾಲಿ ಬಿಚ್ಚಿ ಒಗದು ನಿಂತಾಳ ||

ಪದ್ಯದ ಕೊನೆಯಲ್ಲಿ ಪ್ರಚಂಡ ಕರತಾಡನವಾಯಿತು. ಅದರ ಜತೆಯಲ್ಲಿ ನಗುವಿನ ಅಬ್ಬರ ಹೆಚ್ಚತೊಡಗಿತು. ನಗುವಿನ ಜತೆಯಲ್ಲಿ ಎಲ್ಲ ಹುಡುಗಿಯರೂ ಕಮಲುವನ್ನು ತಿರಸ್ಕೃತ ದೃಷ್ಟಿಯಲ್ಲಿ ನೋಡತೊಡಗಿದ್ದರು. ಕಮಲುವಿಗೆ ಪ್ರಾಣ ಹೋಗುತ್ತಿರುವಷ್ಟು ಸಂಕಟವಾಗತೊಡಗಿತು. ಅವಳ ಕಣ್ಣಂಚಿನಲ್ಲಿ ನೀರು ಧಾರಾಳವಾಗಿ ಹರಿಯತೊಡಗಿತು. ಆದರೆ ಅವಳ ಕಣ್ಣೀರನ್ನು ಕಂಡು ಯಾರೂ ಕನಿಕರ ಪಡಲಿಲ್ಲ. ಅದೇ ಸಾಲಿನಲ್ಲಿ ಮತ್ತೊಂದು ಬೆಂಚಿನ ಮೇಲೆ ಕುಳಿತ ಕಾವೇರಿ ಮಾತ್ರ, ಕಮಲಳ ಕಣ್ಣೀರನ್ನು ಕಂಡು ಮಮ್ಮಲ ಮರುಗಿದಳು. ಹಾಗೆಯೆ ಎದ್ದು ಹೋಗಿ ಅವಳನ್ನು ಸಮಾಧಾನಪಡಿಸಬೇಕೆಂದು ಯೋಚಿಸಿದಳು. ಆದರೂ ಅವಳಿಗೆ ಧೈರ್ಯವಾಗಲಿಲ್ಲ. ಏಕೆಂದರೆ ಕಾಲೇಜು ಉಳಿದೆಲ್ಲ ಹುಡುಗಿಯರು ಅವಳಿಗೆ ಅಪರಿಚಿತರಾಗಿದ್ದರು. ಕಮಲಳೂ ಕೂಡ ಅವಳಿಗೆ ಅಪರಿಚಿತಳು; ಆದರೆ ಅವಳ ದುಃಖವನ್ನೂ, ಉಳಿದ ಹುಡುಗಿಯರು ಅವಳನ್ನು ಪರಿಹಾಸ್ಯ ಮಾಡುತ್ತಿರುವುದನ್ನೂ ಕಂಡು ಕಾವೇರಿ 'ಅಯ್ಯೋ' ಎಂದು ಮರುಗಿದಳು. ಪ್ರೊಫೆಸರರು ಆ ಕವಿತೆಯನ್ನು ಬರೆದ ಅನಾಮಧೇಯ ಕವಿಯನ್ನು ಹೊಗಳಿ ಹೇಳತೊಡಗಿದರು :

" ನೋಡಿ, ನಮ್ಮ ಹಿಂದಿನ ಕವಿಗಳು, ಸೂಳೆ ಪುತ್ತು ಗರತಿ ಇವರಿಬ್ಬರಲ್ಲಿಯ ಅಂತರವನ್ನು ಎರಡೇ ನುಡಿಯಲ್ಲಿ ಹೇಗೆ ವರ್ಣಿಸಿಬಿಟ್ಟಿದ್ದಾರೆ—"

ಒಮ್ಮೆಲೆ ಕ್ಲಾಸಿನಲ್ಲಿ ಗೇರುಸೊಪ್ಪೆಯ ಧಬಧಬೆಯ ಸಪ್ಪಳವಾಯಿತು; ಅದು ಆ ಹುಡುಗಿಯರ ನಗು. ಆ ನಗುವಿಗೆ ಕಮಲು ತಡೆಯಲಿಲ್ಲ. ಗಳಗಳನೆ ಕಣ್ಣೀರನ್ನು ಸುರಿಸುತ್ತ ಮುಖವನ್ನೊಮ್ಮೆ ಮುಚ್ಚಿಕೊಂಡಳು. ಅದನ್ನು ನೋಡಿದ ಕಾವೇರಿಗೆ ತಡೆಯಲಾಗಲಿಲ್ಲ. ಯಾವುದೊ ಧೈರ್ಯ ಅವಳಲ್ಲಿ ಸಂಚಾರವಾಯಿತು. ಕುಳಿತಲ್ಲಿಯೇ ಎದ್ದು ಪ್ರೊಫೆಸರರಿಗೆ ಹೇಳಿದಳು :

" ಸರ್, ನೀವು ಈ ಪದ್ಯ ಹೇಳೋದರಿಂದ, ಒಬ್ಬಳನ್ನು ನೋಯಿಸುತ್ತಿದ್ದೀರಿ. ದಯವಿಟ್ಟು ಈ ಪದ್ಯವನ್ನ ಇಲ್ಲಿಗೇ ನಿಲ್ಲಿಸಿರಿ! "

ಕಾವೇರಿಯ ವಾಕ್ಯದ ಜತೆಯಲ್ಲಿ ಕ್ಲಾಸಿನ ತುಂಬೆಲ್ಲ ಶಾಂತತೆ ವ್ಯಾಪಿಸಿತು. ಪ್ರೊಫೆಸರರು ಆ ಪದ್ಯ ಬಿಟ್ಟು ಬೇರೆ ಪಾಠ ಕಲಿಸುವುದಕ್ಕೆ ಪ್ರಾರಂಭಿಸಿದರು. ಕಮಲುವಿಗೆ ಆಗ ಜೀವ ಬಂತು. ಒಂದು ಸಲ ಕಾವೇರಿಯತ್ತ ಕೃತಜ್ಞತಾಪೂರ್ಣ ದೃಷ್ಟಿಯನ್ನು ಬೀರಿದಳು. ಕುರೂಪಿ ಮಗುವನ್ನು ಎಲ್ಲರೂ ಹೀಯಾಳಿಸುವಾಗ, ಯಾರೋ ಬಂದು ಪ್ರೇಮದಿಂದ ಮುದ್ದಿಸಿದಾಗ, ಆ ಮಗುವಿಗಾದ ಅನಂದದಷ್ಟು ಆನಂದ ಕಮಲುವಿಗಾಗಿತ್ತು. ಅಷ್ಟರಲ್ಲಿಯೇ ಗಂಟೆಯಾದುದರಿಂದ, ಪ್ರೊಫೆಸರರು ಕ್ಲಾಸಿನಿಂದ ಹೊರಹೊರಟರು. ಮುಂದೆ ಅರ್ಧ ತಾಸಿನ ಬಿಡುವು ಇದ್ದುದರಿಂದ ಹುಡುಗಿಯರೂ ಹೊರಬಿದ್ದರು. ಕಮಲು ಕಾವೇರಿಯನ್ನು

ಹಿಂಬಾಲಿಸಿದಳು ಕಾಲೇಜಿನ ಗಾರ್ಡನ್ನಿನ ಹತ್ತಿರ ಬಂದಾಗ ಕಮಲು ಕಾವೇರಿಯನ್ನು ಮಾತನಾಡಿಸಿದಳು :

" ನೀವು ಇಂದು ನನಗೆ ತುಂಬಾ ಉಪಕಾರ ಮಾಡಿದಿರಿ. ನಾನು ನಿಮಗೆ ಕೃತಜ್ಞಳು "

ಕಾವೇರಿ ಪ್ರೇಮದಿಂದ ಕಮಲುವಿನ ಬೆನ್ನ ಮೇಲೆ ಕೈಯಾಡಿಸುತ್ತ ಹೇಳಿದಳು :

" ಇದರಲ್ಲಿ ಉಪಕಾರವೆಂಥದು ? "

ಇಬ್ಬರೂ ಕೈ ಕೈ ಕುಲುಕಾಡಿಸಿ, ಹತ್ತಿರದ ಬೆಂಚಿನ ಮೇಲೆ ಕುಳಿತು ಮಾತನಾಡತೊಡಗಿದರು. ಕಾವೇರಿಯೇ ಪುನಃ ಕೇಳಿದಳು :

" ಒಂದು ಮಾತು ಕೇಳಬಹುದೇ ? "

" ಓಹೋ ಅವಶ್ಯವಾಗಿ !"

" ಆ ಪದ್ಯ ಓದಿದಾಗ, ಹುಡುಗಿಯರೆಲ್ಲ ನಿನ್ನನ್ನೇಕೆ ಗೇಲಿ ಮಾಡಿದರು ? ಆ ಪದ್ಯಕ್ಕೂ ನಿನಗೂ ಏನಾದರೂ ಸಂಬಂಧ — ? "

"ಹೌದು! ನೀವು ಈ ಊರಿನವರಲ್ಲವೆಂದು ಕಾಣುತ್ತದೆ. ಈ ಊರವರಾಗಿದ್ದರೆ ಈ ಪ್ರಶ್ನೆ ಕೇಳುತ್ತಿರಲಿಲ್ಲ. ನಾನೊಬ್ಬ ಹೀನಕುಲದಲ್ಲಿ ಜನಿಸಿದವಳು. ನನ್ನ ತಾಯಿ ವೇಶ್ಯೆ. ನಾವು ಬಡವರು; ಆದರೂ ನನಗೆ ಶಿಕ್ಷಣದ ಮೇಲೆ ತುಂಬಾ ಪ್ರೇಮ. ಅದಕ್ಕಾಗಿಯೇ ನನ್ನ ತಾಯಿ ನನಗೆ ಕಲಿಸುತ್ತಿದ್ದಾಳೆ. "

" ನಿಮ್ಮ ತಾಯಿ ಧನ್ಯೆ. ತಾನಿಂಥವಳಾದರೂ, ನಿಮಗೆ ಉಚ್ಚ ಶಿಕ್ಷಣ ಕೊಡಿಸುತ್ತಿದ್ದಾಳೆ. ಅವಳೊಬ್ಬ ಆದರ್ಶ ಸ್ತ್ರೀ !"

" ಅದೆಲ್ಲ ನಿಜ ! ಆದರೆ ಜನವೆಲ್ಲ ಹೀಗೆ ಗೇಲಿ ಮಾಡುತ್ತಾರೆ. ನನಗೆ ಸಮಾಜದಲ್ಲಿ ಒಂದು ಮಾನವಿಲ್ಲ. ಈ ಜನರ ನಿಂದೆ-ಟೀಕೆಯಿಂದ ನಾನು ತುಂಬಾ ರೋಸಿಕೊಂಡಿದ್ದೇನೆ. ಅದರ ಪರಿಣಾಮವಾಗಿ ನಾನು ಕಮ್ಯುನಿಝಂ ತತ್ತ್ವಗಳಿಗೆ ಶರಣು ಹೋಗಿದ್ದೇನೆ."

ಕಾವೇರಿ ಒಂದು ಸಲ ಅಂಜಿದಳು; ಆದರೂ ಧೈರ್ಯ ತಂದುಕೊಂಡು ಹೇಳಿದಳು :

" ನಾಲ್ಕು ಜನ ಹೀಯಾಳಿಸಿದರೆಂದು, ನೀವು ಕಮ್ಯುನಿಸ್ಟರಾಗುವುದು ಬೇಡ; ವಿಚಾರ ಮಾಡಿರಿ! "

" ಎಲ್ಲಾ ವಿಚಾರ ಮಾಡಿಯಾಯ್ತು. ನಾವು ಬಡವರಾದುದರಿಂದ ನನ್ನ ತಾಯಿ ವೇಶ್ಯಾವೃತ್ತಿಗಾಗಿ ನಿಂತಳು. ದೇವರು ಸೃಷ್ಟಿಸಿದ ಈ ಜಗತ್ತಿನಲ್ಲಿ, ಸಿರಿತನ ಬಡತನಗಳೆಂಬ ಭೇದವೇಕೆ ಹೇಳಿ. ಈಗ ನನ್ನ ತಾಯಿ ಕೂಡ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದವಳೆಂದು ಧಾರಾಳವಾಗಿ ಹೇಳಬಹುದು. "

" ಅದು ಹೇಗೆ ?"

" ಹೌದು. ಅವಳು ಸಿರಿವಂತರ ಸೊತ್ತನ್ನು ಸೆಳೆಯುತ್ತಾಳೆ. ತನ್ನ ಸೌಂದರ್ಯದ ಆಸ್ತ್ರದಿಂದ ಸಿರಿವಂತರನ್ನು ತುಂಡರಿಸಿ ಚೆಲ್ಲುತ್ತಾಳೆ "

" ಇದು ತಪ್ಪಲ್ಲವೇ ? ಮಾನವೀಯತೆಗೆ ಒಪ್ಪುವ ಮಾತೆ ? "

" ನನ್ನ ತಾಯಿ ಹಿಂಬಾಲಿಸಿದ ದಾರಿ ತಪ್ಪು ! ಆದರೆ ಸಿರಿವಂತರು ಹಾಳಾಗುತ್ತಿರುವುದನ್ನು ನೋಡಿ ನನಗೆ ಸಮಾಧಾನವಾಗುತ್ತದೆ. ಇದೇ ಕಮ್ಯುನಿಝಂ ತತ್ತ್ವ. "

"ಕಮ್ಯುನಿಝಂ ತತ್ತ್ವ ಸರಿ ಇರಬಹುದು; ಆದರೆ ನೆರೆಮನೆಯವರ ಮನೆ ಬಹಳ ಸುಂದರವಾಗಿದೆಯೆಂದು, ಅದನ್ನು ಕೆಡಹಿ ತಾವಿರುವ ಗುಡಿಸಿಲಿನ ಆಕಾರಕ್ಕೆ ತರುವುದು ಯೋಗ್ಯವೇ ? "

" ಹಾಗಾದರೆ ಕೆಲವರು ಗುಡಿಸಿಲಿನಲ್ಲಿ ಮಲಗುವುದು, ಕೆಲವರು ಮಹಲಿನಲ್ಲಿ ಮಲಗುವುದು ಯೋಗ್ಯವೇ ? ಸಮತೆಯನ್ನು ಕಾಯ್ದುಕೊಳ್ಳುವುದೇ ಕಮ್ಯುನಿಝಂ ತತ್ತ್ವ !"

" ಸಮತೆ ಬೇಕೆಂದು ಕಟ್ಟಿದ ಮನೆಯನ್ನು ಕೆಡಿಸಬೇಕೆ ? "

" ಹಾಗಾದರೆ ಸಮತೆ ಸಾಧಿಸುವುದು ಹೇಗೆ ? "

" ತನ್ನ ಗುಡಿಸಲನ್ನೇ ನೆರೆಮನೆಯವರ ಮನೆಯಂತೆ ಮಾರ್ಪಡಿಸುವುದಕ್ಕೆ ಪ್ರಯತ್ನಿಸಿ, ಮತ್ತೊಂದು ಮನೆಯನ್ನು ಕಟ್ಟುವುದು. ಇದರಿಂದ ಸಮತೆಯು ಸಾಧಿಸಲಾರದೇ ? "

ಕಮಲಳನ್ನು ಕಾವೇರಿಯ ಈ ಹೊಸ ಸಮಸ್ಯೆ ವಿಚಾರಕ್ಕೆ ಗುರಿ ಮಾಡಿತು. ವಿಚಾರಿಸಿ ಉತ್ತರಿಸಿದಳು :

" ನಿಜ, ಆದರೆ ಇದಕ್ಕೆ ತುಂಬಾ ಸಮಯ ಹತ್ತುತ್ತದೆ ಅಲ್ಲವೇ ?"

" ತಾಳಿದವನು ಬಾಳಿಯಾನು ಎಂಬ ಗಾದೆಯ ಮಾತನ್ನು ಕೇಳಿಲ್ಲವೇ ? "

ಈ ಮಾತಿನ ಕೊನೆಯಲ್ಲಿ ಇಬ್ಬರೂ ನಕ್ಕರು. ಕಡೆಗೆ ಕಮಲುವೇ ಉತ್ತರಿಸಿದಳು;

" ನೀವು ಈ ತತ್ತ್ವಗಳನ್ನು ವಿರೋಧಿಸುತ್ತಿದ್ದೀರಿ; ಇದರ ಮೇಲಿಂದ, ನೀವೂ ಒಬ್ಬ ಜಮೀನುದಾರರ ಮಗಳು ಎಂದು ಭಾವಿಸಬಹುದೇ ನಾನು?"

" ನಾನು ಜಹಗೀರನ್ನು ಕಳೆದುಕೊಳ್ಳುತ್ತಿರುವ ಜಹಗೀರದಾರರ ಮಗಳು. ಈ ವರೆಗೆ ನೀನು ನಿನ್ನ ಪರಿಚಯ ಹೇಳಿದೆ. ನಾನೀಗ ನನ್ನ ಪರಿಚಯ ಮಾಡಿಕೊಡುತ್ತೇನೆ. ನನ್ನ ಹಾಯಸ್ಕೂಲಿನ ವ್ಯಾಸಂಗ ಮುಗಿಸಿದ ನಂತರ, ನನಗೆ ಪದವೀಧರಳಾಗಬೇಂದು ಆಶೆಯಾಯಿತು. ತಂದೆ ಅದಕ್ಕೆ ಮೊದಲೊಪ್ಪಲಿಲ್ಲ. ಆದರೆ ತಾಯಿಯ ಬಲವಂತದಿಂದ ಒಪ್ಪಿದರು. ನನ್ನ ತಂದೆ ಸ್ವಲ್ಪ ಖರ್ಚಿಕರು. ತಮ್ಮ ಖರ್ಚಿಗೆ ಹೊಲದಿಂದ ಬರುವ ಉತ್ಪನ್ನ ಸಾಕಾಗದ್ದರಿಂದ, ಅವರು ಮೊದಲು ನನ್ನನ್ನು ಕಾಲೇಜಿಗೆ ಕಳಿಸಲು ಸಮ್ಮತಿಸಲಿಲ್ಲ. ಮುಂದೆ ಸಮ್ಮತಿ ಕೊಟ್ಟರೆಂದೇ ಈ ಊರಿಗೆ ಬಂದು ಮನೆ ಮಾಡಿದೆವು. ಈಗ ಒಂದು ತಿಂಗಳಾಯಿತಷ್ಟೇ! ಅದಕ್ಕೆ ನನಗೆ ನಿನ್ನ ತಾಯಿಯ ಬಗ್ಗೆ ತುಂಬಾ ಗೌರವ "

" ಅದೇಕೆ ? "

" ನಾನು ಸಿರಿವಂತರ ಮಗಳೆಂದೆನಿಸಿಕೊಂಡರೂ ಕಾಲೇಜಿನ ಕಟ್ಟೆ ಹತ್ತಬೇಕೆಂದರೆ, ಮನೆಯಲ್ಲಿ ರಾಮಾಯಣವಾಯಿತು. ಆದರೆ ನಿನ್ನ ತಾಯಿ, ತಾನು ಈ ಸ್ಥಿತಿಯಲ್ಲಿ ಇದ್ದೂ ತನ್ನ ಮಗಳನ್ನು ಸ್ವಸಂತೋಷದಿಂದ ಕಾಲೇಜಿಗೆ ಕಳಿಸುತ್ತಿದ್ದಾಳೆಂದು ಅವಳ ಬಗ್ಗೆ ನನಗೆ ಆದರ ಹುಟ್ಟಿಸಿತು. "

" ನನ್ನದೂ ನಿನ್ನ ಹಾಗೆಯೇ ಆಯಿತು; ಆದರೆ-ಸುಮ್ಮೆವದಿಂದ ನನ್ನ ತಾಯಿಗೆ ಒಂದು ತಿಂಗಳ ಹಿಂದಿನಿಂದ ಒಂದು ಒಳ್ಳೆ ಸಿರಿವಂತ ಗಿರಾಕಿ

ಸಿಕ್ಕಿದೆ. ಆ ಬಲದ ಮೇಲೆ, ತಾಯಿ ನನ್ನನ್ನು ಕಾಲೇಜಿಗೆ ಕಳಿಸಿದ್ದಾಳೆ. ಅವನ ಸುಲಿಗೆಯ ಮೇಲೆ ನನ್ನ ಕಾಲೇಜು ನಡೆದಿದೆ ಎಂದರೂ ಪರವಾ ಇಲ್ಲ. "

" ಅಯ್ಯೋ ಪಾಪ ! ತುತ್ತು ಕೊಡಹೋಗುವವರ ಬೊಟ್ಟನ್ನೇ ಕಚ್ಚಬಹುದೇ ? "

ಮಾತಿನ ಓಘ ಜಗಳದಲ್ಲಿ ಪರಿಣಮಿಸುತ್ತಿದೆಯೋ ಎಂದು ಕಮಲು ವಿಷಯವನ್ನೇ ಮರೆಮಾಜಿಸಿ, ನಗುತ್ತ ಬೇರೆ ವಿಷಯಕ್ಕೆ ಕೈಹಾಕಿದಳು.

" ಅಯ್ಯೋ! ಈ ವರೆಗೆ ಮಾತಾಡಿಯೂ, ಇಬ್ಬರಿಗೂ ಪರಸ್ಪರರ ಹೆಸರು ತಿಳಿಯದೇ ಹೋಯಿತಲ್ಲ ? "

" ಓಹೋ ! ಹೌದು ನಿಜ ! ನನ್ನ ಹೆಸರು ಕಾವೇರೀ ಜಹಗೀರ್‌ದಾರ್ ! ನಿಮ್ಮದು ? "

" ನನ್ನದು ಕಮಲಾ ಕಲಾವಂತ. "

" ನಾನಿನ್ನು ನಿಮಗೆ ಬರೇ ಕಮೂ ಎಂದು ಕರೆಯುತ್ತೇನೆ ಆಗಬಹುದೇ ? "

" ಧಾರಾಳವಾಗಿ " ಇಬ್ಬರೂ ನಕ್ಕು ಕೈಯಲ್ಲಿ ಕೈಯಿರಿಸಿಕೊಂಡು ಬೀದಿಗಿಳಿದರು. ಆ ನಗು ಅವರ ಸ್ನೇಹದ ಪ್ರಥಮಪಲ್ಲವಿಯಾಗಿತ್ತು.

× × × ×

ರಾಜಕಾರಣದಲ್ಲಿಯ ಭಿನ್ನಾಭಿಪ್ರಾಯಗಳು ಕಾವೇರಿ-ಕಮಲುವಿನ ಸ್ನೇಹದಲ್ಲಿ ಅಡೆತಡೆ ಮಾಡಲಿಲ್ಲ. ಅವರಿಬ್ಬರಲ್ಲಿಯ ಸ್ನೇಹ ಅನ್ಯೋನ್ಯ-ನಾಗಿ ಬೆಳೆಯತೊಡಗಿತು. ನೋಡಿದವರಿಗೆಲ್ಲ ಅವರಿಬ್ಬರೂ ಒಡಹುಟ್ಟಿದ ಅಕ್ಕ-ತಂಗಿಯರಂತೆ ಕಾಣಿಸುತ್ತಿದ್ದರು. ಆದರೆ ಇಬ್ಬರ ಜೀವನದಲ್ಲಿ ಕೊಂಚ ಮಾರ್ಪಾಡು ಕಾಣಿಸಿಕೊಳ್ಳತೊಡಗಿತು. ಸಾವಧಾನವಾಗಿ ಅವರಿಬ್ಬರ ಉಡಿಗೆ-ತೊಡಿಗೆಯಲ್ಲೂ ಆ ಪರಿಣಾಮ ಕಾಣಿಸತೊಡಗಿತು. ಕಮಲು ಬರುಬರುತ್ತ ಬೆಲೆಯುಳ್ಳ ವಸ್ತ್ರಗಳನ್ನು ಉಡಲು ತೊಡಲು ತೊಡಗಿದಳು. ಅದರ ವಿರುದ್ಧವಾಗಿ ಕಾವೇರಿಯ ಉಡಿಗೆ-ತೊಡಿಗೆ, ತುಂಬಾ ಸಾದಾ ತರಗತಿಗೆ ಇಳಿಯತೊಡಗಿತು. ಆದರೆ ಇದರಿಂದ ಅವರ ಸ್ನೇಹಕ್ಕೆ ಯಾವ ಕುಂದೂ ಬರುತ್ತಿರಲಿಲ್ಲ. ಒಂದೊಂದು ಸಲ ಕಾವೇರಿ ಜೇಷ್ಟೆಗಾಗಿ ಕಮಲಳನ್ನು ಕೇಳುತ್ತಿದ್ದಳು :

" ಏನಮ್ಮಾ, ನೀನೀಗ ತುಂಬಾ ಸಿರಿವಂತಳಾಗಹತ್ತಿರುವೆ ? "

ಅದಕ್ಕುತ್ತರವಾಗಿ ಕಮಲು " ಹೌದಮ್ಮಾ ಇದು ಕಮ್ಯುನಿಝಂದ ಪರಿಣಾಮ. ನನ್ನ ತಾಯಿಗೆ ಸಿಕ್ಕ ಆ ಗಿರಾಕಿ, ತನ್ನ ಸಂಪತ್ತನ್ನೆಲ್ಲ ನನ್ನ ತಾಯಿಯ ಪಾದದಲ್ಲಿ ಸುರಿಯುತ್ತಾನೆ. ಅವನ ಈ ಹುಚ್ಚುತನದಿಂದ ನನಗೆ ಮಾತ್ರ ಸಮಾಧಾನವೆನಿಸುತ್ತದೆ " ಎಂದು ನಗುತ್ತಲೇ ಉತ್ತರಿಸುತ್ತಿದ್ದಳು. ಆಗ ಕಾವೇರಿ ಗಂಭೀರಳಾಗಿ " ಅಯ್ಯೋ ಪಾಪ. ತುತ್ತು ಕೊಡುವ ಕೈಯನ್ನೇ ಕಚ್ಚಬೇಕೇ ನೀನು? " ಎಂದು ಕೇಳುವಳು. ಅಲ್ಲಿಂದ ಮಾತಿನ ಪ್ರವಾಹವನ್ನು ಕಮಲು ಬದಲಿಸಿಬಿಡುತ್ತಿದ್ದಳು. ಕಮಲುವಿಗೆ ಮಾತ್ರ ಕಾವೇರಿಯನ್ನು ಕಂಡು ತುಂಬಾ ದಯೆಬರುತ್ತಿತ್ತು. ಜಗತ್ತಿನ ವ್ಯವಹಾರ ಕಂಡರಿಯದ ಮುಗ್ಧ ಬಾಲಿಕೆಯಾಗಿದ್ದಳು ಕಾವೇರಿ, ಕಮಲುವಿನ ದೃಷ್ಟಿಯಲ್ಲಿ. ಅದಕ್ಕಾಗಿ ಕರುಣೆ ಎನಿಸಿ, ಕಮಲು ಕಾವೇರಿಯನ್ನು ತುಂಬಾ ಪ್ರೀತಿಸತೊಡಗಿದಳು. ಕಾವೇರಿಯೂ ಪ್ರತಿಯಾಗಿ ವಿಶ್ವಾಸದಿಂದ ಕಮಲುವನ್ನು ಆದರದಿಂದ ಕಾಣುತ್ತಿದ್ದಳು.

ಕಾಲೇಜಿನ ಎರಡನೆಯ ಟರ್ಮು ಪ್ರಾರಂಭವಾಯಿತು. ಆ ಟರ್ಮಿನ ಫೀಯನ್ನು ಕಾವೇರಿಯು ಮುಂಗಡವಾಗಿ ತುಂಬಿದ್ದರಿಂದ, ಅವಳ ಹೆಸರನ್ನು ಪ್ರಿನ್ಸಿಪಾಲರು ಕಾಲೇಜಿನಿಂದ ತೆಗೆದು ಹಾಕಿದರು. ಕಾವೇರಿಗೆ ತುಂಬಾ ದುಃಖವಾಯಿತು. ಆದರೆ ಉಪಾಯವಿರಲಿಲ್ಲ; ಕಮಲಳೂ ಕಾವೇರಿಯ ಸಲುವಾಗಿ ಮಮ್ಮಲ ಮರುಗಿದಳು. ಅಂದು ಕಾಲೇಜು ಬಿಟ್ಟಾಕ್ಷಣ ಕಮಲು ಕಾವೇರಿಯನ್ನು ಬೀದಿಯಲ್ಲಿ ಸಂಧಿಸಿ ಮಾತನಾಡಿಸಿದಳು :

"ಕಾವೇರಿ, ಫೀಯನ್ನು ನಿಮ್ಮ ತಂದೆಯವರಿಂದ ತಂದು ಪುನಃ ಕಾಲೇಜನ್ನು ಸೇರಬಾರದೇ ? " ದುಃಖಿತಸ್ವರದಲ್ಲಿಯೇ ಕಾವೇರಿ ಉತ್ತರಿಸಿದಳು :

"ನಮ್ಮ ತಂದೆ ದುಂದುಗಾರರು ಎಂದು ನಿನಗೆ ಮೊದಲೇ ಹೇಳಿಲ್ಲವೇ? ಅವರ ಖರ್ಚಿಗೇ ದುಡ್ಡು ಸಾಲದು. ಇದರಿಂದ ನಾಳೆ ನಾನು, ನನ್ನ ತಾಯಿ— ನಮ್ಮೂರಿಗೆ ಹೊರಡುತ್ತೇವೆ. ತಂದೆಯವರು ಕೆಲ ದಿನ ಇಲ್ಲಿಯೇ ಇದ್ದು ಬರುತ್ತಾರಂತೆ ! "

" ಕಾವೇರೀ, ನೀನು ಕೋಪಿಸಿಕೊಳ್ಳದಿದ್ದರೆ ಒಂದು ಮಾತು ಕೇಳಲೇ ? "

"ಏನದು ? "

"ನೀನು ಸಮ್ಮತಿಸಿದರೆ, ನಾನು ನನ್ನ ತಾಯಿಯನ್ನು ಒಡಂಬಡಿಸಿ ಈ ಟರ್ಮಿನ ಫೀಯನ್ನು ಅವಳಿಂದ ಕೊಡಿಸುತ್ತೇನೆ ! "

"ಆದರೆ— ? "

"ಆದರೆ ಗೀದರೆ ಬೇಡ. ನನ್ನ ತಾಯಿ ಹಾಗೆಲ್ಲ ತುಂಬಾ ಒಳ್ಳೆಯವಳು. ತನಗೆ ಸಿಕ್ಕ ಆ ಗಿರಾಕಿಯನ್ನು ಅವಳು ಸುಲಿಯುತ್ತಾಳೆ. ನಿನಗೆ ಆದರಲ್ಲಿಂದ ಅಷ್ಟು ಹಣವನ್ನು ಅವಳು ಸುಲಭವಾಗಿ ಕೊಡುತ್ತಾಳೆ. ನೀನು ಈಗ ನನ್ನ ಜತೆಯಲ್ಲಿ ನನ್ನ ಮನೆಗೆ ನಡೆ."

ಕಾವೇರಿಗೆ ಧರ್ಮಸಂಕಟಕ್ಕೆಟ್ಟುಕೊಂಡಿತು ತನ್ನ ಮತ್ತು ಕಮಲುವಿನ ಸ್ನೇಹ ಗಾಢವಾಗಿದ್ದರೂ, ತಾನೆಂದೂ ಅವಳ ಮನೆಗೆ ಈ ಮೊದಲು ಹೋಗಿರಲಿಲ್ಲ. ಅವಳೂ ತನ್ನ ಮನೆಗೆ ಬಂದಿರಲಿಲ್ಲ. ವೇಶ್ಯೆಯ ಮನೆಗೆ ಹೋಗುವುದಕ್ಕೆ ಅವಳ ಮನಸ್ಸು ಒಂದು ಸಲ ಅಂಜಿತು. ಆದರೂ ನಿರಾಶೆಯಲ್ಲಿಯ ಆಶೆಯ ಕಿರಣ ಅವಳಿಗೆ ಧೈರ್ಯ ತಂದುಕೊಟ್ಟಿತು. ಅಂಜಂಜುತ್ತಲೇ ಮತ್ತೆ ಕೇಳಿದಳು :

"ಕಮಲು, ನೀನು ಹೇಳಿದಂತೆ ನಿಮ್ಮ ಮನೆಗೆ ನಾನು ಬರಬಹುದು; ಆದರೆ ನಿನ್ನ ತಾಯಿ ಈಗ ತನ್ನ 'ಅವರ' ಜತೆಯಲ್ಲಿದ್ದರೆ? ಅವರಿಗೆ ತೊಂದರೆ ಕೊಡುವುದು ತಪ್ಪಲ್ಲವೇ ? "

"ಹೋಗೇ ಹುಚ್ಚೀ, ಅವರು....ಈಗ ಮಧ್ಯಾಹ್ನದ ಹೊತ್ತಿಗೆ ಅವರು ಬರೂದಿಲ್ಲ. ರಾತ್ರಿಗೆ ತಾನೇ ? " ಕಾವೇರಿ ಮೌನಳಾದಳು. ಆ ಮೌನ ಸಮ್ಮತಿಯನ್ನು ಸೂಚಿಸತೊಡಗಿತ್ತು.

ಕಮಲು ಕಾವೇರಿಯನ್ನು ತನ್ನ ಮನೆಯತ್ತ ಕರೆದುಕೊಂಡು ನಡೆದಳು. ದಾರಿಯಲ್ಲಿ ಕಾವೇರಿ ತನ್ನ ಕುಲದೇವರನ್ನು ಪ್ರಾರ್ಥಿಸಿಕೊಂಡಳು. ಕೆಲಸದಲ್ಲಿ ಜಯ ಸಿಕ್ಕಲೆಂದು ಹರಕೆ ಹೊತ್ತಳು. ಮನದಲ್ಲಿಯೇ ಕಮಲುವನ್ನು ಅವಳ ದಯೆಗಾಗಿ ನೂರಾರು ಸಲ ಅಭಿನಂದಿಸಿದಳು. ದಾರಿಯುದ್ದಕ್ಕೂ ಇಬ್ಬರೂ ಮಾತನಾಡದೇ ಹೊರಟಿದ್ದರು. ಕಮಲುವಿಗೆ ಆ ಮೌನ ಸಹಿಸಲಾಗಲಿಲ್ಲವೇನೋ! ತಾನೇ ಮಾತಿಗಾರಂಭಿಸಿದಳು:

"ನೋಡು ಕಾವೇರೀ, ಈಗ ನನ್ನ ತಾಯಿ ಸರೆ ಹಿಡಿದ ಗಿರಾಕಿ ಸಿರಿವಂತನೆಂದು, ನನ್ನ ಶಿಕ್ಷಣ ಸಾಗುತ್ತದೆ. ಇಂಥ ಕಾಲದಲ್ಲಿ ಸಿರಿವಂತರನ್ನು ಸುಲಿದರೆ ಅನ್ಯಾಯವಲ್ಲ!"

"ಇರಲಿ ಬಿಡು ಕಮಲು, ಒಬ್ಬರ ತುತ್ತನ್ನು ಕಸಿದು ತನ್ನ ಹೊಟ್ಟೆಯಲ್ಲಿ ಹಾಕಿಕೊಂಡರೆ, ಹೊಟ್ಟೆ ಸದಾ ಕಾಲಕ್ಕೆ ತುಂಬುತ್ತದೆಯೇ?"

"ಆಗಿನ ಕಾಲಕ್ಕಾದರೂ ತುಂಬುತ್ತದಲ್ಲಾ!"

"ಇರಲಿ, ಆ ಸಿರಿವಂತರನ್ನೇ 'ಒಬ್ಬ ಬಡ ಹುಡುಗಿಯ ಶಿಕ್ಷಣಕ್ಕೆ ಕೆಲವು ಧನ ಸಹಾಯ ಮಾಡು' ಅಂತ ನೀನು ಪ್ರಾರ್ಥಿಸಿಕೊಂಡರೆ ಹೇಗೆ?"

"ನಿನಗೆ ಹುಚ್ಚು ಕಾವೇರಿ! ಸ್ವಾರ್ಥವಿಲ್ಲದೇ ಯಾವನೂ ಸಹಾಯ ಮಾಡಲಾರನು. ಪರ್ಯಾಯವಾಗಿ ಎಳೆಯಬೇಕು. ನನಗೂ ಅದಾರಿ ಸರಿದೋರುವುದಿಲ್ಲ! ಆದರೆ ತಾಯಿ ಮಾಡುವುದನ್ನು ತಡೆಯಲಾರೆ."

"ಆದರೆ, ನನಗೇಕೋ ಅನ್ಯಾಯವೆನಿಸುತ್ತದೆ. ಒಬ್ಬನ ಗೋರಿಯ ಮೇಲೆ ಮನೆ ಕಟ್ಟಿದಂತಾಗುತ್ತದೆ. ಒಬ್ಬನ ಸುನೆ ಮುರಿದು, ಆ ಮನೆಯ ತೊಲೆಯಿಂದ ತನ್ನ ಮನೆ ನಿಲ್ಲಿಸಿದಂತಾಗುತ್ತದೆ."

"ನಾಕು, ರೀತಿಗೂ ನೀತಿಗೂ ಯಾವುದೂ ಸಂಬಂಧವಿಲ್ಲ ತಾನು ಮಳೆಯಲ್ಲಿ ತೋಯಿಸಿಕೊಳ್ಳುವಾಗ ಯಾರ ಕೊಡೆಯೇನು? ಕಸಿದು. ಕೊಳ್ಳಲೇ ಬೇಕು!"

ಮಾತಿನ ಕೊನೆಯಲ್ಲಿ ಕಮಲು ಉನ್ಮಾದದ ನಗೆ ನಕ್ಕಳು ಕಾವೇರಿ ಮಾತ್ರ ಉದಾಸೀನತೆಯ ನಿಟ್ಟುಸಿರನ್ನು ಬಿಟ್ಟಳು. ಈಗಾಗಲೇ ಅವರಿಬ್ಬರೂ ಕಮಲುವಿನ ಮನೆಯ ಮುಂಬಾಗಿಲಿಗೆ ಬಂದು ಮುಟ್ಟಿದರು. ಕಮಲು ಕಾವೇರಿಗೆ ತನ್ನ ಮನೆಯನ್ನು ತೋರಿಸುತ್ತ, ತನ್ನ ಮನೆಯ ಹೊಸ್ತಿಲೊಳಗೆ ಕಾಲಿರಿಸಿದಳು. ಕಾವೇರಿಯನ್ನು ಸೋಫಾದಲ್ಲಿಯೆ ಖಿರ್ಚಿಯ ಮೇಲೆ ಕುಳ್ಳಿರಿಸಿ ಕಮಲು ತಾಯಿಯನ್ನು ಕೂಗಿದಳು:

"ಅವ್ವಾ!"

ಬದಿಯ ಕೋಣೆಯಿಂದ ಪ್ರತ್ಯುತ್ತರ ದೊರಕಿತು ಆ ಕೋಣೆಯ ಬಾಗಿಲು ಹಾಕಿತ್ತು. ಕಮಲೆ ಪರಿಸ್ಥಿತಿಯು ಏನೆಂಬುದನ್ನು ಊಹಿಸಿದಳು. ಹಾಗೆಯೆ ಕಾವೇರಿಯತ್ತ ಮುಖ ತಿರುಗಿಸಿ ಹೇಳಿದಳು:

"ಏನೂ ಅಂಜಬೇಡ ಕಾವೇರೀ! ಇಂದೇಕೋ ಆ ಸಿರಿವಂತ ಈಗ ಬಂದಿದ್ದಾನೆ. ಈಗ ತಾನೇ ಹೊರಟು ಹೋಗುವನು. ಇಲ್ಲಿಯೇ ಕೂಡ್ರೋಣ!"

ಕಾವೇರಿ ದೇವರ ಮೇಲೆ ಭಾರ ಹಾಕಿ, ದೇವರನ್ನು ನೆನೆಯತ್ತ ಕುಳಿತಳು. ಆ ವಿಟನಲ್ಲಿ ತನ್ನನ್ನು ನೋಡಿ ಮೋಹಗೊಂಡು, ತನ್ನನ್ನೆಲ್ಲಿ ಹಿಡಿಯುವನೋ ಎಂಬಂಜಕೆ ಅವಳಿಗೆ ಪ್ರಬಲವಾಗತೊಡಗಿತ್ತು.

ಮುಂದೆ ಕೆಲವೇ ನಿಮಿಷದಲ್ಲಿ ಬಾಗಿಲು ತೆರೆಯಿತು. ಒಳಕೋಣೆಯಿಂದ ಆ ಸಿರಿವಂತ ಮನುಷ್ಯ, ತನ್ನ ಕೋಟಿನ ಬಿರಡಿಗಳನ್ನು ಹಾಕಿಕೊಳ್ಳುತ್ತ ಹೊರಬಿದ್ದು, ಸೋಫಾಕ್ಕೆ ಬಂದ. ಅವನನ್ನು ನೋಡಿದಾಕ್ಷಣ ಕಾವೇರಿ ಕಿಟಾರನೇ ಕಿರುಚಿಕೊಂಡು "ಅವ್ವಾ" ಎಂದು ಕೂಗಿಕೊಂಡು ರೋದಿಸುವುದಕ್ಕಾರಂಭಿಸಿದಳು. ಆ ವ್ಯಕ್ತಿಗೆ ತನ್ನ ಮಗಳಿಗೆ ಮುಖ ತೋರಿಸುವುದಕ್ಕೂ ನಾಚಿಕೆಯಾಗಿರಬೇಕು, ಹಾಗೆಯೆ ಬಾಗಿಲಿನಿಂದ ಹೊರಬಿದ್ದು ಹೋದ. ಕಾವೇರಿಯೂ ಕಮಲಿಗೆ ಅಳುತ್ತಲೇ ಹೇಳಿದಳು:

"ನನ್ನ ಮನೆ ಕಡವಿ ನಿನ್ನ ಮನೆ ನಿಲ್ಲಿಸಿಕೊಂಡೆ. ದೇವರು ನಿನಗೆ ಒಳ್ಳೆಯದನ್ನು ಮಾಡಲಿ!" ಮಾತಿನ ಕೊನೆಗೆ ಹೊರಟಿದ್ದಳು.

ಕಮಲು ಅಪಾಧಿನಿಯಂತೆ ಅವಳು ಹೋಗುವುದನ್ನು ನೋಡುತ್ತ ನಿಂತಳು. ಕಮಲುವಿನ ತಾಯಿ ಮಗಳಿಗೆ "ಅವನ ಮಗಳನ್ನು ನೀನು ಇಲ್ಲ್ಯಾಕೆ ಕರೆತಂದೆ? ನಿನಗೇನು ಅಪಲಕ್ಷಣ ಹತ್ತಿದೆ?" ಎಂದಳು.

ಕಮಲೆ ಸಿಟ್ಟಿನಿಂದ ಉತ್ತರಿಸಿದಳು: "ಅವ್ವಾ ಇನ್ನು ಮೇಲೆ ಅವನನ್ನು ಇಲ್ಲಿ ಬರಗೊಡಿಸಬೇಡ."

ತಾಯಿ ಅಷ್ಟೇ ಸಿಟ್ಟಿನಿಂದ ಹೇಳಿದಳು: "ಅಹಾ, ನಿನ್ನ ಜಾಣತನಕ್ಕೆ ಮಂಗಳಾರತಿ ಎತ್ತಲಿ, ಅವನನ್ನು ಬರಗೊಡಿಸಬೇಡ ಎಂದರೆ, ನಿನ್ನ ಕಾಲೇಜಿನ ಖರ್ಚು ಯಾರು ಕೊಡಬೇಕು?" ಆ ಉತ್ತರವನ್ನು ಕೇಳಿದೊಡನೆ ಕಮಲೆ ನೆಲಕ್ಕೆ ಕುಸಿದು ಬಿದ್ದಳು. ಅವಳೆದುರಿನಲ್ಲಿ ಕಾವೇರಿಯ ಮಾತುಗಳು ಕುಣಿಯುತ್ತಿದ್ದುವು.

"ಒಬ್ಬನ ಗೋರಿಯ ಮೇಲೆ ಮನೆಯನ್ನು ಕಟ್ಟಬಹುದೇ,? ಒಬ್ಬನ ಮನೆ ಮುರಿದು ಆ ಮನೆಯ ತೊಲೆಯಿಂದ ತನ್ನ ಮನೆಯನ್ನು ನಿಲ್ಲಿಸುವುದು ಯಾವ ನ್ಯಾಯ?"

ಕಣ್ಣೆದುರಿನಲ್ಲಿ ನಿಂತ ಈ ಮಾತುಗಳ ತಾಂಡವ ನೃತ್ಯ ಕಮಲೆಯ ತಲೆಯೊಳಗಿನ ಕಮ್ಯುನಿಸ್ಟ್ ಭಾವನೆಯನ್ನು ಹೊಡೆದೋಡಿಸಿತ್ತು.

ಗೋಡೆಯ ಮೇಲಿನ ಹಲ್ಲಿಯೊಂದು ಲೊಟಗುಟ್ಟಿತು. ಆ ಸಪ್ಪಳ "ವಿಚಿತ್ರ ನಿಧಿ" ಎಂದು ಹೇಳಿದ ಹಾಗೆ ಕಮಲುವಿಗೆ ಭಾಸವಾಯಿತು.

ಸ್ವತಂತ್ರಭಾರತದ—

ಪಂಚವಾರ್ಷಿಕ ಯೋಜನೆ

ಶ್ರೀ. ವೀ. ಚ. ಹಿತ್ತಲಮನೆ ಬಿ. ಎಸ್‌ಸಿ. (ಅಗ್ರಿ) ಆನರ್ಸ್, ಅರಭಾವಿ.

★

ಭಾರತದ ಜನತೆಯ ಸುಖ-ಶಾಂತಿಗಾಗಿ ನಮ್ಮ ಜನತಾ ಪ್ರಭುತ್ವವು ಅಭೂತಪೂರ್ವವಾದ ಪಂಚವಾರ್ಷಿಕ ಯೋಜನೆಯನ್ನು ಆಚರಣೆಯಲ್ಲಿ ತಂದಿದೆ. ಈ ಯೋಜನೆಯ ಸ್ವರೂಪ-ಪರಿಣಾಮಗಳೆಂತಹದೆಂಬುದರ ಪರಿಚಯ, ಪ್ರತಿಯೊಬ್ಬ ನಾಗರಿಕನಿಗೂ ಇರಬೇಕು.

★

(ಲೇಖಾಂಕ ೧)

ಸಕಲ ವಿಧದಲ್ಲಿಯೂ ಹಿಂದೆಬಿದ್ದ ಭಾರತದ ಅಭಿವೃದ್ಧಿಯ ಚಿಂತನೆ ಆಗೀಗ ನಡೆಯಿತಾದರೂ, ಸ್ವಾತಂತ್ರ್ಯದ ಅವ್ಯಾಹತ ಪ್ರಯತ್ನದಲ್ಲಿ ಏನನ್ನೂ ಸಾಧಿಸಲಿಕ್ಕೆ ಸಾಧ್ಯವಾಗಲಿಲ್ಲ. ಅಲ್ಲದೆ ಭಾರತವು ಈಗಿನಂತೆ ಒಂದೇ ಒಂದಾದ ಆಡಳಿತೆಯಲ್ಲಿ ಬಿಂದಿಂದೂ ಇರಲಿಲ್ಲ. ಹೀಗಾಗಿ ಅಪಿಲ ಭಾರತಕ್ಕೆನೇ ಸಾಧಾರಣವಾದುದೇನನ್ನೂ ಚಿಂತಿಸುವುದಕ್ಕೆ ಅನೇಕ ಅಡ್ಡಿ ಆತಂಕಗಳಿದ್ದುವು. ೧೯೩೮ ರಲ್ಲೇನೋ ರಾಷ್ಟ್ರೀಯ ಕಾಂಗ್ರೆಸು, ಆಗಿನ ಆದರ ಅಧ್ಯಕ್ಷರಾದ ಪಂಡಿತ ಜವಾಹರಲಾಲ ನೆಹರೂರವರ ಅಧ್ಯಕ್ಷತೆಯಲ್ಲಿ ಒಂದು ಯೋಜನಾಸಮಿತಿಯನ್ನು ನಿರ್ಮಿಸಿತು. ಆ ಸಮಿತಿಗೆ ಆವಶ್ಯಕವಿರುವ ವಿಷಯಸಂಗ್ರಹ ಮಾಡುವುದೇ ಕಷ್ಟಸಾಧ್ಯವಾಗಿತ್ತು. ಆದರೂ ಪ್ರಯತ್ನಿಸಿ ೧೯೪೪ ರಲ್ಲಿ ೧೫ ವರುಷಗಳಲ್ಲಿ ೧೦,೦೦೦ ಕೋಟಿ ರೂಪಾಯಿ ವೆಚ್ಚ ತಗಲುವ ಒಂದು ಯೋಜನೆಯನ್ನು ಸಿದ್ಧಪಡಿಸಿತು. ಅದಕ್ಕೆ 'ಮುಂಬೈ ಯೋಜನೆ' ಎಂದು ಹೆಸರು. ಅದನ್ನು ಕಾರ್ಯರೂಪಕ್ಕೆಳಿಸುವುದು ಅತೀವ ತೊಂದರೆಯ ಕೆಲಸವಾಗಿತ್ತು. ಹೀಗಾಗಿ ಅದು ಕಾಗದದ ಯೋಜನೆಯಾಗಿ ಹಾಗೆಯೇ ಉಳಿಯಿತು. ೧೯೪೭ ರಲ್ಲಿ ಸ್ವಾತಂತ್ರ್ಯ ದೊರೆತೊಡನೆ, ನಮ್ಮವರೇ ಅಧಿಕಾರಕ್ಕೆ ಬಂದಾಗ್ಗೆ, ಬಹಳ ದಿನಗಳ ಕನಸು ನನಸಾಗುವ ಸಮಯ ತೋರಿ ಬಂದಿತು. ಹೊಸ ರಾಷ್ಟ್ರಕ್ಕೆ ಒದಗಿಬಂದ ನಿರಾಶ್ರಿತರ ಸಮಸ್ಯೆ, ದೇಶೀಯ ಸಂಸ್ಥಾನಿಕರ ಸಮಸ್ಯೆ ಇನ್ನೂ ಅನೇಕ ಅಡ್ಡಿ-ಆತಂಕಗಳ ಪೆಡಂಭೂತಗಳನ್ನು ನಿಯಂತ್ರಣದಲ್ಲಿ ತಂದು, ೧೯೫೦ ನೆಯ ಮಾರ್ಚ್ ತಿಂಗಳಲ್ಲಿ ಈ ಮಹಾಕಾರ್ಯಕ್ಕೆ ಮೊದಲುಮಾಡಲಾಯಿತು.

ರಾಷ್ಟ್ರದ ಮುಖ್ಯ ಪ್ರಧಾನರಾದ ಪಂಡಿತ ಜವಾಹರಲಾಲ ನೆಹರು ಅವರ ಅಧ್ಯಕ್ಷತೆಯಲ್ಲಿ, ೧೯೫೦ ನೆಯ ಮಾರ್ಚ್ ಯೋಜನಾ ಆಯೋಗವನ್ನು ಸ್ಥಾಪಿಸಲಾಯಿತು. ಅದು ಇಡಿಯ ರಾಷ್ಟ್ರಕ್ಕೆನೇ ಸಾಧಾರಣವಾದ, ಯಾವತ್ತೂ ತೀರನಾದ ಅಭಿವೃದ್ಧಿಗಳನ್ನೊಳಗೊಂಡ ಯೋಜನೆಯನ್ನು ನಾಡಿನಲ್ಲಿಯ ಸಕಲ ಸಾಧನ ಸಂಪತ್ತು, ಜನಶಕ್ತಿ, ಬಂಡವಲು, ಕಾರ್ಯರೂಪಕ್ಕೆಳಿಸುವುದಕ್ಕಿರುವ ಅಡಳಿತೆಯ ಸಿಬ್ಬಂದಿ ಇವೇ ಮೊದಲಾದ ಸೌಕರ್ಯಗಳನ್ನು ಲಕ್ಷ್ಯದಲ್ಲಿರಿಸಿ ಸಿದ್ಧಪಡಿಸಬೇಕಾಗಿತ್ತು. ಅಂತೆಯೇ ಅದಕ್ಕೆ 'ರಾಷ್ಟ್ರೀಯ ಯೋಜನಾ ಆಯೋಗ'ವೆಂದು ಹೆಸರು. ೧೯೫೧ ತಿಂಗಳು ಅವಿಶ್ರಾಂತ ಯತ್ನದ ಫಲವಾಗಿ, ೧೯೫೧ ನೆಯ ಜುಲೈ ತಿಂಗಳಲ್ಲಿ ಯೋಜನೆಯ ಕರಡು ಸಿದ್ಧವಾಗಿ, ಸಾರ್ವಜನಿಕರ ಅವಗಾಹನೆಗೆ ತರಲ್ಪಟ್ಟಿತು. ಆದರಲ್ಲಿ ಮುಖ್ಯವಾಗಿ ಎರಡು ಭಾಗಗಳಿದ್ದುವು. ಮೊದಲನೆಯ ಭಾಗದಲ್ಲಿಯ ಅಭಿವೃದ್ಧಿಯ ವೆಚ್ಚವು ೧,೯೯೫ ಕೋಟಿ ರೂಪಾಯಿಗಳಷ್ಟಿತ್ತು. ಈ ಬಂಡವಾಳವೆಲ್ಲ ನಮ್ಮಲ್ಲಿಯೇ ದೊರೆಯುಬಹುದೆಂದು ಅಂದಾಜು ಮಾಡಲಾಗಿತ್ತು. ಎರಡನೆಯ ಭಾಗದ ಅಭಿವೃದ್ಧಿಯ ವೆಚ್ಚವು ೩೦೦ ಕೋಟಿ ರೂಪಾಯಿಗಳಷ್ಟಿತ್ತು. ಹೊರಗಿನ ಸಹಾಯ ದೊರೆತಲ್ಲಿ ಕಾರ್ಯರೂಪಕ್ಕೆಳೆಯಬಹುದಾದ ಅಭಿವೃದ್ಧಿಯೋಜನೆಗಳಿದರಲ್ಲಿದ್ದು. ಒಟ್ಟಾರೆ ಕರಡುಯೋಜನೆಯ ವೆಚ್ಚವು ಸುಮಾರು ೧,೯೯೫ ಕೋಟಿ ರೂಪಾಯಿಗಳಷ್ಟಿತ್ತು. ಈ ಕರಡು ಯೋಜನೆಯ ಮೇಲೆ ವಿಸ್ತೃತ ಚರ್ಚೆ ನಡೆದು, ಅನೇಕ ರೀತಿಯಲ್ಲಿ ಮಾರ್ಪಾಡಾಗಿ, ೧೯೫೨ ನೆಯ ಡಿಸೆಂಬರ್ ಅಂತಿಮ ಸ್ವರೂಪದಲ್ಲಿ, ಭಾರತದ ದಿವ್ಯ ಸಂಜೀವಿನಿಯಾಗಿ, ಭಾರತೀಯರೆಲ್ಲರ ಆಶೋತ್ತರಗಳ ಆಪಾರ ಸಂಗಮ-ಉಚ್ಚಪ್ರಾಸ ವೈಭವಗಳ ಸೂಚಕವಾಗಿ, ತೇಜಃಪುಂಜ ಭಾವೀ ಜೀವಿತದ ಪ್ರಕಾಶಮಾನ ಮಾರ್ಗದರ್ಶಿಕೆಯಾಗಿ ಮೂಡಿನಿಂತಿತು. ಜನತೆಯ ಬಾಳಿನ ಮಟ್ಟ ಎತ್ತರಿಸಿ, ಸಾಮಾಜಿಕ ನ್ಯಾಯ ದೊರೆಕಿಸಿಕೊಡುವುದೇ ಈ ಯೋಜನೆಯು ಸಾಧಿಸಿಕೊಡಲಿರುವ ಜವಾಬ್ದಾರಿಯ ಕಾರ್ಯವು! ಅಭಿವೃದ್ಧಿಯನ್ನು ಸಾಧಿಸುವ ಮಾರ್ಗಗಳು ಹಲವಿದ್ದರೂ ಪ್ರಜಾತಾಂತ್ರಿಕ ಮಾರ್ಗದಿಂದಲೇ ಸಾಧಿಸಬೇಕೆಂದು ಇದರ ಸಾಧನೆಯ ಮಾರ್ಗದಲ್ಲಿ ಒತ್ತಿ ಹೇಳಲಾಗಿದೆ. ಒಕ್ಕುದಿನ ಬಾಳುವ, ಅನಂತಕಾಲ ಉಳಿಯುವ, ಸುಭದ್ರ ಪ್ರಾಗತಿಕ ಭೂಮಿಕೆಯ ಯೋಜನೆಯ ಸ್ವಯಂಪ್ರೇರಿತ ತ್ಯಾಗ, ಸಹಕಾರಗಳ ಕೊಡುಗೆಗಳನ್ನೇ ಅವಲಂಬಿಸಿದೆ. ಈ ಯೋಜನೆಗಾಗಿ ಪ್ರತಿಯೊಬ್ಬನೂ ದುಡಿಯಬೇಕಾಗಿದೆ. ದುಡಿಯುತ್ತ ತರಬೇತಿ ಹೊಂದಬೇಕಾಗಿದೆ. ಅಂತೆಯೇ ಒಂದು ರೀತಿಯಲ್ಲಿದು ಶಿಕ್ಷಣಕ್ರಮವಾಗಿದೆ. ಒದಗಿ ಬರುವ ಪ್ರಗತಿಯೊಂದಿಗೆ ವ್ಯಕ್ತಿಗುಣ ವಿಕಾಸಕ್ಕೂ ಅನುವಿದೆ. ತನ್ನನ್ನು ತಾನು ಅರಿತು, ತನಗಾಗಿ ಸಾಧಿಸಬೇಕಾದುದನ್ನು ತಿಳಿದು,

ಮುನ್ನಡಿಸುವಿಕೆಯತ್ತ ಜನತೆ ಮುಂದೆ ಸಾಗಬೇಕಾಗಿದೆ. ಪ್ರತಿಯೊಬ್ಬ ವ್ಯಕ್ತಿಗೂ ಪೂರ್ಣ ಉದ್ಯೋಗ, ಶಿಕ್ಷಣ ದೊರೆಯಬೇಕು. ಅವನು ಬಲಶಾಲಿಯಾಗಿ ಬೇನೆ ಬಳಲಿಕೆಗಳಿಂದ ಮುಕ್ತನಾಗಿ ಆದಾಯ ಹೆಚ್ಚಿಸಿಕೊಂಡು ಪ್ರಗತಿಪರ ಬಾಳನ್ನು ಸಾಗಿಸಬೇಕು.

ಈ ಪಂಚವಾರ್ಷಿಕ ಯೋಜನೆಯು ಅವಧಿ ೧೯೫೧ರಿಂದ ೧೯೫೬ರ ವರೆಗೆ. ಈಗಾಗಲೇ ಎರಡು ವರುಷಗಳು ಕಳೆದಿರುವುದನ್ನು ಗಮನಿಸಬೇಕಾಗಿದೆ. ಎರಡು ವರುಷಗಳಿಂದ ಸಾಗಿಬಂದ ಯೋಜನೆಗಳನ್ನು ಮುಂದುವರೆಯಿಸುವುದರ ಜೊತೆಗೆ, ಇನ್ನೂ ಅನೇಕ ಹೊಸವನ್ನು ಪ್ರಾರಂಭಿಸಬೇಕಾಗಿದೆ. ಈ ಯೋಜನೆಯನ್ನು ರಾಷ್ಟ್ರೀಯ ಯೋಜನಾ ಆಯೋಗದ ಸೂಚನೆಯ ಮೇರೆಗೆ ನಡೆಯಿಸುವುದರಿಂದ, ಇದಕ್ಕೆ ರಾಷ್ಟ್ರೀಯಯೋಜನಾ ಆಯೋಗದ ಪಂಚವಾರ್ಷಿಕ ಯೋಜನೆಯೆಂದೂ ಕರೆಯುತ್ತಾರೆ. ಸ್ವಾತಂತ್ರ್ಯದ ನಂತರ ೧೯೪೭ರಲ್ಲಿ ಇಂಥದೊಂದು ಯೋಜನೆಯು ಹಲಕೆಲವು ರಾಜ್ಯಗಳಲ್ಲಿ ಬಳಕೆಯಲ್ಲಿ ಬಂದಿತ್ತು. ಅದಕ್ಕೆ ಯುದ್ಧಾನಂತರ ಪಂಚವಾರ್ಷಿಕ ಯೋಜನೆಯೆಂದು ಕರೆದರು. ಅದು ಇಷ್ಟು ವ್ಯಾಪಕವೂ, ಸುವ್ಯವಸ್ಥಿತವೂ ಆಗಿರಲಿಲ್ಲ. ಇಂದಿನದನ್ನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸ್ವತಂತ್ರಭಾರತದ ಪ್ರಥಮ ಪಂಚವಾರ್ಷಿಕ ಯೋಜನೆಯೆಂದು ಕರೆಯಬಹುದು. ಇದೊಂದು ಸಂಘಟಿತ ಯೋಜನೆಯು. ಇಡಿಯ ಭಾರತಕ್ಕೇನೇ ವ್ಯಾಪಿಸಿಕೊಂಡಿದೆ. ಅಂತಿಮಸ್ವರೂಪದ ಯೋಜನೆಯಲ್ಲಿ ಕರಡುಯೋಜನೆಯಲ್ಲಿಯಂತೆ ಎರಡು ಭಾಗಗಳಿಲ್ಲ, ಅಲ್ಲದೆ ಯೋಜನೆಯು ವೆಚ್ಚವನ್ನೂ ಹೆಚ್ಚಿಸಿ ಒಟ್ಟಾರೆ ೨,೦೬೯ ಕೋಟಿ ರೂಪಾಯಿಗಳಿಗೆ ಏರಿಸಲಾಗಿದೆ.

ಇದರಲ್ಲಿ ಮೂರು ಭಾಗಗಳದ್ದು ಮೊದಲನೆಯ ಭಾಗದಲ್ಲಿ ಅಪೂರ್ಣಸ್ಥಿತಿಯಲ್ಲಿದ್ದ ಅಭಿವೃದ್ಧಿ ಕಾರ್ಯಗಳು ಅವುಗಳನ್ನೂ ಸಾಧಿಸಲಿರುವ ರಾಷ್ಟ್ರೀಯ ಪ್ರಯತ್ನ ಮತ್ತು ಪಂಚವಾರ್ಷಿಕ ಯೋಜನೆಯ ಗುರಿಗಳೂ, ಎರಡನೆಯ ಭಾಗದಲ್ಲಿ ಆಡಳಿತ ಹಾಗೂ ಸಾರ್ವಜನಿಕ ಸಹಕಾರವೂ, ಮೂರನೆಯ ಭಾಗದಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳ ರೂಪರೇಷೆಗಳೂ ಇವೆ.

ಪಂಚವಾರ್ಷಿಕ ಯೋಜನೆಯ ವಿವಿಧ ಯೋಜನೆಗಳಿಗೆ ಬೇಕಾಗುವ ೨೦೬೯ ಕೋಟಿ ರೂಪಾಯಿಗಳಲ್ಲಿ ಯೋಜನೆಯ ಅವಧಿಯಲ್ಲಿ ೭೩೮ ಕೋಟಿ ರೂಪಾಯಿಗಳು ಸರಕಾರದ ಸದ್ಯದ ಆದಾಯದ ಉಳಿಕೆಯ ಹಣದಿಂದ ದೊರೆಯುತ್ತವೆ. ಸಾಲ, ಚಿಕ್ಕ ಉಳಿತಾಯ, ಇಡುಗಂಟು, ನಿಧಿಗಳ ರೂಪದ್ದಿಂದ ೫೨೦ ಕೋಟಿ ರೂಪಾಯಿಗಳು ದೊರೆಯುತ್ತವೆ. ಒಟ್ಟು ೧,೨೫೮ ಕೋಟಿ ರೂಪಾಯಿಗಳು ಯೋಜನೆಯ ವೆಚ್ಚಕ್ಕೆ ದೊರೆತಂತಾದುವು. ಈಗಾಗಲೇ ಜಾಗತಿಕ ಬ್ಯಾಂಕು, ಅಮೇರಿಕೆ, ಕಾನಡಾ, ಆಸ್ಟ್ರೇಲಿಯಾ, ನ್ಯೂಝಿಲಂಡ್ ಮೊದಲಾದ ಹೊರಗಿನ ಸಹಾಯವು ೧೫೬ ಕೋಟಿ ರೂಪಾಯಿಗಳಷ್ಟು ದೊರೆತಿದೆ. ಇನ್ನೂ ೬೫೫ ಕೋಟಿ ರೂಪಾಯಿಗಳು ಕಡಿಮೆ ಬೀಳುತ್ತವೆ. ಇವನ್ನು ಹೊರಗಿನ ಸಹಾಯ ಇಲ್ಲವೆ ಹೆಚ್ಚಿನ ಕರ, ಸಾಲ ಇಲ್ಲವೆ ಕೊರತೆಯ ಹಣದ ಪೂರಯಿಕೆಯಿಂದ ತುಂಬಿಕೊಳ್ಳಬಹುದು.

ಒಟ್ಟು ಹಣದಲ್ಲಿ ಕೇಂದ್ರ ಸರಕಾರವು ೧,೨೪೧ ಕೋಟಿ, 'ಅ' ವರ್ಗದ ರಾಜ್ಯಗಳು ೬೧೦ ಕೋಟಿ, 'ಬ' ವರ್ಗದ ರಾಜ್ಯಗಳು ೧೭೩ ಕೋಟಿ ಮತ್ತು 'ಕ' ವರ್ಗದ ರಾಜ್ಯಗಳು ೩೨ ಕೋಟಿ ಮತ್ತು ಜಮ್ಮು ಕಾಶ್ಮೀರಗಳು ೧೩ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುತ್ತವೆ.

ಬೇರೆ ಬೇರೆ ಅಭಿವೃದ್ಧಿ ಯೋಜನೆಗಳ ವೆಚ್ಚದ ಹಂಚಿಕೆಯು ಕೆಳಗಿನಂತಿದೆ—

೧. ಒಕ್ಕಲತನ ಮತ್ತು ಸಮಾಜವಿಕಾಸ	೩೬೧	ಕೋ. ರೂ.	೧೭.೫/.
೨. ನೀರಾವರಿ	೧೫೮	,,	೮.೧/.
೩. ವಿವಿಧೋದ್ದೇಶ ನೀರಾವರಿ ಮತ್ತು ವಿದ್ಯುತ್ ಯೋಜನೆಗಳು	೨೬೮	,,	೧೨.೯/.
೪. ವಿದ್ಯುತ್‌ಶಕ್ತಿ	೧೨೭	,,	೬.೧/.
೫. ಸಾರಿಗೆ ಹಾಗೂ ಸಂಪರ್ಕ	೪೯೭	,,	೨೪.೦/.
೬. ಉದ್ದಿಮೆ	೧೭೩	,,	೮.೪/.
೭. ಸಾಮಾಜಿಕ ಸೌಲಭ್ಯಗಳು	೩೪೦	,,	೧೬.೪/.
೮. ಪುನರ್ನಿವೇಶನ	೪೫	,,	೪.೧/.
೯. ಇತರ	೫೨	,,	೨.೫/.
ಒಟ್ಟು	೨೦೬೯	,,	೧೦೦.೦/.

ಬೇರೆ ಬೇರೆ ರಾಜ್ಯಗಳಿಗೆ ಹಂಚಿಕೊಟ್ಟ ವಿವಿಧ ಯೋಜನೆಗಳ ವೆಚ್ಚ ಕೆಳಗಿನಂತಿದೆ.

'ಅ' ವರ್ಗದ ರಾಜ್ಯಗಳು—

೧. ಮುಂಬೈ	೧೪೬.೪೪	ಕೋಟಿ	ರೂಪಾಯಿಗಳು.
೨. ಮದ್ರಾಸು	೧೪೦.೪೪	,,	
೩. ಉತ್ತರಪ್ರದೇಶ	೯೭.೮೩	,,	
೪. ಪಶ್ಚಿಮ ಬಂಗಾಲ	೬೯.೧೦	,,	
೫. ಬಿಹಾರ	೫೭.೭೯	,,	
೬. ಮಧ್ಯಪ್ರದೇಶ	೪೩.೦೪	,,	
೭. ಪಂಜಾಬ	೨೦.೨೧	,,	
೮. ಓಡಿಸಾ	೧೭.೪೪	,,	
೯. ಆಸಾಮ	೧೭.೪೯	,,	
		ಕೋಟಿ	ರೂಪಾಯಿಗಳು.

'ಬ' ವರ್ಗದ ರಾಜ್ಯಗಳು—

೧. ಹೈದರಾಬಾದು	೪೧.೫೫	,,	
೨. ಮೈಸೂರು	೩೬.೬೦	,,	

೩.	ತ್ರಾವಣಕೋರ-ಕೋಚೀನ್	೨೭.೩೨	,,
೪.	ಮಧ್ಯಭಾರತ	೨೨.೪೩	,,
೫.	ಸೌರಾಷ್ಟ್ರ	೨೦.೪೧	,,
೬.	ರಾಜಸ್ತಾನ್	೧೬.೮೨	,,
೭.	ಪೆಪ್ಸು	೪.೧೪	,,
	ಒಟ್ಟು	೧೭೩.೬೬	ಕೋಟಿ ರೂಪಾಯಿಗಳು.

'ಕ' ವರ್ಗದ ರಾಜ್ಯಗಳು

೧.	ದಿಲ್ಲಿ	೭.೪೮	ಕೋಟಿ ರೂಪಾಯಿಗಳು.
೨.	ವಿಂಧ್ಯಪ್ರದೇಶ	೬.೬೯	,,
೩.	ಹಿಮಾಚಲಪ್ರದೇಶ	೪.೫೫	,,
೪.	ಭೋಪಾಳ	೩.೯೨	,,
೫.	ಕಚ್ಛ	೩.೦೫	,,
೬.	ತ್ರಿಪುರಾ	೨.೦೭	,,
೭.	ಅಜಮೀರ	೧.೫೭	,,
೮.	ಮಣಿಪುರ	೧.೫೫	,,
೯.	ಕೂರ್ಗು	೦.೭೭	,,
೧೦.	ವಿಲಾಸಪುರ	೦.೫೭	,,
	ಒಟ್ಟು	೩೧.೪೯	ಕೋಟಿ ರೂಪಾಯಿಗಳು.

ಸಾಮಾನ್ಯವಾಗಿ ಈ ಯೋಜನೆಗಳನ್ನು ಕೆಳಗಿನ ಮುಖ್ಯ ಗುಂಪುಗಳಲ್ಲಿ ನಿಂಗಡಿಸಬಹುದು:

೧. ಒಕ್ಕಲುತನ, ಸಮಾಜವಿಕಾಸ, ನೀರಾವರಿ ಹಾಗೂ ವಿದ್ಯುತ್.
೨. ಪಾರಿಗೆ, ಸಂಪರ್ಕ, ಉದ್ದಿಮೆ.
೩. ಸಾಮಾಜಿಕ ಸೌಲಭ್ಯ ಹಾಗೂ ಉದ್ಯೋಗ.

ಮೊದಲನೆಯ ಗುಂಪಿನ ಯೋಜನೆಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ಕೂರಕೆ ಬೀಳುವ ಆಹಾರ ಉತ್ಪಾದಿಸುವುದು ಅವಶ್ಯವಿದೆ ಅಲ್ಲದೆ ವ್ಯಾಪಾರ ಉದ್ದಿಮೆಗಳಿಗೆ ಕಚ್ಚಾವಸ್ತುಗಳಿಗೆ ಪೂರೈಕೆಯಾಗಬೇಕಾಗಿದೆ

ಪರಮಾವಧಿ ಹುಟ್ಟುವಳಿಯನ್ನು ಹುಟ್ಟಿಸಿ, ಎಲ್ಲರಿಗೂ ಪೂರ್ಣ ಉದ್ಯೋಗ ಒದಗಿಸಿ, ಆರ್ಥಿಕ ಸಮಾನತೆ ಮತ್ತು ಸಾಮಾಜಿಕ ನ್ಯಾಯ ದೊರಕಿಸಿಕೊಡುವುದೇ ಈ ಎಲ್ಲ ಪ್ರಯತ್ನಗಳ ಮುಖ್ಯ ಗುರಿಯಾಗಿದೆ. ಇದನ್ನು ಸಾಧಿಸಬೇಕಾದಲ್ಲಿ ಸಹಕಾರೀ ಸಂಘಟನೆಯು ಭರದಿಂದ ಬೆಳೆಯಬೇಕಾಗಿದೆ. ಈ ಪಂಚವಾರ್ಷಿಕ ಯೋಜನೆಯು ಅವಧಿಯ ಕೊನೆಗೆ ಎಂದರೆ ೧೯೫೫–೫೬ರಲ್ಲಿ ರಾಷ್ಟ್ರದ ಆದಾಯವು ೧೦.೯೦೦ ಕೋಟಿ ರೂಪಾಯಿ ಹೆಚ್ಚಾಗುತ್ತದೆ. ಅಂದರೆ ನೂರಕ್ಕೆ ೧೧ ರಷ್ಟು ಹೆಚ್ಚಾದಂತಾಯಿತು. ಮುಂದೆ ಇನೇ ರೀತಿಯಲ್ಲಿ ನಾಲ್ಕು ಪಂಚವಾರ್ಷಿಕ ಯೋಜನೆಗಳು ನಜೆದಲ್ಲಿ ೧೯೭೨ರ ಸುಮಾರಿಗೆ ಪ್ರತಿಯೊಬ್ಬರ ಆದಾಯವು ಈಗಿನ ಇಮ್ಮಡಿಯಷ್ಟು ಆಗುವುದು.

ತಾಯಂದಿರೆ,

ನಿಮ್ಮ ಮಗುವಿಗೆ

ಸಾಕಷ್ಟು ತಾಯಿ ಹಾಲು ಬೇಕಲ್ಲವೆ?
ಹಾಗಾದರೆ. ನೀವು ಈ ದಿನದಿಂದಲೇ

ಜೆನ್-ಓ ಮಿಲ್ಕ್

(GEN-O MILK)

ತೆಗೆದುಕೊಳ್ಳಲು ಪ್ರಾರಂಭಮಾಡಿ.

ನಿಮ್ಮ ಊರಿನ ಕೆಮಿಸ್ಟರಲ್ಲಿ ದೊರೆಯದೆ ಹೋದರೆ
ಕೆಳಗಿನ ವಿಳಾಸಕ್ಕೆ ಒರೆಯಿರಿ.

ಅಜಿತ ಲ್ಯಾಬ್ಸ್ ಲಿ. ಮಿರಜ

ಬಾದಶಾಹಿ

GIVES NO PAIN
WORLD RENOWNED
NO STAIN
BADSHAHI
DEPILATORY
REMOVES UNWANTED HAIR SAFELY

ತಿರುಗುಪ್ಪು ಇಲ್ಲವೆ ರಾಯರ ಸೋಲು!

(ನಾಟ್ಯಚಟಾ)

●

ಶ್ರೀ. ಬಿ. ಆರ್. ವಾಡಪ್ಪಿ ಎಂ. ಎ., ಬಿ. ಟಿ. ಧಾರವಾಡ

(ರಾಯರ ಮಡದಿ ಅವರೇ ಊರಿನಿಂದ ಬಂದು, ಅಡುಗೆಯ ಮನೆಯಲ್ಲಿ ಕೆಲಸದ ಗಡಬಿಡಿಯಲ್ಲಿರುವಳು. ರಾಯರಿಗೆ ಹೆಂಡತಿಯ ಮೇಲೆ ಮನಸಿ ಕೋಪ ಹೆಚ್ಚುತ್ತಿರುವಾಗ ಮಾತಿಗೆ ಪ್ರಾರಂಭವು ನರು.)

ನನಗಂತೂ ತಲೆಬೇಸರವಾತು ನಿನ್ನ ಗಂಟು ಹಕ್ಕೊಂಡು!..... ಹಾಂ .....ಯಾಕ ಗಂಟ ಹಕ್ಕೊಂಡ್ರೀ ಅಂತಿಯಾ? ಬಿಡು ನಿನ. ನಿನ್ಮಪ್ಪ ಇದ್ದಾನಲ್ಲ....ಇಲ್ಲದ್ದೊಂದು ನಸೀಲಿ ಹಚ್ಚಿ ಗಂಟು ಹಾಕ್ಕೊದಾ ನಿನ್ನ ..... ಏನಂದೀ....ನಿಮಗ ಕಣ್ಣಿದ್ದಿಎಲ್ಲೀನು.....ಅಪಹಾ... ಮಹಾರಾಯಳ ನನಗ ಎರಡs ಕಣ್ಣು ಇದ್ದವು—ಮುಕ್ಕಣ್ಣನ್ಹಾಂಗ ಮೂರಿದ್ದಿದ್ದಿಲ್ಲ! ಇದ್ದರs ಅಂದs....ಅಲ್ಲ ಕೇಳೆರೀ ಕೇಳಲಾ ಮಾತು.... ನಿನ್ನ ಸುಡತಿದ್ದಿಲ್ಲ ನಿನ್ಮಪ್ಪನ್ನ ತಿಳಿತsಕ ದೊಡ್ಡ ಮಾರವಾಡಿಕೊಂಡು ಬಂದು ಇಲ್ಲದ್ದೊಂದು ಹೇಳಿ ಮದವಿ ಮಾಡಿದಾ ಮದವಿ! ಲಗ್ನ ಅದನ್ಯಾಲೆ ಹೌರಗ ಜಾರಿದಾ! ನಿನುಗ ವಕೀಲಕೀ ನಡಿಸಲಿಕ್ಕೆ ಬ ದಿದ್ದರ.....ಅವ ಏನು ಮಾಡಬೇಕ?.....ಮತ್ತ ನಾ ಏನ ನಾಡತೀನೀಗ ಕೋರ್ಟನ್ಯಾಗ.....ಸುಮ್ಮಗ ಕೂಡೋದು ಮನಿಗೆ ಬರೋದ?..... ಯಾಕ ಇವತ್ತ ನಾಲಗೀ ಬಹಳ ಉದ್ದ ಹೋಗಲಿಕ್ಕೆ ಹತ್ತೀದ? ನಿಮ್ಮಪ್ಪ ತಿರುಗಿ ಅನಲಿಕ್ಕೆ ಹೇಳಿಕಳಿಸ್ಯಾನೇನು? ನಾ ಪರದೇಶಕ್ಕ ಹೋಗಬೇಕು.....ಕಲತ ಬರಬೇಕು ಅಂತ ಎಷ್ಟು ಪ್ರಯತ ಮಾಡಿದೆ! ನಿನ್ಮಪ್ಪ ನಾಯೆಲ್ಲೆ ಒಂದು ಮತ್ತನ್ನ ಗಂಟ ಹಕ್ಕೊಂಡು ಬರತೀನೋ ಅಂತ ಹೆದರೇ ಬಿಟ್ಟ! ನಿನ್ಮಪ್ಪನ್ನ ಬೈತೀನಿ ಅಂತ ಏನು ತಿಳಲಿಕ್ಕೇ ಸುರುವು ಮಾಜಿದೀನು? ಛೇ ಛೇ ಈ ಹೆಣ್ಣ ಮಕ್ಕಳ ಸಂಗತಿ ಬಹಳ ಕಠಿಣ! ಮಾತಿನಾಗ ಮಾತಿರೋದಿಲ್ಲ ನೀ ಏನು ಮಾಡಿ.....ಹಾಂ.....ನೆಟ್ಟಗ ಮಾತಾಡು..... .. ಬೇಕಾದ್ರ ಮತ್ತೊಬ್ಬ ಸುಂದ್ರೀನ್ನ ಗಂಟ ಹಕ್ಕೊಳ್ರೀ! ನೆಟ್ಟಗ ಆಗತದ!! ಛೇ ಛೇ.....ನೀ ರತಿದೇವಿ ಮನ್ಯಾಗರೂ ಮುಂದ.... ... ಮತ್ಯಾರು ಕನ್ಯಾ ಕೊಟ್ಟಾರು? ... .. ಇರಲೀ ಇದ, ಮಾತಾತು, ತವರ ಮನಿಯಿಂದ ಏನೇನು ತಂದೀದಿ? ಸೀರಿ ಕೊಡಿಸ್ಯಾನೇನು ನಿಮ್ಮಪ್ಪ ಶರಪೂರದ್ದು? ಅವಾ ಒಂದು ಕೊಡಿಸಿದ್ರ ನಾ ಒಂದು ಜೋಡಿಗೆ ತೊಗೋಬೇಕು ಅಂತ ಮಾಡೀನಿ ಎಲ್ಲಿಂದ ತಂದಾನು.... ...ಅವಂದ ಅನಗ ರಗತು .....ಹಾ....ಹಾ....ಧನೀ ಪ್ಯಾಂಗ ತಗದಾಳ ನೊಡು. ಸೋಗಿಂದು! ನಿನ್ಮಪ್ಪ ಗಂಟುಗಳ್ಳ! ಹುಡುಗರಿಗೆರ ಏನ ಕೊಡಿಸ್ಯಾನ?....ಒಂದು ಉಂಗರೋ....ಅಥವಾ ಜೇನೋ, ಇಲ್ಲಾ ಇಲ್ಲಾ....ಏನೇನೂ ಇಲ್ಲ! ಹಾಂಗs ಉಘೋ ಲಕ್ಷ್ಮಣಾ ಅಂತ ಬಂದ್ಯಾ? ಇನ್ನೇನು ಮಾಜೋದು .....ಕಡಿಕೆ ಇಷ್ಟರ ಮಾಡು. ನಿನ್ಮಪ್ಪಗ ಇನ್ನೊಮ್ಮೆ ಹೋದಾಗ ಹೇಳು; ಆ ಊರ ಮುಂದಿನ ಹೊಲಾ ನಿನ್ನ ಹೆಸರಲೇ ಹಚ್ಚಾ ಅಂತ! ಏನಂದೀ, ಹೆಣ್ಣಮಕ್ಕಳಿಗ್ಯಾಕ ಹೊಲಾ ಕೊಟ್ಟಾರು?—ಅಂತೀದ್ಯಾ ನಿನ್ಮಪ್ಪ ಉಗರಿನ್ಯಾಗಿನ ಮಣ್ಣ ಸಹಿತ ಸಿಡಿಸುವವ ಅಲ್ಲ. ಮಹಾರಾಯಳ.....ಆ ನಿನ್ನ ತಮ್ಮಗ ನಮ್ಮ ಸುಮ್ಮನ್ನರ ಮಾಡಿಕೋ ಅಂತ ಹಂ ಹಿಡಿ! ಇಸ್ಕರs ಮಾಡಲಾ! ಗಬ್ಬಸಿ ಮಾತಾಡಲಾ..... ಏನು?.....ರತ್ನದಂಥ ಕನ್ಯಾ ಬಂದಿರಲಿಕ್ಕೆ..... ಈಕನ್ನ ಯಾಕ ಮಾಡಿಕೋತಾರ?.... ...ಹ....ಹ. ನಮ್ಮ ಸುಮ್ಮಗೇನಾಗೇದ..... ನಿನ್ನsಕ ಹೋತಾಳಲ್ಲ!! ನೀನು ಹಳೇ ಕಾಲದಾಕೇ? ನಿನ್ಮಪ್ಪ ನಿನ್ನ ಕೊಡೋ ಮುಂದ .....ಬಣ್ಣ ಏನು ತೊಳಕೊಂತು ಕುಡಿಯೋದವನsಅಂತ ಅಂದು ನಿನ್ನ ಗಂಟ್ಯಾಕೆ ಇಟ್ಟ! ಈಗ ತನ್ನ ಮಗಗ ಕನ್ಯಾ ನೋಡೋ ಮುಂದ ಚಿಕಿತ್ಸಾ ನಡಿಸ್ಯಾನೇನು? .....ಹೂಂ ನಿನ್ಮ ತಮ್ಮನsಒಳ್ಳೇ ಅಂತಾನ ನಮ್ಮ ಸುಮ್ಮಗೇನಾಗೇದ? ಬೇಕಾದ್ಹಾಂಗ ಇದ್ದಾಳ.....ನಿಮ್ಮ ಮಕ್ಕಳು ನಿಮಗ ಭಾಳ ಕಾರಣಸ್ತಾರ ಮುಂದಿಗ್ಯಾಕ ಕಂಡಾರು.... ...ನಿನ್ಮಪ್ಪೇನು ಮುಂದೇನು?.....ಮನಸು .....ಇನ್ನ ಬ್ಯಾಡ ಫಟ್ಟ್ಯಾಗಿ ಹೇಳು.....ನಾ ಬಹಳ ಬಿಂಕವನ? ಛೇ ಛೇ.... ...ನಿನ್ಮಪ್ಪಗ ಬಾಯಿ ಎಷ್ಟ ಬಾನದೀಗ! ಗೆದ್ದಮ್ಯಾಲೆ ಬೇಕಾದ್ದು ನಾತಾತತಾನ, ಇರಲಿ. ಮೊದಲು ಎಷ್ಟ ತಿಜಿದ್ಹಾಂಗ ಮಾಡತಿದ್ದ ಏನ ಕಥಿ... ...ಈಗ ಜೂಗಿಗೆ ಹೋದರ ಮಾತು ಸಹಿತ ಅಡಿಸೂದಲ್ಲ .....ಏನು.....ನಾನೂ ಮೊದಲು ಹಾಂಗs ಮಾಡತಿದ್ನೆ? ಹೂಂ ಹಂಗಾರ ಈಗೆಲ್ಲ ಲೆಕ್ಕಾ ಇಚ್ಚು ಸೇದು ಸಾಧಿಸಿಕೊಬೇಕಂತಾನೇನು? ನಾ ಸುಮ್ಮೀ ಲಗ್ನಕ್ಕ ಅವನ್ನ ಕರಸೋದೇ ಇಲ್ಲ ತಿಳೀತಿಲ್ಲೊ ?.....ಅವಾ ಬರದಿದ್ರ ಲಗ್ನಾ ಹ್ಯಾಂಗ ಆಗತದ ನೋಡತೀನಿ ಅಂತೀದ್ಯಾ?....ಇಲ್ಲ ...ನಿ ಭಾಳ ಶಾಣ್ಯಾ! ...ಮತ್ತ ಸುಮ್ಮನ್ನ ಮಗ್ಗ ತೊಗೋತೀನಿ—ಅಂತ ಅಂದಾನೇನು ಮತ್ತs ?.... . ಅದಕ ಅಂದ್ನೆ ನೀ ಶಾಣ್ಯಾಕೇ ಅಂತs

[ತೆರೆ]

— ಶರತ್‌ಪ್ರಕಾಶನ ಮಂದಿರದ ಹೊಸ ಕಾದಂಬರಿ —

ಮಗಳ ಮದುವೆ

'ಆನಂದಕಂದ'ರು ಬರೆದ ಈ ರಸಪೂರ್ಣ ಸಾಮಾಜಿಕ ಕಾದಂಬರಿಯ ವಿಷಯದಲ್ಲಿ ಬಂದಿರುವ ರಸಿಕ ವಿಮರ್ಶಕರ ಕೆಲವು ಅಭಿಪ್ರಾಯಗಳು.

೧. ಮಂಗಳೂರಿನ 'ಚಿತ್ರಗಪ್ಪ' ವಾರಪತ್ರಿಕೆಯಲ್ಲಿ ವಿಸ್ತೃತ ವಿಮರ್ಶೆ ಬಂದಿದ್ದು, **'ಕನ್ನಡ ಕಾದಂಬರಿಯ ಕಾಡುಬಳ್ಳಿಯಲ್ಲಿ ಒಂದು ಒಳ್ಳೆಯ ಹೂ'** ಎಂಬ ತಲೆಬರಹದ ಕೆಳಗೆ ಈ ರೀತಿ ಬರೆದಿದ್ದಾರೆ.

"ಆನಂದಕಂದರು ನಿರೀಕ್ಷಕನ, ವಿಮರ್ಶಕನ ದೃಷ್ಟಿಯಿಂದ ಸುತ್ತಲಿನ ಜೀವನವನ್ನು ನೋಡಿ, ಸಮಾಜದ ಇತಿಹಾಸದ ಪ್ರಜ್ಞೆಯ ಬೆಳಕಿನಲ್ಲಿ ಪರಿಣಾಮಕಾರಿಯಾಗಿರುವಂತೆ ಕಾದಂಬರಿಯನ್ನು ಕೊಡಲು ಸಮರ್ಥರಾಗಿದ್ದಾರೆ.

ಈ ಕಾದಂಬರಿಯಲ್ಲಿ ಸ್ಮರಣೀಯವಾದ ಕೆಲವು ಪಾತ್ರಗಳನ್ನು 'ಆನಂದಕಂದ'ರು ನಿರ್ಮಿಸಿದ್ದಾರೆ. ಮೊದಲಿನ ಪಾತ್ರ ಕಾವೇರಿಯದು. ಅಕೆಯೇ ಮದುವೆಯಾಗುವ ಮಗಳು. ಆಕೆ ಅಧುನಿಕ ಹುಡುಗಿಯಲ್ಲ; ಆದರೂ ಸಂಪ್ರದಾಯದ ಅಂಧಶ್ರದ್ಧೆಗಳ ಕೈದಿಯೂ ಅಲ್ಲ. ಇನ್ನೊಬ್ಬಳು ಕುಮುದಾ. ಈಕೆ ಕಾಲೇಜಿನ ಮೆಟ್ಟಲೇರಲು ಸಿದ್ಧಳಾಗಿರುವಳು. ಆದರೆ ಬರಿಯ ಬೆನ್ನಾಣಗಾತಿಯಲ್ಲ. ಅವಳಲ್ಲಿ ಅಪೇಕ್ಷಣೀಯವಾದ ಹಿರಿಯ ಗುಣಗಳಿವೆ. ಸತ್ಯಾಗ್ರಹಿ ರತ್ನಾಕರನನ್ನು ಆದರ್ಶ ಜೀವಿಯಾಗಿ ಕಾದಂಬರಿಕಾರರು ಚಿತ್ರಿಸಿದ್ದಾರೆ. ಇಂಥ ಸರ್ವಗುಣ ಸಂಪೂರ್ಣ ಮಾನವರು ಕಲ್ಪನೆಯ ಆದರ್ಶ ಲೋಕದಲ್ಲಿ ಮಾತ್ರ ಕಾಣಸಿಗುವರು..... ಜನರಿಗೆ ಈ ಪಾತ್ರ ಪ್ರಿಯವೆನಿಸುವುದರಲ್ಲಿ ಆಶ್ಚರ್ಯವಿಲ್ಲ. ಪೋಲೀಸರಾಗಿದ್ದು ಚಳವಳಿಗೆ ನೇವಾಗುವ ವ್ಯಕ್ತಿಗಳು ಇದ್ದಾರೆ. ಯಾವ ಹಿರಿಯ ಸೇನಾನಿಯ ತ್ಯಾಗಕ್ಕೂ ಕಡಿಮೆ ಇಲ್ಲದಂತೆ ದುಡಿಯುವ ಮೋಟಾರ್ ಡ್ರೈವರರಿದ್ದಾರೆ. ವಾಸ್ತವ ಜೀವನದಿಂದ ಆಯ್ದ ಇಂಥ ಸಾಮಾನ್ಯ ವ್ಯಕ್ತಿಗಳನ್ನು ಸಾಹಿತ್ಯದಲ್ಲಿ ಅಮರರನ್ನಾಗಿ ಮಾಡಿದ 'ಆನಂದಕಂದ'ರು ಶ್ಲಾಘನೀಯ ಕೆಲಸ ಮಾಡಿದ್ದಾರೆ. ಅಲ್ಲಲ್ಲಿ ಕನ್ನಡ ನಾಡಿನ ಕುರಿತು ಬರುವ ಟೀಕೆಗಳು ಯೋಗ್ಯವಾಗಿವೆ

ಕನ್ನಡದಲ್ಲಿ ಸಣ್ಣಕತೆ ಚಿತ್ರವಿಚಿತ್ರವಾಗಿ ಬೆಳೆದಂತೆ, ಕಾದಂಬರಿಯೂ ಈಗ ಕಾಡುಬಳ್ಳಿಯಂತೆ ಹಬ್ಬುತ್ತಿದೆ. ಈಗಿನದು ರಸ-ಕಸಗಳನ್ನು ವಿವೇಚನೆಯಿಂದ ಬೇರ್ಪಡಿಸಬೇಕಾದ ಪರಿಸ್ಥಿತಿ. 'ಮಗಳ ಮದುವೆ' ನಿಸ್ಸಂಶಯವಾಗಿ ರಸದ ರಾಶಿಗೆ ಸೇರುತ್ತದೆ..... ಅಂತೂ 'ಆನಂದಕಂದ'ರು 'ಮಗಳ ಮದುವೆ'ಯನ್ನಿತ್ತು ಕನ್ನಡದಲ್ಲಿ ಕಾದಂಬರಿಯ ಭವಿಷ್ಯದ ಬಗೆಗೆ ನಿರಾಶೆತಳೆಯುವುದಕ್ಕಾಗಿಲ್ಲವೆಂಬುದನ್ನು ತೋರಿಸಿಕೊಟ್ಟಿದ್ದಾರೆ.

೨. ಮುಂಬಯಿಯ 'ಭಾರತಜ್ಯೋತಿ' ಈ ರೀತಿಯಾಗಿ ಅಭಿಪ್ರಾಯ ವ್ಯಕ್ತಪಡಿಸಿದೆ.

1. "Among the Kannada reading public, there was an impression that AnandKanda had practically abandoned the field of novel. He folded up his sleeves and dashed out a full length novel with a challenge that the capacity for novel writing can never evaporate. The reader's attention is focussed on Ratnakar all through the novel. And during the course of his endeavours to bring about the marriage of Kayeri, and Ranganna, he comes in close contact with Kumuda and her parents. Thus the whole novel centres round Ratnakar and Kumuda.

2. They become, as it were the focus of the novel, and at the time of Kaveri's marriage Ratnakar is arrested and the novel comes to an end. But this leaves in the readers mind a sense of suspense.

3. As for characterisation, Shri Betgeri has done his job well. He has introduced to us a host of characters so significant of certain interesting elements of human nature, and so thoroughly representative of certain phases of humanlife."

ಸಾಹಿತ್ಯ ಮತ್ತು ಸಾಹಿತಿ

(ಡಾ. ರಾಜೇಂದ್ರ ಪ್ರಸಾದರ ವಿಚಾರಗಳು)

ಸಂಗ್ರಾಹಕರು: ಶ್ರೀ. ಬ. ಲ. ನೆಲ್ಲಿ 'ವಿದ್ವಾನ್' 'ವಿಶಾರದ' ಮಣಿಪಾಳ

●

ಭಾರತದಲ್ಲಿ ಸಾಹಿತ್ಯವ್ಯವಸಾಯಿಗಳು ದಾರಿದ್ರ್ಯಜೀವಿಗಳಾಗಿದ್ದಾರೆ. ಈ ದಾರಿದ್ರ್ಯಕ್ಕೆ ಭಾರತೀಯರಿಲ್ಲರ ಮನದಲ್ಲಿ ಮನೆಮಾಡಿರುವ ವಿದೇಶೀ ಸಾಹಿತ್ಯವಿಷಯಕವಾದ ಅಂಧಮೋಹವೇ ಸಂಪೂರ್ಣ ಕಾರಣವಾಗಿದೆ.

●

ನಮ್ಮ ದೇಶದಲ್ಲಿ ಸಾಹಿತ್ಯಸೇವಕರ ಜೀವನವು ಅತ್ಯಂತ ಕಂಟಕಾಕೀರ್ಣವಾಗಿರುತ್ತದೆಂಬುದನ್ನು ಇಂದು ಯಾರೂ ಅಲ್ಲಗಳೆಯಲಾರರು. "ಪರತಂತ್ರ ಹಾಗೂ ವಿದೇಶೀ ಭಾಷೆಯಿಂದ ಆವರಿಸಲ್ಪಟ್ಟ ದೇಶದಲ್ಲಿ ಸಾಹಿತ್ಯಸೃಷ್ಟಿಯು ಸಂಘರ್ಷಣೆಯಿಂದಲೇ ಸಾಧ್ಯವಾಗುತ್ತದೆ." ಆದ್ದರಿಂದ ನಮ್ಮ ದೇಶದಲ್ಲಿ ವಿದೇಶೀಯರ ರಾಜ್ಯವಿದ್ದಷ್ಟು ಕಾಲ, ನಮ್ಮ ಸಾಹಿತಿಗಳಿಗೆ ಅನೇಕತರದ ಕಷ್ಟಗಳನ್ನು ಸಹಿಸಬೇಕಾಗಿ ಬಂತು. ಸ್ವತಂತ್ರವಾದನಂತರ ಈ ಸ್ಥಿತಿಯಲ್ಲಿ ಸ್ವಲ್ಪ ಸುಧಾರಣೆ ಏನೋ ಆಗಿಯೇ ಇದೆ; ಆದರೂ ಉತ್ತಮ ಸಾಹಿತ್ಯನಿರ್ಮಾಣಕ್ಕೆ ಎಂತಹ ಸ್ಥಿತಿಯು ಬೇಕೋ ಅಂತಹ ಸ್ಥಿತಿಯು ನಿರ್ಮಾಣವಾಗಿಲ್ಲ. ನಮ್ಮ ಸಾರ್ವಜನಿಕವಾದ ಸರ್ವ ರಾಜಕಾರ್ಯಗಳೂ ನಮ್ಮ ದೇಶ ಭಾಷೆಗಳಲ್ಲೇ—ಕೆಲವು ವರ್ಷಗಳನಂತರ—ನಡೆಯಬೇಕೆಂದು ನಾವು ನಿರ್ಣಯಿಸಿದ್ದರೂ, ಇಂದು ನಮ್ಮಲ್ಲಿಯ ಶಿಕ್ಷಣಜ್ಞರ, ಶಿಕ್ಷಿತರ ಮತ್ತು ಶಿಕ್ಷಣಾರ್ಥಿಗಳ ಮನಸ್ಸಿನಿಂದ ಇಂಗ್ಲಿಷರ ರಾಜ್ಯಕಾಲದಲ್ಲಿ ಹುಟ್ಟಿದ ಇಂಗ್ಲೀಷ್ ಭಾಷಾಮೋಹವು ಬಿಟ್ಟಿಲ್ಲ. ತಿಳಿದೋ ತಿಳಿಯದೆಯೋ, ನಮ್ಮಲ್ಲಿಯ ಹೆಚ್ಚಿನ ಶಿಕ್ಷಿತರ ಮನಸ್ಸಿನಲ್ಲಿ, ನಮ್ಮಲ್ಲಿಯ ಭಾಷೆಗಳಲ್ಲಿ ಇಂಗ್ಲೀಷಿನಲ್ಲಿರುವಂತಹ ಉತ್ತಮ ಸಾಹಿತ್ಯವಿಲ್ಲ, ಮತ್ತು ಮುಂದೆ ನಿರ್ಮಾಣವಾಗಲು ಸಾಧ್ಯವಿಲ್ಲ—ಎಂಬ ಭಾವನೆಯು ನೆಲೆಸಿಬಿಟ್ಟಿದೆ; ಮತ್ತು ಈ ಭಾವನೆಯ ಕಾರಣದಿಂದ ಇಂದೂ ಅವರ ಗಮನವು ತಮ್ಮ ಭಾಷಾಸಾಹಿತ್ಯದತ್ತ ಹೆಚ್ಚಿಗಿಲ್ಲ. ನಮ್ಮ ಸಾಹಿತಿಗಳಿಗೆ ಯಾವ ಆರ್ಥಿಕ ಕಠಿನತೆಗಳನ್ನು ಸಹಿಸಬೇಕಾಗಿತ್ತೋ, ಮತ್ತು ಈಗ ಸಹಿಸುತ್ತಾರೋ, ಅವುಗಳ ಒಂದು ಕಾರಣವು ಈ ಮನೋವೃತ್ತಿಯೇ ಆಗಿದೆ. ಯಾಕೆಂದರೆ ಈ ಕಾರಣದಿಂದ ನಮ್ಮಲ್ಲಿ ಅವರ ಕೃತಿಗಳ ಪ್ರಚಾರವು ಶಿಕ್ಷಿತವರ್ಗದಲ್ಲಿ, ಬೇರೆದೇಶಗಳಲ್ಲಿ ಅಲ್ಲಿಯ ಸಾಹಿತಿಗಳ ಕೃತಿಗಳ ಪ್ರಚಾರವು ಎಷ್ಟಿದೆಯೋ ಅಷ್ಟು ಇರುವುದಿಲ್ಲ.

ಈ ಕಥನದಿಂದ ನಮ್ಮ ದೇಶವಾಸಿಗಳು ಅನ್ಯಭಾಷೆಗಳ ಸಾಹಿತ್ಯವನ್ನು, ವಿಶೇಷತಃ ಆಂಗ್ಲ ಸಾಹಿತ್ಯವನ್ನು ಪ್ರೀತಿಸಬಾರದೆಂದು ಎಂದೂ ನನ್ನ ಅಭಿಪ್ರಾಯವಲ್ಲ. ತದ್ವಿಪರೀತವಾಗಿ ಆಂಗ್ಲ ಭಾಷಾಜ್ಞಾನವು ಬಹಳ ಅಗತ್ಯವಾಗಿದೆಯೆ ಎಂಬುದನ್ನು ನಾನು ಒಪ್ಪುತ್ತೇನೆ; ಯಾಕೆಂದರೆ ಅದು ಇಂದು ಅಂತರರಾಷ್ಟ್ರೀಯ ಭಾಷೆಯಾಗುತ್ತಿದೆ; ಮತ್ತು ಅದರ ಸಾಹಿತ್ಯ ಸಹ ಬಹಳ ವ್ಯಾಪಕವಾಗಿದೆ. ಇದರ ಹೊರತು, ಯಾವ ಸಾಹಿತಿಯೂ ಗತಕಾಲದ ಯಾ ವರ್ತಮಾನ ಜಗತ್ತಿನ ಸಾಹಿತ್ಯ ತಿಳಿಯದವನಾಗಿ ಸಾಹಿತ್ಯಸಾಧನೆಯನ್ನು ಸಫಲಗೊಳಿಸಲಾರನು; ಮತ್ತು ಅಂತಹ ಪರಿಸ್ಥಿತಿಯಲ್ಲಿ ಯಾವುದೇ ವ್ಯಕ್ತಿಯು ತನ್ನನ್ನು ಯೋಗ್ಯರೀತಿಯಿಂದ ಶಿಕ್ಷಿತನಾಗಿಸಲಾರನು. ಹಾಗೆಯೇ ನಾವು ನಮ್ಮ ಭಾಷೆಗಳ ಸಾಹಿತ್ಯದ ರುಚಿಯನ್ನು ತಿಳಿಯಬಲ್ಲವರಾದಾಗಲೇ ಅನ್ಯ ಭಾಷೆಗಳ ಸಾಹಿತ್ಯದ ರುಚಿಯನ್ನು ಗುರುತಿಸಲಾರೆವೆಂಬುದನ್ನು ಅಗತ್ಯವಾಗಿ ಹೇಳಬಯಸುತ್ತೇನೆ. ನಮ್ಮ ಅಸ್ತಿತ್ವವನ್ನು ಕಾದಿಡಲು ಇತರ ವಿಷಯಗಳೊಂದಿಗೆ ನಾವು ನಮ್ಮ ಭಾಷಾಸಾಹಿತ್ಯವನ್ನು ಪ್ರೀತಿಸುವುದರಲ್ಲಿ ಮತ್ತು ಅದರ ಅಧ್ಯಯನದಲ್ಲಿ ಹೆಚ್ಚಲ್ಲವಾದರೂ, ನಮ್ಮಲ್ಲಿಯ ಹೆಚ್ಚಿನ ಜನರು ವಿದೇಶೀ ಸಾಹಿತ್ಯದ ಅಧ್ಯಯನದಲ್ಲಿಡುವಷ್ಟು ಅಭಿರುಚಿಯನ್ನಾದರೂ ಇಡುವುದು ಅತ್ಯಂತ ಅಗತ್ಯವೆಂದು ನಾನು ಹಿಂದೆ ಹಲವು ಬಾರಿ ಹೇಳಿದ ಮಾತನ್ನೇ ಇಲ್ಲಿ ಪುನರಾವರ್ತಿಸುತ್ತೇನೆ. ಒಂದು ವೇಳೆ ನಮ್ಮ ದೇಶಬಾಂಧವರು ಹೀಗೆ ಮಾಡತೊಡಗಿದರೆಂದರೆ ಕೇವಲ ನಮ್ಮದೇಶಕ್ಕೇ ಹೆಚ್ಚಿನ ಶ್ರೇಯಸ್ಸಾಗುವುದಲ್ಲದೆ, ನಮ್ಮ ಸಾಹಿತಿಗಳಾದ ಸಹೋದರ–ಸಹೋದರಿಯರ ಆರ್ಥಿಕ ಸಮಸ್ಯೆಗಳು ಸಹ ಕೆಲವು ಮಟ್ಟಿಗೆ ಪರಿಹರಿಸಲ್ಪಡುವವು. ಪ್ರಸ್ತುತದ ಆರ್ಥಿಕ ಸ್ಥಿತಿಯಿಂದ ಸಾಹಿತಿಯು ತಾನು ಸಮಾಜದ ಅಸಂಖ್ಯ ವ್ಯಕ್ತಿಗಳಿಗೆ ಅಕ್ಷಯ ಆನಂದ, ನವಸ್ಫೂರ್ತಿ, ಸುಂದರ ಸ್ವಪ್ನ ಮತ್ತು ಶುಭಕರ ಆದರ್ಶವನ್ನಿತ್ತುದರ ಪ್ರತಿಯಾಗಿ ಯಾವ ಆರ್ಥಿಕ ಲಾಭಕ್ಕೆ ಅರ್ಹನೋ ಅದು ಅವನಿಗೆ ಸಿಗದಿರುವುದರಿಂದಲೇ "ಕೆಲವು ಮಟ್ಟಿಗೆ" ಎಂದು ಹೇಳುತ್ತಿದ್ದೇನೆ. ನಮ್ಮ ಈಗಿನ ಆರ್ಥಿಕವ್ಯವಸ್ಥೆಯಲ್ಲಿ ಉದ್ಯೋಗವು ಸಮಾಜಸೇವೆಗಾಗಿ ಮಾಡಲ್ಪಡದೆ, ತನ್ನ ಸ್ವಂತ ಲಾಭಕ್ಕಾಗಿ ಮಾಡಲ್ಪಡುತ್ತದೆ. ಇದರ ಪರಿಣಾಮವು ಹೆಚ್ಚಾಗಿ, ಸ್ವಲಾಭದ ವೇದಿಯಲ್ಲಿ ಸಾಮಾಜಿಕ ಕಲ್ಯಾಣದ ಬಲಿಯನ್ನು

ಕೊಡುವುದಾಗಿದೆ. ಆದುದರಿಂದ ವಿಚಾರದ ಅಮೂಲ್ಯ ರತ್ನಭಂಡಾರವನ್ನು ಪ್ರಕಾಶಕರು ಬಡಸಾಹಿತಿಯಿಂದ ಅಲ್ಪಬೆಲೆಗೆ ಕೊಂಡುಕೊಂಡು ಸ್ವತಃ ಅದರಿಂದ ಬಹಳ ಲಾಭಹೊಂದುತ್ತಾರೆಂಬುದೇನು ಆಶ್ಚರ್ಯದ ಮಾತಲ್ಲ. ಇಂದು ಸಾಹಿತಿಗಳು ಈ ವಿಷಮತೆ ಮತ್ತು ಅನ್ಯಾಯವನ್ನು ದೂರಮಾಡುವತ್ತ ಮುಂದರಿದಿದ್ದಾರೆಂದು ನನಗೆ ಅತ್ಯಂತ ಹರ್ಷವಾಗಿದೆ

ಕ್ರಾಂತಿಗಳ ಅನ್ಯಮಾರ್ಗಗಳೂ ಬೇರೆ ದೇಶಗಳಲ್ಲಿ ಸೂಚಿಸಲ್ಪಟ್ಟಿವೆ. ಆದರೆ ನನ್ನ ದೇಶದಲ್ಲಿ ಬಹಳ ಪುರಾತನ ಕಾಲದಿಂದ ಸಾಮಾಜಿಕ ಮತ್ತು ವೈಯಕ್ತಿಕ ಜೀವನದಲ್ಲಿ ಸುಖ ಮತ್ತು ಶಾಂತಿ ಸ್ಥಾಪಿಸುವ ಮಾರ್ಗವು ತನ್ನ ಜೀವನದಿಂದ ಸರ್ವ ಮಾನವರ ಜೀವನವನ್ನು ಸುಗಂಧಿತ ಮತ್ತು ಸುಖಮಯವಾಗುವಂತೆ ಮಾಡುವುದೇ ಪ್ರತಿಯೊಬ್ಬ ವ್ಯಕ್ತಿಯ ವೈಯಕ್ತಿಕ ಜೀವನದ ಪರಮೋತ್ಕರ್ಷವೆಂದು ತಿಳಿದು ನಿಶ್ಚೈಸಲ್ಪಟ್ಟಿತ್ತು. ನನ್ನ ಅಭಿಪ್ರಾಯದಲ್ಲಿ, ಆದ್ದರಿಂದಲೇ ನಮ್ಮ ದೇಶದಲ್ಲಿ ಅಹಿಂಸೆಯ ಆದರ್ಶಕ್ಕೆ ಅಷ್ಟು ಮಹತ್ತ್ವವು ಕೊಡಲ್ಪಟ್ಟಿದೆ. ರಾಷ್ಟ್ರಪಿತ ಮಹಾತ್ಮಾಗಾಂಧಿಯವರು ಇದೇ ಆದರ್ಶದ ಸ್ಫೂರ್ತಿಯನ್ನು ಸುಪ್ತ ಭಾರತೀಯರ ನರನಗಳಲ್ಲಿ ಪುನಃ ನವ ಜೀವನ, ನವಸ್ಫೂರ್ತಿ, ಮತ್ತು ಸೃಜನಾತ್ಮಕ ಶಕ್ತಿಯ ಸಂಚಾರ ಮಾಡಿಸಿದ್ದಾರೆ.

ಸಾಹಿತಿಯು ತನ್ನ ಕೃತಿಗಳನ್ನು — ಸೃಜನಾತ್ಮಕ ಮತ್ತು ಸಹಕಾರದ ಈ ಸಿದ್ಧಾಂತಕ್ಕೆ ವಿಧೇಯನಾಗಿದ್ದರೆ — ನಿಜವಾಗಿಯೂ ತನ್ನ ಕೃತಿಗಳನ್ನು ಭಾರತದ ನವನಿರ್ಮಾಣ ಮತ್ತು ಇಲ್ಲಿಯ ಜನತೆಯ ದುಃಖ ದಾರಿದ್ರ್ಯಗಳನ್ನು ದೂರಮಾಡುವ ಪ್ರಬಲ ಅಸ್ತ್ರವನ್ನಾಗಿ ಮಾಡಿಕೊಳ್ಳುವನೆಂದು ನನಗೆ ದೃಢವಾದ ನಂಬಿಕೆಯಿದೆ. ಪರಮಾತ್ಮನು ಸಾಹಿತಿಗಳಿಗೆ ಅವರು ತಮ್ಮ ಶಕ್ತಿಯಿಂದ ತಮ್ಮ ಅನ್ಯ ಸಹೋದರ ಸಹೋದರಿಯರ ಸಮಸ್ಯೆಗಳನ್ನು ಸರಿಯಾಗಿ ತಿಳಿದುಕೊಳ್ಳುವ ಹಾಗೆ ಮತ್ತು ತಿಳುವಳಿಕೆ ಹಾಗೂ ಉತ್ಸಾಹ ಹೊಂದಿ ತಮ್ಮ ಆ ಸಮಸ್ಯೆಗಳನ್ನು ಬಿಡಿಸಲು ಕಟಿಬದ್ಧರಾಗಿ ತೊಡಗುವಂತೆ ಮಾಡುವ ಪ್ರೇರಣೆ ಮತ್ತು ಸಜೀವ ಶಬ್ದಗಳಲ್ಲಿ ವ್ಯಕ್ತಮಾಡುವ ಶಕ್ತಿಯನ್ನು ಕೊಟ್ಟಿದ್ದಾನೆ ನಮ್ಮ ದೇಶದ ಕೋಟ್ಯವಧಿ ನರನಾರಿಯರ ಜೀವನವಿಂದು ವಿಫಲತೆ ಮತ್ತು ವಿಪತ್ತುಗಳಿಂದ ತುಂಬಿದೆ. ಎಂದಿನ ತನಕ ಅವರು ತಮ್ಮ ಜೀವನವನ್ನು ಸಫಲ ಮತ್ತು ಸಾರ್ಥಕ ಮಾಡುವುದಿಲ್ಲವೋ ಅಂದಿನ ತನಕ ನಮ್ಮ ಸ್ವಾತಂತ್ರ್ಯಕ್ಕೆ ಏನೂ ಅರ್ಥವಿರುವುದಿಲ್ಲ. ಈ ಮಹಾಕಾರ್ಯದ ಸಂಪೂರ್ಣತೆಗಿಂದು ನಮ್ಮ ದೇಶದ ಪ್ರತಿಯೊಬ್ಬ ವ್ಯಕ್ತಿಯು ತನ್ನ ಪಾಲಿನ ಸೇವೆಮಾಡುವ ಅಗತ್ಯವಿದೆ. ಜನತೆಯು ಈ ಸಮಸ್ಯೆಗಳನ್ನು ಶೀಘ್ರಾತಿಶೀಘ್ರ ಬಗೆಹರಿಸುವಲ್ಲಿ ತಮ್ಮ ಸಂಪೂರ್ಣ ಶಕ್ತಿಯನ್ನು ತೊಡಗಿಸುವಂತೆ ಅವರ ಹೃದಯದಲ್ಲಿ ಸ್ಫೂರ್ತಿ, ಉತ್ಸಾಹ, ಮತ್ತು ಶ್ರದ್ಧೆಯನ್ನುಂಟುಮಾಡುವ ಶಕ್ತಿಯು ರಾಜನೀತಿಜ್ಞನಲ್ಲಾಗಲೀ ಯಾಂತ್ರಿಕನಲ್ಲಾಗಲೀ ಇಲ್ಲ. ಜನತೆಯ ಹೃದಯದಲ್ಲಿ ಈ ಭಾವನೆಯನ್ನು ಹುಟ್ಟಿಸುವ ಕೆಲಸವು ಸಾಹಿತಿಗಳದಾಗಿದೆ. ಇಂದು ನಮಗೆ ಸಾಹಿತ್ಯವು ಪ್ರೇಯಸಿಯ ಗಾನವಾಗದೆ ಪ್ರಸವಿನೀ ಮಾತೆಯ ಸೃಜನಾತ್ಮಕ ಶಕ್ತಿಯಾಗುವ, ಉಪಭೋಗದ ವಸ್ತುವಾಗದೆ ರಚನೆಯ ಸಾಧನವಾಗುವ ಅತ್ಯಂತ ಅವಶ್ಯಕತೆಯಿದೆ. ನನ್ನ ಸಾಹಿತಿಗಳಲ್ಲಿ ಅನೇಕರು ಸ್ವಾತಂತ್ರ್ಯಚಳವಳದ ದಿನಗಳಲ್ಲಿ ದೊಡ್ಡ ದೊಡ್ಡ ಮಹತ್ಕಾರ್ಯ ಮಾಡಿದ್ದರು. ಮತ್ತು ಅವರಲ್ಲಿ ಅನೇಕರು ಆ ದಿನಗಳಲ್ಲಿ ಜನಜೀವನದಲ್ಲಿ ಸ್ವತಂತ್ರತೆಯ ಮೋಹಕ ಉನ್ಮಾದವು ಹುಟ್ಟುವಂತಹ ಮತ್ತು ಲಕ್ಷಾವಧಿ ಜನರು ಸ್ವಾತಂತ್ರ್ಯ ಸಮರದಲ್ಲಿ ತಮ್ಮ ಜೀವನವನ್ನು ಬಲಿದಾನಮಾಡಲು ಸಿದ್ಧರಾಗುವಂತಹ ಕೃತಿಯನ್ನು ರಚಿಸಿದರು.

ಇಂದು ನಮಗೆ ಬೇರೆವಿಧದ ಸಾಹಿತ್ಯದ ಅವಶ್ಯಕತೆಯಿದೆ. ಯಾವುದು ಜನತೆಯೆದುರು ಕೃಷಿ, ಉದ್ಯೋಗ, ವ್ಯವಸಾಯ ಮತ್ತು ಶಿಕ್ಷಣದ ಕ್ಷೇತ್ರಗಳಲ್ಲಿ, ಇಂದಿನ ವಿಜ್ಞಾನದ ಸಹಾಯ ತೆಗೆದುಕೊಂಡು, ಪ್ರತಿಯೊಬ್ಬ ವ್ಯಕ್ತಿಯೂ ಸಾಮೂಹಿಕ ಉದ್ಯೋಗದಲ್ಲಿ ತೊಡಗುವಂತೆ ಮಾತುತ್ತದೋ, ಆ ಸಾಹಿತ್ಯದ ಅವಶ್ಯಕತೆಯಿದೆ.

ಇಂದು ನಮ್ಮ ಸಮಾಜದಲ್ಲಿ ರಚನಾತ್ಮಕ ಯಾ ಸೃಜನಾತ್ಮಕ ಕಾರ್ಯಗಳ ಕುರಿತು ಇರುವ ಉದಾಸೀನತೆಯ ಕಾರಣ ಬಹಳವಾಗಿ ಆಧುನಿಕ ಸಾಹಿತ್ಯದಲ್ಲಿ ಈ ಕುರಿತು ಪ್ರತಿಧ್ವನಿಸುವ ಶಬ್ದವಿಲ್ಲದಿರುವುದೇ — ಎಂದು ನಾನೆಣಿಸುತ್ತೇನೆ. ನಮ್ಮ ದೇಶಕ್ಕೆ ಹಾಗೂ ಮಾನವ ಜಾತಿಗೆ ಸುಖವಾಗಬೇಕಾದರೆ ಮನೆಮನೆಗಳಲ್ಲಿ, ಗ್ರಾಮಗ್ರಾಮಗಳಲ್ಲಿ ನಗರ ನಗರಗಳಲ್ಲಿ, ಸರ್ವಜನರೂ ವ್ಯಾಕುಲರಾಗಿ ಯಾವ ತತ್ಪರತೆಯಿಂದ ಸ್ವಾತಂತ್ರ್ಯಪ್ರಾಪ್ತಿಗಾಗಿ ಸ್ವಾತಂತ್ರ್ಯಹೋರಾಟದಲ್ಲಿ ಧುಮುಕಿದರೋ, ಅದೇ ತತ್ಪರತೆಯಿಂದ ರಚನಾತ್ಮಕ ಕಾರ್ಯಗಳಲ್ಲಿ ತೊಡಗಬೇಕು.

ನಮ್ಮ ಪ್ರಸ್ತುತ ಸಮಸ್ಯೆಗಳ ಮುಂದೆ ಸ್ವಾತಂತ್ರ್ಯಪ್ರಾಪ್ತಿಯು ಒಂದು ಅಲ್ಪಕಥಿನತೆಯ ಕೆಲಸವಾಗಿತ್ತೆಂದು ನಾನು ತಿಳಿಯುತ್ತೇನೆ. ಆಗ ಕೇವಲ ಕೆಲವು ವಿದೇಶೀಯರ ಅಧಿಕಾರವನ್ನು ನಮ್ಮ ದೇಶದಿಂದ ತೊಲಗಿಸಬೇಕಿತ್ತು. ಆದರೆ ಇಂದು ನನಗೆ ಸುಮಾರು ೩೫ ಕೋಟಿ ಜನರನ್ನು ಸುಶಿಕ್ಷಿತರನ್ನಾಗಿ ಮಾಡಲಿಕ್ಕಿದೆ; ಅವರಿಗೆ ಉತ್ತಮ ಮನೆಗಳನ್ನು ಕೊಡಲಿಕ್ಕಿದೆ; ತಕ್ಕಷ್ಟು ಊಟದ ವ್ಯವಸ್ಥೆಮಾಡಲಿಕ್ಕಿದೆ, ಮತ್ತು ಅವರ ಜೀವನವನ್ನು ಆನಂದಮಯ ಸಂಗೀತದಿಂದ ತುಂಬಲಿಕ್ಕಿದೆ. ಈ ಕಾರ್ಯಕ್ಕಾಗಿ ನಮ್ಮ ಆರ್ಥಿಕ ಶಕ್ತಿಯನ್ನು ಸಾವಿರ ಪಾಲು ಹೆಚ್ಚಿಸಬೇಕು; ಮತ್ತು ಈ ಕಾರ್ಯದಲ್ಲಿ ನಮ್ಮ ದೇಶದ ಪ್ರತಿಯೊಬ್ಬ ವ್ಯಕ್ತಿಯು ತನ್ನನ್ನು ಸರಕಾರದ ಅವಲಂಬಕನಲ್ಲವೆಂದು ತಿಳಿದು, ತನ್ನ ಶಕ್ತಿಯನ್ನು ಉತ್ಪಾದಕ ಸೃಜನಾತ್ಮಕ ಮತ್ತು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿದಾಗಲೇ ಆಗ ಸಾಧ್ಯವಿದೆ. ಈ ಮಹಾಯಜ್ಞದಲ್ಲಿ ಸಾಹಿತಿಯು ಪ್ರಧಾನ ಆಹುತಿಯನ್ನು ಹಾಕ ಒಲ್ಲನು; ಹಾಕುವನೆಂದು ಆಶೆಯೂ ಇದೆ.

(ಉಳಿದ ಭಾಗ ಮುಂದುವರಿದಿದೆ.)

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕ

ಮೊದಲುಮಾತುಗಳು

ಇಂದಿನ ಪ್ರಜಾಪ್ರಭುತ್ವಯುಗದಲ್ಲಿ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಎಲ್ಲಿಲ್ಲದ ಮಹತ್ತ್ವವು ಬಂದುದರಿಂದ, ಅದರ ಪರಿಣಾಮವು ನಮ್ಮ ಸಾಹಿತ್ಯದ ಮೇಲೆಯೂ ಆಗಲು ತೊಡಗಿದೆ. ಇಂದು ಸಾಹಿತ್ಯವೆಂದರೆ ಏನೆಂಬುದನ್ನು ಒಂದು ಸ್ಪಷ್ಟವಾದ ವ್ಯಾಖ್ಯೆಯಲ್ಲಿ ಹೇಳಲಿಕ್ಕೆ ಬಾರದಂತಹ ಪರಿಸ್ಥಿತಿಯುಂಟಾಗಿರುವುದು. ಬರೆಯಬೇಕೆನಿಸಿದವರೆಲ್ಲ ಮನಸ್ಸಿನಲ್ಲಿ ಮೂಡಿದ ವಿಚಾರಗಳನ್ನೂ ವಿಕಾರಗಳನ್ನೂ ಬರೆದು ಪ್ರಕಟಿಸಲು ತೊಡಗಿದ್ದಾರೆ. ಅದೆಲ್ಲವೂ ಇಂದು 'ಸಾಹಿತ್ಯ' ಎಂಬ ಹೆಸರಿನಲ್ಲಿಯೆ ಪ್ರಚಾರಕ್ಕೆ ಬರುತ್ತಲಿರುವುದು ಎಲ್ಲರ ಅನುಭವಕ್ಕೆ ಬಂದ ಸಂಗತಿ.

ಸಾಹಿತ್ಯನಿರ್ಮಿತಿಯ ಉದ್ದೇಶ ಸಮಾಜಸಂಸ್ಕಾರ ಎಂಬ ಸಂಗತಿಯನ್ನು ಎಲ್ಲರೂ ಒಪ್ಪುವರು; ಆದರೆ ಸಮಾಜಕ್ಕೆ ಎಂತಹ ಸಂಸ್ಕಾರ ಕೊಡಬೇಕೆಂಬುದರಲ್ಲಿ ಮಾತ್ರ ಭಿನ್ನಾಭಿಪ್ರಾಯಗಳು ಸಾಕಷ್ಟಿವೆ. ಇದಕ್ಕೆ ಕಾರಣವೆಂದರೆ ವ್ಯಕ್ತಿ-ವ್ಯಕ್ತಿಗಳ ವಿಚಾರಸ್ವಾತಂತ್ರ್ಯ.

ಸಮಾಜದಲ್ಲಿಯ ಬಹುಸಂಖ್ಯಾಕ ವ್ಯಕ್ತಿಗಳು ಸ್ವತಂತ್ರ ವಿಚಾರದಿಂದಲೆ ವರ್ತಿಸುತ್ತಿರುವುದಿಲ್ಲ. ಕೆಲವೊಂದು ಜನರು ಒಂದೊಂದು ವ್ಯಕ್ತಿಯ ವಿಚಾರಸ್ರಭಾವಕ್ಕೆ ಒಳಗಾಗಿರುವರು. ಇದಕ್ಕೆ ಕಾರಣವೆಂದರೆ ಆ ಆ ವ್ಯಕ್ತಿಗಳ ಸ್ವಂತದ ಅಭಿರುಚಿ, ಜೀವನವ ಅನುಕೂಲತೆ, ಸ್ವಾರ್ಥಸಾಧನೆಯ ಸೌಲಭ್ಯ—ಇವೇ ಆಗಿರುವುವು. ಯಾವ ವಿಚಾರಪಥವು ಈ ಮೂರನ್ನೂ ಒದಗಿಸಿಕೊಡುವುದೋ ಆ ಪಥವನ್ನು ಜನತೆ ಹಿಡಿಯುವುದು.

ಸಮಾಜದಲ್ಲಿಯ ಸಂಪತ್ತಿನ ವಿಷಮತೆ, ಅಧಿಕಾರದ ವಿಷಮತೆ, ಬಲದ ವಿಷಮತೆ ಇವುಗಳ ಕಾರಣದಿಂದ, ಬೇರೆ ಬೇರೆ ವ್ಯಕ್ತಿಗಳು ಬೇರೆ ಬೇರೆಯ ವಾತಾವರಣದಲ್ಲಿ ಬೆಳೆಯಬೇಕಾಗಿ ಬಂದು, ಅವುಗಳ ಅಭಿರುಚಿಗಳೂ ಆದರ್ಶಗಳೂ ಬೇರೆಬೇರೆಯಾಗುವುದು ಸಹಜ. ಇಂದಿನ ನಮ್ಮ ಸಾಮಾಜಿಕ ವೈಷಮ್ಯ ನಮ್ಮ ಜನತೆಯಲ್ಲಿ ಅನೇಕ ವಿಧದ ಅಭಿರುಚಿಗಳನ್ನೂ ಆದರ್ಶಗಳನ್ನೂ ಹುಟ್ಟಿಸಿಬಿಟ್ಟಿದೆ. ಎಂತಲೆ ಆ ಆ ಅಭಿರುಚಿ-ಆದರ್ಶಗಳನ್ನು ಪುರಸ್ಕರಿಸುವಂತಹ ಸಾಹಿತ್ಯ ನಿರ್ಮಾತೃಗಳೂ ದಿನದಿನಕ್ಕೆ ಹೆಚ್ಚುಹೆಚ್ಚಾಗಿ ತಲೆದೋರಲು ತೊಡಗಿದ್ದಾರೆ.

ಇಂದಿನ ರಾಜಕೀಯ ಪಕ್ಷ-ವಿಪಕ್ಷಗಳ ಅಧಿಕಾರ ಲಾಲಸೆಯ ಚಟುವಟಿಕೆಗಳೂ ಸಾಹಿತ್ಯಕರಲ್ಲಿ ಬಗೆಬಗೆಯ ಮನೋವಿಕಾರಗಳನ್ನು ಕೆರಳಿಸುತ್ತಲಿವೆ. ಭವಿಷ್ಯ ಹೇಗಾದರೂ ಆಗಲಿ, ಪದ್ಯದ ರಾಜಕೀಯ ಅಧಿಕಾರ ಸೂತ್ರ ತಮ್ಮ ಪಕ್ಷದ ಕಡೆಗೆ ಬರಲಿ—ಎಂಬ ಮಹತ್ತ್ವಾಕಾಂಕ್ಷೆಯಿಂದ ಎಂತೆಂತಹ ಅಭಾಸಾತ್ಮಕ— ಅಪಾಯಕಾರಕ— ವಿಚಾರಗಳನ್ನೂ ತತ್ತ್ವಗಳೆಂದು ಪ್ರತಿಪಾದಿಸುತ್ತಿರುವುದು ಈ ಪಕ್ಷಗಳ ಪದ್ಧತಿಯಾಗಿದೆ. ಈ ಪಕ್ಷಗಳೂ ಇಂದು ಸಾಹಿತ್ಯ ನಿರ್ಮಿತಿಯನ್ನು ನಡೆಯಿಸಿವೆ. ಇದರಂತೆಯೆ ಸಮಾಜದ ಪುನರ್ಘಟನೆ ಎಂಬ ಹೆಸರಿನಿಂದಲೂ ವಿವಿಧ ವಿಚಾರಗಳು ಸಾಹಿತ್ಯವೆಂದು ಹೊರಬರುತ್ತಲಿವೆ.

ಇಂತಹ ಕಾಲದಲ್ಲಿ ಜನಸಾಮಾನ್ಯರಿಗೆ ಯಾವ ಸಾಹಿತ್ಯ ಸತ್ಯಮಾರ್ಗಬೋಧಕವಾಗಿರುವುದೆಂಬುದು ತಿಳಿಯದಂತಾಗಿ ಅವರ ಮನಸ್ಸು-ಬುದ್ಧಿಗಳು ಕಂಗೆಟ್ಟು ಹೋಗುತ್ತವೆ. ಆದುದರಿಂದಲೇ ಇಂದು ನಮ್ಮ ನಾಡಿನಲ್ಲಿ, ನಿರ್ಮಾಣವಾಗುವ ಸಾಹಿತ್ಯದ ಸರಿಯಾದ ಬೆಲೆ ಕಟ್ಟುವ ವಿಮರ್ಶಕ ಶಕ್ತಿಯ ಅವಶ್ಯಕತೆಯೆನಿಸಲು ತೊಡಗಿದೆ.

ಸೃಷ್ಟಿ ವೈಷಮ್ಯದಿಂದ ಕೂಡಿದ್ದರೂ, ಸಂಶೋಧಕರು ಮಾನವನ ಕಲ್ಯಾಣ ಯಾವ ಯಾವ ಭೌತವಸ್ತುವಿನಿಂದ ಆಗುವುದೆಂಬುದನ್ನೂ ಯಾವ ಯಾವ ಭೌತ ವಸ್ತುಗಳಿಂದ ಆಗದೆಂಬುದನ್ನೂ, ಮೊದಲಿನಿಂದಲೂ ಕಂಡುಹಿಡಿದು ಹೇಳುತ್ತ ಬರುತ್ತಲಿದ್ದಾರೆ ಜನರು ಇವರ ಸಂಶೋಧನೆಗಳನ್ನು ತಮ್ಮ ಜೀವನಾನುಕೂಲತೆಗೆ ಉಪಯೋಗಮಾಡಿಕೊಳ್ಳುತ್ತಿರುವರೆಂದೇ ಅವರ ವ್ಯಾವಹಾರಿಕ ಜೀವನ ಸುಗಮವಾಗಿ ಸಾಗುವುದು. ಭೌತವಸ್ತುಗಳಂತೆಯೇ ಭಾವನೆಗಳೂ ವಿಚಾರಗಳೂ, ಕೆಲವು—ಜೀವನಕ್ಕೆ ಅನುಕೂಲವಾಗಿರುವುವು; ಕೆಲವು ಪ್ರತಿಕೂಲವಾಗಿರುವುವು. ಇವುಗಳನ್ನು ಸರಿಯಾಗಿ ಸಂಶೋಧಿಸಿ ಸಪ್ರಮಾಣವಾಗಿ ವಿವೇಕದ ಮಾತುಗಳಿಂದ ವಿವರಿಸಿ ಹೇಳುವವನನೇ ಸಾಹಿತ್ಯವಿಮರ್ಶಕನೆನಿಸಿಕೊಳ್ಳುವನು ವಿಮರ್ಶಕರಿಲ್ಲದ ನಾಡಿನ ಸಾಹಿತ್ಯ ಕೇವಲ ಅರಣ್ಯದಂತೆ ಗಹನವಾಗಿ ಪರಿಣಮಿಸುವುದು. ಅರಣ್ಯದಲ್ಲಿ ವಿಷಕಂಟಕಾಕೀರ್ಣ ತರು-ಗುಲ್ಮಗಳೂ ಇರಬಹುದು. ಅನ್ಯೌಷಧಗರ್ಭಿಗಳಾದ ವೃಕ್ಷ-ಲತೆಗಳೂ ಇರಬಹುದು. ಇವುಗಳ ವಿವೇಚನೆ ಇಲ್ಲದೆ ಅರಣ್ಯದಲ್ಲಿ ಪ್ರವೇಶಿಸಿದರೆ, ಕಂಟಕಾಕೀರ್ಣ ತರು-ಗುಲ್ಮಗಳ ದುಷ್ಪರಿಣಾಮವನ್ನೇ ನೋವಲು ಅನುಭವಿಸಬೇಕಾಗಿ ಬಂದೀತು. ಅನ್ಯೌಷಧಫಲಗಳ ಪ್ರಯೋಜನ ದೊರೆಯದೆ ಹೋದೀತು.

ಆದುದರಿಂದಲೇ ನಮ್ಮ ತರುಣರಲ್ಲಿ ಸಾಹಿತ್ಯವಿಮರ್ಶನ ಶಕ್ತಿ ಬೆಳೆಯಬೇಕೆಂದು ಜಯಂತಿಯ ಅಪೇಕ್ಷೆಯಿದೆ. ಈ ಅಪೇಕ್ಷೆಯ

ಕಾರಣದಿಂದಲೇ 'ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ' ವನ್ನು ಈ ನೊದಲು ನಾವು ಪ್ರಾರಂಭಿಸಿದ್ದೆವು. ಕಾರಣಾಂತರದಿಂದ ತಡೆದು ನಿಲ್ಲಿಸಿದುದನ್ನು ಈಗ ಮತ್ತೆ ಪ್ರಾರಂಭಿಸಿದ್ದೇನೆ. ಕನ್ನಡ ತರುಣರೆಲ್ಲ ಆಸ್ಥೆಯಿಂದ ಭಾಗವಹಿಸಿ, ಈ ವಿಭಾಗವನ್ನು ಯಶಸ್ವಿಯಾಗಿಸ. ಬೇಕಲ್ಲದೆ, ನಾಡಿನರಲ್ಲಿ ನಿಚಾರವಿವೇಕವನ್ನುಂಟು ಮಾಡುವ ಸೇವೆಯಲ್ಲಿ ಸಹಕರಿಸಬೇಕು.

ಮುಂದಿನ ತಿಂಗಳ ವಿಮರ್ಶೆಗಾಗಿ :

ಈ ಸಂಚಿಕೆಯಲ್ಲಿ ಪ್ರಕಟವಾದ 'ತಿಮ್ಮನ ದೈವ' 'ವಿಚಿತ್ರ-ವಿಧಿ' ಇವೆರಡು ಕತೆಗಳಲ್ಲಿ ಯಾವುದಾದರೂ ಒಂದನ್ನು ಕುರಿತು ವಿಮರ್ಶೆ ಬರೆದು ಮೇಲಾಟಕ್ಕೆ ಕಳುಹಬೇಕು. ಅದರ ನಿರ್ಣಯ, ಮೊದಲನೆಯ ಸ್ಥಾನ ಪಡೆದ ವಿಮರ್ಶೆ—ಜುಲೈ ಸಂಚಿಕೆಯಲ್ಲಿ ತಪ್ಪದೆ ಪ್ರಕಟವಾಗುವುದು.

—ಸಂಪಾದಕ

(ತಿಂಗಳೆಯ ಪುಟದಿಂದ ಬಂದುದು)

ನಾನು ಇದೇ ಪ್ರಕಾರದ ಸಾಹಿತ್ಯವನ್ನು ಪ್ರಗತಿಶೀಲಸಾಹಿತ್ಯ ವೆನ್ನುತ್ತೇನೆ. ಇಂದು ಕೆಲವು ಜನರು, ಯಾವ ಸಾಹಿತ್ಯದಲ್ಲಿ ಸಮಾಜದೊಳಗಾಗುವ ಶ್ರೇಣಿಸಂಘರ್ಷಣೆಯು ವರ್ಣನೆಯಿರುತ್ತದೋ ಯಾವುದು ಸರ್ವವಿದಿತ ಶೋಷಿತ ವರ್ಗಗಳನ್ನು ಅನ್ಯವರ್ಗಗಳೊಂದಿಗೆ ಘರ್ಷಣೆಗೆ ಪ್ರೇರೇಪಿಸುತ್ತದೋ, ಅಂತಹ ಸಾಹಿತ್ಯಕ್ಕೆ ಪ್ರಗತಿಶೀಲ ಸಾಹಿತ್ಯದ ಶ್ರೇಣಿಯನ್ನು ಕೊಡುತ್ತಾರೆ. ಭಾರತವು ಮಹಾತ್ಮಾ ಗಾಂಧೀಜೀಯವರ ನೇತೃತ್ವದಲ್ಲಿ ಸಾಮಾಜಿಕಶೋಷಣೆಯ ಅಂತ್ಯ ಮಾಡುವ ಒಂದು ಹೊಸರೀತಿಯ ಅವಿಷ್ಕಾರ ಮಾಡಿದೆಯೆಂದು ನನ್ನ ವಿಚಾರ. ಇಂದು ಭಾರತದಲ್ಲಿ ಸಾಮಾಜಿಕ ಮತ್ತು ರಾಜನೈತಿಕ ಅಧಿಕಾರವು, ಶೋಷಣಹೀನ ಶೂನ್ಯ ವರ್ಗಹೀನ ಸಮಾಜವಾಗಬೇಕು, ಮತ್ತು ಅದರಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಯಾವುದೇ ಭೇದಭಾವವಿಲ್ಲದೆ ತನ್ನ ಜೀವನದ ಪೂರ್ಣ ವಿಕಾಸವನ್ನು ಮಾಡಲಾಗುವ ಅನುಕೂಲತೆಗಳೊದಗಬೇಕು—ಎಂಬ ವಿಷಯಗಳಲ್ಲಿ ವಿಶ್ವಾಸ ಉಳ್ಳವರ ಕೈಯ್ಯಲ್ಲಿದೆ. ನಾವು ಜಗತ್ತಿನ ಒಂದು ಮಹಾಶಕ್ತಿಯನ್ನು ಅಹಿಂಸಾತ್ಮಕ ಕ್ರಿಯಾಶೀಲತೆಯಿಂದ ಎದುರಿಸಿದ್ದು ಮಾತ್ರವಲ್ಲದೆ ಸ್ವರಾಜ್ಯವನ್ನು ಸಹ ಹೊಂದಿರುವಾಗ, ಈಗ ಈ ರಚನಾತ್ಮಕ ಸಮಯದಲ್ಲಿ ನಮಗೆ ನಮ್ಮೊಳಗಿನ ಶ್ರೇಣಿಸಂಘರ್ಷದ ವಿನಾ, ಹೊಸ ಸಮಾಜದ ನಿರ್ಮಾಣ ಮಾಡುವುದು ಸುಲಭವಾಗಬೇಕು ಇದರಲ್ಲಿ ಸಾಹಿತ್ಯವು ಯಥೇಷ್ಟ ಸಹಾಯ ಮಾಡಬಲ್ಲುದು. ಆದ್ದರಿಂದ ಸೃಷ್ಟಿ ಮತ್ತು ರಚನೆಯ ಆಹ್ವಾನದಿಂದ ತುಂಬಿದ ಸಾಹಿತ್ಯದ್ದು ಮಾತ್ರವಿಂದು ನಮ್ಮ ದೇಶಕ್ಕೆ ಅವಶ್ಯಕತೆಯಿದೆಯೆಂದು ನಾನೆಣಿಸುತ್ತೇನೆ.

ಪ್ರಭೆಗೆ

ಶ್ರೀ. ದೇವೇಂದ್ರನಾಯಕ, ಧಾರವಾಡ

ಚೆಲ್ಲುಡಿಯು ಚೇತನವು
ನನ್ನೆದೆಯ ತಂತಿಯನು
ಇನಿದಾಗಿ ನುಡಿಸುತಿದೆ,
ನನ್ನನುಡಿ ರಸಬಿಂದು
ನನ್ನ ಹೃತ್ತೃಷೆಯನ್ನು
ಮನವಾರೆ ಕಳೆಯುತಿದೆ ॥ ೧ ॥
ನಿನ್ನನುಡಿ ಭರವಸೆಯು
ಸನ್ನುತನ ಬೆಳಕಿನೆಡೆ
ನಡೆಸಿ ಕರೆದೊಯ್ಯುತಿದೆ
ರಸಋಷಿಯ ಸಿಂಚನವು
ಕಾವ್ಯಝರಿ ಹರಿಸುತಲಿ
ಒಳಗನ್ನು ರವಿಸುತಿದೆ ॥ ೨ ॥
ನಿನ್ನನುಡಿ ಸವಿನೆನವು
ವಿಷನಿಮಿಷ ಮರೆಯಿಸುತೆ
ಪ್ರತಿಭೆಯಲಿ ಮುಳುಗಿಸಿದೆ
ಬಾ ಬಾರೆ ಓ ಪ್ರಭೆಯೆ
ಸಾನಂದ ಭಂಗಿಯಲಿ
ನೀ ಬಾರಿ ಮೈದೋರಿ ॥ ೩ ॥
ರುಕ್ಷತೆಯ ಬಾಳಿನಲಿ
ಕವಿಗೇನು ಇಹುದಿಹುದು
ಕರುಣೆಯಾಸರ ತೊರೆದು
ಜೀವನದ ಗುರಿಯನ್ನು
ಕಾಣದಲೆ ಎಡವಿಹೆನು
ಆಸರಕೆ ಬಾ ಪ್ರಭೆಯೆ ॥ ೪ ॥

ಕನಸಿಗನ ನೋರೆ

ಶ್ರೀ. ಶಂ. ರಾ. ಮೊಕಾಶಿ, ಧಾರವಾಡ

ಹಗಲು ಇರುಳಾಗಿಹುದು; ಇರುಳು ಹಗಲಾಗಿಹುದು.
ಮುಗಿಲು ಮಣ್ಣೊಳಗೆಲ್ಲೊ ಹೂತುಹೋಗಿಹುದು.
ಜಗದು ತಂದಿಹ ನಗುವು, ಅವಡುಗಚ್ಚಿದ ಅಳುವು–
ದಿಗಿಲೊಂದೆ ಜಾಗರವ ನೊಣೆದಹಾಗಿಹುದು !
ನಿಂತುಕೊಳಲೊಂದಿನಿಸು ನೆಲವ ಕೊಡಿರಯ್ಯೋ !
ನೋಡಲೆನಗೊಂದಿನಿಸು ಮುಗಿಲು ಕೊಡಿರಿ !
ತಾರೆಗಳನುಂಡ ಕಂಗಳಿಗೆ ಎಲೆ ಲಾಂದ್ರಗಳೆ,
ನಿಮ್ಮ ನೆರಳಿರಚದಿರಿ ! ಬೆಳಕು ಬಿಡಿರಿ !

ಸಾದರ ಸ್ವೀಕಾರ

೧ **ಶ್ರೀ ವರ್ಧಮಾನ ಪುರಾಣಂ** (ಹಳಗನ್ನಡ ಜೈನ ಪುರಾಣಕಾವ್ಯ) ಆಚಣ್ಣಕವಿ ವಿರಚಿತಂ. (೧೮೯೮—೧೯೨೩) ಸಂಪಾದಕರು ಶ್ರೇಯುತರುಗಳಾದ ಎಂ. ವೆಂಕಯ್ಯಪ್ಪ ಭಟ್ಟ ಎಂ. ಎ. ಎಲ್. ಟಿ. ಮತ್ತು ಎಂ. ಗೋವಿಂದರಾವ್, ಎಂ. ಎ., ಬಿ. ಬಿ. ಎಲ್. ಅವರು. ಮದ್ರಾಸು ಯುನಿವರ್ಸಿಟಿ ಕನ್ನಡ ಗ್ರಂಥಮಾಲೆಯ ೧೧ನೆಯ ಗ್ರಂಥ. ರೊಯಲ್ ಅಷ್ಟಪತ್ರದ ೪೪+೨೯೬ ಪುಟಗಳು. ಬೆಲೆ ೧೫—೦—೦.

೨ **ಚೇತನ** (ಮಾಸಪತ್ರಿಕೆಯ ಜನ್ಮದಿನದ ಸಂಚಿಕೆ) ಸಂಪಾದಕರು ಮತ್ತು ಪ್ರಕಾಶಕರು ಶ್ರೀ ಶಂಕರ ಹೆಜ್ಜಾಡಿ, ಚೇತನಾ ಪಬ್ಲಿಕೇಶನ್ಸ್, ಭಾಮ್ ಬ್ಯಾನ್ಯನ್, ಪೀತಾ ಸ್ಟ್ರೀಟ್, ಫೋರ್ಟ್ ಮುಂಬಯಿ. ಕ್ರೌ ೧೮ನ ೬೪ ಪುಟಗಳು ಬೆಲೆ—೪—೦.

ಸಂಪಾದಕರು ಮುಂಬಯಿಯಲ್ಲಿ ಕನ್ನಡ ಮಾಸಪತ್ರಿಕೆ ನಡೆಯಿಸುವ ಸಾಹಸವನ್ನು ಪ್ರಾರಂಭಿಸಿ, ಒಂದು ಸಂವತ್ಸರವನ್ನು ದಾಟಿಯೂಯಿಟ್ಟುವು ಸಂತೋಷದ ಸಂಗತಿಯೇ ಸರಿ. ಹೆಚ್ಚಾಗಿ ಮುಂಬಯಿಯಲ್ಲಿರುವ ಕನ್ನಡ ತರುಣಲೇಖಕರ ಲೇಖನಗಳೇ ತುಂಬಿವೆ. ಸಂಪಾದಕರು ಕನ್ನಡ ನಾಡಿನ ಒಗ್ಗೂಟಕ್ಕೆ ಹಂಬಲಿಸುವವರು. ಚೇತನವು ನೂರಾರು ಹುಟ್ಟುಹಬ್ಬಗಳನ್ನು ಕಂಡು ಕರ್ನಾಟಕದ ಅಭ್ಯುದಯಕ್ಕೆ ಕಾರಣವಾಗಲಿ.

೩ **ರಾಷ್ಟ್ರಬಂಧು** (ವಾರಪತ್ರಿಕೆಯ ಬೆಳ್ಳಿಹಬ್ಬದ ವಿಶೇಷ ಸಂಚಿಕೆ). ಸಂಪಾದಕರು ಶ್ರೀ ಕಡಂಗೋಡ್ಲು ಶಂಕರಭಟ್ಟರು, ಮಂಗಳೂರು. ಡೆ ೧ನ ೧೪ ಪುಟಗಳು. ಬೆಲೆ ೧-೦-೦.

'ರಾಷ್ಟ್ರಬಂಧು' ವಾರಪತ್ರಿಕೆಯು ಕರ್ನಾಟಕದಲ್ಲಿ ಎಲ್ಲರಿಗೂ ಸುಪರಿಚಿತವಾದುದು. ಅದೀಗ ತನ್ನ ೨೫ನೆಯ ವರ್ಷದ ಆಯುಷ್ಯವನ್ನು ಕ್ರಮಿಸಿ, ರಜತಮಹೋತ್ಸವವನ್ನು ಮಾಡಿಸಿಕೊಂಡು, ಅವರ ಕಾರಣವಾಗಿ ನಾಚಕರಿಗೆ ಈ ಸಾಹಿತ್ಯದ ಔತಣವನ್ನು ನೀಡಿದೆ ಮೊದಲು ಪತ್ರಿಕೆಯ ೨೫ವರ್ಷಗಳ ಬೆಳವಣಿಗೆಯ ಚರಿತ್ರೆಯ ವಿವರಣಾತ್ಮಕ ಲೇಖನವಿವ್ವು, ಮುಂದೆ ಕನ್ನಡನಾಡಿನ ಹಲವು ಜನ ಸುಪ್ರಸಿದ್ಧ ಲೇಖಕರ ವಿವಿಧ ವಿಷಯಕ ಲೇಖನ, ಕಥೆ, ಕವನಗಳಿವೆ. ಸಂಗ್ರಾಹ್ಯವಾದ ಸಂಚಿಕೆ.

೪ **ರಾಷ್ಟ್ರಮತ** (ನವೀನ ವಾರಪತ್ರಿಕೆ) ಸಂಪಾದಕರು ಶ್ರೀಮಾನ್ ಕಡೆಂಗೋಡ್ಲು ಶಂಕರಭಟ್ಟರು, ಮಂಗಳೂರು. ಕ್ರೌನ್ ಫೂಲಿಯೊ ೮ ಪುಟಗಳು ವಾರ್ಷಿಕ ಚಂದಾ ಅಂಚೆಯ ವೆಚ್ಚಸೇರಿ ೪-೧೨-೦.

'ರಾಷ್ಟ್ರಬಂಧು' ಪತ್ರಿಕೆಯು ಸಂಪಾದಕರಾಗಿ ೨೫ ವರ್ಷಗಳ ವರೆಗೆ ಅವಿರತವಾಗಿ ಕಾರ್ಯಮಾಡಿದ ಶ್ರೀ. ಶಂಕರಭಟ್ಟರು ಇದೀಗ ಹೊಸ ವಾರಪತ್ರಿಕೆಯನ್ನು ಪ್ರಾರಂಭಿಸಿದ್ದಾರೆ. ಈಗ ಪ್ರಕಟವಾದ ೪ ಸಂಚಿಕೆಗಳನ್ನು ನೋಡಿದರೆ, ಸಂಪಾದಕರ ನಿಷ್ಪಕ್ಷಪಾತದ ನಾಚಕೆಯ ಘೋರಣವೂ ಕರ್ನಾಟಕ-ಏಕೀಕರಣದ ಬಗೆಗಿರುವ ಕುತೂಹಲವೂ ಸಾಹಿತ್ಯಾಭ್ಯಾಸದ ಮೆರುಗುಳ್ಳ ಪರಿಶುದ್ಧ ಭಾಷಾಶೈಲಿಯೂ, ಪತ್ರಿಕೆಯ ಮೇಲು ಮಟ್ಟವನ್ನು ಚೆನ್ನಾಗಿ ಪ್ರಸ್ಫಾಪಿಸುವಂತಿವೆ. ರಾಷ್ಟ್ರಮತವು ರಾಷ್ಟ್ರದ ಜಾಗೃತಿ-ಅಭ್ಯುದಯಕ್ಕಾಗಿ ಕಾರ್ಯಮಾಡುತ್ತ ಬಹುಕಾಲ ಬಾಳಲಿ.

೫ **ಕೊನಷ್ಟೈ ಕತೆಗಳು** (ಅನುವಾದಿತ ಕಥೆಗಳ ಸಂಕಲನ) ಮೂಲ ತಮಿಳು ಕತೆಗಾರರಾದ ಕೊನಷ್ಟೈ ಅವರ ವಿಡಂಬಕ ಶೈಲಿಯ ವಿನೋದ ಕಥೆಗಳನ್ನು ಶ್ರೀಮಾನ್ ಗೊರೂರು ರಾಮಸ್ವಾಮಿ ಐಯಂಗಾರ್ ಅವರು ಅನುವಾದಿಸಿದ್ದಾರೆ. ಪ್ರಕಾಶಕರು ಸತ್ಯಶೋಧನ ಪುಸ್ತಕಭಂಡಾರ, ಕೋಟೆ-ಬೆಂಗಳೂರು. ಕ್ರೌ. ೫. ೨೧೨ ಪುಟಗಳು. ಬೆಲೆ ೩-೪-೦

೬ **ಮಂದಾರ ಕುಸುಮ** (ಕಥಾಸಂಕಲನ) ಬರೆದವರು ಶ್ರೀ ರಾಮಚಂದ್ರ ಶರ್ಮರು. ಪ್ರಕಾಶಕರು ಶ್ರೀ. ಎಚ್. ಎನ್. ರಂಗಸ್ವಾಮಿ, ಸಾಯಿ ನ್ಯಾಶನಲ್ ಮಾರ್ಟ್, ೧೩ ನಾಗಸಂದ್ರ ರೋಡು, ಬೆಂಗಳೂರು ೪ ಕ್ರೌ. ಅ. ೧೧೦ ಪುಟಗಳು. ಬೆಲೆ ೧-೫-೦.

೭. **ಶ್ರೀಗುರುರಾಜಸ್ತೋತ್ರ** (ಶ್ರೀ ರಾಘವೇಂದ್ರಸ್ವಾಮಿಗಳ ಚರಿತ್ರಾತ್ಮಕ ಸ್ತುತಿ) ಬರೆದವರು ದಿವಂಗತ ನಟಸಾಮ್ರಾಟ್ ಮಧ್ವರಾಜ ಉಪಾಧ್ಯಾಯನವರು. ಪ್ರಕಾಶಕರು ದಿ. ಮಧ್ವರಾಜ ಉಪಾಧ್ಯಾಯ ಸ್ಮಾರಕಸಮಿತಿ, ವಿಜಾಪುರ. ಫೂಲ್ಸ್ ಕ್ಯಾಪ್ ಅಷ್ಟಪತ್ರದ ೮ ಪುಟಗಳು. ಬೆಲೆ—೪—೦

ಈ ಕಿರುಹೊತ್ತಿಗೆಯಲ್ಲಿ ಸ್ತೋತ್ರ ಪೂರ್ಣವಾಗಿಲ್ಲ. ಅಪೂರ್ಣವಾಗಿ ಏಕೆ ಪ್ರಕಟಿಸಿದ್ದಾರೋ ತಿಳಿಯಲಿಲ್ಲ. ಮೊದಲಿಗೆ ಕನ್ನಡ ನಾಡಿನ ಹಿರಿಯರಾದ ಶ್ರೀಮಾನ್ ಆಲೂರ ವೆಂಕಟರಾಯರು 'ಕಂಬನಿನುಡಿ'ಯನ್ನು ಬರೆದು, ಅದರಲ್ಲಿ....'ಇವುಗಳಲ್ಲಿ ಎಳ್ಳಷ್ಟಾದರೂ ಸಟನವಿಲ್ಲ, ಸೋಗು ಇಲ್ಲ ಪಡಿಗರವಿಲ್ಲ, ರಸಿಕತೆ ಇಲ್ಲ, ಶೃಂಗಾರವಿಲ್ಲ, ಕೃತ್ರಿಮತೆಯಿಲ್ಲ. ಹೃದಯದ ಅಂತರಾಳದಿಂದ ಹೊರಹೊಮ್ಮಿದ ಸ್ತೋತ್ರಗಳಿವು...' ಎಂಬುದಾಗಿ ಹೇಳಿವ್ವಾರೆ. ಶ್ರೀ ರಾಘವೇಂದ್ರ ಗುರುಗಳ ವಿಷಯದಲ್ಲಿ ಭಕ್ತಿ ವಿಶ್ವಾಸವುಳ್ಳವರು, ಈ ಸ್ತೋತ್ರವನ್ನು ಪಠಿಸಿ ಭಾವಾನಂದವನ್ನು ಪಡೆಯಬಹುದು.

೮ **ಗಿಲಗಂಚಿ ಅರ್ಬಾಳಿ ಹಾಯಸ್ಕೂಲ್ ಮಿಸೆಲೆನಿ** (ವಿದ್ಯಾಶಾಲೆಯ ಪತ್ರಿಕೆ) ಐದುಜನ ಅಧ್ಯಾಪಕರಿಂದ ಕೂಡಿದ ಸಂಪಾದಕ ಮಂಡಳಿಯಿದೆ. ಪ್ರಕಾಶಕರು ಶ್ರೀಮಾನ್ ಸಿ.ಸಿ.ಸೋಳ ಎಂ. ಎಸ್ಸಿ., ಬಿ.ಟಿ., ಜಿ. ಎ. ಹೈಸ್ಕೂಲ್ ಬೆಳಗಾಂವ. ಕ್ರೌ. ೧೮ನ ೭೨ ಪುಟಗಳು.

ಈ ಸಂಚಿಕೆಯಲ್ಲಿ ವಿದ್ಯಾರ್ಥಿ ಲೇಖಕರು ಬರೆದ ಕಥೆ, ಕವನ, ಪ್ರಬಂಧ, ಹರಟೆ, ಮೊದಲಾದ ವಿವಿಧವಿಷಯಕ ಲೇಖನಗಳಿವೆಯಲ್ಲದೆ, ಹೈಸ್ಕೂಲಿನಲ್ಲಿಯ ಸಂಘ-ಸಮಿತಿಗಳ ಚಟುವಟಿಕೆಯ ವರದಿಗಳೂ ಇವೆ ಇಂಗ್ಲೀಷ ಲೇಖನಗಳಿಗೆ ೧೬, ಕನ್ನಡ ಲೇಖನಗಳಿಗೆ ೫೨, ಹಿಂದೀ ಲೇಖನಗಳಿಗೆ ೮ ಪುಟಗಳನ್ನು ಹಂಚಿಕೊಡಲಾಗಿದೆ. ವಿದ್ಯಾರ್ಥಿಗಳಾಡಿವ ಇದರಲ್ಲಿಯ ಸಾಹಿತ್ಯಕ್ರೀಡೆಗಳು ಹಿರಿಯರಿಗೆ ಕೌತುಕ-ಆನಂದಗಳನ್ನು ಉಂಟುಮಾಡಬಲ್ಲವು.

ಶರತ್‌ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು!
ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ
ಬೆಲೆಗೆ ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

ಆನಂದಕಂದ'ರ ಕಥೆ, ಕಾದಂಬರಿ, ಕವನಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು, ಎಲ್ಲವೂ ನಮ್ಮಲ್ಲಿ ದೊರೆಯುವವು. ವ್ಯಾಪಾರಿಗಳಿಗೆ ಅನುಕೂಲ ದರವ ಕಮೀಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು.

ನಮ್ಮ ಮಂದಿರ ಪ್ರಕಟಿಸಿದ 'ಆನಂದಕಂದ'ರ ಸಾಮಾಜಿಕ ಕಾದಂಬರಿ:

ಮಗಳ ಮದುವೆ

೧೯೨೦ನೆಯ ಸತ್ಯಾಗ್ರಹ ಚಳವಳಿಯ ಹಿನ್ನೆಲೆಯಲ್ಲಿ ಉತ್ತರಕರ್ನಾಟಕದ ಸಾಮಾಜಿಕ ಜೀವನವನ್ನು ವಿವಿಧ ಮುಖದಲ್ಲಿ ಚಿತ್ರಿಸಿ ತೋರಿಸಿದ ರಮ್ಯ ಕಥಾನಕ ಓದಲು ಕೈಯ್ಯಲ್ಲಿ ತೆಗೆದುಕೊಂಡರೆ, ಮುಗಿಸುವ ವರೆಗೂ ಪುಸ್ತಕವನ್ನು ಕೆಳಗೆ ಇರಿಸಲಿಕ್ಕಾಗದಂತಹ ಆಕರ್ಷಕವಾದ ಕತೆಗಾರಿಕೆ. ಓದಿದ ರಸಿಕರಿಂದ ಧನ್ಯವಾದಗಳ ಸುರಿಮಳೆ!

ಕ್ರೌ. ಅ. ೩೫೦ ಪುಟಗಳು ಸಾದಾ ಪ್ರತಿಗೆ ೪-೦ ೦; ಸುಂದರ ಪ್ರತಿಗೆ ೪-೧೨-೦

ಬೆಳವಡಿ ಮಲ್ಲಮ್ಮ

(ತರಂಗನಾಟಕ ಸಂಕಲ)

ಕ್ರೌ. ಅ. ೧೧೬ ಪುಟ. ಬೆಲೆ ೧ ೮-೦

ಕಾರಹುಣ್ಣಿವೆ

ಕವನಸಂಕಲನ)

ಕ್ರೌ. ಅ. ೧೨೮ ಪುಟ. ಬೆಲೆ ಸಾದಾ ೨-೦-೦
ಸುಂದರ ೨-೮-೦

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ವಿರಹಿಣಿ	ಬಡತನದ ಬಾಳು	ಕರ್ನಾಟಕ ಜನಜೀವನ
ಸುದರ್ಶನ	ಒಡನಾಡಿ	ನನ್ನ ಬದುಕು	ಜೀವನ ಚರಿತ್ರ
ಅಶಾಂತಿಪರ್ವ		ಸಂಸಾರ ಚಿತ್ರ	ಶ್ರೀ ಬಸವಣ್ಣನವರು
ಮಗಳ ಮದುವೆ		ಮಾತನಾಡುವ ಕಲ್ಲು	

ಅಲ್ಲದೆ ಶ್ರೀ ಹುದ್ದಾರರ 'ಚಿತ್ರಕಲಾಪ್ರವೇಶ'ವೂ ಚಾಡಿಯ ಚಾಣಕ್ಯನ 'ಚಾತೀಯ ಸಮಸ್ಯೆ' 'ಕರ್ನಾಟಕ ಏಕೀಕರಣ' ಈ ಕರಿಹೊತ್ತಿಗೆಗಳೂ ದೊರೆಯುವವು

ಶರತ್‌ಪ್ರಕಾಶನ ಮಂದಿರಕ್ಕೆ ೫ ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ
ಸವಲತ್ತುಗಳು. ಬೇಗನೆ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ:

ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ, ಧಾರವಾಡ

Printed by N. A. Hoskeri at the Vijaya Press, Dharwar, and published for the Proprietors Jayanti Publications, by S. D. Dharmatti at the Jayanti Office, Dharwar

ಜುಲೈ
೧೯೫೩

ಈ ಸಂಚಿಕೆಯಲ್ಲಿ

ನಮ್ಮ ವಾಚನಾಭಿರುಚಿಯ ಮಟ್ಟ (ಸಂಪಾದಕೀಯ)	ಸಂಪಾದಕರು	೪೧
ನಾಡನಡೆ (ಸಾಂದರ್ಭಿಕ ಟಿಪ್ಪಣಿ)	'ಕಾಲಭೈರವ'	೪೩
ಗೌರೀಶಂಕರ (ಲಲಿತ ಪ್ರಬಂಧ)	ಶ್ರೀ. ಕೆ. ಅಶ್ವತ್ಥನಾರಾಯಣರಾವ್, ಬನಾರಸ	೪೫
ಜಾನಪದ ನಾಟ್ಯಗೀತಗಳು (ಮೂ. ಪಾ. ಹಾಡು)	ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ	೪೪
ಯಾರಿಗದು ಗೊತ್ತು? (ಕವನ)	ಶ್ರೀ. ಶಾಂತಿನಾಥ ದೇಸಾಯಿ ಬಿ. ಎ. (ಆನರ್ಸ್)	೪೬
ಬಂಗಾಳಿ ಪತ್ರಿಕೋದ್ಯಮ (ಪರಿಚಯಾತ್ಮಕ)	ಶ್ರೀ ಎ. ಎಸ್. ರಾಮಕೃಷ್ಣ, ಸುರತ್‌ಕಲ್ಲು	೪೭
ಕಾಲ್ತೊಡರಿದ ಬಳ್ಳಿ (ಒಂದು ನೀಳ್ಗತೆ)	ಶ್ರೀ. ಬೆ. ಗಿ. ಶ್ರೀರಂಗಶರ್ಮ, ಅರಸೀಕೆರೆ	೪೯
ವಿರಹಕೂಜನ (ಕವನ)	ಶ್ರೀ. ಚೆನ್ನವೀರ ಕಣವಿ ಎಂ. ಎ. ಧಾರವಾಡ	೬೨
ಪಂಚವಾರ್ಷಿಕ ಯೋಜನೆ	ಶ್ರೀ. ವೀ. ಚ. ಹಿತ್ತಲಮನಿ ಬಿ. ಎಸ್‌ಸಿ (ಆಗ್ರಿ)	೬೩
ಸಾಹಿತ್ಯವಿಮರ್ಶೆಯ ಶಿಕ್ಷಣರಂಗ	ಶ್ರೀ. ಅನಂತ ಬುರ್ಲಿ ಬಿ. ಎ. (ಆನರ್ಸ್)	೬೬
ಸಾಹಿತ್ಯ ವಿಹಾರ (ದೇವನಾಗರ)	ಶ್ರೀ. ಬಿ. ಪಿ. ಎಸ್. ರಾವ್	೮೦
ಸಾದರ ಸ್ವೀಕಾರ		ಹೊದಿಕೆಯ ಮೂರನೆಯ ಪುಟ

ಸಂಪುಟ ೧೬
ಸಂಚಿಕೆ ೩
ಬೆಲೆ ೮ ಆಣೆ

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು!
ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

ಆನಂದಕಂದ'ರ ಕಥೆ, ಕಾದಂಬರಿ, ಕವನಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು, ಎಲ್ಲವೂ ನಮ್ಮಲ್ಲಿ ದೊರೆಯುವವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮೀಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು.

ನಮ್ಮ ಮಂದಿರ ಪ್ರಕಟಿಸಿದ 'ಆನಂದಕಂದ'ರ ಸಾಮಾಜಿಕ ಕಾದಂಬರಿ:

ಮಗಳ ಮದುವೆ

೧೯೨೦ನೆಯ ಸತ್ಯಾಗ್ರಹ ಚಳವಳಿಯ ಹಿನ್ನೆಲೆಯಲ್ಲಿ ಉತ್ತರಕರ್ನಾಟಕದ ಸಾಮಾಜಿಕ ಜೀವನವನ್ನು ವಿವಿಧ ಮುಖದಲ್ಲಿ ಚಿತ್ರಿಸಿ ತೋರಿಸಿದ ರಮ್ಯ ಕಥಾನಕ ಓದಲು ಕೈಯ್ಯಲ್ಲಿ ತೆಗೆದುಕೊಂಡರೆ, ಮುಗಿಸುವ ವರೆಗೂ ಪುಸ್ತಕವನ್ನು ಕೆಳಗೆ ಇರಿಸಲಿಕ್ಕಾಗದಂತಹ ಆಕರ್ಷಕವಾದ ಕತೆಗಾರಿಕೆ. ಓದಿದ ರಸಿಕರಿಂದ ಧನ್ಯವಾದಗಳ ಸುರಿಮಳೆ!

ಕ್ರೌ. ಅ. ೩೫೦ ಪುಟಗಳು ಸಾದಾ ಪ್ರತಿಗೆ ೪-೦ ೦; ಸುಂದರ ಪ್ರತಿಗೆ ೪-೧೨-೦

ಬೆಳವಡಿ ಮಲ್ಲಮ್ಮ
(ತರಂಗನಾಟಕ ಸಂಕಲ)
ಕ್ರೌ. ಅ. ೧೧೬ ಪುಟ. ಬೆಲೆ ೧ ೮-೦

ಕಾರಹುಣ್ಣಿವೆ
ಕವನಸಂಕಲನ)
ಕ್ರೌ. ಅ. ೧೨೮ ಪುಟ. ಬೆಲೆ ಸಾದಾ ೨-೦-೦
ಸುಂದರ ೨-೮-೦

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ವಿರಹಿಣಿ	ಬಡತನದ ಬಾಳು	ಕರ್ನಾಟಕ ಜನಜೀವನ
ಸುವರ್ಶನ	ಒಡನಾಡಿ	ನಮ್ಮ ಬದುಕು	ಜೀವನ ಚರಿತ್ರ
ಅಕ್ಷಾಂತಿಪರ್ವ		ಸಂಸಾರ ಚಿತ್ರ	ಶ್ರೀ ಬಸವಣ್ಣನವರು
ಮಗಳ ಮದುವೆ		ಮಾತನಾಡುವ ಕಲ್ಲು	

ಅಲ್ಲದೆ ಶ್ರೀ ಹುದ್ದಾರರ 'ಚಿತ್ರಕಲಾಪ್ರವೇಶ'ವೂ ಚಾಡಿಯ ಚಾಣಕ್ಯನ 'ಜಾತೀಯ ಸಮಸ್ಯೆ' 'ಕರ್ನಾಟಕ ಏಕೀಕರಣ' ಈ ಕಿರಿಹೊತ್ತಗೆಗಳೂ ದೊರೆಯುವವು

ಶರತ್ ಪ್ರಕಾಶನ ಮಂದಿರಕ್ಕೆ ೫ ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೆ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ:

ಎಸ್. ಡಿ. ಧರಮಟ್ಟಿ, ಶರತ್ ಪ್ರಕಾಶನ ಮಂದಿರ, ಧಾರವಾಡ

Printed by N. A. Hoskeri at the Vijaya Press, Dharwar, and published for the Proprietors Jayanti Publications, by S. D. Dharmatti at the Jayanti Office, Dharwar

ಜುಲೈ
೧೯೫೩

ಈ ಸಂಚಿಕೆಯಲ್ಲಿ

ನಮ್ಮ ವಾಚನಾಭಿರುಚಿಯ ಮಟ್ಟ (ಸಂಪಾದಕೀಯ)	ಸಂಪಾದಕರು	೪೧
ನಾಡನಡೆ (ಸಾಂದರ್ಭಿಕ ಟಿಪ್ಪಣಿ)	'ಕಾಲಭೈರವ'	೪೩
ಗೌರೀಶಂಕರ (ಲಲಿತ ಪ್ರಬಂಧ)	ಶ್ರೀ. ಕೆ. ಅಶ್ವತ್ಥನಾರಾಯಣರಾವ್, ಬನಾರಸ	೪೫
ಜಾನಪದ ನಾಟ್ಯಗೀತಗಳು (ಮೂ. ಪಾ. ಹಾಡು)	ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ	೪೪
ಯಾರಿಗದು ಗೊತ್ತು? (ಕವನ)	ಶ್ರೀ. ಶಾಂತಿನಾಥ ದೇಸಾಯಿ ಬಿ. ಎ. (ಆನರ್ಸ್)	೪೬
ಬಂಗಾಳಿ ಪತ್ರಿಕೋದ್ಯಮ (ಪರಿಚಯಾತ್ಮಕ)	ಶ್ರೀ ಎ. ಎಸ್. ರಾಮಕೃಷ್ಣ, ಸುರತ್‌ಕಲ್ಲು	೪೭
ಕಾಲ್ತೊಡರಿದ ಬಳ್ಳಿ (ಒಂದು ನೀಳ್ಗತೆ)	ಶ್ರೀ. ಬೆ. ಗಿ. ಶ್ರೀರಂಗಶರ್ಮ, ಅರಸೀಕೆರೆ	೪೯
ವಿರಹಕೂಜನ (ಕವನ)	ಶ್ರೀ. ಚೆನ್ನವೀರ ಕಣವಿ ಎಂ. ಎ. ಧಾರವಾಡ	೬೨
ಪಂಚವಾರ್ಷಿಕ ಯೋಜನೆ	ಶ್ರೀ. ವೀ. ಚ. ಹಿತ್ತಲಮನಿ ಬಿ. ಎಸ್‌ಸಿ (ಆಗ್ರಿ)	೬೩
ಸಾಹಿತ್ಯವಿಮರ್ಶೆಯ ಶಿಕ್ಷಣರಂಗ	ಶ್ರೀ. ಅನಂತ ಬುರ್ಲಿ ಬಿ. ಎ. (ಆನರ್ಸ್)	೬೬
ಸಾಹಿತ್ಯ ವಿಹಾರ (ದೇವನಾಗರ)	ಶ್ರೀ. ಬಿ. ಪಿ. ಎಸ್. ರಾವ್	೮೦
ಸಾದರ ಸ್ವೀಕಾರ	ಹೊದಿಕೆಯ ಮೂರನೆಯ ಪುಟ	

ಸಂಪುಟ ೧೬
ಸಂಚಿಕೆ ೨
ಬೆಲೆ ೮ ಆಣೆ

JAYANTI

ಜಯಂತಿ

ಸಂಪುಟ ೧೬ ಸಂಚಿಕೆ ೨

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

* *
*

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು:
ಶ್ರೀ. ಡಿ. ಶರತ್‌ಕುಮಾರ

**

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

**

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

**

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

卐

ನಮ್ಮ ನಾಡಿನ ವಾಚನಾಭಿರುಚಿಯ ಮುಟ್ಟ

ಮೊದಲು, ಮಾದರಿಗೆಂದು, ನಮ್ಮ ಏಜಂಟ್ ಒಬ್ಬರಿಂದ ಬಂದ ಒಂದು ಪತ್ರವನ್ನಿಲ್ಲಿ ಕೊಡಲಾಗಿದೆ. ಮನಸ್ಸಿಟ್ಟು ಓದಬೇಕು:

'ನಿ. ವಂದನೆಗಳು.

ಮಹಾಶಯರೆ, ಜೂಲೈ ತಿಂಗಳಿಂದಾ ನಮಗೆ ಕಳಿಸುತ್ತಿರುವ ಜಯಂತಿಯ ಪ್ರತಿಗಳನ್ನು ನಿಲ್ಲಿಸಬೇಕೆಂದು ತಿಳುಹಲು ಅತ್ಯಂತ ವಿಷಾದವೆನಿಸುತ್ತದೆ. ಯಾಕಂದರೆ ಜಯಂತಿ ಇಲ್ಲಿ ಖರ್ಚಾಗುತ್ತಿಲ್ಲ. ಈ ತಿಂಗಳು ಕಳುಹಿದ + + + ಪ್ರತಿಗಳು ಹಾಗೇ ಉಳಿದು ಹಾನಿಯಾಗಿದೆ. ಅಲ್ಲದೆ ಈಗ ನಮ್ಮಲ್ಲಿ ಒಳ್ಳೆಯ ಸಾಹಿತ್ಯವನ್ನು ಓದುವವರೇ ಇಲ್ಲ. ಎಲ್ಲರೂ ಅಡುಗಲಜ್ಜಿಯಂತಾ ಕತೆ ಓದುವವರಿ. ಅವರ ಸಂಖ್ಯೆಯೇ ಹೆಚ್ಚಾಗಿದೆ. ತಿಳಿಯಿರಿ. ಜೂನ್ ಪೂರಾ ನಮ್ಮ ಬಾಕಿಎಷ್ಟಿದೆ ತಿಳಿಸಿರಿ. ಪೂರಾ ಬಿಲ್ಲು ಕಳಿಸುತ್ತೇನೆ.

ತಮ್ಮ ನಂಬುಗೆಯ

.....'

ಈ ಪತ್ರವನ್ನು ಬರೆದವರು ನಮ್ಮ ವಿಶ್ವಾಸದ ಅಭಿಮಾನದ ಏಜಂಟರು. ಹದಿನೈದು ವರ್ಷಗಳಿಂದಲೂ ಜಯಂತಿಯೊಂದಿಗೆ ನಂಬುಗೆಯಿಂದ ವ್ಯವಹರಿಸುತ್ತ ಬಂದವರು. ಜಯಂತಿಯಲ್ಲಿ ಪ್ರಕಟವಾಗುವ ಸಾಹಿತ್ಯದ ಮಟ್ಟದ ಕಲ್ಪನೆಯುಳ್ಳವರು. ಅವರು ಏಜಂಟರಾಗಿರುವ ಊರೂ ಹಳ್ಳಿಯೇನೂ ಅಲ್ಲ. ವ್ಯಾಪಾರಕ್ಕೆ ಹೆಸರಾದ ಚಿಕ್ಕ ಪಟ್ಟಣ. ಊರಿಗೆ ಮ್ಯುನಿಸಿಪಾಲಿಟಿಯಿದೆ. ಹೈಸ್ಕೂಲು ಇದೆ. ಕೋರ್ಟು-ಕಚೇರಿಗಳಿರುವುದರಿಂದ ಸುಶಿಕ್ಷಿತ ಅಧಿಕಾರಿಗಳೂ ನಾಕರರೂ ವಕೀಲರೂ ಡಾಕ್ಟರುಗಳೂ ಬೇಕಾದಷ್ಟು ಜನವಿದ್ದಾರೆ. ಪ್ರಾಥಮಿಕ ಶಾಲೆಗಳ ಉಪಾಧ್ಯಾಯರೂ ಬಹುಸಂಖ್ಯಾಕರಿರಬಹುದು. ಹೀಗಿದ್ದೂ ಜಯಂತಿಯಂತಹ ಪತ್ರಿಕೆಗೆ ಅಲ್ಲಿಯ ಜನರಿಂದ ಪುರಸ್ಕಾರ ದೊರೆಯದುದನ್ನು ಕಂಡ ನಮ್ಮ ಏಜಂಟರು, ಕಳವಳದಿಂದ ಈ ಕಾಗದ ಬರೆದಿದ್ದಾರೆ.

ಇದೊಂದೇ ಪಟ್ಟಣದಲ್ಲಲ್ಲ; ನಮ್ಮ ನಾಡಿನ ಪ್ರತಿಯೊಂದು ಎಡೆಗಳಲ್ಲಿಯೂ ಜಯಂತಿಯಂತಹ ಆದರ್ಶ- ಸದಭಿರುಚಿದರ್ಶಕ ಪತ್ರಿಕೆಗಳಿಗೆ ಜನತೆಯಿಂದ ಇದೇ ಬಗೆಯ ಪುರಸ್ಕಾರ ದೊರೆಯುತ್ತಿರುವುದು ತುಂಬ ವಿಷಾದದ ಸಂಗತಿಯಾಗಿದೆ. ಆದುದರಿಂದಲೇ ಜಯಂತಿಯ ಅಭಿಮಾನಿಗಳಾದ ವ್ಯವಹಾರಿಗಳನೇಕರಿಂದ 'ಜಯಂತಿಯ ಮೇಲುಹೊದಿಕೆಯ ಮೇಲೆ, ಚಲಚ್ಚಿತ್ರ ನಟಿಯ ಚಿತ್ರ ಪ್ರಕಟಿಸಿರಿ!' 'ಜಯಂತಿಯಲ್ಲಿ ಮಾಸಭವಿಷ್ಯ ಬರೆಯಿರಿ!' 'ಜಯಂತಿಯಲ್ಲಿ ಲೈಂಗಿಕ ವಿಷಯಕ ಲೇಖಗಳನ್ನು ಪ್ರಕಟಿಸಿರಿ!' 'ಚಲಚ್ಚಿತ್ರ ವಿಷಯಕ ಲೇಖಗಳನ್ನು ಸಚಿತ್ರವಾಗಿ ಪ್ರಕಟಿಸಿರಿ.' ಎಂದು ಮೊದಲಾಗಿ ಸೂಚನೆಗಳು ಆಗಾಗ ಬರುತ್ತಲಿದ್ದುವು. ಆದರೆ ಜಯಂತಿ ಇರಿಸಿಕೊಂಡ ಸಾಹಿತ್ಯಕ ಧ್ಯೇಯ-ಧೋರಣೆಗಳಿಗೆ ಈ ಸೂಚನೆಗಳು ಒಗ್ಗುವಂತಹವಲ್ಲವಾದುದರಿಂದ, ಇವಾವ ಸೂಚನೆಗಳನ್ನೂ ಜಾರಿಯಲ್ಲಿ ತರಲಾಗಲಿಲ್ಲ. ಅವರ ಸೂಚನೆಯಂತೆ ನಡೆದುಕೊಂಡಿದ್ದರೆ, ಜಯಂತಿ ಆರ್ಥಿಕ ದೃಷ್ಟಿಯಿಂದ ಗೆಲುವಾಗಿ ಇರಬಹುದಾಗಿದ್ದಿತೇನೊ!

ಮೇಲಿನ ಪತ್ರವೂ ಸೂಚನೆಗಳೂ ನಮ್ಮ ಜನಸಾಮಾನ್ಯರ ಅಷ್ಟೇ ಏಕೆ— ಸುಶಿಕ್ಷಿತ ನಾಗರಿಕರೆನಿಸಿಕೊಳ್ಳುವವರ—ವಾಚನಾಭಿರುಚಿಯ ಮಟ್ಟಕ್ಕೆ ನಿದರ್ಶನವಾಗಿವೆ. ಇನು ನಾಡಿನ ಶುಭಭವಿಷ್ಯದ ಸೂಚನೆಯೇನೂ ಅಲ್ಲ

ಈಗ ನಗರ-ನಗರಗಳಲ್ಲಿ ಯೂ ಪತ್ರಿಕೆಗಳ ಮಾರಾಟಗಾರರ ಕೈಯಲ್ಲಿ ನೋಡಿದರೆ, ಹೆಚ್ಚಿನ ಸಂಖ್ಯೆಯಲ್ಲಿ ಬತ್ತಲೆ ಹೆಣ್ಣಿನ ಮುಖ ಚಿತ್ರದ— ತರುಣ-ತರುಣಿಯರ ಮನಸ್ಸನ್ನು ಕೆರಳಿಸುವಂತಹ— ಲೈಂಗಿಕ ವಿಚಾರದ ಅಶ್ಲೀಲ ಮಾಸಪತ್ರಿಕೆಗಳು, ಚಲಚ್ಚಿತ್ರ ನಟನಟಿಯರನ್ನು ಹೊದಿಕೆಯ ಮೇಲೆ ಮೂಡಿಸಿಕೊಂಡ ಕಾಳುಹರಟೆಯ ವಾರ-ಮಾಸಪತ್ರಿಕೆಗಳು —ಇವೇ ಅಗಿನೆ. ರಾಜ-ರಾಣಿ-ರಾಕ್ಷಸರ ಅಭಾಸಾತ್ಮಕ ಕತೆಗಳನ್ನೇ ಸಚಿತ್ರವಾಗಿ ಕೊಟ್ಟು, 'ಮಕ್ಕಳ ಪತ್ರಿಕೆ' ಗಳಿಂಬ ದೊಡ್ಡ ಹೆಸರಿನಲ್ಲಿ ಮೆರೆಯುತ್ತಿರುವ ಪತ್ರಿಕೆಗಳೂ ಇವೆಯುವು. ನಮ್ಮ ಜನರು— ಮಕ್ಕಳಿಂದ ಮುದುಕರ ವರೆಗೆ—ಕೊಂಡು ಓದುತ್ತಿರುವುದು ಇಂತಹ ಪತ್ರಿಕೆಗಳನ್ನೆ. ಧರ್ಮ ನೀತಿಯ ವಿಚಾರದಲ್ಲಿ ದೊಡ್ಡ ದೊಡ್ಡ ಬುರುಡೆ ಹೊಡೆಯುವ ಸಂಸ್ಥದಾಯವಾದಿಗಳು ಕೂಡ ಲೈಂಗಿಕ ವಿಚಾರದ ಪತ್ರಿಕೆಗಳನ್ನು ಇಷ್ಟಪಟ್ಟುಕೊಂಡು, ಮುಚ್ಚಿ ಮರೆಸಿ ಓದುತ್ತಿರುವುದನ್ನು ಹಲವು ಕಡೆ ನೋಡಬಹುದು. ಇದನ್ನೆಲ್ಲ ನೋಡಿದಾಗ ನಮ್ಮ ಸಾಮಾಜಿಕ ಸಂಸ್ಕೃತಿಯ ಭವಿಷ್ಯವನ್ನು ಕುರಿತು ನಿರಾಶೆ ರು ನಿಟ್ಟುಸಿರನ್ನು ಬಿಡಬೇಕಾಗುವುದು.

ನಾವೆಲ್ಲರೂ ಸಾಮಾಜಿಕ ಸುಖ-ಶಾಂತಿಗಳನ್ನು ಮನಸಾರೆ ಅಪೇಕ್ಷಿಸುತ್ತಲಿದ್ದೇವೆ. ಆದರೆ ಕೇವಲ ಅಪೇಕ್ಷಾಮಾತ್ರಕ್ಕೆ ಆ ಸಾಮಾಜಿಕ ಸುಖ-ಶಾಂತಿಗಳು ದೊರೆಯಲಾರವು. ಅದಕ್ಕಾಗಿ ಸಮಾಜದ ಘಟಕವಾದ ವ್ಯಕ್ತಿ-ವ್ಯಕ್ತಿಯೂ ತನ್ನನ್ನು ತಾನು ತರಬಿಯತ್ತುಗೊಳಿಸಿಕೊಂಡು, ಅಂತಹ ಸುಖ-ಶಾಂತಿಯ ಪರಿಸ್ಥಿತಿಯನ್ನು ತಾನೆ ನಿರ್ಮಿಸಬೇಕಾಗುತ್ತದೆ. ಅದಕ್ಕಾಗಿ ವ್ಯಕ್ತಿ-ವ್ಯಕ್ತಿಯೂ ತನ್ನ ದೇಹ, ಮನಸ್ಸು, ಹೃದಯ, ಬುದ್ಧಿ, ಜ್ಞಾನಗಳನ್ನು ವಿಕಾಸಗೊಳಿಸಿಕೊಂಡು, ಜೀವನದ ಆದರ್ಶಗಳನ್ನು ಕಂಡುಕೊಂಡು, ಒಂದೊಂದು ಅಡಿಯನ್ನು ಮುಂದಿಡಬೇಕಾಗುವುದು. ಇದಕ್ಕಾಗಿ ವ್ಯಕ್ತಿ ಆಧ್ಯಾತ್ಮಿಕ-ಆದಿಭೌತಿಕ ಜ್ಞಾನಗಳೆರಡನ್ನೂ ತನ್ನದನ್ನಾಗಿ ಮಾಡಿಕೊಳ್ಳಬೇಕಾಗುವುದು.

ಪತ್ರಿಕಾ ಸಂಪಾದಕನ ವ್ಯವಸಾಯವೆಂದರೆ ಅದೊಂದು ಸಾಮಾಜಿಕ ಸಂಸ್ಕೃತಿ ಶಿಕ್ಷಣದ ವ್ಯವಸಾಯ. ಸಮಾಜದ ಘಟಕಗಳಾದ ವ್ಯಕ್ತಿ-ವ್ಯಕ್ತಿಗಳಿಗೆಲ್ಲ ನಿಜವಾದ ಜ್ಞಾನ-ವಿಜ್ಞಾನದ ಪರಿಚಯ ಮಾಡಿಕೊಟ್ಟು, ಅವರ ಮನಸ್ಸು-ಹೃದಯಗಳನ್ನು ಆದರ್ಶದತ್ತ ತಿರುಗಿಸುವುದು ಸಂಪಾದಕನ ಕರ್ತವ್ಯವಾಗಿದೆ. ತ್ಯಾಗ, ತಪಸ್ಸು, ತಿಳಿವಳಿಕೆಗಳೇ ವ್ಯಕ್ತಿಯ ಆದರ್ಶದ ಸಾಧನಗಳೆಂಬುದನ್ನು ಉತ್ಕಟ ಭಾಷೆಯಿಂದ ಪ್ರಚಾರ ಮಾಡುವವನೇ ನಿಜವಾದ ಸಂಪಾದಕ. ಹೀಗಿರುವಾಗ, ವಿಷಪೂರಿತ ಮೊಲೆವಾಲನ್ನುಣ್ಣಿಸಿ ಚಿಣ್ಣಿ ಕಣ್ಣನನ್ನು ಕೊಲ್ಲಲು ಸುಂದರ ವೇಷದಿಂದ ಬಂದ ಪೂತನಾ ರಕ್ಕಸಿಯಂತಹ— ಅವಿವೇಕದ ವಿಚಾರಗಳನ್ನು ಹರಡುವ—ಹೊರನಿಂಚಿನ ಪತ್ರಿಕೆಗಳನ್ನು ಹೊರಡಿಸಿ, ಸಂಸ್ಕೃತಿಕುಮಾರನನ್ನು ಕೊಂದು ಸ್ವಾರ್ಥ ಸಾಧಿಸಲು ಸಿದ್ಧರಾದ ಸಂಪಾದಕರಿಗೆ ಏನೆನ್ನಬೇಕು ?

ವರ್ತಮಾನವೊಂದನ್ನೇ ನಚ್ಚಿ ನಡೆಯುವುದು ನಿಜವಾದ ಮಾನವತೆಯ ಲಕ್ಷಣವಲ್ಲ. ಸುರೆಯನ್ನು ಕುಡಿದ ಒಂದೆರಡು ಗಂಟೆ ಎಲ್ಲಿಲ್ಲದ ಉತ್ಸಾಹ-ಉಲ್ಲಾಸಗಳನ್ನದು ನೀಡಬಹುದು ಆದರೆ ಈ ಉತ್ಸಾಹ-ಉಲ್ಲಾಸಗಳು ವ್ಯಕ್ತಿಯ ಬಹುದಿನ ಬಾಳಬೇಕೆಂಬ ಉತ್ಕಟ ಅಪೇಕ್ಷೆಗೂ ಬೇರನ್ನು ಕಡಿಯುವ ಕೊಡಲಿಗಳಾಗಿರುವುವು. ಇದನ್ನು ತಿಳಿದವರು ವ್ಯಕ್ತಿಗೆ ಬೋಧಿಸುತ್ತಿರಬೇಕು. ವ್ಯಕ್ತಿ ಇದರ ಮರ್ಮವನ್ನು ತಿಳಿದುಕೊಂಡು ನಡೆಯಬೇಕು. ಮನಸ್ಸನ್ನು ಕೆಣಕಿ ಕೆರಳಿಸುವ ಸಾಹಿತ್ಯವೂ ಒಂದು ದುಷ್ಟ ಸುರೆಯಿದ್ದಂತೆ. ಇದನ್ನು ಸೇವಿಸಿದ ವ್ಯಕ್ತಿ ತಾನು ಕೆಡುವುದಿಷ್ಟೇ ಅಲ್ಲದೆ, ವರ್ತಮಾನ ಸಮಾಜವನ್ನೂ ಕೆಡಿಸುವುದು. ಇದರಿಂದ ಸಮಾಜಕ್ಕೆ ಶುಭಭವಿಷ್ಯವೂ ಇಲ್ಲದಂತಾಗುವುದು.

ಸಾಹಿತ್ಯ ಜನತೆಯಲ್ಲಿ ಸದಭಿರುಚಿಯನ್ನು ಹುಟ್ಟಿಸುತ್ತಿದ್ದರೆಯೆ ಅದು ವರ್ತಮಾನ-ಭವಿಷ್ಯಗಳಿಗೆ ತಾರಕವಾದೀತು ಹೊರತು, ಮರಭಿರುಚಿಯನ್ನು ಹುಟ್ಟಿಸುವ ಸಾಹಿತ್ಯ ಮಾರಕವಾಗಿ ನಿಲ್ಲುವುದು. ಅವನತ ಸಂಸ್ಕೃತಿಯ ಸಮಾಜದಲ್ಲಿ ಯಾವ ವ್ಯಕ್ತಿಗೂ ಸುಖ-ಸಂತೋಷಗಳಿರವು. ಸ್ವಾರ್ಥಾಪೇಕ್ಷೆಯಿಂದ ನಡೆಯಿಸಿದ ಸಾಮಾಜಿಕ ಶೋಷಣೆಯು ವ್ಯಕ್ತಿಯ ಜೀವನವನ್ನು ಕೆಲವು ಕಾಲ ಲೌಕಿಕ ದೃಷ್ಟಿಯಿಂದ ಸುಖಮಯವಾಗಿಸಬಹುದಾದರೂ, ಅದು ಬಹುಕಾಲ ಬಾಳುವ ಸುಖವಲ್ಲವೆಂಬುದನ್ನು, ಸಾಹಿತ್ಯಕರಿಂದು ಕೆಲಸ ಮಾಡುವ ಶೋಷಕ ವ್ಯಕ್ತಿಗಳು ಅರಿತುಕೊಂಡು ನಡೆಯಬೇಕು. ಲೈಂಗಿಕ ಕಾಮ ವಿಚಾರದಲ್ಲಿ ಸ್ವೈರವನ್ನು ಜೋಧಿಸುವ ಲೇಖಕನು, ತನ್ನ ಕುಟುಂಬಕ್ಕೆ ಈ ವಿಷಯೋಗ ತಗುಲಿದಾಗ ಬಾಯಿ ಬಾಯಿ ಬಿಡಬೇಕಾದೀತು. ಇಂತಹ ಸಾಹಿತ್ಯವನ್ನು ಕುತೂಹಲದಿಂದ ಓದಿ ಮನೋರಂಜನೆ ಮಾಡಿಕೊಳ್ಳುವ ವಾಚಕವರ್ಗವೂ ತಮ್ಮ ಕೌಟುಂಬಿಕ ವ್ಯಕ್ತಿಗಳ ನೀತಿಪತನದ ಕಾರ್ಯಗಳನ್ನು ಕಣ್ಣಾರೆ ಕಾಣಬೇಕಾದೀತು.

ನಮ್ಮ ವಾಚಕವರ್ಗ ತಾವೆಂತಹ ಪತ್ರಿಕೆ ಪುಸ್ತಕಗಳನ್ನು ಓದಬೇಕೆಂಬುದರ ಬಗೆಗೆ ಸಂಪೂರ್ಣ ಎಚ್ಚರಿಕೆ ವಹಿಸಬೇಕಾದ ಕಾಲ ಇದೀಗ ಬಂದಿದೆ. ಅವರು ತಮ್ಮ ತೋಟಗಳಲ್ಲಿ ಗಾಂಜಾದ ಗಿಡಗಳನ್ನು ಹಚ್ಚಿ ನೀರು ಹನಿಸುವುದನ್ನು ಬಿಟ್ಟು, ಹಲಸು ಮಾವುಗಳನ್ನು ನೆಟ್ಟು ನೀರುಣ್ಣಿಸುವ ಕಾರ್ಯಕ್ಕೆ ಸಿದ್ಧರಾಗಬೇಕು. ತೋಟವೂ ಅಂದವಾದೀತು; ತಾವೂ ತಮ್ಮ ಸಂತಾನವೂ ಪೌಷ್ಟಿಕವಾದ ಮಧುರ ಫಲಗಳನ್ನು ಸೇವಿಸುವಂತಾದೀತು.

ಜಯಂತಿಯ ಬಳಗ ಬೆಳೆಯಲಿ!

ಹದಿನಾರು ವರ್ಷದ ಹರಯದಲ್ಲಿಯೂ ಜಯಂತಿ, ಜನತೆ ಕೊಡುವ ಪೋಷಣೆ ಸಾಲದೆ ಸೊರಗಿ ಕಂಗಾಲಾಗಿದೆ. ಜಯಂತಿಯ ಸಾಂಸ್ಕೃತಿಕ ವಿಧಾಯಕ ಕಾರ್ಯದ ಕಡೆಗೆ ದೃಷ್ಟಿಗೊಟ್ಟು ನೋಡಿ, ಎಲ್ಲರೂ ಅದರ ಪೋಷಕರಾಗಿ ಸಹಕರಿಸಬೇಕು. ಈಗಿರುವ ಚಂದಾದಾರರು ಕನಿಷ್ಟ ಪಕ್ಷ ಒಬ್ಬೊಬ್ಬ ಚಂದಾದಾರನನ್ನಾದರೂ ಹೊಸತಾಗಿ ಒದಗಿಸಿಕೊಟ್ಟರೆ, ಜಯಂತಿಯ ಬಳಗ ಎಷ್ಟೋ ಬೆಳೆದೀತು. ಅದರಿಂದ ಜಯಂತಿ ತನ್ನ ಕಾರ್ಯವನ್ನು ನಿಶ್ಚಿಂತೆಯಿಂದ ಸಾಗಿಸೀತು.

—ಸಂಪಾದಕರು

ನಾಡನಡೆ

•

ನಾಡಿಗರ ಕಂಬನಿಗಳು—

ಬೆಳಗಾಂವಿಯ ಸುಪ್ರಸಿದ್ಧ ಡಾಕ್ಟರ್ ಶ್ರೀಮಾನ್ ಸವಣೂರ ಹಣಮಂತರಾಯರು, ಕಳೆದ ತಿಂಗಳ ಮೊದಲು ವಾರದಲ್ಲಿ, ಮಾಂಸಾರ್ಬುದ (ಕ್ಯಾನ್ಸರ್) ವ್ಯಾಧಿಯ ಮೂಲಕ ದಿವಂಗತರಾದುದು, ಕನ್ನಡ ನಾಡಿಗೆ ತುಂಬಿಬಾರದಂತಹ ಹಾನಿಯಾಗಿದೆ. ದಿವಂಗತ ಡಾಕ್ಟರ ಸವಣೂರ ಹಣಮಂತರಾಯರು ಕೇವಲ ಡಾಕ್ಟರರೆಂದಿಷ್ಟೇ ಕಾರ್ಯ ಮಾಡಿದವರಲ್ಲ. ತಜ್ಞರಾದ ಡಾಕ್ಟರರಿದ್ದುದಂತೂ ಸರಿಯೇ ಸರಿ. ನಾಡಿನ ರಾಜಕೀಯ ಸಾಮಾಜಿಕ ಸಂಬಂಧವಾದ ವಿವಿಧ ಮುಖದ ಕಾರ್ಯಕ್ಷೇತ್ರದಲ್ಲಿಯೂ ಅವರ ಅಂಗವಿರುತ್ತಿದ್ದಿತು. ಬೆಳಗಾಂವಿಯಲ್ಲಿ ಅಳಿದು ಹೋಗಲಿದ್ದ ಕನ್ನಡವನ್ನು ಉಳುಹಲು ಪ್ರಯತ್ನ ಮಾಡಿ, ಅದಕ್ಕಾಗಿ ತನು-ಮನ-ಧನಗಳನ್ನೂ ಅರ್ಪಿಸಿದವರಲ್ಲಿ ಅಗ್ರಗಣ್ಯರೆಂದರೆ ಸವಣೂರ ಡಾಕ್ಟರರು. ಬೆಳಗಾಂವಿಯ ಹಿರಿಯ ರಾಜಕೀಯ ಮುಂದಾಳುಗಳೆನಿಸಿಕೊಳ್ಳುತ್ತಿದ್ದವರೆಲ್ಲ ಕನ್ನಡವನ್ನು ಔದಾಸೀನ್ಯದಿಂದ ಕಾಣುತ್ತಿದ್ದರಿಷ್ಟೇ ಅಲ್ಲ: ವಿರೋಧಿಗಳಾಗಿಯೂ ವರ್ತಿಸುತ್ತಿದ್ದರು. ಅಂತಹ ವಿರೋಧ ವಾತಾವರಣದಲ್ಲಿಯೂ ಡಾಕ್ಟರರು ಕನ್ನಡಿಗರ ಕೈಯನ್ನು ಧೈರ್ಯದಿಂದ ಹಿಡಿದು ನಡೆಯಿಸಿದರು. ಕರ್ನಾಟಕ ಸಂಘವನ್ನು ಸ್ಥಾಪಿಸಿ, ಅದರ ಪರವಾಗಿ ಕನ್ನಡ ವಾಚನಾಲಯ ನಡೆಯಿಸಿ, ಮೊನ್ನೆ ಮೊನ್ನೆಯ ವರೆಗೂ ಅದರ ಯೋಗಕ್ಷೇಮವನ್ನು ತಾವೇ ನೋಡಿಕೊಳ್ಳುತ್ತಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿಗೆ ಆಜೀವ ಪದಸ್ಯರಾಗಿದ್ದರಲ್ಲದೆ, ಬೆಳಗಾಂವಿಯಲ್ಲಿ ನೇರಿದ ಬೇರೆ ಬೇರೆ ಮೂರು ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಪ್ರಮುಖ ಕಾರ್ಯಕರ್ತರಾಗಿದ್ದರು. ಅಸಹಕಾರ ಚಳವಳಿಯ ಪ್ರಾರಂಭದಲ್ಲಿ ಬೆಳಗಾಂವಿಯಲ್ಲಿ ಕನ್ನಡ ಪತ್ರಿಕೆಗಳು ಇಲ್ಲದ ಕೊರತೆಯನ್ನು ಮನದಂದು, ಸ್ವಂತದ ನೆಚ್ಚಿನಿಂದ ಮುದ್ರಣಾಲಯವನ್ನು ಪ್ರಾರಂಭಿಸಿ, 'ಕರ್ನಾಟಕ ಮಿತ್ರ' ಎಂಬ ಹೆಸರಿನಿಂದ ವಾರಪತ್ರಿಕೆಯನ್ನು ಪ್ರಕಟಿಸಲು ತೊಡಗಿದರು. ಈ ವ್ಯವಹಾರದಲ್ಲಿ ಡಾಕ್ಟರು ಹತ್ತಾರು ಸಾವಿರ ರೂಪಾಯಿಗಳ ಹಾನಿಯನ್ನು ಹೊರಬೇಕಾಯಿತಾದರೂ, ದಿವಂಗತರ ಕನ್ನಡದ ಅಭಿಮಾನ-ಪ್ರೀತಿಗಳು, ಅವರನ್ನೆಂದೂ ಪಶ್ಚಾತ್ತಾಪಕ್ಕೆ ಗುರಿಮಾಡಲಿಲ್ಲ.

ದಿ. ಸವಣೂರ ಡಾಕ್ಟರಿಂದ ಸಹಾಯ ಪಡೆದವರ ಸಂಖ್ಯೆ ಎಣಿಸಲಿಕ್ಕೆ ಬಾರದಷ್ಟು. ಆದರೆ ಈ ದಾನವೀರರಿಗೆ ಅದರ ಬಗ್ಗೆ ಅಹಂಕಾರ ಸ್ವಲ್ಪವೂ ಇರಲಿಲ್ಲ. ವಿನಯದ ಮೂರ್ತಿ. ಬಡವ-ಬಲ್ಲಿದರೆಂಬ ಭೇದವಿಲ್ಲದೆ ಎಲ್ಲರೊಂದಿಗೂ ಪ್ರೇಮದಿಂದ ವರ್ತಿಸುವ ಧರ್ಮರಾಯ. ಕೊಟ್ಟವರೂ ತನ್ನವರೆ; ಬಿಟ್ಟವರೂ ತನ್ನವರೆ. ಇಷ್ಟಾದರೂ ಯಾವ ಕೊರತೆಯೂ ಇಲ್ಲದಂತೆ ಜೀವನವನ್ನು ಸಾಗಿಸಿದರು. ನಂಬಿದವರ ಜೀವನದ ಕೊರತೆಯನ್ನೂ ಕಳೆದರು.

ದಿ. ಡಾಕ್ಟರ್ ಸವಣೂರ್ ಅವರದು ಆದರ್ಶವ್ಯಕ್ತಿತ್ವ. ಪೌರ್ವಾತ್ಯ, ಪಾಶ್ಚಾತ್ಯ ವೈದ್ಯಕಗಳೆರಡರಲ್ಲಿಯೂ ಪರಿಣತ ಪ್ರಜ್ಞರು. ಇವರ ಹೆಸರು ಕೊನೆಯ ವರೆಗೂ ಮೆರೆಯುತ್ತಿರುವಂತೆ, ಕನ್ನಡಿಗರು ಇವರ ಸ್ಮಾರಕವನ್ನು ಏರ್ಪಡಿಸಬೇಕಾದುದು ಕರ್ತವ್ಯವಾಗಿದೆ. ವಿಷಮಜೀವನವ್ಯವಹಾರವಲ್ಲಿಯೂ ಶಾಂತಮೂರ್ತಿಗಳಾಗಿಯೆ ಇರುತ್ತಿದ್ದ ಡಾಕ್ಟರರ ಆತ್ಮಕ್ಕೆ ಶಾಂತಿಯನ್ನು ಕೋರುವುದೆಂದರೆ, ಅದೊಂದು ಸಂಪ್ರದಾಯದ ಮಾತಾದೀತು ಇಷ್ಟೆ.

ಡಾ. ಶಾಮುಪ್ರಸಾದ ಮುಖರ್ಜಿಯವರ ವಿಯೋಗ—

ಭಾರತದ ರಾಜಕಾರಣಿಗಳಲ್ಲಿ ಡಾ. ಶ್ಯಾಮಪ್ರಸಾದ ಮುಖರ್ಜಿಯವರು ಒಂದು ವಿಶಿಷ್ಟ ವ್ಯಕ್ತಿತ್ವವುಳ್ಳವರು. ಪ್ರಾಮಾಣಿಕ ದೇಶ ಸೇವಕರು. ಸ್ವತಂತ್ರ ವಿಚಾರದವರು. ಹಿಂದುತ್ವದಲ್ಲಿ ಸಂಪೂರ್ಣ ಶ್ರದ್ಧೆಯುಳ್ಳವರು. ಕುಶಲರಾದ ರಾಜಕಾರ್ಯವಿದರು. ನಿರ್ಭೀತ ಯುದ್ಧವೀರರು. ನಿರ್ದಾಕ್ಷಿಣ್ಯದ ಚತುರ ವಕ್ತಾರರು. ತಮ್ಮ ದಿವ್ಯ ವ್ಯಕ್ತಿತ್ವ-ಬುದ್ಧಿಗಳನ್ನವರು ಸ್ವಾರ್ಥಸಾಧನೆಗಾಗಿ ಉಪಯೋಗ ಮಾಡಿಕೊಂಡಿದ್ದರೆ, ಇಂದಿನ ರಾಜಕೀಯ ಪ್ರಸಂಚದಲ್ಲಿರುವ ಪುರುಷೋತ್ತಮರನ್ನೆಲ್ಲ ಮೆಟ್ಟಿಮೀರಬಹುದಾಗಿದ್ದಿತು. ಆದರೆ ಅವರ ಬದುಕು ಕೇವಲ ಸ್ವಾರ್ಥಸಾಧನೆಗಾಗಿ ಇರಲಿಲ್ಲವೆಂಬುದನ್ನು ತಮ್ಮ ಚಾರಿತ್ರ್ಯದಿಂದಲೇ ಅವರು ಸಿದ್ಧಮಾಡಿ ತೋರಿಸಿದ್ದಾರೆ. ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿ ಕಾಂಗ್ರೆಸ್ಸಿನಲ್ಲಿಯೆ ಇದ್ದು, ಎಲ್ಲರೊಂದಿಗೆ ಕೂಡಿ ಹೋರಾಡಿ, ಕಷ್ಟನಷ್ಟಗಳನ್ನು ಅನುಭವಿಸಿದರು. ಕೇಂದ್ರದಲ್ಲಿ ಎರಡು ಸಲ ಮಂತ್ರಿಪದ ದೊರೆತರೂ, ಅವರ ತತ್ತ್ವನಿಷ್ಠೆ ಅವರನ್ನು ಆ ಸ್ಥಾನದಲ್ಲಿ ಉಳಿಯಗೊಡಲಿಲ್ಲ. ಡಾ. ಮುಖರ್ಜಿಯವರ ಯೋಗ್ಯತೆಗೆ ಯಾರೂ ತಲೆವಾಗಬೇಕು. ಎಂತಲೇ ಕೇಂದ್ರದಲ್ಲಿರುವ ಇಂದಿನ ಧುರೀಣವರ್ಗವೆಲ್ಲ ಮುಖರ್ಜಿಯವರನ್ನು ಯಾವಾಗಲೂ ಸ್ವಾಗತಿಸುತ್ತಿದ್ದಿತು. ಆದರೆ ಪಾಕಿಸ್ತಾನ ಸರಕಾರವು ಹಿಂದುಗಳ ವಿಷಯದಲ್ಲಿ ನಡೆಯಿಸಿದ ಅತ್ಯಾಚಾರ-ಆಕ್ರಮಣಗಳೂ, ಭಾರತ ಸರಕಾರವು ಅದರ ವಿಷಯದಲ್ಲಿ ತಾಳಿದ ಭೀಕರ ಔದಾಸೀನ್ಯವೂ ಡಾ. ಮುಖರ್ಜಿಯವರ ಮನಸ್ಸನ್ನು ಕೆರಳಿಸಿ, ಪ್ರತ್ಯೇಕ ಪಕ್ಷವನ್ನು ಕಟ್ಟಿಕೊಂಡು ಕಾದಾಡುವಂತೆ ಮಾಡಿದುವು. ಕಾಶ್ಮೀರದ ರಾಜಕಾರಣವು ಹಿಂದುತ್ವದಲ್ಲಿ ಶ್ರದ್ಧೆಯುಳ್ಳ ಭಾರತೀಯರ ಮನಸ್ಸನ್ನು ಕೆರಳಿಸುವಂತಹದೇ ಆದುದರಿಂದ, ಅದಕ್ಕಾಗಿ ಮುಖರ್ಜಿಯವರು ತುಂಬ ನೊಂದ ಮನದವರಾಗಿದ್ದರು. ಎಂತಲೇ ಭಾರತ ಸರಕಾರ ಪ್ರತಿಬಂಧ ಹಾಕಿದರೂ ಕೇಳದೆ, ಕಾಶ್ಮೀರ ರಾಜ್ಯದಲ್ಲಿ ನುಗ್ಗಿ, ಅಲ್ಲಿಯ ಸರಕಾರದಿಂದ ಬಂಧಿತರಾಗಿ, ಸೆರೆಮನೆಯಲ್ಲಿರುವಾಗಲೇ ವೀರಮರಣವನ್ನು ಹೊಂದಿದರು. ಅವರ ಮರಣಕ್ಕಾಗಿ ರಾಷ್ಟ್ರಕ್ಕೆ ರಾಷ್ಟ್ರವೇ ದುಃಖಿಸುತ್ತಲಿದೆ ಡಾ. ಮುಖರ್ಜಿಯವರಂತಹ ತತ್ತ್ವನಿಷ್ಠ ದೇಶ

ಸೇವಕರು ಯಾವುದೇ ರಾಷ್ಟ್ರದಲ್ಲಿ ಅಪೂರ್ವವಾಗಿಯೇ ಉದಯಿಸುವರು. ಕುರುಡು ರಾಜಕೀಯ ಕಟ್ಟಳೆಗಳಿಗೆ ವ್ಯಕ್ತಿಗಳ ಬೆಲೆಯೇನು ತಿಳಿಯುವುದು ? ಕಟ್ಟಳೆ ಮುರಿದ ಅಪರಾಧಕ್ಕಾಗಿ ಕಾಶ್ಮೀರ ಸರಕಾರ ಅವರನ್ನು ಬಂಧಿಸಿತೇನೋ ಸರಿ! ಆದರೆ ಅವರ ಅಸ್ವಾಸ್ಥ್ಯದ ಕಾಲದಲ್ಲದು ನಿಜವಾಗಿಯೂ ಅಲಕ್ಷ್ಯವನ್ನು ತೋರಿಸಿದ್ದರೆ, ಅದೊಂದು ಅಕ್ಷಮ್ಯ ಅಪರಾಧವೇ ಸರಿ! ಗುಂಡು ಹಾಕಿ ಕೊಲೆಗೈಯುವುದಕ್ಕೂ ರೋಗಕಾಲದಲ್ಲಿ ತಕ್ಕ ಚಿಕಿತ್ಸೆ ದೊರೆಯಲು ಅವಕಾಶ ಕೊಡದಿರುವುದಕ್ಕೂ ವಿಶೇಷ ಅಂತರವೇನೂ ಇಲ್ಲ. ಈ ಸಂದರ್ಭದಲ್ಲಿ ತಿಲಕ್ಷ್ಯದ ಅಪರಾಧ ನಡೆದುದೇ ಆಗಿದ್ದರೆ, ಅಪರಾಧಿಗಳಿಗೆ ತಕ್ಕ ಪ್ರಾಯಶ್ಚಿತ್ತ ದೊರೆಯಲೇ ಬೇಕು.

ಆಕಾಶವಾಣಿ— ಸಂಗೀತಕಲಾವಿದರು

ಕಳೆದ ತಿಂಗಳಲ್ಲಿ ಇದೊಂದು ಹಲವರ ಬಾಯಲ್ಲಿಯ ಮಾತಾಗಿತ್ತು. ಈಗಲೂ ಈ ಸಮಸ್ಯೆ ಬಗೆಹರಿದಿಲ್ಲ

ಆಕಾಶವಾಣಿಯಲ್ಲಿಯ ಸಂಗೀತ ಕಾರ್ಯಕ್ರಮಗಳು ಒಳ್ಳೆಯ ಮಟ್ಟದುವಾಗಬೇಕೆಂದೂ ಸಂಗೀತ ಕಲಾವಿದರಿಗೆ ಅವರ ಯೋಗ್ಯತೆಗೆ ಸರಿಯಾಗಿ ಪ್ರತಿಫಲ ಧನ ಸಿಕ್ಕಬೇಕೆಂದೂ ಸಾಂಪ್ರದಾಯಿಕ ಶುದ್ಧ ಸಂಗೀತಕ್ಕೆ ಹೆಚ್ಚಿನ ಸಂರಕ್ಷಣೆ ದೊರೆಯಬೇಕೆಂದೂ ನಮ್ಮ ಸರಕಾರದ ಉದ್ದೇಶವಿದ್ದರೆ, ಅದನ್ನಾರೂ ಆಕ್ಷೇಪಿಸುವ ಕಾರಣವೇ ಇಲ್ಲ. ಒಳ್ಳೆಯ ಉದ್ದೇಶವು ಸಂಪೂರ್ಣ ಸಾಧಿಸುವುದಕ್ಕೆ ಎಲ್ಲ ಜನರೂ ಸಹಕರಿಸುವುದು ಅಗತ್ಯದ ಕರ್ತವ್ಯವಾಗಿದೆ. ಆದರೆ ಒಂದೊಂದು ಸಲ, ಇದಕ್ಕಾಗಿ ಅಧಿಕಾರಿಗಳನ್ನಾಗಿ ನಿಯಮಿಸುವ ವ್ಯಕ್ತಿಗಳನ್ನು ಕಾರಣವಿದ್ದೋ ಕಾರಣವಿಲ್ಲದೆಯೋ ಜನತೆ ಸಂದಿಗ್ಧ ದೃಷ್ಟಿಯಿಂದ ನೋಡಲು ತೊಡಗುತ್ತದೆ. ಹೊಣೆಗಾರಿಕೆಯನ್ನರಿತ ಸರಕಾರವು, ಇಂತಹ ಸಂದರ್ಭದಲ್ಲಿ ಜನತೆಯ ಮಾತಿಗೆ ಮನ್ನಣೆ ಕೊಟ್ಟು ಅದನ್ನು ವಿಶ್ವಾಸದಲ್ಲಿ ತೆಗೆದುಕೊಳ್ಳಬೇಕಾಗುವುದು. ಅದನ್ನು ಬಿಟ್ಟು ಅಧಿಕಾರದ ಬಲಪ್ರಯೋಗದಿಂದ ಕಾರ್ಯ ಸಾಧಿಸಿಕೊಳ್ಳಲು ಸರಕಾರ ಅಪೇಕ್ಷಿಸಿದರೆ, ಅವರಿಂದ ಉದ್ದೇಶ ಒಳ್ಳೆಯದಿದ್ದರೂ ಅದು ಸಫಲವಾಗದು. ವ್ಯರ್ಥವಾಗಿ ಜನತೆಯ ಮನವನ್ನು ನೋಯಿಸಿದಂತಾಗುವುದು. ಅಧಿಕಾರದ ದುರಭಿಮಾನಕ್ಕೆ ಒಳಗಾಗುವುದು ಪ್ರಜಾಪ್ರಭುತ್ವ ತತ್ತ್ವಕ್ಕೆ ಸರಿಯೆನಿಸದು. ಈಗ ಸರಕಾರ ಹಾಗೆ ನಡೆದುಕೊಂಡುದರಿಂದಲೇ ಆಕಾಶವಾಣಿ ಒಳ್ಳೆಯ ಸಂಗೀತಗಾರರ ಸಂಗೀತಕ್ಕೆ ಎರವಾಗಬೇಕಾಗಿದೆ.

ಈ ಆಕಾಶವಾಣಿಯ ಅಧಿಕಾರಿಗಳು, ಧ್ವನಿಪರೀಕ್ಷಣಕ್ಕೆ ವಿರೋಧವನ್ನು ಪ್ರಕಟಿಸಿದ ಕಲಾವಿದರ ಅಭಿಪ್ರಾಯವೇನೆಂಬುದನ್ನು ಸಹಾನುಭೂತಿಯಿಂದ ಕೇಳಿಕೊಳ್ಳಬೇಕಾಗಿತ್ತಿತು. ತಾವು ಸರಿಯಿದ್ದು ಕಲಾವಿದರೇ ತಪ್ಪು ಅಭಿಪ್ರಾಯ ಮಾಡಿಕೊಂಡಿದ್ದರೆ, ಆತ್ಮೀಯ ಭಾವದಿಂದಲೇ ಅವರನ್ನು ಬರಮಾಡಿಕೊಂಡು, ಸತ್ಯ ಸಂಗತಿಯನ್ನು ತಿಳಿಹೇಳಬೇಕಾಗಿತ್ತು. ಅದನ್ನು ಬಿಟ್ಟು ಹಿಂದಿನ ಬ್ರಿಟಿಷ್ ಸಾಮ್ರಾಜ್ಯದ ಅಧಿಕಾರಿಗಳಂತೆಯೇ ಸ್ವಾಭಿಮಾನ— ಅಹಂಕಾರಗಳಿಗೆ ಕಟ್ಟುಬಿದ್ದು, ಅಧಿಕಾರಿಗಳು ದರ್ಪದಿಂದಲೇ ನಡೆದುಕೊಂಡರು. ಇದರ ಫಲವೆಂದರೆ, ಸಂಗೀತ ರಸಿಕರಿಗೆ ಆಕಾಶವಾಣಿಯ ಮೂಲಕ ಒಳ್ಳೆಯ ಸಂಗೀತ ದೊರೆಯದಂತಾಯಿತು. ವಿಜೃಂಭಣೆಯಿಂದಲೇ ಪ್ರಾರಂಭಿಸಿದ ಆಕಾಶವಾಣಿಯ ರಾಷ್ಟ್ರೀಯ ಕಾರ್ಯಕ್ರಮವಿಂದು ತಡೆದು ನಿಲ್ಲುವ ಸಂದರ್ಭ ಬಂದಿತು. ನೂರಕ್ಕೆ ಐಂಭತ್ತು ಐಂಭತ್ತು ಕಲಾವಿದರು ತಮಗೆ ವಶರಾಗಿದ್ದಾರೆಂದು ಅಧಿಕಾರಿಗಳು ಜಂಭಕೊಚ್ಚಬಹುದು. ಆದರೆ ಕಲಾಪ್ರಪಂಚದಲ್ಲಿ ಬಹುಸಂಖ್ಯೆ ಮುಖ್ಯವಾದುದಲ್ಲ. ಈಗ — ಅಲ್ಪಸಂಖ್ಯಾಕರಾಗಿ — ಸಹಕರಿಸದೆ ಉಳಿದವರೇ ಉತ್ತಮ ಕಲಾವಿದರಾಗಿದ್ದಾರೆಂಬುದು ಸರಕಾರಕ್ಕೆ ಗೊತ್ತಿಲ್ಲದ ಸಂಗತಿಯಲ್ಲ. ಈಗಲಾದರೂ ಏನಾಯಿತು ; ಅಸಹಕಾರ ಮಾಡಿದ ಕಲಾವಿದರನ್ನು ಸಹಾನುಭೂತಿಯಿಂದ ಮುಂದೆ ಕರೆದರೆ, ಅವರು ಬರಲು ಸಿದ್ಧರಿದ್ದಾರೆ. ಆಕಾಶವಾಣಿಯ ಕೇಂದ್ರದ ಅಧಿಕಾರಿಗಳು ಈಗ ಒಣ ಪ್ರತಿಷ್ಠೆಯನ್ನು ಬದಿಗೆ ಸರಿಸಿ, ಸರಕಾರದ ಒಳ್ಳೆಯ ಉದ್ದೇಶ ಸಫಲವಾಗುವಂತೆ

ಬಳ್ಳಾರಿಯಲ್ಲಿ ಆಂಧ್ರರ ಆಸುರೀವೃತ್ತಿ

ನ್ಯಾಯ್ಯವಾಗಿಯೂ ಸಲ್ಲಬೇಕಾಗಿದ್ದ ಬಳ್ಳಾರಿ ತಾಲ್ಲೂಕು ಕನ್ನಡಿಗರಿಗೆ ದೊರೆಯಿತು. ಇದರಿಂದ ಹತಾಶರಾಗಿ ರೊಚ್ಚಿಗೆದ್ದ ಆಂಧ್ರ ಮುಂದಾಳುಗಳು, ಬಳ್ಳಾರಿಯಲ್ಲಿ ಪುಂಡಾಟಿಕೆಯನ್ನೇ ಪ್ರಾರಂಭಿಸಿದರು. ಕನ್ನಡಿಗರ ಧನ-ಮಾನಗಳ ಮೇಲೆ ಕೈಮಾಡಲು ತೊಡಗಿದರು. ಈ ಸಂದರ್ಭದಲ್ಲಿ ಅಲ್ಲಿಯ ಅಧಿಕಾರಿಗಳೂ ಪೋಲೀಸರೂ ನಡೆದುಕೊಂಡ ಉಪೇಕ್ಷೆಯ ರೀತಿ, ಆಂಧ್ರರಿಗೆ ಅವರ ಸಹಕಾರ ಸಹಾನುಭೂತಿಗಳಿರುವುವೇನೋ ಎಂಬ ಅಭಿಪ್ರಾಯವನ್ನು ಕನ್ನಡಿಗರಲ್ಲಿ ಹುಟ್ಟಿಸಿತು. ಕನ್ನಡಿಗರಲ್ಲಿ ಸಂಘಟನೆಯಿರಲಿಲ್ಲವೆಂದಲ್ಲ. ಅವರೂ ಆಸುರೀವೃತ್ತಿಗಿಳಿದು ಚಟುವಟಿಕೆ ಪ್ರಾರಂಭಿಸಿಬಿಟ್ಟಿದ್ದರೆ, ಆಂಧ್ರ ಮುಂದಾಳುಗಳ ದುರಪೇಕ್ಷೆಯಂತೆ ಬಳ್ಳಾರಿಯೂ ಒಂದು ಆಧುನಿಕ ಕುರುಕ್ಷೇತ್ರವೇ ಆಗುತ್ತಿತ್ತು. ಆದರೆ ನ್ಯಾಯಿಗಳಾದ ಕನ್ನಡಿಗರು ತಮ್ಮ ಸಹಜಸ್ವಭಾವಕ್ಕೆ ಸರಿಯಾಗಿ ಶಾಂತ ಮಾರ್ಗವನ್ನು ಹಿಡಿದುದರಿಂದ, ಪರಿಸ್ಥಿತಿ ವಿಕೋಪಕ್ಕೆ ಹೋಗಲಿಲ್ಲ. ಆಂಧ್ರರ ಆಸುರೀವೃತ್ತಿಯ ಅನ್ಯಾಯದ ರೀತಿ ಕೇಂದ್ರ ಸರಕಾರದ ಅನುಭವಕ್ಕೂ ಪ್ರತ್ಯಕ್ಷವಾದಂತಾಯಿತು. ಎಂತಲೇ ಮಾನ್ಯ ಮೌಲಾನಾ ಆಝಾದರು ತಮ್ಮ ಅಧಿಕಾರಸ್ಥಾನದಿಂದ ನಿಷ್ಠುರವಾದ ಮಾತುಗಳನ್ನು ಹೇಳಬೇಕಾಯಿತು. ಯಾವ ಬುದ್ಧಿಯಿಂದಲೋ, ಇಲ್ಲವೇ ನಿರಾಶೆಯ ಮೂಲಕವೋ— ಆಂಧ್ರರು ಈಗ ತಮ್ಮ ವಿಧ್ವಂಸಕ ಚಟುವಟಿಕೆಯನ್ನು ನಿಲ್ಲಿಸಿದ್ದಾರೆ. ಬಳ್ಳಾರಿಯ ನಾಗರಿಕರ ದೈನಂದಿನ ವ್ಯವಹಾರ ಸುಖ-ಸಮಾಧಾನಗಳಿಂದ ನಡೆದಿದೆ.

ಆಂಧ್ರರ ಮುಂದಾಳುಗಳೆನಿಸಿ ಮೆರೆಯುವವರಲ್ಲಿಯಾದರೂ ನ್ಯಾಯ ಬುದ್ಧಿಯಿಲ್ಲದಿರುವುದು ವಿಷಾದದ ಸಂಗತಿಯಾಗಿದೆ. ಕನ್ನಡಿಗರು ತೋರಿಸಿದ ಸಹನೆ-ಸಮಾಧಾನ ವೃತ್ತಿಗಳಿಗಾಗಿ ಅವರನ್ನು ಅಭಿನಂದಿಸಬೇಕಾಗಿದೆ.

ಗೌರಿಶಂಕರ

(ಲಲಿತ ಪ್ರಬಂಧ)

ಬರೆಪವರು: **ಶ್ರೀ ಅಶ್ವತ್ಥ, ಬನಾರಸ**

●

ಗೌರೀಶಂಕರ ಶಿಖರಾರೋಹಣವನ್ನು ಮಾಡಿದವರಲ್ಲಿ ಮೊದಲಿಗರೆಂದರೆ, ಈ ವರದಿಯನ್ನು ಬರೆದವರು— ಅವರ ಗೆಳೆಯರು.

ಆದುದರಿಂದ ಶಿಖರಾರೋಹಣಕ್ಕಾಗಿ ಸಲ್ಲತಕ್ಕ ಮರ್ಯಾದೆಗಳಿಲ್ಲ ಇವರಿಗೆ ಸಲ್ಲಬೇಕಾದುದು ನ್ಯಾಯಬಾಹ ಮಾತು!

●

ಪ್ರಪಂಚದಲ್ಲೇ ಅತ್ಯಂತ ಎತ್ತರವಾದ ಗೌರೀಶಂಕರವನ್ನು ಈ ವರೆಗೆ ಯಾರೂ ಹತ್ತಿಯೇ ಇಲ್ಲ; ಹತ್ತಲು ಯತ್ನಿಸಿದ ನೂರಾರು ಸರದೇಶೀಯ ಯತ್ನಗಳೆಲ್ಲ ವಿಫಲವಾಗಿವೆ, ಎಂದು ತಮ್ಮ ನಂಬಿಕೆ. ಶಿಲ್ಲವೆ? ಆದರೆ ಅದು ಶುದ್ಧತಪ್ಪು. ಅದನ್ನು ಹತ್ತಿ ಆ ಶಿಖರದ ಮೇಲೆ ಅಶೋಕಚಕ್ರ ಧ್ವಜವನ್ನು ನಾನು ಹಾರಿಸಿ ಎಷ್ಟೋ ಕಾಲ ವಾಯಿತು. ಎಷ್ಟೋ ಕಾಲ—ಗೊತ್ತಾಯಿತೆ?

ಹಾಗಾದರೆ ಇದೇನು ಈ ಸಮಾಚಾರವನ್ನೇ ನಾವು ಪತ್ರಿಕೆ ಗಳಲ್ಲಿ ಓದಲಿಲ್ಲವಲ್ಲ ಎಂದು ತಾವು ಅನುಮಾನಿಸುತ್ತೀರೇನು? ಅದಕ್ಕೆ ಕಾರಣ ಕಂಡಂತೆಯೇ ಇದೆ. ಪತ್ರಿಕೆಗಳು—ಹಾಳು ಪತ್ರಿಕೆ ಗಳು!.. ದೇಶೀಯ ಯತ್ನಗಳಲ್ಲಿ ಅವರಿಗೆ ನಂಬಿಕೆ ಇದೆಯೆ? ಹುಂ. ಅವರೆಲ್ಲ ಎಲ್ಲಿ ಹೋಗಲಿ, ಪರದೇಶೀಯರ ಬಾಲ ಹಿಡಿಯು-ವವರೆ. ಅವರೇ ಅತ್ಯಂತ ಶಕ್ತಿವಂತರು. ಪದ್ಮಿಣ ಸಂಪನ್ನರು, ಸರ್ವ ಶ್ರೇಷ್ಠರು, ಅವರು ಆಡಿದ್ದೇ ವೇದವಾಕ್ಯ, ಅವರು ಮಾಡಿದ್ದೇ ಸಾಹಸ, ಅವರ ಕಾರ್ಯಕಲಾಪಗಳೇ ಮಾತುಕತೆಗಳೇ ಪತ್ರಿಕಾ ಪ್ರಕಟನೆಗೆ ಯೋಗ್ಯವಾದುವು. ಛೀ; ಭಾರತೀಯರು! ಈ ಕುಲ-ದವರು ..ಯಾವ ಕೆಲಸಕ್ಕೆ ಬಾವವರು? ಏನು ಮಾಡಿಯಾರು? ಹೇಳುವುದೆಲ್ಲ ಬರಿಯ ಸುಳ್ಳು, ಮಾತುಗಳೆಲ್ಲ ಕಲ್ಪನೆ. ನಕಲು ವಿದ್ಯೆಯಲ್ಲೂ ..ಜಪಾನರಂತೆ ಪ್ರವೀಣರಲ್ಲ. ಫು; ಶುದ್ಧ ಅಪ್ರ-ಯೋಜಕರು.!.. ಅಭಿಪ್ರಾಯ ಹೀಗೆ—ಇಷ್ಟೊಂದು ಕೆಟ್ಟೆರದಿದ್ದರೆ ಆ ಎರಿಕ್ ಷಿಪ್ಟನ್‌ನ ಸೋತ ಸಾಹಸವನ್ನೇ, ಅವನ 'ಅಬಾಮಿನ ಬಲ್ ಸ್ನೋಮ್ಯಾನ್' ಕಾಗಕ್ಕ ಗುಬ್ಬಕ್ಕನ ಕತೆಯನ್ನೇ ನೂರೆಂಟು ಹಾಳೆಗಳಲ್ಲಿ ತುಂಬಿಸುವ . ಈ..ಬೆಪ್ಪು ಪ್ರಕಾಶಕರು, ಆ ಎರಿಕ್ ಮೂರ್ಖ ಬಿದ್ದ, ಎದ್ದ ಉಸಿರಾಡಿಸಿದ ಕೇವಲ ಯಃಕಶ್ಚಿತ ಸಾಗತಿ ಯನ್ನೆಲ್ಲ ಅಚ್ಚು ಹಾಕಿದ ಪಕ್ಷಪಾತದ ಪ್ರಕಾಶಕರು ನಮ್ಮ ಈ ಮಹತ್ಕಾರ್ಯಕ್ಕೆ ಮನ್ನಣೆಯನ್ನು ಕೊಡುವುದಿರಲಿ, ಅದರ ವರದಿ ಮಾಡುವುದಿರಲಿ, ಆ ಸುದ್ದಿಯನ್ನು ಲಕ್ಷ್ಯಕ್ಕೇ ತೆಗೆದುಕೊಳ್ಳಲಿಲ್ಲ ವೆಂದರೆ—ಹುಂ!

ನೋಡಿದಿರಾ! ಇದೇ ಕಾರಣ—ನಮ್ಮ ಲೋಕೈಕ ಸಾಹಸ ಇನ್ನೂ ಬೆಳಕಿಗೆ ಬಾರದಿರುವುದಕ್ಕೆ. ಯಾವಾವನೂ ನಂಬಬೇಕಲ್ಲ. ಇನ್ನು ಪತ್ರಿಕೆಗೆ ಹಾಕುವ ಮಾತೆಲ್ಲಿ? ನಾವು ಮೂಟೆ ಗಟ್ಟಲೆ ಮಾಡಿದ ವರದಿಯೆಲ್ಲ ಬರಿಯ ಕಾಗದವ ಕರ್ಚಾಯಿತು. ನಿಜ ವನ್ನು ಹೇಳಬೇಕೆಂದರೆ ನಾವು ಪ್ರಕಟನೆಗಾಗಿ ಮಾಡಿದ ಕರ್ಚಿನ ಕಾಲು ಭಾಗ ಕೂಡ ಶಿಖರವನ್ನೇರುವ ಸಾಹಸಕ್ಕೆ ತಗಲಲಿಲ್ಲ. ಏನು ಮಾಡುವುದು? ಕೆಟ್ಟಕಾಲ, ದೇಶದ ದುರ್ದಶೆಯಲ್ಲಿ ಹೀಗೆಲ್ಲ ಆಗುತ್ತದೆ. ಈ ಸಮಾಧಾನದಿಂದಲೇ ನಾವು ಅಂತಹ ಮಹತ್ಕಾರ್ಯ ವನ್ನು ಸಾಧಿಸಿಯೂ ಪ್ರಕಟನೆ ಪ್ರಾಶಸ್ತ್ಯಗಳನ್ನು ಹೊಂದದಿದ್ದರೂ ಇನ್ನೂ ಜೀವವನ್ನು ಬಿಗಿಹಿಡಿದುಕೊಂಡು, ಒಳ್ಳೆಯ ಕಾಲವನ್ನು ತಾಳ್ಮೆಯಿಂದ ಇದಿರು ನೋಡುತ್ತಿದ್ದೇನೆ. ಅದು ಈಗ ಸವೀಪಿ ಸುತ್ತಿರುವಂತಿದೆ ಹೇಗೆ? ಇದನ್ನು ತಾವು ಒಪ್ಪುತ್ತಿದ್ದೀರಲ್ಲ. ತಾನ್ನಾ ದರೂ ಆದೀತು ಪರಮ ವೀರ ಚಕ್ರ, ನೈಟ್ ಹುಡ್, ಭಾರತ-ಭೂಷಣಗಳ ಸುರಿಮಳೆ—ಈ ನಿರ್ಭಾಗ್ಯರ ಮೇಲೆ.

ಇರಲಿ, ತಾವೇನೋ ವಿಶ್ವಾಸವಿಟ್ಟು—ಒಬ್ಬ ದೊಡ್ಡ ಮನುಷ್ಯ ಇನ್ನೊಬ್ಬ ದೊಡ್ಡ ಮನುಷ್ಯನೊಡನೆ ನಡೆದುಕೊಳ್ಳುವಂತೆ-ನನ್ನ ಮಾತನ್ನು ನಂಬಿಯೇ ಇದ್ದೀರಿ. ಹಾಗೆಂದು ಈ ಬರಿಯ ಭರವಸೆ ಯಲ್ಲಿಯೇ ಕತೆಯನ್ನು ಕೊನೆಗಾಣಿಸುವುದು ಯಾವ ಧರ್ಮ, ನ್ಯಾಯ? ಸತ್ಯವಂತರು ಸತ್ಯವಂತರಿಗೆ ಹೇಳುವಂತೆ ಅಷ್ಟಿಷ್ಟಾದರೂ ಸ್ಪಷ್ಟವಾದ ವಿವರಗಳನ್ನು ಕೊಟ್ಟು ದಣಿಸು—ತಣಿಸಬೇಡವೆ? ನಾಳೆ ತಾವೇ ಯಾರೊಡನಾದರೂ ಈ ಸಾಹಸವನ್ನು ಸಂದರ್ಭಾನುಸಾರ ಹೇಳಿದಿರಿ ಎಂದು ಇಟ್ಟುಕೊಳ್ಳೋಣ. ಹಾಗೂ ಅವರು ತಮ್ಮಂತೆಯೇ ದೊಡ್ಡ ಮನುಷ್ಯರು ಆಗಿರಲಿಲ್ಲ ಎಂದೂ—ತನ್ನ ಸ್ನೇಹಿತರಲ್ಲಿ ದೊಡ್ಡ ಮನುಷ್ಯರಾಗದವರು ಇದ್ದಾರೆಂದಲ್ಲ; ಒಂದು ವೇಳೆ ಯಾರಿಗೋ ಯಾವಾಗಲೋ ಹೇಳಬೇಕಾಗಿ ಬಂದರೆ ಎಂದು—ಇಟ್ಟುಕೊಳ್ಳೋಣ. ಆಗ ಅವರ ಮೆದುಳನ್ನು ಮೆತ್ತಗೆ ಮಾಡಿ ನಂಬಿಕೆಯನ್ನು ಬಿತ್ತ ಬೇಕಲ್ಲ; ಅದಕ್ಕೆ ಅಂತಲೇ ಇಟ್ಟುಕೊಳ್ಳಿ. ಏನುದರಿಂದ...

ನಾವು ಸನ್ ಸಾವಿರದ ಒಂಭೈನೂರ—ಹುಂ, ಈ ವರ್ಷ, ತಿಂಗಳು, ದಿನ, ಇದರಲ್ಲೆಲ್ಲ ಏನಿದೆ ಹೇಳಿ, ಏನೋ ಹೆಸರಿನಲ್ಲೇನಿದೆ ಎಂದು ಕೇಳಿದ ಹಾಗೆ. ಸತ್ಯವಾದ ಶುಂಗತಿ ತಾವೇಕೇತಕ್ಕೆ?—ಅಂತಗಾದೆಯೇ ಇದೆಯಲ್ಲ. ಅಂತೂ ಎಂಬತ್ತೊಂಬತ್ತು ದಿನ ಹೊರ ಟೆವು ಗೌರೀಶಂಕರದ ವಿಜಯಕ್ಕೆ—ಅಂದರೆ ನಮ್ಮ ವಿಜಯಕ್ಕೆ; ಗೌರೀಶಂಕರದ ಬಗ್ಗೆ—ಅನ್ನಿ. ನಮ್ಮ ಪಾರ್ಟಿ ಹುಂ, ಇದೇ ಹೆಸರು ಬೆಟ್ಟಿ ಹತ್ತುವವರ ಗುಂಪಿಗೇ; ಇವಕ್ಕೆ ಯಾವುವಾವವೂ ಕನ್ನಡ ಪದವನ್ನು ಉಪಯೋಗಿಸಿದರೆ ನಂಬಿಕೆ ನೇರವಾಗಿ ಬರದಿರಬಹುದು. ಈ 'ಆಪ್‌ಹಿಲ್' ಕೆಲಸವೇ ಬೇಡ. ಸ್ವಲ್ಪ 'ನೆಸ್ಪಿರಲಿ' ಅಂತ ಶೀತ

ಕಾಲವೆಂದು ಹೇಳುತ್ತೇನೆ, ಅಷ್ಟೆ. ಶೀತಕಾಲವೇಕೆ ಎಂದು ಕೇಳುತ್ತೀರೇನು ? ಶೀತಕಾಲಕ್ಕೆ ನಾವೇನು ಹೆದರುತ್ತಿರಲಿಲ್ಲವಲ್ಲ. ಅದಕ್ಕೆ; ನಮಗಿಂತ ಹಿಂದೆ ಸಾಹಸ ಮಾಡಿದವರು ಚಳಿಗೆ ಹೆದರಿ ಬೇರೆ ಕಾಲಗಳಲ್ಲಿ ಯತ್ನಿಸಿ ಸೋತಿದ್ದರಲ್ಲ ಅದಕ್ಕೆ. ಮಾಘ ಬಹುಳದಲ್ಲಿ ಒಂದು ಸುದಿನವನ್ನು ಆರಿಸಿಕೊಂಡು ಹೊರಟೆವು

ಪಾರ್ಟಿಯಲ್ಲಿ ಒಂದು....ಎರಡು....ಮೂರು . ಹುಂ, ಇದ್ದೆವು ಸುಮಾರಾಗಿ ಜನ. ಎಷ್ಟಾದರೇನು, ಬೆಟ್ಟ ಹತ್ತಿದೆವು ಎಂದು ಹೇಳುವದಕ್ಕೆ ? ಏನೋ ಎಲೆ ಎತ್ತೋ ಗುಂಡಅದರೆ, ಊಡೋರು ಎಷ್ಟು ಜನ ಎಂದು ಕೇಳಿದ ಹಾಗೆ. ಆದರೂ ನಮ್ಮ ಸಂಗಡಿಗರು ಯಾರು ಯಾರು—ಅಂದರೆ ಎಂತೆಂತಹ ಮಹನೀಯರು, ಪ್ರವೀಣರು ಎಂದು ತಿಳಿಸಿಬಿಡಬೇಕು ಎಂದೆನಿಸುತ್ತದೆ. ಆಗ ಇತರರಿಗೂ—ಅಂದರೆ ತಾವಲ್ಲ—ಟ್ಟನೆ (ಹುಂ, ತಟ್ಟನೆ , ನಂಬಿಕೆ ಹುಟ್ಟಿಯೇ ಬಿಡುತ್ತದೆ ಅದು ನನಗೂ ಗೊತ್ತು. ಆದರೇ.... ಇದೆಯಲ್ಲ, ಆ ಹಾಳು 'ಆದರೆ?' ಇದರಿಂದ ಎಂತೆಂತಹ ಮಹತ್ಕಾರ್ಯಗಳು ಮೈಲಿಗಳ ಬಳದಲ್ಲಿ ಹೂತುಹೋಗಿವೆಯೋ ಏನೋ. ಇಲ್ಲೂ ಅದೇ ಸಂದರ್ಭ. ನನ್ನ ಸ್ನೇಹಿತರು ಇದ್ದಾರಲ್ಲ ಅವರು ಎಷ್ಟು ಸಮರ್ಥರೋ ಅಷ್ಟೇ ನಮ್ರತೆಯುಳ್ಳವರು. ಹುಂ, ನೋಡಿ, ನಮ್ರತೆ ಸಾಮರ್ಥ್ಯದ ಚಿನ್ನಕ್ಕೆ ಕೊಬ್ಬ ಮೆರಗಿನ ಹಾಗಲ್ಲವೆ ? ಅದಕ್ಕೇ ನಮ್ಮ ಪಾರ್ಟಿಯ ಮಹನೀಯರು ನನ್ನಿಂದ ವಾಗ್ದಾನ ತೆಗೆದುಕೊಂಡು ಬಿಟ್ಟಿದ್ದಾರೆ, ನಾನು ಅವರ ಹೆಸರುಗಳನ್ನು ಎಂದೆಂದಿಗೂ ಎಂತೆಂತಹ ಸಂದರ್ಭದಲ್ಲೂ ಬಹಿರಂಗ ಪಡಿಸುವುದಿಲ್ಲ ಎಂದು. ನಾನೇನು ಮಾಡಲಿ ? ನಿನ್ನಹಾಯ. ಅವರ ನಮ್ರತೆ ಅಂದೆನಲ್ಲ ಅದು ಎಂತಹದು ಅಂತ ಅವರೇ ಹೇಳಿದರು ಏಕಕಂಠದಿಂದ—ಹಲವರು ಇದ್ದರೂ—'ಇಲ್ಲ' ನಾವೇನು ಚಾಮುಂಡಿ ಬೆಟ್ಟ ಹತ್ತಿಲ್ಲವೆ ? ಮೂಲೇ ಕಲ್ಲು ತಿರುಪತಿಗೆ ಹೋಗಿರಲಿಲ್ಲವೆ ? ಐಜೂರು ಗುಡ್ಡವನ್ನು ಮೆಟ್ಟಿರಲಿಲ್ಲವೆ ? ಹಾಗೆ ಹಿಮಾಲಯ. ಚಾಮುಂಡಿ ಹತ್ತಿದೆವು, ಅಂದ ಹಾಗೇ ಹಿಮಾಲಯ ಹತ್ತಿದೆವು ಅಂದರೆ ಯಾರಾದರೂ ಫಕ್ಕನೆ ನಕ್ಕಾರು. ನಾವು ನಗೆಪಾಡಾಗೋದು ಬೇಡ. ಅದೆಲ್ಲ ಪರದೇಶೀಯರಿಗೇ ಇರಲಿ? ಎಂದು ಹೇಳಿಬಿಟ್ಟರು ಅದೂ ಅಲ್ಲದೆ ಈ ಬೆಟ್ಟ ಹತ್ತುವುದೂ ಒಂದು ' ತಿಕ್ಕಲು '—ನಾವೇ ಅದರ ಆಕರ್ಷಣೆಗೆ ವಶರಾಗಿದ್ದರೂ ಕೂಡ—ಇದಕ್ಕೇನು ಇಷ್ಟೊಂದು ಪ್ರಕಟನೆಯ ಮೆರವಣಿಗೆ, ಎನ್ನುವುದು ನಮ್ಮ ಅಭಿಪ್ರಾಯ ವಾಗಿತ್ತು. ನಮ್ಮ ಅಭಿಪ್ರಾಯದವರೇ ಪ್ರಪಂಚದಲ್ಲಿ ಹೆಚ್ಚಾಗಿದ್ದು, ನಮ್ಮ ಚಟ ಪರಿಹಾಸ್ಯಕ್ಕೆ ಕಾರಣವಾದೀತೆಂದೂ ನಮ್ಮ ಭಯ. ನನಗೂ ಅವರ ಮುಖಾಂತರ—ಆಗ ಆ ಮಾತುಗಳೆಲ್ಲ ನಿಜವೆಂದೇ ಕಾಡಿತು. ಮಾತನ್ನು ಕೊಟ್ಟುಬಿಟ್ಟೆ. ದೊಡ್ಡ ಮನುಷ್ಯನ ಹಾಗೆ ಈಗ ಮರಿಯಲಾರೆ. ನಾನಾದರೂ ಈ ಸಣ್ಣ ಮಾತನ್ನು—ಹಿಮಾಲಯಾರೋಹಣದ ಸಣ್ಣ ಮಾತನ್ನು—ಯಾರಿಗೂ ಹೇಳುತ್ತಲೇ ಬರೆಯುತ್ತಲೇ, ಪ್ರಕಟನೆಗೆ ಹಂಬಲಿಸುತ್ತಲೇ ಇರಲಿಲ್ಲ. ನನ್ನುನಾಗಿಯೇ ಇದ್ದು ಬಿಟ್ಟಿರುತ್ತಿದ್ದೆ. ಆದರೆ ಈ ಪರದೇಶೀಯರ ಹಗರಣವನ್ನು ಓದಿ ಓದಿ ಕೇಳಿ ಕೇಳಿ ತಲೆ ಚಿಟ್ಟು ಹಿಡಿದು, ಅದರ ಸಣ್ಣತನವನ್ನಾದರೂ ತೋರಿಸಿಬಿಡಬೇಕೆಂದು ಬರೆದು ಬಿಟ್ಟೆ. ಜಂಭದ ಮನುಷ್ಯ ಎಂದು ದಯವಿಟ್ಟು ತಿಳಿದುಕೊಳ್ಳಬೇಡಿ.

ಹಾಂ, ಎಲ್ಲಿದ್ದೆ ? ಹುಂ, ನಾವು ಹೊರಟೆವು. ಈ ಪರದೇಶಿಯರು ಇದ್ದಾರಲ್ಲ ಅವರೆಲ್ಲ ಸೋಮಾರಿಗಳು. ಅವರಿಗೆ ಯಶಸ್ಸು ಬೇಕು, ಆದರೆ ಸಾಹಸ ಸುಲಭವಾಗಿರಬೇಕು. ಅದಕ್ಕೇ ಎಷ್ಟೆಷ್ಟೋ ಸುಲಭವಾಗಿ ಬಳಸಿಕೊಂಡು ಸೇವಾಳಕ್ಕೋ, ಟಿಪೇಟ್ಟಿಗೋ ಕೂಗಿ ಉಳಿದ ಕೆಲವು ಸಾವಿರ ಅಡಿಯನ್ನೇ ಹತ್ತಲು ಯತ್ನಿಸುತ್ತಾರೆ. ಹಾಗೂ ಏನಾಗುತ್ತಿದ್ದಾರೆ ಎಂಬುದು ತಮಗೇ ವೇದ್ಯವಾಗಿದೆ. ನಾವು ಒಂದೇ ಗಳಿಗೆ—ಒಂದೇ ಒಂದು ಗಳಿಗೆ—ಸಮಾಲೋಚನೆ ನಡೆಸಿ, ಇಷ್ಟೊಂದು ಬಳಸಿ ಹತ್ತುವುದು ಬಹಳ ಕಾಲಹರಣ ಮಾಡಿದ ಹಾಗಾಗುತ್ತದೆ. ಎಲ್ಲಿಂದಾದರೇನು, ಹತ್ತಿದರಾಯಿತು. ಕಡಿದಾದರೇನು ಮಹಾ ಕಡಿಯೋದಕ್ಕೆ "—ಎಂದು ಕಾಟ್‌ಗೊಡವಾಂ—ಕಡೆರೇಲ್ವೆ—ನಿಲ್ದಾಣ—ಬಳಿಯಿಂದಲೇ ಹತ್ತಲು ಮೊದಲು ಮಾಡಿದೆವು.

ಅದೂ ಅಲ್ಲದೆ ನಾವೇನು ಪರದೇಶೀಯರ ಹಾಗೆ ಸಾಲು ಸಾಲಾದ ಸೇವಕರನ್ನೂ, ಸಾವಿರಾರು ಸಾಮಗ್ರಿಗಳ ಪೆಟ್ಟಿಗೆಗಳನ್ನೂ ಕೋರಲಿಲ್ಲ. ನಾವೆಲ್ಲ ಸೈಬೀರಿಯಾವನ್ನು ಸುತ್ತುಹಾಕಿ ಬಂದಿದ್ದಾಗ ತಂದಿದ್ದೆವಲ್ಲ, ಅದೇ ಒಂದೊಂದು ಉಣ್ಣೆಕೋಟು, ಹರಾಯಿ ಟೋಪಿ; ನಮ್ಮೂರ ಚಮ್ಮಾರ ರಾಮಯ್ಯ ಮಾಡಿಕೊಟ್ಟಿದ್ದ ಎಮ್ಮೆ ಚರ್ಮ ನಮ್ಮೂರಿನ ಎಮ್ಮೆ—ಮತ್ತು "ಗುಡ್ ಇಯರ್" ಟೈರಿನ ಬೂಟ್ಸು, ಇಷ್ಟೇ ನಮ್ಮ ಉಡುಪು. ಹಾಕಿಕೊಂಡೇ ಇದ್ದೆವು. ತಿನ್ನುವುದಕ್ಕೆ ಹೊರಗಿನವರ ಹಾಗೆ ಮಾಂಸದ ಮುದ್ದೆಗಳ ಡಬ್ಬಿಗಳೇ, ಬಿಸ್ಕತ್ತೇ, ಬೆಣ್ಣೆಯೇ, ಕೊಬ್ಬೇ; ಕುಡಿಯು ಬೆಚ್ಚಗಿರುವುದಕ್ಕೆ ವಿಸ್ಕಿಯೇ—ಏನೊಂದೂ ಕೇಳಬೇಡಿ. ಅನೆಲ್ಲ ಪಾಶ್ಚಿಮಾತ್ಯರಿಗೇ ಸರಿ. ಇಷ್ಟು ಸುಖಕ್ಕೆ ದಾಸರಾದವರ ಫಜೀತಿ ಬಹ್ಮ ಯುದ್ಧದಲ್ಲಿ ಗೊತ್ತಾಗಲಿಲ್ಲವೆ ? ಹೋಗಿದ್ದರಲ್ಲ ಯುದ್ಧಕ್ಕೆ—ಮಾವನ ಮನೆಗೆ ಹೋಗುವ ತಿಳಿಯನ ಹಾಗೆ, ಆ ಸಖಿಗಳನ್ನೇ ನಿರೀಕ್ಷಿಸಿಕೊಂಡು, ಒದಗಿಸಿಕೊಳ್ಳಲು ಒದ್ದಾಡಿಕೊಂಡು. ಕಡೆಗೆ ಆದದ್ದೇನು ? ಪಾವು ಅಕ್ಕಿಯನ್ನ ಬಟ್ಟೆಯಲ್ಲಿ ಬೆನ್ನಿಗೆ ಕಟ್ಟಿಕೊಂಡು ಮುನ್ನುಗ್ಗಿದ್ದ ಜಪಾನರಿಗೆ ಆಹುತಿಯಾಗಿ, ಊಟ ತಿಂಡಿ ಮನ್ಯ ಮಜಗಳಿಗೇ ಹೊತ್ತು ಸಾಲದೆ, ಸತ್ತೆವೋ ಕೆಟ್ಟೆವೋ ಎಂದು ನಿಂತಲ್ಲಿಯೇ ನಿಲ್ಲದೆ ಓಡುತ್ತ ತಲೆ ಮರೆಸಿಕೊಂಡು ಹಿಮ್ಮೆಟ್ಟಿ ಸುಖಸಾಮಗ್ರಿಯನ್ನೆಲ್ಲ ಶತ್ರುಗಳಿಗೆ ಒಪ್ಪಿಸಿ, ಜೀವ ಉಳಿಸಿಕೊಂಡು ಬರಲಿಲ್ಲವೆ? ನಾವಾದರೂ ಜಪಾನೀ ಯೋಧರಂತೆಯೇ ಎಷ್ಟು ಜೇಕು, ಹದಿನೈದು ದಿನ—ಅಷ್ಟೇ ನನಗೆ ಹಿಡಿದದ್ದು ಬೆಟ್ಟಹತ್ತುವುದಕ್ಕೆ ? ಪ್ರತಿಯೊಬ್ಬರ ಬೆನ್ನಿನ ಹಿಂದೆಯೂ ತಲೆಯ ಗಾತ್ರ ಒಂದು ಗಂಟು ಅದರಲ್ಲಿ ನಮ್ಮ ಗದ್ದೆಯಲ್ಲಿ ಬೆಳೆದ ದಪ್ಪ ಬತ್ತದ ಅವಲಕ್ಕಿ. ನಮ್ಮ ಅಜ್ಜಿ ಕೊಟ್ಟಿದ್ದ ಅವಲಕ್ಕಿ. ನಮ್ಮ ಅಜ್ಜಿ ಈಗ ಸರ್. ಎಂ. ವಿಶ್ವೇಶ್ವರಯ್ಯನವರ ಅಜ್ಜಿಯಾಗಬಹುದು —ಅವರಿಗೆ ಅಷ್ಟು ವಯಸ್ಸು ಅದರ—ಆ ದೀರ್ಘಾಯುಷ್ಯದ ಗುಟ್ಟೆಲ್ಲ ನಮ್ಮ ಗದ್ದೆಯ ಅವಲಕ್ಕಿ

ಯಲ್ಲಿದೆ. ನಮ್ಮ ತಂದೆ ಹುಟ್ಟಿದ ಕೆಲವೇ ದಿನಗಳಲ್ಲಿ ನಮ್ಮ ಅಜ್ಜ ಕಣ್ಣು ಮುಚ್ಚಿಕೊಂಡರಂತೆ. ಹಿಂದಿನಿಂದ ಕೆಂಪು ಸೀರೆ ನುಸುಳು ಮತ್ತು ರಾತ್ರಿ ಅವಲಕ್ಕಿ ಫಳಾರ ಅಜ್ಜಿಯ ಪಾಲಿಗೆ ಬಂದುವು. ನಮ್ಮೂರಿಗೆ ವರ್ಷ ವರ್ಷ ಪ್ಲೇಗು ಬರುತ್ತದೆ. ಜತ್ರೆಯಲ್ಲಿ ಕಾಲರಾ ಬರುತ್ತದೆ. ಸಿಡುಬು ಇದ್ದೇ ಇರುತ್ತದೆ 'ಟೈಫಾಯಿಡ್' ಜ್ವರದ ಅಂಕಿ-ಅಂಶಗಳಿಲ್ಲ. 'ಇನಾಕ್ಯುಲೇಶನ್' ವ್ಯಾಕ್ಸಿನೇಶನ್, ಇಂಜೆಕ್ಷನ್ ಎಂದು ನಮ್ಮ ಅಜ್ಜಿ ಹೊರವಿಷವನ್ನು ರಕ್ತಕ್ಕೆ ಸೇರಿಸಿದ ಪ್ರಾಣಿಯೇ ಅಲ್ಲ. ಗುಟ್ಟು—ಅವಲಕ್ಕಿಯ ನೂರಾರು ರಸ, ಧಾತು, ವೈಟಮಿನ್ ಇವುಗಳಲ್ಲಿ. ಇದನ್ನು ತಿಳಿಯದೆ ನಾಗರಿಕ ಹುಚ್ಚರು ಹೊರದೇಶದ—ಈಗೀಗ ಸ್ವದೇಶದ—ಕೋಟ್ಯಂತರ ಡಬ್ಬಿ ಸೀಸೆಗಳಿಗೆ ದುಡ್ಡೆರ ಚುವುದನ್ನು ಕಂಡರೆ, ಯೋಚಿಸಿಕೊಂಡರೆ, ಹೊಟೆ ಹಿಡಿಸದಷ್ಟು ನಗು ಬರುತ್ತದೆ; ಅನಂತರ ಹೊಟ್ಟೆಯುರಿ. ಅನಂತರ ಅಯ್ಯೋ ಎಂದು ವ್ಯಥೆ. ಇರಲಿ, ಎಲ್ಲೆಲ್ಲಿಗೋ ಹೋದೆನಲ್ಲ. ಹುಂ, ಬೆನ್ನಿನ ಗಂಟನಲ್ಲಿ ಅವಲಕ್ಕಿ, ಜತೆಗೆ ನಮ್ಮ ತೋಟ—ಸೆಟ್ಟಿ ಹಳ್ಳಿಯ ತೋಟ, ತಿಪಟೂರಿನ ಬಳಿ ಒದಗಿಸಿದ ಸಿಹಿ ಕೊಬ್ಬರಿ ಗಿಟಕು, (ನಮ್ಮ ಭಾರತ ಕೇಂದ್ರಸರಕಾರದ ಆಹಾರ ಸಂಶೋಧನೆ ಸಂಸ್ಥೆಯ ಪ್ರಕಾರ, ಈ ಒಂದೊಂದು ಗಿಟಕಿನಲ್ಲಿಯೂ ಒಂದೊಂದು ಟನ್ ಮೇಧಸ್ಸು ಇದೆ) ಮೇಣ್ ಕುಣಿಗಲು—ನಮ್ಮ ಮಾವನವರ ಊರು—ಬೆಲ್ಲದ ಕೆಂಪು ಅಚ್ಚು. ನೋಡಿದರೇ ಸಾಕು, ಹೊಟ್ಟೆ ತುಂಬಿ ತೇಗು ಬರಬೇಕು. ಹುಂ, ಇಷ್ಟೇ ನಮ್ಮ ಆಹಾರ ಸಾಮಗ್ರಿ. ಉಹುಂ, ಉಹುಂ ಮರೆತು ಬಿಟ್ಟಿದ್ದೆ. ಒಟ್ಟಾಗಿ ಇನ್ನೊಂದು ಸಣ್ಣ ಚೀಲ—ಕಾಫಿ ಸಾಮಗ್ರಿಯದು. ಆಹಾ, ಸಗುತ್ತಿದ್ದೀರೋ? ತಾವು ಕಾಫಿ ಜನದ ಪೈಕಿಯಲ್ಲವೆನ್ನುವುದು ಸ್ಪಷ್ಟ! ಬಲ್ಲವರೇ ಬಲ್ಲರು ಕಾಫಿಯ ಸವಿಯ ಇತರರು ಅಂದರೆ—ಹುಂ ಅವರಿಗೆ ವಿವರಿಸಿ ಏನು ಫಲ? ಕೋಣನ ಮುಂದೆ ವೀಣೆ ಬಾರಿಸಿದ ಹಾಗೆ ಅಂದು ಬಿಟ್ಟಿದ್ದೆ. ಅಂತೂ ಇದೊಂದು ನಮ್ಮ ಪೌರ್ಬಲ್ಯವೆಂದು ಒಪ್ಪಿ ಕೊಂಡು ಬಿಡುತ್ತೇನೆ. ಯಾರಾದರೂ ನನ್ನನ್ನು 'ಒಂದು ಬೆಳಿಗ್ಗೆ ಕಾಫಿ ಬಿಡುತ್ತೀರೋ ಹಿಮಾಲಯವನ್ನು ಹತ್ತಿದ ಗೌರೀಶಂಕರವನ್ನು ಮೆಟ್ಟಿದ ಕೀರ್ತಿಯನ್ನು ಬಿಡುತ್ತೀರೋ?' ಎಂದು ಕೇಳಿದರೆ, ನನ್ನ ಉತ್ತರ ಗೊತ್ತೇ ಇದೆ. ಗೌರೀಶಂಕರವನ್ನಾದರೂ ಇನ್ನೊಂದು ಬಾರಿ ಹತ್ತಿ ಕೀರ್ತಿಯನ್ನು ಗಳಿಸಬಹುದು: ಆದರೆ ಕಾಫಿಯಿಲ್ಲದ ಬೆಳಗ್ಗೆ ಕಳೆದೀತೆ?

ಇನ್ನು ಹಗ್ಗ ಪಗ್ಗ ಗೂಟಗೀಟ ಇತರ ಯಂತ್ರೋಪಕರಣಗಳು ಒಂದೂ ಬೇಡವೇ ಬೇಡವೆಂದವರು, ನಮ್ಮಲ್ಲಿ ಅತಿ ಪ್ರವೀಣರಾದವರೊಬ್ಬರು. "ಆ ಫಜೀತಿಯೆಲ್ಲ ಅನುಭವಿಸಿದ್ದು—ಚಾಮುಂಡಿ, ಐಜೂರು ಗುಡ್ಡ ಇತ್ಯಾದಿಗಳನ್ನು ಹತ್ತಿದ—ಪರದೇಶಿಗಳಿಗೇ ಸರಿ. ಇವರಿಗಿದ್ದ ಬೆಟ್ಟ ಹತ್ತುವುದಕೆ ಯಂತ್ರವೇಕೆ? ತಂತ್ರವೇಕೆ?—ಕೈ ಹುಣ್ಣಿಗೆ ಕನ್ನಡಿಯೆ—ಎಂದ ಹಾಗೆ. ದೇವರು ಕೊಟ್ಟ ಹಾಗೆ ಕಾಲು, ದೇವರು ಕೊಟ್ಟ ಹಾಗೆ ಬೆಟ್ಟ; ಒಂದನ್ನೊಂದಕ್ಕೆ ತಗಲಿಸುವದಕ್ಕೆ ಅದೇನಪ್ಪ ಆ ಪರಂಗಿಗಳ ಆಟ್ಟರ! ಹತ್ತಿದರೇನೋ ಕೈಲಾಸ ಕ್ಕೇರುತ್ತೀವೆ. ಬಿದ್ದರೆ ಪಾತಾಳಕ್ಕೆ ಬೀಳುತ್ತೀವೇ? ಭೂಮಿಗೆ ತಾನೆ ಬೀಳುತ್ತೀವೆ?" ಎಂದು ವಾದಿಸಿದರು. ಆದರೂ ನಾನು ಅವರು ಅತಿ ಪ್ರವೀಣರು ಎಂದು ಯೋಚಿಸಿಕೊಂಡು, ಇರಲಿ ಎಂದು, ನಮ್ಮಲ್ಲಿ ಕೆಲವರ ತಲೆಯ ಮೇಲಾದರೂ ಕೆಲವು ಗೂಟ, ಕುತ್ತಿಗೆಯಲ್ಲಿ ಹಗ್ಗದ ಸುರುಳಿ ಇರಬೇಕೆಂದು ಬಹಳ ಕಷ್ಟಪಟ್ಟು, ಕೆಲವರನ್ನು ಒಪ್ಪಿಸುವುದಕ್ಕೆ ಸಾಕು ಸಾಕಾಗಿ ಹೋಯಿತು. ನನ್ನ ಪರಿಶ್ರಮವೇನೋ ವಿಶೇಷವಾಗಿಯೇ ಆದರೂ, ಅಂತೂ ಇದೊಂದರಲ್ಲಿ ಗೆದ್ದೆನೆಂದೇ ಹೇಳಿಕೊಳ್ಳಬೇಕು. ನೋಡಿ, ಗೂಟ ಹಗ್ಗ ಇವು ಎಷ್ಟೆಷ್ಟೋ ಕೆಲಸಗಳಿಗೆ ಬರುತ್ತವೆ ಸಂದರ್ಭಾನುಸಾರ. ಇದೇ ನನ್ನ ಅಭಿಸ್ರಾಯವಾಗಿತ್ತು—ಬೆಟ್ಟ ಹತ್ತುವುದಕ್ಕೆ ಬೇಕೇ ಬೇಕು ಎಂದು ಮುಷ್ಟಿ ಹಿಡಿಯುವ ಅವಿವೇಕಿಯೇನಲ್ಲ, ನಾನು. ಹೀಗೆಂದ ಮೇಲೆ ಎತ್ತರ ಕಂಡು ಹಿಡಿಯುವುದು, ದೂರ ಗೊತ್ತುಮಾಡುವುದು, ದಿಕ್ಕನ್ನು ಪತ್ತೆ ಮಾಡುವುದು ಹಾಗೇ ಗೌರೀಶಂಕರದ ಕಡೆಗೆ ಸಾಗುವುದು—ಇವಕ್ಕೆಲ್ಲ ಬೇಕೆಂದೆನ್ನುವ ಯಾವ ಯಂತ್ರದ ಭಾರವನ್ನೂ ಹೊರಲಿಲ್ಲವೆಂದು ಹೇಳಬೇಕಾಗಿಲ್ಲವಲ್ಲ! ಎತ್ತರ ಕಂಡು ನಮಗಾಗಬೇಕಾಗಿದ್ದುದೇನು? ಎಷ್ಟೋ ಬೆಟ್ಟಗಳನ್ನು ಹತ್ತಿರಲಿಲ್ಲವೆ? 'ಉಸಿರು ಕಟ್ಟಿಕೊಳ್ಳುತ್ತೆ, ಹಾಗಾಗುತ್ತೆ,' ಅಂತ ಹೆದರುತ್ತಾರಲ್ಲ ಹೀಗಾಗುತ್ತೆ! ಅದೆಲ್ಲ ಮಾಂಸಾಹಾರಿ ಮದ್ಯಪಾಯಿಗಳ ವಿಷಯದಲ್ಲಿ. ಸೆಟ್ಟಿಕೆರೆಯ ಗದ್ದೆಯ ಪೈರಿನ ಅವಲಕ್ಕಿ. ಕೊಬ್ಬರಿ, ಕುಣಿಗಲ ಬೆಲ್ಲವನ್ನು ತಿಂದು ಬೆಳೆದ ಜೀವಗಳ ವಿಷಯದಲ್ಲಿ ಕೇಳಿದ ಮಾತಲ್ಲ. ಇನ್ನು ಗೌರೀಶಂಕರದ ಪತ್ತೆಯೆಂದರೆ ಕಷ್ಟವೆ—ಅತ್ಯಂತ ಎತ್ತರವಾದದ್ದು ಎಂದಮೇಲೆ? ನಾಚಿಕೆಗೇಡು! ಆಕಾಶ ಎಲ್ಲಿದೆಯೆಂದು ಹುಡುಕಿದ ಹಾಗೇ ಆಯಿತು.

ಸರಿ, ಹತ್ತುವುದಕ್ಕೆ ಮೊದಲು ಮಾಡಿದೆವು. ನೈನಿಟಾಲಿನ ಬೆಟ್ಟದ ಜನರ ಆಶ್ಚರ್ಯ ಅಷ್ಟಿಷ್ಟಲ್ಲ—ಪರದೇಶಿಗಳು ಸುತ್ತಿದ ತೋಟು ಬೆಟ್ಟಗಳನ್ನು ಅಡರುವಾಗಲೂ ನೂರಾರು ಜನರ ಸೈನ್ಯವನ್ನೇ ಕರೆದೊಯ್ಯುತ್ತಿದ್ದುದನ್ನು ಕಂಡಿದ್ದ ಆ ಜನರಿಗೆ ಗೌರೀಶಂಕರಕ್ಕೇ, ನೇರವಾಗಿ ಕೈಲಾಸಕ್ಕೇ ಹೋಗುವವರಿಗೆ ಒಬ್ಬರೂ ಬೇಡವೆ ಎಂದು. ಯಾಕೆ, ಅವ ನಮ್ಮೆದುರಿಗೇ, ನಮ್ಮ ಮೂಗಿನ ಕೆಳಗೇ ನಕ್ಕು ಬಿಟ್ಟರು. ಆದರೆ ನಾವೇ ಅದನ್ನೆಲ್ಲ ಗಮನಿಸುವವರು? ಆ ಜನರಿಗೆ ಹೇಗೋ ಹಾಗೆ ಅವರ ಪರಿಹಾಸ್ಯ ಇತರಸ್ಕಾರಗಳಿಗೆಲ್ಲ ಬೆನ್ನನ್ನು ತೋರಿಸಿಬಿಟ್ಟೆವು.

ಬೆಟ್ಟ ಹತ್ತಿದ ವಿವರವನ್ನೆಲ್ಲ ಹೇಳಿ ಹೇಳಿ ತಮ್ಮನ್ನು ಕೊರೆಯಬೇಕೇ ಎಂದು ಯೋಚನೆ. ನಾವೂ ಹತ್ತಿದೆವು, ಪ್ರಪಂಚವೇ ಬೆಟ್ಟವನ್ನು ಹತ್ತಿವ ಹಾಗೆ. ಅದರಲ್ಲೇನು ವಿಶೇಷ? ಹೊಗಿನವರಂತೆ ಇಟ್ಟ ಹೆಜ್ಜೆಯೊಂದಕ್ಕೂ ಹತ್ತು ಪುಟಗಳನ್ನು ಬರೆದು, ಇಲ್ಲದ್ದು ಸಲ್ಲದ್ದರಿಂದ ಓದುಗರನ್ನು ವೇದನೆಗೊಳಿಸುವುದಕ್ಕೆ ನನ್ನ ಮನಸ್ಸಂತೂ ಖಂಡಿತವಾಗಿ ಒಪ್ಪುವುದಿಲ್ಲ. ನಿಜ, ಅಷ್ಟೊಂದು ದೊಡ್ಡ ಬೆಟ್ಟವನ್ನು ಹತ್ತುವಾಗ, ಹಲವಾರು ಸಣ್ಣ ಘಂಗತಿಗಳು ನಡೆಯದೆ ಇರುತ್ತವೆಯೆ? ಹಿಮದ ಮೇಲೆಯೇ ಹತ್ತುವಾಗ ಸಾವಿರಾರು ಬಾರಿ ಜಾರಿಕೊಂಡು ಬಿದ್ದುದೂ ಉಂಟು, ಉರುಳಿಕೊಂಡು ಎದ್ದದ್ದೂ ಉಂಟು. ಅವೆಲ್ಲ

ಕಾಲವೆಂದು ಹೇಳುತ್ತೀನಿ. ಆಸ್ಪೆ. ಏತಕಾಲವೇ ಎಂದು ಕೇಳು ತ್ತೀರೇನು ? ಏತಕಾಲಕ್ಕೆ ತಾವೇನು ಹೆದರುತ್ತಿರಲಿಲ್ಲವಲ್ಲ. ಆದಕ್ಕೆ ನಮಗಂತ ಮುಂದೆ ದಾರಿದ್ರ ಪಡಿಸಿದವರು ಯಾರು ಹೆದರಿ ಹೇಡಿ ಕಾಲಾಳಲ್ಲಿ ಮುಚ್ಚಿಸಿ ಕೊಳ್ಳುತ್ತಿದ್ದರಲ್ಲ ಅದಕ್ಕೆ. ನಾಳಿನ ಬಹುಲಾದಲ್ಲಿ ಬಂಡು ಸುದ್ದಿಸದನ್ನು ಅರಿಕೆಯಂತು ಹೊಲಿಬೇಕು

ಪಾರ್ಯಾಯಿಲ್ಲಿ ಬಂದು...ಎರಡು...ಮೂರು ಹುಂ. ಇನ್ನೆಷ್ಟ ಮನಸಾರಾಗಿ ಇದ್ದ. ಎಷ್ಟಾದರೇನು ಮೆಟ್ಟಿ ಕತ್ತಿಲೆಸಿಕ್ಕ ಎಂದು ಹೇಳುವುದಕ್ಕೆ ? ಏನೇನೋ ಎಲೆ ಎತ್ತೆಲ್ಲಿಗೆಂತಿಯಾದೆ. ಬಾಯಿಂದ ಎಷ್ಟು ಜನ ಎಂದು ಕೇಳಿದ ಹಾಗೆ ಅವನು ನಮ್ಮ ಕಂಗಾಡಿಗೆ ಯಾರು ಯಾರು—ಅಂದರೆ ಎಂತೆಂತಹ ಪ.ಹಸ್ಥರಿಯರು, ಸ್ವಲೆ ಗಾರು ಎಂದು ತಳಿಸಿ ಪ್ರಯತ್ನಿಸಿದ್ದೇನು ಎಂದಿರುತ್ತಿದೆ. ಆಗ ಇತ ರರಿಗೂ—ಅಂದರೆ ಹಾಗಲ್ಲ— ಪ್ಲೈಸ್ (ಗಾಂ. ತಪ್ಪಿನಿಕೆ ನಾವುಕೆ ಹುಟ್ಟಿಯೇ ಬಿಡುತ್ತಿದೆ ಈಗ ನನಗೂ ಗೊತ್ತು. ಅವರೇ... ಇವೆಯಲ್ಲ. ಆ ಹಾಗು 'ಅವರೆ' ಇದರಿಂದ ಎಂತೆಂತಹ ಮಾನಹಾನಿಗಳು ಮೈಲಿಗಳ ಅಳವಡಿ ಹೊತ್ತುಹೊಗಲಿದೆಯೋ ಏನೋ ಇನ್ನೂ ಅದೇ ರಂಪಾಟ. ನನ್ನ ಸ್ನೇಹಿತರು ಇದ್ದಾಗಲು ಅವರು ಎಷ್ಟ ಕರು ಫೋನ್ ಆಫೀಸ್‌ನಲ್ಲಿಯೇ ಇರು. ಹಂ. ನೋಡಿ, ನನ್ನಲ್ಲಿ ಇಷ್ಟಾಪಟ್ಟಿದ್ದರೆ ಫೋನ್‌ನ್ನು ಕೊಟ್ಟು ಹೋಗಿ ಹಾಗಲ್ಲವೆ ? ಅವರ್ಗೆ ನಮ್ಮ ಮಾರ್ಯಾ ಮಾಡಿಸಿಯು ನಲ್ಲಿಂದ ತಾನ್ಹಾನ ತೆಗೆದು ಕೊಂಡು ಬಿಟ್ಟಿದ್ದಾರೆ. ಸ್ವಾಧ್ಯ. ಅವರ ಹೆಸರುಗಳನ್ನು ಎಂದೆಂದಿಗೂ ಎಂತೆಂತಹ ಸಂಬಂಧದಲ್ಲಿಂದ ಬಹುಬಾಗ ಪತಿಸಿರುವುದಿಲ್ಲ ಎಂದು ಹೇಳಿದ್ದು. ಪಾಪದವರೆ ? ನಿಸ್ಸಹಾಯ. ಅವರ ನನ್ನಲ್ಲಿ ಅಂಥೆಂಥಲ್ಲ ಅದು ಎಂತಹದು ಅಂತ ಅವರೇ ಹೇಳಿದರು ಪರಕಾರವಿಲ್ಲ—ಇಲ್ಲ ವರು ಇನ್ನೂ-'ಚಲ್ಲ' ದಾರಿಯ ಬಾಲಾಂತಿ ಬಿಟ್ಟು ಕತ್ತಿಲ್ಲದೆ ? ಮುಂದೆ ಕಲ್ಲು ತಿಂಗಳಿಗೆ ಹೊಗಿರಲ್ಲವೆ ? ಪಡಾವು ನಿಸ್ಸ್ಪಂದ ಹೆಚ್ಚಿಲ್ಲವೆ ? ಹಾಗೆ ಏಪಾಗಲಿಲ್ಲ. ಚಾಪಯಂತಿ ಕತ್ತಿಲೆದ್ದ ಅಂದೆ ಹಾಗೆ ಏಪಾಗಲಿಲ್ಲ ಕತ್ತಿಲೆದ್ದ ಅಂದೆ ಯಾರಾದರೂ ನನ್ನನ್ನೆ ನಕ್ಕಲು. ನಾವು ನಗೆಪಾಟಲೆಯೆಂತಾದೆವು ಮೇಷ ಅವೆಲ್ಲ ಲಯಪಟ್ಟಿಯ ಏನೇ ಇರಲಿ ? ಎಂದು ಹೇಳುವುದು ಅವರ ಅಲ್ಲವೆ ಆ ಮೇಲೆ ಸತ್ಯವಾಗಿ ಒಂದು ' ತಿಕ್ಕಲು'ರಾದರೆ ಅವರ ಅಕಾರಣಕ್ಕೆ ನನ್ನ ಮನಸಿನಲ್ಲಿ ಕಾಪಿ-ಇವೆಲ್ಲವು ಅವೆಲ್ಲವು ಕ್ರಮೇಣವೆಯು ಸೀಳ ಪಡೆದೆ ಎಷ್ಟೆಲ್ಲವು ನನ್ನ ಅಭಿಪ್ರಾಯ ಪಡಾವಿತ್ತ. ನನ್ನ ಅಭಿ ಪ್ರಾಯವನ್ನೇ ಸ್ವಲಾಯವನ್ನಾಗಿ ಹೆಚ್ಚಾಗಿಸ್ಸು. ನನ್ನ ಅಭಿ ಪ್ರಾಯ ಪಡಾವಿಗೆ ಕಾರಣವಾಗಿತ್ತೆಂದೂ ನನ್ನಲ್ಲಿಯು. ನನಗೂ ಅವರ ಮುಖಾಂತರ—ಅಗಲ ಪತಾಕಾಗಳಲ್ಲಿ ನಿಷ್ಕರ್ಷೆಯೇ ಕಾಣಿಸಿ. ಪತಾಕಸ್ಥ ಕೊಟ್ಟಿಬಿಟ್ಟೆ. ಪೆಂಡ್ಲಿ ಪಾಪಿಷ್ಟಿಗೆ ಹಾಗೆ ಹೊಗ ಪಡಿಯುಳ್ಳದೆ. ನನಗಾಗಿ ಅವರು ಮುಖಾಂತರ—ಅಗಲ ಪತಾಕಾಗಳಲ್ಲಿ ನಿಷ್ಕರ್ಷೆಯೇ ಕಾಣಿಸಿ. ಪತಾಕಸ್ಥ ಕೊಟ್ಟಿಬಿಟ್ಟೆ. ಪೆಂಡ್ಲಿ ಪಾಪಿಷ್ಟಿಗೆ ಹಾಗೆ ಹೊಗ ಪಡಿಯುಳ್ಳದೆ. ನನಗಾಗಿ ಅವರು ಪತಾಕಸ್ಥರು—ಏಪಾಗಲಿಲ್ಲವೆ ಅವರಿಬ್ಬರಿಗೆ ಕ್ಷಾಲ ಹೊಂದಿಸಿಕೊಳ್ಳಲೇ ಬಾಲಲ್ಲ. ನನ್ನಿಷ್ಟಾನಿಷ್ಟಗಳನ್ನು ಬಿಡಿ ಬಿಡಿ ಕೇಳಿ ತಿಳಿದು ಅವರೆ ಆ ಪದವಿಯಿಂದ ಪಾಪಿಷ್ಟಿಗೆ ಬಿಡಿಸಿಕೊಳ್ಳಲೆ ಸ್ವಲ್ಪ ಕೇಳಿ ತಲೆ ಚಚ್ಚಿ ಏಪಿಸಿದೆ. ಅವರ ಪಣ್ಣಾತಪಡವನ್ನಾದರೂ ತೆಗೆದು ಬಿಡಬೇಕೆಂದು ಬಲವು ಚಿಚ್ಚಿ. ಹಾಳಾದ ಪಾಪಿಷ್ಟಿ ಎಂದು ಪದ ನಿಚ್ಚಿ ತೆಳಿಸಿಕೊಂಡ ಬೇಡಿ.

ಪಾಂ. ಎಲ್ಲಿಸ್ಸೆ ! ಹುಂ. ಸ್ವಾಪ್ತ ಹೇಳಬೇಕಲ್ಲ. ಈ ಪದವೀಧರ ಯರು ಇದ್ದಾರಲ್ಲ ಅವರೆಲ್ಲ ಸೋಲಲಾರಿಗೆಯೇ. ಅವರಿಗೆ ಯಾರ್ಯ ಯೇನು ಅವರೆ ಪಾಪರ ಪಾಲುಪಡಾಗಿರಬೇಕು. ಇವರಿಗೆ ಎಲ್ಲಿಸ್ಸೆಂದು ಪಾಲುಪಡಾಗಿ ಬಂಗಲೆಯಾಂತು ಸೇರಾಗಲಿಲ್ಲವೆಂದು, ಬಿಡಿಬಿಡಿಗೆಂದು ಸೋಲಲಾರಿಗೆಯೇ ಬಂಗಲೆಯ ಕೆಲಸ ಪಾಪರ ಅತಿಯಾಸ್ಸೆ ಪತ್ತಲು ಮಚ್ಚಿಸುತ್ತಾರೆ ಪಾಪಗಾ ಪಾರಗುತ್ತಿದ್ದಾರೆ ಎಂಬುದು ತಮಗೆ ಪೇಸ್ಸಾಗಿದೆ ಪಾಪದ ಬಂಡೆ ನಗರೆ—ಬಂಡೆ ಬಂದು ನಗರ್—ಪದಾಲೊಚಿಸಿದೆ ಪದೆಯ ಅದಿಷ್ಟಾದು ಬಳಿ ಹೆಚ್ಚುದ್ದರು ಬಂಡ ಕಾಲಪಡಾಗ ಪಡಾವಿ ಪಾಪಾಗುತ್ತಿದೆ. ,ಎಲ್ಲಿಪಾಪರೇನು. ಹೆಚ್ಚಿಪಾಪಿಷ್ಟ. ಕಪಿಪಾಪ ರೇನು ಪಾಪಾ ಕಪಿಯೊಪಡಿಸ್ಸೆ '—ಎಂದು ಕಾಲಗೊಪಡಾಂ—ಕಪಿ ರೇನ್ಸೆ—ಸಿಲ್ಲಾಣ—ಬಳಿಯಿಂದಲೇ ಕತ್ತಾಲ. ಮೊದಲು ಪಡಾವಿದೆಪ್ಪ

ಅವರ ಅಲ್ಲವೆ ಪಾಪಿಷ್ಟಿಯ ಪಾರಿಸ್ಥಿಯಾಲ ಹಾಗೆ ಪಾಲಾ ಪಾಲಾದ ಸೇವಕರನ್ನು, ಪಾರಿಪಾಲು ಪಾರುಪಗಿಗಳ ಹೆಚ್ಚಿಗೆಪಡಿಸಿ ಕೊಂಡಿಲ್ಲ. ಪಾಪೆಲ್ಲ ಸ್ಥಿಯಿಯಾಪಪನ್ನು ಪುಚ್ಚಿಪಾಪೆ ಬಂದಿ ಪ್ಪಾಗ ತಂದಿಪ್ಪೆನಲ್ಲ. ಅವೆ ಒಂದೊಂದು ಬಚ್ಚಿಕೊಂಡಿಲ್ಲ. ಪಡಾವ ಪಿಂಡಿಗಾ ನನಗ್ಯಾರ ಪಾಪಾಗ್ಯಾರ ರಾಪುಪ್ಪ ಪಾಪಿಷ್ಟಿಕೊಪ್ಪಿಪ್ಪ ಎಪ. ಪಾಂ. ನನಗ್ಯಾರಿಗೆ ಎಪ್ಪೆ—ಪುಪ್ಪ "ಗುಡ್ ಪಾಯರ್ ಪ್ಲೈಪ ಬಾಪ್ಪು, ಇನ್ನೇ ನನ್ನ ಬಾಪ್ಪು. ಪಾಂಕೆಂಡಾಪೆ ಇನ್ನೆಪ್ಪ ತಿನ್ನಪ್ಪದಕ್ಕೆ ಪಿಂಡಾಪಿಪಡಾ ಪಾಗೆ ಪಡಾವಪ ಪುಪ್ಪಿಗಳ ಪಚ್ಚಿಗಳೇ ಬಿಸ್ಕೆಟ್ಟು. ಪಿಸ್ಕೆಯೇ ಕೆಂಪಿಸ್ಕೆ ಕಾಪಿದು ಪೆಚ್ಚಿಪಿಪಚ್ಚಪಕ್ಕೆ ನಿಚ್ಚಿಯೇ—ಪಪೆಂಪಾಂ ಕೇಳಬೇಡಿ. ಅವೆಲ್ಲ ಪಾಪ್ಪೆರಪ್ಪಾಲ್ ಕಂ. ಪಾಪ್ಪು ಪುಪಕ್ಕೆ ಪಾಪರಪಪಡಾ ಕ್ಷಾಪೀಕ ಪಪ್ಪ ಪುಪಪ್ಪ ಸೊಪ್ಪಾಲಿಪ್ಪಪೆ ! ಪಿಪಾಪ್ಪಾಲ್ಲ ಪುಪಕ್ಕೆ—ಪಪಾಪ ಪಿಪೆ ಪೆಪಾಲಿಪಪ್ಪ ಪಾಪೆ ಪಪಪಾಪ

ಯಲ್ಲಿದೆ. ನಮ್ಮ ತಂದೆ ಹುಟ್ಟಿದ ಕೆಲವೇ ದಿನಗಳಲ್ಲಿ ನಮ್ಮ ಅಜ್ಜ ಕಣ್ಣು ಮುಚ್ಚಿಕೊಂಡರಂತೆ. ತಂದಿನಿಂದ ಕೆಂಪು ಸೀರೆ ಮುಸುಕು ಮತ್ತು ರಾತ್ರಿ ಅವಲಕ್ಕಿ ಸಳಾರ ಅಜ್ಜಿಯ ಪಾಲಿಗೆ ಬಂದುವು. ನಮ್ಮೂರಿಗೆ ವರ್ಷ ವರ್ಷ ಪ್ಲೇಗು ಬರುತ್ತದೆ. ಇ ತ್ರೆಯಲ್ಲಿ ಕಾಲರಾ ಬರುತ್ತದೆ. ಸಿಡುಬು ಇನ್ಫ್ಲೇ ಇರುತ್ತದೆ 'ಟೈಫಾಯಿಡ್' ಜ್ವರದ ತಂಕಿ-ತಂಶಗಳಲ್ಲ. 'ಇನಾಕ್ಯುಲೇಶನ್' ವ್ಯಾಕ್ಸಿನೇಶನ್, ಇಂಜೆಕ್ಷನ್ ಎಂದು ನಮ್ಮ ಅಜ್ಜಿ ಹೊರವಿಷವನ್ನು ರಕ್ತಕ್ಕೆ ಸೇರಿಸಿದ ವ್ಯಾಣಿಯೇ ಅಲ್ಲ. ಗುಟ್ಟು—ಅವಲಕ್ಕಿಯ ನೂರಾರು ರಸ, ಧಾತು, ವೈಟಮಿನ್ ಇವುಗಳಲ್ಲಿ. ಇದನ್ನು ತಿಳಿಯದೆ ನಾಗರಿಕ ಹುಚ್ಚರು ಹೊರದೇಶದ—ಈಗೀಗ ಸ್ವದೇಶದ—ಕೋಟ್ಯಂತರ ಡಬ್ಬಿ ಸೀಸೆಗಳಿಗೆ ದುಡ್ಡೆರಚುವುದನ್ನು ಕಂಡರೆ, ಯೋಚಿಸಿಕೊಂಡರೆ, ಹೊಟೆ ಹಿಡಿಸದಷ್ಟು ನಗು ಬರುತ್ತದೆ; ಅನಂತರ ಹೊಟ್ಟೆಯುರಿ. ಅನಂತರ ಅಯ್ಯೋ ಎಂದು ವ್ಯಥೆ. ಇರಲಿ, ಎಲ್ಲೆಲ್ಲಿಗೋ ಹೋದೆನಲ್ಲ. ಹುಂ, ಬೆನ್ನಿನ ಗಂಟಿನಲ್ಲಿ ಅವಲಕ್ಕಿ, ಜತೆಗೆ ನಮ್ಮ ತೋಟ—ಸೆಟ್ಟಿ ಹಳ್ಳಿಯ ತೋಟ, ತಿಪಟೂರಿನ ಬಳಿ ಒದಗಿಸಿದ ಸಿಹಿ ಕೊಬ್ಬರಿ ಗಿಟಕ್ಕು (ನಮ್ಮ ಭಾರತ ಕೇಂದ್ರಸರಕಾರದ ಅಹಾರ ಸಂಶೋಧನೆ ಸಂಸ್ಥೆಯ ಪ್ರಕಾರ, ಈ ಒಂದೊಂದು ಗಿಟಕಿನಲ್ಲಿಯೂ ಒಂದೊಂದು ಟನ್ ಮೇಧಸ್ಸು ಇದೆ) ಮೇಣ್ ಕುಣಿಗಲು—ನಮ್ಮ ಮೂವನವರ ಊರು—ಬೆಲ್ಲದ ಕೆಂಪು ಅಚ್ಚು. ನೋಡಿದರೇ ಸಾಕು, ಹೊಟ್ಟೆ ತುಂಬಿ ತೇಗು ಬರಬೇಕು. ಹುಂ, ಇಷ್ಟೇ ನಮ್ಮ ಆಹಾರ ಸಾಮಗ್ರಿ. ಉಹುಂ, ಉಹುಂ ವರೆತು ಬಿಟ್ಟೆವೆ. ಒಟ್ಟಾಗಿ ಇನ್ನೊಂದು ಸಣ್ಣ ಚೀಲ—ಕಾಫಿ ಸಾಮಗ್ರಿಯದು. ಛಿಹಾ, ನಗುತ್ತಿದ್ದೀರೋ? ತಾವು ಕಾಫಿ ಜನವ ಪೈಕಿಯಲ್ಲವೆನ್ನುವುದು ಸ್ಪಷ್ಟ! ಬಲ್ಲವರೇ ಬಲ್ಲರು ಕಾಫಿಯ ಸವಿಯ ಇತರರು ಅಂದರೆ—ಎಂಂ ಅವರಿಗೆ ವಿವರಿಸಿ ಏನ್ಪ್ರಯೋಜನ? ಕೋಣನ ಮುಂದೆ ವೀಣೆ ಬಾರಿಸಿದ ಹಾಗೆ ಅಂದ್ಬಿಟ್ಟೆವ್ವೆ. ಅಂತೂ ಇಮೊನು ನಮ್ಮ ದೌರ್ಬಲ್ಯವೆಂದು ಒಪ್ಪಿಕೊಂಡು ಬಿಡುತ್ತೀನೆ. ಯಾರಾದರೂ ನನ್ನನ್ನು 'ಒಮ್ಮೆ ಜೆಳಗ್ಗೆ ಕಾಫಿ ಬಿಡುತ್ತೀರೋ ಹಿಮಾಲಯವನ್ನು ಹತ್ತಿದ ಗೌರೀಶಂಕರವನ್ನು ಮೆಟ್ಟಿದ ಕೀರ್ತಿಯನ್ನು ಬಿಡುತ್ತೀರೋ?' ಎಂದು ಕೇಳಿದರೆ, ನನ್ನ ಉತ್ತರ ಗೊತ್ತೇ ಇದೆ. ಗೌರೀಶಂಕರನನ್ನಾದರೂ ಇನ್ನೊಂದು ಬಾರಿ ಹತ್ತಿ ಕೀರ್ತಿಯನ್ನು ಗಳಿಸಬಹುದು: ಆದರೆ ಕಾಫಿಯಿಲ್ಲದ ಬೆಳಗ್ಗೆ ಕಳೆದೀತೆ?

ಇನ್ನು ಹಗ್ಗಪಗ್ಗ ಗೂಟಗೀಟು ಇತರ ಯಂತ್ರೋಪಕರಣಗಳು ಒಂದೂ ವೇತನವೇ ವೇಡವೆನ್ನಿನು, ನಮ್ಮಲ್ಲಿ ಅತಿ ಪ್ರವೀಣರಾದವರೊಬ್ಬರು. "ಆ ಫಜೀತಿಯೆಲ್ಲ ಅನುಭವಿಸಿಲ್ಲದ—ಜಾಮುಂಡಿ, ಐಜೂರು ಗುಡ್ಡ ಇತ್ಯಾದಿಗಳನ್ನು ಹತ್ತದ – ಪರದೇಶಿಗಳಿಗೇ ಸರಿ. ಇವರಿಗಿದ್ದ ಬೆಟ್ಟ ಹತ್ತುವುದಕೆ ಯಂತ್ರನೇಕೆ? ತಂತ್ರನೇಕೆ?—ಕೈ ಹುಣ್ಣಿಗೆ ಕನ್ನಡಿಯೆ–ಎಂದ ಹಾಗೆ. ದೇವರು ಕೊಟ್ಟ ಹಾಗೆ ಕಾಲು: ದೇವರು ಕೊಟ್ಟ ಹಾಗೆ ಬೆಟ್ಟ; ಒಂದನ್ನೊಂದಕ್ಕೆ ತಗಲಿಸುವದಕ್ಕೆ ಅದೇನಪ್ಪ ಆ ಪರಂಗಿಗಳ ಅಬ್ಬರ! ಹತ್ತಿದರೇನೋ ಕೈಲಾಸಕ್ಕೇರು ತ್ತೀವೆ. ಬಿದ್ದರೆ ಪಾತಾಳಕ್ಕೆ ಬೀಳುತ್ತೀವೇ? ಭೂಮಿಗೆ ತಾನೆ ಬೀಳುತ್ತೀನೆ?" ಎಂದು ವಾದಿಸಿದರು. ಅವರೂ ನಾನು ಅವರು ಅತಿ ಪ್ರವೀಣರು ಎಂದು ಯೋಚಿಸಿಕೊಂಡು, ಇರಲಿ ಎಂದು. ನಮ್ಮಲ್ಲಿ ಕೆಲವರ ತಲೆಯ ಮೇಲಾದರೂ ಕೆಲವು ಗೂಟ, ಕುತ್ತಿಗೆಯಲ್ಲಿ ಹಗ್ಗದ ಸುರುಳಿ ಇರಬೇಕೆಂದು ಬಹಳ ಇಷ್ಟಪಟ್ಟು, ಕೆಲವರನ್ನು ಒಪ್ಪಿಸುವುದಕ್ಕೆ ಸಾಕು ಸಾಕಾಗಿ ಹೋಯಿತು. ನನ್ನ ಪರಿಪಾಸ್ಯವೇನೋ ವಿಶೇಷವಾಗಿಯೇ ಇದರೂ, ಅಂತೂ ಇದೊಂದರಲ್ಲಿ ಗೆದ್ದೆನೆಂದೇ ಹೇಳಿಕೊಳ್ಳಬೇಕು. ನೋಡಿ, ಗೂಟ ಹಗ್ಗ ಇವು ಎಷ್ಟೆಷ್ಟೋ ಕೆಲಸಗಳಿಗೆ ಬರುತ್ತವೆ ಸಂದೇಹಾನುಸಾರ. ಇದೇ ನನ್ನ ಅಭಿಪ್ರಾಯವಾಗಿತ್ತು—ಬೆಟ್ಟ ಹತ್ತುವುದಕ್ಕೆ ಬೇರೇ ಆಗುತ್ತದೆ ಎಂದು ಮುಷ್ಟಿ ಹಿಡಿಯುವ ಅವಿವೇಕಿಯೇನಲ್ಲ, ನಾನು. ಹೀಗೆಂದ ಮೇಲೆ ಎತ್ತರ ಕಂಡು ಹಿಡಿಯುವುದು, ದೂರ ಗೊತ್ತುಮಾಡುವುದು, ದಿಕ್ಕನ್ನು ಪತ್ತೆ ಮಾಡುವುದು ಹಾಗೇ ಗೌರೀಶಂಕರದ ಕಡೆಗೆ ಸಾಗುವುದು—ಇವಕ್ಕೆಲ್ಲ ಬೇಕೆಂದೆನ್ನುವ ಯಾವ ಯಂತ್ರದ ಭಾರವನ್ನೂ ಹೊರಲಿಲ್ಲವೆಂದು ಹೇಳಬೇಕಾಗಿಲ್ಲವಲ್ಲ! ಎತ್ತರ ಕಂಡು ನನುಗಾಗಬೇಕಾಗಿದ್ದುದೇನು? ಎಷ್ಟೋ ಬೆಟ್ಟಗಳನ್ನು ಹತ್ತಿರಲಿಲ್ಲವೆ? 'ಉಸಿರು ಕಟ್ಟಿಕೊಳ್ಳತ್ತೆ, ಹಾಗಾಗುತ್ತೆ,' ಅಂತ ಹೆದರುತ್ತಾರಲ್ಲ ಹೀಗಾಗುತ್ತೆ! ಅದೆಲ್ಲ ಮಾಂಸಾಹಾರಿ ಮದ್ಯಪಾಯಿಗಳ ವಿಷಯದಲ್ಲಿ. ಸೆಬ್ಬಕೆರೆಯ ಗದ್ದೆಯ ಪೈರಿನ ಅವಲಕ್ಕಿ. ಕೊಬ್ಬರಿ, ಕುಣಿಗಲು ಬೆಲ್ಲವನ್ನು ತಿಂದು ಬೆಳೆದ ಜೀವಗಳ ವಿಷಯದಲ್ಲಿ ಹೇಳದ ಮಾತಲ್ಲ. ಇನ್ನು ಗೌರೀಶಂಕರದ ಹತ್ತಿಯೆಂದರೆ ಕಷ್ಟವೆ – ಅತ್ಯಂತ ಎತ್ತರವಾದದ್ದು ಎಂದಮೇಲೆ? ನಾಚಿಕೆಗೇಡು! ಆಕಾಶ ಎಲ್ಲಿದೆಯೆಂದು ಹುಡುಕಿದ ಹಾಗೇ ಆಯಿತು.

ಸರಿ, ಹತ್ತುವುದಕ್ಕೆ ಮೊದಲು ಮಾಡಿದೆವು. ನೈನಿಟಾಲಿನ ಬೆಟ್ಟದ ಜನರ ಆಶ್ಚರ್ಯ ಇಷ್ಟಿಷ್ಟಲ್ಲ—ಸರದೇಶಿಗಳು ಸುತ್ತಾಡುವ ಮೋಟು ಬೆಟ್ಟಗಳನ್ನು ಒಡರುವಾಗಲೂ ನೂರಾರು ಜನರ ಸೈನ್ಯವನ್ನೇ ಕರೆದೊಯ್ಯುತ್ತಿದ್ದುದನ್ನು ಕಂಡಿದ್ದ ಆ ಜನರಿಗೆ ಗೌರೀಶಂಕರಕ್ಕೇ, ನೇರವಾಗಿ ಕೈಲಾಸಕ್ಕೇ ಹೋಗುವವರಿಗೆ ಒಬ್ಬರೂ ಬೇಡವೆ ಎಂದು. ಯಾಕೆ, ಅವ ನನ್ಮೈಗುವಿಗೇ. ನಮ್ಮ ಪೂರ್ವಿನ ಕೆಲಸ ನಕ್ಕು ಬಿಟ್ಟರು. ಆದರೆ ನಾವೇ ಅವನ್ನೆಲ್ಲ ಗಮನಿಸುವವರು? ಆ ಜನರಿಗೆ ಹೇಗೋ ಹಾಗೆ ಅವರ ಪರಿಪಾಸ್ಯ ಸ್ಥಿರಸ್ವಾರಗಳಿಗೆಲ್ಲ ಬೆನ್ನನ್ನು ತೋರಿಸಿಬಿಟ್ಟೆವು.

ಬೆಟ್ಟ ಹತ್ತಿದ ವಿವರವನ್ನೆಲ್ಲ ಮೇಲಿ ಕೇಳಿ ತಮ್ಮನ್ನು ಕೊರೆಯುವುದೇಕೆ ಎಂದು ಯೋಚನೆ. ನಾವೂ ಹತ್ತಿದೆವೆ, ಸ್ವಾಭಾವಿಕವೇ ಬೆಟ್ಟವನ್ನು ಹತ್ತುವ ಹಾಗೆ. ಅವರಲ್ಲೇನು ವಿಶೇಷ? ಹೊಗಿನವರಂತೆ ಇಟ್ಟ ಹೆಜ್ಜೆಯೊಂದಕ್ಕೂ ಹತ್ತು ಪುಟಗಳನ್ನು ಬರೆದು, ಇಷ್ಟದ್ದು ಸಲ್ಲದ್ದರಿಂದ ಓದುಗರನ್ನು ನೋಡಿಗೆಳಿಸುವುದಕ್ಕೆ ನನ್ನ ಮನಸ್ಸಾಕ್ಷಿ ಖಂಡಿತವಾಗಿ ಒಪ್ಪುವುದಿಲ್ಲ. ನಿಜ, ಅಷ್ಟೆಲ್ಲಾದರೂ ಹೊಕ್ಕ ಬೆಟ್ಟವನು ಹತ್ತುವಾಗ, ಹಲವಾರು ಸಣ್ಣ ಸಂಗತಿಗಳು ನಡೆಯದೆ ಇರುತ್ತವೆಯೆ? ಹಿಮದ ಮೇಲೆಯೇ ಹತ್ತುವಾಗ ಸಾವಿರಾರು ಬಾರಿ ಜಾರಿಕೊಂಡು ಬಿದ್ದುದೂ ಉಂಟು, ಉರುಳಿಕೊಂಡು ಎದ್ದದ್ದೂ ಉಂಟು. ಅವೆಲ್ಲ

ಒಂದು ಲೆಕ್ಕವೆ? ಹೆಪ್ಪುಗಟ್ಟಿದ್ದ ನೂರಾರು ಕಣಿವೆಯ ನದಿಗಳನ್ನು ದಾಟುವಾಗ ಹತ್ತಿಂಟು ಸಾರಿ ಯಾರೋ ಮೇಲಿನ ಗಡ್ಡೆಯೊಡೆದು ಕೆಳಗೆ ಮುಳುಗಿದ್ದುದೂ ಉಂಟು, ನಮ್ಮಲ್ಲೇ ಇನ್ನೊಬ್ಬರು ಯಾರೋ ಮೇಲಕ್ಕೆ ಎಳೆದು ಹಾಕಿದುದೂ ಉಂಟು. ಅದೊಂದು ದೊಡ್ಡ ವಿಷಯವೇ ಹೇಳಿ ಆಯಿತು, ಅಲ್ಲಿ-ಇಲ್ಲಿ ಎಷ್ಟೋ ಜಾರಿ ಹಿಮದ ಬಿಟ್ಟವೇ ಕಳಚಿ ಜಾರಿ—ಅವಲಾಂಚೆ ಅನ್ನುತ್ತಾರಲ್ಲ ಅದು—ನಮ್ಮಲ್ಲಿ ಅವರಿವರನ್ನು ಸಾವಿರ ಎರಡು ಸಾವಿರ ಅಡಿಗಳಷ್ಟು ಕೆಳಗೆ ಕೊಚ್ಚಿ ತ್ತು—ಸತ್ಯ ಹೇಳುವುದಕ್ಕೇನೂ ಅಕ್ಷೇಪಣೆ ಇಲ್ಲವಲ್ಲ. ಜಂಬ ವೆಂದು ಪರಿಗಣಿಸಲ್ಪಡುವ ಸಂಭವನೇನು ಇಲ್ಲವಷ್ಟ, ನಮ್ಮ ತಮ್ಮಲ್ಲಿ-ಕೆಲವು ಗಳಿಗೆ ಕಾಲ ನಮ್ಮನ್ನು ಮುಚ್ಚಿ ಉಸಿರನ್ನೇ ಕಟ್ಟಿಸುತ್ತಿತ್ತು ಅನ್ನಿ. ನಮ್ಮ ಪೈಕಿ ಮೂವರು ಹಿಮದ ಕೆಳಗೆ ಎಲ್ಲೋ ಮಾಯ ವಾಗಿಯೇಬಿಟ್ಟರು; ಎರಡು ದಿನ ಹುಡಿಕಿದ್ದೆಲ್ಲ ವ್ಯರ್ಥವಾಯಿತು, ಸಿಕ್ಕಲೇ ಇಲ್ಲ. ಅದೂ ನಿಜವೇ. ಹೀಗೆಲ್ಲ ಆಗುವುದೆ ಕಂಡಕ್ಕೆ ಕೈ ಇಟ್ಟು ಸುಡಬೇಡ ಅಂದರಾಗುತ್ತದೆಯೇ? ಜೀನ್ಸಾಯಿತು. ಆದರೆ ಅನುಸಿಕೊಂಡಿರುವ ಕೆಲಸವೇ ಇಂಥದಲ್ಲವೆ? ಈ ಸಂದರ್ಭಗಳು ಸಾಮಾನ್ಯ ತಾನೆ. ಕಡಿದಾದ ಕಡೆಗಳಲ್ಲಿ ಗೂಟ ಹಗ್ಗಗಳನ್ನೂ ಉಪಯೋಗಿಸಿದೆವು—ಸೌಲಭ್ಯಕ್ಕಾಗಿ—ಎಂದು ಹೇಳಿದರೆ ತಮಗೆ ಒನಾಮ ಹೀಗೆ ಎಂದು ತಿಳಿಸಿದ ಹಾಗೇ. ಇಂತಹ ವಿಷಯಗಳಾ ವನ್ನೆಲ್ಲ ಕೇಳುವುದಕ್ಕೆ ಯಾರಿಗೆ ಉತ್ಸಾಹ? ಹೇಳುವುದಕ್ಕಂತೂ ನನಗಿಲ್ಲ. ಹಿಮದ ಮೇಲಿನ ಬೆಳಕಿನಿಂದ ನಮಗೆ ಕಣ್ಣು ಮಂಜಾ ದುದನ್ನು ಅತಿ ವಿಚಿತ್ರವೆಂದು ತಿಳಿಸಲೆ? ಜೀನ್ಸಾಯಿತು. ಇವನ್ನೆಲ್ಲ ಯಾರು ತಾನೇ ನಿರೀಕ್ಷಿಸಿರುವದಿಲ್ಲ? ಮಕ್ಕಳಾಗಹವರಿಗೆ ಬೇಕಾದರೆ ಬೆಟ್ಟ, ಹತ್ತುವ ವಿಷಯವಾಗಿ ಬರೆದ ಬೆಟ್ಟಬೆಟ್ಟದಷ್ಟು ಗಾತ್ರದ ಪುಸ್ತಕಗಳು ಇವೆಯಲ್ಲ—ಪ್ರತಿಯೊಂದು ಸಾರ್ವಜನಿಕ ಪುಸ್ತಕ ಭಂಡಾರದಲ್ಲೂ. ಅವರು ಓದಿಕೊಳ್ಳಲಿ, ಆ ಜಳ್ಳು ಸುಳ್ಳನ್ನೆಲ್ಲ. ಮುಖ್ಯವಾಗಿ ನಾವು ಹತ್ತಿದೆವು, ಹತ್ತಿದೆವು, ಹತ್ತಿದವು, ಹತ್ತಿದವು—ಆತಂಕವಿಲ್ಲದೆ, ಆಡಂಬರವಿಲ್ಲದೆ.

ಹಸಿವಾಯಿತೋ ಬೆನ್ನಿನ ಗಂಟನ್ನು ಬಿಚ್ಚಿದೆವು, ಅವಲಕ್ಕಿ ಯನ್ನು ಮುಕ್ಕಿದೆವು, ಕೊಬ್ಬರಿಯನ್ನು ಕಡಿದು ಬೆಲ್ಲವನ್ನು ಮುರಿದು ಬಾಯಿಗೆ ಹಾಕಿಕೊಂಡೆವು. ಅಲ್ಲಿಗೆ ಹಿಂಗಿತು, ಹಸಿವು. ಬಾಯಾ ರಿತೋ ದೇವರು ಕೊಟ್ಟಹಾಗೆ ಹಿಮವೇ ಇತ್ತಲ್ಲ—ಇನ್ನೇನು ಬೇಕು? ಚಪಲವಾಯಿತೋ, ಚಳಿಯಾಯಿತೋ ತೆಗೆದೆವು ಕಾಫಿಯ ಸಾಮಗ್ರಿ. ಸ್ಪೈಸಸ್ ಹಚ್ಚಿ ಅಲ್ಯೂವಿನಿಯಂ ಪಾತ್ರೆಯಲ್ಲಿ ಒಷ್ಟು ಮಂಜುಹಾಕಿ ಕುದಿಸಿ ಕಾಫಿ ಒಟ್ಟಿ ಇಳಿಸಿದೆವು, ಇಳಿಸಿದೆವು ಒಂದೊಂದು ಬಟ್ಟಲು ಬಿಸಿ ಬಿಸಿ ಕಾಫಿ! ಶಿವಾ! ಪಾತ್ರೆಯಾಯಿತೋ, ಯಾವುದೋ ಒಂದು ಕೊರಕಲಿನಲ್ಲಿ ಮುಮುರಿಕೊಂಡೆವು—ರಹಸ್ಯದ ಉಣ್ಣೆಯ ಕೋಟನ್ನು ಕವಿಚಕೊಂಡು. ಬೆಳಗಾಯಿತೋ ಇದ್ದೇ ಇತ್ತು—ಬೆಟ್ಟ ಹತ್ತುವುದು ಹೀಗಿದ್ದು ಹದಿನೈದು ದಿನದಲ್ಲಿ ಹಿಮಾ ಲಯವನ್ನು ಹತ್ತಿದುದು ಏನು ಹಚ್ಚು?

ಇಲ್ಲಿ ವಿಜ್ಞಾನಿಗಳಿಗೆ ಒಂದೆರಡು ಮಾತುಗಳನ್ನು ಹೇಳದಿದ್ದರೆ ಆಗುವುದೇ ಇಲ್ಲವಲ್ಲ ಇದು ವಿಜ್ಞಾನ ಯುಗ ತಾನೆ. ವಿಜ್ಞಾನಿ ತನ್ನ ಉದ್ದವಾದ ಮೂಗನ್ನು ಹಾಕದಿದ್ದ ಮೂಲೆಯೇ ಇಲ್ಲವಲ್ಲ. ಈ ಇಪ್ಪತ್ತನೆಯ ಶತಮಾನದಲ್ಲಿ ಕವಿಗಳು, ಕಾದಂಬರಿಕಾರರು ಕತೆಗಾರರು, ಪ್ರಬಂಧಕಾರರು, ತಲೆಕರಟಿಯವರು ಇತ್ಯಾದಿ ಇತ್ಯಾದಿ ಸಾಹಿತ್ಯ ವರ್ಗದವರು ಪ್ರಬಲಿಸಿ, ಪ್ರಪಂಚದಿಗೂ ನಾಲ್ಕಾರು ಜನ ಪ್ರಖ್ಯಾತರಿ ಇರುವಂತೆ ವಿಜ್ಞಾನಿ ವರ್ಗದವರೂ ಇದ್ದಾರಲ್ಲ - ಪೈಪೋಟಿ ನಡಿಸಿ. ಇವರ ಕುತೂಹಲಕ್ಕೆ ಕೊನೆ ಮೊದಲಲ್ಲಿ ಅಲ್ಲೇನು ಕಂಡಿರಿ, ಇಲ್ಲೇನು ಕಂಡಿರಿ. ಇಷ್ಟು ಎತ್ತರದಲ್ಲೇನೆನ್ನು ಸಸ್ಯವರ್ಗ ಪ್ರಾಣಿವರ್ಗ, ಇಷ್ಟು ಎತ್ತರದಲ್ಲೇನು ಎಂದು ಕೇಳದೆ ಇರುತ್ತಾರೆಯೇ? ಅವರ ಬರಿಡೆ ಅಕ್ಷಯ ಪಾತ್ರೆಯಿದ್ದ ಹಾಗೆ ಪ್ರಶ್ನೆಗಳಿಗೆ. ಹೀಗಿದ್ದು ಅವರ ಬಿಟ್ಟಬಾಯಿಗೆ ಉತ್ತರದ ಚಿಂತನ್ನು ಗಿಡಗದಿದ್ದಾರಾಗುತ್ತದೆಯೇ? ಆದರೆ ಒಂದು ಈ ಕೆಲಪ ಬಹು ಸುಲಭ. ಹತ್ತು ಸಾವಿರ ಅಡಿ ಎತ್ತರದವರೆಗೂ ಎಂತಹ ಸಸ್ಯ ಎಂತಹ ಪ್ರಾಣಿ ಎನ್ನುವುದನ್ನು ವಿವರಿಸಲೇಬೇಕಾಗಿಲ್ಲವಲ್ಲ ಈಗೇನು ಲಂಡನ್‌ಗೆ ನ್ಯೂಯಾರ್ಕಿಗೆ ಹೋಗಿಬರುವುದೇ ಬಚ್ಚಲುಮನೆಗೆ. ಹತ್ತಲಿಗೆ ಹೋಗಿ ಬರುವಂತಾಗಿದೆ. ಅಂದಮೇಲೆ ನಮ್ಮ ಜನ ಎಲ್ಲಿ ಕಲ್ಕತ್ತ, ಎಲ್ಲಿ ಬೊಂಬಾಯಿ, ಎಲ್ಲಿ ಡೆಲ್ಲಿ, ಎಲ್ಲಿ ಸಿನ್ಲು ಎಂದು ಲೀಲಾಜಾಲವಾಗಿ ಹೋಗಿ ಬರುತ್ತಲೇ ಇದ್ದಾರೆ. ದೇಶದ ಮೂಲೆ ಮೂಲೆಗಳಲ್ಲೂ ಸಮುದ್ರದ ಮಟ್ಟದಿಂದ ಹತ್ತು ಸಾವಿರ ಅಡಿ ಎತ್ತರದವರೆಗೂ ಹಬ್ಬಿಕೊಂಡಿವ್ವಾರೆ. ಅಲ್ಲದೆ ಬದರಿಗೆ ಕೇದಾರಕ್ಕೆ ಹೋಗುವವರೇನು ಕಡಿಮೆಯೆ? ಹೀಗಾಗಿ ಹತ್ತು ಸಾವಿರ ಅಡಿ ಯೊಳಗಿನ ವಿಷಯವೆಲ್ಲ ಮನೆಮಾತಾಗಿ ಹೋಗಿದೆ. ಇಷ್ಟು ಹೇಳಿ ದರೆ ಸಾಕು. ರಘುನಾಥರಾಯರು ಮಕ್ಕಳಿಗಾಗಿ ಬರೆದ ಭೂಗೋಳ ವಿಲ್ಲವೆ, ಅದರಲ್ಲಿ ಬರೆದಿರುವುದರಲ್ಲಿ ಅಲ್ಪಸ್ವಲ್ಪ ಸತ್ಯಾಂಶವಿದೆ—ನಿಜ ವಾಗಿ. ಹೆಚ್ಚು ವಿವರ ಬೇಕಾದವರು ನೆರೆಮನೆಯಲ್ಲಿರುವ ಬದರಿ ಯಾತ್ರಾರ್ಥಿಗಳನ್ನೋ, ಸಿನ್ಲುದ ನೌಕರರನ್ನೋ ಕೇಳಿ ತಿಳಿದುಕೊಳ್ಳ ಬಹುದು. ಇಲ್ಲವೆ 'ನ್ಯಾಷನಲ್ ಜೋಗ್ರಾಫಿಕಲ್ ಮ್ಯಾಗಜೀನ್' ಇದ್ದೇ ಇದೆಯಲ್ಲ ಹಾಳೆ ತಿರುವಿ ಹಾಕಿದರಾಯಿತು ಆ ಕಾಡು ಹುಟಿಗೆಲ್ಲ ಎತ್ತ ಸ್ಥಳ, ಇಂತಹ ಪ್ರಬಂಧದಲ್ಲಿ. ಅದೂ ಕಾಗದದ ಮಗ್ಗಟ್ಟು ಇಷ್ಟೊಂದು ಇರುವಾಗ? ಇನ್ನೂ ಮೇಲು ಮಟ್ಟದ ವಿಷಯವೆಂದರೆ ಮುಖ್ಯವಾಗಿ ಬಂಡೆ, ಹಿಮ, ಹಿಮ, ಬಂಡೆ, ಇಷ್ಟೇ. ಎಲ್ಲೊ ಒಂದೆರಡು ಬೆಟ್ಟದ ಅಮ್ಮ, ಕರಡಿಗಳು. ಹುಂ, ಈ ಕರಡಿಗಳ ವಿಷಯವನ್ನು ಮೊದಲೇ ಯೋಚಿಸಿಕೊಂಡು ನಾವು ಮೂರು ಮೂರು ಶಾಟ್ ಕೋಲುಗಳನ್ನೇನೇ ಒದಗಿಸಿಕೊಂಡಿದ್ದೆವು. ಕೋಲುಗಳು ಹೊಡೆಯುವುದಕ್ಕಲ್ಲ. ಈ ಕತೆ ತಮಗೆ ಗೊತ್ತಿದೆಯೋ ಇಲ್ಲವೋ ನಾನು ಕಾಣೆ. ಅದು ಹೀಗೆ. ಮಕಲ ಒಂದು ಕರಡಿ ಕುಣಿಯುತ್ತ ಕುಪ್ಪಳಿಸುತ್ತ ಕೆರಳಿ ಹರಿತವಾದ ಉಗುರಿನ ಕೈಯನಾಡಿಸುತ್ತ ಕ್ರೂರ ಹಲ್ಲುಗಳನ್ನು ಕಿರಿಯುತ್ತ ಹಿರಣ್ಯ ಕಶ್ಯಪುವನ್ನು ನರಸಿಂಹ ಮಾಡಿದಂತೆ ತಮ್ಮನ್ನು ಬಗೆಯಲು,

ಎಂದಿತು ಅಂದುಕೊಳ್ಳಿ. ಆಗ ತಾವೇನು ಮಾಡಬೇಕು? ಓಟು ಕೀಳುವುದಲ್ಲ. ಕರಡಿ ತಮಗಿಂತ ಜೋರಾಗಿ ಓಡಬಲ್ಲುದು. ತಾವು ಸಿಕ್ಕಿದರೆ ಅದರ ತಬ್ಬಿನಲ್ಲೇ ತಮ್ಮ ಗೋರಿ. ಹಾಗಾದರೆ ಅದಕ್ಕೆ? ಛೀ, ಏನು ಕಷ್ಟ. ತಮ್ಮ ಬಳಿ ಇರುವ ಮೂರು ಕಡ್ಡಿಗಳನ್ನು ಬಿಗಿಯುವುದು, ನಸುನಗುತ್ತ, ಜಾಂಬವ ಶ್ರೀಕೃಷ್ಣನನ್ನು ಆಹ್ವಾನಿಸುತ್ತ ಕರಡಿ ಬಳಿಗೆ ಬಂದು ಬಲದ ಕೈ ಬೀಸಿತು; ಕಡ್ಡಿಯೊಂದನ್ನು ಆ ಬೈಗೆ ಕೊಡುವುದು. ಕರಡಿ ಬಲವಾಗಿ ಹಿಡಿದುಕೊಳ್ಳುತ್ತದೆ—ತಮ್ಮನ್ನಲ್ಲ ಕಡ್ಡಿಯನ್ನು. ಈಗ ಎಡದ ಕೈ ಬೀಸಿತು; ಸರಿ ನಸು ನಗುತ್ತಲೇ ಆ ಕೈಗೂ ಇನ್ನೊಂದು ಕಡ್ಡಿಯನ್ನು ಕೊಡುವುದು. ಅದನ್ನೂ ಭದ್ರವಾಗಿ ಹಿಡಿದು ತನ್ನ ಕ್ರೂರ ದಾಡೆಯನ್ನು ಚಾಚಿತು, ತಮ್ಮನ್ನು ಸಿಗಿಯುವುದಕ್ಕೆ. ಸರಿ ಗೊತ್ತೇ ಇದೆಯಲ್ಲ. ಮೂರನೆ ಕಡ್ಡಿ. ಅನಂತರ ಕರಡಿ ನಿಸ್ಸಾಹಾಯವಾಗಿ ಬಿತ್ತುತ್ತದೆ. ಮುಂದೆ ತಾವೂ ತಮ್ಮ ಕರಡಿಯೂ ಮಿತ್ರರಂತೆ ಬೀಳ್ಕೊಂಡು ಬೇರೆ ಯಾಗುವುದು. ತಮ್ಮ ದಾರಿಯಲ್ಲಿ ತಾವು ಹೋಗುತ್ತೀರಿ, ಅದರ ದಾರಿಯಲ್ಲಿ ಅದು ಹೋಗುತ್ತದೆ—ಹಾಯಾಗಿ. ಅಂತೂ ನಮ್ಮ ದುರದೃಷ್ಟಕ್ಕೆ ಒಂದು ಕರಡಿಯೂ ಸಿಕ್ಕಲಿಲ್ಲವೆನ್ನಿ.

ಹಾಂ, ಮರೆತಿದ್ದೆ. ಇನ್ನೊಂದೇ ಮುಖ್ಯವಾದುದ್ದು. 'ದಿ ಇಬಾಮಿನಬಲ್ ಸ್ನೋ ಮ್ಯಾನ್' ನಿಜವನ್ನು ಹೇಳಿಬೇಕಾದರೆ ಈ ಮಂಜಿನ ಮಹಾಕಾಯರನ್ನು ಮೊದಲು ಕಂಡವರು ನಾವೇ. ಎರಿಕ್ ಷಿಪ್ಟರ್ ಅಲ್ಲ. ಅವನಿಗೆ ಈ ವಿಷಯವನ್ನು ತಿಳಿಸಿದವರೂ ನಾವೇ. 'ಅಪ್ಪಾ, ನೀನೇನೋ ಹಿಮಾಲಯವನ್ನು ಹತ್ತುತ್ತೀಯಂತೆ. ಅಲ್ಲಿ ಮಂಜಿನ ಮಹಾಕಾಯರಿದ್ದಾರೆ. ಅವರನ್ನು ಮಾತ್ರ ರೇಗಿಸ ಬೇಡ. ಸಿಗಿದು ಹಾಕಿಬಿಟ್ಟಾರು. ಜೋಪಾನ. ಅವರನ್ನು ಗುರುತಿಸುವುದು ಹೇಗೆ ಅಂದರೆ, ಹೆಜ್ಜೆಯ ಗುರುತಿನಿಂದ. ಹೀಗೆ ಹೀಗೆ ಇರುತ್ತದೆ; ಇಂಥ ಜಾಡಿಗಳಲ್ಲಿ ಕಾಣುತ್ತದೆ, ಅದನ್ನು ಕಂಡಾಗ ಗುರುತನ್ನು ಹುಬಾಲಿಸದೆ ಅದಕ್ಕೆ ಆದಷ್ಟು ದೂರವಾಗಿ ಹೋಗುವುದು ನಿನಗೆ ಕ್ಷೇಮ ಎಂದೆಲ್ಲ ವಿಶದವಾಗಿ ನಾನೇ ಬರೆದು ಎಚ್ಚರಿಕೆ ಕೊಟ್ಟಿದ್ದೆ. ಅವನು-ಕೃತಜ್ಞ-ಅದನ್ನೇ ಬಳಸಿಕೊಂಡು, ಹೆಜ್ಜೆ ಗುರುತಿನ ಚಿತ್ರವನ್ನು ಬರೆದು—ನನ್ನ ವಿವರದ ಆಧಾರದಿಂದ—ತಾನೇ ಅವನ್ನು ಕಂಡವನಂತೆ ಎಲ್ಲ ವನ್ನೂ ಬರೆದು ಮಾಡಿ ಪ್ರಖ್ಯಾತಿ ಹೊಂದಿದ್ದಾನೆ—ಕೃತಘ್ನ. ಹೊಂದಲಿ, ಹೊಂದಲಿ. ನಮಗೇನು ನಷ್ಟ ಇಷ್ಟಕ್ಕೂ. ನಮ್ಮ ಕಾಗೆ ಈ ಮಹಾಕಾಯರನ್ನು ನಿಜವಾಗಿ ಇದಿರಿಗೇ ಕಂಡು ಬಂದಿರಿಗಿದ್ದರೆ ಇನ್ನೇನೇನನ್ನು ಬರೆಯುತ್ತಿದ್ದನೋ ಏನೋ—ಬರಿ ಹೆಜ್ಜೆಯ ಗುರುತನ್ನು ನಮ್ಮಿಂದ ತಿಳಿದುಕೊಂಡೇ ಇಷ್ಟೊಂದು ಪುರಾಣ. ಹೋಗಲಿ ಈ ಷಿಪ್ಟನ್ ಸುಳ್ಳೇಕೆ, ಮಂಜಿನ ಮನುಷ್ಯರೇಕೆ, ಮುಂದುವರಿಯೋಣ.

ಇಷ್ಟಕ್ಕೂ ಮುಂದುವರಿಯುವುದಕ್ಕೆ ಏನಿದೆ? ಸರಿ, ನಾವು ಗೌರೀಶಂಕರವನ್ನು ಸೇರಿದೆವು. ಹುಂ, ಸೇರಿಯೇಬಿಟ್ಟೆವು. ತಕ್ಷಣವೇ ಅಶೋಕ ಚಕ್ರಧ್ವಜವನ್ನೂ ಹಾರಿಸಿಯೇಬಿಟ್ಟೆವ. ಇಲ್ಲ ವಿದ್ದರೆ ನೋಡಿ, ಯಾವ ದೇಶದವರೋ ನಮ್ಮ ಹಿಂದೆಯೇ ಬರು ತ್ತಿದ್ದೋ ಅಥವ ಬೇರೆ ಕಡೆಯಿಂದ ಬಂದೋ ಮರುಕ್ಷಣದಲ್ಲೇ 'ಯೋನಿಯನ್ ಜಾಕನ್ನೋ, ಸ್ಟಾರ್ ಅಂಡ್ ಸ್ಟೈಪ್ಸ್‌ನ್ನೋ ಇನ್ನು ಯಾವುದನ್ನೋ ಹಾರಿಸಿಬಿಟ್ಟಿದ್ದರೆ? ಇದೇ ತಾನೆ ಈ ಪ್ರಪಂಚದಲ್ಲಿ ಸ್ವಾಮಿತ್ವದ ಗುರುತು. ಅನ್ಯಾಯವಾಗಿ ನಮ್ಮ ಗೌರೀಶಂಕರ ಇತರ ದೇಶದ ಪಾಲಾಗಿ ಹೋಗುತ್ತಿತ್ತಲ್ಲ. ಈಗಾಗಲೇ ಬರಿ ಬೆಟ್ಟದ ಬುಡದಿಂದಲೇ ದುರ್ಬೀನ್ ಹಾಕಿ ಈ ಶಿಖರವನ್ನು ಕಂಡ ಫರಂಗಿಯೇ ಇವನ್ನು 'ಎವರಸ್ಟ್' ಅಂತ ತನ್ನ ಹೆಸರಿನಿಂದ ಕರೆದುಕೊಂಡು ಪ್ರಪಂಚದ ಭೂಗೋಳ ಪುಸ್ತಕಗಳಲ್ಲೆಲ್ಲ ಬರೆಯಿಸಿ ಬಿಟ್ಟಿಲ್ಲವೆ? ಈಗ ಯಾರನ್ನು ಕೇಳಿದರೂ 'ಎವರೆಸ್ಟ್' ಎವರೆಸ್ಟ್, ಎನ್ನುವವರೇ. 'ಗೌರೀಶಂಕರ' ಎನ್ನುವವರು ಯಾರು ಸ್ವಾಮಿ? ಹುಂ, ಈ ಸಂದರ್ಭದಲ್ಲಿ ಇನ್ನೊಂದು ಸಂಗತಿಯೂ ನೆನಪಿಗೆ ಬರುತ್ತದೆ. ಮೊಟ್ಟಮೊದಲು ಎವರಸ್ಟ್—ಥೂ, ನಮ್ಮ ಗೌರೀಶಂಕರವನ್ನು ಗುರುತಿಸಿದವನು ನಮ್ಮ ಭಾರತೀಯನೇ ಅಂತೆ. ಒಬ್ಬ ಬಂಗಾಳಿ. ಎವರೆಸ್ಟ್ ಮಹಾಶಯ ಅವನ 'ಬಾಸ್' ಆಗಿದ್ದನಂತೆ. ಬಂಗಾಳಿ ಕಂಡದ್ದನ್ನು ಭಯ ಭಕ್ತಿಗಳಿಂದ ತನ್ನ ದಣಿಗೆ ತೋರಿಸಿದ. ಆ ದಣಿ ಫಕ್ಕನೇ ತನ್ನ ಹೆಸರನ್ನು ಇಟ್ಟುಕೊಂಡು ಬಿಟ್ಟ. ಬಂಗಾಳಿಗೆ ಬಡ್ತಿಯೂ ಕೂಡ ಸಿಕ್ಕಲಿಲ್ಲವಂತೆ. ಇರಲಿ. ಅಯ್ಯೇ, ನಾವು ಹತ್ತಿದ್ದು ಯಾವುದೇ ಗೌರೀಶಂಕರವೆಂದು ಹೇಗೆ ಹೇಳುತ್ತೀರೆಂದು ಕೇಳುತ್ತೀರೇನು? ಅಲ್ಲಿ ಆ ಶಿಖರದ ಮೇಲೆ ಹೋಗಿ ನಿಂತಿದ್ದರೆ—ತಾವು ಹೀಗೆ ಕೇಳುತ್ತಲೇ ಇರಲಿಲ್ಲ. ಗೌರಿಶಂಕರವೆಂದರೇನು ಸಾಮಾನ್ಯವೆ ಸ್ವಾಮಿ? ಅದರ ಮೇಲೆ ನಿಂತಾಗ ಇತರ ಹಿಮಾಲಯ ಶಿಖರಗಳು ಹೇಗೆ ಕಂಡವು ಎನ್ನುತ್ತೀರಿ? ಏಣಿಯ ಮೇಲೆ ಕುಳಿತವನಿಗೆ ಸುತ್ತು ಮುತ್ತಿನ ಕುರಿ ಹಿಂಡು ಹೇಗೆ ಕಾಣಿಸಬಹುದೊ ಹಾಗೇ. ಈಗ ಪರಿಹಾರವಾಯಿತೆ—ನಿಮ್ಮ ಶಂಕೆ? ಇನ್ನೂ ಕೊಂಚ ತಾಳಿ, ಸಾಕ್ಷ್ಯವನ್ನೂ ಕೊಟ್ಟೇಬಿಡುತ್ತೇನೆ.

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

(ಸಂಪಾದಕರು: ಶ್ರೀ. ಪಿ. ವೆಂಕೋಬಾಚಾರ್ಯ)

ಈ ವರುಷ ಪ್ರಕಟನಾವ ಪುಸ್ತಕಗಳು

ರುಕ್ಮಿಣಿ ಮತ್ತು ಕಾಂತಂ	೨—೦—೦
ಮೋಪಾಸಾನ ಓಲೆಗಳು	೨—೦—೦
ಮುಡಿಯದ ಹೂ (ಮೋಪಾಸಾನ ಕತೆಗಳು)	೧—೮—೦

ಈ ಎಲ್ಲ ಪುಸ್ತಕಗಳಿಗೆ ವಾರ್ಷಿಕ ಚಂದಾ ಹಣ ಕೇವಲ ರೂ. ೬—೮—೦

೬೦೬೦ ಗವಳೀಗಲ್ಲಿ ಪಿ. ಎ. ಆಚಾರ್ಯ ಆ್ಯಂಡ ಕಂ.
ಹುಬ್ಬಳ್ಳಿ ಸಂಚಾಲಕರು

ಅಂತೂ ನಿರೀಕ್ಷಿಸಿದ್ದಂತೆಯೇ ಅನಾಯಾಸವಾಗಿ ಅಷ್ಟಿಷ್ಟು ಸಾವು, ಏಳು, ಬೀಳು ಇವೆಲ್ಲ ಏನು ಲೆಕ್ಕ ಹೇಳಿ—ಗೌರೀಶಂಕರವನ್ನು ಸೇರಿದೆವಲ್ಲ ಎಂದು ಸಮಾಧಾನದಿಂದ ಸುತ್ತಲೂ ನೋಡುತ್ತ ಆ ಹಿಮದ ದೃಶ್ಯದಲ್ಲಿ ಮಗ್ನನಾಗಿದ್ದಾಗ ನಾವು ಎಣಿಸದಿದ್ದ ದೊಡ್ಡ ಅನಾಹುತವೊಂದು ನಡೆದು ಹೋಯಿತು - ಹೊಟ್ಟೆ ಚರ್ರೆಂದಿತು ಬೆಳಗಿನಹೊತ್ತು, ಇನ್ನೂ ಕಾಫಿ ಕುಡಿದಿರಲಿಲ್ಲ! ಇನ್ನೇನು ಮಾಡೀತು-ದಕ್ಷಿಣದವನ ಹೊಟ್ಟೆ, ಪಾಪ! ಅನಾಹುತ ಇಷ್ಟಕ್ಕೇ ಮುಗಿದ್ದರೆ. 'ಅನಾಹುತ' ಎನ್ನದೆ 'ತೊಂದರೆ' ಅನ್ನುತ್ತಿದ್ದೆನೋ ಏನೋ ಅವಲಕ್ಕಿಯೇನೋ ಇನ್ನೂ ಬೇಕಾದಷ್ಟು ಉಳಿದಿದ್ದರೂ ಕಾಫಿಪುಡಿ ಮಾತ್ರ ಮುಗಿದು ಹೋಗಿದ್ದಿತ.! ಈ ವಿಪತ್ತಿಗೆ ಇನ್ನೇನು ಹೆಸರನ್ನು ಕೊಡಬಹುದು – ಅನಾಹುತ ಎನ್ನದೆ? ಇಂತಹ ಪರ್ವತವನ್ನು ಹತ್ತಿಯೂ ಕೈಕಾಲು ಸೋತಿರಲಿಲ್ಲ; ಆದರೆ ಈಗ ಮಾತ್ರ ಕೈ ಕಾಲು ಕೆಟ್ಟೆವು. ನನ್ನ ಮುಂಡಿ ತಾನಾಗಿ ಮಡಿಸಿಕೊಂಡು ನಾನು ದುಪ್ಪನೆ ಕುಕ್ಕರಿಸಿಕೊಂಡೆ, ಹಿಮದ ಮೇಲೆ ಕೆಳಗಡೆಗೆ ಜಾರಿದೆ. ನಮ್ಮ ಕಳೆದುಳಿದ ಪಾರ್ಟಿ 'ಹೋ' ಎಂದು ಕೂಗಿಕೊಂಡಿತು—ಕಾಫಿ ಸಾಮಗ್ರಿ ಇದ್ದುದು ನನ್ನ ಬಳಿಯೇ. ನಾನು ಸಧ್ಯ ಸತ್ತಾದರೂ ಸಾಯುತ್ತೀನೆಲ್ಲ ಕಾಫಿಯಿಲ್ಲದ ಈ ದುಸ್ಥಿತಿಯಲ್ಲಿ, ಎಂದು ಸಮಾಧಾನ—ಯಾಕೆ ಸಂತೋಷವೇ ಅನ್ನಿ—ಹೊಂದುತ್ತಿರುವಲ್ಲಿ ತೆಪ್ಪನೆ ಜಾರುವುದು ನಿಂತು ಗವಿಯೊಂದರ ಮುಂದೆ ಕುಳಿತಿರಬೇಕೇ? ಏನಾಶ್ಚರ್ಯ! ನನಗೆ ದಿಗ್ಭ್ರಮೆಯಾಯಿತು. ಕಣ್ಣುಕತ್ತಲಿಟ್ಟಿತು—ಕಾಫಿಯಿಲ್ಲದೆ. ನಾನು ಎಚ್ಚೆತ್ತು ನನ್ನ ದೃಷ್ಟಿ ತಿಳಿಯಾದಾಗ ನನಗೆ ಕಾಣಿಸಿದುದೇನು! ಮುಂದೆಯೇ ಒಂದು ಬೋರ್ಡು! ಊರಗಲ ಕಣ್ಣು ಬಿಟ್ಟುಕೊಂಡು ಓದಿದೆ, ಓದಿದೆ. ಕಣ್ಣುಜ್ಜಿಕೊಂಡು, ಬೆರಳನ್ನು ಕಡಿಮಕೊಂಡು ಓದಿದೆ! 'ಗೌರೀಶಂಕರವಿಲಾಸ' ಬ್ರಾಹ್ಮಣರ ಕಾಫಿ ಕ್ಲಬ್!' ಹುಂ, ಹಾಗೆಯೇ ಬರೆದಿತ್ತು! ತಮಿಳನಲ್ಲಿ ನಂಬಿದರೆ ನಂಬಿ, ಬಿಟ್ಟರೆ ಬಿಡಿ! ನನಗೆ ಅದೇನಾಯಿತೋ, ಕಾಫಿಯಿಲ್ಲದ ಹೊಟ್ಟೆಯಲ್ಲಿ ಶಕ್ತಿ ಹೇಗೆ ಹುಟ್ಟಿತೋ ಕಾಣೆ. ಜಿಗಿಗನೆ ಹಾರಿ, ಹಿಮದ ಮೇಲೆ ಜಾರಿ ಅಂತೂ ಮೇಲೆ ಬಂದು ಸುಮ್ಮನೆ ಕೂಗಿಕೊಂಡೆ—ಏನು ಏನ್ನುವದು ಸರಿಯಾಗಿ ನೆನಪಿಲ್ಲ. 'ಯುರೇಕಾ! ಯುರೇಕಾ!' ಎಂದೇ ಇರಬೇಕು, ಆರ್ಕಿಮಿಡೀಸ್ ಕೂಗಿದ ಹಾಗೆ. ಈ ಕತೆ ತಮಗೆ ಗೊತ್ತಲ್ಲ. ಇಲ್ಲದಿದ್ದರೆ ಮಿಡ್ಲ್‌ಸ್ಕೂಲಿನಲ್ಲಿ ಓದುತ್ತಿದ್ದಾನಲ್ಲ ತಮ್ಮ ಮೊಮ್ಮಗ, ಅವನನ್ನು ಕೇಳಿ.

ಅಂತೂ ಇನ್ನೊಂದು ಕ್ಷಣದಲ್ಲಿ ನನ್ನ ವಿಶ್ರರು ನನ್ನನ್ನು ಸುತ್ತುಗಟ್ಟಿದ್ದರು. ಕೊಂಚ ಕನ್ನಡ, ಕೊಂಚ ತಮಿಳು, ಕೊಂಚ ತೆಲಗು, ಕೊಂಚ ಮಲೆಯಾಳಂ, ಬಹಳ ಮಟ್ಟಿಗೆ ಇಂಗ್ಲಿಷ್ ಹೀಗೇ—ನಾವು ತಾವು ಎಲ್ಲರೂ ಮಾತನಾಡುವಂತೆಯೇ—ನನ್ನ 'ವಿಶ್ವರಿ' ಯನ್ನು ಹೇಳಿದನೆಂದು ಕಾಣುತ್ತದೆ. ವಿದ್ಯುತ್ಪ್ರವಣದಲ್ಲಿ ಬೀಳುವುದು ಏಳುವುದನ್ನೂ ಕಾಣದೆ ಜಾರಿ, ಹಾರಿ, ಕಪ್ಪಳಿಸಿ ನೆಗೆದು ಗವಿಯ ಮುಂದಕ್ಕೆ ಬಂದುಬಿಟ್ಟಿದ್ದೆವು. ಅಷ್ಟು ಹೊತ್ತಿಗೆ ಸರಿಯಾಗಿ ಇದಿರಿಗೇ ಬಂದ ಮಹಾರಾಯ, ಸ್ವಾಗತಿಸುತ್ತ—ದಬ್ಬಿಯಟ್ಟು, ಬೂದಿಯ ಪಟ್ಟಿ ಹೊಡೆದು, ಹೊಟ್ಟೆ ಮುಂದೆ ಚಾಚಿ, ಬಾಯೊಳಗೆ ತಂಬುಲ ತುಂಬಿಕೊಂಡು ಗೊಜಗೊಟ್ಟುತ್ತ, ಅಯ್ಯರ್. ನಮಗೆ ನವ್ಯ ಊರಿನ 'ಸುಭ್ರಮಣ್ಯಂಸ್ ಟಿಫಿನ್ ರೂಮ್ಸ್'ಗೆ ಹೋಗುತ್ತಿದ್ದಂತೆಯೇ ಆಯಿತು. ಅಯ್ಯರರ ದೃಶ್ಯ ಆ ಹಳೆಯ ವಾತಾವರಣವನ್ನು ಒಂದು ಕ್ಷಣದಲ್ಲಿ ಕಲ್ಪಿಸಿತು. ನಮ್ಮೂರಿನ ಸುಭ್ರಮಣ್ಯಂ ಹಾಗೇ ಈತನೂ 'ವಾಂಗೋ ಸಾರ್' ಎಂದು ತೊದಲಿದನೆಂದು ಊಹಿಸಿಕೊಂಡೆವು. ಹುಂ, ನೋಡಿ ಕಾಕತಾಳನ್ಯಾಯವನ್ನು ಅನಂತರ ತಿಳಿದಂತೆ ಈತನ ಹೆಸರೂ ಸುಭ್ರಮಣ್ಯ ಅಯ್ಯರ್—ಪಾಲಘಾಟ್ ಸುಭ್ರಮಣ್ಯ ಅಯ್ಯರ್—ಎಂದೇ ಇರಬೇಕೆ! ಈತ ನನ್ನು ಕಂಡಾಗ ಎಲ್ಲೋ ಯಾವಾಗಲೋ ಚಿಕ್ಕಂದಿನಲ್ಲೇ ಕಳೆದು ಹೋಗಿದ್ದ ಅಣ್ಣನನ್ನೋ ತಮ್ಮನನ್ನೋ ಮಗನನ್ನೋ ಕಂಡಷ್ಟು ಸಂತೋಷವಾಗಿದ್ದರೆ, ಗೌರೀಶಂಕರ ವಿಲಾಸವನ್ನು ಹೊಕ್ಕಾಗ ಬಹಳ ವರ್ಷಗಳ ವೇಲೆ ತೌರುಮನೆಗೆ ಕಾಲಿಟ್ಟ ಹೆಣ್ಣಿಗಾಗುವಂತೆಯೇ ಆಯಿತು. ಬಳಕೆಯಾದ ಆ ಕಾಫಿಕ್ಲಬ್ಬಿನ ಮಿಶ್ರವಾಸನೆ, ಇದರ ಮೇಲೆ ತೆಳ್ಳಗೆ ಹೊದಿಸಿದಂತೆ ಕಾಫಿಯ ಸುವಾಸನೆ –ನಾವು ಮೂರ್ಛಿತರಾಗದಿದ್ದುದು ಹೆಚ್ಚು.

ಅಂತೂ ಒಳಹೊಕ್ಕೆವು. ಗೌರೀಶಂಕರ ವಿಲಾಸವೇನು ದೊಡ್ಡ ವಿಲಾಸವಾಗಿರಲಿಲ್ಲ. ಸಣ್ಣ ಕೋಣೆ. ಒಳಗಡೆಯಿಂದ ಬೆಚ್ಚಿನೆಯ ಹೊಗೆ ಬರುತ್ತಿತ್ತು—ಮಾಮೂಲಿನಂತೆ. ಅರೆಂಟು ಮರದ ಮೇಜು ಬೆಂಚುಗಳು. ಮೇಜಿನ ಮೇಲೆ ಇವೆಯಲ್ಲ ಅಲ್ಯೂಮಿನಿಯಂ ತಟ್ಟೆಗಳು, ಹಿತ್ತಾಳೆಯ ಕಾಫಿ ಸೆಟ್ಟುಗಳು. ಹುಂ, ಅವೇ. ತಟ್ಟೆಗಳಲ್ಲಿದ್ದ ಇಡಲಿಗಳು ಮುಳುಗಿದ್ದ ಸಾಂಭಾರದ ವಾಸನೆ ಮೂಗಿನ ಸೆಲೆಯನ್ನು ಒಡೆಯುತ್ತಿತ್ತು. ಮೂಗಿನ ಹೊಳ್ಳೆಗಳನ್ನು ಅಷ್ಟು ದೊಡ್ಡದಾಗಿ ಅರಳಿಸಿಕೊಂಡಿದ್ದೆವು—ದಾಸನಾಳದ ಮೊಗ್ಗು ಅರಳುವಂತೆ. ಬೆಂಚಿನ ಮೇಲೆ ಹಿಮದಂತೆ ಬಿಳಿದಾದ ಕೂದಲು ತುಂಬಿದ ವೈ ಮುಖ ತಲೆಗಳ, ಪಿಳಿಪಿಳಿ ಕಣ್ಣುಗಳ, ಕರಡಿಯಂತಹ ಪ್ರಾಣಿಗಳು ಕುಳಿತಿದ್ದುವು. ಕರಡಿ ಕೈಗಳಿಂದ ಸಾಂಭಾರ ಸಂವಿಶ್ರ ಉಂಡೆ ಇಡಲಿಗಳನ್ನೇ ನುಂಗುತ್ತಿದ್ದುವು. ಸಾಂಭಾರವನ್ನು ಸೊರ್ರನೆ ಹೀರುತ್ತಿದ್ದುವು. ನಾವು ಸ್ವಲ್ಪ ಭಯದಿಂದಲೇ ಈ ಪ್ರಾಣಿಗಳನ್ನು ದುರುಗುಟ್ಟಿಕೊಂಡು ನೋಡುತ್ತ ಖಾಲಿ ಬೆಂಚುಗಳ ಮೇಲೆ ಕುಳಿತುಕೊಂಡೆವು. ಅಯ್ಯರ್ ನಮಗೇನು ಬೇಕೆಂದು ಕೇಳಿ, "ನಾಲೆನೆಯ್ಯಿ ದೋಸ, ಮೂಣು ಮಸಾಲೆ ದೋಸ" ಎಂದು ಕೂಗಿದ ಮೇಲೆ ಆ ವಿಚಿತ್ರ ಪ್ರಾಣಿಗಳ ಕಡೆಗೆ ಕೈ ತೋರಿಸಿ "ಇವರು ಹಿಮಾಲಯದವರು; ಮಂಜಿನ ಮಹಾಕಾಯರು" ಎಂದು ಹೇಳಿ ಮಹಾಕಾಯರಿಗೆ ಯಾವುದೋ. ಭಾಷೆಯಲ್ಲಿ—ಅವರ ಭಾಷೆಯೇ ಇರಬೇಕು—ನಮ್ಮನ್ನು ಪರಿಚಯ ಮಾಡಿಕೊಟ್ಟನೆಂದು ಕಾಣುತ್ತದೆ. ಅತನಾಡಿದುದರಲ್ಲಿ ನಮಗೆ 'ಕೈಲಾಸ' ಎಂಬ ಶುದ್ಧ ಕನ್ನಡದ ಪದವೊಂದು ಮಾತ್ರ ತಿಳಿಯಿತು, ಅಷ್ಟೆ. ಇಲ್ಲೇ ನಮಗೆ ಮಂಜಿನ ಮಹಾಕಾಯರ ಪರಿಚಯವಾದದ್ದು.

ಜೀವನಪ್ರಕಾಶ

(ಕನ್ನಡ ನೂತನ ಮಾಸಪತ್ರಿಕೆ)

ಸಂಪಾದಕರು: **ಶ್ರೀಮತಿ ಪ್ರೇಮಾ ಹುಲಕೊಪ್ಪಕರ**

ಸಾಮಾಜಿಕ ಪ್ರಗತಿ – ಶಿಕ್ಷಣ – ಮನೋರಂಜನೆಗಳಿಗಾಗಿ ಕಾರ್ಯಮಾಡಲು ಹೊರಟ ಸದಭಿರುಚಿಯ ಪತ್ರಿಕೆಯಿದು.

ವಾರ್ಷಿಕ ಚಂದಾ ೬–೦–೦ ಬಿ. ಸಂಚಿಕೆಗೆ ೦–೮–೦

ಪ್ರಭಾ ಡಿಸ್ಟ್ರಿಬ್ಯೂಟರ್ಸ್, ಶಳಕವಾಡಿ-ಬೆಳಗಾಂವಿ

ನಾವು ಹೊಟ್ಟೆತುಂಬ ದೋಸೆ ಇಡಲಿಗಳನ್ನು ತುಂಬಿ, ಎರಡನೆಯ ಡೋಸ್ ಕಾಫಿ ಇಳಿಸಿ—ಮೊದಲನೆಯದು ಪೀಠಿಕಾ ಪ್ರಕರಣವಾಗಿತ್ತು—ಮೂರನೆಯದಕ್ಕೆ 'ಆರ್ಡರ್' ಕೊಟ್ಟು ಗವಿಯ ಗೋಡೆಯನ್ನು ಆರಾಮವಾಗಿ ಒರಗಿಕೊಳ್ಳುತ್ತಿದ್ದಾಗ ಗವಿಯ ಹೊರಗಿನಿಂದ ಗಂಡಸಿನ ಧ್ವನಿ ಹೆಂಗಸಿನ ನಗು ಕೇಳಿ ಬಂದುವು! ಮರುಕ್ಷಣದಲ್ಲಿ ಯಾರು ಪ್ರತ್ಯಕ್ಷವಾಗಬೇಕು ನನ್ನ ಮುಂದೆ! ಗೌರೀಶಂಕರನೇ! ಹುಂ, ಗೌರೀಶಂಕರನೇ! ಕೈಲಾಸಪತಿ, ಗಂಗಾಧರ, ಜಟಾಧರ, ಇಂದುಧರ, ಮೃಗ ಚರ್ಮಾಂಬರ, ರುಂಡಮಾಲಾಧರ, ಸರ್ಪಭೂಷಣ, ತ್ರಿಶೂಲಪಾಣಿ, ಭಾಲನೇತ್ರ, ಪಾರ್ವತೀಪತಿ—ಪಾರ್ವತೀ ಸಮೇತನಾಗಿಯೇ! ನಮಗೇನು ಈ ರೂಪ ಹೊಸದೆ? ನಮ್ಮೂರಿನ ಪೇಟೆಯಲ್ಲಿ ಪರಮೇಶ್ವರನ ಎಷ್ಟು ಸಾವಿರ ಚಿತ್ರಗಳನ್ನು ಕಂಡಿರಲಿಲ್ಲ? ತಟ್ಟನೆ ಗುರುತಿಸಿ ಎದ್ದುನಿಂತೆವು. "ಶಂಭೋ!" ಎಂದು ನಮಸ್ಕರಿಸಿದೆವು. ಪರಮೇಶ್ವರ ನಸುನಗುತ್ತ "ಈಗ ಬಂದಿರಿ ತಾನೆ, ಕುಳಿತುಕೊಳ್ಳಿ" ಎಂದು ಕರುಣಾಮಯವಾದ ಧ್ವನಿಯಲ್ಲಿ ವಾತ್ಸಲ್ಯಪೂರಿತವಾದ ಮಾತುಗಳನ್ನು ಹೇಳಿದ—ಶುದ್ಧ ಕನ್ನಡದಲ್ಲಿ. ಪರಮೇಶ್ವರನಿಗೆ ತಿಳಿಯದ ಭಾಷೆಯಿದೆಯೆ, ತಿಳಿಯದ ವಿಷಯ ಇದೆಯೆ? ಸರ್ವಜ್ಞ, ತ್ರಿಕಾಲಜ್ಞಾನಿ, ಅಲ್ಲವೆ? ನಾವು ಇನ್ನೂ ನಿಂತೇ ಇದ್ದೆವು. ಹಾಗೆ ಮಂಜಿನ ಮಹಾಕಾಯರು. ಶಿವ ಒಂದೆರಡು ಹೆಜ್ಜೆ ಮುಂದೆ ಬಂದು, ಪಾರ್ವತಿದೇವಿಯನ್ನು "ಬಾಂಬ್ರೆ, ಕೂತುಕೋ" ಎಂದು ಬೆಂಚನ್ನು ತೋರಿಸುತ್ತ ಕುಳಿತುಕೊಳ್ಳುತ್ತ ಮುಂದೆ ನಿಂತಿದ್ದ ಅಯ್ಯರಿಗೆ "ಏನ್ರಿ, ಇವತ್ತೇನ್ರಿ ತಿಂಡಿ?" ಎಂದು ಕೇಳಿದ—ತಮಿಳಿನಲ್ಲಿ. ನಮ್ಮೂರಿನ ಮೂಣಿಯಂತೇ ಅಯ್ಯರ್ ತಟ್ಟೆಯನ್ನು ಪರಿಸಿದ. ಪರಮೇಶ್ವರ ಎರಡೆರಡು ಮಸಾಲೆ ದೋಸೆಗೆ ಆರ್ಡರ್ ಕೊಟ್ಟ. ಪಾರ್ವತೀದೇವಿ ಯಥಾಪ್ರಕಾರ ನಮ್ಮ ಪುರಾಣೇತಿಹಾಸಗಳಲ್ಲಿ ಹೇಳಿರುವಂತೆ, ಚಿತ್ರಪಟಗಳಲ್ಲಿ ಶಿಲ್ಪಗಳಲ್ಲಿ ಕಾಣುವಂತೆ ಅವನ ತೊಡೆಯನ್ನೇಲೆ ಕುಳಿತುಕೊಂಡಳು.

ಅದೇನು ಬಂದಿತೋ ಏನೋ ನನ್ನ ಬುದ್ಧಿಗೆ—ಈ ವಿಜ್ಞಾನಿಗಳ ಸಂಗದ ಅಜ್ಞಾನವೆಂದು ಕಾಣುತ್ತದೆ—ಅಂತೂ ನನ್ನ ಮನಸ್ಸಿನಲ್ಲಿ 'ಇವನೇ ಗೌರೀಶಂಕರನಿರಬಹುದೆ, ಅಥವಾ ಬೇರೆ ಯಾವನಾದರೂ ಈ ವೇಷದಲ್ಲಿ ಬಂದಿರಬಹುದೆ' ಎಂಬ ಸಂಶಯದ ಛಾಯೆ ಮೂಡಿತು. ಆದರೆ ದಿವ್ಯ ಜ್ಞಾನಿಯಾದ ಗೌರೀಶಂಕರನಿಗೆ ಇದು ತಿಳಿಯದೆ ಹೋಗುತ್ತದೆಯೆ? ಅವನು ತಟ್ಟನೆ ನನ್ನ ಕಪೆ ಬೆರಳು ಮಾಡಿ "ನಂಗೆಲ್ಲ ಗೊತ್ತಾಯಿತು. ನಾನೇ ಪರಮೇಶ್ವರ. ಈಕೆಯೇ ಜಗಜ್ಜನನಿ ಪಾರ್ವತಿ. ನಮ್ಮನ್ನೇ ನಿಮ್ಮ ಜನರೆಲ್ಲ ಪೂಜೆಮಾಡುವುದು. ನಾನೇ ಕಾಶಿಯಲ್ಲಿ ನೆಲೆಸಿರುವ ವಿಶ್ವನಾಥ, ಇವಳೇ ಅನ್ನಪೂರ್ಣ; ರಾಮೇಶ್ವರದಲ್ಲಿರುವವರೂ, ನಂಜನಗೂಡಿನಲ್ಲಿರುವವರೂ, ಭಾರತದ ಮೂಲೆ ಕೊಂಪೆ ಎಲ್ಲೆಲ್ಲೂ ಸಣ್ಣ ದೊಡ್ಡ ಗುಡಿಗಳು ಪ್ರತಿಯೊಂದರಲ್ಲೂ ಇರುವವರು ನಾವೇ. ಯೋಚಿಸಬೇಡ. ನೀನು ಅನುಮಾನಿಸಿದೆ ಅಂತ ನಾನು ಸಿಟ್ಟಾಗುವುದಿಲ್ಲ. ಕಲಿಕಾಲ, ಕೆಟ್ಟುಹೋಗಿದೆ. ಜನರಿಗೆ ನನ್ನಲ್ಲಿ ನಂಬಿಕೆ ತಪ್ಪಿಹೋಗುತ್ತಿದೆ. ನೀನೇನು ಮಾಡೀಯ. ನಾನು ತಾನೆ ಎಷ್ಟು ಅಂತ ಎಚ್ಚರಿಸುತ್ತಿರಲಿ—ಭ್ರಷ್ಟ ಜನರನ್ನು. ಈಗ ಆ ಕಡೆಗೆ ಮನಸ್ಸನ್ನೇ ಕೊಡುತ್ತಿಲ್ಲ" ಎಂದ. ಆದರೂ ನಾನು "ಪ್ರಭೋ, ಮಹಾಪರಾಧವಾಯಿತು. ಬಡವನನ್ನು ಅಜ್ಞಾನಿಯನ್ನು ಕ್ಷಮಿಸಬೇಕು" ಎಂದು ಅಡ್ಡಬಿದ್ದು ಏಳುತ್ತ "ಆದರೂ ಸರ್ವೇಶ್ವರ, ನೀನು ಇಂಥ ಕಾಫಿ ಕ್ಲಬ್ಬಿಗೆ ಬಂದು ಆರ್ಡರ್ ಮಾಡಿದೆಯಲ್ಲ....." ಎಂದು ಪೂರ್ತಿ ಮಾಡುವುದರಲ್ಲೇ ಪರಮೇಶ್ವರ ಮಧ್ಯೆ ಬಾಯಿ ಹಾಕಿ "ನೀನು ಹೇಳೋದು ನಿಜ. ಹಾಗೆ ಅನ್ನಿಸಬಹುದು. ಆದರೆ ಅಯ್ಯರೂ ನನ್ನ ಭಕ್ತಾಗ್ರಣಿಗಳಲ್ಲೊಬ್ಬ. ಅವನಿಂದ ನೈವೇದ್ಯವಾದುದನ್ನು ಸ್ವೀಕರಿಸಬೇಡವೆ? ಅದಕ್ಕೇ ನಾನು ಇಲ್ಲಿಗೆ ಬಂದಿರುವುದು. ಮೊದಲು—ಅಯ್ಯರ್ ಇಲ್ಲಿಗೆ ಬರುವುದಕ್ಕೆ ಮುಂಚೆ ನಾವು ಇಲ್ಲಿಗೆ ಯಾವಾಗಲೋ ನೃತ್ಯಕ್ಕಾಗಿ ಬರುತ್ತಿದ್ದೆವು. ಈ ಗಣಗಳ ಮಧ್ಯೆ—ಮಂಜಿನ ಮಹಾಕಾಯರ ಕಡೆಗೆ ನೋಡಿದ—ನನ್ನ ತಾಂಡವ ನೃತ್ಯ ನಡೆಯುತ್ತಿತ್ತು. ಈಗ ನಿತ್ಯವೂ ಬೆಳಿಗ್ಗೆ ಕಾಫಿ ತಿಂಡಿಗೆ ಬರುವುದು ಅಭ್ಯಾಸವಾಗಿ ಹೋಗಿದೆ. ನೋಡಿ, ನನಗೆ ಲೆಕ್ಕವಿಲ್ಲದಷ್ಟು ಭಕ್ತರುಗಳು, ಪೂಜಕರು ಇದ್ದಾರೆ, ಏನೇನೋ ಭಕ್ಷ್ಯ ಭೋಜ್ಯ ಪರಮಾನ್ನಗಳನ್ನು ನೈವೇದ್ಯ ಮಾಡುತ್ತಾರೆ. ಆದರೆ ಕಾಫಿಯನ್ನು ನೈವೇದ್ಯ ಮಾಡುವವರು ಯಾರೂ ಇಲ್ಲ. ಅದಕ್ಕೆ ಇನ್ನೂ ಕಾಲಬೇಕು ಅಂತ ಕಾಣಿಸುತ್ತೆ. ಅಂತೂ ಕಾಫಿಗಾಗಿ ನಾನು ಇಲ್ಲಿಗೇ ಬರಬೇಕು. ಅದು ಒಂದು ದಿನವಿಲ್ಲದಿದ್ದರೂ ಈಗ ಪ್ರಪಂಚದ ಕೆಲಸವನ್ನೇ ನನ್ನಿಂದ ಸಾಗುವುದಿಲ್ಲ. ಹಿಂದೆ ಕೈಲಾಸದಲ್ಲಿ ಬೆಳಿಗ್ಗೆ ಅಮೃತವನ್ನು ಕುಡಿದು ಕೆಲಸಕ್ಕೆ ಮೊದಲು ಮಾಡುತ್ತಿದ್ದೆ. ಬುದ್ಧಿ ಮೊದ್ದ ಮೊದ್ದಾಗಿರುತ್ತಿತ್ತು. ಈಗ ಕಾಫಿ ಕುಡಿಯುತ್ತೇನೆ. ಬುದ್ಧಿ ಎಷ್ಟೊಂದು ಚುರುಕಾಗಿರುತ್ತೆ ಅಂತೀರಿ?" ಎಂದ. ನಮ್ಮಲ್ಲೊಬ್ಬರು "ಮಹಾಪ್ರಭು, ಈ ತೃಣ ಸಮಾನರಾದ ಮನುಷ್ಯರ ಅನುಭವವೂ ಆದೀ" ಎಂದು ಸಮರ್ಥಿಸಿದರು. ಆಗ ಪರಮಾತ್ಮ ಹೇಳಿದ "ಒಂದು

ಸಾರಿ ಕಾಫಿಯು ಈ ಮೇಲುಗೈಯಿಂದ ತಪ್ಪಿಸಿಕೊಳ್ಳಬೇಕು ಅಂತ ನಾಲ್ಕು ದಿನ ಇಲ್ಲಿಗೆ ಬರಲಿಲ್ಲ. ಆವ ಬವಣೆ ನನಗೇ – ನೀವಾದರೆ ಶಿವನಿಗೆ ಎನ್ನುತ್ತೀರಿ—ಗೊತ್ತು. ನಿಮ್ಮಡೆಯಲ್ಲಿ ಸೆಕ್ರೆಟೆರಿಯಟ್‌ನಲ್ಲಿ ಇರುವ ಹಾಗೇ ಫೈಲುಗಳು ಆಗತುಕೊಂಡುಬಿಟ್ಟುವು." ನಾನು ಉತ್ತರಿಸಿದೆ "ಹೌದು, ದೇವದೇವ. ಅದು ನಮ್ಮ ತಾಲ್ಲೋಕು ಕಚೇರಿಯಿಂದ ನಪೆದು ಡೆಲ್ಲಿಯವರೆಗೂ ಪರಿವರ್ತಿತ ಪ್ರಸಿದ್ಧ ಗೌರವಾನ್ವಿತ ಸಂಪ್ರದಾಯ." ನೀಲಕಂಠ ಮುಂದುವರಿಯುತ್ತ "ಅನಂತರ ಫೈಲಿನ ಕಂತೆಗಳಿಗೆ ಹೆದರಿ, ಗತಿಯಿಲ್ಲವೆಂದು ಇಲ್ಲಿಗೆ ಬಂದು ಎರಡು 'ಕಪ್' ಹೆಚ್ಚಾಗಿ ಕಾಫಿ ಇಳಿಸಿ ಒಂದೆರಡು ಗಂಟೆಯಲ್ಲೇ ನಾಲ್ಕು ದಿನದ ಕಸವನ್ನೆಲ್ಲ 'ಡಿಸ್‌ಪೋಸ್ ಆಫ್, ಮಾಡಿದೆ' ಎಂದ. ಅದಕ್ಕೆ ನಾನು "ಹೇ. ನರನಾರೀಶ್ವರ, ನಿನ್ನ ಶ್ರೇಷ್ಠವಾದ ಮೇಲ್ಪಂಕ್ತಿ ಭೂಲೋಕದಲ್ಲಿಯೂ ದಿನದಿನವೂ ಅನುಸರಿಸಲ್ಪಡುತ್ತಿದೆ" ಎಂದು ಅನವಶ್ಯಕವಾಗಿ ಹೇಳಿದೆ. ಪರಮೇಶ್ವರ "ಇನ್ನು ಪ್ರಯೋಜನವಿಲ್ಲ, ಅಂತ ನಿತ್ಯವೂ ತಪ್ಪದೆ ಬರುತ್ತಿದ್ದೇನೆ ನನ್ನ ದೇವಿಗೂ ಕಾಫಿಯ ರುಚಿ ಹತ್ತಿದೆ. ಅಮೃತ ಸೇರುತ್ತಲೇ ಇಲ್ಲ, ಏನು ಪಾತು?" ಎಂದು ಪಾರ್ವತಿಯ ಕಡೆಗೆ ನೋಡಿ ನಸುನಕ್ಕ. ಜಗನ್ಮಾತೆಯೂ ಮಂದಸ್ಮಿತಳಾದಳು. ದೋಸೆ ಬಂದಿತು, ಮಾತು ನಿಂತಿತು.

ತಿಂಡಿ ಕಾಫಿಗಳಿಗಾಗಿ, ಮಾತು ಇನ್ನೂ ಬೆಳೆಯಿತು. ಲೋಕದ ಆಗು ಹೋಗುಗಳನ್ನೆಲ್ಲ ಅಳೆದು ಸುರಿದೆವು. ಪರಮೇಶ್ವರ–ಪಾಪ!–ತನ್ನ ಪ್ರಪಂಚದ ಗೋಳನ್ನೆಲ್ಲ ತೋಡಿಕೊಂಡ, ನಾವೂ ನಮ್ಮ ಸೌಕರ್ಯ, ಹೆಂಡಿರು ಮಕ್ಕಳು ಮುಂತಾಗಿ ನಮ್ಮ ಸಣ್ಣ ಪ್ರಪಂಚದ ಗೋಳನ್ನು ಹೇಳಿಕೊಂಡೆವು. – ಅದನ್ನೆಲ್ಲ ತಮಗೆ ತಿಳಿಸಿ ಏನು ಪ್ರಯೋಜನ? ನಮ್ಮ ತಮ್ಮ ಸಂಸಾರದ ಪಾರುಣ ಕತೆಯಂತೆಯೇ. ಆದರ ಸಾರಾಂಶ, ಅನುಭವ ಬೇಕಾಗಿದ್ದರೆ ಹತ್ತು ದಿನದ 'ಹಿಂದು' ಪತ್ರಿಕೆಯನ್ನು ಒಟ್ಟಿಗೆ ಓದಿದ ಮೇಲೆ ತಮ್ಮ ಸತೀಮಣಿಯೊಂದಿಗೆ ಸೀರೆಯ ವಿಚಾರ ಮಾಡಿ ನೋಡಿ—ಧೈರ್ಯವಿದ್ದರೆ. ಆ ಮಾತಿನ ವೈಖರಿ, ಸ್ವಾರಸ್ಯಗಳನ್ನು ಒಂದೆರಡು ಗುರುತುಗಳಿಂದಲೇ ತಿಳಿಸಬಹುದು. ಈ ಸಮಯದಲ್ಲಿ ಪರಮೇಶ್ವರನ ಕಾಫಿಯೂ ಆರಿಹೋಗುತ್ತಿತ್ತು; ನಾಲ್ಕಾರು ಬಾರಿ ಮಹಾರುದ್ರನಿಗೂ ಮಹಾ ಕಾಳಿಗೂ ಮಾತುಕತೆ ನಡೆದು ದೇವಿಯ ಕಣ್ಣಿನಲ್ಲಿ ನೀರೂರಿತ್ತು. ಇರಲಿ. ಈ ನಮ್ಮ ಸಂಭಾಷಣೆಯಲ್ಲಿ ಶ್ರೀ ಅಯ್ಯರೂ ಬೇಕಾದಷ್ಟು ಭಾಗ ವಹಿಸಿ ಭೂಮಿಗೂ ಕೈಲಾಸಕ್ಕೂ ಆಗಾಗ ಕುಣಿಕೆ ಹಾಕುತ್ತಿದ್ದ—ಎರಡನ್ನೂ ಚೆನ್ನಾಗಿ ತಿಳಿದವನು ತಾನೆ.

ತಿಂಡಿ ಕಾಫಿ ಮುಗಿದು, ಮಾತು ಕೊನೆಗಂಡಂತಾಗಿ ಗೌರೀಶಂಕರರು ಮೇಲಿದ್ದಾಗ ಶಂಕರ "ಕೈಲಾಸಕ್ಕೆ ಬರೋದಿಲ್ಲವೆ?" ಎಂದು ಉಪಚಾರ ಮಾಡಿದ. ನಾನು "ಆಗಲಿ, ಬರದಿದ್ದರಾಗುತ್ತದೆಯೆ? ಸ್ವಲ್ಪ ತಡವಾಗಿ ಬಂದೇವು ಅಷ್ಟೆ" ಎಂದು ನಮ್ಮವರ ಪರವಾಗಿ ಉತ್ತರ ಕೊಟ್ಟೆ. ಕೈಲಾಸವಾಸಿ ಕೊಂಚ ನಕ್ಕು ಹೊರಡಲನುವಾದ.

ನಾವು ಈ ವರೆಗೆ ಹುಡುಗರು ತರಗತಿಯಲ್ಲಿ ಮೇಷ್ಟರ ಮಾತನ್ನು ಒಪ್ಪಿಕೊಳ್ಳುವಂತೆ, ಶಾಸ್ತ್ರಿಗಳ ಸಂಸ್ಕೃತ ಮಂತ್ರವನ್ನು ಕನ್ನಡದ ಲೌಕಿಕರು ಒಪ್ಪಿಕೊಳ್ಳುವಂತೆ ಅಯ್ಯರರ ಕಾಫಿ ಕ್ಲಬ್ಬಿನ ಇರುವಿಕೆಯನ್ನು 'ಟೇಕನ್ ಫಾರ್ ಗ್ರಾಂಟೆಡ್' ಅನ್ನುತ್ತಾ ಬಂದ್ದಿದ್ದೇವೆ. ಇಂಗ್ಲೀಷಿನಲ್ಲಿ ಹಾಗೆ ಒಪ್ಪಿಕೊಂಡು ಬಿಟ್ಟಿದ್ದೆವು ಆದರೆ ಈ ಗಳಿಗೆಯಲ್ಲಿ ಹೊಟ್ಟೆಗೆ ಕಾಫಿ ಬಿದ್ದಿದ್ದು ಬುದ್ಧಿಯಲ್ಲಿ ಬೆಳಕು ಬಿದ್ದಿದ್ದು ನನಗೆ ಮೂಲಭೂತವಾದ—ಫಂಡಮೆಂಟಲ್ ಅನ್ನುತ್ತಾರಲ್ಲ ಅದು–ಸಂದೇಹ ಕಾಣಿಸಿಕೊಂಡಿತು. 'ಈ ಅಯ್ಯರರಿಗೆ ಇಲ್ಲಿ ಬರಬೇಕೆಂದು ಹೊಳೆದದ್ದು ಹೇಗೆ' ಎಂದು. ಅವನನ್ನೇ ಕೇಳಿದೆ. ಅದಕ್ಕೆ ಅವನ ತಂಬುಲ ಸೂಸುವಷ್ಟು ಜಗಲವಾಗಿ ಬಾಯನ್ನು ತೆರೆದು ಕಪ್ಪು ಕೆಂಪು ಹಲ್ಲುಗಳ ಮಧ್ಯೆ ನಗುವನ್ನು ತೋರಿಸುತ್ತ "ಅದೇನು ದಡ್ಡ ವಿಷಯ ಸಾಮಿ. ಹುಡುಗನಾಗಿದ್ದಾಗಿನಿಂದ ಪಾಲಘಾಟಿನಲ್ಲಿ ಗೌರೀಶಂಕರರ ಕತೆ ಕೇಳಿದ್ದೆ; ಇಲ್ಲಿ ಪರಮೇಶ್ವರನೇ ವಾಸವಾಗಿದ್ದಾನೆ ಅಂತ. ಸರಿ ಅವನಿದ್ದರೆ ಅವನಿಗೆ ಸಂಸಾರ ಇಲ್ಲವೆ, ಸೇವಕರಿಲ್ಲವೆ? ಊರು ಕೇರಿ ಎಲ್ಲ ಇರಲೇಬೇಕು. ಖಂಡಿತವಾಗಿ ವ್ಯಾಪಾರವಾಗುತ್ತೆ—ಕಾಫಿ ಓಟಲು. ತೆಗೆದರೆ, ಅಂತ ನಂಬಿಕೆ ಬಂದಿತ್ತು. ಸಾಕು ಕಾಸು ಕೂಡಿಸಿಕೊಂಡು, ಸಾಮಾನು ಕಟ್ಟಿಕೊಂಡು ಬಂದುಬಿಟ್ಟೆ. ಪರಮೇಶ್ವರ ಅನುಗ್ರಹ. ನಿರೀಕ್ಷಿಸಿದ ಹಾಗೇ ಆಯ್ತು" ಎಂದ. ಆಯಿತು ನನ್ನಲ್ಲಿದ್ದ ಸಂದೇಹವೊಂದು ನಿವೃತ್ತಿಯಾಯಿತು ಅನ್ನುವ ಹೊತ್ತಿಗೆ ನಮ್ಮ ಪೈಕಿ ಇನ್ನೊಬ್ಬರು "ಅದು ಸರಿ, ಅಯ್ಯರೆ, ನಿಮಗೆ ಸಹಜವಾಗೇ ಯೋಚಿಸಿದಿರಿ; ಇಲ್ಲದಿದ್ದರೆ ನೀವು ದೇಶವನ್ನೇ ದೋಸೆ ಕಾಫಿಗಳಿಂದ ವಶಪಡಿಸಿಕೊಳ್ಳುತ್ತಿದ್ದಿರ? ಆದರೆ ನೀವು ತಂದಿದ್ದ ಸಾಮಾನೆಲ್ಲ – ಕಾಫಿ, ಚಿಕೊರಿ, ಡಾಲ್ಡ, ದೋಸೆ ಹಿಟ್ಟು ನೊಳಕ್ಕೆ ಹಾಕೋದಕ್ಕೆ ಇಲೆಗಳು ಮುಂತಾಗಿ—ಎಲ್ಲ ಯಾವಾಗಲೋ ಕರ್ಚಾಗಿ ಹೋಗಿರಬೇಕಲ್ಲ. ಹೊಸ ಹೊಸದಾಗಿ ಹೇಗೆ ಒದಗಿಸಿಕೊಳ್ಳುತ್ತೀರಿ?" ಎಂದು ಕುತೂಹಲದಿಂದ ಕೇಳಿದರು. ಇದೂ ಸರಿಯಾದ ಸಂದೇಹವೆ! ನನಗೇಕೆ ಹೊಳೆಯಲಿಲ್ಲ. ಅವರು ನನಗಿಂತ ಇನ್ನೊಂದು 'ಕಪ್' ಕಾಫಿಯನ್ನು ಹೆಚ್ಚಾಗಿ ಕುಡಿದಿರಬೇಕು ಎಂದುಕೊಂಡೆ. ಅಯ್ಯರ ಈ ಬಾರಿ ಇನ್ನೂ ದೊಡ್ಡದಾಗಿ ಬಾಯಿಬಿಟ್ಟು ನಕ್ಕರು; ಜೋರಿನ ತಂಬುಲನ್ನೂ ಗಮನಿಸದೆ. "ನಾನು ಬಂದಾಗ ಇದೇ ಆತಂಕ ನನಗೂ ಇತ್ತು. ಆದರೆ ದೇವರಿದ್ದಾನೆ, ನೋಡೋಣ, ಅಂದು ಬಂದುಬಿಟ್ಟೆ. ಕೇಳಿಲ್ಲವೆ ಧೈರ್ಯಂ ಸರ್ವತ್ರ ಸಾಧನಂ ಅಂತ? ನನ್ನ ನಂಬಿಕೆ ತಪ್ಪಾಗಿರಲಿಲ್ಲ. ಇಲ್ಲಿ ಒಬ್ಬ ಬನಿಯ ಚಿಲ್ಲರೆ ದಿನಸಿ ಅಂಗಡಿ ಇಟ್ಟುಕೊಂಡಿದ್ದ. ಈಗಲೂ ಇಟ್ಟುಕೊಂಡಿದ್ದಾನೆ ಅನ್ನಿ."

"ಆ! ಆ!" ನಾವೆಲ್ಲ ಒಟ್ಟಿಗೆ ದಂಗುಬಡಿದು ಕೂಗಿಕೊಂಡೆವು "ಹೂಂ, ಏನಂತೀರಿ ಮತ್ತೆ? ಬನಿಯ ಅಂದರೆ ಸಾಮಾನ್ಯವೆ? ಅವನು ಇವನು ಜಯಪುರದ ಬನಿಯ. ನಿಮ್ಮ ಬಿರ್ಲಾ ಇಲ್ಲವೆ ಅವ ಬುಡಕಟ್ಟಿಗೇ ಸೇರಿದೋನಂತೆ—ಅಂದಮೇಲೆ? ಅವನೂ ನನ್ನ ಹಾಗೆ ವ್ಯಾಪಾರ ಆಗೇ ಆಗುತ್ತೆ ಅಂತ ಬಂದನಂತೆ. ನಾನು ಬಂದು ಸುತ್ತಾಡಿದಾಗ ನನಗೆ ಮೊದಲು ಕಂಡದ್ದು ಅವನ ಬೋರ್ಡು—

'ಗೌರೀಶಂಕರ ಪ್ರಾವಿಷನ್‌ಸ್ಟೋರ್ಸ್.' ಆಗ ನನಗಷ್ಟು ಧೈರ್ಯ ಬಂತು ಅವನ ಅಂಗಡಿ ಹತ್ತಿರದಲ್ಲೇ ಇದೆ. ಬೇಕಾದ್ದೆಲ್ಲ ಸಿಕ್ಕುತ್ತೆ."

ನಾವು ಹತ್ತೆಣಿಸುವಷ್ಟು ಹೊತ್ತು ಮೂಕರಾಗಿದ್ದೆವು. ಪಾರ್ವತಿ ಸಮೇತನಾದ ಪರಮೇಶ್ವರ ನಮ್ಮ ಆಶ್ಚರ್ಯವನ್ನು ನೋಡಿ ನಸುನಗುತ್ತ ಬಾಗಿಲಿನ ಬಳಿಯೇ ನಿಂತಿದ್ದ. ಈ ಸಮಾಚಾರವನ್ನು ಕೇಳಿಯೂ ನಮ್ಮ ಪೈಕಿ ಒಬ್ಬರು (ಎಲ್ಲರಿಗಿಂತಲೂ ಒಂದು ಡೋಸು ಬಲವಾಗಿ ಕುಡಿದಿರಬೇಕು) "ಹಾಗಾದರೆ ಆ ಬನಿಯಾಗೆ ಸಾಮಾನು ಜೇಗೆ ಒದಗುತ್ತದೆ?" ಎಂದು ಹುಡುಗ ಮೋಡವನ್ನು ಪ್ರಶ್ನಿಸಿದಂತೆ— ನೆನಪಿದೆಯೋ 'ಎ' ಕ್ಲಾಸಿನ ಪುಸ್ತಕ ಓದಿದು?—ಕಡೆಯ ಪ್ರಶ್ನೆಯನ್ನು ಕೇಳಿಯೇ ಕೇಳಿದರು. ಈ ಬಾರಿ ಅಯ್ಯರ್ ತಿಳಿವಳಿಕೆಯಂತೆ ನಸುನಗಲಿಲ್ಲ. ಪೆಚ್ಚಾಗಿ ಸೋತವನಂತೆ "ನನಗೇನು ಗೊತ್ತು. ಅವನು ಸಾಮಾನು ಕೊಡ್ತಾನೆ, ನನ್ನ ವ್ಯಾಪಾರ ಆಗುತ್ತೆ ಅಷ್ಟೆ" ಎಂದು ಬಾಯಿ ಮುಚ್ಚಿಕೊಂಡ. ನಮಗೆ ಈ ರಹಸ್ಯ—ಬನಿಯಾ ರಹಸ್ಯ—ಬಗೆಹರಿಯದಾಯಿತು. ಆದರೆ ಸಾಕ್ಷಾತ್ ಪರಮೇಶ್ವರನೇ ಇನ್ನೂ ಅಲ್ಲಿದ್ದನಲ್ಲ. ಅವನಿಗೆ ತಿಳಿಯದೆ ಇದ್ದುದುಂಟೆ? ನಾನು "ಮಹಾಪ್ರಭು, ಜಗತ್ತೇ ನಿನ್ನನ್ನು ಸರ್ವಜ್ಞ, ದಿವ್ಯಜ್ಞಾನಿ, ಎಂದು ಹೊಗಳುತ್ತದೆ. ನೀನಾದರೂ ಈ ರಹಸ್ಯವನ್ನು ಬಿಡಿಸಬೇಕು" ಎಂದು ಕೇಳಿದೆ. ಪರಮೇಶ್ವರನ ಸ್ವಲ್ಪ ಆತಂಕ ಸುಳಿದಂತಾಯಿತು. ಮರುಕ್ಷಣದಲ್ಲಿ ಅವನು ಸ್ಪಷ್ಟವಾಗಿ ನಕ್ಕು "ನಿಜ, ನಾನು ಸರ್ವಜ್ಞನೇ. ಜನರು ಹೇಳುವುದು ನಿಜ. ಸೃಷ್ಟಿಯ ರಹಸ್ಯವೆಲ್ಲ ನನಗೆ ಕರತಲಾಮಲಕವೇ. ಆದರೆ ನನ್ನ ಬುದ್ಧಿಗೂ ಒಂದು ಮಿತಿಯುಂಟು. ಈ ಬನಿಯ ರಹಸ್ಯವೊಂದು ನನಗೆ ಬಗೆಹರಿದಿಲ್ಲ. ಅದನ್ನು ಬಿಟ್ಟು ಬೇರೆ ಏನನ್ನಾದರೂ ಕೇಳು" ಎಂದು ಅಪ್ಪಣೆ ಕೊಡಿಸಿದ. ಸಾಕ್ಷಾತ್ ಪರಮೇಶ್ವರನೇ ಸೋತ! ಸೋಲೊಪ್ಪಿಕೊಂಡ. ಮೊದಲು ನಮಗೆ ಇದು ಆಶ್ಚರ್ಯವನ್ನುಂಟುಮಾಡಿದರೂ ಮರುಕ್ಷಣದಲ್ಲಿ ಆಶ್ಚರ್ಯ ಉಳಿಯಲಿಲ್ಲ. ನಮಗೂ ಗೊತ್ತಾಗಿತ್ತಲ್ಲ—ಅಥವ ಗೊತ್ತಾಗಿರಲಿಲ್ಲವಲ್ಲ—ಬನಿಯನ ವಿಷಯ ಈ ಕಂಟ್ರೋಲ್ ವರ್ಷಗಳಲ್ಲಿ. ಪರಮೇಶ್ವರ ಹೊರಟುಹೋದ. ನಾವು ಸುಮ್ಮನಾದೆವು. ಮುಂದೆ ನಡೆದದ್ದೆಲ್ಲ ಆಸ್ಪಕೃತವೆನ್ನಿ.

ಇನ್ನೇನು? ಹುಂ! ಮೊದಲು ತಿಳಿಸಿದಾಗ ಗೌರೀಶಂಕರವನ್ನು ಮೊಟ್ಟಮೊದಲು ಮೆಟ್ಟಿದವರುನಾವು ಎಂದು ಹೇಳಿದೆನಲ್ಲವೆ? ಈಗ ಯೋಚಿಸಿಕೊಂಡರೆ ಆ ಯಶಸ್ಸು ಆ ಸುಬ್ರಮಣ್ಯ ಅಯ್ಯರ್, ಅಲ್ಲ ಅಲ್ಲ, ಆ ಬನಿಯಾಗೇ ಸಲ್ಲಬೇಕೆನ್ನಿಸುತ್ತದೆ. ಎರಿಕ್ ಷಿಪ್ಟನ್ಸ್, ಅವನ ತಾತ ಮುತ್ತಾತಂದಿರು, ಫ್ರೆಂಚರು, ಸ್ವಿಸ್‌ರು, ಇಂಗ್ಲಿಷರು, ಇನ್ನೂ ಯಾರು ಯಾರೋ—ಇವರಿಗೆಲ್ಲ ಸೋತ ಅಸಖ್ಯಾತಿ ಮಾತ್ರ. ಇವರ ಹಾಗೆ ಡಂಗುರ ಹುಯಿಸಿಕೊಂಡರೇ, ಆ ಬನಿಯ, ಅಯ್ಯರುಗಳು? ನಾವು ನಾವಾದರೂ ಅಷ್ಟೇ? ಕೆಲಸಗಾರರಿಗೂ ಬಾಯಿಬಡಕರಿಗೂ ಇದೇ ವ್ಯತ್ಯಾಸ. ಅಂತೂ ಗೌರೀಶಂಕರವನ್ನು ಮೆಟ್ಟಿದ ನಿರ್ವಿವಾದ ಚರಿತ್ರಾರ್ಹವಾದ ಸಂಗತಿಯನ್ನು ತಮಗೆ ಅರಿಕೆಮಾಡಿಬಿಟ್ಟಿದ್ದೇನೆ. ಮುಂದೆಂದಾದರೂ ತಾವು 'ಗೌರೀಶಂಕರ' ಎಂದು ಅದರ ವಿಷಯವಾಗಿ ಮಾತಾಡಿದಾಗ ನನ್ನ ಅರಿಕೆ ನೆನಪಿನಲ್ಲಿರಲಿ. ಪ್ರಪಂಚದಲ್ಲಿ 'ಭೂಗೋಳ'ಗಳು ಮುಂದಿನ ಮುದ್ರಣಕ್ಕೆ ಬಂದಾಗ ಹಿಂದಿನ ತಪ್ಪುಗಳನ್ನೆಲ್ಲ ತಿದ್ದಿ ಈ ತಥ್ಯಾಂಶವನ್ನು ಸೇರುವಂತೆ ತಾವು ಯತ್ನಿಸಬೇಕು. ನಾವಂತೂ ಯಾವಾಗಿನಿಂದಲೂ ಯತ್ನಿಸುತ್ತಲೇ ಇದ್ದೇವೆ.

ಒಟ್ಟಿನಲ್ಲಿ ಏನು ಹೊಳುವುದಕ್ಕೆ ಬಂದೆ ಅಂದರೆ ಇಂತಹ ನಿರ್ವಿವಾದವಾದ ಚರಿತ್ರಾರ್ಹವಾದ ವಿಷಯವನ್ನು ಇಷ್ಟು ಗಂಭೀರವಾಗಿ ಇಷ್ಟು ಸಂಶ್ಲೇಷವಾಗಿ ಬರೆದು ಕಳುಹಿಸಿದರೆ ಆ ಸಂಪಾದಕರುಗಳು—ಅವರ ಕೆಲವೇ—ಅನ್ನಿ—"ಗೌರೀಶಂಕರದಷ್ಟು ಎತ್ತರವಾದ ನಿಮ್ಮ ಬುರುಡೆ ನಮಗೆ ಬೇಕಿಲ್ಲ" ಎಂದು ಬರೆಯುವುದೆ, ಪ್ರಬಂಧವನ್ನು ಹಿಂದಿರಿಗಿಸುವುದೆ? ಹುಂ, ನೋಡಿ, ಇಂಥ ಮೂಢರೂ ಇದ್ದಾರಲ್ಲ ನಮ್ಮ ಮಧ್ಯದಲ್ಲಿ!

ಜಾನಪದ ನಾಟ್ಯಗೀತಗಳು

(ಮೂಡಲಪಾಯದ ಹಾಡುಗಳು)

● ಬೆಟಗೇರಿ ಕೃಷ್ಣಶರ್ಮ, ಧಾರವಾಡ

●

ನಾಟಕವೆಂಬುದು ಸಂಗೀತದಿಂದ ಕೂಡಿರಬೇಕೆಂಬುದು ಭಾರತೀಯ ನಾಟ್ಯ ಪರಂಪರೆಯ ಅಭಿಮತ. ಎಂತಲೇ ನಮ್ಮ ಜಾನಪದ ನಾಟಕಗಳೂ ಒಂದೊಂದು ಬಗೆಯ ಜಾನಪದ ಸಂಗೀತದಿಂದ ಕೂಡಿರುವುದು. ಮೂಡಲಪಾಯದ ಆಟಗಳಲ್ಲಿಯ ಸಂಗೀತದ ರೀತಿಯಾವ ಮಾದರಿಯದು ?

●

ಕನ್ನಡ ಜಾನಪದ ನಾಟ್ಯಪರಂಪರೆಯನ್ನು ಚಾರಿತ್ರಿಕ ದೃಷ್ಟಿಯಿಂದ ಅಭ್ಯಸಿಸುತ್ತ ಬಂದರೆ, ಕನ್ನಡನಾಡಿನಲ್ಲಿ ಬೆಳೆದು ಬಾಳಿದ ಭಗವದ್ ಭಕ್ತಿಯ ಸಾಧನ ವಿಕಾಸವೇ ಇದೆಂಬ ಸಂಗತಿ ಸಾಕಷ್ಟು ಪ್ರಮಾಣಗಳಿಂದ ಸಿದ್ಧವಾಗುವುದು. ನವವಿಧ ಭಕ್ತಿಗಳಲ್ಲಿಯ ಕೀರ್ತನ ಶ್ರವಣಗಳು ಪರಮಾತ್ಮನ ದಿವ್ಯಲೀಲಾಪ್ರಸಂಗಗಳನ್ನು ಹಾಡಿ ಹೊಗಳಬೇಕೆಂದೂ ಹಾಡಿ ಹೊಗಳಿದುದನ್ನು ಕೇಳಬೇಕೆಂದೂ ಇದೇ ಕೀರ್ತನ, ಶ್ರವಣ ಭಕ್ತಿಯ ವಿಧಾನವೆಂದೂ ಹೇಳುವುವು ಇದಕ್ಕನುಸಾರವಾಗಿ ಸಂಸ್ಕೃತ ಭಾಷೆಯಲ್ಲಿದ್ದ ಭಾಗವತಾದಿ ಪರಮಾತ್ಮನ ಲೀಲಾಪ್ರಸಂಗಗಳುಳ್ಳ ಭಕ್ತಿಪ್ರಧಾನ ಪುರಾಣಗಳು. ಕನ್ನಡ ಭಾಷೆಯಲ್ಲಿ ವಿವಿಧ ರೂಪಗಳಿಂದ ಇಳಿಯಲು ತೊಡಗಿದುವು ಮಹಾಕಾವ್ಯಳಾಗಿ ಬಂದುವು. ಸರಸ ಕಾವ್ಯಗಳಾಗಿ ಬಂದುವು. ಸಾಂಗತ್ಯ ಲಾವಣಿಗಳಾಗಿ ಬಂದುವು. ಹಾಡು–ಕೀರ್ತನ–ಸುಳಾದಿಗಳಾಗಿ ಬಂದುವು. ಯಕ್ಷಗಾನ ಬಯಲಾಟಗಳಾಗಿ ಬಂದುವು.

ಸಂಗೀತ–ನಾಟ್ಯಗಳು ಕಲೆಯೆಂದು ಪರಿಗಣಿತವಾಗಿದ್ದರೂ ಇವುಗಳ ಗುರಿ ನಮ್ಮ ನಾಡಿನಲ್ಲಿ ಪರಮಾತ್ಮನ ಕರುಣಾ ಸಂಪಾದನೆಯೇ ಆಗಿರುವುದು. ಎಂತಲೇ ನಮ್ಮಲ್ಲಿಯ ಸಂಗೀತಕಲೆ, ನಾಟ್ಯಕಲೆ ಬೆಳೆದುದೆಂದರೆ ಭಗವದ್ ಭಕ್ತರ ಬಳಗದಲ್ಲಿಯೆ. ಇಂತಹ ಭಗವದ್ಭಕ್ತರನ್ನು ' ಭಾಗವತರು ' ಎಂದು ಕರೆಯುವುದು ನಮ್ಮ ದಕ್ಷಿಣ ದೇಶದಲ್ಲಿಯ ರೂಢಿ. ಆದುದರಿಂದಲೇ ಸಂಗೀತಗಾರರೂ ಕೀರ್ತನಕಾರರೂ ನಾಟ್ಯಕಾರರೂ ನಮ್ಮ ನಾಡಿನಲ್ಲಿ– ಒಂದು ಕಾಲದಲ್ಲಿ ' ಭಾಗವತರು ' ಎಂಬ ಹೆಸರಿನಿಂದಲೇ ಕರೆಯಿಸಿಕೊಳ್ಳುತ್ತಲಿದ್ದರು. ಇವರು ಆಡಿ ತೋರಿಸುತ್ತಿದ್ದ ಭಕ್ತಿರಸಪ್ರಧಾನ ಕಥಾಭಾಗಗಳುಳ್ಳ ನಾಟ್ಯಪ್ರಸಂಗಗಳೇ ' ಭಾಗವತರ ಆಟ ' ಎಂದು ಕರೆಯಿಸಿಕೊಂಡುವು ವೈಷ್ಣವಪುರಾಣ ಕಥೆಗಳಿಂದ ಪ್ರಾರಂಭವಾದ ಈ ಭಾಗವತರ ಆಟದ ಪರಂಪರೆಯು ಬರು ಬರುತ್ತ ಶೈವ ಪುರಾಣ ಕಥೆಗಳಿಗೂ ಇತರ ಪೌರಾಣಿಕ ವಿಭೂತಿಗಳ ಕಥೆಗಳಿಗೂ ಅವಕಾಶವನ್ನು ಕಲ್ಪಿಸಿಕೊಟ್ಟಿತು. ಅದರಂತೆಯೆ ಭಕ್ತಿರಸವನ್ನು ಸ್ಥಾಯಿಯಾಗಿ ಇಟ್ಟುಕೊಂಡ ಈ ಭಾಗವತರಾಟದ ಪರಂಪರೆಯು ಶೃಂಗಾರ, ವೀರ, ಕರುಣೆ, ಹಾಸ್ಯಗಳಿಗೂ ಸಾಕಷ್ಟು ಸ್ಥಾನವನ್ನು ಕೊಟ್ಟು ಲೌಕಿಕ ಕಲೆಯ ಸ್ವರೂಪಕ್ಕೆ ಇಳಿಯಿತು.

ಭಾಗವತರ ಆಟದ ಪ್ರದರ್ಶನದಲ್ಲಿ ಕನ್ನಡ ನಾಡಿನ ಪಶ್ಚಿಮ ಪ್ರದೇಶದವರು ಅನುಸರಿಸುವ ತಂತ್ರಕ್ಕೂ ಪೂರ್ವ ಪ್ರದೇಶದವರು ಅನುಸರಿಸುವ ತಂತ್ರಕ್ಕೂ ತುಂಬ ಅಂತರ–ವ್ಯತ್ಯಾಸಗಳು ಕಾಣುವುವು ಪಶ್ಚಿಮ ಪ್ರದೇಶದಲ್ಲಿ ಈ ನಾಟ್ಯ ಪ್ರಕಾರವು ' ಯಕ್ಷಗಾನ ' ಎಂದು ಕರೆಯಿಸಿಕೊಳ್ಳುತ್ತಿದ್ದು ಇದರಲ್ಲಿ ' ತಾಳಮದ್ದಳೆ ' 'ಬಯಲಾಟ ' ಎಂಬ ಎರಡು ಪ್ರದರ್ಶನ ರೀತಿಗಳಿವೆ. ಪೂರ್ವ ಪ್ರದೇಶದ ಜನರು ' ಮೂಡಲಪಾಯ ' ಎಂದು ಹೇಳುವರು. ಇವುಗಳನ್ನೇ ' ದೊಡ್ಡಾಟ ' ಎಂಬ ಹೆಸರಿನಿಂದಲೂ ಕರೆಯುವರು. ನಾನೀಗ ಹೇಳಬೇಕಾಗಿರುವುದು ಈ ದೊಡ್ಡಾಟ ಅಥವಾ ಮೂಡಲಪಾಯದ ಆಟಗಳಲ್ಲಿಯ ಗೀತಗಳನ್ನು ಕುರಿತು.

ಯಕ್ಷಗಾನದವರ ಬಯಲಾಟವೇ ಆಗಲಿ, ಮೂಡಲಪಾಯದವರ ದೊಡ್ಡಾಟವೇ ಆಗಲಿ, ಇವುಗಳಲ್ಲಿ ನಾಟ್ಯಕ್ಕೇ ಎಂದರೆ ಕುಣಿತಕ್ಕೇ ಹೆಚ್ಚು ಪ್ರಾಧಾನ್ಯವಿರುವುದು. ಇವರಿಗೆ ಗೀತಗಳು ಬೇಕಾಗುವುದು ಕುಣಿತದ ಗತಿವೈವಿಧ್ಯವನ್ನು ತೋರಿಸುವುದಕ್ಕಾಗಿ; ಕುಣಿತದಲ್ಲಿ ಒಂದು ಬಗೆಯ ಭಾವವನ್ನು ತುಂಬುವುದಕ್ಕಾಗಿ. ಮೂಡಲುಪಾಯದ ಆಟದಲ್ಲಿ ಬರುವ ಎಲ್ಲ ಪಾತ್ರಗಳೂ ಕುಣಿಯಲೇಬೇಕು. ರಂಗಪ್ರವೇಶದ ಎಲ್ಲ ಪಾತ್ರಗಳೂ ' ಲಾಲಿನು ಲಾಲಿನು ' ಎಂಬುದಾಗಿ ತಿಲ್ಲಾಣವನ್ನು ಹೇಳುತ್ತ, ಆದರ ಗತಿಯೊಂದಿಗೆ ಕುಣಿಯುತ್ತಲೇ ಪ್ರವೇಶಿಸುವುವು. ಇಲ್ಲಿ ಗೀತಕ್ಕಿಂತಲೂ ತಾಳದ ಗತಿಗೇ ಎಷ್ಟೊಂದು ಪ್ರಾಶಸ್ತ್ಯವಿರುವುದೆಂಬುದನ್ನು ಮೂಡಲಪಾಯದ ಆಟಗಳನ್ನು ನೋಡಿ ಮನಗಾಣಬಹುದು.

ಮೂಡಲಪಾಯದ ಆಟಗಳಲ್ಲಿ ಗಂಡು ಪಾತ್ರವೂ ಕುಣಿಯುವುದು; ಹೆಣ್ಣು ಪಾತ್ರವೂ ಕುಣಿಯುವುದು. ಶೃಂಗಾರ ವಿಲಾಸದಲ್ಲಿಯೂ ಕುಣಿಯುವುದು. ಕರುಣೆ ಕ್ರೋಧದ ಕಾಲದಲ್ಲಿಯೂ ಕುಣಿಯುವುದು. ವೀರ–ರೌದ್ರದ ಸಂದರ್ಭದಲ್ಲಿಯೂ ಕುಣಿಯುವುದು. ಗೀತಗಳು ಬೇಕಾಗುವುದು ಈ ಕುಣಿತದ ಪೋಷಣೆಗಾಗಿ ಮಾತ್ರ. ಕುಣಿತಕ್ಕೆ ಗೀತದ ರಾಗಕ್ಕಿಂತಲೂ ತಾಳವೇ ಹೆಚ್ಚು ಸಹಕಾರಿಯಾಗಿ ನಿಲ್ಲಬಲ್ಲದು. ಆದುದರಿಂದಲೇ ಮೂಡಲಪಾಯದ ಆಟದ ಗೀತಗಳಲ್ಲಿ ಈಗ ವೈವಿಧ್ಯವನ್ನು ಕಾಣುವಂತೆಯೆ ಇಲ್ಲ. ಗತಿ ವೈವಿಧ್ಯವನ್ನು ಮಾತ್ರ ಬೇಕಾದಷ್ಟು ನೋಡಬಹುದು. ಆಟಗಳುದ್ದಕ್ಕೂ ಮಂಗಲಾಚರಣ ಪದ್ಯದಿಂದ ಮೊದಲು ಮಾಡಿ ಕೊನೆಯ ವರೆಗೂ ಒಂದೇ ಒಂದು ಬಗೆಯ ರಾಗದ ದೇಶಿಯಲ್ಲಿ ಕೇಳುತ್ತಿರುವುದೇ ಹೆಚ್ಚಾಗಿ

ಕಾಣುವುದು. ಈಗ ಇಲ್ಲಿ ' ಶ್ರೀ ಗೌರೀ ವರ ಪುತ್ರಾ ಸತತಾ ಶುಭ ಚರಿತ್ರಾ ' ಎಂಬ ಹಾಡನ್ನು ನೋಡೋಣ.

ಛಂದಸ್ಸಿನ ದೃಷ್ಟಿಯಿಂದ ನೋಡಿದರೆ ಈ ಪದ್ಯ ೫ ಮಾತ್ರೆಗಳ ಗಣಗಳಿಂದ ಘಟಿತವಾದುದಾಗಿರುವುದು. ಆದರೆ ಅದನ್ನು ೮ ಮಾತ್ರೆಯ ಗತಿಯಲ್ಲಿ ಎಳೆದು ಹೇಳುವ ದೇಶೀ ಸಂಗೀತದ ಸೊಗಸನ್ನು ಈ ಸ್ತೋತ್ರ ಪದ್ಯದಲ್ಲಿ ಕಾಣಬಹುದು. ಹೀಗೆಯೆ ಶಾರದಾ ಸ್ತೋತ್ರ, ಹರಿ-ಹರ ಸ್ತೋತ್ರದ ಪ್ರಾರಂಭ ಪದ್ಯಗಳೂ ಮುಗಿದ ಮೇಲೆ ಆಟವು ಆರಂಭವಾಗುತ್ತದೆ. ಕಥಾ ಸಂದರ್ಭವನ್ನು ಪ್ರೇಕ್ಷಕರಿಗೆ ಪರಿಚಯ ಮಾಡಿಕೊಡುವ ಪ್ರಾಸ್ತಾವಿಕ ಭಾಮಿನೀ ಷಟ್ಪದಿಗಳನ್ನೂ—ಅವರು ಹೇಳುವ ಗತಿವೈಚಿತ್ರ್ಯದ ಮೂಲಕ ಸಾಮಾನ್ಯರಿಗೆ ಒಮ್ಮೆಲೆ ಗುರುತಿಸಲಿಕ್ಕೆ ಸಾಧ್ಯವಾಗಲಾರದು.

ಭಾಗವತರಾಟದಲ್ಲಿ ಬರುವ ಸಂದರ್ಭ ಗೀತಗಳು ದೀರ್ಘವಾಗಿ ಇರುವುದಿಲ್ಲ. ಒಂದು ಸಾಂಗತ್ಯದಷ್ಟೋ ಸಾಂಗತ್ಯದ ಅರ್ಧದಷ್ಟೋ ಇರುವುವು. ಹೆಚ್ಚಾಗಿ ಎಲ್ಲ ಗೀತಗಳೂ ಅಂಶಗಣಗಳಿಂದ ರಚಿತವಾದವುಗಳೇ ಇರುವುವು. ಸಂದರ್ಭದ ಅರ್ಥ ಪೋಷಣೆಗೆ ಗೀತವು ಮೊದಮೊದಲು ಸಹಕಾರಿಯಾಗಿದ್ದು ಮುಂದೆ ಮುಂದೆ ಕುಣಿತದ ಗತಿಯನ್ನೇ ಗುರಿಯಾಗಿಟ್ಟುಕೊಂಡು ವಿವಿಧ ತಿಲ್ಲಾಣ ತಾಳಗತಿಗಳಲ್ಲಿ ಸಾಗಿ ಮುಕ್ತಾಯಗೊಳ್ಳುವುದು. ಉದಾಹರಣೆಗಾಗಿ ಒಂದು ಪದ್ಯ ಸುಧನ್ವ ಕಾಳಗದಲ್ಲಿಯದು ಇದು. ಕಾಳಗಕ್ಕೆ ಹೋಗಲು ಅಪ್ಪಣೆ ಕೇಳುವುದಕ್ಕೆ ಸುಧನ್ವ ತಾಯಿಯ ಬಳಿಗೆ ಬಂದಾಗ ಅಕೆ ಹೀಗೆ ಹೇಳುವಳು—

" ಹೋಗೆಲ್ಲ ಮೋಹದ ಕಂದ ನಿನಗೆ ಜಯವಾಗಲಿ
ರಣದೊಳಗೆ |
ಗರುಡ ಅನೃತವನ್ನು ತರುವಾ ಸಮಯದಲ್ಲಿ ಹರಸಿದ
ವಿನತೆಯಂತೆ ||ಪಲ್ಲವಿ||

ಇಷ್ಟೆಲ್ಲ ವಿಲಂಬಿತ ಗತಿಯಲ್ಲಿ ಸಾಗುವುದು. ಆ ಮೇಲೆ ದ್ರುತ ಗತಿಯೊಂದಿಗೆ ಕುಣಿತ ಪ್ರಾರಂಭವಾಗುವುದು. ' ಹೋಗೆನ್ನ ಮೋಹದ ಕಂದ ನಿನಗೆ ಜಯವಾಗಲಿ ರಣದೊಳಗೆ' ವಿಲಂಬಿತ ಗತಿಯಲ್ಲಿ ಏಳು ಮಾತ್ರೆಯ ಅಷ್ಟತಾಳದಲ್ಲಿ ಪ್ರಾರಂಭವಾದ ಪದ್ಯ, ದ್ರುತಗತಿಯಲ್ಲಿ ನಾಲ್ಕು ಮಾತ್ರೆಯ ಏಕತಾಳದಲ್ಲಿ ಕುಣಿಯತೊಡಗುವುದು. ಸಂಪೂರ್ಣವಾಗಿ ಇದರ ಕಲ್ಪನೆ ಬರಬೇಕಾದರೆ ಆಟದ ಮೇಳದವರೇ ಈ ಬಗೆಯ ಪದ್ಯಗಳನ್ನು ಹೇಗೆ ಹೇಳುತ್ತಾರೆಂಬುದನ್ನು ನೋಡಿ.

ಹಾರ್ಮೋನಿಯಂ ಬರುವುದಕ್ಕಿಂತ ಮೊದಲಿನ ಕಾಲದಲ್ಲಿ, ಮುಂಡಲಪಾಯದ ಮೇಳದವರು ತಮ್ಮ ಗೀತಗಳೊಂದಿಗೆ ಆಧಾರ ಸ್ವರವನ್ನು ಅವಿರತವಾಗಿ ಮಿಡಿಯುವುದಕ್ಕಾಗಿ, ಸೋರೇಕಾಯಿಗಳಿಂದ ಮಾಡಿದ ಪುಂಗಿಯನ್ನು ಹಿನ್ನೆಲೆಯಲ್ಲಿ ಊದುತ್ತಲಿದ್ದರು. ಹಾಡಿನೊಂದಿಗೆ ಸಮಾನ ಸ್ವರಗಳನ್ನು ನುಡಿಸಲು ' ಮುಖವೇಣು ' ಎಂಬ ಹೆಸರಿನ ಸುಷಿರ ವಾದ್ಯವನ್ನೂ ಸಾರಂಗಿಯೆಂಬ ತಂತುವಾದ್ಯವನ್ನು ನುಡಿಸುತ್ತಿದ್ದರು. ಹಾರ್ಮೋನಿಯಂ ಬಂದಮೇಲೆ ಇತ್ತೀಚೆಗೆ ಅದೇ ಆಧಾರ ಸ್ವರವನ್ನು ಮಿಡಿಯುವುದು– ಹಾಡಿನೊಡನೆ ಸಮಾನ ಸ್ವರಗಳನ್ನೂ ನುಡಿಯುವುದು. ಆದರೆ ಮುಖವೇಣುವಿನ ಪರಂಪರೆಯನ್ನು ಇದುವರೆಗೂ ಕಾಯ್ದುಕೊಂಡು ಬಂದಿದ್ದಾರೆ. ಹಿಮ್ಮೇಳ ಮುಮ್ಮೇಳದವರ ಕೈಯಲ್ಲಿಯ ಕಂಚಿನ ಗುಂಡುದಾಳಗಳೂ ಮೃದಂಗ ವಾದ್ಯವೂ ಗೀತಗಳ ಗತಿಗೆ ಪರಿಪೋಷಕವಾಗಿ ಇರುವುವು. ಈ ಮೂಡಲಪಾಯದಾಟಗಳ ಮೃದಂಗವಾದನದ ರೀತಿಯೇ ಒಂದು ವೈಶಿಷ್ಟ್ಯದಿಂದ ಕೂಡಿದ್ದಾಗಿದುವುದು. ಪಾತ್ರಗಳಿಗೆ ತುಂಬ ಉತ್ಸಾಹಕಾರಿಯಾಗಿರುವುದಲ್ಲದೆ, ಪ್ರೇಕ್ಷಕರಲ್ಲಿಯೂ ಉತ್ಸಾಹದ ಹೊಳೆಯನ್ನು ಹರಿಸುವುದು.

ಈ ಆಟಗಳಲ್ಲಿ ಪಾತ್ರಧಾರಿಯು ತನ್ನ ಗೀತಗಳನ್ನು ಹಾಡಿಯೇ ತೀರಬೇಕೆಂಬ ನಿರ್ಬಂಧವೇನೂ ಇಲ್ಲ. ಭಾವಾಭಿನಯ– ನರ್ತನಗಳನ್ನಷ್ಟು ಆತ ವ್ಯವಸ್ಥಿತವಾಗಿ ನಿರ್ವಹಿಸಿದರೆ ಆಯಿತು. ಗೀತಗಳನ್ನು ಹೇಳುವ ಹೊಣೆಯೆಲ್ಲ ಮುಮ್ಮೇಳ ಹಿಮ್ಮೇಳದವರ ಮೇಲೆ ಇರುವುದು. ಆಟದ ಸೂತ್ರಧಾರಿಯಾದ ಭಾಗವತ ಮುಮ್ಮೇಳದಲ್ಲಿಯ ಮುಖ್ಯ ಗೀತಗಾಯಕ ಅವನಿಗೆ ಜೊತೆಗಾರರಾಗಿ ಇನ್ನಿಬ್ಬರು ಇರುವರು. ಹಿಮ್ಮೇಳದಲ್ಲಿಯೂ ಮೂರು ನಾಲ್ಕು ಜನರು ಇರುವರು. ಭಾಗವತನಿಗೆ ಎಲ್ಲ ಗೀತಗಳು ಮುಖಪಾಠವಾಗಿರಬೇಕು. ಇಷ್ಟೇ ಅಲ್ಲ; ಸಂದರ್ಭಾನುಗುಣವಾಗಿ ಗತಿಯೊಂದಿಗೆ ಹೊಸ ಮಾತುಗಳನ್ನು ಹೊಂದಿಸಿ ಹೇಳುವಷ್ಟು ಆಶು ಕವಿತ್ವವೂ ಅವನಿಗೆ ಸೊತ್ತಿರಬೇಕಾಗುವುದು. ಆದುದರಿಂದಲೇ ಮೂಡಲಪಾಯದ ಆಟಗಳಲ್ಲಿ ಭಾಗವಹಿಸಬೇಕಾಗುವ ಭಾಗವತನು ಬಹುಶ್ರುತನಾಗಿಯೇ ಇರಬೇಕಾಗುವುದು. ಪಾತ್ರಗಳು ವೈಯಕ್ತಿಕವಾಗಿ, ಹಾಡಬೇಕಾಗಿರುವ ಕೇವಲ ಪತಿ–ಪತ್ನಿಯರ ಸಂಭಾಷಣ ಗೀತಗಳನ್ನೂ ಭಾಗವತನೇ ಪ್ರಾರಂಭಿಸಿ ಬೆಳೆಯಿಸಿ ಮುಕ್ತಾಯಗೊಳಿಸಬೇಕು.

ಸಂಗೀತದ ದೃಷ್ಟಿಯಿಂದ ಇಲ್ಲಿಯ ಗೀತಗಳು ಒಂದೇ ಧಾಟಿಯವಾಗಿ ಕಂಡರೂ, ಜಾನಪದಗೀತ ದೃಷ್ಟಿಯಿಂದ ಇವು ವಿವಿಧ ಭಾವ ಪೋಷಕವಾಗಿ ಕಾಣುವವು. ಇದಕ್ಕೆ ಕಾರಣವೆಂದರೆ ಗೀತಗಾಯಕರ ಸಂದರ್ಭಾನುಸಾರಿಗಳಾದ ಸ್ವರಗಳ ಮಿಡಿತ. ಗೀತದ ಗತಿ ಚಲನವೃತ್ತಿ ಇದರಿಂದಲೇ ಈ ಮೂಡಲಪಾಯದ ಆಟಗಾರರು ಎಂಟೆಂಟು ಗಂಟೆಗಳ ವರೆಗೆ ಸಾವಿರಾರು ಜನ ರಸಿಕರನ್ನು ಮಂತ್ರಮುಗ್ಧರನ್ನಾಗಿ ಮಾಡಿ ಕುಳ್ಳಿರಿಸಿಬಿಟ್ಟಿರುತ್ತಾರೆ ಒಂದು ಕಾಲದಲ್ಲಿ ಕನ್ನಡ ಜನಪದ ಹೃದಯ–ಮನಗಳನ್ನು ಸಂಸ್ಕಾರಗೊಳಿಸುವುದಕ್ಕೆ ಪ್ರಮುಖ ಸಾಧನವಾಗಿತ್ತು. ಈ ಜಾನಪದ ನಾಟ್ಯಸಂಸ್ಥೆ ಹಳ್ಳಿ ಹಳ್ಳಿಗಳಲ್ಲಿಯೂ ಕಣ್ಣಿಗೆ ಬೀಳುತ್ತಲಿದ್ದವು. ಈ ಆಟದ ಮೇಳಗಳು, ಒಂದು ಕಾಲದಲ್ಲಿ ನಮ್ಮ ಜನಜಂಗುಳಿಗೆ ಜೀವನಪಾಠವನ್ನು ಕಲಿಸುವ ವಿದ್ಯಾಲಯಗಳಾಗಿ ಕಾರ್ಯಮಾಡಿದುವು.

ಯಾರಿಗದು ಗೊತ್ತು?

ಶ್ರೀ ಶಾಂತಿನಾಥ ಜೇಸಾಯಿ, ಬಿ. ಎ (ಆನರ್ಸ್)
ವಿಲ್ಸನ್ ಕಾಲೇಜ, ಮುಂಬಯಿ

●

ಏನಾಗಿದೆ ಏನಿಲ್ಲ!
ಈ ಜಗದ ಜಂಜಾಟ, ಹೊಯ್ದಾಟ, ಉರುಳಾಟ ಏನೆಲ್ಲ
ಯಾರಿಗದು ಗೊತ್ತು?
ಏನಾಗುವುದೊ ಎಂತಾಗುವುದೊ
ಈ ಜೀವನ ವಿಶಾದೇಶ, ಭವಿತವ್ಯದ ಮೀನ-ಮೇಷ
ಯಾರಿಗದು ಗೊತ್ತು?
ಜಗವೇಕೆ? ನೀನೇಕೆ? ನಾನೇಕೆ? ಅದು ಏಕೆ? ಇದು ಏಕೆ?
ಯಾರಿಗದು ಗೊತ್ತು?
ದೇವರಿಗೆ ಗೊತ್ತು! ದೇವರಿಗೆ ಗೊತ್ತು?
ದೇವರೆಂದರೆ ಏನು?
ಬರಿಯ ಶಬ್ದೋನ್ಮಾದ, ಬರಿಯ ಭಾವನೆ-ಬಾನು!
ಅವನಿದ್ದರೊಂದೆ ಇರದಿದ್ದರೊಂದೆ!
ಈ ಸಂಸಾರ-ಸಾರ ಅದೊಂದೆ:
ಶೂನ್ಯತೆಯ ಚರಮಗುರಿ....
ಜೀವನದ ದಾರಿ ಮೃತ್ಯುವಿನ ದಾರಿ; ಮೃತ್ಯುವಿನ ದಾರಿ
ಶೂನ್ಯತೆಗೆ ಒಯ್ಯುವದು; ಎಲ್ಲವನು ಶೂನ್ಯತೆಯೆ ನುಂಗುವದು.
ಶೂನ್ಯವೇ ಎಲ್ಲದರ ಪರಮಸತ್ಯ
ಉಳಿದುದೆಲ್ಲವು ಏನು ಬರಿ ಅನಿತ್ಯ!

ಅಹಮಸ್ಮಿ ಎಂಬುದೊ ದೇ ನನಗೆ ಗೊತ್ತು;
ನನ್ನ ಅಸ್ತಿತ್ವವೊಂದೇ ನನ್ನ ಸೊತ್ತು;
ಈ ಜಗದ ಹನಿ ನಾನು ಆ ಹನಿಯೇ ನನ್ನ ಜಗ!
ನನ್ನೊಡನೆ ಜೆಳೆಯುವುದು, ನನ್ನೊಡನೆ ಬೀಳುವದು, ನನ್ನೊಡನೆ
ಮುಳುಗುವದು ನನ್ನ ಜಗ

ನನ್ನೊಡನೆ ಮುಗಿಯುವದು ನನ್ನ ಯುಗ,
ನಾನಿದ್ದರೊಂದೆ, ಇರದಿದ್ದರೊಂದೆ.
ಒಂದಿಲ್ಲ ಒಂದು ದಿನ ಶೂನ್ಯದಲಿ ಕರಗುವದು ನನ್ನಿರವು.

ಇಂದು ನಾನಿರುವೆ, ನಾನಿರುವಿನಿಂದು, ನಾನಿರುವೆ, ನಾನಾರು?
ನಾನಿರುವೆನೆಂಬರಿವ ಉರಿಯಲ್ಲಿ ಸಂತತವೂ ಉರುಳುತ್ತ
ನತದಿರುವ ನಾನಾರು?

ನೀನಲ್ಲ ನಾನು
ನಿನ್ನಂತೆ ಕಂಡರೂ, ನಿನ್ನಂತೆ ನುಡಿದರೂ ನೀನಲ್ಲ ನಾನು.
ಕೈ-ಕೈಯು ಹಿಡಿದರೂ, ಮೈ-ಮೈಯು ಮಿಡಿದರೂ ನೀ ಬೇರೆ,
ನಾ ಬೇರೆ.

ಈ ಮನದ ನೂರಾರು ಆಲೆಗಳ ಕನಸುಗಳ ಜೀವಿಗಳು ನಾನಲ್ಲ
ಆಲೆಗಳೂ ಕನಸುಗಳೂ ಮನದೊಂದು ಲಹರ ದಿನಕೊಂದು ತರಹ
ನೂರಾರು ಜೀವಿಗಳ ಬ್ರಹ್ಮಾಂಡ ನಾನು!
ನೂರಾರು ಗಾಳಿಗಳ ಹಾರಾಟ-ಭೋರಾಟ ಸಂತತವ ಸಾಗಿರುವ
ದುರ್ದಮ್ಯಕಾನು
ಬೆಳೆದು ಬೆರೆಯುತ್ತಿರುವ ಜೀವಿಗಳ ಬೆಂಬತ್ತಿ ಹಿಡಿಯಲೆತ್ನಿಸುವೆ
ನನ್ನ ನಾ ಶೋಧಿಸಲು ನಡೆವೆ
ಕೈಕೊಸರಿ ಸರಿಯುವವು; ಮೈ ಬಿಟ್ಟು ಜಾರುವವು ಆ ಗಾಳಿ
ಜೀವಿಗಳು

ನಿಲ್ಲುವೆನು- ಮೈಮರೆತು ಕೈಜೆಲ್ಲಿ ದಿಗ್ಭ್ರಾಂತನಾಗಿ
ಪರದೇಶದಲಿ ನಿಂತ ಅಪರಿಚಿತನಂತೆ,
ನನ್ನಿರವಿನ ಬಗೆ, ನನ್ನಿರವಿನ ಗತಿ ನನ್ನಿರವಿನ ಪರಿಯನು
ನಾನೇ ಅರಿಯೆ.

ನನ್ನೆತ್ತರ ನನ್ನಾಳವನು ನಾ ನಿಲುಕಲರಿಯೆ
ಅದರೂ ಶೋಧಿಸುವೆ, ಅದರೂ ಯತ್ನಿಸುವೆ
ನೂರಾರು ಕಡೆಯಲ್ಲಿ ಬೇರಿಲ್ಲದಲೆವೆ.
ಅಗಾಧ ಕತ್ತಲೆಯೊಳಹುದೊಂದೆ ಜ್ಯೋತಿ, ಚೈತನ್ಯ ಜ್ಯೋತಿ
ಅದ ಹಿಡಿದು ಹುಡುಕುವೆನು ದಿಕ್ಕೆಲ್ಲ ಸುಳಿಯುವೆನು
ನನ್ನ ನಾ ಹುಡುಕುವೆನು!
ಈ ಉದ್ವೇಗ, ಜಿಜ್ಞಾಸೆ,
ಆತ್ಮದ ಹಿರಿ ಹಸಿವೆ
ಅದನೆಂತು ಹಿಂಗಿಸುವೆ?
ನಾನೋಡುವೆ, ನಾ ಬೆಳೆಯುವೆ, ನಾ ಹುಡುಕುವೆ, ನಾ ಘುಮುಕುವೆ
ಈ ಆತ್ಮದ ಹಿರಿ ಹಸಿವೆ, ಅದನೆಂತು ಹಿಂಗಿಸುವೆ?
ಕೊನೆಯಿರದ ಉದ್ವೇಗಕೆಲ್ಲಿಹುದು ಶಾಂತಿ? ಎಲ್ಲಿಹುದು ಅರಿವು?
ಯಾರಿಗದು ಗೊತ್ತು?
ಈ ಜೀವನವದೊಂದು ಓ ಕೊನೆಯಿರದ ಶೋಧ
ಆಮರಣ ಅಸ್ತಿಮಿತ ಶೋಧ!

ಬಂಗಾಳೀ ಪತ್ರಿಕೋದ್ಯಮವು ಬೆಳೆದು ಬಂದ ಬಗೆ

ಶ್ರೀ. ಎ. ಎಸ್. ರಾಮಕೃಷ್ಣ, ಸುರತ್ಕಲ್ಲು

ಭಾರತದಲ್ಲಿ ವೃತ್ತಪತ್ರಿಕೆಯು ಪರಿಚಯವಾದುದು ಬಂಗಾಳ ಪ್ರಾಂತದಲ್ಲಿಯೆ ಮೊತ್ತಮೊದಲು. ವೃತ್ತಪತ್ರಿಕೆಗಳು ಅಲ್ಲಿಯ ಜನತೆಯಲ್ಲಿ ತುಂಬ ಜಾಗೃತಿಯನ್ನು ಹುಟ್ಟಿಸಿದುವು. ಎಂತಲೇ ಬ್ರಿಟಿಷ್ ಸರಕಾರದ ಅವಕೃಪೆಗೆ ಪಾತ್ರರಾದ ಸಂಪಾದಕರು ಅಲ್ಲಿ ತುಂಬ ಜನರು!

ಬಂಗಾಳೀ ಪತ್ರಿಕೋದ್ಯಮದ ಇತಿಹಾಸವು ಕಳೆದ ಶತಮಾನದ ಆದಿಯಿಂದ ಪ್ರಾರಂಭವಾಗುತ್ತದೆ. ೧೮೧೮ ರಲ್ಲಿ ಪ್ರಕಟವಾದ 'ಸಮಾಚಾರ ದರ್ಪಣ' ಎಂಬ ಪತ್ರಿಕೆಯು ದೇಶಭಾಷಾಪತ್ರಿಕೆಗಳಲ್ಲೆಲ್ಲ ಮೊದಲನೆಯದೆಂದು ಹೇಳಲಾಗುತ್ತಿದೆ. 'ಈ ಪತ್ರಿಕೆಯು ರಾಜಕೀಯ ವಿಷಯಗಳಿಗೆ ಎಡೆಕೊಡಲಾಗದು; ಕೇವಲ ಮಾಸ-ಪತ್ರಿಕೆಯಾಗಿರಬೇಕು'—ಎಂಬ ನಿರ್ಬಂಧಕ್ಕೊಳಗಾಗಿ ಹೊರಟಿತು. ಮುಖ್ಯವಾಗಿ ಈ ಪತ್ರಿಕೆಯು ಉಪಯೋಗಿಸಲ್ಪಟ್ಟದ್ದೆಂದರೆ ಕ್ರೈಸ್ತ-ಮತ ಪ್ರಚಾರಕ್ಕಾಗಿ. ಆಗ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಹೇಸ್ಟಿಂಗ್ಸನು ಇದರಲ್ಲಿ ಅಭಿಮಾನ ತಾಳಿದ್ದನಂತೆ.

ಅನಂತರ ಹೊರಟ ಬಂಗಾಳೀ ಪತ್ರಿಕೆಯೆಂದರೆ 'ಬಂಗಾಳೀ ಗಜೆಟ್'—ಎಂಬ ಸಾಪ್ತಾಹಿಕ. ೧೮೨೧ ರಲ್ಲಿ 'ಕೌಮುದಿ' ಪತ್ರಿಕೆ ಪ್ರಕಟವಾಗತೊಡಗಿತು. ಸುಪ್ರಸಿದ್ಧ ಸಮಾಜಸುಧಾರಕರಾದ ರಾಜಾರಾಮ ಮೋಹನರಾಯರ ಅಭಿಪ್ರಾಯಗಳನ್ನು ಸಮರ್ಥಿಸು-ತ್ತಿದ್ದ ಈ ಪತ್ರಿಕೆಯು, ಹಿಂದೂ ಸಂಪ್ರದಾಯವಾದಿಗಳ ವೈರವನ್ನು ಕಟ್ಟಿಕೊಳ್ಳಬೇಕಾಯಿತಾದರೂ, ಅದು ಮಾಡಿದ ಕಾರ್ಯವು ಗಣನೀಯವಾದುದೇ. ೧೮೩೨ ರ ತನಕವೂ ಈ ಪತ್ರಿಕೆ ಪ್ರಕಟ-ವಾಗುತ್ತಿತ್ತು.

ಹರಿಶ್ಚಂದ್ರ ಮುಖರ್ಜಿಯವರೆಂದರೆ ದೇಶೀಯ ಪತ್ರಿಕೋದ್ಯೋಗದ ಮೂಲಪುರುಷರು. ಅಂತೆಯೇ ಹಲವರು ಸುಶಿಕ್ಷಿತ ಬಂಗಾಳಿಗಳು ಪತ್ರಿಕಾರಂಗಕ್ಕಿಳಿದು ಕೆಲಸ ಮಾಡಿದ್ದಾರೆ. ದೇಶದ ಬೇರೆ ಬೇರೆ ಭಾಗಗಳಲ್ಲಿ ಯಶಸ್ಸು ಗಳಿಸಿದ್ದಾರೆ. ಲಾಹೋರಿನ ಸುಪ್ರಸಿದ್ಧ 'ಟ್ರಿಬ್ಯೂನ್' ಪತ್ರಿಕೆಗೆ ಅರ್ಧ ಶತಮಾನ ಕಾಲ ಬಂಗಾಳಿಗಳೇ ಸಂಪಾದಕರಾಗಿದ್ದರು. ಉತ್ತರ ಪ್ರದೇಶ, ಬಿಹಾರ್, ಒರಿಸ್ಸಾ ಸಿಂಧ-ಗಳಲ್ಲಿಯೂ ಬಂಗಾಳೀ ಪತ್ರಿಕೋದ್ಯಮಿಗಳು ಹೆಸರು ಪಡೆದರು. ವಿ. ರಮಾನಂದ ಚಟರ್ಜಿಯವರಂತೂ ಭಾರತದಲ್ಲಿ ಮಾತ್ರವಲ್ಲದೆ ಹೊರನಾಡುಗಳಲ್ಲಿಯೂ ಅತ್ಯಂತ ಪ್ರಭಾವೀ ಪತ್ರಿಕೋದ್ಯಮಿಗಳೆಂದು ಸುಪ್ರಸಿದ್ಧರಾಗಿದ್ದರು.

೧೮೪೫ ರಲ್ಲಿ, ಕಲ್ಕತ್ತದಲ್ಲಿ ಭಾರತದ ಮೊತ್ತಮೊದಲನೆಯ ಕಾಲೇಜು ಸ್ಥಾಪಿತವಾಯಿತಷ್ಟೆ! ಆದರಲ್ಲಿ ಶಿಕ್ಷಣಹೊಂದಿ ಹೊರಟಿದ್ದ ಗಣ್ಯವ್ಯಕ್ತಿಗಳಲ್ಲಿ ಹಲವರು ತಂತಮ್ಮ ಅಭಿಪ್ರಾಯಮಂಡನೆಗಾಗಿ ತಮ್ಮದೇ ಪತ್ರಿಕೆಗಳನ್ನು ಹೊರಡಿಸಿದರು. ಭಾರತದ ಮೊದಲನೆಯ ಕಾದಂಬರೀಕಾರರೆನಿಸಿಕೊಳ್ಳುವ ಬಂಕಿಂಚಂದ್ರ ಚಟರ್ಜಿಯವರೂ ಕೂಡ ತಮ್ಮದೊಂದು ಪತ್ರಿಕೆಯನ್ನು ಹೊರಡಿಸಿದರಲ್ಲದೆ ಇತರ ಪತ್ರಿಕೆಗಳಿಗಾಗಿಯೂ ಬರೆದರು. ರವೀಂದ್ರರು 'ವಿಶ್ವಭಾರತಿ' ಯನ್ನು ನಡೆಸಿದರು. ಇತರ ಸುಪ್ರಸಿದ್ಧ ಪತ್ರಿಕೆಗಳಿಗೆ ಲೇಖನಗಳ-ನ್ನೊದಗಿಸಿದರು.

ಭಾರತೀಯರಲ್ಲಿ ಸಾಮಾಜಿಕ ಸುಧಾರಣೆಗಾಗಿ ಬಹುವಾಗಿ ಶ್ರಮಿಸಿದ ಈಶ್ವರಚಂದ್ರ ವಿದ್ಯಾಸಾಗರರು 'ಸೋಮಪ್ರಕಾಶ' ಪತ್ರಿಕೆಯನ್ನು ನಡೆಸಿದರು. ದೇಶೀಯ ಪತ್ರಿಕೋದ್ಯಮದ ಕತ್ತು ಕಿವುಚುವುದಕ್ಕಾಗಿ ಲಾರ್ಡ್ ಲಿಟ್ಟನ್ನನು ೧೮೭೮ ರಲ್ಲಿ ಒಂದು ಕಾಯದೆ-ಯನ್ನೆ ಹೊರಡಿಸಿದಾಗ, 'ಸೋಮಪ್ರಕಾಶ'ವು ಆದನ್ನು ಪ್ರತಿಭಟಿಸಿ ಪ್ರಕಟನೆಯನ್ನು ನಿಲ್ಲಿಸಿತು. ಶಿಶಿರಕುಮಾರ ಘೋಷರ 'ಅಮೃತ ಬಜಾರ' ಪತ್ರಿಕೆ ಮಾತ್ರ ಆ ಕಾಯದೆಯ ಇಕ್ಕುಳದಿಂದ ನುಣುಚಿ-ಕೊಂಡಿತು. ಇಂಗ್ಲಿಷ್ ವಾರಪತ್ರಿಕೆಯಾಗಿ ಹೊರಪಡಿಹೊಡಗಿತು. ಈ ಬದಲಾವಣೆಯಾದರೋ ಒಂದೇ ದಿನದಲ್ಲಿ ಕಾರ್ಯಗತವಾಯಿತು. ಅದೊಂದು ಅದ್ಭುತವಾದ ಸಾಹಸವೇ ಸರಿ.

'ಸೋಮಪ್ರಕಾಶ'ದ ಅನಂತರ ಹೊರಟ ಗಣನೀಯವಾದ ಪತ್ರಿಕೆ-ಯೆಂದರೆ 'ಸಾಧಾರಣೆ' ಅಕ್ಷಯಚಂದ್ರ ಸರ್ಕಾರರು ಹೊರಡಿಸಿದ ಈ ಪತ್ರಿಕೆಯಲ್ಲಿ, ಬಂಕಿಮಚಂದ್ರರಂಥ ಸುಪ್ರಸಿದ್ಧ ಸಾಹಿತಿಗಳ ಬರೆಹಗಳು ಬರುತ್ತಿದ್ದುವು. ಜೋಗೇಂದ್ರಚಂದ್ರ ಘೋಷರ 'ಮಂಗವಾಸಿ' ಅನಂತರ ಹೊರಟಿತು. ಸರಕಾರದ ದುರಾಗ್ರಹಕ್ಕೊಳಗಾಗಿ, ನ್ಯಾಯ ಸ್ಥಾನಕ್ಕೆಳೆಯಲ್ಪಟ್ಟ ಮೊದಲನೆಯ ಭಾರತೀಯ ಪತ್ರಿಕೆಯಿದು. ಇದು ೧೮೮೦ ರಲ್ಲಿ. ಲೋಕಮಾನ್ಯ ತಿಲಕರ 'ಕೇಸರಿ' ಪತ್ರಿಕೆಯ ಮೇಲಿನ ಮೊಕದ್ದಮೆ ಎರಡನೆಯದು. 'ಸಂಜೀವನಿ' 'ಹಿತವಾದಿ'

ಮೊದಲಾದುವುಗಳು ಆಗಿನಕಾಲದ ಇತರ ಪತ್ರಿಕೆಗಳು ಎರಡನೆಯದು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಧ್ಯೇಯಗಳ ಪ್ರಚಾರಕ್ಕಾಗಿ ಹೊರಟ ಪತ್ರಿಕೆ.

ಬಂಗಾಳಿಯಲ್ಲಿ ಮೊತ್ತ ಮೊದಲು ಕಾಲಾಣೆ ದಿನಪತ್ರಿಕೆಯನ್ನು ಹೊರಡಿಸಿದವರು ಈಶ್ವರಚಂದ್ರ ವಿದ್ಯಾಸಾಗರರು. ಆದರೆ ಆ ದೈನಿಕ ಬಹುಕಾಲ ಬಾಳಲಿಲ್ಲ ಆನಂತರ ಉಪಾಧ್ಯಾಯ ಬ್ರಾಹ್ಮೋ ಬಾಂಧವ ಎಂಬ ಸಂನ್ಯಾಸಿಗಳೊಬ್ಬರು 'ಸಂಧ್ಯಾ' ಎಂಬ ದೈನಿಕವನ್ನು ನಡೆಯಿಸತೊಡಗಿದರು. ಈ ಪತ್ರಿಕೆಯು ಪ್ರಗತಿಪರ ರಾಜಕೀಯ ದೃಷ್ಟಿಯುಳ್ಳದ್ದಾಗಿ ತುಂಬ ಪ್ರಭಾವಿಯೆನಿಸಿಕೊಂಡಿತು. ೧೯೦೭ ರಲ್ಲಿ ಇದರ ಮೇಲೆ ರಾಜದ್ರೋಹದ ಆಪಾದನೆಯನ್ನು ಹೇರಿ ನ್ಯಾಯಾಲಯಕ್ಕೆಳೆಯಲಾಯಿತು. ನ್ಯಾಯಸ್ಥಾನದಲ್ಲಿ ಪತ್ರಿಕೆಯ ಸಂಪಾದಕರು ಕೊಟ್ಟ ನಿರ್ಭೀತ ಹೇಳಿಕೆಯು ರೋಮಾಂಚಕಾರಕವಾದುದು. ಈ 'ಸಂಧ್ಯಾ' ಪತ್ರಿಕೆ ಬಂಗಾಳೀ ಪತ್ರಿಕೆಗಳಿಗೆ ಬಹುಮಟ್ಟಿಗೆ ಮಾರ್ಗದರ್ಶಿಯಾಯಿತು.

ಬಂಗಾಳೀ ಪತ್ರಿಕೋದ್ಯಮಕ್ಕೆ ಬ್ರಿಟಿಷ್ ಅಧಿಕಾರಿಗಳು ಕೊಟ್ಟ ಹೊಡೆತಗಳು ಅಷ್ಟಿಷ್ಟಲ್ಲ. ಪತ್ರಿಕೆಗಳ ಮೇಲೆ ಹಲವಾರು ಸಲ ಆಪಾದನೆಗಳನ್ನು ಹೇರಿ, ಅವುಗಳನ್ನು ಹತ್ತಿಕ್ಕಲು ಪ್ರಯತ್ನಿಸಿದರು. ಪತ್ರಿಕಾಸಂಪಾದಕರು ಹೇರಳ ಹಣವನ್ನು ದಂಡವಾಗಿ ತೆರಬೇಕಾಯಿತು. ಮುದ್ರಕರು ಕೂಡ ಜೈಲಿಗೆ ಹೋಗಬೇಕಾಯಿತು. ಅಚ್ಚು ಕೂಟಗಳು ಜಪ್ತಮಾಡಲ್ಪಟ್ಟುವು. ಆದರೆ ಅಧಿಕಾರಿಗಳ ದಬ್ಬಾಳಿಕೆ ಹೆಚ್ಚಾದಷ್ಟೂ ಬಂಗಾಳೀ ಪತ್ರಿಕೋದ್ಯಮವು ಮತ್ತೂ ಮತ್ತೂ ಸತ್ತ್ವಪೂರ್ಣವಾಗಿ ಬೆಳೆಯತೊಡಗಿತು. ಎಲ್ಲ ಒತ್ತಡಗಳನ್ನು ಸಹಿಸಿಕೊಂಡು ಬಂಗಾಳೀ ಪತ್ರಿಕೆಗಳು ಜನತೆಯಲ್ಲಿ ರಾಷ್ಟ್ರೀಯತಾ ಭಾವನೆಯನ್ನುಂಟುಮಾಡಲು ಹೆಣಗಿದುವು. 'ಯುಗಾಂತರ, ದಂಡಪತ್ರಿಕೆಗಳು ಸ್ವಾತಂತ್ರ್ಯ ಚಳವಳಿಯನ್ನು ಆ ಪ್ರದೇಶದ ಮೂಲೆಮೂಲೆಯಲ್ಲಿಯೂ ಕಾಳ್ಗಿಚ್ಚಿನಂತೆ ಹಬ್ಬಿಸಿದುವು. ಹೀಗೆ ಬಂಗಾಳಿ ಪತ್ರಿಕೆಗಳು ಜನತೆಯಲ್ಲಿ ನವಜಾಗೃತಿಯನ್ನುಂಟು ಮಾಡಿ ಆದರ ಗೌರವಗಳನ್ನು ಗಳಿಸಿದುವು. ಇಂದು ಸ್ವತಂತ್ರ ಭಾರತದಲ್ಲಿ ಪತ್ರಿಕೆಗಳ ಮೇಲೆ ಗುರುತರವಾದ ಹೊಣೆಗಾರಿಕೆಯಿದೆ. ಕೆಲವಾದರೂ ಪತ್ರಿಕೆಗಳು ಈ ಹೊಣೆಯನ್ನರಿತು ಮುಂದುವರಿಯುತ್ತಿವೆ.

ಮೊತ್ತಮೊದಲು ರೋಟರಿ ಯಂತ್ರವನ್ನು ಉಪಯೋಗಿಸಿದ ಬಂಗಾಳೀ ಪತ್ರಿಕೆ 'ಬಸುಮತಿ'. 'ಆನಂದ ಬಜಾರ್ ಪತ್ರಿಕೆ' 'ಯುಗಾಂತರ', 'ಸತ್ಯಯುಗ' ಮೊದಲಾದ ಪತ್ರಿಕೆಗಳು ಯಂತ್ರಗಳನ್ನು ಆನಂತರ ತರಿಸಿಕೊಂಡುವು. ಈ ಪತ್ರಿಕೆಗಳಿಗೆ ಬಹಳ ಪ್ರಸಾರಣೆಯುಳ್ಳ ಹಾಗೂ ವ್ಯಕ್ತಿತ್ವ ಪ್ರಭಾವವುಳ್ಳವುಗಳು

ಕ್ರೈಸ್ತ ಮಿಷನರಿಗಳ 'ಸಮಾಚಾರ ದರ್ಪಣ', ರಾಮಮೋಹನ ರಾಯರ 'ಕೌಮುದಿ' ಮೊದಲಾದ ಆಗಿನಕಾಲದ ಪತ್ರಿಕೆಗಳನ್ನು ಈಗಿನ ೮೧,೦೦೦ ದಷ್ಟು ಪ್ರಚಾರವಿರುವ ಬಂಗಾಳೀ ದೈನಿಕಗಳಿಗೆ ಹೋಲಿಸಿದರೆ, ಅಲ್ಲಿನ ಪತ್ರಿಕೋದ್ಯಮದಲ್ಲಿ ಒಂದು ಶತಮಾನ ಕಾಲದಲ್ಲುಂಟಾದ ಪ್ರಗತಿ ಅಮೋಘವಾಮದೆಂಬುದು ಮನವರಿಕೆಯಾಗುತ್ತದೆ. *

---

* South Indian Journalist ನಲ್ಲಿ ಹೇಮೇಂದ್ರಪ್ರಸಾದ ಘೋಷರು ಬರೆದ ಲೇಖನದ ಆಧಾರದಿಂದ. ಮೂಲದ ವಸ್ತುವನ್ನು ಉಪಯೋಗಿಸಲು ಪತ್ರಿಕೆಯ ಅಪ್ಪಣೆ ಪಡೆಯಲಾಗಿದೆ.

"ನೂತನ ಗಣಿತ"ಗಳ ತಿದ್ದಿದ ಹೊಸ ಆವೃತ್ತಿಗಳು

ಎಲ್ಲಕಡೆಗೂ ದೊರೆಯುವುವು

[೧ರಿಂದ ೬ ತರಗತಿಗಳ ವರೆಗೆ]

ಹಲವು ತಜ್ಞರ ನೆರವಿನಿಂದ ತಿದ್ದುಪಡೆಯನ್ನು ಕೈಕೊಂಡು, ಹೊಸ ಆವೃತ್ತಿಗಳನ್ನು ಹೊರಡಿಸಲಾಗಿದೆ. ಮನಶ್ಶಾಸ್ತ್ರ, ಗಣಿತಶಾಸ್ತ್ರ, ವ್ಯವಹಾರ ಇವುಗಳ ತ್ರಿವೇಣೀಸಂಗಮವನ್ನು ಇವುಗಳಲ್ಲಿ ಕಾಣಬಹುದು. ಅಲ್ಲದೆ ಗಣಿತದ ಎಲ್ಲ ವಿಭಾಗಗಳನ್ನೂ ಕೊಡಲಾಗಿದೆ.

ಎಲ್ಲ ಜಿಲ್ಲಾ ಸ್ಕೂ. ಬೋ. ಹಾಗು ಮ್ಯುನಸಿಪಲ್ ಸ್ಕೂ. ಬೋ. ಗಳೂ ಮನ್ನಣೆಯನ್ನಿತ್ತಿರುವುವು. ಎಂತಲೇ ನಿಮ್ಮ ಪ್ರತಿಗಳನ್ನು ಇಂದೇ ಸಂಗ್ರಹಿಸಿರಿ. ವ್ಯಾಪಾರಿಗಳಿಗೆ ಧಾರಾಳ ಕಮಿಶನ್

ಆಕಳವಾಡಿ ಬುಕ್‌ಡಿಪೊ, ಧಾರವಾಡ

ಕಾಲ್ತೊಡರಿದ ಬಳ್ಳಿ

(ಒಂದು ನೀಳ್ಗತೆ)

ಡಿ. ಬಿ. ಗಿ. ಶ್ರೀರಂಗಶರ್ಮ, ಅರಸೀಕೆರೆ

●

ಸಮಾಜಜೀವನ ವ್ಯವಹಾರನಿಯಮಗಳನ್ನು ಅನುಸರಿಸಿ ಬಾಳಬೇಕಾಗುವುದು. ವ್ಯಕ್ತಿಯ ಜೀವನ ಭಾವನೆಗಳ ಬಿನ್ನುಹತ್ತಿ ಹೊರಟಿರುವುದು. ಭಾವನೆ ಅವಿವೇಕದ್ದಲ್ಲ ವಾಗಿದ್ದರೂ ಸಾಮಾಜಿಕ ನಿಯಮಗಳಿಗೆ ಅದು ವಿರೋಧವಾಗಿದ್ದರೆ, ಅದೊಂದು ಕಠಿನ ಸಮಸ್ಯೆ-ಯಾಗಿ ವ್ಯಕ್ತಿಗಳನ್ನು ಕಾಡುವುದು.

●

ಗಡಿಯಾರ ನಾಲ್ಕು ಗಂಟೆ ಹೊಡೆಯುವುದಕ್ಕೂ ನಾನು ಕೃಷ್ಣನ ಮನೆಯ ಹೊಸ್ತಿಲನ್ನು ದಾಟಿ ಒಳಗೆ ಕಾಲಿಡುವುದಕ್ಕೂ ಸರಿ-ಹೋಯಿತು. ನಗುನಗುತ್ತ ಕೃಷ್ಣನೇ ಇದಿರಾದ.

"ಓ ಏನ್ರಾಜಾ? ಯಾವಾಗ ಬಂದೆ? ಮದುವೇಗೆ ಬಂದಿದ್ದೆಯೇನು? ಬಾ. ಬಾ. ಕುಳಿತುಕೋ!"

ಅವನ ವ್ಯಾಸಂಗದ ಕೋಣೆ ಅದು. ಇಬ್ಬರೂ ವಾದಿ-ಪ್ರತಿ-ವಾದಿಗಳಂತೆ ಇದಿರುಬದಿರಾಗಿ ಕುರ್ಚಿಗಳಲ್ಲಿ ಕುಳಿತಾಯಿತು.

"ಕಂಡ ತಕ್ಷಣ ಗುರುತು. ಹಿಡಿದೆಯಲ್ಲ! ಸಂತೋಷವಪ್ಪಾ."

"ಯಾವ ಸಂಪತ್ತಿನ ಮದ ಹೇಳು, ನಿಮ್ಮನ್ನೆಲ್ಲಾ ಮರೆ-ಯೋಕೆ?"

".....ಮತ್ತೆ? ಇದೇ ಊರಲ್ಲಿ ನಿನ್ನ 'ಜೀವಸ್ಯ' ಗೋಪಿಯ ಮದುವೆಯಾಗ್ತಾ ಇದೆ. ಯಾಕೆ ನಿನ್ನ ಮುಖವೇ ಇಲ್ಲ ಅಲ್ಲಿ? ನಾನೂ ತುಂಬಾ ವಿಚಾರಿಸಿದೆ. ಗೋಪಿ, 'ಕೃಷ್ಣ ಇಲ್ಲಿಗೆ ಬರುವ ಹಾಗಿಲ್ಲಾ' ಅಂದ. ಹೋಗಲಿ, ನಾನೇ ಭೇಟಿ ತಗೋಳ್ಕೋಣಾಂತ ಬಂದೆ. ಅವನ ತಮ್ಮನೇ ನಿನ್ನ ಮನೆ ತೋರಿಸಿ ಹೋದ....."

"ಹಾಗಾದರೆ ತರಾಟೆಗೆ ತಗೋಳ್ಕೋಕೇ ಬಂದಿದ್ದೀಯಾನ್ನು? ಗೋಪಿ ಏನು ಕಾರಣ ಹೇಳಿದ, ನಾನು ಅಲ್ಲಿಗೆ ಬಾರದೇ ಇರೋದಕ್ಕೆ?"

"ಏನೂ ಹೇಳಲಿಲ್ಲಪ್ಪ ಏನಾದ್ರೂ ಜಗಳ ಆಡಿದ್ರೇನೊ?"

"ಯಾರಾದ್ರೂ ನಕ್ಕಾರು! ಕೆತ್ತಾಡೋ ವಯಸ್ಸಿನಲ್ಲೇ ಆಡಲಿಲ್ಲ. ಈಗ ಬುದ್ಧಿ ಬಂದ ಮೇಲೆ ನಮ್ಮ ನಮ್ಮಲ್ಲಿ ಎಂಥಾ ಜಗಳಾನೊ? ಗೋಪಿ ಪ್ರತಿದಿನ ಇಲ್ಲಿ ಹಾಜರಿ ಕೊಟ್ಟೇ ಹೋಗ್ತಾನೆ .....ಅಲ್ಲದೆ ತನ್ನ ಮದುವೆಯ ಸಮಯದಲ್ಲಿ ಇದಿರಿಗಿಲ್ಲವಲ್ಲಾಂತ ಮನಸ್ಸು ಖಿನ್ನ ಮಾಡಿಕೊಂಡನೆ?"

"ಅಂತಹದೇನೂ ಕಾಣಲಿಲ್ಲ. 'ಯಾಕೆ ಬರಲಿಲ್ಲ ಅಯೋಗ್ಯ ತಡಿ ಕೇಳ್ತೀನಿ' ಅಂದೆ. 'ಅದೇ ಒಳ್ಳೆಯದು; ಹೋಗು ಕೇಳು. ನನಗೆ ಪುರಸತ್ತು ಇಲ್ಲ!' ಅಂದ. ಬಂದೆ.....ಸೊಗಸಾದ ಮನೆ ಬೇರೆ ಮಾಡಿದ್ದಿಯೆ! ಮದುವೆಗಿದುವೆ ಆಯ್ತೇನೊ? .. ...."

ಕೃಷ್ಣ ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ. ನಸುನಗುತ್ತ ಬಾಗಿಲ ವರೆಗೂ ಹೋಗಿ, ಯಾರನ್ನೋ ಕೂಗಿದ.

"ರತ್ನಾ ರತ್ನಾ...."

"ಏನೂ....?"

"ಏನ್ಮಾಡ್ತಾ ಇದ್ದೀಯ"

"ಕಾಫೀಗಿಟ್ಟಿದ್ದೇನೆ."

"ಹಾಗೇ ಇನ್ನೊಂದು ಲೋಟ ಜಾಸ್ತಿ...."

"ಗೊತ್ತು ಆಗಲೇ ಇಟ್ಟಾಯ್ತು ಇನ್ನು ಸ್ವಲ್ಪ ಹೊತ್ತು, ತಂದೆ."

ವಾಪಸ್ಸು ಬಂದು ಕುಳಿತ. ಅವನ ನಸುನಗೆ ತುಂಟನಗೆ-ಯಾಗಿತ್ತು ಮುಖದ ಮೇಲೆ. ನಾನು ವಾಗ್ಯುದ್ಧಕ್ಕೆ ಸಿದ್ಧನಾದೆ. ಶೂಕವಾದ ದನಿಯಲ್ಲಿ ಆಕ್ಷೇಪಿಸಿದೆ:

"ಕೃಷ್ಣಾ ಶುದ್ಧ 'ಜುಗ್ಗ' ಕಣೋ ನೀನು!"

"ಬರೀ ಕಾಫೀನೇ ಆಲ್ಲವೊ, ತಿಂಡೀನೂ ಬರುತ್ತೆ."

"ಅದಲ್ಲ! ನಿನಗೆ ಮದುವೆಯಾದ ಸುದ್ದಿಯೂ ತಿಳಿದಿರಲಿಲ್ಲ. ಒಂದು ಆಹ್ವಾನಪತ್ರ ಗೀಚಿ ಎಸೆದಿದ್ದರೆ, ಏನು ಗಂಟು ಸವೆದು ಹೊಗುತ್ತಿತ್ತು? ಇದ್ದೆರಡು ದಿನ ಹೆಣ್ಣಿನವರೇ ಅನ್ನಾ ಹಾಕ್ತಾ ಇದ್ದರು...."

"ನೋಡು ಗುಂಡ, ನನ್ನ ಮದುವೇ ವಿಷಯ, ಗೋಪಿಯ ಮದುವೆಗೆ—ನಿನ್ನ ಮದುವೆಗೆ ಬರದೇ ಹೋದ ಕಾರಣ—ಎಲ್ಲಾ ನಿಧಾನವಾಗಿ ಹೇಳ್ತೀನೆ. ನಿನ್ನ ಯೋಗ-ಕ್ಷೇಮ ಏನು ಹೇಳು? ಹೆಂಡತಿ ಮನೆಗೆ ಬಂದಿದ್ದಾಳೊ? ಪ್ರಪಂಚ ತುಂಬಾ ಹಸಿರು, ಸುಖ ಆನಂದ...."

"ಅನುಭವಿ ನೀನು, ಹೊಸದಾಗಿ ನಿನಗೇನು ಹೇಳಲಿ? ಸದ್ಯಕ್ಕೆ ಅರಸೀಕರೆಯಲ್ಲಿ ವರ್ಗತನ...."

ಅಷ್ಟರಲ್ಲಿ ಕೃಷ್ಣನ 'ರತ್ನ' ತಟ್ಟೆಯಲ್ಲಿ ಖಾರದ ಅವಲಕ್ಕಿ ಕೋಡುಬಳೆ ತಂದು, ಅಳುಕುತ್ತ ಮೇಜಿನ ಮೇಲಿರಿಸಿದಳು. ಆಕೆಯನ್ನು ಒಂದೇ ಚಣದಲ್ಲಿ — ಆಗಮನ ನಿರ್ಗಮನದ ಅಂತರದಲ್ಲಿ — ಅವ ಲೋಕಿಸಿದೆ.

"ಬಹಳ ಅತುರದಲ್ಲಿ ಮದುವೆಯಾದಂತೆ ಕಾಣುತ್ತ. ಆದಕ್ಕೇ ನಮಗೆಲ್ಲಾ ಆಹ್ವಾನವಿಲ್ಲ!"

"ಯಾಕೊ?....ಹೇಗೆ?"

"ಬಹುಶಃ ಹುಡುಗಿಯ ಮುಖ ನೋಡಿದೀಯ. Love at first sight! ತಕ್ಷಣ ಒಪ್ಪಿದೀಯ. ತಡಮಾಡಿದರೆ ಕೈ ತಪ್ಪಿ ಹೋದೀತೂಂತ ತಾಳೀ ಬಿಗಿದು ಬಿಟ್ಟಿದ್ದೀಯ!...."

"ಅರ್ಥವಾಗಲಿಲ್ಲ!"

"ಲಕ್ಷಣವಾಗಿದೆ ಹುಡುಗಿ. ಅಲ್ಲದೆ ಇಂಗಿತಜ್ಞೆ. ನಾನೇನೋ ಕಾಫೀ ಸಮಯಕ್ಕೇ ಸರಿಯಾಗಿ ವಕ್ಕರಿಸಿದೆ. ತಪ್ಪಿದ್ದಲ್ಲಾಂತ ನಿನ್ನ ಆದೇಶಕ್ಕೆ ಮೊದಲೇ ಒಂದು ಲೋಟಾ ಜಾಸ್ತಿ ಕಾಫೀಗಿಟ್ಟಿರಲಿಲ್ಲವೆ! ನಿನಗೆ ತಕ್ಕ ಹೆಂಡತಿ ನೋಡು!"

ನನ್ನ ವಿಚಿತ್ರ ತರ್ಕಸರಣಿ ಅವನಿಗೆ ನಗು ಬರಿಸಿತು. ಹಿಂದೆಯೆ ಮುಖ ಮುದುಡಿಕೊಂಡಿತು. ಎಷ್ಟೇ ಗೆಳೆತನವಿರಲಿ, ಹೀಗೆ ಅಂತರಂಗದ — ಹೆಂಡತಿಯ — ವಿಷಯದಲ್ಲಿ ಸಲುಗೆವಹಿಸಿ ಪ್ರಸ್ತಾಪ ಮಾಡಿದರೆ, ಸ್ವಲ್ಪ ಅಸಹನೆಯಾಗುವುದು ಸಹಜವೆ. ಬಾಯಿಗೆ ಹಾಕಿದ ಕೋಡುಬಳೆ ಚೂರನ್ನು ಹಾಗೇ ದವಡೆಗೊತ್ತಲಿಸಿಕೊಂಡು ಕೇಳಿದೆ:

"ಯಾಕೋ, ನಿನ್ನ ಹೆಂಡ್ತೀ ವಿಷಯ ಮಾತಾಡ್ದೇ ಅಂತ ಅಸಮಾಧಾನವೇನೊ?"

"ಛೇ. ಛೇ....ಅದೇನೂ ಇಲ್ಲ! ನಾನು ಆಗಲೇ ಹೇಳಲಿಲ್ಲವೆ–ಇದಕ್ಕೆಲ್ಲಾ ಕಾರಣ ನಿಧಾನವಾಗಿ ಹೇಳ್ತೀನೆಂತ...."

ತಿಂಡಿ ತಿನ್ನುವಾಗ—ಆದೂ ನನ್ನ ಕೃಷ್ಣನ ಮಧ್ಯೆ ದಾಕ್ಷಿಣ್ಯದ ಅಡ್ಡಿಯೆ ಇರದಾಗ—ಮಾತಾಡಲು ಪುರಸತ್ತು ಇರುತ್ತದೆಯೆ! ಕೃಷ್ಣ ನಾನು ತಿನ್ನುವುದನ್ನೇ ನೋಡುತ್ತ, ಯಾವುದೋ ಚಿಂತೆಯಲ್ಲಿ ಮುಳುಗಿದಂತೆ ಕುಳಿತ. ತಿಂಡಿಯ ಮುಕ್ಕಾಲು ಭಾಗ ನಿಸ್ಸಂಕೋಚವಾಗಿ ಉದರಕ್ಕೆ ಸೇರಿತು. ಅದರಿಂದಾಗಿ ನಾಲಗೆ ನೀರು ಕೇಳಿತು. ನಾನು ಬಾಯಿ ಬಿಟ್ಟು ಕೇಳುವ ಹೊತ್ತಿಗೇ, ರತ್ನ ಎರಡು ಲೋಟದಲ್ಲಿ ನೀರು ತಂದಿರಿಸಿದಳು. ಕುಡಿಯಲು ಲೋಟಾ ಕೈಗೆತ್ತಿಕೊಂಡೆ. ಅಲ್ಲಿಯವರೆಗೆ ಮೌನಿಯಾಗಿದ್ದ ಕೃಷ್ಣ, ಒತ್ತಾಯವಾಗಿ ಮುಖ ಅರಳಿಸಿ ತಟಕ್ಕನೆ ಕೇಳಿದ:

"ನಮ್ಮ ಮನೆಯ—ನಾವು ಮುಟ್ಟಿದ—ನೀರು ಕುಡಿಯುತ್ತೀ ಏನೊ?"

ನಾನು ಪೆಚ್ಚಾದೆ! ಲೋಟವನ್ನು ತುಟಿಯ ಹತ್ತಿರ ಹಾಗೇ ಹಿಡಿದು, ಗಂಡ-ಹೆಂಡಿರ ಮುಖಗಳನ್ನು ನೋಡಿದೆ. ರತ್ನ ನೀರನ್ನು ತಂದಿರಿಸಿದವಳು, ಕೃಷ್ಣನ ಪ್ರಶ್ನೆಯನ್ನು ಕೇಳಿ ಅಲ್ಲೇ ನಿಂತಿದ್ದಳು. ಅವಳ ಮುಖದ ನಿನುಗು ಮಂಕಾಯಿತು. ನನ್ನ ಉತ್ತರ ಯಾವ ಬಗೆಯದೋ ಎಂಬ ಆತಂಕ ಅವಳ ಕಣ್ಣಲ್ಲಿ!

ಹಾಗಾದರೆ ಕೃಷ್ಣ ತಮಾಷೆಗೆ ಕೇಳುತ್ತಿಲ್ಲ!!.. ....??

ಯಾವುದೋ ಕಾರಣವಿದೆ. ಮುಚ್ಚಿ ಮುಚ್ಚಿ ಮಾತಾಡುತ್ತಿದ್ದಾನೆ. ಆ ಕಾರಣದ ಎಳೆಯೂ ಸಿಕ್ಕಲಿಲ್ಲವಲ್ಲ! ಈ ಯೋಚನೆಯಲ್ಲಿದ್ದ ನನ್ನ ಆಶ್ಚರ್ಯಚಕಿತ ವಕ್ರಭಂಗಿ, ನನಗೂ ಕೃಷ್ಣನಿಗೂ ಕೂಡಿಯೆ ನಗು ಬರಿಸಿತು. ನಗೆಯ ಮಧ್ಯೆದಲ್ಲಿಯೆ ಕೇಳಿದೆ:

"ಇದಕ್ಕೇನೂ ವಿಷ ಬೆರಸಿಲ್ಲ ತಾನೆ?"

"ಅಂತಹದೇನೂ ಇಲ್ಲ ಮಹಾರಾಯಾ! ನಾವು ಮುಟ್ಟಿದ ನೀರು! ಮಹಾ ಬ್ರಾಹ್ಮಣ ನೀನು! ಮಡುಮನೆಯ ಮನೆಯಲ್ಲಿ ಎಲ್ಲರೊಡನೆ ಊಟ-ತಿಂಡಿ ಮಾಡಬೇಕಾದವನು. ಕುಡಿತೀಯಾಂತ .....!"

ಖಸಗ್ರಸ್ತ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ | ನೀಲ | ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳಿಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ | ಜೀವಿನಿ | ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ

ಅಜೀರ್ಣ ವಿಕಾರಗಳಿಗೆ | ಪಂಚವಟಿ | ರಾಮಬಾಣ

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ.

"ಓ!" ಎನ್ನುವನೆ ಗುಟಗುಟನೆ ಗಂಟಲಿಗೆ ಅಷ್ಟೂ ನೀರನ್ನು ಸುರಿದುಕೊಂಡೆ.

"ತಿಂಡಿ ತಿನ್ನುವುದಕ್ಕೆ ಮುಂಚೆ ಯಾಕೆ ಎಚ್ಚರಿಸಲಿಲ್ಲ. ಗಂಟಲ್ಕ ಆರಿದಾಗ ಈ ಪ್ರಶ್ನೆ ಹಾಕಿ, ಚಿತ್ರಹಿಂಸೆಕೊಟ್ಟು ತಮಾಷೆ ನೋಡೋಣಾಂತೀಯ? ಬಿಕ್ಕಳಿಕೆ ನೋಡೋಕೆ ಆಶೆಯೋ?.....ಕಾಫಿ ಆಗಿದ್ದರೆ ತರ್ತೀರಾಮ್ಮ?"

ರತ್ನ ತುಂಬಾ ಸಮಾಧಾನಗೊಂಡು ಒಳಗೆ ಹೋದಳು. ನಾನು ಯಾವ ಶಂಕೆಯೂ ಇಲ್ಲದೆ ಹಾಗೆ ಮಾಡಿದ್ದು ಅವಳಿಗೆ ತೃಪ್ತಿಯನ್ನುಂಟುಮಾಡಿತು. ಮುಖ ಗೆಲುವಾಯಿತು. ಈ ಭಾವ ಪ್ರದರ್ಶನಗಳನ್ನು ಕಂಡ ನನ್ನ ಸೂಕ್ಷ್ಮ ದೃಷ್ಟಿಗೆ—ಏನೋ ಕಾರಣವಿದೆ ಎನ್ನಿಸಿತು. ಯೋಚಿಸುವಂತೆಯೂ ಇರಲಿಲ್ಲ. ರತ್ನ ಕಾಫಿ ತಂದಳು. ಲೋಟಾ ಕೈಗೆತ್ತಿಕೊಂಡು ಒಂದು ಗುಟುಕು ಸೊರ್ ಎಂದು ಹೀರಿ ಆರಂಭಿಸಿದೆ:

".....ಮಾತೆಂತ ಕಾಣುತ್ತೆ. ನಾನು ಎಂತೆಂತಹದ ಮನೆಯಲ್ಲಿ ಏನೇನು ತಿಂದಿದ್ದೆ—ಏನೇನು ಕುಡಿದಿದ್ದೆ—ಅನ್ನೋ ವಿಷಯ! ತಪ್ಪು ತಿಳಿಕೋ ಬೇಡನ್ಮ್ಮ. ಇದು ನಲವತ್ತೆರಡನೆಯ ಇಸವಿಯ ವಿಷಯ. ಇವನೂ ನಾನೂ ತುಂಬಾ ಸ್ನೇಹಿತರು. ನಾನು ದೇಶಸೇನೇಂತ ಕಾಲೇಜಿಗೆ ಕೈಮುಗಿದೆ. ಆಗ ಹೊಲೆಯರ ಮನೆ ನೀರು

ಕುಡಿದಿದ್ದೇನೆ. ಒಕ್ಕಲಿಗರ ಮನೆಯ ರೊಟ್ಟಿ ಕಡಿದಿದ್ದೇನೆ. ಸಾಬ್ರ ಮನೆಯ 'ಚಾ' ಹೀರಿದ್ದೇನೆ. ನೀವೇನೂ ಹೊಲೆಯರೂ ಅಲ್ಲ. ಒಕ್ಕಲಿಗರೂ ಅಲ್ಲ! ಸಾಬ್ರಂತೂ ಅಲ್ಲವೇ ಅಲ್ಲ...."

"ಅಲ್ಲ ಅಲ್ಲ. ಅವರಾರೂ ಅಲ್ಲ! ಈಗ ಬ್ರಾಹ್ಮಣರೂ ಅಲ್ಲ. ನಮ್ಮದು ಯಾವ ಜಾತೀಂತ? ...."

ಯಾವ ಜಾತಿ?..... ? ಯಾವ ಜಾತಿ!!

"ದೇವ್ರೇ ಗತಿ! ತಲೆ ಕೆಟ್ಟಿದೆಯೇನಯ್ಯಾ ನಿನಗೆ? ಕೋಪ ಮಾಡಿಕೊಳ್ಳಬೇಡೀಮ್ಮಾ, ನಾನು ತುಸ ಒರಟು.....ಅಥವಾ ಯಾವುದಾದರೂ 'ಇಸಂ' (Ism) ಹುಟ್ಟು ಹಾಕಿ ಅನುಷ್ಠಾನಕ್ಕೆ ತರುತ್ತಾ ಇದೀಯೊ? ನಿಮ್ಮಪ್ಪ ಈ ಪ್ರಾಂತಕ್ಕೆಲ್ಲಾ ಪ್ರಸಿದ್ಧರಾದ ಕರ್ಮಠ ಬ್ರಾಹ್ಮಣರು. ನನ್ನದು ಯಾವ ಜಾತೀಂತ ನನ್ನೇ ಕೇಳ್ತೀಯ? ಹೇಗೂ ನಿನಗೆ ಹೈಸ್ಕೂಲು ಉಪಾಧ್ಯಾಯಗಿರಿ ಸಿಕ್ಕಿ ಖಾಯಂ ಆಗಿದೆಯಂತೆ. ಬ್ರಾಹ್ಮಣಾಂತ ಅಂದುಕೊಳ್ಳೋಕೆ ಇನ್ನೇಕೆ ಹೆದರಿಕೆ?"

"ಕಾಫಿ ...ಆರುತ್ತೆ ಕುಡಿ. ಎಲ್ಲಾ ವಿಷಯಾನೂ ಹೇಳ್ತೀನೆ. ಹಾಗೇ ವಾಕಿಂಗ್ ಹೋಗೋಣ. ಬರ್ತೀಯಾ ರತ್ನಾ?"

"ಈ ದಿನ ನೀವೇ ಹೋಗಿ ಬನ್ನಿ. ಮಗು ಇನ್ನೂ ಎದ್ದಿಲ್ಲ!"

"ಹೌದು, ಅಂದಹಾಗೆ ಈ ದಿನ ನೀನು ಬೇಡ. ಇವನಿಗೆ ನಮ್ಮ ಪುರಾಣಶ್ರವಣ ಮಾಡಿಸಬೇಕಾಗಿದೆ. ಮುಖ ತೊಳಕೋತೀಯೇನಯ್ಯಾ?"

"ಯಾಕೆ ಜಿಡ್ಡು ಜಿನುಗಾಗಿ ಇದೆಯೆ ಮುಖದಲ್ಲಿ? ಏನೂ ಬೇಡ.....ಈ....ಈ....ಮಗು ಮಲಗಿದೆ ಅಂದ್ರಲ್ಲ. ಯಾವುದು?"

"ನಮ್ಮದೆ. ಗಂಡು! ಶಶೀಂತ ಹೆಸರು. ಮಲಗಿದ್ದಾನೆ. ಆ ಮೇಲೆ ನೋಡೋವಿಯಂತೆ. ನಾನು ಬಚ್ಚಲು ಮನೆಗೆ ಹೋಗಿ ಬರ್ತೇನೆ."

ಕೃಷ್ಣ, ಅವನ ಹಿಂದೆ ರತ್ನ—ಒಳಗೆ ಹೋದರು. ಅವರ ಬೆನ್ನು ಮರೆಯಾಗುತ್ತಲೇ ಆ ಕೋಣೆಯ 'ಸರ್ವೇ'ಗೆ ಮೊದಲು ಮಾಡಿದೆ. ಅದರ ಓರಣ ನೋಡಿ, 'ಅವರ ಸಂಸಾರ ಅಚ್ಚುಕಟ್ಟಾಗಿದೆ' ಎನ್ನಿಸಿತು. ಇದಿರು ಗೋಡೆಯಲ್ಲಿ ಜವರಿಬ್ಬರ ಭಾವಚಿತ್ರ ತೂಗುಬಿದ್ದಿತ್ತು. ಕುತೂಹಲಿಯಾಗಿ ಎದ್ದು ಅದರ ಇದಿರಿಗೆ ನಿಂತೆ. ರತ್ನ ಇದಿರಿಗೆ ಬಂದಾಗ, ಅಪರಿಚಯಸ್ಥನಾದ್ದರಿಂದ ಪೂರ್ಣವಾಗಿ ಸೌಂದರ್ಯ ಮಾಪಕ ದೃಷ್ಟಿಯಿಂದ ನೋಡಲಾಗಿರಲಿಲ್ಲ. ಈಗೇನು? ಅದು ಮೂಕ ಭಾವಚಿತ್ರ; ದಿಟ್ಟಿಸಿಯೆ ನೋಡಿದೆ!

ರತ್ನ ತುಂಬಾ ರೂಪವತಿ. ಈ ವಿಷಯದಲ್ಲಿ ಕೃಷ್ಣ ಪುಣ್ಯಶಾಲಿ. ರತ್ನನೂ ಅಷ್ಟೆ. ಕೃಷ್ಣನೂ ಸುಂದರನಾದ ಆಕರ್ಷಕ ವ್ಯಕ್ತಿ. ಈ ಜೋಡಿ ಆಪರೂಪಗಳಲ್ಲೊಂದು—ಎಂಬುದರಲ್ಲಿ ಅತಿಶಯವಿರಲಿಲ್ಲ. ಕೃಷ್ಣನ ರೂಪವಂತೂ ಕಾಲೇಜಿನ ದಿನಗಳಿಂದ ಪ್ರಸಿದ್ಧವಾದುದು.

ಆಗ ನನಗೆ, ಅವನ ಸ್ನೇಹಿತರಾಗಿದ್ದ ನಾವು ಹುಚ್ಚು-ಹುಚ್ಚು ಅಡುತ್ತಿದ್ದುದು ನೆನಪಾಯಿತು.

ಕೃಷ್ಣ ಕಾಲೇಜಿನ 'ವೀನಸ್'. ಪ್ರತಿದಿನ ಕಾಲೇಜಿಗೆ ಹೋಗುವಾಗ—ಬರುವಾಗ, ಮಧ್ಯೆ-ಮಧ್ಯೆ ದಾರಿಯಲ್ಲಿ ತಿರುಗುವಾಗ, ಸಭೆ,-ಕೂಟಗಳು ಸೇರಿದಾಗ, ನಾವು ನಾಲ್ಕೈದು ಮುಂದಿ ಯಾವಾಗಲೂ ಕೃಷ್ಣನ 'ರೂಪವಲಯ'ದಲ್ಲಿಯೆ ತಪ್ಪದೆ ಇರುತ್ತಿದ್ದೆವು. ಹೂವಿನಿಂದ ನಾರು ಸ್ವರ್ಗಕ್ಕೇರುವ ಸಾಮತಿ ನಮ್ಮದು. ಕಾಲೇಜು ತುಂಬಾ ಕೃಷ್ಣನ (Personality) ಸುಂದರಾಕಾರ ಪ್ರಭಾವಕಾರಿ ಯಾಡುದು. ಈ ಪ್ರಸಿದ್ಧ ಮನ್ಮಥನ ಮೇಲೆ ಅನೇಕ ರತಿಯರ ಕಣ್ಣು ಇರುವುದು ಸಹಜ ತಾನೆ? ಸಮಯ ಸಿಕ್ಕಾಗ, ಅವರ ತಂಡವೊ, ಇಲ್ಲವೆ ಒಬ್ಬೊಬ್ಬರೋ—ಅವನ ಕಡೆಗೆ ಆಶೆಯ ನೇತ್ರವನ್ನೋ ಕೃಪಾಕಟಾಕ್ಷವನ್ನೋ ಬೀರುತ್ತಿದ್ದುದೂ ವಾಡಿಕೆ. ಸಾಮಾನ್ಯ. ಈ 'ದೃಷ್ಟಿಜಾತ್ರೆ'ಯಲ್ಲಿ ನಾವೂ ಪಾಲುಗಾರರಾಗಿ ಕಣ್ಣಿಗೆ ಹಬ್ಬವಾಗಿಸುತ್ತಿದ್ದೆವು. 'ಕೃಷ್ಣನಿದ್ದಲ್ಲಿ ನಾವು, ನಾವಿದ್ದಲ್ಲಿ ಕೃಷ್ಣ—' ಎಂಬುದು ಎಲ್ಲರಿಗೂ ಮನದಟ್ಟಾಗಿತ್ತು. ಹೆಂಗಳೆಯರ ಕಡೆಯಿಂದ ಹರಿದುಬರುವ ದಿಟ್ಟಿಜೇನಿನಲ್ಲಿ ನಮ್ಮ ಬಯಕೆಯ ನಾಲಗೆಯನ್ನು ಹೊರಳಾಡಿಸಿ ಚಿಪ್ಪರಿಸುವ ಯೋಗ—ಭೋಗ (?) ನಮಗೆ ಕೃಷ್ಣನ ಸಾನ್ನಿಧ್ಯದಿಂದ ಸಾಧ್ಯವಾಗಿತ್ತು.

ಅಂತಹ ಕೃಷ್ಣನಿಗೆ ತಕ್ಕ ರಾಧೆ ಈ ರತ್ನ!

ರಾಧೆ?.....ರಾಧೆಯೆ! ಹೌದು ರೂಪಿನಲ್ಲಿ....ನಡೆಯಲ್ಲಿ....

ಜೀವನದಲ್ಲಿ ಪಡೆದ ತೃಪ್ತಿಯಿಂದ ಅವರ ರೂಪಿಗೆ ವೈರಗು ಬಂದಿತ್ತು. ನೋಡುತ್ತಲೇ ಇದ್ದೆ,

"ಆಯ್ತೇನಯ್ಯಾ ಪುಸ್ತಕ ನೋಡಿ?"

ಬೆಚ್ಚಿಬಿದ್ದೆ. ನಾಚಿಕೆಯಾಯಿತು. ಆದರೂ ಗತ್ತು ಬಿತ್ತಲಾಗುತ್ತದೆಯೆ!

"ನೋಡಿದೆ. ಏನೂ ಅರ್ಥವಾಗಲಿಲ್ಲ."

"ವಿವರಿಸುತ್ತೇನೆ. ಹೊರಡೋಣವೆ!"

ಕಾಲಿಗೆ ಚಪ್ಪಲಿ ತಗುಲಿಸಿಕೊಳ್ಳುತ್ತಿರುವಾಗ, ರತ್ನ ಸೂಚ್ಯವಾಗಿ ರಾತ್ರಿಯ ಊಟಕ್ಕೆ ಆಹ್ವಾನಿಸಿದಳು:

"ರಾತ್ರಿ ಇಬ್ಬರಿಗೂ, ಇಲ್ಲೇ ಊಟಕ್ಕೆ ಅಡಿಗೆ ಮಾಡುತ್ತೇನೆ."

ಕೃಷ್ಣ ನನ್ನ ಮುಖ ನೋಡಿದ; ನಾನು, ಏನು ಮಾಡಲಿ ಎಂದು ಯೋಚಿಸಿದೆ.

"ಮನುವೆಯ ಮನೆಯ ಭರ್ಜರಿ ಔತಣ ಬಿಟ್ಟು ನಿನ್ನ ಕದನ್ನಕ್ಕೆ ಬರ್ತಾನೇನೇ ಅವನು?" ಅಂದ ಕೃಷ್ಣ.

ಅವನು ಹಾಗೆನ್ನದಿದ್ದರೆ— ನಾನು ಮದುವೆಯ ಮನೆಗೇ ಹೋಗುತ್ತೆನೆ – ಅನ್ನುತ್ತಿದ್ದೆನೇನೊ?

"ರಾತ್ರಿ ಇಲ್ಲಿಗೇ ಬರ್ತಿನಮ್ಮ. ರಾತ್ರಿಯ ಊಟ ಲಘುವಾಗಿದ್ದಷ್ಟೂ ಆರೋಗ್ಯ ಅಲ್ಲವೆ?"

ಬೆನ್ನಿನ ಮೇಲೆ ಬಲವಾಗಿ ಗುದ್ದಿದ ಕೃಷ್ಣ. ನಗುತ್ತ,

"ತುಂಬಾ ಘಾಟಿ ಕಣೊ ನೀನು!" ಅಂದ.

ಗುದ್ದಿನ ರಭಸಕ್ಕೆ ಕಾಲು ಮುಂದೆ ಹೆಜ್ಜೆ ಹಾಕಿತು. ರತ್ನ ಕಿಸಕ್ಕನೆ ನಕ್ಕ ಸದ್ದೂ ಕೇಳಿಸಿತು. ಅವನಿಂದ ಅಂತಹ ಗುದ್ದನ್ನು ತಿಂದೂ ತಿರುಗಿ ಬೀಳದ್ದರಿಂದ ನಾವಿಬ್ಬರೂ ಆತ್ಮೀಯರೆಂದು ಅವಳು

ಅರಿತಂತೆ ಕಾಣುತ್ತದೆ—ಎಂದುಕೊಂಡು, ಬೆನ್ನು ಸವರಿಕೊಳುತ್ತ ಕೃಷ್ಣನ ಜೊತೆ ಜೊತೆ ಕಾಲುಹಾಕಲು ಸುಮಾರಾಗಿ ಓಡಿದೆ.

ಮಾನವಮಿಯ ದಿಬ್ಬದ ಮೇಲೆ ಹೋಗಿ ಕುಳಿತು, ಎತ್ತರವಾದ ಆ ಸ್ಥಳದಿಂದ ಸುತ್ತಲೂ ನೋಡಿದೆವು. ದಿಟ್ಟ, ಓಡವ ತನಕ ಹಸಿರು ನೋಟ! ಅಲ್ಲಿ ದೂರದಲ್ಲಿ- ಬಾನ್ದೊರೆ ಭೂರನೆ ಯನ್ನು ತಬ್ಬುವಲ್ಲಿ- ಆ ಏಕಾಂತಕ್ಕೆ ತಕ್ಕ ತೆರೆಯಾಗಿ ಬೆಟ್ಟವೊಂದು ಭೂಮಿಯಿಂದ ಪಟಕ್ಕನೆ ಎದ್ದು ನಿಂತಿತ್ತು. ಅದರ ಮೇಲೆ ಪಡುಮಣ ದಿಕ್ಕಂಚಿನಿಂದ ವಿಸುನಿಯ ವರ್ಣದ ಹುಡಿ ಸುರಿಯುತ್ತಿತ್ತು! ಇದೇನೆಂದು ಪರಿಕಿಸಲೋ ಏನೋ, ತಂಗಾಳಿ ಅತ್ತ ಕಡೆಗೆ ನುಗ್ಗುವ ರಭಸದಲ್ಲಿ ನಮ್ಮ ಮುಖಕ್ಕೆ ತಾಕುತ್ತಿತ್ತು! ಆ ಸುನೋಹರವಾದ ಸಂಜೆಯ ಸೊಬಗು ಕಣ್ಣೆದುರಿಗಿರುವಾಗ ಮಾತು- ನೀರಸವಾದ ಮಾತು- ಬೇಕಾದೀತೆ?

ಅವರೆ ನಾನು ಈ ಪ್ರಕೃತಿಯ ಸೌಂದರ್ಯ ಸವಿಯಲು ಬಂದವನಲ್ಲ. ಕೃಷ್ಣ ಕರೆತಂದವನಲ್ಲ—ನನಗೆ ಅವನ ಪುರಾಣ ಬೇಕಿತ್ತು.

"ತುಂಬಾ ಹೊಟ್ಟೆಯುರಿ, ಕೃಷ್ಣ ನಿನ್ನ ಕಂಡರೆ!" ಅಂದೆ

"ಹಾಗೇ,—ಎಲ್ಲಾ ಕೆಡುಕೋ ಹಾಗೇ ನಮ್ಮ ಜೀವನ ಇರಲೀಂತ ಪದಪು ಮಾರಾಯ!" ಅವ ಜಪಸು.

"ಈಗೇನು ಕೊಡತೆ? ನಮ್ಮ ಹರಕೆ ಇನ್ನ ಏನು ಹೊಸಿಕೊಡಜೇಕಾಗಿದೆ? ಪುನೆಯಲ್ಲಿ 'ಇಚ್ಛೆಯನರಿತ ಸತಿ.' ಬರೀ ಸತಿಯೆ? ರೂಪವತಿ! ಸುಂದರವಾದ ಮನೇಗೆ ಸುದಾದೀಪ ಹಚ್ಚಿದ ಹಾಗೆ ಒಂದು ಮಗು; ಗಂಡು! ಏನಗೆ ಪ್ರಿಯವಾದ ಉದ್ಯೋಗ. ಮನೆಯಿಂದ ಹೊರಗೆ ಬಂದರೆ ಈ ಸಿರಿ! ಮನೆಯೆಲ್ಲೂ ಹಬ್ಬ! ಬಯಲಲ್ಲೂ ಹಬ್ಬ! ದೇವರು ಈ ಸೌಖ್ಯವನ್ನು ನಿನ್ನ ಸಾನ್ನಿಧ್ಯದಲ್ಲಿ ನೆಲೆಗೊಳಿಸಿದ್ದಾನೇಂತ ಕಾಣುತ್ತೆ. ...."

"ಏನು ಚಮತ್ಕಾರವಾಗಿ, ವ್ಯಂಗ್ಯವಾಗಿ ಮಾತಾಡೋದು ಕಲಿತಿದ್ದೀಯೊ?.....ನಿನಗೇನು ಅಂತಹ ಸಂಕಟ?"

"ನನಗೆ?.... ಸದ್ಯ ನನಗೆ ಯಾವ ಕೊರತೆ ಕೊರಗೂ ಇಲ್ಲ. ನನ್ನ ಕಥೆ ಈಗ ಮುಖ್ಯವಲ್ಲ. ನೀನು ವಿವರಿಸುತ್ತೀನೆ ಅಂದೆಯಲ್ಲ! ವಿವರಿಸು. ಕೇಳಬೇಕು ಅನ್ನೋ ಕುತೂಹಲ ಕುದುರಿಸಿ ಹೀಗೆ ಸತಾಯಿಸಬಾರದು."

"ನೀನು ನನ್ನ ತಮ್ಮ ರಾಮು ಮುಂಜೀಗೆ ಬಂದಿದ್ದಾಗ, ನಿನಗೊಬ್ಬರ ಪರಿಚಯ ಮಾಡಿಸಿದ್ದೆ, ನೆನಪಿದೆಯೆ!...."

"ಇಲ್ಲದೇ ಉಂಟೆ? ಬೇಂದ್ರೆಯವರ 'ಹಕ್ಕಿ ಹಾರುತಿದೆ ನೋಡಿದಿರಾ?' ಮೊದಲು ಬಾರಿ ಕೇಳಿದ್ದು ಅವರ ಬಾಯಿಂದಲೆ ಅಲ್ಲವೆ?"

"Good. ಅವರೂ ನಾನೂ ತುಂಬಾ ಸ್ನೇಹಿತರು ಅನ್ನೋ ವಿಷಯ ಗೊತ್ತಲ್ಲ?"

"ಹೌದು. ನಿಜವಾಗಿ ಅವರೆಲ್ಲಿ ಕೃಷ್ಣಾ ಈಗ?.... ..."

"ಎಲ್ಲಾ ನನ್ನ ಪುರಾಣದಲ್ಲೆ ಬರುತ್ತೆ. ಕೇಳು. ನೀನು ಮಹಾರಾಜ ಕಾಲೇಜು ಬಿಟ್ಟ ಮೇಲೆ, ನಾನೇನೊ ಅಲ್ಲೇ ಬಂದು ಪರಿಸಿದೆನಲ್ಲ! ಆಗ ಇವರು ಕಾಲೇಜು ಸೇರಿದರು. ತಂದೆ ತಾಯಿ ಯಾರೂ ಇರಲಿಲ್ಲ. ತುಂಬ ಆಸ್ತಿವಂತರು. ಕಾಲೇಜು ಹಾಸ್ಟೆಲಿನಲ್ಲಿ ನಮ್ಮಿಬ್ಬರ ಸ್ನೇಹ ಕುದುರಿತು. ಎರಡನೆಯ ದಿನ ನಮ್ಮಿಬ್ಬರ ಹೃದಯ ಸ್ನೇಹದ ಎಳೆಯಿಂದ ಒಂದಾದುವು. ಒಂದಾದುವು ಅನ್ನುವುದರ ಸರಿಯಾದ ಅರ್ಥ ನಿನಗಾಗದು ಗುಂಡು! 'ಒಡಲೆರಡು ಅಸುವೊಂದೆನೆ' ಅನನಲ್ಲ ಕನ್ನಡದ ಕವಿ. ಅದರ ಸಾದೃಶ್ಯ ನಮ್ಮ ಗೆಳೆತನ. ಆ ಕೆಳೆ ಕಾಲೇಜಿಗೇ ಮುಗಿಯಲಿಲ್ಲ. ಇಬ್ಬರಿಗೂ ಬಿ. ಎ. ಆದನೇಲೆ, ನಾವು ಹಿಡಿಯಬೇಕಾದ ಹಾದಿಕುರಿತು ಯೋಚಿಸಿದೆವು. ಅವನ ಅಭಿಪ್ರಾಯವೆಂದರೆ ನನ್ನದೂ ಹೌದು. ಅವನ ತೀರ್ಮಾನಕ್ಕೆ ನಾನೂ ಒಪ್ಪಿಕೊಂಡೆ. ಅಲ್ಲದೆ, ಈಗಿನ ಸರಕಾರವ ಘೋರಣೆಯಿಂದ ನಿಕ್ಕೆಲ್ಲಾ ಮಾರ್ಗವೂ ಬಂದಾಗಿತ್ತು. ಇಬ್ಬರೂ ಒಂದೇ ದಿನ ಈ ಊರಿನ ಪುರಪ್ರೌಢಶಾಲೆಯಲ್ಲಿ ಉಪಾಧ್ಯಾಯರಾಗಿ ಸೇರಿದೆವು. ನಮಗೆ ನಮ್ಮಂತಹರಿಗೆ 'ದೇಶಸೇವೆ, ತನ್ಮೂಲಕ ಈಶಸೇವೆ' ಮಾಡಲು, ಇರುವ ದಾರಿಯೆಂದರೆ ಉಪಾಧ್ಯಾಯವೃತ್ತಿಯೊಂದೇ ಎಂದು ಅನನ ನಂಬಿಕೆ. ಅದರ ಸತ್ಯತೆಯ ಅರಿವು ನನಗೂ ಈಗ ಗೊತ್ತಾಗಿದೆ.

ಹೀಗೆ ಮಾಡುವುದರಲ್ಲಿ ಇನ್ನೊಂದು ಕಾರಣವೂ ಇತ್ತು. ನಮ್ಮ ಗೆಳೆತನ ಕವಿದು ಹೋಗಬಾರದೆಂಬುದೆ. ಚಿರಂತನವಾಗಿ ಬೆಳೆದು ಬಂದಿದೆಯೆಂಬುತಿದ್ದ ಈ ಬಾಂಧವ್ಯವನ್ನು ಉಳಿಸಿಕೊಳ್ಳಲು ಇದರಿಂದ ಸಾಧ್ಯವಾಯಿತು. ಶಾಲೆಯ ವಿದ್ಯಾರ್ಥಿಗಳಲ್ಲಿ, ಸಹೋದ್ಯೋಗಿಗಳ ವರ್ತುಳದಲ್ಲಿ, ಸಾರ್ವಜನಿಕರ ಅಭಿಪ್ರಾಯದಲ್ಲಿ, ಏಕರೀತಿಯಾದ ಗೌರವ ವಿಶ್ವಾಸಗಳನ್ನು ಗಳಿಸಿಕೊಂಡೆವು. ತ್ರಿಶ್ಚಿನೀಕುಮಾರರೆಂದು ನಮ್ಮ ಜೋಡಿ ಪ್ರಸಿದ್ಧಿಯಾಯಿತು. ಊಟ, ಉಡಿಗೆ, ನೋಟ, ಅಭಿರುಚಿ, ಅಭಿಪ್ರಾಯ, ನಡತೆ ಎಲ್ಲದರಲ್ಲೂ ನಾವು ಅಭಿನ್ನರು. ಅದು ಯಾವ ದಿವ್ಯಬಂಧವೊ—ಯಾವ ಅಮೃತಯೋಗವೊ ನಮ್ಮಿಬ್ಬರ ಬಾಳನ್ನೂ ಒಂದುಗೂಡಿಸಿ ಹರಸಿತ್ತು. ಒಂದೇ ಒಂದು ಸಾರಿ. ಯಾದರೂ ನಮ್ಮಿಬ್ಬರ ಮಧ್ಯೆ, ಅತಿ ಪರಿಚಯದಿಂದ ಸಹಜವಾಗಿ ಏಳುವ ವಿರಸ, ಬೇಸರು ಎಂದೂ ಉಂಟಾಗಲಿಲ್ಲ.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಉಪಾಧ್ಯಾಯರಾಗಿ ಎರಡು ವರ್ಷಗಳು ಸಂದು ಹೋದುವು. ಮೂರನೆಯ ವರ್ಷ ಶಾಲೆಯು ಬಾಗಿಲು ತೆರೆದಾಗ, ಮೊದಲನೆಯ ಶರಗತಿಗೊಬ್ಬ ವಿದ್ಯಾರ್ಥಿನಿ ಸೇರಿದಳು. ನಮ್ಮಿಬ್ಬರ ಗಮನವನ್ನೂ ಸೆಳೆದಳು. ನನಗಾಗಲಿ ನನ್ನ ಗೆಳೆಯನಿಗಾಗಲಿ ಅಕ್ಕರೆಯ ಅಕ್ಕ-ತಂಗೆಯರಾರೂ ಇರಲಿಲ್ಲ. ಸಲುಗೆಯಾಗಿ ಸೋದರಿಯ ಪ್ರೀತಿಯನ್ನಾಡಿಸುವ ಹತ್ತಿರದ ಸ್ತ್ರೀಬಂಧುಗಳೂ ಇರಲಿಲ್ಲ. ಇಬ್ಬರೂ ಚಿಕ್ಕ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡು ಬೆಳೆದವರು. ಹೆಂಗುಸರೆಂದರೆ ನಮಗೆ ತುಂಬಾ ಗೌರವ. ನನ್ನ ಗೆಳೆಯ ನನಗಿಂತ ಈ ವಿಷಯದಲ್ಲಿ ಅತಿ ನಿಷ್ಠುರ. ಒನ್ಮೊಮ್ಮೆ ಕಾಲೇಜಿನಲ್ಲಿದ್ದಾಗ, ನಾನು ವಯೋಧರ್ಮಕ್ಕನುಗುಣವಾಗಿಯೊ, ಕಾಲೇಜಿನ ಕುಲಿಮೆಯಿಂದಾಗಿಯೊ, ಜೆಲ್ಲಾಟವಾಡಲು ಹವಣಿಸಿದರೆ, ಅವನು ತನ್ನ ಪ್ರೀತಿಯ ಅಂಕುಶದಿಂದ ಬಲವಾದ ಅಡ್ಡಿ ಹಾಕುತ್ತಿದ್ದ. ಉಪಾಧ್ಯಾಯರಾದ ಮೇಲಂತೂ -ಅದು ದೂಷ್ಯವಾದುದು. ವ್ಯಕ್ತಿಯ ಘನತೆ, ಪಾವಿತ್ರ್ಯಗಳಿಗೆ ಧಕ್ಕೆ ತರುತ್ತದೆ—ಎಂದು ತಿಳಿದು ಎಚ್ಚರಿಕೆ ವಹಿಸಿದ್ದೆವು. ಹೀಗಾಗಿ ನಾವು ಹೆಣ್ಣು—ಪ್ರೇಮ—ಪ್ರಣಯಗಳೆ ಬಯವ್ವನಸಹಜ ಹುಚ್ಚು ಆವೇಶಕ್ಕೆ ಬಲಿಯಾಗಿರಲಿಲ್ಲ. ಇಂತಹ ನಮ್ಮ ಆಸಕ್ತಿಯನ್ನು ಸೆಳೆದ ಆ ವಿದ್ಯಾರ್ಥಿನಿ ಹುಂಜಾ ಜಾಣೆ. ಓದಿನಲ್ಲಿ, ನಡೆಯಲ್ಲಿ, ನುಡಿಯಲ್ಲಿ ನಮ್ಮ ಸುಸಂಸ್ಕೃತ ಹೆಣ್ತನವೇ ಮೂರ್ತಿ-ಗೆತ್ತಂತೆ. ಅಂತಹ ಬೇರೊಬ್ಬ ವಿದ್ಯಾರ್ಥಿನಿಯನ್ನು ನಮ್ಮ ಶಾಲೆಯ ದಿನಗಳಲ್ಲೂ ಕಂಡವರಲ್ಲ. ನಮ್ಮ ಶಾಲೆಗೆ ಕೀರ್ತಿ ತರುವುದಕ್ಕಾಗಿಯೆ, ಹೆತ್ತವರಿಗೆ ಹೆಸರು ತರುವುದಕ್ಕಾಗಿಯೆ ಆಕೆ ಹುಟ್ಟಿ—ಇಲ್ಲಿ ಸೇರಿದಂತೆ ಆಗಿತ್ತು. ಸಹಜವಾದ ಈ ಧೀಶಕ್ತಿಗೆ ನಾವೂ ಒತ್ತಾಸೆಯಾದೆವು. ಆದರೂ ಬೆಂಕೆಯು ಕೂಡ ಸರಸ. ಪುರಾಣ-ಇತಿಹಾಸ-ವರ್ತಮಾನಗಳ ಅಪಾರ ಅನುಭವವಿದ್ದ ನಾವು ಎಚ್ಚರ ತಪ್ಪಲಾಗುತ್ತದೆಯೆ! ದಿನ ಕಳೆದಂತೆ ಆಕೆಯಲ್ಲಿ ಹುದುಗಿದ್ದ ಮಿಕ್ಕ ಶಕ್ತಿಯ ಪರಿಚಯವೂ ನಮಗಾಯಿತು. ಆಕೆ ಪುಸ್ತಕಸ್ತ್ರಿಯೆ. ಹಾಡುವುದರಲ್ಲಿ ಮುಲೆನಾದ ಕೋಕಿಲೆ! ಈ ಹುಡುಗಿಯ ಕೈಹಿಡಿಯುವವನು—ಅದಂತೂ ಖಚಿತ-ಪಾರ್ಯ—ಧನ್ಯ ಅನ್ನಿಸಿತು ನಮಗೊಮ್ಮೆ!

ಆಕೆಯ ಪರೋಕ್ಷ ಆಕೆಯ ವಿಷಯ ಮಾತಾಡಿದವರಲ್ಲ ನಾವು. ಒಂದು ದಿನ, ಇದೇ ಹೊತ್ತು. ಇದೇ ದಿಬ್ಬಕ್ಕೆ ಪದ್ಮಶಿಯಂತೆ ನಾವು ಬಂದು ಕುಳಿತಾಗ, ಪ್ರಾಸಂಗಿಕವಾಗಿ ಆ ಹುಡುಗಿಯ ವಿಷಯವೆ ನಮ್ಮ ಮಾತಿಗೆ ವಸ್ತುವಾಗಬೇಕೆ? ಪ್ರಾರಂಭಿಸಿದವನು ನನ್ನ ಗೆಳೆಯನೆ:

"ನೋಡು ಕೃಷ್ಣ, ಆ ಹುಡುಗಿಯನ್ನು ನಮ್ಮಿಬ್ಬರಲ್ಲೊಬ್ಬರು ಮದುವೆಯಾಗಬೇಕು. ನಮ್ಮಲ್ಲಿ ಯಾರೊಬ್ಬರಿಗೆ ಸರಿಯಾದ ಹೆಣ್ಣು ಅವಳು. ಆಕೆಯ ಒಲವು, ನಡೆನುಡಿ, ಅಭಿರುಚಿ ಎಲ್ಲಾ ನಮಗೆ ಗೊತ್ತಾಗಿದೆ. ಇವುಗಳೊಂದೂ ತಿಳಿಯದ ಅಪರಿಚಯಳ್ಳನೊಬ್ಬನ ಕೈ ಹಿಡಿದಳೆಂದು ಭಾವಿಸು; ಅವಳು ಸುಖವಾಗಿ ಬಾಳುವ ನಂಬಿಕೆಯೇನು? ಈಕೆಯು ಯೋಗ್ಯತೆ ಅವಳಿಗೆ ಗೊತ್ತಾದೀತೆ? ನಾವು ಮುನ್ನೆಚ್ಚರಿಕೆ ವಹಿಸಬೇಕು ಎನ್ನಿಸಿದೆ ನನಗೆ. ಏನೆನ್ನುತ್ತೀಯೆ?

ಅವನ ಅನಿರೀಕ್ಷಿತ ಸಲಹೆಯನ್ನು ಕೇಳಿ ಅವಾಕ್ಕಾದೆ. ಅವನದು ಯಾಥಾಗಲೂ ಹೀಗೆಯೆ ದೂರವಾದ ಆಲೋಚನೆ ಉತ್ತಮವಾದ ನಿರ್ಧಾರ. ಆದರೆ ನಾನು-ಮರೆತೆ-ನಾವು ಎಂದೂ ಈ ದಿಕ್ಕಿನಲ್ಲಿ ಆಲೋಚಿಸಿದವರಲ್ಲ. ಅವನ ಎದೆಯಲ್ಲಿ ಈ ಬಯಕೆ ಬಹುದಿನದ ಹಿಂದೆಯೆ ಉದಯಿಸಿತ್ತು. ಎಂಬುದರ ಸುಳಿವೂ ನನಗೆ ಸಿಕ್ಕಿರಲಿಲ್ಲ. ಪೂರ್ವಸಿದ್ಧತೆಯಿಲ್ಲದೆ ಹಠಾತ್ತನೆ ಅವನು ಹೀಗೆ ಕೇಳಿದ್ದಾನೆ ಎಂದು ನಂಬುವುದಕ್ಕೂ ಇಲ್ಲ. ಮಾತೇನೋ ವಿಚಾರಯೋಗ್ಯವಾಗಿತ್ತು. ಅಂತಹ ಉತ್ತಮ ಜೀವನಗಳು ಮದುವೆಯ ಅಗ್ನಿಕುಂಡದಲ್ಲಿ ಭಸ್ಮವಾಗುವುದೂ—ಪಾಗಾಗಲು ಕಂಡೂ ಕಂಡೂ ಬಿಡುವುದೂ ಸರಿಯಲ್ಲವೆಂಬುದು ಯಾರೂ ಒಪ್ಪುವ ಸಂಗತಿ. ಅಂತೂ ಮದುವೆಯೇ ಆಗದೆ ದೇಶಸೇವೆಗೆ ನಿಂತವರಲ್ಲಿ—ಹಾಗೆ ವಿವಾಹಮಂಟಪವೇರುವುದೇ ಆದಲ್ಲಿ, ಇಂತಹ ಯೋಗ್ಯ ಕನ್ಯೆಯು ಪಾಣಿಗ್ರಹಣಕ್ಕೆ ನಾವೇ ಮುಂದಾಗುವುದು ಏನು ತಪ್ಪು?

"ನೋಡೋಣ. ಆ ಕಾಲ ಬರಲಿ!"

ನಾವು ಅಂದಿಗೆ ಮಾತು ಮುಗಿಸಿದೆ ಆದರೆ ನನ್ನ ಗೆಳೆಯ ಪೂರಾ ಆ ಮಾತನ್ನು ಸಟ್ಟು ಹಿಡಿದ. ಅದು ಪ್ರಣಯವೂ ಅಲ್ಲ. ಪ್ರೇಮವೂ ಅಲ್ಲ. ಕಾಮುಕಂತೂ ಅವನ ಹತ್ತಿರವೂ ಸುಳಿಯದು. ಆವಳಿಗೆ ಸರಿಯಾದ ಸತಿ ದೊರೆಯುತ್ತಾನೊ ಇಲ್ಲವೊ ಎಂಬುದು ಅವನ ಚಿಂತೆ. ನಿನಗೆ ವಿಚಿತ್ರವಾಗಿ ತೋರಬಹುದು ಈ ಮಾತು! ನಮ್ಮಿಂದ ಈ ಕೊರತೆ ಸರಿ ಹೋಗುತ್ತಿತ್ತೇ ಎಂದೂ ಕೇಳಬಹುದು. ಅವಳ ಸಂಸಾರದ ಚುಕ್ಕಾಣಿ ಯಾವುದೊ ಕಾಣದ ಕಡಲ ದಂಡೆಗೆ ಸಾಗುವುದು ತಪ್ಪುತ್ತಿತ್ತು. ಅದೂ ಇಲ್ಲದೆ, ನಮ್ಮ ಅಭಿಲಾಷೆ ಈಡೇರಿ, ನಮ್ಮಿಬ್ಬರ ಪೈಕಿ ಒಬ್ಬಾತನ ಪತ್ನಿಯಾದರೆ,—ಅಮೇಲೆ ಒಂದು ವೇಳೆ ಅವನು ಅವಳಿಗೆ ಅನ್ಯಾಯ ಮಾಡಿದರೆ—ತಿದ್ದಲು ತಿಳಿಯ ಹೇಳಲು ಮತ್ತೊಬ್ಬನು ಇದ್ದೇ ಇರುತ್ತೇನೆಂಬ ಧೈರ್ಯವೂ ಇತ್ತು. ಈ ಧೈರ್ಯಕ್ಕೆ ಬೆಂಬಲ, ನನ್ನ, ಗೆಳೆತನ ಜನ್ಮ ಜನ್ಮಾಂತರದಲ್ಲೂ ಯಾವ ಕಾರಣದಿಂದಲೂ ಹರಿದುಹೋಳ್ಳುವುದಿಲ್ಲ ಎಂಬ ಆತ್ಮ ವಿಶ್ವಾಸವದ್ದು. ಅದೂ ಇಲ್ಲದೆ, ಸಾಮಾನ್ಯವಾಗಿ ಅವಳ ಒಲವನ್ನು ಗೆದಿಯಬೇಕೆಂಬ ಸ್ಪೆಪೋಟಿಯ ಮನೋಭಾವ, ಈರ್ಷೆ ನಮ್ಮಲ್ಲಿ ಇದಾಗಿರಲಿಲ್ಲ ನನ್ನ ಗೆಳೆಯ ಪದೇ ಪದೇ ನಮ್ಮಿಬ್ಬರಲ್ಲಿ ಯಾರಾದರೊಬ್ಬರು ಅವಳ ಕೈ ಹಿಡಿಯಬೇಕೆಂದು—ಹೇಳುತ್ತಿದ್ದುದು ಕೇವಲ ಬಾಯಿ ಉಪಚಾರದ ಮಾತಾಗಿರಲಿಲ್ಲ. ಆದರೂ ಬಹು ಸೂಕ್ಷ್ಮ ಪರಿಸ್ಥಿತಿ. ನಮ್ಮಿಬ್ಬರಲ್ಲಿ ಒಬ್ಬ ಅವಳಿಗೆ ಯೋಗ್ಯ, ಇನ್ನೊಬ್ಬ ಅಯೋಗ್ಯ ಎನ್ನುವುದರಲ್ಲಿ ಅರ್ಥವೇ ಇರಲಿಲ್ಲ. ಆದರೂ ನಮ್ಮಿಬ್ಬರ ಸದಭಿಪ್ರಾಯಕ್ಕೆ ಪಾತ್ರಳಾವ ಹೆಣ್ಣಿನ ಪ್ರಶ್ನೆ! ನಮ್ಮ ಸ್ನೇಹಕ್ಕೆ ಮುಳಿವಾಗದಿರದೆಲ್ಲ!

ನಿನಗೆ ನನು ಬರುತ್ತದೆಯಲ್ಲವೆ ಗುಂಡು? ಹೀಗೆ ನಾವು ಆ ಹುಡುಗಿಯ ಮುಮದೆಯ ಭವಿಷ್ಯ ಕುರಿತು ಏನೇನೋ ಕಲ್ಪಿಸುತ್ತಿರುವಾಗ, ಆಹುಡುಗಿಯಾಗಲಿ, ಅವಳ ತಂದೆ-ತಾಯಿಗಳಿಗಾಗಲಿ, ಮುಂದೆ-ಯಾಗುವ, ಮಾಡುವ ಯೋಜನೆಯು ಇರಲಿಲ್ಲ. ನಮ್ಮ ವಿದ್ಯಾರ್ಥಿನಿಗೆ

ಆಗ ಗಂಡನ ಕಲ್ಪನೆಯಾದರೂ ಮನಸ್ಸಿನಲ್ಲಿ ಸುಳಿದಿತ್ತೆ ?- ನಾ ಹೇಳಲಾರೆ. ಹುಡುಗಿ ಸುಂದರಿ, ಜಾಣೆ, ಸುಶೀಲೆ. ಅವಳ ಮದುವೆ ಅವಳನ್ನು ಹೆತ್ತವರಿಗೊಂದು ಕುತ್ತು ಪರ್ವತಾ ಆಗಿರಲೂ ಇಲ್ಲ.

ನಾನೊಂದು ತಿರ್ಮಾನಕ್ಕೆ ಬಂದೆ. ಅದು ಅಗತ್ಯವಾಗಿತ್ತು. ಅವಳ ಮದುವೆ ಕುರಿತು ಸಲಹೆ ಮಾಡಿದ ಮೊದಲಿಗ ನನ್ನ ಗೆಳೆಯ. ನಮ್ಮಲ್ಲೊಬ್ಬರ ಮಡದಿಯಾಗಬೇಕೆಂದವನೂ ಅವನು. ಅವಳ ಭವಿಷ್ಯ—ಸುಖವಾದ ಬಾಳುವೆಯ ವಿಷಯದಲ್ಲಿ ಆಸಕ್ತಿ ವಹಿಸಿದವನು ಅವನು. ಅವಳ ವಿಷಯದಲ್ಲಿ ಕುರಿತು ಆಡುವಾಗ ಅವನಲ್ಲಿ ಎಂದೂ ಕಾಣದ ತೀವ್ರತೆ, ಉತ್ಸಾಹ, ಹೊರಹೊಮ್ಮುವುದನ್ನು ಗಮನಿಸಿದ್ದೆ. 'ಅವಳಿಗೆ ಯೋಗ್ಯನಾದ ವರ ಅವನೆ' ಎಂದು ನಿಶ್ಚಯಿಸಿದೆ. ಅವಳು ಯಾರ ಮಗಳು, ಯಾವ ಜಾತಿ, ಯಾವ ಪಂಗಡ ಎಲ್ಲಾ ವಿಚಾರಿಸಿದೆ. ದೇವರ ಅನುಗ್ರಹ. ನಮ್ಮ ಅಭಿಲಾಷೆಗೆ ಅಡ್ಡಿಯಾಗುವಂತಹದೇನೂ ಇರಲಿಲ್ಲ. ನಾನು ಉತ್ಸಾಹಿತನಾದೆ.

ಸುಸನ್ನಾಯ. ಮೂರನೆಯ ವರ್ಷ ಓದಿಗಿಬಂತು. ಓದಿಸಿ. ಕೊಟ್ಟವಳು ನಮ್ಮ ಪ್ರಿಯ ವಿದ್ಯಾರ್ಥಿನಿಯೆ. ಆ ಸಾರಿಯ S S. L. C. ಪರೀಕ್ಷೆಯಲ್ಲಿ ನಮ್ಮ ಶಾಲೆಗೆ ಮೊದಲನೆಯನಳಾಗಿ, ಮೈಸೂರು ಸೀಮೆಗೆ ಮೂರನೆಯವಳಾಗಿ ತೇರ್ಗಡೆಯಾದಳು. ಈ ಯಶಸ್ಸಿಗೆ ನಾನೇ ಕಾರಣನೆಂದು, ನನಗಾಗಿ ಅವಳ ಮನೆಯಲ್ಲಿ ಒಂದು ಔತಣಕೂಟ ಏರ್ಪಟ್ಟಿತು. ಊಟ, ತಿಂಡಿ, ವಿಶ್ರಾಂತಿ, ಮತ್ತೆ ಕಾಫಿ, ತಾಂಬೂಲ, ಆ ಹುಡುಗಿಯ ಸಂಗೀತ ಎಲ್ಲಾ ಆದರಾತಿಥ್ಯವೂ ಮುಗಿಯಿತು. ಅವಳ ತಂದೆ-ತಾಯಿಗಳು ತುಂಬಾ ವಿಶ್ವಾಸದಿಂದ ಉಪಚರಿಸಿದರು. ಅದು ಹೇಗೋ, ಸಿಹಿಯುಂಡು ಪ್ರಸನ್ನವಾದ ನನ್ನ ಮನಸ್ಸಿಗೆ, ನಾವು ವಧೂಪರೀಕ್ಷೆಗೆಂದೇ ಬಂದಿದ್ದೇವೆ ಎನ್ನಿಸಿತು. ಅವಳ ತಂದೆ ಒಳ್ಳೆಯ ಸಹೃದಯರು. ವಿಚಾರಪರರು. ವಾಚಾಳಿಗಳು. ನಾನಾಗಲೇ ಅವರಲ್ಲಿ ಸಲುಗೆ ಬೆಳೆಸಿದ್ದೆ. ಹಾಗೇ ಮಾತಾಡುತ್ತ ನೇರವಾಗಿ ಆರಂಭಿಸಿಯೇ ಬಿಟ್ಟೆ.

" ಮುಂದೇನು ಮಾಡುತ್ತೀರಿ ? ಮಗಳನ್ನು ಕಾಲೇಜಿಗೆ ಸೇರಿಸುತ್ತೀರೋ ? ಅಥವಾ..... ? "

" ನೋಡಬೇಕು. ಒಂದೊಂದು ಸಾರಿ ಇನ್ನೂ ಹೆಚ್ಚಿನ ವಿದ್ಯಾಭ್ಯಾಸ ಏಕೆ ಎನ್ನಿಸುತ್ತದೆ. ಬುದ್ಧಿ ಚೆನ್ನಾಗಿದೆಯೆಂದು ಕೆಲಸಕ್ಕೆ ಬಾರದ ವಿದ್ಯೆ ಕಲಿಸಿದರೇನು ಪ್ರಯೋಜನ ಹೇಳಿ ? "

" ಈ ವಿಷಯದಲ್ಲಿ ನಮ್ಮದೂ ಇದೇ ಅಭಿಪ್ರಾಯ. ಆದರೆ ಮುಂದಿನ ಅಭ್ಯಾಸಕ್ಕೆ ತುಂಬಾ ಅನುಕೂಲವಿದೆ....." ಎಂದೆ ಗೆಳೆಯನ ಮುಖ ನೋಡುತ್ತ.

" ಅದೇನೊ ಸರಿ. ಆದರೆ ಇನ್ನೂ ಮುಕ್ಕಳಿವೆ. ತಂಗಿಯರಿದ್ದಾರೆ. ಎಲ್ಲರನ್ನೂ ಹಾದಿಗೆ ಹಚ್ಚಲು ನಮ್ಮ ಆರ್ಥಿಕ ತಕ್ಕಡಿ ಏಳಬೇಕಲ್ಲ ! ನನಗೆ ಸಾಕೆನ್ನಿಸುತ್ತದೆ..... "

" ನಿಮ್ಮ ಮಗಳ ಅಭಿಪ್ರಾಯವೇನು ? "

ಕೇಳಿದವನು ನನ್ನ ಗೆಳೆಯ. ಅದು ಅವನಿಗೆ ಬಹುಮುಖ್ಯವಾದ ವಿಷಯ.

" ಅವಳಿಗೂ ಬೇಡವೆಂದೇ ತೋರುತ್ತದೆ " ಎಂದರು—ಮಗಳ ಕಡೆಗೆ ನೋಡುತ್ತ.

" ಯಾಕಮ್ಮಾ, ಓದಿನ ಮೇಲೆ ಅಷ್ಟು ದ್ವೇಷ? ಅಥವಾ ಎಲ್ಲದರಲ್ಲೂ ಪರಿಣತೆಳಾದೆ – ಎಂದು ಜಂಭವೊ ? " ಎಂದೆ.

" ನಾನು ಎಷ್ಟು ಓದಿದರೂ ಹೆಂಗುಸಲ್ಲನೆ ಸಾರ್ ? ಡಿಗ್ರಿ ತೆಗೆದುಕೊಂಡು ಏನು ಮಾಡಲಿ ? ಹೊಸಲಿನಿಂದ ಆಚೆ ಸೇವೆಯನ್ನು ಹುಡುಕಿ ಮಾಡುವುದಕ್ಕಿಂತ, ಹೊಸಿಲ ಒಳಗೇ ಇದ್ದು ಸೇವೆ ಮಾಡುವುದು ಹೆಂಗುಸಿನ ಧರ್ಮ ಎನ್ನುತ್ತಾಳೆ ಅಮ್ಮ. "

ನಾನು, ನನ್ನ ಗೆಳೆಯ, ಅವಳ ತಂದೆ, ಎಲ್ಲರನ್ನೂ ಅವಳ ಉತ್ತರ ಬೆರಗುಮಾಡಿತು.

" ಹಾಗಾದರೆ ಏಕೆ ತಡ ? ಮದುವೆ ಮಾಡಿಬಿಡಿ ಸ್ವಾಮಿ. ಬೇಗ ಸೇವಾದೀಕ್ಷೆಯೂ ಆದ ಹಾಗಾಗುತ್ತದೆ ! " ಎಂದೆ ನಾನು. ಅವಳು ನಾಚಿ ನೀರಾದಳು. ಮುಖ ಮುಂಜಾವಿನ ಮೂಡಲಿನಂತೆ ಕೆಂಚಗಾಯಿತು. ಹಾರ್ಮೋನಿಯಂ ಒಳಗೆ ತೆಗೆದಿಡುವ ನೆವದಲ್ಲಿ ಎದ್ದು ಒಳಗೆ ಹೋದಳು.

" ನಾನೂ ಹಾಗೆಯೆ ಮಾಡಿಕೊಂಡಿದೀನೆ. ಓದುವುದೇ ಇಲ್ಲವಾದರೆ, ಖಂಡಿತವೂ ತಡಮಾಡುವುದಿಲ್ಲ. ಸರಿಯಾದ ಸಂಬಂಧ ದೊರೆತರೆ ಸಾಕು....."

" ಆ ಭಾರ ನನಗಿರಲಿ. ನಿಮ್ಮ ಮಗಳೂ ನೀವೂ ಹೆಮ್ಮೆ ಪಡುವಂತಹ ವರನನ್ನು ತೋರಿಸುತ್ತೀನಿ. "

ನನ್ನ ಗೆಳೆಯು ನನ್ನನ್ನು ಜಿಗುಟಿದ. ' ಕಬ್ಬಿಣ ಕಾದಿದೆ; ಹದವಾಗಿದೆ. ಈಗಲೇ ಬಡಿಯಬೇಕು. ಆರಬಿಡಬಾರದು ' ಎಂಬುದು ನನ್ನ ಮತ. ನನ್ನ ಮಾತನ್ನು ಅವರೂ ಗಣನೆಗೆ ತೆಗೆದುಕೊಂಡರು.

" ನಮ್ಮ ಹುಡುಗಿಯ ಗುಣ ಸ್ವಭಾವ ಎಲ್ಲಾ ನಿಮಗೆ ಗೊತ್ತಿದೆ. ಅವಳನ್ನು ಸುಖವಾಗಿ ಬಾಳಿಸುವಂತಹ ವರ ನಿಮಗೆ ಗೊತ್ತಿದ್ದರೆ ಹೇಳಿ. ನಾನು ಈ ಕ್ಷಣ ಸಿದ್ಧ ....." ಎಂದರು ಅವರು.

ಅವರೂ ಅದನ್ನೆ ಹೇಳಿದರು. ನಾನು ತಡಮಾಡಲಿಲ್ಲ.

" ನೋಡಿ ಇವನೇ ಆ ವರ. "

೫೫ ವರ್ಷಗಳಿಂದ ಅನುಭವಪಟ್ಟ
ಕರ್ಕೀ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೪-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು
ವಿಳಾಸ:—
ಗಣೇಶ ರಾಮಚಂದ್ರ ಕರ್ಕೀ ಮತ್ತು ಕಂಪನಿ
ಗಿರಗಾಂವ್, ಮುಂಬಯಿ. ೪

ನನ್ನ ಗೆಳೆಯನನ್ನು ತೋರಿಸಿದೆ. ಅನಿರೀಕ್ಷಿತವಾದ ನನ್ನ ತೀರ್ಮಾನ, ನನ್ನ ಗೆಳೆಯನನ್ನು ಮೂಕನನ್ನಾಗಿಸಿತು. ಹೆಣ್ಣಿನಂತೆ ಲಜ್ಜೆಯಿಂದ ತಲೆಬಾಗಿಸಿದ. ನಾನು ಮಹಾ ತ್ಯಾಗ ಮಾಡಿದೆ—ಎಂಬ ಭಾವ ನನ್ನ ಗೆಳೆಯನಲ್ಲಿತ್ತೆಂದು ತೋರುತ್ತದೆ. ಅವರೂ ಮೌನವಾಗಿ ಅವನನ್ನೆ ನೋಡಿದರು. 'ಹೀಗೆ ಕೇಳುವ ಮಸಲತ್ತು ಮಾಡಿಕೊಂಡೇ ಬಂದಿದ್ದಾರೆ ಈ ಪಟಿಂಗರು' ಎಂದು ಅವರೆಲ್ಲಿ ತಿಳಿದುಕೊಳ್ಳುವರೋ ಎಂಬ ಅಳುಕಿನಿಂದ, ಈಗ ಸುಮ್ಮನಿರುವುದು ದಡ್ಡತನವೆಂದು ಕಾರ್ಯರಂಗಕ್ಕೆ ಇಳಿದೇಬಿಟ್ಟೆದ್ದೆ. ಅವರೂ ತಪ್ಪು ಭಾವಿಸಲಿಲ್ಲ. ಬಹು ಹೊತ್ತಿನ ನಂತರ " ಹೌದೆ! " ಎಂಬ ಉದ್ಗಾರ ತೆಗೆದರು. ನಾನು ನನ್ನ ಗೆಳೆಯನ ಮಾತು-ಕಥೆಯನ್ನೆಲ್ಲಾ ನಿವರಿಸಿದೆ.

" ನಮ್ಮ ಜನ. ಗೋತ್ರವೂ ಹೊಂದುತ್ತದೆ. ನಿಮ್ಮ ಹುಡುಗಿಯನ್ನು ಇವನು ಹೇಗೆ ಬಲ್ಲನೊ, ನಿಮ್ಮ ಹುಡುಗಿಯೂ ಇವನನ್ನು ಹಾಗೆಯೆ ಬಲ್ಲಳು. ಅವಳು ಒಪ್ಪಿಯಾಳೇ ಎಂಬ ಅನುಮಾನವೇ ಬೇಡ " ಎಂದೂ ಸೇರಿಸಿದೆ.

ಯಾವ ಕನ್ಯಾಪಿತೃ ಇಂತಹ ಸುವರ್ಣಸಂಧಿಯಿಂದ ಸಂತೋಷಪಡಲಾರ ಹೇಳು ? ಮಗಳ ಪುಣ್ಯವನ್ನು ಕೊಂಡಾಡಿದರು. ಜಾತಕ, ಶಕುನಗಳ ಗೊಂದಲವೂ ಬೇಡವೆಂದರು. 'ಇದೋ ನಿಮಗೆ ನನ್ನ ಮಗಳನ್ನು ಕೊಟ್ಟೆ' ಎಂದು ಸಂಕಲ್ಪ ಮಾಡಿಯೆ ಬಿಟ್ಟರು. ಅಷ್ಟು ಹೊತ್ತಿಗೆ ಹುಡುಗಿ ಸೊಗಸಾದ ಕಾಫಿ ತಂದಳು.

"ನೋಡಯ್ಯಾ ಚೆನ್ನಾಗಿ, ಹುಡುಗಿ ನಿನಗೊಪ್ಪೇನೊ ? " ಎಂದೆ.

ಅವಳಿಗೆ ಈ ನಾಟಕದ ಅರ್ಥವಾಗಲಿಲ್ಲ. ಮುಂದೆ ಎಂಟೇ ದಿನ, ಮುಹೂರ್ತ ಕುದುರಿತು. ಬಂಧು ಬಳಗಗಳ ನೆರವಿ ನೆರೆಯಿತು. ಲಗ್ನವಾಯಿತು. ಹುಡುಗಿಯ ಹೃದಯವೂ ಒಪ್ಪಿಕೊಂಡಿತು.

ಮದುವೆಯಾದ ಆರುತಿಂಗಳಿಗೆ ನನ್ನ ಗೆಳೆಯ ತನ್ನ ಹೆಂಡತಿಯಿಂದ ನಮ್ಮ ಮನೆ ತುಂಬಿಸಿಕೊಂಡ. 'ಹೆಣ್ಣು ಮಾಯೆ, ಪುರುಷನ ಉತ್ಕರ್ಷಕ್ಕೆ ಅಡ್ಡಿಯಾಗುವ ಕಾಲ್ತೊಡಕು' ಎನ್ನುವವರಿದ್ದಾರೆ. ಆತ್ಮವನ್ನು ಅರಸಿ ಹೊರಟವರಂತೂ ಈ ಸಂಸಾರವನ್ನು—ಸಂಸಾರಕ್ಕೆ ಸಾರಸರ್ವಸ್ವಳಾದ ಹೆಣ್ಣನ್ನು—ಬಹು ಕೀಳಾಗಿ ಅಡಿಬಿಟ್ಟಿದ್ದಾರೆ. ಅದೆಲ್ಲಾ ಪಲಾಯನವಾದಿಗಳ ಹೇಡಿತನವಾಗಿ, ನೀನೇ ಸರ್ವಸ್ವವೆಂದು ಅತಿರೇಕಕ್ಕಿಳಿದವರ ಹುಚ್ಚುತನವಾಗಿ ಕಂಡದ್ದು—ನನ್ನ ಗೆಳೆಯನ ಪತ್ನಿ ನನ್ನ ಗೆಳೆಯನ ಮನೆಯೊಡತಿಯಾಗಿ ಬಂದ ಮೇಲೆ; ಗಂಡುಸಿನ ಅಪೂರ್ಣ ಜೀವನಕ್ಕೆ ತನ್ನ ಸಹಚರ್ಯೆಯಿಂದ ತುಂಬಿಕೊಟ್ಟ ಮೇಲೆ; ಸಂಸಾರಕ್ಕೆ ಸಾರಭೂತಳಾಗಿ ನಿಂತಮೇಲೆ.

ನಮ್ಮಿಬ್ಬರ ಸಂಪಾದನೆ ಮೂರೂ ಜನರ ಮೋಜಿನ ಜೀವನಕ್ಕೆ ಸಾಕಾಗುತ್ತಿತ್ತು. ಮನೆಯಲ್ಲಿ ಕಂಕಣದ ಸದ್ದು ಕೇಳದಂದಿನಿಂದ, ಹೋಟಲಿನ ಊಟ ತಪ್ಪಿ—ಆರೋಗ್ಯದೇವತೆಯನ್ನೆ—ಒಲಿಸಿಕೊಂಡಂತಾಯಿತು. ಅವಳ ಒಪ್ಪ ಓರಣದಿಂದ— ಇಲ್ಲಿಯ ವರೆಗಿನ ಜೀವನದಲ್ಲಿ ಯಾವುದೋ ಅವ್ಯವಸ್ಥೆಯಿತ್ತು, ಈಗ ಅದು ತುಂಬಿಬಂದಿತು—ಎಂದು ತೋರಿತು.

ನಮ್ಮ ಸುಖದ ಹೊಣೆ ಅವಳ ಕೈಸೇರಿತು. ನಮ್ಮಿಬ್ಬರ ಅನ್ಯೋನ್ಯವನ್ನು ಅವಳು ಬಹು ಬೇಗ ಅರಿತುಕೊಂಡಳು. ಮನವೊಪ್ಪಿದ ಉಡಿಗೆ, ಕಣ್ಣಿಗೆ ಬೇಕಾದ ನೋಟ, ನಾಲಗೆ ಬಯಸಿದ ಊಟ, ಸಂತೋಷದ ಕೂಟ ಎಲ್ಲವೂ ಮೂವರ ಒಮ್ಮತದ ಅಭಿರುಚಿಯನ್ನು ಅನುಸರಿಸಿ ನಡೆಯುತ್ತಿದ್ದುವು. ಆಕೆಯನ್ನು ಸುಖವಾಗಿ ಬಾಳಿಸುವ ಅತಿರೇಕದಲ್ಲಿ ನಮ್ಮ ವಿಶ್ವಾಸದ ಹೊರೆಯನ್ನೆ ಹೊರಿಸುವ—ಕೂರಿಸಿ ಪೂಜಿಸುವ—ಹವ್ಯಾಸವೂ ನಮ್ಮದಾಗಿರಲಿಲ್ಲ !.....ಅವಳ ಆಶೆ-ಎನಿಸಿಕೆಗಳಿಗೂ ನಮ್ಮಿಂದ ಬೆಲೆ ಸಿಕ್ಕೆತ್ತು. ಇಲ್ಲಿ ಒಂದು ಮಾತು: 'ನಾವು, ನಮ್ಮಿಬ್ಬರ' ಎಂದು ಹೇಳುತಿದ್ದೇನೆ. ತಪ್ಪು ಭಾವಿಸಬೇಡ. ನನ್ನ ಗೆಳೆಯ ಅವಳ ಇನಿಯ. ಆಗಿನ ದಿನಗಳಲ್ಲಿ ನಾನು ಆತ್ಮೀಯ: ಸೋದರ. ಇದೇ ಮನೆಯಲ್ಲೆ ಮೂವರ ವಾಸ. ಯಾವುದೋ ಒಂದು ಅಂತಃಕರಣದ ಸೂತ್ರ ನಮ್ಮ ಆತ್ಮಗಳನ್ನು ಸಂಸಾರದ ದೋಣಿಯಲ್ಲಿ ಕೂರಿಸಿ, ಸೌಖ್ಯಸಾಗರದ ಮೇಲೆ ಯಾನಮಾಡಿಸುತ್ತಿತ್ತು.

ಅದನ್ನು ಸಂಸಾರವೆನ್ನಲೆ? ಸ್ವರ್ಗವೆನ್ನಲೆ? ಅದು ಸುಂದರವಾದ ಸ್ವರ್ಗವೇ ಹೌದು. ಸುಂದರವಸ್ತುಗಳಿಗೆ ದೃಷ್ಟಿದೋಷದ ಕಾಟ ಹೆಚ್ಚಂತೆ. ಏಕೆಂದರೆ ಆ ಸುಖದ ಸಕ್ಕರೆಯ ಬೆಟ್ಟ ಎಷ್ಟು ಅಕಸ್ಮಿಕವಾಗಿ ನಮ್ಮ ಕೈಗೆಟುಕಿತ್ತೊ, ಅಷ್ಟೇ ಅಕಸ್ಮಿಕವಾಗಿ ಕರಗಿಹೋಯಿತು. ಸ್ವರ್ಗಸುಂದರವಾದ ಈ ಬಾಳಿಗೂ ವಿಧಿಯ ಕ್ರೂರ ದೃಷ್ಟಿ ತಾಗಿತು. ನನ್ನ ಜೀವನದ ಗೆಳೆಯನನ್ನು, ಯಾರ ಬಾಳುವೆಯ ಸುಖಕ್ಕಾಗಿ ಬಯಸಿ ಕೈ ಹಿಡಿದನೋ ಆಕೆಯ ಹೃದಯೇಶ್ವರನನ್ನು, ವಿಧಿ ಈ ಈ ಮಂದಿರದಿಂದ ಅಮಾನುಸರೀತಿಯಲ್ಲಿ ಸೆಳೆಸೊಯ್ದಿತು....."

ಕೃಷ್ಣನ ಕಂಗುಣಿಯಿಂದ ದಳದಳವಾಗಿ ಕಂಬನಿ ಇಳಿಯಿತು. ದುಃಖದ ಭಾರದಲ್ಲಿ ಮಾತು ಹೊರಡದೆ ಹಾಗೇ ಕುಳಿತ. ಗಂಡುಸಿನ ಕಣ್ಣುಗಳಲ್ಲಿ ಅಂತಃಕರಣದ ನೀರನ್ನು ಕಂಡದ್ದು ನಾನು ಅದೇ ಮೊದಲಸಾರಿ. ಅವನ ಗೆಳೆಯನ ದುರ್ವಿಧಿಯ ವಿಷಯದಲ್ಲಿ ಕಳವಳ ಪಟ್ಟೆ. ಹದ್ದಿನಂತೆ ಎರಗುವ ವಿಧಿಯ ಆಟ ನನಗೆ ಹೊಸ ಸಂಗತಿಯಲ್ಲವಾದರೂ, ಅಷ್ಟು ಸುಂದರ ದೃಶ್ಯವು ಅಷ್ಟು ಬೇಗ ತೆರೆ ಬೀಳಬಾರದಾಗಿತ್ತು.—ಎನ್ನಿಸಿ ಸಂಕಟವಾಯಿತು. ಕೃಷ್ಣನೂ ಅಷ್ಟೆ. ಈ ದುರಂತದ ಛಾಯೆಯನ್ನೂ ಸೂಚಿಸದೆ, ಅವನ ಗೆಳೆಯ ತೀರಿದಷ್ಟೆ ಅಕಸ್ಮಿಕವಾಗಿ ಅದನ್ನೂ ಹೇಳಿದ್ದರಿಂದ, ಸುಖದ ಮೇಲ್ಮನೆಯಲ್ಲಿ ವಿಹರಿಸುತ್ತಿದ್ದ ನನ್ನ ಮನಸ್ಸಿಗೂ ಬಲವಾದ ಆಘಾತವಾಯಿತು.

" ಅಯ್ಯಾ! ಏನಾಯಿತು ಕೃಷ್ಣ ? " ಅಂದೆ.

" ಆಕೆ ಮನೆಗೆ ಬಂದು ನಾಲ್ಕು ತಿಂಗಳಾಗಿತ್ತು. ಒಂದು ದಿನ ರಾತ್ರಿ ಊಟ ಮಾಡಿ ಮಲಗಿದ್ದೆವು. ನಾವು ಕುಳಿತಿದ್ದೆವಲ್ಲ. ಆ ಕೋಣೆಯಲ್ಲಿ ನಾನು ಮಲಗಿದ್ದೆ. ಅದರ ಇದಿರು ಕೋಣೆಯೆ ದಂಪತಿಗಳ ಶಯ್ಯಾಗಾರ. ನನಗೆ ನಿದ್ದೆ ಬಂದಿರಲಿಲ್ಲ. ಕಿಟಕಿಯ ಬಾಗಿಲು ತೆರೆದು ದೂರದ ಚಿಕ್ಕೆಗಳು ಕಣ್ಣುಮಿಟುಕಿಸುವುದನ್ನೇ ನೋಡುತ್ತಿದ್ದೆ. ಅದರ ಮೂಲಕ ಚಂದಿರನ ಕಿರಣಗಳು 'ರಾತ್ರಿರಾಣಿ'ಯ ಸುವಾಸನೆಯನ್ನು ಹೊತ್ತುಕೊಂಡು, ಮರೆಯಾದ ನನ್ನ ಕೋಣೆಯಲ್ಲಿ ರಮಿಸುವ ಆಶೆಯಿಂದ ಬರುತ್ತಿದ್ದುವು ಅದರಿ ಸುವಾಸನೆಯ ಸೊಗ-

ವನ್ನು ಅನುಭವಿಸುತ್ತಿದ್ದವನು ನಾನು. ಬೆಳುದಿಂಗಳ ಕಿರಣವರ್ಷಕ್ಕೆ ಮುಖವೊಡ್ಡಿ ಚಂದ್ರದರ್ಶನ ಮಾಡುತ್ತಾ ಅಂಗಾತ ಮಲಗಿದ್ದೆ.

ಮನೆಯ ಮುಂದೆ, ಅವರು ಮಲಗಿಸುತ್ತಿದ್ದ ಕೋಣೆಗೆದುರಾಗಿ-ಹೊರಗಡೆ. ರಾತ್ರಿರಾಣಿಯ ಗಿತ ಬೆಳಸಿದ್ದೆ, ನನ್ನ ಗೆಳೆಯನ ಮದುವೆಯ ಗುರುತಾಗಿ. ನಮ್ಮ ಮೂವರಿಗೂ ಅದು ಅಕ್ಕರೆಯ ಗಿಡವಾಗಿತ್ತು. ಅದು ಹಬ್ಬಿ ಕೋಣೆಯನ್ನು ಕಟ್ಟಿ ಪಲ್ಲವಿಸಿ ಚೆಪ್ಪರವಾಗಿ ಮೇಲ್ಛಾವಣಿಯ ನೇಲೂ ಹರಡಿಕೊಂಡಿತ್ತು. ರಾತ್ರಿಯಾಗುತ್ತಲೆ ಅದರ ಪರಿಮಳದ ರಾಜ್ಯಭಾರ. ಮನೆ ತುಂಬಿ, ಮೈತುಂಬಿ ಉಸಿರು ಉಸಿರಿನಲ್ಲೆಯೂ ಅದೇ. ಆ ದಿನ ಬೆಳುದಿಂಗಳು ಎಂದೆನಲ್ಲವೆ? ಹೂವಿನ ಪರಿಮಳ, ತಂಗಾಳಿ, ಬೆಳುದಿಂಗಳು ಇವು ಮನುಷ್ಯರಿಗೆ ಮಾತ್ರ ಮೆಚ್ಚೆ?

ಅರ್ಧರಾತ್ರಿ!

ಇರುಳ ಮೌನವನ್ನು ಸೀಳಿ ಯಾರೋ ಗಟ್ಟಿಯಾಗಿ ಚೀರಿಕೊಂಡರು.

"ಅಯ್ಯೋ!..... ... !"

ಅವಳ ದನಿ! ಧತಕ್ಕನೇ ಎದ್ದೆ.

"....ಕೃಷ್ಣಾ.... ಕೃಷ್ಣಾ.... ಹಾವು . ಹಾ....ವು ... !"

ಮೈ ಝುಲ್ಲನೆ ಬೆಪರಿತು. ಕೋಣೆಯಿಂದ ಹೊರಕ್ಕೆ ಧಾವಿಸಿ, ಶಯ್ಯಾಗಾರದ ಬಾಗಿಲನ್ನು ಧಡಧಡನೆ ಬಡಿದೆ. ಅವರ ಅಳುವಿನ ಅಬ್ಬರದಲ್ಲಿ—ಹೆದರಿಕೆಯಲ್ಲಿ - ನನ್ನ ಕೂಗು. ಬಾಗಿಲು ತಟ್ಟುವ ಸದ್ದು ಅವಳಿಗೆ ಕೇಳರಲಾರದು. ಬಾಗಿಲು ತೆರೆಯಲಿಲ್ಲ! ಅದರೆ ಅವಳ ಅಳುವನ್ನೂ ತೂರಿಕೊಂಡು ನನ್ನ ಗೆಳೆಯನ ನರಳುವ ದನಿ ನನ್ನ ಕಿವಿಗೆ ಹೊಕ್ಕಾಗ, ನನ್ನ ಹರಣ ಹಾರಿತು.

"ರತ್ನೀ!" ನಾನು ಚೀರಿದೆ, ಸಂಕಟದಿಂದ—ಬಾಗಿಲು ತೆರೆಯಲಿಲ್ಲವಲ್ಲ ಎಂಬ ಆಕ್ರೋಶದಿಂದ.

ಬಾಗಿಲು ತೆರೆಯಿತು. ಒಳಗೆ ಕಾಲಿಟ್ಟೆ.....

ಎಂತಹ ದಾರುಣ ದೃಶ್ಯ ಅದು ಗುಂಡು!....."

ಆದೃಶ್ಯ ಮತ್ತೊಮ್ಮೆ ಕಣ್ಣಿದಿರಿಗೆ ಸುಳಿಯಿತೇನೊ! ಕೃಷ್ಣ ಶೂನ್ಯದಲ್ಲಿ ದಿಟ್ಟಿ ಹಾಯಿಸಿ ಸ್ತಬ್ಧನಾದ. ನಾನು ಉಸಿರು ಬಿಗಿಹಿಡಿದು ಕೇಳುತ್ತಿದ್ದೆ. ಮುಂದೇನಾಯಿತೆಂದು ಪ್ರಶ್ನಿಸಲಿಲ್ಲ. ಆದೇ ಭಾವಾವೇಶದಿಂದ ಮುಂದುವರಿಸಿದ, ತುಸ ಹೊತ್ತಿನ ನಂತರ:

".....ನನ್ನ ಗೆಳೆಯ ಮಂಚದ ಕೆಳಗೆ ಉರುಳಿದ್ದಾನೆ. ತನ್ನ ಬಲಗೈಯನ್ನು ನೆಟ್ಟಿಸಿ ದೂರವಾಗಿ ನೀಡಿ ಹಿಡಿದು, ಅದನ್ನೆ ನೆಟ್ಟ ನೋಟದಿಂದ ನೋಡುತ್ತಿದ್ದಾನೆ. ಅವನ ತೋಳನ್ನು ಕರ್ರನೆಯ ವಸ್ತು ಸುತ್ತಿಕೊಂಡು ಮುಲುಗುಟ್ಟುತ್ತಿದೆ. ಅವನ ಎಡಗೈ ಎದೆಯ ಮೇಲೆ ಏರಿನಿಸಿದೆ. ಅವನನ್ನು ನೋಡುತ್ತ ಪ್ರಜ್ಞಾಶೂನ್ಯಳಂತೆ ರತ್ನ ನಿಂತಿದ್ದಾಳೆ! ಹತ್ತಿರ ಹೋಗಿ ಪರೀಕ್ಷಿಸಿದೆ. ಕರಿಯ ನಾಗರ ಹಾವು! ಅವನ ತೋಳನ್ನು ಸುತ್ತಿ ಸುತ್ತಿ ಬಿಗಿಯುತ್ತಿದೆ ಅವನು ನಡ್ರಮುಷ್ಟಿಯಲ್ಲಿ ಅಮುಕಿ ಹಿಡಿದಿದ್ದಾನೆ. ಅದರಲ್ಲಿ ನೆಟ್ಟನೋಟ ಚಲಿಸುತ್ತಿಲ್ಲ. ಅದರ ಬಿಗಿತ ಹೆಚ್ಚಿದ ಹಾಗೆಲ್ಲ ಸಂಕಟದಿಂದ ನರಳುವನು. ಮೈಯಲ್ಲಿ, ಮುಖ—ಮುಂಗುರುಳಿನಿಂದ ಕಟ್ಟ ಕಟ್ಟ ಬೆವರು ಚಿಮ್ಮುತ್ತಿದೆ!

ಕುಟಜಾರಿಷ್ಟ

ಆಮಾಂಶ-ಸಂಗ್ರಹಣಿಗಳಿಗೆ

●

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ

ಎಲ್ಲ ಬಗೆಯ ಆಯುವೇದ ಔಷಧಗಳಿಗಾಗಿ

ಬರೆಯಿರಿ:

ಶ್ರೀ

ದಿ ನೂತನ

ಆಯುರ್ವೇದ ಕಾರ್ಯಾಲಯ ಲಿ.

ವಿಜಾಪುರ

ನಾನು ಪ್ರಾಣಭಯವನ್ನು ಬಿಟ್ಟೆ. ಹಾವನ್ನು ತುಡುಕಲು ಸರಕ್ಕನೆ ಕೈ ಚಾಚಿದೆ. ನನ್ನ ಗೆಳೆಯ ಆ ಅವಸ್ಥೆಯಲ್ಲೂ ತನ್ನ ಕೈಯನ್ನು ಅತ್ತ ಸರಿಸಿಕೊಂಡ. ನನಗೆ ಸಿಕ್ಕಗೊಡಲಿಲ್ಲ ಕ್ಷೀಣ ದನಿಯಿಂದ "ಡಾಕ್ಟ್ರು....ಡಾಕ್ಟ್ರು....ಮಾವನವರು...." ಎಂದು ತೊದಲಿದ.

ಹಾಗಾದರೆ ಹಾವು ಕಚ್ಚಿಬಿಟ್ಟಿದೆ!

ನನಗೆ ದಿಗ್ಭ್ರಮೆಯಾಯಿತು. ರತ್ನ ಮರವಟ್ಟು ನಿಂತಿದ್ದಳು. ಸಮ್ಮೂಢಚೇತನಾಗಿ ಕೆಲ ನಿಮಿಷ ದಿಕ್ಕು ತೋಚದೆ ನಿಂತುಕೊಂಡೆ. ಅವನ ನರಳುವಿಕೆ ನನ್ನನ್ನು ಎಚ್ಚರಿಸಿತು.

ಡಾಕ್ಟರನ್ನು ಕರೆಯಲು ಬಿಟ್ಟುಹೋದರೆ ರತ್ನಾ ಒಬ್ಬಳೆ. ಕಡಿದ ಸ್ಥಳವೆಲ್ಲೊ? ವಿಷವೇರಿ ಕೈ ಮೀರಿದರೆ? ವೈದ್ಯರಿಲ್ಲದೆ ನಾನೇನು ಮಾಡಬಲ್ಲೆ? ಹೆಚ್ಚಾಗಿ ಯೋಚಿಸಲು ಸಮಯವುಂಟೆ? ರತ್ನನನ್ನೆ ಅಲುಗಾಡಿಸಿ, ಬಹು ಕಷ್ಟದಿಂದ ಎಚ್ಚರಗೊಂಡಾಕೆಯನ್ನು ಎಲ್ಲಿ ಕಡಿಯಿತು ಎಂದು ಕೇಳಿದೆ. ಅವಳು ತೋರಿಸಿದಳು ಬಲತೊಡೆಯಲ್ಲಿ ಹಾವು ಕಡಿದಿತ್ತು. ನಾನು ತಡಮಾಡಲಿಲ್ಲ. ಗಾಯಕ್ಕೆ ಬಾಯಿ ಹಾಕಿ ರಕ್ತ ಹೀರಿದೆ. ಉಗುಳಿದೆ. ಎರಡು ಮೂರು ಸಾರಿ ಹಾಗೆ ಮಾಡಿ, ಗಾಯವಾದ ಸ್ಥಳದ ನೇರಕ್ಕೆ—ಹೃದಯದ ಕಡೆಗೆ—ಬಲವಾಗಿ ಹುರಿಯಿಂದ ಕಟ್ಟುಹಾಕಿದೆ. ಮನಸ್ಸಿಗೆ ಧೈರ್ಯವಾದರೂ ಕಳವಳ ತೀರೀತೆ? ಅವನಿಗೆ ಹಾವನ್ನು ಸಡಿಲುಬಿಡದಂತೆ ಹೇಳಿ, ಹೆದರದಿರುವಂತೆ ರತ್ನನನ್ನು ಬೇಡಿಕೊಂಡು ಓಡಿದೆ.

ಡಾಕ್ಟರರ ಮನೆ ದೂರವಿರಲಿಲ್ಲ. ಅವರೂ ಗಡಿಬಿಡಿಯಿಂದ ತಮ್ಮ ಸಲಕರಣೆಗಳೊಂದಿಗೆ ಧಾವಿಸಿದರು. ರತ್ನನ ತಂದೆ, ತಾಯಿ, ತಂಗಿ, ತಮ್ಮಂದಿರು, ರೋದಿಸುತ್ತಲೇ ಬಂದರು. ತಾಯಿಯನ್ನು ಕಾಣುತ್ತಲೇ ರತ್ನ ಅವರ ತೋಳಿನಲ್ಲಿ ಮುಖವಿಟ್ಟು ಆಕ್ರಂದಿಸಿದಳು. ನನಗೆ ಉಸಿರು ಕಟ್ಟಿದಂತಾಯಿತು. ನನಗಾದರೂ ಕಡಿಮೆ ಸಂಕಟವಾಗಿತ್ತೇ? ಅದನ್ನು ಅದುಮಿಕೊಳ್ಳಲು ನನಗೇ ಅಸಾಧ್ಯವಾಗಿದ್ದಾಗ ಮತ್ತೆ ಯಾರನ್ನು ಸಮಾಧಾನ ಮಾಡಲಿ? ಎಲ್ಲರ ರೋದನ ಕ್ರಮಕ್ರಮವಾಗಿ ಹೆಚ್ಚುತ್ತಾ ಹೋಯಿತು. ಆವರ ಅಳುವಿನಿಂದ ಗೆಳೆಯ ಎದೆಯೊಡೆದುಕೊಂಡಾನೆಂದು ಡಾಕ್ಟರರೇ ಗದರಿಸಿದರು.

ಎಲ್ಲರೂ ಕಾತರದಿಂದ ನಿಮಿಷವನ್ನು ಯುಗವಾಗಿ ಕಳೆಯುತ್ತಿದ್ದರು.

ನಾನು ಗೆಳೆಯನ ಕಪಿಮುಷ್ಟಿಯಲ್ಲಿದ್ದ ಹಾವಿನ ಪಾರುಪತ್ಯ ನಡೆಯಿಸಿದ್ದೆ. ಅದೂ ನಿಶ್ಯಕ್ತವಾಗಿತ್ತು. ಅತ್ತ ಡಾಕ್ಟರರು ಚಿಕಿತ್ಸೆ ಮಾಡುತ್ತಿರುವಾಗ, ಇತ್ತ, ಅದನ್ನು ಉಪಾಯವಾಗಿ ಬಿಡಿಸಿ, ನೆಲಕ್ಕೆ ಅಪ್ಪಳಿಸಿ ಅದರ ಗತಿಗಾಣಿಸಿದೆ.

ಆದರೆ ಗೆಳೆಯನ ಗತಿ ಸುಧಾರಿಸಲಿಲ್ಲ. ಅವನಿಗೂ ಅದು ಗೊತ್ತಾಗಿಹೋಯಿತು, ತನ್ನ ಪ್ರಾಣ ಡಾಕ್ಟರರ ಸೂಜಿಮದ್ದಿಗೂ ಮಿಗಿದ್ದೆಂದು. ವಿಲಕ್ಷಣವಾದ ಸಮಾಧಾನ ಅವನ ಮುಖವನ್ನು ಆವರಿಸಿಕೊಂಡಿತು. ಅವನನ್ನು ಎತ್ತಿ ನುಂಚದ ಮೇಲೆ ಮಲಗಿಸಿದ್ದಾಯಿತು. ಮೈ ಕಾದು ಹೋಯಿತು. ಬೆವರು ಹರಿಯುತಿತ್ತು. ಆಯಾಸದಿಂದ ಉಸಿರು ಕಡೆತಡೆದು ಬಿಡುತ್ತಿದ್ದ. ತರಗೆಲೆಯಂತೆ ನಡುಗಿಸುತ್ತಿದ್ದ.

ರತ್ನ ತಾಯಿಯ ತಕ್ಕೈಯಲ್ಲಿಯೆ —ವ್ಯವಹಾರಶೂನ್ಯಳಾಗಿ— ಕಣ್ಣೆದುರಿಗೆ ನಡೆಯುತ್ತಿದ್ದುದನ್ನು ನಂಬಲೆ—ನಿಂತಿದ್ದಳು. ಅವಳ ತಂದೆಯ ದೃಢದೇಹ ಕರಗಿ ನೀರಾಗಿ ಕಣ್ಣಿಂದ ಸೋರುತ್ತಿತ್ತು. ತಾಯಿ ಕೈ ಮಗಳ ಮುಂಗುರುಳನ್ನು ನೇವರಿಸುತ್ತಿತ್ತು.

ಅದನ್ನು ನೋಡುತ್ತಲೇ ಯಾವುದೋ ಭೀಕರ ದೃಶ್ಯದ ನೆನಪಾಗಿ ನನ್ನ ಹೃದಯ ತಳಮಳಿಸಿತು. ಅಲ್ಲಿಯ ವರೆಗೆ ಅದುಮಿ ಹಿಡಿದಿದ್ದ ಅಳು—ಎದೆಯ ಸಂಕಟ—ಕಟ್ಟೆಯೊಡೆದು ಹೊರಸುಗ್ಗಿತು. ಅವನ ಎದೆಯ ಮೇಲೆ ಬಿದ್ದು ಗೋಳಾಡಿದೆ. ಇದನ್ನೇ ಕಾದಿದ್ದವೇನೋ ಎನ್ನುವಂತೆ ಎಲ್ಲರೂ 'ಹೋ' ಎಂದು ಭೋರಿಟ್ಟು ಅಳತೊಡಗಿದರು. ಪಾಪ, ಡಾಕ್ಟರು ಯಾರನ್ನು ಸಂತಯಿಸುತ್ತಾರೆ? ಈ ಗದ್ದಲದಲ್ಲೂ ನನ್ನ ಗೆಳೆಯ, ನನ್ನ ಕಿವಿಯ ಹತ್ತಿರಕ್ಕೆ ತುಟಿಯನ್ನು ತಂದು ಕೂಗಿದ: "ಕೃಷ್ಣ....ಕೃಷ್ಣ." ಅವನು ಏನೋ ಹೇಳಲಿದ್ದಾನೆಂದು ತೋರಿ ಎದ್ದೆ. ಎಲ್ಲರನ್ನೂ ಸುಮ್ಮನಿರುವಂತೆ ಸನ್ನೆ ಮಾಡಿದ. ಕೈ ಮುಗಿದ. ಹತ್ತಿರ ಬರುವಂತೆ ತಲೆಯಾಡಿಸಿದ.

ಡಾಕ್ಟರರು ನಿಮಿಷಕ್ಕೊಮ್ಮೆ ಗೆಳೆಯನ ದೇಹವನ್ನು ಪರೀಕ್ಷಿಸಿ ಚಿಕಿತ್ಸೆ ಮಾಡುತ್ತಿದ್ದರು. ಅವರ ಮುಖದಲ್ಲಿ ಗೆಲುವೇನೂ ಮೂಡಿಲ್ಲ. ಆದರೂ ರತ್ನ, ಅವನು ಸುಮ್ಮನಿರುವಂತೆ ಆಣತಿ ಮಾಡಿದ್ದರಿಂದಲೊ ಏನೊ—ಮೌನರೋದನದಿಂದ ಅವನ ಕಾಲಮೇಲೆ ತಲೆಯಿರಿಸಿದಳು. ಅವಳ ಅಶ್ರುಜಲದಿಂದ ಅವನ ಪಾದಗಳು ತೊಯ್ದು ಹೋಗಿದ್ದುವು. ನನ್ನ ಗೆಳೆಯ ಬಗ್ಗಿ ಅವಳನ್ನು ತನ್ನ ಎದೆಯ ಕಡೆಗೆಳೆದುಕೊಳ್ಳುವ ಸಾಹಸ ಮಾಡಿದ. ಅವಳ ತಂದೆ-ತಾಯಿಗಳು ಮಗಳನ್ನು ತಂದು ಅವನ ಬದಿಯಲ್ಲಿ ಕೂರಿಸಿದರು.

ನನ್ನ ಗೆಳೆಯ ಅವಳ ಮುಖವನ್ನು ತನ್ನ ಕೈಗಳಲ್ಲಿ ಹಿಡಿದು ಕಣ್ಣಾರಳಿಸಿ ನೋಡಿದ. ಅವನ ಕಣ್ಣು ಕುಣಿಕೆಯಲ್ಲಿ ಹನಿಯಾಡಿತು. ಅವಳ ಹಣೆಗೆ ಮುತ್ತಿಟ್ಟ. ಎಲ್ಲರನ್ನೂ ನೋಡಿ ತೊದಲುತ್ತ ನಾಲ್ಕು ಮಾತಾಡಿದ:

"ಯಾರೂ ಅಳಬೇಡಿ. ನನ್ನದು ಮುಗಿಯಿತು ಹೀಗಾಯಿತೆಂದು ನಾನು ಮರುಗುವುದಿಲ್ಲ. ಆದರೆ ಒಂದು ಚಿಂತೆ. ಅದು ಬಗೆಹರಿದರೆ ನನ್ನ ಪ್ರಾಣ ಸುಖವಾಗಿ ಹೋಗುತ್ತದೆ. ಹೋಗುವುದು ಹೋಗುತ್ತದೆ. ಸುಖವಾಗಿ ಹೋಗಲು ಸಹಾಯ ಮಾಡುತ್ತೀರಾ? ಏನು ಕೃಷ್ಣ! ಏನು ರತ್ನ?....ಕಣ್ಣೊರಸಿಕೊ. ನಿನ್ನ ಅಳುಮೊಗ ನಾನು ನೋಡಲಾರೆ. ನನ್ನನ್ನು ನೋಡು. ನಿನ್ನ ತಂದೆಯೂ ಇದ್ದಾರೆ ನನ್ನ ಕೋರಿಕೆ ಹೇಳುತ್ತೇನೆ.. ...."

ಅಮ್ಮ ಮಾತು ಆಡಲು ಅವನ ನಾಲಗೆ ಸಮರ್ಥವಾಗಿರಲಿಲ್ಲ ಯಾವುದೊ ಪ್ರಬಲವಾದ ಇಚ್ಛೆ ನಾಲಗೆಯನ್ನು ಹೊರಳಿಸಿ ನುಡಿಯನ್ನು ಹೊರಡಿಸುತ್ತಿತ್ತು. ಅವನು ಪಡುತ್ತಿದ್ದ ಪ್ರಯಾಸಕಂಡ ನಮಗೆ 'ಈಗಲೊ ಇನ್ನೊಂದು ಗಳಿಗೆಯೋ' ಎಂಬುದು ನಿಶ್ಚಯವಾಯಿತು.

"ಕೇಳಲೆ?" ಅಂದ.

"ಕೇಳು. ಜೀವದ ಸಾಕ್ಷಿಯಾಗಿ ನಡೆಯಿಸಿಕೊಡುತ್ತೇವೆ."

ರತ್ನನ ತಂದೆಯೂ ಭರವಸೆ ಕೊಟ್ಟರು. ಆತನ ಬಾಯಿಂದ ಕೊನೆಯ ಕೋರಿಕೆಯನ್ನು ಕೇಳಲು ರತ್ನ ಕಾತರಳಾದಳು.

"ಕೃಷ್ಣ, ನನ್ನ ಮದುವೆಗೆ ಮುಂಚಿನ ಮಾತು ನೆನಪಿದೆ ತಾನೆ? ರತ್ನನನ್ನು ಸುಖವಾಗಿಡುವ ಒಂದೇ ಹಂಬಲದಿಂದ ಅಲ್ಲವೆ ಅವಳನ್ನು ನಾನಾಗಿ ಮದುವೆಯಾದದ್ದು, ನೀನು ಮಾಡಿಸಿದ್ದು, ಅವರು ಧಾರೆಯೆರೆದದ್ದು? ಈಗ.. ಈಗ. ಹೀಗಾಯಿತಲ್ಲಾ ಕೃಷ್ಣ! ನಮ್ಮ ಉದ್ದೇಶ ಹುಡುಗಿಯ ಕುತ್ತಿಗೆ ಕೊಯ್ಯುವುದಿತ್ತೆ ಕೃಷ್ಣ?....."

ನನ್ನ ದುಃಖ ಹೇಗೆ ವರ್ಣಿಸಲಿ ಗುಂಡು! ಅಂತಹ ಸ್ನೇಹಿತನ ಘೋರ ಸಾವಿಗೆ ಚಿಂತಿಸಲೆ? ಬದುಕಿ ಉಳಿಯುವ ಅವನ ಎಳೆಯ ಹೆಂಡತಿಗೆ ಮರುಗಲೆ? ಆತುರದಿಂದ ಯಾವುದೋ ಆದರ್ಶದ ಭ್ರಮೆಯಲ್ಲಿ ಮಾಡಿದ ಅವಿವೇಕಕ್ಕೆ ಪಶ್ಚಾತ್ತಾಪ ಪಡಲೆ? ಅವನ ಸಾವನ್ನು ಕಸಿದುಕೊಳ್ಳಲಾಗದ ನನ್ನ ಅಸಹಾಯ ಪರಿಸ್ಥಿತಿಗೆ ಮೈ ಪರಚಿಕೊಳ್ಳಲೆ? ನನಗೆ ಹುಚ್ಚು ಹಿಡಿಯುವಂತಾಯಿತು. ಅವನ ಕೈಯನ್ನು ಎದೆಗೊತ್ತಿಕೊಂಡು "ಏನುಮಾಡಲಿ? ಏನುಮಾಡಲಿ ಹೇಳು? ನಡೆಯಿಸಿಕೊಡುತ್ತೇನೆ!" ಎಂದೆ. ಅವನು ನಕ್ಕ. ಆ ನಗೆಯನ್ನು ನೆನಪಿಸಿಕೊಂಡರೆ ಎದೆಯಲ್ಲಿ ಉರಿಯೆದ್ದಂತಾಗುತ್ತದೆ.

"ನೀನು ನಡೆಯಿಸಿಯೇ ತೀರಬೇಕು. ಅದು ನಿನ್ನ ಕರ್ತವ್ಯ. ಅದಕ್ಕೆ ನೀವು ಮಾವನವರು ಒಪ್ಪಬೇಕು. ತಾಯಿ ನೀವೂ ಒಪ್ಪ ಬೇಕು. ರತ್ನ ನೀನು ಇದಕ್ಕೆ ಪ್ರತಿಯಾಡಬಾರದು...."

"ಏನು ಹೇಳು...."

"ಕೃಷ್ಣ, ರತ್ನನನ್ನು ನೀನು ಮದುವೆಯಾಗು!" ಎಂದು ಕಣ್ಣು ಮುಚ್ಚಿದ, ಭಾವಾವೇಶದಿಂದಲೊ, ಆಯಾಸದಿಂದಲೊ! ಡಾಕ್ಟರರು ಮತ್ತೊಮ್ಮೆ ಮದ್ದು ಚುಚ್ಚಿದರು, ಆರುವ ದೀಪದ ಕುಡಿಯನ್ನು ಮಾಟಿದಂತೆ.

ನನ್ನ ಮನಸ್ಸಿನ ಸ್ಥಿತಿ ಏನಾಗಿರಬಹುದು ಯೋಚಿಸು? ನಿರಾಕರಿಸುವುದೆ? ಲಜ್ಜೆತೊರೆದು ತಟಕ್ಕನೆ ಒಪ್ಪಿಕೊಳ್ಳುವುದೆ? ಆತನ ಕೋರಿಕೆ ಸಾಂಕೇತಿಕವಾಗಿತ್ತು. ಒಡಲೆರಡು ಅಸುವೊಂದೆನೆ ಎನ್ನುವ ಸಾದೃಶ್ಯವೆನ್ನು ಒರೆಯಿಕ್ಕುವ ಪರೀಕ್ಷಾ ಸಮಯ! ಆ ಹಾವು ಬದುಕಿದ್ದರೆ, ಅದನ್ನು ಕೆರಳಿಸಿ ಅದರ ಕಡಿತಕ್ಕೆ ನನ್ನ ಎದೆಯೊಡ್ಡುತ್ತಿದ್ದೆ. ಅವನ ಕೋರಿಕೆ ಅದಕ್ಕಿಂತ ಕಠೋರವಾಗಿತ್ತು. ಸಂಧಿಗ್ಧವಾಗಿತ್ತು. ಆದರೆ ಅದು ಅವಿಚಾರವಾಗಿರಲಿಲ್ಲ. ಆದರಲ್ಲಿ ಒಂದು ನಿರ್ಧಾರದ ಏಕಧಾರೆಯಿತ್ತು. ಮುಂದಾಲೋಚನೆ, ಆತ್ಮೀಯತೆ, ವಿಶ್ವಾಸ, ಎಲ್ಲಾ ಇತ್ತು. ಅವಳ ಸುಖವಾದ ಬಾಳುವೆ ಎಂಬ ಮೂಲೋದ್ದೇಶವನ್ನು ಅನುಸರಿಸಿಯೆ ಇತ್ತು.

ಅವನು ನನ್ನ–ರತ್ನನ ಒಪ್ಪಿಗೆಗೆ ಕಾಯಲಿಲ್ಲ. ಎಬ್ಬಿಸಿ ಕೂರಿಸಿ ಎಂದ. ಎದೆಗೊರಗಿಸಿಕೊಂಡೆ. ಆ ಕೊನೆಯ ಗಳಿಗೆಯಲ್ಲಿ ಅವನೊಡನೆ ರತ್ನನನ್ನು ಏಕಾಂತಕ್ಕೆ ಬಿಡಬೇಕೆಂಬ ಪ್ರಜ್ಞೆಯೂ ನಮ್ಮಲ್ಲಾರಿಗೂ ಇದ್ದಂತಿಲ್ಲ. ನನ್ನ ಗೆಳೆಯನ ವರ್ತನೆ ಅದನ್ನು ಬಯಸುವಂತೆಯೂ ಇರಲಿಲ್ಲ. ಕೂರಿಸಿದ ತಕ್ಷಣ ರತ್ನ.ನ—ನನ್ನ ಕೈಯನ್ನು ಸೇರಿಸಿ ಹಿಡಿದು ತನ್ನ ಎದೆಯ ಮೇಲಿರಿಸಿಕೊಂಡ. ಮುಖ ಪ್ರಜ್ವಲವಾಯಿತು.

"ಕೃಷ್ಣ, ನನ್ನ ಆಶೆ ನಿನ್ನಿಂದ ಪೂರ್ಣಗೊಳ್ಳಬೇಕು. ನಮ್ಮ ಗೆಳೆತನದ ಕುರುಹಾಗಿ ಇದನ್ನು ನಡೆಯಿಸಿಕೊಂಡು ಬಾ. ನನ್ನ ಸಾವಿನಿಂದ ನಿನಗೆಂತಹ ಹಾನಿಯೆಂದು ನಾನೇ ಬಲ್ಲೆ. ಆದರೆ ರತ್ನ? ರತ್ನನಿಗಾರು ಗತಿ ಕೃಷ್ಣ? ಚಿಗುರುವ ಬಳ್ಳಿ ಹೆಬ್ಬುವ ಮುನ್ನ ಸುರುಟಿ ಹೋಗಲು ಬಿಡಬಾರದು. ನಿನಗೆ ಅಡ್ಡಿ ಆತಂಕಗಳು ಬರುತ್ತವೆ. ನಿನ್ನವರೆಲ್ಲಾ ದೂರಾಗುತ್ತಾರೆ. ವಿಶ್ವಾಸದವರು ವಿರೋಧಿಗಳಾಗುತ್ತಾರೆ. ಅದೆಲ್ಲವನ್ನೂ ಎದುರಿಸುವ ಎದೆಗಾರಿಕೆ ನಿನಗೆ ಇದೆ. ತಪ್ಪ ಬೇಡ. ರತ್ನ ಇಂದಿನಿಂದ ನಿನ್ನ ಧರ್ಮಪತ್ನಿ. ದೇವರು ನಿಮ್ಮನ್ನು ಸುಖವಾಗಿರಿಸಲಿ!"

ಅವನ ಕಂಬನಿಯ ಧಾರೆ ನಮ್ಮ ಕೈಗಳ ಮೇಲೆ ಬಿತ್ತು. ನಾನು ಮೂಕನಾದೆ. ಅಂತಹ ರತ್ನದಂತಹ ಹುಡುಗಿ ಸಿಕ್ಕಿದಳೆಂಬ ನೀಚ ಹರ್ಷದಿಂದಲೆ ಎಂದು ಕೇಳುವೆಯ? ಗೆಳೆಯನ ಅಗಲುವಿಕೆಯಿಂದಾದ ದುಃಖ ಎನ್ನುವೆಯ! ಎರಡೂ ಅಲ್ಲ. ಬುದ್ಧಿಶೂನ್ಯನಾಗಿ; ಆಡಲು ಏನೂ ತೋರದೆ.

"....ರತ್ನ, ನಿರಾಕರಿಸಬೇಡ! ನಿನ್ನ ದಾಂಪತ್ಯದಲ್ಲಿ ನನ್ನ ಆತ್ಮವಿದೆ. ನನ್ನ ಪ್ರಾಣ, ಆಶೆ, ಎಲ್ಲಾ ನೆಲೆಗೊಳ್ಳುತ್ತದೆ. ಯಾರಾದರೂ ಇದು ಮಾಡುವ ಕೆಲಸವೆ—ಎಂದು ಲೋಕದ ದೃಷ್ಟಿಯಿಂದ ಸಂಶಯಿಸಬೇಡ. ಕೃಷ್ಣನಿದ್ದಾನೆ. ಅವನು ಎದೆಗೊಟ್ಟು ನಿಲ್ಲುತ್ತಾನೆ. ನೀನು ಅವನ ಧೃತಿಯಾಗಿರು. ನನ್ನನ್ನು ಮರೆ ಎನ್ನುವುದಿಲ್ಲ. ಈ ದಿನದ ಘಟನೆ, ಈ ಮನೆ, ನನ್ನನ್ನು ಮರೆಯಲು ಬಿಡುವುದಿಲ್ಲ. ಕೃಷ್ಣ ನಿನ್ನ ಪತಿ. ನಂಬು. ನಿನ್ನ ಬುದ್ಧಿಗೆ ನನ್ನ ಅಭಿಪ್ರಾಯ ನಿಲುಕದ್ದೇನೂ ಅಲ್ಲ. ನಮ್ಮ ಗೆಳೆತನದ ಆಟ ನೀನು ಬಲ್ಲೆ. ನಿನಗೆ ಹೆಚ್ಚಿಗೆ ಹೇಳಲಾರೆ."

ಡಾಕ್ಟರು ತಮ್ಮ ಉಪಚಾರ ನಡೆಸಿಯೆ ಇದ್ದರು. ರತ್ನನ ತಂದೆ ತಾಯಿಗಳು ದಿಙ್ಮೂಢರಾಗಿದ್ದರು. ಅವರನ್ನೂ ಬೇಡಿಕೊಂಡ. ನಿರ್ವಿಕಾರಿಯಾಗಿರಬೇಕಾದ ಡಾಕ್ಟರೂ ಕಂಬನಿಯಿಂದ ಕರವಸ್ತ್ರವನ್ನು ತೊಯಿಸಿದರು.

ಮಕ್ಕಳ ಸದೃಢತೆಗಾಗಿ

"ಬಗನ ಬಾಲಾಮೃತ"

ಹಲ್ಲು ಬರುವಾಗ

"ಎಸ್ಪನ್ಸ್ ಗ್ರಾಇಪ್ ವಾಟರ್"

ಜಂತು ಆದರೆ

"ಧರ್ಮ ಆಯಿಲ್"

ಉಪಯೋಗಿಸಿರಿ. ಇವು ಪತ್ರಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು.

The National Pharmacies & Pharmaceuticals Ltd., Dharwar.

".....ಸಂಪ್ರದಾಯ, 'ಜಾತಿ, ಕಟ್ಟು' ಎಂದು ಹೆದರಿ, ಮಗಳ ಬಾಳಿನಲ್ಲಿ ಮುಳ್ಳು ಬೆಳಸಬೇಡಿ: ಅಗ್ನಿ ಸಾಕ್ಷಿಯಾಗಿ ವಿವಾಹ ಮಾಡಿಸಿ. ಇವಕ್ಕೆ ದೇವರ ಆಶೀರ್ವಾದವಿದೆ...." ಎಂದ. ಅವರಿಗೂ ಆಗ ಒಪ್ಪಿಗೆ ಕೊಡದೆ ವಿಧಿಯಿರಲಿಲ್ಲ.

ಡಾಕ್ಟರರ ಮದ್ದಿನ ಸತ್ತ್ವ ಕಮ್ಮಿಯಾಗುತ್ತಾ ಬಂತು. ಹೃದಯದ ಬಡಿತ ನಿಧಾನವಾಗುತ್ತ ಬಂತು. ನಾಲಗೆಯಲ್ಲಿ ಜೊಲ್ಲು ನಾರಿನಂತೆ ಸುತ್ತಿಸುತ್ತಿ ಬರುತ್ತಿತ್ತು. ಮಾತು ತೊದಲುತ್ತಿತ್ತು. ಆದರೂ ನನ್ನ—ರತ್ನನ ಜೋಡಿಯನ್ನು ದೃಷ್ಟಿಯಲುಗಿಸಿದೆ ನೋಡುತ್ತಿದ್ದ. ಭವಿಷ್ಯದ ಸುಂದರಕಲ್ಪನೆಯಿಂದ ಅವನಿಗೆ ನಿಜವಾಗಿಯೂ ಆನಂದವಾಗಿರಬೇಕು. ಮುಖ ಕಂದಲಿಲ್ಲ. ಬದಲಾಗಿ ಪ್ರಸನ್ನವಾಯಿತು. ರತ್ನನ ತಾಯಿ ಒಂದು ಬಟ್ಟಲಲ್ಲಿ ಹಾಲು ತಂದರು. ರತ್ನ ತನ್ನ ಪತಿಗೆ ಕಡೆಯ ಸೇನೆಯನ್ನು ಸಲ್ಲಿಸಿದಳು. ಒಂದು ತೊಟ್ಟು ಹಾಲು ದಕ್ಕಿತು.

"ರತ್ನ....ನೀನು....ನೀನು ಕೃಷ್ಣ....ಕೃಷ್ಣಾ!"

ಕಟಬಾಯಿಂದ ಕೆಂಪುದ್ರವ ಉಕ್ಕಿಬಂತು. ರತ್ನ ಚಟ್ಟನೆ ಚೀರಿ ನಿಶ್ಚೇಷ್ಟಿತಳಾದಳು. ಗೆಳೆಯನ ಗೋಣು ಮುರಿಯಿತು. ಕಣ್ಣಿನ ತೇಜ ಅಡಗಿತು. ಅವನನ್ನು ಸರಿಯಾಗಿ—ಅಣಿಯಾಗಿ—ಮಲಗಿಸಿ ಮುಖದ ಮೇಲೆ ಮುಸುಕೆಳೆದೆ....."

ಕೃಷ್ಣ ನುರಿತ ಕತೆಗಾರನಂತೆ ಈ ದುರಂತ ಪ್ರಸಂಗವನ್ನು ಕೇಳುವವರ ಎದೆ ಕರಗುವಂತೆ ವರ್ಣಿಸಿದ. ನಿರ್ವ್ಯಸನಿಯಾದ ನನ್ನ ಹೃದಯವೂ ಯಾತನೆಯಿಂದ ಭಾರವಾಯಿತು. ಇಬ್ಬರೂ ಸ್ವಲ್ಪ ಹೊತ್ತು ಆ ಕರುಣೆಯ ಕಡಲಲ್ಲಿ ಮುಳುಗಿ ಮೌನವಾದೆವು. ಕತ್ತಲಿನ ಮುಸುಕು ಹೊದೆಯುತ್ತಿದ್ದ ಸುತ್ತಲಿನ ಪ್ರಕೃತಿಯಂತೆ ನಮ್ಮ ಬಗೆಗಳೂ ಮ್ಲಾನವಾದುವು.

ಸ್ವಲ್ಪ ಹೊತ್ತಿನ ನಂತರ ಕೃಷ್ಣನೆ ಮುಂದುವರಿದ:

"....ಉತ್ತರ ಕಾಂಡವನ್ನೂ ಕೇಳಿಬಿಡು ಗುಂಡು. ನನ್ನ ಗೆಳೆಯ ತೀರಿದ ನಂತರ ರತ್ನ ತವರಿಗೆ ಹೋಗಲು ಸಮ್ಮತಿಸಲಿಲ್ಲ. ಅವಳ ತಂದೆ-ತಾಯಿಗಳಿಗೆ ಅದು ಲೌಕಿಕವಾಗಿ ತೋರಲಿಲ್ಲ. ನಾನೂ ಗೆಳೆಯನ ತಿಂಥಿಮು ಬಯಕೆ—ಎಂಬ ಬ್ರಹ್ಮದಂಡವನ್ನು ಮುಂದಿಟ್ಟುಕೊಂಡು ಜಗತ್ತಿನ ವಾಗ್ಬಾಣಗಳನ್ನು ಆಹ್ವಾನಿಸಲು ಸಿದ್ಧನಾಗಿರಲಿಲ್ಲ. ಏನಾಗ ಬೇಕಿದ್ದರೂ ನೇರವಾದ ಹಾದಿಯಿಂದ ಆಗಬೇಕು. ಆದರೆ ಅವಳನ್ನು ಹೇಗೆ ಹೋಗೆಂದು ಹೇಳಲಿ? ಅವಳ ಅಂತರಂಗದಲ್ಲಿ ಯಾವ ಅಭಿಪ್ರಾಯವಿದೆಯೋ ಗೊತ್ತಾಗಿರಲಿಲ್ಲ. ಆದರೂ ನಾನೇ ಮುಂದುವರಿದೆ. ಲೋಕದ ಬಾಯಿಗೆ ವೃಥಾ ಸಿಕ್ಕುವುದು ಸರಿಯಲ್ಲವೆಂದು ಸ್ಪಷ್ಟವಾಗಿ ಹೇಳಿದೆ. ಅವಳೂ, ಸನ್ನಿವೇಶವನ್ನು ಅರ್ಥಮಾಡಿಕೊಂಡಳು.... ತೌರು ಸೇರಿದಳು.

ಆ ಮನೆಯಲ್ಲಿ—ನನ್ನ ಗೆಳೆಯ ನಾನು ಕುಳಿತು ನಿಂತು ನಕ್ಕು ನಲಿದು ಗೆಳೆತನದ ಪರಾಕಾಷ್ಠತೆಯನ್ನು ಮುಟ್ಟಿದ—ಆ ದೇಗುಲದಲ್ಲಿ, ಅಪಾರ ದುಃಖವನ್ನು ತುಂಬಿಕೊಂಡು ನಾನೊಬ್ಬನೆ ಉಳಿದೆ. ಅಲ್ಲಿಯ ಗಾಳಿ-ಬೆಳಕು ಕಣಕಣಗಳು ಅವನ ನೆನಪನ್ನು ತಂದು ನನ್ನ ಹೃದಯವನ್ನು ಹಿಂಡೀ ಹಿಪ್ಪೆಯಾಗಿಸುತ್ತಿದ್ದುವು. ಆದರೆ ಯಾರೆದುರಿಗೂ ನನ್ನ ಸಂಕಟವನ್ನು ಪ್ರದರ್ಶಿಸುವ ಗೋಜಿಗೆ ಹೋಗಲಿಲ್ಲ. ಊರೆಲ್ಲಾ ಬಂದು ಸಂತಯಿಸಿದರು. ಆ ಅನುತಾಪ ತಾತ್ಕಾಲಿಕವೆಂದು ನನಗೆ ಗೊತ್ತಿತ್ತು. ಹೀಗೇ ದಿನ ಕಳೆದಂತೆಲ್ಲಾ ಅವನ ಕೊನೆಯ ಕೋರಿಕೆ ನನ್ನನ್ನು ಎಚ್ಚರಿಸಲಾರಂಭಿಸಿತು. ಆದರೆ ನಾನಾಗಿ ಹೇಗೆ ಮುಂದಾಗಲಿ? ಒಂದು ಸಾರಿ ಪೆಟ್ಟುತಿಂದ ಅನುಭವ ಮಾಸುವಂತಿರಲಿಲ್ಲ ರತ್ನನ ಅಭಿಲಾಷೆಯೇನು! ಅವಳ ತಂದೆ-ತಾಯಿಗಳು ಆ ಮಹಾ ಸಾಹಸಕ್ಕೆ ಅನುವಾಗಬಲ್ಲರೆ? ನನ್ನ ಬಂಧುಬಳಗಗಳನ್ನೆಲ್ಲಾ ಎದುರಿಸಿ ನಿಲ್ಲುವ ಎದೆ ನನಗಿದೆಯೆ? ಸಮಾಜದ ಅಸಹನೆಯನ್ನು ಸಹಿಸುವ ಶಕ್ತಿ ನನಗೂ-ರತ್ನನಿಗೂ ಬಂದೀತೆ? ಈ ಎಲ್ಲಾ ಸಮಸ್ಯೆಗಳಿಗೂ ಪರಿಹಾರವೆಂದರೆ-ಸುಮ್ಮನಿದ್ದು ಬಿಡುವುದೆ? ಇದ್ದು, ಗತಿಸಿದ ನನ್ನ ಜೀವಸಖನಿಗೆ ಕೃತಘ್ನನಾಗುವುದೆ? ಈ ತೊಳಲಾಟದಲ್ಲಿಯೆ ಎರಡು ತಿಂಗಳು ಸರಿದು ಹೋದುವು. ಈ ಮಧ್ಯೆ ಎರಡು ಮೂರುಸಾರಿ ರತ್ನನ ಯೋಗಕ್ಷೇಮ ವಿಚಾರಿಸಿಕೊಂಡು ಬಂದಿದ್ದೆ.

ಒಂದು ದಿನ ನಾನು-ರತ್ನನ ತಂದೆ ಇಲ್ಲಿಗೇ ಬಂದು ಕುಳಿತೆವು. ಅವರು ವಿಷಯ ಪ್ರಸ್ತಾಪಿಸುವುದಕ್ಕೇ ಬಂದಿದ್ದರು:

"ನಿಮ್ಮ ಗೆಳೆಯನ ಕೊನೆಯ ಬಯಕೆಯ ಬಗ್ಗೆ ಏನು ಮಾಡುತ್ತೀರಿ? ನಾನು ಮಾತು ಕೊಟ್ಟಿದ್ದೇನೆ. ನನ್ನದೂ ನನ್ನ ಹೆಂತತಿಯದೂ ಯಾವ ಅಡ್ಡಿಯೂ ಇಲ್ಲ."

ಅವರ ಮಾತು ಕೇಳಿ ನನಗೆ ಆಶ್ಚರ್ಯವಾಯಿತು. ಬಹುವಾಗಿ ವಿಚಾರಮಾಡಿ ಈ ತೀರ್ಮಾನಕ್ಕೆ ಬಂದಿದ್ದಾರೆಂದು ಕಾಣುತ್ತದೆ. ಅವರ ಮಾತಿನಲ್ಲಿ ಮಗಳ ಭವಿಷ್ಯ, ಸತ್ತ ಅಳಿಯನ ಮೇಲಿನ ಅಭಿಮಾನ ಎರಡೂ ಇತ್ತು. ನಾನು ಕೇಳಿದೆ:

"ರತ್ನ ಏನೆನ್ನುತ್ತಾಳೆ?"

"ಅವಳು ಇದಕ್ಕೆ ವಿರುದ್ಧವಾಗಿಲ್ಲ. ಅವಳನ್ನು ಕೇಳಿದ್ದೇನೆ."

ನನಗೆ ಅವಳ ವಿಷಯದಲ್ಲಿ ಜುಗುಪ್ಸೆಯಾಗಬಹುದು ಗುಂಡು! ಅಥವಾ ಏನೂ ತಿಳಿಯದ ನೊದ್ದು ಅನ್ನಿಸಲೂ ಆಗಬಹುದು. ಹಾಂ.... ಹಾಗೆನ್ನಿಸುವುದಿಲ್ಲ. ಮೊದಲೇ ಹೊಗಳಿದೆಯ ಲ್ಲ. ಈ ಪ್ರಸಂಗದಲ್ಲಿನ ಅವಳ ಧೋರಣೆ ನಿಷ್ಕಲ್ಮಷವಾದುದು. ಕೊನೆಯವರೆಗೂ ಗಂಡನ ನೆನಪಿನಲ್ಲೆ ಕಾಲ ಕಳೆಯಬಲ್ಲ ದೃಢಚಿತ್ತ ಅವಳಲ್ಲಿತ್ತು. ದೇಹದ ಹಸಿವೆಯನ್ನು ಅದುಮಿಡಬಲ್ಲ ಪ್ರಜ್ಞೆಯೂ ಇತ್ತು. ಈ ಮದುನೆಯನ್ನು ನಿರಾಕರಿಸುವುದಕ್ಕೆ ಪ್ರಬಲವಾದ ಸಾಧನವೂ ಇತ್ತು. ಆಗ ಅವಳು ಮೂರು ತಿಂಗಳ ಗರ್ಭಿಣಿಯಾಗಿದ್ದಳು.....!"

ನಾನು ತಟಕ್ಕನೆ ಕೃಷ್ಣನ ಮುಖ ನೋಡಿದೆ!

"....ಹೌದು! ಆ ಮಗು ಶಶಿಧರ ನನ್ನ ಗೆಳೆಯನ ಪ್ರತಿನಿಧಿ. ನನ್ನ ವಿಷಯದಲ್ಲಿ ಹೇಗಾದರೂ ಭಾವಿಸಿಕೊ. ನನ್ನ ಗೆಳೆಯನ ಕೊನೆಯ ಕೋರಿಕೆ ಈಡೇರಿಸುವುದು ನನ್ನ ಕರ್ತವ್ಯವಾಗಿತ್ತು. ಆಗ-ಆಗಲೇನು? ಯಾವಾಗಲೂ- ನನ್ನ ಕಣ್ಣು ಮುಂದಿದ್ದುದು ನಮ್ಮ

ಗೆಳತನವೆ! 'ರತ್ನ ಕುರೂಪಿಯಾಗಿದ್ದರೆ ಏನು ಮಾಡುತ್ತಿದ್ದೆ?' ಎನ್ನುವ ಹೊಲಸು ಪ್ರಶ್ನೆ ಕೇಳಬೇಡ. ಅವಳು ಗರ್ಭಿಣಿಯೆಂದು ತಿಳಿದೂ ಒಪ್ಪಿಕೊಂಡೆ. ಅವಳ ತಂದೆಯೆ ಮುಚ್ಚಿಡದೆ ಹೇಳಿದರು. ದಿನ ತುಂಬುವುದರೊಳಗೇ ಆ ಕಾರ್ಯ ನೆರವೇರಿಸುವುದು ಒಳ್ಳೆಯದೆಂದು ಅವರು ಸೂಚಿಸಿದರು. ನನ್ನ ಒಪ್ಪಿಗೆಯೊಡನೆ ಅವರು ಮನೆಗೆ ಹಿಂದಿರುಗಿದರು.

ದೂರದ ಪುಣ್ಯಕ್ಷೇತ್ರವೊಂದರಲ್ಲಿ ನಮ್ಮ ವಿವಾಹ ವಿಧಿವತ್ತಾಗಿ ನಡೆಯಿತು. ಆಗ ಯಾರಿಗಾದರೂ ಆಹ್ವಾನ ಕಳುಹಿಸಲು ಸಾಧ್ಯವಿತ್ತೆ? ನಿನ್ನ ಮದುವೆಯ ಕರೆಯೋಲೆ ಬಂದುದೂ ಆ ತರುಣವಲ್ಲಿಯೆ! ನಾನು, ನನ್ನ ಗೆಳೆಯ ಕಟ್ಟಿದ್ದ ತಾಳಿಗೇ ಮುತ್ತೊಂದು ಗಂಟು ಹೊಡೆದೆ. ಹೂಮುಡಿಸಿದೆ. ಕುಂಕುಮವಿಟ್ಟೆ. ಅವಳ ತಂದೆ-ತಾಯಿಗಳು ಸಂಕೋಚದಿಂದ ಧಾರೆಯೆರೆದು ಕೊಟ್ಟರು. ರತ್ನನ ಕಪೋಲ ಅಶ್ರುಧಾರೆಯಿಂದ ತೊಯ್ದು ಹೋಗಿರಬೇಕೆಂದು ಭಾವಿಸುವೆಯಲ್ಲವೆ! ಒಂದು ಹನಿಯೂ ಕಣ್ಣಂಚಿನಿಂದ ತುಟುಕಲಿಲ್ಲ! ಅವಳು ಅಗಲೇ ಅವನನ್ನು ಮರೆತಳೆನ್ನುವೆಯಾ?....ಯಾರಿಗೂ ಅನುಮಾನ ಬರಬಾರದೆಂದೊ? ಅಲ್ಲ....ಕಾರಣವನ್ನು ನೀನೇ ಊಹಿಸು!

ಮದುವೆ ಮಾಡಿಕೊಂಡು ಊರಿಗೆ ಬಂದೆವು. ಅವಳ ತಂದೆ-ತಾಯಿಗಳು ಹಾಗೆ ಹೋಗಿದ್ದ ಸಂಗತಿ ಇಲ್ಲಿಯವರೆಗೂ ಗೋಪ್ಯವಾಗೇ ಇದೆ. ಅಲ್ಲಿಂದ ಹಿಂದಿರುಗಿದ ದಿನವೇ ರತ್ನ ತನ್ನ ಮನೆಗೆ ಬಂದು ಬಿಟ್ಟಳು. ಹೊಸಲನ್ನು ದಾಟುತ್ತಿದ್ದ ಹಾಗೆಯೆ ಅವಳು ತಡೆಹಿಡಿದಿದ್ದ ಅಳುವಿನ ಪ್ರವಾಹ ಉಕ್ಕಿ ಹೊರಚೆಲ್ಲಿತು.

ಮುಂದೆ ಆರು ತಿಂಗಳಿಗೆ ನನ್ನ ಗೆಳೆಯ ತಂದೆಯಾದ! ಶಶಿ ಹುಟ್ಟಿದ. ಅಷ್ಟರೊಳಗೆ ನಮ್ಮ ಸಾಹಸದ ಗಿಡ ಫಲಬಿಟ್ಟಿತು. ನನ್ನ ಬಂಧು-ಬಳಗ, ತಂದೆ-ತಮ್ಮ, ಆತ್ಮೀಯರು, ಯಾವುದೋ ಅನಾಚಾರ ಮಾಡಿದೆನೆಂದು ನನ್ನಿಂದ ದೂರಾದರು. ಸಕಲಕ್ಕೂ ಸಾಕ್ಷಿಯಾಗಿದ್ದ ಡಾಕ್ಟರರೂ ಸತ್ಯವನ ನುಡಿಯನ್ನು ಪಟ್ಟಾಗಿ ಹಿಡಿಯುವುದರಲ್ಲಿ ತಿರುಳಿಲ್ಲವೆಂದು ನೋಯಿಸಿದರು. ಸೋಜಿಗವೆಂದರೆ ರತ್ನನ ತಂದೆ-ತಾಯಿಗಳೂ ಬಹಿರಂಗವಾಗಿ ನಮಗೆ ಬಹಿಷ್ಕಾರ ಹಾಕಬೇಕಾಯಿತು. ಶೌಮ್ಯ....ವಿಶ್ವಾಸಿಗಳು ವಿರೋಧಿಗಳಾದರು. ಕ್ರೂರವಾದ ಮಾತುಗಳಿಂದ ಎದೆಯನ್ನು ಇರಿದರು. ಆಗ ನಿಜವಾಗಿಯೂ ರತ್ನ ನನ್ನ ಧೃತಿಯಾದಳು. ಅವಳು ತೋರಿದ ಸ್ಥೈರ್ಯ ಹೆಚ್ಚಿನದು. ಬೇಸರಗೊಂಡ ನಾನು, ಈ ಊರನ್ನೇ ಬಿಡೋಣ ಎಂದೆ. ಅವರು ತಡೆಹಿಡಿದಳು.

"ಇವೆಲ್ಲಾ ಅನಿರೀಕ್ಷಿತವೆ? ಎಲ್ಲಿ ಹೋದರೂ, ಸತ್ಯಸಂಗತಿಯನ್ನು ತಿಳಿಯಬಾರದ ಜನರು ಅನ್ನುವುದು ತಪ್ಪಿದ್ದೇ ಅಲ್ಲ. ಬೇರೆ ಊರಿಗೆ ಹೋಗಿ ಹೊಸಬರ ಬಾಯಿಗೂ ತಿಂಡಿಯೊದಗಿಸುವ ಬದಲು ಊರಲ್ಲಿಯೆ ಇದ್ದು ಬಿಡೋಣ. ಎಷ್ಟು ದಿನ ಅಂದಾರು?" ಎಂದು ತಿಳಿಯ ಹೇಳಿದಳು.

ನನ್ನವರ ಮಧ್ಯದಲ್ಲಿ, ನನ್ನನ್ನು ದೊಡ್ಡ ಮನುಷ್ಯನೆಂದು ಅಭಿಮಾನದಿಂದ ಮೆರೆಸಿದ ಊರಿನಲ್ಲಿ, ಅಸ್ಪೃಶ್ಯನಂತೆ ಬಾಳುತ್ತಿದ್ದೇನೆ. ಈ ಸರೋಕ್ಷಬಹಿಷ್ಕಾರ ನನ್ನ ರತ್ನನ ಜೀವನದ ಮೇಲೆ ಏನೂ ಮಾಡಿಲ್ಲ. ಬದಲಾಗಿ ಹತ್ತಿರ ಹತ್ತಿರ ತಂದು ಅಭೇದಗೊಳಿಸಿವೆ. ಗೋಪಿಯಂತಹ ಕೆಲವು ಮಿತ್ರರು ವಿನಾ ಮತ್ತಾರೂ ಮನೆಯಕಡೆ ಹಾಯುವುದಿಲ್ಲ. ನಾನು ಬ್ರಾಹ್ಮಣನೇ ಅಲ್ಲವಂತೆ ಹಾಗಾದರೆ ಮಾತಿಗೆ ಕದಿಯುವವನು, ಅನ್ಯಾಯವನ್ನು ಕಂಡೂ ಭೀತಿಯಿಂದ ಉಪೇಕ್ಷಿಸುವವನು, ಪವಿತ್ರವಾದ ಸ್ನೇಹವನ್ನು ಸಾವಿನೊಡನೆಯೆ ಕೊನೆಗಾಣುವವನು ಬ್ರಾಹ್ಮಣನೆ? ಅದಕ್ಕೇ ನಾನು ಕೇಳಿದ್ದು, ನಾನು ಯಾವ ಜಾತಿ ಎಂತ..... "

ನನಗೆ ತುಂಬಾ ಆಶ್ಚರ್ಯವಾಯಿತು. ಕೃಷ್ಣನ ತ್ಯಾಗ ಹಿರಿದಾಯಿತು. ಸತ್ತ ಗೆಳೆಯನ ಅಂತಿಮಕೋರಿಕೆ ಸಲ್ಲಿಸಲು ಲೋಕವನ್ನೆ ಎದುರು ಹಾಕಿಕೊಂಡವರುಂಟೆ? ಒಂದು ಹುಡುಗಿಯ ಬಾಳುವೆಗೆ ಊರುಗೋಲಾದ, ಅವಳ ನಡೆನುಡಿ ಸಂಸ್ಕೃತಿ ಕಾಡಬೆಳುದಿಂಗಳಾಗದಂತೆ ನೋಡಿಕೊಂಡ ಅನಾಥನಾದ ಅವಳ ಕಂದನಿಗೆ ತಂದೆಯಾದ! ಸಮಾಜದಲ್ಲಿ ಅಗತ್ಯವಾಗಿ ಆಗಬೇಕಾದ ಸುಧಾರಣೆಗೆ ಆಧಿಪುರುಷನಾದ! ಅವನನ್ನು ಹೇಗೆ ಅಭಿನಂದಿಸಬಲ್ಲೆ? ಅದರೂ ಮನಸ್ಸು ತಡೆಯಬೇಕಲ್ಲ! ಅವನ ಕೈ ಹಿಡಿದು ಒತ್ತುತ್ತ ನನ್ನೆದೆಯ ಭಾರವನ್ನು ತೆರೆದಿಟ್ಟೆ:

"ತುಂಬಾ ಸಂತೋಷಕರವಾದ ಕೆಲಸ ಮಾಡಿದೆ ಕೃಷ್ಣ! ನಮ್ಮ ಕಾಲದ ಮಹತ್ಕಟನೆಗಳಲ್ಲೊಂದು ಇದು! ಕೋಟ್ಯಂತರ ವರುಷಗಳ ಸಂಪ್ರದಾಯ, ರೂಢಿ, ಕಟ್ಟು ಮುರಿದು ನಿಲ್ಲುವುದು ಸಾಮಾನ್ಯವಲ್ಲ! ಈ ಕ್ರಾಂತಿಮಾರ್ಗ ಅವಶ್ಯಕ. ಮನೆಗೊಬ್ಬ ಬಾಲವಿಧವೆಯರು ತಮ್ಮ ಹುಟ್ಟನ್ನು ಸವಿಸಿಕೊಳ್ಳುತ್ತ ಬದುಕು ಸಾಗಿಸುತ್ತಿದ್ದಾರೆ. ಅಂತಹರಿಗೆ ಪುನರ್ವಿವಾಹ ಧರ್ಮವೆಂದು ಸುಧಾರಕರೂ ಭೋಧಿಸುತ್ತಿದ್ದಾರೆ. ಅವರ ಚಳುವಳಿಯೂ ಜೋರಾಗಿದೆ. ಆದರೆ ಯಾರೂ ಈ ಸಾಹಸಕ್ಕೆ ಎದೆಗೊಟ್ಟು ನಿಂತವರಿಲ್ಲ. ಆದರ್ಶ ಬೋಧಿಸಿದರೆ ಕೇಳುವುದಕ್ಕೆ, ಅನುಸರಿಸಿದರೆ ಮೆಚ್ಚುವುದಕ್ಕೆ ಚೆನ್ನು! ಸಮಾಜದ ದೇಶದ ಹಿತಚಿಂತಕರಿಲ್ಲರಿಗೂ ಆದರ್ಶದ ಅಸ್ತಿಭಾರ ಹಾಕಿದೆ ಕೃಷ್ಣ! ನಿಮ್ಮಿಬ್ಬರಿಗೂ ನನ್ನ ಧನ್ಯವಾದ."

ನನ್ನದು ಪುಟ್ಟ ಭಾಷಣವೇ ಆಯಿತು. ಅವನು ನಸುನಕ್ಕ.

"....ಹೀಗೇ ನೋಡು, ಗುಂಡು! ಈ ವಿಷಯವಾಗಿ ಹೊಗುಳುವ ಲೋಕವೂ ಇದೆ. ತೆಗಳುವ ಬಾಯಿಯೂ ಇದೆ. ಎರಡಕ್ಕೂ ನನ್ನ ಕಿವಿ ಕಿವುಡು."

ಕೃಷ್ಣ ಮೇಲೆದ್ದ. ಇಬ್ಬರೂ ಮನೆಯ ಕಡೆ ಹೆಜ್ಜೆ ಹಾಕಿದೆವು. ದಾರಿಯಲ್ಲಿ ಯಾರೂ ಮಾತಾಡಲಿಲ್ಲ. ಅವನ ಹೃದಯ ಹಗುರಾಗಿತ್ತು. ನನ್ನ ಎದೆ ಅದ್ಭುತವನ್ನು ಅನುಭವಿಸಿದ ಫಲವಾಗಿ ತುಂಬಿಬಂದಿತ್ತು. ಮನೆಗೆ ಇನ್ನೂ ಮೂರು ಮಾರಿರಬೇಕು. ನನಗೊಂದು ಸಂಶಯ ತಲೆದೋರಿತು. ಅದೊಂದನ್ನು ಉಳಿಸಿಕೊಂಡು ಹಿಂದಿರುಗುವುದೆ? ಕೇಳಿಯೆ ಬಿಟ್ಟೆ.

"ಕೃಷ್ಣ. ಈಚೆಗೆ ಈ ಮದುವೆಯಿಂದ ನಿನಗೆ ಪಶ್ಚಾತ್ತಾಪವಾಗಿಲ್ಲವೆ? ....."

ಅವನು ಅರ್ಥಮಾಡಿಕೊಂಡ. ಅವನ ಗೆಲವು, ತೃಪ್ತಿಯ ಮುಖಮುದ್ರೆ ನನ್ನ ಸಂಶಯವನ್ನು ಬಗೆಹರಿಸಲು ಸಾಕಾಗಿತ್ತು. ಆದರೂ.....

"ಮನೆಯಲ್ಲಿ ನಿನ್ನ ಅನುಮಾನ ಪರಿಹಾರವಾಗಬೇಕು..... ಬಾ." ಅಂದ.

ಬಾಗಿಲಲ್ಲಿ ರತ್ನ ಇಬ್ಬರನ್ನೂ ಸ್ವಾಗತಿಸಿದಳು. ಅವಳನ್ನು ನೋಡುತ್ತಿದ್ದ ಹಾಗೆಯೆ— ಹೊಸಬಳನ್ನು, ಮಹಾಸತಿಯನ್ನು— ಕಂಡಂತಾಯಿತು. ಅವಳ ನಿರ್ಮಲವಾದ ನಗೆ, ಅವಳ ಅಂತರಂಗದ ಕೈಗನ್ನಡಿಯಾಗಿತ್ತು.

"ಶಶಿಧರ ಎಲ್ಲಿ ರತ್ನ?"

"ಚೆನ್ನ ಎತ್ತಿಕೊಂಡು ಹೋಗಿದ್ದಾನೆ. ಇನ್ನೇನು ಬರುವ ಹೊತ್ತು. ಎಷ್ಟು ಹೊತ್ತು ಮಾಡಿದಿರಿ? ಅಡಿಗೆಯಾಗಿದೆ"

ಕೃಷ್ಣ ನೇರವಾಗಿ ದೇವರ ಮನೆಗೆ ನನ್ನನ್ನು ಕರೆದುಕೊಂಡು ಹೋದಾಗ, ಊದುಗಡ್ಡಿಯ ಪರಿಮಳ ಸ್ವಾಗತಿಸಿತು. ಕೃಷ್ಣನ ಅಭಿಪ್ರಾಯವೇ ಗೊತ್ತಾಗಲಿಲ್ಲ. ಇದಿರಿಗೆ ಒಂದು ಭಾವಚಿತ್ರ; ಮಲ್ಲಿಗೆ ದಂಡೆಯಿಂದ ಅಲಂಕೃತವಾಗಿತ್ತು. ಪಕ್ಕದಲ್ಲಿ ನೀರಾಜನ ಉರಿಯುತ್ತಿತ್ತು. ಕೃಷ್ಣ ಆದರ ಇದಿರಿಗೆ ಎವೆ ಮುಚ್ಚಿನಿಂತ. ನಾನು ನೋಡಿದೆ:

ಅವನ ಗೆಳೆಯನ ಭಾವಚಿತ್ರ!

ಕೃಷ್ಣ— ರತ್ನರಿಬ್ಬರೂ ಅವನನ್ನು ಸದಾ ನೆನಸುವರೆಂದು ಅದು ಸೂಚಿಸಿತು. ನನ್ನ ಅಂತರಂಗ ಪರಿಹಾರವನ್ನು ಕಂಡುಕೊಂಡಿತು.

ಊಟ ಮಾಡಿದೆ. ತಾಂಬೂಲ ಮೆಲ್ಲುವಾಗ ಅಳು ಚೆನ್ನ ಶಶಿಧರ ನನ್ನು ಕರೆತಂದ. ಬಾಗಿತಬ್ಬಿಕೊಂಡೆ. ಒಂದು ವರ್ಷದ ಮಗು ಸಹಜವಾಗಿ ಮುದ್ದಾಗಿದ್ದ. ಅವನ ಹುಟ್ಟಿನ ಹಿಂದೆ–ಮುಂದೆ ಒಂದು ಇತಿಹಾಸವೇ ಇದ್ದು, ಅವನ ವಿಷಯದಲ್ಲಿ ಅನಿರ್ವಚನೀಯ ಪ್ರೀತಿಯುಂಟಾಯಿತು. ಕೃಷ್ಣನನ್ನು ಕಂಡು ಕೇಕೆ ಹಾಕಿದ ಅವನು ಕರೆದು ಕೊಳ್ಳಲು ಕೈ ಚಾಚಿದಾಗ ನನ್ನ ತೋಳಿನಿಂದ ಇಳಿಯಬಿದ್ದು ಅವನ ತಕ್ಕೆಗೆ ಜಾರಿದ. ಈ ದೃಶ್ಯವಂತೂ ಕಣ್ಣು ತೆರೆಯಿಸಿತು.

"ರತ್ನನ ಬಾಳುವೆ ಹಾಗಾದರೆ ಹಸನಾಗಿದೆ ಕೃಷ್ಣ ಪಶ್ಚಾತ್ತಾಪ ಪಡಬೇಕಾಗಿಲ್ಲ. ಸತ್ತವನ ಅಂತಿಮ ಬಯಕೆ ನನಸಾಗಿದೆ!" ಎಂದಿತು ನನ್ನ ಅಂತರ್ವಾಣಿ.

ಮಗುವನ್ನು ರತ್ನ ಹಾಲುಕುಡಿಸುವ ಸಲುವಾಗಿ ಕರೆದೊಯ್ದ ಮೇಲೆ, ಒಂದು ಕಾಲು ಗಂಟೆ ಅದೂ-ಇದೂ ಮಾತನಾಡುತ್ತಾ ಕಳೆದಾಯಿತು.

"ಇನ್ನು ಹೋಗುತ್ತೇನಪ್ಪಾ. ಮದುವೆಯ ಮನೆಯಲ್ಲಿದ್ದ ಧಾತೆಯೆ ಆಗಲಿಲ್ಲ. ನಾಳೆ ಇದ್ದರೆ, ಬರುತ್ತೇನೆ. ನಿಮ್ಮನ್ನು ಕಂಡು ತುಂಬಾ ಸಂತೋಷವಾಯಿತು ಕೃಷ್ಣ!" ಎಂದು ಹೇಳಿ, ರತ್ನಮ್ಮನಿಗೂ ಹೇಳಿ ಬರೋಣವೆಂದು ಒಳಗೆ ಹೋದೆ. ಕೃಷ್ಣನೂ ಹಿಂಬಾಲಿಸಿದ.

"ಹೋಗಿ ಬರುತ್ತೇನೆ ರತ್ನಮ್ಮಾ!"

"ಊರಿಗೆ ಹೊರಡುತೀರಾ ಬೆಳಿಗ್ಗೆ? ನಾಳೆಯೆ ನಾಗೋಲಿಯೆಂದು ಕಾಣುತ್ತೆ....?"

"ನಾನೇನೋ ಹೊರಡಬೇಕೆಂದಿರುತ್ತೇನೆ; ಬೆಳಗ್ಗೆ....ನೋಡಬೇಕು."

"ಇದ್ದರೆ, ಬೆಳಗಿನ ತಿಂಡಿಗೆ ಇಲ್ಲಿಗೇ ಬನ್ನಿ. ಈ ದಿನ ನಮ್ಮ ಮನೆಯಲ್ಲಿ ಊಟಮಾಡಿ, ಹೇಗೂ ನಮ್ಮವರಾದಿರಿ!"

ಹಾಗಾದರೆ ಯಾರೂ ಬರುತ್ತಿಲ್ಲವೆ ಇಲ್ಲಿಗೆ? ರತ್ನನ ಮಾತಿನಲ್ಲಿ ಆ ಕೊರಗು ಇತ್ತು. ಸಂಸಾರ—ಮನೆಯೆಂದರೆ, ನಮ್ಮವರು-ತಮ್ಮವರು ಬಂದೂ-ಹೋಗಿ ಮಾಡಿದರೆ ಚೆಂದ. ಕೃಷ್ಣ ಗಂಡಸು. ಸಹಿಸಬಲ್ಲ. ಹೆಂಗುಸಿಗೆ ತನ್ನ ಸಂಸಾರವನ್ನು ಇತರರು ಮೆಚ್ಚಿಕೊಂಡಾಗಲೆ ತೃಪ್ತಿ. ರತ್ನ–ಎಂತಹಳಾದರೂ–ಹೆಣ್ಣು. ತನ್ನವರ – ಕಂಡುಕೇಳಿದವರ— ಮಧ್ಯೆ ಖೈದಿಯಂತೆ, ಯಾರಾದರೂ ಬಂದಾರೆ, ನೋಡಿಯೇನೆ, ಎರಡು ಮಾತಾಡಿಸಿಯೇನೆ ಎಂಬ ಬಯಕೆಯಲ್ಲಿ ದಿನ ದಬ್ಬ ಬೇಕಾಗಿದ್ದರೆ, ಅವಳೆದೆಯಲ್ಲಿ ದುಃಖ ತುಂಬಿಲ್ಲವೆ? ಸಾಯಂಕಾಲ ನೀರು ಕುಡಿಯುವಾಗಿನ ಪ್ರಸಂಗ ನೆನಪಾಗಿ ತುಂಬಾ ವ್ಯಥೆಯಾಯಿತು.

"ಇದ್ದರೆ ಅಗತ್ಯ ಬರುತ್ತೇನಮ್ಮಾ. ಈಗ ಹೊರಡಲೆ!.... ಏನಂಣ?" ಎಂದು ಶಶಿಯ ಕೆನ್ನೆ ಹಿಂಡಿದೆ. ಅವನು ಕಿಲಕಿಲನೆ ನಗುತ್ತ, ತಾಯಿಯ ಸೊಂಟದಿಂದ ನನ್ನ ಕಡೆಗೆ ಬಾಗಿದ. ಎತ್ತಿಕೊಂಡು ಮುತ್ತಿಟ್ಟೆ.

ಆಗ ಕೃಷ್ಣ ಒಂದು ಮಾತು ಕೇಳಿದ. ಅದು ಯಾಕೆ ಕೇಳಿದನೊ! "ನಿನ್ನ ಮಗಳನ್ನು ಶಶಿಧರನಿಗೆ ಕೊಡುತ್ತೀಯೇನೊ?"

ನಾನು ಯೋಚಿಸುವುದಕ್ಕೂ ಮೊದಲು— ಸಮಯೋಚಿತ ಮಾತನಾದರೂ ಹೇಳುವುದಕ್ಕೂ ಮೊದಲು–ನನ್ನ ಬಾಯಿಂದ ಈ ಮಾತು ಹೊರಬಿತ್ತು:

"ಇವನಿಗೆ? ನೋಡೋಣ....ನೋಡೋಣ!"

ನಾನು ಪೆಚ್ಚಾದೆ. ಮಗುವನ್ನು ಕೃಷ್ಣನ ಕೈಗೆ ಹೇಗೆ ಕೊಟ್ಟೆನೊ! ಸರಸರನೆ ಹೆಜ್ಜೆ ಹಾಕಿದೆ. ಅವನು ಫಕ್ಕನೆ ನಗುವುದಕ್ಕೂ ನಾನು ಹೊಸ್ತಿಲನ್ನು ಎಡಹುವುದಕ್ಕೂ ಸರಿ ಹೋಯಿತು.

ನಾನು ತಿರುಗಿ ಸಹ ನೋಡಲಿಲ್ಲ. ಅಷ್ಟು ನಾಚಿಕೆಯಾಯಿತು. ಅವನ ನಗು ನನ್ನ ಬೆನ್ನಟ್ಟಿ ಬರುತ್ತಿದೆಯೇನೊ ಎಂಬ ಅಂಜಿಕೆಯಿಂದ ಮುಂದೆ ಮುಂದೆ ಕಾಲು ಬೀಸಿದೆ.

ನನಗೆ ಆಶ್ಚರ್ಯವೂ ಆಯಿತು!

ಸಂಪ್ರದಾಯ—ಶುಷ್ಕವಾಗಿಯಾದರೂ ಉಳಿದಿರುವ ಸನಾತನ ಧರ್ಮ, ಸಮಾಜರೂಢಿ—ನಮ್ಮನ್ನು ನಡೆಯಲ್ಲಿ, ನುಡಿಯಲ್ಲಿ, ಭಾವನೆಯಲ್ಲಿ ಹೇಗೆ ಅಸ್ವತಂತ್ರರನ್ನಾಗಿಸಿದೆ!

ನನಗೆ ನಗುವೂ ಬಂತು!

ನನ್ನ ಹೆಂಡತಿ ಮನೆಗೆ ಬಂದು ಮೂರು ತಿಂಗಳೂ ಆಗಿರಲಿಲ್ಲ.

ನನ್ನ ಮಾತು ನನಗೇ ಕಪಾಳಕ್ಕೆ ಹೊಡೆಯಂತೆ ಕೇಳಿತು:

"ಆದರ್ಶ ಬೋಧಿಸಿದರೆ ಕೇಳುವುದಕ್ಕೆ, ಅನುಸರಿಸಿದರೆ ಹೆಚ್ಚುವುದಕ್ಕೆ ಚೆನ್ನ!"

ವಿರಹಕೂಜನ

ಶ್ರೀ. ಚೆನ್ನವೀರ ಕಣವಿ, ಧಾರವಾಡ

卐

೧

ಮನೆಯೊಳಗೆ ಅತ್ತಿತ್ತ ಕಾಲು ಸುಳಿದಾಡುತಿನೆ–
ಕಂಡುಕಂಡೂ ಕಣ್ಣು ಹುಡುಕುತಿಹವು;
ಸುಮ್ಮಸುಮ್ಮನೆ ಕವಿಗಳೇನೊ ಅಲಿಸಿದಂತೆ–
ತನ್ನ ರೂಢಿಗೆ ತಾವೆ ನಾಚುತಿಹವು.
ಅಡುಗೆಮನೆಯೊಳು ಬರಿಯ ಹೊಗೆಯಾಡಿದಂತಿಹುದು
ದಿನದ ಗುಂಜಾರವದ ನಿನದವಿಲ್ಲ;
ನಡುನುನೆಗು ಪಸರಿಸುವ ನಗೆಯ ಸುಳಿವೇ ಇಲ್ಲ—
ಸೆಜ್ಜೆನನೆ ಪಡಿಪಾಟು ಶಿವನೆ ಬಲ್ಲ!

೨

ತವರುಮನೆ ನೆನೆದೊಡನೆ ಹಗಲೆಲ್ಲ ಹಿಗ್ಗಿದಳು
ನನ್ನ ಅನುಮತಿಗೆನ್ನಿತೊ ಅಮೃತಧಾರೆ!
ಮರುಗಳಿಗೆಯಲಿ ಮತ್ತೆ ಇರುಳುಕೊರಳನ್ನಪ್ಪಿ
'ಅಗಲಲಾರೆನು' ಎಂಬ ಕಣ್ಣಧಾರೆ!
ಅವಳಿಗೋ ಮೊದಲ ಸಲ ತವರುಮನೆ ಹಂಬಲವು
ನನಗೊ ಅಗಲಿಕೆಯೊಂದು ಮಧುರಶಾಪ!
ಹೆತ್ತ ತಾಯ್ತಂದೆಗಳ ಕರುಳಮಲ್ಲಿಗೆಯರಳ
ಕಳಿಸಿರುನೆ ನಾಲ್ಕುದಿನ ಇರಲಿ ಪಾಪ!

೩

ಸಂಜೆ ಮನೆಗೈತರಲು ಪ್ರೇಮಪೂರ್ಣಮೆ ನಗಲು
ಹುಣ್ಣಿಮೆಗು ಹೊಸಬಣ್ಣ ಮೂಡುತಿತ್ತು –
ಇಡಿಯದಿನದಾಯಸವು ಮಂದಹಾಸದಿ ಕರಗಿ
ಸ್ವಚ್ಛಂದ ಛಂದದಲಿ ಹಾಡುತಿತ್ತು!
ಗಾಳಿಯಲೆಗೂ ನಲುಮೆ ಬೆರಳನಾಡಿಸಿದಂತೆ
ತರಳೆಯೊಲವಿನ ಹೊಳವುದೋರುತಿತ್ತು;
ಬೆಣ್ಣೆಯೊಳಗಿನ ಕೂದಲೆಳೆಯ ಹೊರದೆಗೆವನಿತು
ನಯವಾಗಿ ದಿನಬಳಕೆ ಸಾಗುತಿತ್ತು.

೪

ಅಂದು ಆಗಿನ ಬುದ್ಧಿ ಇಂದಿಗಿರಬೇಕಲ್ಲ!—
ಸಾಕುಸಾಕೆನಿಸಿಹುದು ಮೂಕಮನಕೆ,
ಏಕಾದರೂ ಕಳಿಸಿ ಏಕಾಕಿಯಾದೆನೋ—
ಪತ್ರಬಂದಿದೆ, ಆದರಷ್ಟೆ ಸಾಕೆ?
ಒಂದು ತೋಪಿನ ಮರದಿ ಕುಳಿತ ಬೆಳವನ ಹಕ್ಕಿ
ಮೊಳಗಿಸಲು ಕೂಜನದ ಪ್ರಣಯಗೀತ
ಸ್ವಿಚ್ಚನೊತ್ತಲು ಬಲ್ಬು ಬೆಳಕು ಚಿಮ್ಮುವ ತೆರದಿ
'ಕೂ' ಎಂದು ಅದರ ಸಖಿ ಎದೆಯು ಮಿಡಿತ!

× × × ×

ಇಂದು ಬಂದಿಹ ಓಲೆಯಲ್ಲಿ ಮರುಕದ ಸಾಲು:
"ರವಿವಾರ ದಿನ ನೀವು ಬರಲೆಬೇಕು,"
ಅದು ಎಲ್ಲ ಸರಿ, ಅದರಿಂದು ಮಂಗಳವಾರ
ನಾಲ್ಕುದಿನಗಳನೆಂತು ನೂಕಬೇಕು?

ಪಂಚವಾರ್ಷಿಕ ಯೋಜನೆ

ಶೀ. ವೀ. ಚ. ಹಿತ್ತಲಮನಿ, ಬಿ. ಎಸ್‌ಸಿ (ಆಗ್ರಿ) ಆನರ್ಸ್, ಧಾರವಾಡ

ಲೇಖಾಂಕ : ೨

ಭಾರತದ ಪಂಚವಾರ್ಷಿಕ ಯೋಜನೆಯ ಉದ್ದೇಶ ಭವ್ಯವಾಗಿದೆ. ಜನತೆಯ ಭವಿಷ್ಯವನ್ನು ಸುಂದರಗೊಳಿಸುವಂತಹ ಪ್ರತ್ಯಕ್ಷ ವ್ಯವಹಾರವಾಗಿದೆ. ಇದಕ್ಕಾಗಿ ದುಡಿಯುವ ಕಾರ್ಯಕರ್ತರ ಕರ್ತವ್ಯವಿನಿಸ್ಕೆ—ಪ್ರಾಮಾಣಿಕತನಗಳೇ ಈ ಯೋಜನೆಗೆ ಗೆಲವನ್ನು ತಂದುಕೊಡಬಲ್ಲವು.

ಒಕ್ಕಲುತನ, ಸಮಾಜವಿಕಾಸ, ನೀರಾವರಿ ಮತ್ತು ವಿದ್ಯುತ್

ಸಾಮಾನ್ಯವಾಗಿ ಈ ಗುಂಪುಗಳಲ್ಲಿಯ ಯೋಜನೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗಿದೆ. ಒಟ್ಟು ಯೋಜನೆಯ ೨೦೬೯ ಕೊಟಿ ರೂಪಾಯಿಗಳಲ್ಲಿ ಸುಮಾರು ೯೨೨ ಕೋಟಿ ರೂಪಾಯಿಗಳನ್ನು ಎಂದರೆ ನೂರರಲ್ಲಿ ೪೮·೫ರಷ್ಟು ಹಣವನ್ನು ಈ ಗುಂಪುಗಳ ಯೋಜನೆಗಳಿಗೆ ವೆಚ್ಚ ಮಾಡಲಾಗುವುದು. ವಿವಿಧ ಯೋಜನೆಗಳಿಗೆ ವಿನಿಯೋಗಿಸಿದ ಹಣದ ಹಂಚಿಕೆ ಕೆಳಗಿನಂತಿದೆ:

(ಒಟ್ಟು ವೆಚ್ಚದಲ್ಲಿ)

ಒಕ್ಕಲುತನ ಮತ್ತು ಸಮಾಜವಿಕಾಸ	೬೬ ಕೋಟಿ ರೂ.	೧೭·೫ ./.
ನೀರಾವರಿ	೧೬೨ ಕೋ ರೂ.	೮·೧ ./.
ವಿವಿಧೋದ್ದೇಶ ನೀರಾವರಿ ಮತ್ತು ವಿದ್ಯುತ್ ಯೋಜನೆಗಳು	೨೨೬ ಕೋ. ರೂ.	೧೨·೯ ./.
ವಿದ್ಯುತ್	೧೨೬ ಕೋ. ರೂ.	೬·೨ ./.

ರಾಷ್ಟ್ರಕ್ಕೆ ಅತ್ಯವಶ್ಯವಿರುವ ಆಹಾರೋತ್ಪಾದನೆಯ ಜೊತೆಗೆ ಅನೇಕ ಉದ್ಯೋಗಗಳಿಗೆ ಅತ್ಯವಶ್ಯವಿರುವ ಕಚ್ಚಾ ಮಾಲಿನ ಪೂರೈಕೆಯೂ ಸಾಕಷ್ಟು ಪ್ರಮಾಣದಲ್ಲಿ ಉತ್ಪಾದಿತವಾಗುವುದು.

ಒಕ್ಕಲುತನ ಮತ್ತು ಸಮಾಜವಿಕಾಸ

ಒಕ್ಕಲುತನ

ಭಾರತದೇಶದ ಮುಖ್ಯ ಉದ್ಯೋಗವು ಒಕ್ಕಲುತನವಾಗಿದೆ ಅನೇಕರು ಅವಲಂಬಿಸಿರುವ ಈ ಉದ್ಯೋಗ ಇಂದು ಉತ್ತಮಸ್ಥಿತಿಯಲ್ಲಿಲ್ಲ. ಅಲ್ಲದೆ ಒಕ್ಕಲುತನವ ಹುಟ್ಟುವಳಿಯು ಕೂಡ ತೀರ ಕಡಿಮೆಯಿದೆ. ಪ್ರತಿ ಎಕರೆಯ ಹುಟ್ಟುವಳಿಯು ವಿಶ್ವದಲ್ಲಿಯೇ ಅತಿ ಕನಿಷ್ಠ ಹುಟ್ಟುವಳಿಯ ದೇಶಗಳಲ್ಲಿಯಷ್ಟಿದೆ. ಭಾರತದ ಒಕ್ಕಲುತನ ಮಳೆಗಾಗಿ ಮಳೆಯನ್ನೇ ಅವಲಂಬಿಸಿದೆಯೆಂದರೆ ತಪ್ಪಾಗದು. ಮಳೆಯು ಒಟ್ಟು ಬೀಳುವಿಕೆ ಕಡಿಮೆಯಿಲ್ಲದಿದ್ದರೂ, ಅದರ ಉಪಯೋಗಕ್ಕಿಂತ, ಅನಿಷ್ಟಗಳೇ ಹೆಚ್ಚಾಗುತ್ತಲಿವೆ. ದಟ್ಟವಾದ ಕಾನುಗಳಲ್ಲಿಯೋ, ಗುಡ್ಡ ಬೆಟ್ಟ ಪ್ರದೇಶಗಳಲ್ಲಿಯೋ ಮಳೆ ಅತಿಯಾಗಿ ಬೀಳುತ್ತದೆ. ಅನೇಕಾನೇಕ ಹೊಳೆ–ಹಳ್ಳಗಳಿಲ್ಲ ತುಂಬಿ ಹರಿದು, ವರುಷ ವರುಷವೂ ವ್ಯರ್ಥ ಸಮುದ್ರ ತುಂಬಿಬಿಡುತ್ತವೆ. ಅಲ್ಲದೆ ದುರ್ದೈವೀ ವರುಷಗಳಲ್ಲಿ ಮಹಾಪೂರ ಬಂದು, ದಂಡೆಯಮೇಲಿನ ಊರು, ಕೇರಿ, ಹೊಲ ಮನೆಗಳನ್ನು ಕೊಚ್ಚಿಕೊಂಡೊಯ್ದುಬಿಡುತ್ತವೆ. ಅನೇಕ ನದಿಗಳು ತಮ್ಮ ಪಾತ್ರ ಬದಲಿಸುವ ಕೊನೆಯ ಮಟ್ಟಕ್ಕೂ ಹೋಗುವುದುಂಟು. ಈ ನದಿಗಳಿಗೆ ಅಲ್ಲಲ್ಲಿ ಅಣೆಕಟ್ಟು ಹಾಕುವುದರಿಂದ, ಇಂಥ ಅನಾಹುತಗಳನ್ನು ತಪ್ಪಿಸುವುದರ ಜೊತೆಗೆ ಅವಶ್ಯವಿರುವ ನೀರಿನ ವಿನಿಯೋಗಕ್ಕೆ ಅವಕಾಶ ಸಿಕ್ಕುತ್ತದೆ. ಇನ್ನೂ ಕೆಲವು ಹೊಳೆಗಳು ಸುತ್ತಲಿನ ಭೂಮಿಗಿಂತ ತೀರ ಕೆಳಮಟ್ಟದಲ್ಲಿ ಹರಿಯುವುದರಿಂದ, ನೀರಾವರಿಗೆ ಒಡ್ಡು–ಕಾಲುವೆಗಳಿಂದ ಸಾಮಾನ್ಯವಾಗಿ ಸಾಧ್ಯವಿಲ್ಲ. ಅಂಥಲ್ಲಿ ನೀರನ್ನು ಎತ್ತಿ ಉಣ್ಣಿಸುವುದವಶ್ಯವಿದೆ. ಅದಕ್ಕೆ ಕಡಿಮೆ ವೆಚ್ಚದಲ್ಲಿ ಶಕ್ತಿ ಬೇಕು. ಅಂಥ ಶಕ್ತಿಯ ಉತ್ಪಾದನೆಯೂ ಇವೇ ಹೊಳೆಗಳ ನೀರಿನಿಂದ ಸಾಧ್ಯವಿದೆ. ಭಾರತದಲ್ಲಿ ಅನೇಕ ನದಿಗಳಿಂದ ವಿದ್ಯುತ್‌ಶಕ್ತಿಯ ಉತ್ಪಾದನೆ ನಡೆಯಬಹುದಾಗಿದೆ. ಕೆಲವೆಡೆಗಳಲ್ಲಿ ಬೀಳುವ ಜಡಿಮಳೆ ಬೆಳೆಯುಳ್ಳ ಭೂಮಿಯ ಮೇಲ್ಪಾಗದ ಸೂಸುಮಣ್ಣನ್ನು ಕೊಚ್ಚಿಕೊಂಡೊಯ್ದು, ಭೂಮಿಯನ್ನು ಬರಡುಮಾಡುತ್ತದೆ. ಇದೊಂದು ಗಮನಾರ್ಹ ಸಮಸ್ಯೆಯಾಗಿದೆ. ಮತ್ತೆ ಕೆಲವಡೆಯಲ್ಲಿ ಬೇಡವಾದಾಗ ಮಳೆ ಬೀಳುವುದುಂಟು. ಎಷ್ಟೋ ಕಡೆಗಳಲ್ಲಿ ಬೀಳುವುದೇ ಇಲ್ಲ. ಒಟ್ಟಾರೆ ಒಬ್ಬ ಸುಪ್ರಸಿದ್ಧ ಒಕ್ಕಲುತನದ ಅರ್ಥಶಾಸ್ತ್ರಜ್ಞರು ಮಾರ್ಮಿಕವಾಗಿ ಈ ಬಗ್ಗೆ ಹೇಳಿದುದು ತೀರ ಸತ್ಯವಾಗಿದೆ: 'ಭಾರತದೇಶವ ಒಕ್ಕಲಿಗನು ಮಳೆರಾಯನೊಂದಿಗೆ ಜೂಜು ಆಡುತ್ತಿದ್ದಾನೆ! ಪರಿಣಾಮವಾಗಿ ಒಕ್ಕಲುತನ—ಇಂದು ಮಾನವಪ್ರಯತ್ನಗಳ ಚೌಕಟ್ಟಿನಲ್ಲಿರದೆ, ದೈವೀ ವರ್ಚಸ್ಸಿಗೇನೇ ವಿಶೇಷವಾಗಿ ಒಳಪಟ್ಟಿದೆ' ಇದಕ್ಕೆ

ತಾಯಂದಿರೆ,

ನಿಮ್ಮ ಮಗುವಿಗೆ

ಇಷ್ಟು ತಾಯಿ ಹಾಲು ಬೇಕಲ್ಲವೆ?
ಜಾಗದಲ್ಲಿ ನೀವು ಈ ವಿನಯದಿಂದಲೇ

ಜೆನ್-ಓ ಮಿಲ್ಕ್

(GEN-O MILK)

ತೆಗೆದುಕೊಳ್ಳಲು ಪ್ರಾರಂಭಿಸಿರಿ.

ನಿಮ್ಮ ಬಾಲಕ ಕೆಮ್ಮಿದ್ದಲ್ಲಿ ಜೊತೆಯಲ್ಲಿ ಹೋಗಿ
ಕೆಲವು ದಿನಗಳಲ್ಲಿ ಬರೆಯಿರಿ.

ಅಜಿತ ಲ್ಯಾಬ್ಸ್ ಲಿ. ಮಿರಜ

ಮೋಡಗಳಿಲ್ಲದೆ ಆಕಾಶವಿದೆ. ಅಲ್ಲಲ್ಲಿ ಮಬ್ಬುಮಾಡಿದ ನೀರ್ಗಾವಿದೆ ಗಾಳಿಗಳನ್ನು ಕೆಂಪಡಿಲಾಗುತ್ತಿದೆ. ಸಣ್ಣಗಾಳಿ ಸಂಜೆಗೆ ಮುಖಾಮುಖವಾಗಲು ಹೆಚ್ಚಿನ ಜನರು ಸೇರಿಬರುತ್ತಿದ್ದಾರೆ. ಸಣ್ಣಾಟವು ಸುರುವಾಗುವುದಕ್ಕೆ ಕೆಲವೇ ನಿಮಿಷಗಳಿರುವಾಗ ಆಟಗಾರರು ಬಂದು ಸೇರಿದರು. ಅಲ್ಲಿಗೆ ಬಂದಿದ್ದ ಪ್ರೇಕ್ಷಕರಲ್ಲಿ ಹೆಚ್ಚಿನವರು ಆಟಗಾರರ ಪರವಾಗಿ ಕೂಗಿ ಹುರಿದುಂಬಿಸಲು ಸಿದ್ಧರಾಗಿದ್ದರು. ಆಟಗಾರರು ಬಂದು ಸೇರಿದ ಕೂಡಲೆ ಆಟಕ್ಕೆ ಸಿದ್ಧತೆಗಳು ಪ್ರಾರಂಭವಾದವು. ಆಟಗಾರರಲ್ಲಿ ಕೆಲವರು ಬಿಳಿಯ ಅಂಗಿ ಚಡ್ಡಿಗಳನ್ನು ಧರಿಸಿದ್ದರೆ ಇನ್ನು ಕೆಲವರು ಕೆಂಪು ಅಂಗಿ ಚಡ್ಡಿಗಳನ್ನು ಧರಿಸಿದ್ದರು. ಆಟಗಾರರಲ್ಲಿ ಕೆಲವರು ಬೂಟುಗಳನ್ನು ಧರಿಸಿದ್ದರೆ ಇನ್ನು ಕೆಲವರು ಬರಿಗಾಲಿನಲ್ಲಿಯೇ ಆಟವಾಡಲು ಸಿದ್ಧರಾಗಿದ್ದರು. ಆಟಗಾರರಲ್ಲಿ ಕೆಲವರು ಕೈಗಳಿಗೆ ಗ್ಲೌಸುಗಳನ್ನು ಧರಿಸಿದ್ದರೆ ಇನ್ನು ಕೆಲವರು ಬರಿಗೈಯಲ್ಲಿಯೇ ಆಟವಾಡಲು ಸಿದ್ಧರಾಗಿದ್ದರು. ಆಟಗಾರರಲ್ಲಿ ಕೆಲವರು ಕಾಲಿಗೆ ಪ್ಯಾಡುಗಳನ್ನು ಧರಿಸಿದ್ದರೆ ಇನ್ನು ಕೆಲವರು ಪ್ಯಾಡುಗಳನ್ನು ಧರಿಸಿರಲಿಲ್ಲ. ಆಟಗಾರರಲ್ಲಿ ಕೆಲವರು ಹೆಲ್ಮೆಟ್ ಧರಿಸಿದ್ದರೆ ಇನ್ನು ಕೆಲವರು ಹೆಲ್ಮೆಟ್ ಧರಿಸಿರಲಿಲ್ಲ. ಆಟಗಾರರಲ್ಲಿ ಕೆಲವರು ಕೈಗೆ ಬ್ಯಾಟುಗಳನ್ನು ಹಿಡಿದಿದ್ದರೆ ಇನ್ನು ಕೆಲವರು ಬ್ಯಾಟುಗಳನ್ನು ಹಿಡಿದಿರಲಿಲ್ಲ. ಆಟಗಾರರಲ್ಲಿ ಕೆಲವರು ಚೆಂಡನ್ನು ಹಿಡಿಯಲು ಸಿದ್ಧರಾಗಿದ್ದರೆ ಇನ್ನು ಕೆಲವರು ಚೆಂಡನ್ನು ಹಿಡಿಯಲು ಸಿದ್ಧರಾಗಿರಲಿಲ್ಲ. ಆಟಗಾರರಲ್ಲಿ ಕೆಲವರು ಚೆಂಡನ್ನು ಎಸೆಯಲು ಸಿದ್ಧರಾಗಿದ್ದರೆ ಇನ್ನು ಕೆಲವರು ಚೆಂಡನ್ನು ಎಸೆಯಲು ಸಿದ್ಧರಾಗಿರಲಿಲ್ಲ. ಆಟಗಾರರಲ್ಲಿ ಕೆಲವರು ಚೆಂಡನ್ನು ಹೊಡೆಯಲು ಸಿದ್ಧರಾಗಿದ್ದರೆ ಇನ್ನು ಕೆಲವರು ಚೆಂಡನ್ನು ಹೊಡೆಯಲು ಸಿದ್ಧರಾಗಿರಲಿಲ್ಲ. ಆಟಗಾರರಲ್ಲಿ ಕೆಲವರು ಚೆಂಡನ್ನು ಹಿಡಿಯಲು ಸಿದ್ಧರಾಗಿದ್ದರೆ ಇನ್ನು ಕೆಲವರು ಚೆಂಡನ್ನು ಹಿಡಿಯಲು ಸಿದ್ಧರಾಗಿರಲಿಲ್ಲ. ಆಟಗಾರರಲ್ಲಿ ಕೆಲವರು ಚೆಂಡನ್ನು ಎಸೆಯಲು ಸಿದ್ಧರಾಗಿದ್ದರೆ ಇನ್ನು ಕೆಲವರು ಚೆಂಡನ್ನು ಎಸೆಯಲು ಸಿದ್ಧರಾಗಿರಲಿಲ್ಲ. ಆಟಗಾರರಲ್ಲಿ ಕೆಲವರು ಚೆಂಡನ್ನು ಹೊಡೆಯಲು ಸಿದ್ಧರಾಗಿದ್ದರೆ ಇನ್ನು ಕೆಲವರು ಚೆಂಡನ್ನು ಹೊಡೆಯಲು ಸಿದ್ಧರಾಗಿರಲಿಲ್ಲ.

ಆಟಗಾರರಲ್ಲಿ ಕೆಲವರು ಬಿಳಿಯ ಅಂಗಿ ಚಡ್ಡಿಗಳನ್ನು ಧರಿಸಿದ್ದರೆ ಇನ್ನು ಕೆಲವರು ಕೆಂಪು ಅಂಗಿ ಚಡ್ಡಿಗಳನ್ನು ಧರಿಸಿದ್ದರು. ಆಟಗಾರರಲ್ಲಿ ಕೆಲವರು ಬೂಟುಗಳನ್ನು ಧರಿಸಿದ್ದರೆ ಇನ್ನು ಕೆಲವರು ಬರಿಗಾಲಿನಲ್ಲಿಯೇ ಆಟವಾಡಲು ಸಿದ್ಧರಾಗಿದ್ದರು. ಆಟಗಾರರಲ್ಲಿ ಕೆಲವರು ಕೈಗಳಿಗೆ ಗ್ಲೌಸುಗಳನ್ನು ಧರಿಸಿದ್ದರೆ ಇನ್ನು ಕೆಲವರು ಬರಿಗೈಯಲ್ಲಿಯೇ ಆಟವಾಡಲು ಸಿದ್ಧರಾಗಿದ್ದರು. ಆಟಗಾರರಲ್ಲಿ ಕೆಲವರು ಕಾಲಿಗೆ ಪ್ಯಾಡುಗಳನ್ನು ಧರಿಸಿದ್ದರೆ ಇನ್ನು ಕೆಲವರು ಪ್ಯಾಡುಗಳನ್ನು ಧರಿಸಿರಲಿಲ್ಲ. ಆಟಗಾರರಲ್ಲಿ ಕೆಲವರು ಹೆಲ್ಮೆಟ್ ಧರಿಸಿದ್ದರೆ ಇನ್ನು ಕೆಲವರು ಹೆಲ್ಮೆಟ್ ಧರಿಸಿರಲಿಲ್ಲ. ಆಟಗಾರರಲ್ಲಿ ಕೆಲವರು ಕೈಗೆ ಬ್ಯಾಟುಗಳನ್ನು ಹಿಡಿದಿದ್ದರೆ ಇನ್ನು ಕೆಲವರು ಬ್ಯಾಟುಗಳನ್ನು ಹಿಡಿದಿರಲಿಲ್ಲ. ಆಟಗಾರರಲ್ಲಿ ಕೆಲವರು ಚೆಂಡನ್ನು ಹಿಡಿಯಲು ಸಿದ್ಧರಾಗಿದ್ದರೆ ಇನ್ನು ಕೆಲವರು ಚೆಂಡನ್ನು ಹಿಡಿಯಲು ಸಿದ್ಧರಾಗಿರಲಿಲ್ಲ. ಆಟಗಾರರಲ್ಲಿ ಕೆಲವರು ಚೆಂಡನ್ನು ಎಸೆಯಲು ಸಿದ್ಧರಾಗಿದ್ದರೆ ಇನ್ನು ಕೆಲವರು ಚೆಂಡನ್ನು ಎಸೆಯಲು ಸಿದ್ಧರಾಗಿರಲಿಲ್ಲ. ಆಟಗಾರರಲ್ಲಿ ಕೆಲವರು ಚೆಂಡನ್ನು ಹೊಡೆಯಲು ಸಿದ್ಧರಾಗಿದ್ದರೆ ಇನ್ನು ಕೆಲವರು ಚೆಂಡನ್ನು ಹೊಡೆಯಲು ಸಿದ್ಧರಾಗಿರಲಿಲ್ಲ. ಆಟಗಾರರಲ್ಲಿ ಕೆಲವರು ಚೆಂಡನ್ನು ಹಿಡಿಯಲು ಸಿದ್ಧರಾಗಿದ್ದರೆ ಇನ್ನು ಕೆಲವರು ಚೆಂಡನ್ನು ಹಿಡಿಯಲು ಸಿದ್ಧರಾಗಿರಲಿಲ್ಲ. ಆಟಗಾರರಲ್ಲಿ ಕೆಲವರು ಚೆಂಡನ್ನು ಎಸೆಯಲು ಸಿದ್ಧರಾಗಿದ್ದರೆ ಇನ್ನು ಕೆಲವರು ಚೆಂಡನ್ನು ಎಸೆಯಲು ಸಿದ್ಧರಾಗಿರಲಿಲ್ಲ. ಆಟಗಾರರಲ್ಲಿ ಕೆಲವರು ಚೆಂಡನ್ನು ಹೊಡೆಯಲು ಸಿದ್ಧರಾಗಿದ್ದರೆ ಇನ್ನು ಕೆಲವರು ಚೆಂಡನ್ನು ಹೊಡೆಯಲು ಸಿದ್ಧರಾಗಿರಲಿಲ್ಲ.

ದನಗಳನ್ನು ಸಾಕುವುದು ಮೊದಲಾದ ಕ್ರಮ ಕೈಕೊಂಡು, ಮುಖ್ಯ ಉದ್ಯೋಗಕ್ಕೂ ಬಲ ತಂದುಕೊಡಬಹುದಾಗಿದೆ. ಸಹಕಾರೀ ತಳ, ಹದಿಯುಮೇಲೆ ಗ್ರಾಮಗಳನ್ನು ಸಂಘಟಿಸಿ, ವಿವಿಧ ಗ್ರಾಮೋದ್ಯೋಗ-ಗಳನ್ನೂ ಒಕ್ಕಲಿಗರು ಕೈಕೊಳ್ಳಲು ಅವಕಾಶವಿದೆ.

ಅಧಿಕ ಹುಟ್ಟುವಳಿಗಾಗಿ ಬೇಕಾಗುವ ಗೊಬ್ಬರ, ಕ್ರಿಮಿನಾಶಕ ತಾಂತ್ರಿಕ ಸಲಹೆ-ಸೂಚನೆ—ಇತ್ಯಾದಿ ವಿಷಯಗಳ ಬಗೆಗೂ ಸಾಕಷ್ಟು ಲಕ್ಷ್ಯಪೂರೈಸಲಾಗಿದೆ. ಒಕ್ಕಲಿಗರನ್ನು ವಿವಿಧ ಕಾರ್ಯಗಳಲ್ಲಿ ತರಬೇತುಗೊಳಿಸಲಾಗುವುದಲ್ಲದೆ, ಕಾಲಕಾಲಕ್ಕೆ ಪ್ರಾತ್ಯಕ್ಷಿಕೆ ಏರ್ಪಡಿಸಿ ತಿಳಿಸಿ ಹೇಳಲಾಗುವುದು. ಹೊಸ ಹೊಸ ಲಾಭದಾಯಕವಾಗುವ ವ್ಯವಸಾಯಕ್ರಮಗಳನ್ನು ಅನುಸರಿಸಲು ಉತ್ತೇಜಿತರನ್ನಾಗಿ ಮಾಡ-ಲಾಗುವುದು.

ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಒಕ್ಕಲುತನದ ಹುಟ್ಟುವಳಿಯಲ್ಲಿ ಕೆಳಗಿನಂತೆ ಹೆಚ್ಚು ಉತ್ಪತ್ತಿಯಾಗುವುದು:

ಆಹಾರ ಧಾನ್ಯಗಳು—	೬೬ ಲಕ್ಷ ಟನ್ನುಗಳು	೧೪ %
ಹತ್ತಿ	೧೨.೬ ಲಕ್ಷ ಬೇಲು	೪೫ %
ಜೂಟು	೨೦.೯ ಲಕ್ಷ ಬೇಲು	೬೩ %
ಬೆಲ್ಲ	೭ ಲಕ್ಷ ಟನ್ನು	೧೭ %
ಎಣ್ಣೆಕಾಳುಗಳು	೪ ಲಕ್ಷ ಟನ್ನು	೪ %

ಒಕ್ಕಲಿನ ಬೆಳೆ ಮತ್ತು ಆಹಾರ ಧಾನ್ಯಗಳ ಬೆಳೆಗಳನ್ನು ಬೆಳೆ-ಯುವುದರಿಂದ ವಿಶೇಷವಾದ ಅಂತರವು ಒಕ್ಕಲಿಗನ ಉತ್ಪಾದನೆಯಲ್ಲಿ ಉಂಟಾಗಬಾರದೆಂದು, ವಿವಿಧ ವಸ್ತುಗಳ ಬೆಲೆಯ ನಿಯಂತ್ರಣವನ್ನು ಅನುಸರಿಸಲಾಗುವುದು.

ಒಟ್ಟಿನಲ್ಲಿ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ಒಕ್ಕಲು-ತನದ ಹುಟ್ಟುವಳಿಯಲ್ಲಿ ಕೆಳಗಿನ ಗುರಿ ಮುಟ್ಟುವ ಪ್ರಯತ್ನ ಮಾಡ-ಲಾಗುವುದು:

ಆಹಾರ ಧಾನ್ಯ—	೭೯.೬ ಲಕ್ಷ ಟನ್ನುಗಳು
ಹತ್ತಿ	೪೬.೨ ಲಕ್ಷ ಬೇಲುಗಳು
ಜೂಟು	೫೫.೯ ಲಕ್ಷ ಬೇಲುಗಳು
ಬೆಲ್ಲ	೬೩ ಲಕ್ಷ ಟನ್ನುಗಳು
ಎಣ್ಣೆಕಾಳು	೪೧ ಲಕ್ಷ ಟನ್ನುಗಳು

ಭಾರತದಲ್ಲಿಯ ಬೇರೆ ಬೇರೆ ರಾಜ್ಯಗಳು ಮೇಲಿನ ಗುರಿಯನ್ನು ಲಕ್ಷ್ಯದಲ್ಲಿರಿಸಿಕೊಂಡು, ಅದನ್ನು ಸಾಧಿಸುವುದಕ್ಕಾಗಿ ಬೇರೆ ಬೇರೆ ಸ್ವತಂತ್ರ ರೀತಿಯಲ್ಲಿ ಸಹಾಯ ಸಲ್ಲಿಸುತ್ತವೆ.

ಸಮಾಜವಿಕಾಸ ಯೋಜನೆಗಳು :—

ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೈದು ಒಕ್ಕಲುತನದಲ್ಲಿ ಹೆಚ್ಚಿನ ಅಭಿವೃದ್ಧಿಸಡೆದು, ಜನತೆಯ ಜೀವನದ ಮಟ್ಟವನ್ನು ಎತ್ತರಿಸಿ ಉತ್ತಮ ಬಾಳಿನ ಸೌಕರ್ಯ ಒದಗಿಸಿ, ಗ್ರಾಮಜೀವನದಲ್ಲಿಯೇ ಕ್ರಾಂತಿ ಮಾಡಬೇಕೆಂದು, ಸಮಾಜವಿಕಾಸ ಯೋಜನೆಗಳನ್ನು ಪ್ರಾರಂ-ಭಿಸಲಾಗಿದೆ. ಇವುಗಳಿಗಾಗಿ ೯೦ ಕೋಟಿ ರೂಪಾಯಿಗಳನ್ನು ಮೆಚ್ಚಿ ಮಾಡಲಾಗುತ್ತದೆ. ಈಗಾಗಲೇ ಈ ದಿಶೆಯಲ್ಲಿ ಕೆಲವೆಡೆ ಕಾರ್ಯ ನಡೆಯಿಸಿ ಗಳಿಸಿದ ಆಧಾರದ ಮೇಲಿಂದ, ರಾಷ್ಟ್ರದ ಅನೇಕ ಕಡೆಗಳಲ್ಲಿ ಈ ಚಟುವಟಿಕೆ ನಡೆಯಿಸಲಾಗಿದೆ. ಕಳೆದ ವರುಷವೇ ಈ ಪ್ರಯತ್ನಕ್ಕೆ ಪ್ರಾರಂಭ ಮಾಡಲಾಯಿತು. ೫೫ ಕಡೆಗಳಲ್ಲಿ ಈ ಯೋಜನೆಗಳು ಕಾರ್ಯ ನಡೆಯಿಸಿವೆ. ಒಂದೊಂದು ಪೂರ್ತಿ ಯೋಜನೆಯಲ್ಲಿ ಸುಮಾರು ೫೦೦ ಹಳ್ಳಿಗಳು ಸಮಾವೇಶವಾಗುತ್ತವೆ. ಈ ಹಳ್ಳಿಗಳ ಕ್ಷೇತ್ರ ೪೫೦ರಿಂದ ೭೦೦ ಚಾರಸ ಮೈಲುಗಳಷ್ಟಾಗಿ ಸುಮಾರು ೧೫೦,೦೦೦ ಎಕರೆ ಸಾಗುವಳಿ ಕ್ಷೇತ್ರ ಮತ್ತು ೩೦೦,೦೦೦ ಜನಸಂಖ್ಯೆ-ಯುಳ್ಳದ್ದಾಗಿದೆ. ಪ್ರತಿ ನೂರು ಹಳ್ಳಿಗಳ ಒಂದೊಂದು ಗುಂಪನ್ನು ಮಾಡಿ ಕಾರ್ಯ ನಡೆಯಿಸಲಾಗುತ್ತದೆ. ೫ ಹಳ್ಳಿಗಳಿಗೊಬ್ಬರಂತೆ ತರಬೇತಿ ಹೊಂದಿದ ಗ್ರಾಮಸೇವಕರು ಕೆಲಸ ಮಾಡುತ್ತಾರೆ. ಒಕ್ಕ-ಲುತನ, ಸಂಸರ್ಕ, ಶಿಕ್ಷಣ, ಆರೋಗ್ಯ, ಸ್ಥಾವರಕಲುಮ್ಮೋದ್ಯೋಗ, ವಸತಿ, ತರಬೇತಿ, ಸಮಾಜಕಲ್ಯಾಣ ಮೊದಲಾದ ವಿಷಯಗಳ ಬಗ್ಗೆ ಕಾರ್ಯ-ಕ್ರಮ ಪಾಕಿಕೊಂಡು ಕಾರ್ಯ ನಡೆಯುತ್ತದೆ ಒಂದೊಂದು ಯೋಜನೆಯ ಹೆಚ್ಚುವ ಸುಮಾರು ೬೫ ಲಕ್ಷ ರೂಪಾಯಿಗಳಷ್ಟಾ-ಗುವುದು. ಅದರಲ್ಲಿ ೫೦-೪೭ ಲಕ್ಷ ರೂ. ಹೆಚ್ಚುವ ರೂಪಾಯಿಗಳಲ್ಲಿ, ೬-೫೩ ಲಕ್ಷ ರೂ. ಹೆಚ್ಚುವ ಡಾಲರುಗಳಲ್ಲಿ ಆಗುತ್ತದೆ. ಕೇಂದ್ರ, ರಾಜ್ಯಸರಕಾರಗಳ ಮತ್ತು ಭಾರತ-ಅಮೇರಿಕೆಯ ತಾಂತ್ರಿಕ ಸಹ-ಕಾರ ಒಪ್ಪಂದದ ಕಾರ್ಯಕ್ರಮವನ್ನಯ ಈ ಯೋಜನೆಗಳ ಕಾರ್ಯ ನಡೆಯುತ್ತವೆ.

'ಅಧಿಕ ಆಹಾರ ಬೆಳೆಗೆ' ಆಂದೋಲನ ವಿಚಾರಣಾ ಸಮಿತಿಯು ಸೂಚಿಸಿದಂತೆ, ಮುಂಬರುವ ಹತ್ತು ವರುಷಗಳಲ್ಲಿ ಇಡಿಯ ರಾಷ್ಟ್ರ-ದೆಲ್ಲೆಯೇ ಗ್ರಾಮಗಳ ಅಭಿವೃದ್ಧಿಯನ್ನು ಸಾಧಿಸುವುದಕ್ಕಾಗಿ ವಿಸ್ತೃತ ರಾಷ್ಟ್ರೀಯ ವಿಸ್ತರಣಾ ಸಂಘಟನೆಯನ್ನು ಮಾಡಲಾಗುತ್ತದೆ ಪಂಚ-ವಾರ್ಷಿಕ ಯೋಜನೆಯ ಅವಧಿಯಲ್ಲಿ ೧ ಲಕ್ಷ ೫೦ ಸಾವಿರ ಹಳ್ಳಿಗಳಿಗೆ ಈ ಸಂಘಟನೆಯು ವಿಸ್ತರಿಸಿಕೊಳ್ಳುವುದು— ಒಟ್ಟು ಜನತೆಯಲ್ಲಿ ನೂರರಲ್ಲಿ ಇಪ್ಪತ್ತೈದು ಜನತೆಯ ಕಲ್ಯಾಣ ನಡೆಯಲಿದೆ. ಈ ವಿಸ್ತರಣೆ ಸಂಘಟನೆಯು ಮುಖ್ಯವೇಯು ಒಕ್ಕಲುತನದ ಉತ್ಪಾದನೆ ಹೆಚ್ಚಿಸುವ ಕಾರ್ಯಕ್ಕೆ ವಿಶೇಷ ಸಹಾಯ ಒದಗಿಸುವುದೇ ಆಗಿದೆ.

ನೀರಾವರಿ ಮತ್ತು ವಿದ್ಯುತ್

ಈಗಾಗಲೇ ಕೈಕೊಂಡ ಯೋಜನೆಗಳನ್ನು ಮುಂದುವರೆ-ಯಿಸುವುದು ಮೊದಲು ಕೈಕೊಳ್ಳಬೇಕಾದ ಅಗತ್ಯದ ಕಾರ್ಯವಾಗಿದೆ. ಅಲ್ಲದೆ ಅನೇಕಾನೇಕ ಶ್ರೇಷ್ಠ ಯೋಜನೆಗಳನ್ನು ಹೊಸದಾಗಿಯೂ ಪ್ರಾರಂಭಿಸಲಾಗುತ್ತದೆ. ಕೆಲವು ಯೋಜನೆಗಳು ಕೇವಲ ನೀರಾ-ವರಿಗೆಂದೇ ಮೀಸಲಾಗಿರುವಂತೆ, ಹಲವು ವಿದ್ಯುತ್ ಶಕ್ತಿ ಉತ್ಪಾದನೆ-ಗೆಂದೇ ಮೀಸಲಾಗಿವೆ. ಎಷ್ಟೋ ವಿವಿಧೋದ್ದೇಶಗಳ ಯೋಜನೆಗಳಿವೆ ಇವೆ. ಉತ್ಪಾದಿತವಾಗುವ ವಿದ್ಯುತ್‌ಶಕ್ತಿಯಿಂದ ಹೊಳೆ-ಹಳ್ಳಗಳಿಂದ



ನೀರೆತ್ತಿ ನೀರುಣ್ಣಿಸುವ ಯೋಜನೆಯನ್ನೂ ಮಾಡಲಾಗಿದೆ. ಅಲ್ಲದೆ ವಿದ್ಯುತ್‌ಶಕ್ತಿಯ ಉತ್ಪಾದನೆ ಬೆಳೆದಂತೆ, ಚಕ್ಕ ದೊಡ್ಡ ಕೈಗಾರಿಕೆ, ಉದ್ಯೋಗಗಳನ್ನು ಲಾಭದಾಯಕವಾಗಿ ಕೈಕೊಳ್ಳಲು ಅನುಕೂಲವಾಗುವುದು. ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ತು ನೀರಿನ ಶಕ್ತಿಯಿಂದಲೇ ಉತ್ಪಾದಿತವಾಗಲಿದೆ. ಈ ವಿದ್ಯುತ್ತು ಕಡಿಮೆ ವೆಚ್ಚದ್ದಾಗಿ ಎಲ್ಲರ ಆಳವಿನಲ್ಲಿ ಬಂದು ಸಹಕಾರಿಯಾಗುತ್ತದೆ. ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ಪ್ರತಿ ವರುಷಕ್ಕೆ ಕೆಳಗಿನಂತೆ ನೀರಾವರಿ ಮತ್ತು ವಿದ್ಯುತ್‌ಶಕ್ತಿಗಳ ಉಪಯುಕ್ತತೆಯಾಗುತ್ತದೆ.

ನೀರಾವರಿ—

ದೊಡ್ಡ ನೀರಾವರಿ — ೮೫ ಲಕ್ಷ ಎಕರೆಗಳು
ಚಕ್ಕ ನೀರಾವರಿ — ೧೧೨ ಲಕ್ಷ ಎಕರೆಗಳು

ವಿದ್ಯುತ್ತು—

ದೊರೆಯಲಿರುವ ವಿದ್ಯುತ್‌ಶಕ್ತಿ—೩೫ ಲಕ್ಷ ಕಿಲೋವ್ಯಾಟ್‌ಗಳು.

ಪ್ರತ್ಯಕ್ಷವಾಗಿ, ಇಲ್ಲವೆ ಅಪ್ರತ್ಯಕ್ಷವಾಗಿ ನೀರಾವರಿ ಮತ್ತು ವಿದ್ಯುತ್ತುಗಳ ಮೂಲಕ ಲಕ್ಷಾಂತರ ನಿರುದ್ಯೋಗಿಗಳಿಗೆ ಕೆಲಸ ಸಿಕ್ಕು, ಇಂದು ದೇಶದ ಎದುರಿನಲ್ಲಿ ಪೆಡಂಭೂತವಾಗಿ ನಿಂತ ಸಮಸ್ಯೆಗೆ ಪರಿಹಾರ ಸಿಕ್ಕುತ್ತದೆ. ಹೆಚ್ಚಿನ ಕ್ಷೇತ್ರವು ನೀರುಣ್ಣುವ ಕಕ್ಷೆಯಲ್ಲಿ ಬರುವುದರಿಂದ, ೩೭,೯೩,೦೦೦ ಲಕ್ಷಟನ್ನು ಅಧಿಕ ಆಹಾರ ಉತ್ಪಾದನೆಯಾಗಿ, ಕೊರತೆಯ ಹಾಹಾಕಾರವನ್ನು ಮೆಟ್ಟಿನಿಲ್ಲುವ ಕಾರ್ಯದಲ್ಲಿ ಬಲವಾದ ಪ್ರಯತ್ನ ಮಾಡಿದಂತಾಗುವುದು.

ಭೂಮಿಯ ಮೇಲ್ಭಾಗದಲ್ಲಿ ಹರಿಯುವ ಮತ್ತು ಭೂಗರ್ಭದಲ್ಲಿ ನೆಲೆನಿಂತ ನೀರೆಲ್ಲವುಗಳ ಉಪಯೋಗವಿಂದು ನಡೆಯಬೇಕಾಗಿದೆ. ದೇಶದಾದ್ಯಂತದಲ್ಲಿಯ ಉಗಮಗಳನ್ನೆಲ್ಲ ಉಪಯೋಗ ಮಾಡಿಕೊಳ್ಳಲಿಕ್ಕೆ ೨,೦೦೦ ಕೋಟಿ ರೂಪಾಯಿಗಳು ಬೇಕು. ಪರಿಣಾಮವಾಗಿ ೪೦೦-೪೫೦ ಲಕ್ಷ ಎಕರೆ ಭೂಮಿ ನೀರುಣ್ಣುತ್ತದೆ; ಅಲ್ಲದೆ ೭೦ ಲಕ್ಷ ಕಿಲೋವ್ಯಾಟ್ ವಿದ್ಯುತ್‌ಶಕ್ತಿ ಉತ್ಪತ್ತಿಯಾಗುತ್ತದೆ. ಒಕ್ಕಲು ತನದಲ್ಲಿಯೂ ಸುಧಾರಣೆ ನಡೆಯಿಸಬಹುದು; ಗೃಹಕೈಗಾರಿಕೆಗಳೂ ಚೇತರಿಸುತ್ತವೆ; ದೊಡ್ಡ ಪ್ರಮಾಣದ ಉದ್ಯೋಗಗಳೂ ಬೆಳೆಯುತ್ತವೆ. ರಾಷ್ಟ್ರದ ಜೀವನ ಝರಿಯೇ ಝುಳ್ಳನೆ ನೆಗೆದೇಳುತ್ತದೆ.

ಈಗಾಗಲೇ ಕೈಕೊಂಡ ಈ ಯೋಜನೆಗಳಿಗಾಗಿ ೧೫೩ ಕೋಟಿ ರೂಪಾಯಿ ವೆಚ್ಚಮಾಡಿದ್ದಾಗಿದೆ. ಇವುಗಳೆಲ್ಲ ಮುಗಿಯಲಿಕ್ಕೆ ೭೬೫ ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಈ ಯೋಜನೆಗಳಿಗೂ ೨೫೮ ಕೋಟಿ ರೂಪಾಯಿ ಹಣ ವೆಚ್ಚಮಾಡುವುದಾಗಿ ನಿರ್ಧರಿಸಿದೆ. ಅಲ್ಲದೆ ಹೊಸ ಯೋಜನೆಗಳಾದ ಕೋಸಿ, ಕೋಯನಾ, ಕೃಷ್ಣಾ, ಚಂಬಳಾ, ರಿಹಾಂದಗಳನ್ನು ಕಾರ್ಯರೂಪಕ್ಕಿಳಿಸಲಾಗುವುದು. ಕೋಸಿ, ಕೊಯನಾ, ಚಂಬಳಾಗಳ ಮೊದಲ ಮೆಟ್ಟಿಲನ್ನಷ್ಟೇ ಮುಗಿಸುವ ಯೋಜನೆಯಿದೆ. ಕೋಸಿಯಿಂದ ಬಿಹಾರ-ನೇಪಾಳಗಳಿಗೂ, ಕೊಯನಾದಿಂದ ಮುಂಬಯಿ ಕೃಷ್ಣಾದಿಂದ ಮದ್ರಾಸ ಮತ್ತು ಹೈದರಾಬಾದುಗಳಿಗೂ ಚಂಬಳಾದಿಂದ ಮಧ್ಯಭಾರತ, ರಾಜಸ್ತಾನಗಳಿಗೂ ರಿಹಾಂದದಿಂದ ಉತ್ತರಪ್ರದೇಶಗಳಿಗೂ ವಿಶೇಷ ಲಾಭ ಮುಟ್ಟುತ್ತದೆ. ಈ ಯೋಜನೆಗಳೆಲ್ಲ ಪೂರ್ತಿ ಮುಗಿಯಲಿಕ್ಕೆ ೨೦೦ ಕೋಟಿಗಳಷ್ಟಾದರೂ ಹಣ ಬೇಕಾಗುತ್ತಿದ್ದು, ೧೯೫೬ ನೆಯ ವರುಷದ ಅವಧಿಯೊಳಗಾಗಿ ೪೦ ಕೋಟಿ ರೂಪಾಯಿ ಹಣ ವೆಚ್ಚಮಾಡಲಾಗುವುದು.

ರಾಷ್ಟ್ರದ ಪುನರ್ರಚನೆಯ ಕಾರ್ಯಕ್ರಮದಲ್ಲಿ ನೀರಾವರಿ ಮತ್ತು ವಿದ್ಯುತ್‌ಶಕ್ತಿಗಳ ಪಾತ್ರ ಅಸಾಧಾರಣವಾಗಿದೆ. ಬಹುಜನರಿಗೆ ಬಹು ವಿಧವಾಗಿ ಬಹುಪರಿಯಿಂದ ಕಾರ್ಯರಂಗ ವಿಸ್ತರಿಸಿಕೊಳ್ಳಲು ಅವಕಾಶ ದೊರೆಯುತ್ತದೆ. ಪ್ರಗತಿ ಅನೇಕ ಮುಖಗಳಿಂದ ನಾಗಾಲೋಟದಲ್ಲಿ ಮುಂದುವರೆದು, ಸಮೃದ್ಧಿಯ ಸುಭದ್ರ ರಾಷ್ಟ್ರಮೈವೆತ್ತು ರೂಪುತಾಳಿ ನಿಲ್ಲುತ್ತದೆ.

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಸಾ. ವಿ. ಶಿ. ರಂಗವನ್ನು ಮತ್ತೆ ಪ್ರಾರಂಭಿಸಿ ಆಯಿತು. ಕಳೆದ ಸಂಚಿಕೆಯಲ್ಲಿ ಸೂಚಿಸಿದಂತೆ ವಿಮರ್ಶೆಯ ಮೇಲಾಟಕ್ಕಾಗಿ ಆರು ಜನರಿಂದ '**ತಿಮ್ಮನ ದೈವ**' ಕಥೆಯನ್ನು ಕುರಿತೂ, ಮೂವರಿಂದ '**ವಿಚಿತ್ರ ವಿಧಿ**' ಕತೆಯನ್ನು ಕುರಿತೂ ವಿಮರ್ಶೆಗಳು ಬಂದಿವೆ.

'ತಿಮ್ಮನ ದೈವ' ಕತೆಯ ವಿಮರ್ಶಕರು:

೧ ಶ್ರೀ. 'ಜಯಂತ' ಸುರತ್ಕಲ್ಲು (ದ. ಕ.) ೨ ಶ್ರೀ. ಎಸ್. ಎಸ್. ಪುರುಷನ್, ದಾವಣಗೇರಿ. ೩. ಶ್ರೀ. ರಾ. ಸು. ವೈಲಾಯ, ಎಂ. ಜಿ. ಎಂ. ಕಾಲೇಜ್, ಉಡುಪಿ. ೪ ಶ್ರೀ. ಕೆ. ಎಸ್. ಶರ್ಮಾ, 'ವಿದ್ವಾನ್' ಕಾಸರಗೋಡು. ೫ ಶ್ರೀ. ಜಿ. ಎಸ್. ಮಠಕರ್, ಎಂ. ಎ., ಬಿ. ಟಿ. ಧುಳೆ. ೬ ಶ್ರೀ. ಅನಂತ ಬುರ್ಲಿ ಬಿ. ಎ. (ಆನರ್ಸ್) ಎಸ್. ಟಿ. ಕಾಲೇಜು, ಬೆಳಗಾಂವಿ.

'ವಿಚಿತ್ರವಿಧಿ' ಕತೆಯ ವಿಮರ್ಶಕರು

೧ ಶ್ರೀ. 'ಅರುಣ' ಸಂಗ್ರಾಮ ಪಬ್ಲಿಕೇಶನ್ಸ್, ಗುಳೇದಗುಡ್ಡ. ೨ ಶ್ರೀ. ರಾ. ಸು. ವೈಲಾಯ ಎಂ. ಜಿ. ಎಂ. ಕಾಲೇಜು, ಉಡುಪಿ. ೩ ಶ್ರೀ. 'ಸೀರಾ' ಮಲ್ಲೇಶ್ವರಂ, ಬೆಂಗಳೂರು.

ಬಂದ ವಿಮರ್ಶೆಗಳನ್ನೆಲ್ಲ ನಮ್ಮ ಸಂಪಾದಕ ಸಮಿತಿಯೇ ನೋಡಿ ನಿರ್ಣಯಕೊಟ್ಟಿತು. **ಶ್ರೀ. ಅನಂತ ಬುರ್ಲಿ ಬಿ. ಎ. (ಆನರ್ಸ್)** ಮತ್ತು ಶ್ರೀ. ಕೆ. ಎಸ್. ಶರ್ಮಾ 'ವಿದ್ವಾನ್' ಅವರ ವಿಮರ್ಶೆಗಳು ಅತ್ಯುತ್ತಮ. ಶ್ರೀ. ಜಿ. ಎಸ್. ಮಠಕರ್ ಎಂ. ಎ., ಬಿ. ಟಿ. ಮತ್ತು ಶ್ರೀ. ರಾ. ಸು. ವೈಲಾಯ ('ತಿಮ್ಮನ ದೈವ') ಅವರ ವಿಮರ್ಶೆಗಳು ಉತ್ತಮ. ಮಿಕ್ಕುವೆಲ್ಲಾ ಸಾಮಾನ್ಯ.

ಅತ್ಯುತ್ತಮವೆನಿಸಿಕೊಂಡ ವಿಮರ್ಶೆಗಳೆರಡೂ ನಿರ್ಣಾಯಕರ ದೃಷ್ಟಿಯಲ್ಲಿ ಸಮಾನಯೋಗ್ಯತೆಯನೆಂದು ತೋರಿಬೆಯಾದರೂ ಜಯಂತಿಯಲ್ಲಿ ಪ್ರಕಟಿಸುವುದಕ್ಕೆ ಶ್ರೀ. ಅನಂತ ಬುರ್ಲಿಯವರ ವಿಮರ್ಶೆಯೆ ಇರಲೆಂದು ಅಭಿಪ್ರಾಯಪಟ್ಟಿದ್ದಾರೆ.

ಮುಂದಿನ ಸಂಚಿಕೆಯ ವಿಮರ್ಶೆಯ ಶಿಕ್ಷಣರಂಗಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ '**ಕಾಲ್ತೊಡರಿದ ಬಳ್ಳಿ**' ಎಂಬ ನೀಳ್ಗತೆಯನ್ನು ಇಡಿಸಲಾಗಿದೆ ಈ ಕತೆಯಲ್ಲಿಯ ಪಾತ್ರ ಪರಿಪುಷ್ಟಿ, ಸಾಮಾಜಿಕ ದೃಷ್ಟಿಗಳನ್ನು ಕುರಿತೇ ಹೆಚ್ಚಾಗಿ ವಿವರಣೆಯಿರಲಿ.... ಮೇಲಾಟದ ವಿಮರ್ಶೆಗಳಲ್ಲಿ ಹೆಚ್ಚುಜನ ವಿಮರ್ಶಕರು ಈ ಮೇಲಾಟದಲ್ಲಿ ಭಾಗ ವಹಿಸಬೇಕೆಂದು ನಮ್ಮ ಅಪೇಕ್ಷೆ.

—ಸಂಪಾದಕರು

ತಿಮ್ಮನ ದೈವ

(ಕಥಾವಿಮರ್ಶೆ)

ವಿಮರ್ಶಕರು **ಶ್ರೀ. ಅನಂತ ಬುರ್ಲಿ** ಬಿ ಎ. (ಆನರ್ಸ್) **ಬೆಳಗಾಂವಿ**

ಜೀವನದ ಎರಡು ರೂಪಗಳನ್ನು ತೋರಿ ಈ ಕತೆಗಾರರು, ಬಡತನ ಸಿರಿವಂತಿಕೆಗಳ ಹಿಂದೆ ಅಡಗಿದ ದುರ್ವಿಪಾಕ-ದೈವಗಳ ವಿಕಟ ರೂಪವನ್ನು ಬಗೆಗಾಣಿಸಿ, ಯಾವುದು ದೈವ-ಯಾವುದು ದುರ್ವಿಪಾಕ-ನೆಂಬುದನ್ನು ನಿರ್ಧರಿಸಲು ಸುಸಂಸ್ಕೃತ ಓದುಗರಿಗೆ ಬಿಟ್ಟಿದ್ದಾರೆ. ಇಂದಿನ ಸಮಾಜದಲ್ಲಿ ಒಳಗೊಳಗೆ ಬೆಳೆದು ಬರುತ್ತಿರುವ ಹಾಲಾಹಲ ವಿಷದುರಿಯ ಚಿತ್ರವನ್ನು ನಿಚ್ಚಳವಾಗಿ ಕಣ್ಣೆದುರು ಚಿತ್ರಿಸಿ, ಆತ್ಮ ನಿರೀಕ್ಷಣೆ ಮಾಡಿಕೊಳ್ಳಹಚ್ಚಿದ ಈ ಕತೆಗಾರರು ಅಭಿನಂದನಾರ್ಹರು. ಸುಲಭಕೀರ್ತಿಗಾಗಿ ಆಕರ್ಷಕವಾಗಿ 'ವಾಸ್ತವಚಿತ್ರ'ವೆಂದು ಅಶ್ಲೀಲತೆಯ ಚಿತ್ರಣಕ್ಕೆ ಕೈಯಿಕ್ಕದೆ, ಸೂಚ್ಯವಾಗಿ ಸಂಪೂರ್ಣ ಕಲ್ಪನೆ ಓದುಗರಿಗಾಗುವಂತೆ, ಕಲಾತ್ಮಕವಾಗಿ ಮುಕ್ತಾಯಗೊಳಿಸಿದ ಬಗೆ ಅಂದವಾಗಿದೆ.

ಮುಖ್ಯ ಕಥಾವಸ್ತುವಿಷ್ಟು: ರಾಮು ತಿಮ್ಮು ಗೆಳೆಯರು. ರಾಮೂ ಎಷ್ಟೇ ಜಾಣನಾದರೂ ದುರದೃಷ್ಟದಿಂದ ಬಡತನದ ಬೇಗೆಯಲ್ಲಿ ಬೆಂದೇಳಬೇಕಾಯ್ತು. ತಿಮ್ಮು ಮಾತ್ರ ಹೇಗೋ ಒಮ್ಮೆ ಮ್ಯಾಟ್ರಿಕ್ ಪಾಸಾಗಿ, ನೌಕರಿ ಸಂಪಾದಿಸಿ, ಆಗರ್ಭ ಶ್ರೀಮಂತನ ಒಬ್ಬಳೇ ಮಗಳನ್ನು ಲಗ್ನವಾಗಿ, ಸಂಪತ್ತಿನ ಸೌಧವೇರಿದ ದೈವಪಾಕದಿಂದ. ಜನವೆಲ್ಲ 'ತಿಮ್ಮನು ಎಂತಹ ಅದೃಷ್ಟವಂತ!' ಎಂದರು. ಆದರೆ ಸಹಾಯ ಯಾಚನೆಗಾಗಿ ತಿಮ್ಮನಲ್ಲಿ ಬಂದ ರಾಮು, ಅಕಸ್ಮಿಕವಾಗಿ ತಿಮ್ಮನ ಜೀವನದಲ್ಲಿ ವಿಧಿಯ ಅಣಕದಾಟವನ್ನು ಕಂಡಾಗ 'ಅಯ್ಯೋ ತಿಮ್ಮನ ದೈವ!' ಎನ್ನುತ್ತಾನೆ.

ಸಂಪಾದಕರ 'ತಿಮ್ಮನ ಸಾಂಪತ್ತಿಕ ಜೀವನದಲ್ಲಿ ಸುಖ-ಶಾಂತಿ ಗಳೆರಬಹುದೇ?' ಎಂಬ ಪ್ರಶ್ನೆಯು ಸಂದೇಹ' ತಿಮ್ಮನ ಇಡಿ ಪಾತ್ರದ

ಅವಲೋಕನಗೈವಾಗ ಮಾಯವಾಗಿ, ಅವನು ನಿಜವಾಗಿ ಸುಖಿ—ಸುದೈವಿಯಾಗಿಯೇ ಕಾಡುಬರುತ್ತಾನೆ. ಸುಖ, ಸಂಪತ್ತು, ಕೀರ್ತಿ ಗೌರವಗಳು ಅವನ ಬೆಂಬತ್ತಿಬಂದಿವೆ. ಔದಾರ್ಯ, ಮಿತ್ರಸ್ಮರಣೆ, ಸಹಾಯ-ಸಹಾನುಭೂತಿಗಳು ಅವನಲ್ಲಿಂದ ನೂರಾರಾಗಿಲ್ಲದಿರುವುದು ಅವನ ವ್ಯಕ್ತಿತ್ವವನ್ನು ಇನ್ನೂ ದೊಡ್ಡದಾಗಿಸುತ್ತವೆ. ಹೆಂಡತಿಯ ಚಾರಿತ್ರ್ಯವನ ಬಗೆಗೆ ಸಂದೇಹ-ಸಂಶಯಗಳಿಂದಾಗಿ ಕನಡಿವ ಜೀವನ-ಮನಗಳ ಸುಳಿವು ಕೂಡ ತಿಮ್ಮನ ಪಾತ್ರಚಿತ್ರಣದಲ್ಲಿ ಮೊಯಿಯದು. ಸುಖ-ಶಾಂತಿಗಳನ್ನು ಸವೆದ ತೃಪ್ತಜೀವಿಯಾಗಿಯೇ ತಿಮ್ಮನ ಪಾತ್ರ ಸುಳಿಯುತ್ತವೆ ಓದುಗರ ಕಣ್ಣೆನುರು. ಆದರೆ 'ಅಯ್ಯೋ! ತಿಮ್ಮನ ದೈವವೇ' ಎಂಬ ವ್ಯಂಗ್ಯೋದ್ಗಾರದಲ್ಲಿ ಮೂಡಿನಿಂತ ಸಂವಾದಕರ ಅಭಿಪ್ರಾಯವೇ ಸುಸಂಸ್ಕೃತ ಓದುಗರಲ್ಲೂ ವ್ಯಾಪಿ ಬಾರದೇ ಇರದು. ತಿಮ್ಮನೇನೋ ಸುಖಶಾಂತಿಯುತ ಜೀವನ ಸಾಗಿಸುತ್ತಿರಬಹುದು. ಆದರೆ 'ಇಂತಹ ಜೀವನ ಜೀವನವೇ?' ಎಂಬ ಪ್ರಶ್ನೆ ಮಾತ್ರ ಓದುಗರ ಹೃದಯವನ್ನು ಭೇದಿಸಿ, ಮರ್ಮಕ್ಕೆ ಪ್ರಬಲವಾದ ಪೆಟ್ಟು ಕೊಡುತ್ತದೆ; ಭಾವಪ್ರಪಂಚವನ್ನು ಅಲ್ಲೋಲಕಲ್ಲೋಲವಾಗಿಸುತ್ತದೆ. ಕರುಣೆ-ಕಳವಳಗಳು ಏಕಕಾಲದಲ್ಲಿ ಉದಯಿಸಿ, ಯಾವುದೋ ಒಂದು ಅವ್ಯಕ್ತ ಒಳದನಿ 'ಅಯ್ಯೋ' ಎಂದು ಆಕ್ರಂದಿಸುತ್ತವೆ. ಕಾರಣ ಕತೆಗಾರರ ಶ್ರಮ ಸಾರ್ಥಕವಾಗಿದೆಯೆಂದು ಹೇಳಬಹುದು.

ಮೊದಲ ಹಂತದಲ್ಲಿ ಕಥಾಭಾಗ ಸಪ್ಪೆಯಾಗಿದೆ. ಪ್ರಾರಂಭ ಅಷ್ಟೊಂದು ಆಂದವಾಗಿ ಆಕರ್ಷಕವಾಗಿ, ಓದುಗರ ಕುತೂಹಲ ಕೆರಳುವಂತಹದಾಗಿಲ್ಲ. ಮೊದಲ ವಾಕ್ಯವಾಗಲಿ, 'ಈ ಜಾನಿಕೊಳ್ಳುವ ಹಿಂದೆ ಒಂದು ಇತಿಹಾಸವೇ ಇತ್ತು' ಎಂದು ಹೇಳಿ, ರಾಮೂ ತಿಮ್ಮರ ಪರಿಚಯ ಮಾಡಿಕೊಡುವ ಬಗೆಯಾಗಲಿ—ಸರ್ವಸಾಮಾನ್ಯವಾಗಿವೆ. ಒಂದೆರಡು ಮಾತು ಹೇಳುವಲ್ಲಿಯೇ ಓದುಗರೆಲ್ಲ ಊಹಿಸಿ, ಇಂದಿನ ಚಲನಚಿತ್ರಗಳ ಪರಿಯಲ್ಲಿ ಕಲ್ಪನೆಗೆ ವ್ಯಾಪಿಸಿಬಿಡುವಂತಾಗುತ್ತದೆ. ಕಥೆ ಸಾಗುವುದೂ ಅದೇ ಬಗೆಯಲ್ಲಿ. ಬುದ್ಧಿವಂತ-ಸತ್ಯಾಗ್ರಹ-ತಂದೆಯ ಮರಣ-ಮಜಾಯಿಷಿ-ನಿರುದ್ಯೋಗ-ಬಡತನ-ಜೀವಿತ ತಂಗಿ-ಲಗ್ನದ ಸಮಸ್ಯೆ-ಗಳಾಗಲಿ, ಒಬ್ಬನೇ ಮಗ-ದಡ್ಡ-ಸುದೈವಿ-ನೌಕರಿ-ಸಂಪತ್ತಿನೊಂದಿಗೆ ಕನ್ಯಾಪ್ರಾಪ್ತಿ-ಮುಂತಾದುವುಗಳಾಗಲಿ, ಈಗಾಗಲೆ ನೂರಾರು ಕತೆಗಳಲ್ಲಿ ಮೂಡಿಬಂದು, ಮತ್ತೆ ಓದಿದಾಗ ನಕ್ಕುಬಿಡುವಷ್ಟು ಹಗುರಾಗಿವೆ. ಮೂಲವಸ್ತುವಿಗೆ ಪೂರ್ವಭಾವಿಯಾಗಿ ಇವುಗಳನ್ನು ಬಳಸಿಕೊಳ್ಳುವುದು ಅವಶ್ಯವಿದ್ದರೂ, ಅಂದವಾಗಿ ನವರೀತಿಯಲ್ಲಿ ಕಾಣಿಸಬೇಕಿತ್ತು. ಈ ಮಾತುಗಳನ್ನು ಹೇಳುವಲ್ಲಿ ಕತೆಯನ್ನು ಹೀಗಳೆವ ಉದ್ದೇಶವಿಲ್ಲ. ಎರಡನೆಯ ಹಂತದಿಂದ ಪ್ರಾರಂಭವಾಗುವ ಇಲ್ಲವೆ ಮುಂದುವರಿವ ಕತೆ ಸರಾಗವಾಗಿ ಕೊನೆಯವರೆಗೆ ಕುತೂಹಲ ಕೆರಳಿಸುತ್ತ ಸಾಗುವ ಬಗೆ, ಕನಸು ಮನಸಿನಲ್ಲಿ ರೂಪಿಸದ ಘಟನೆಯೊಂದು ಕೊನೆಗೆ ಕಾಣಿಸಿಕೊಂಡು, ಕತೆಗಾರರ ಉದ್ದೇಶಕ್ಕೆ ಬೆನ್ನೆಲುವಾಗಿ ನಿಲ್ಲುವ ಕಲಾತ್ಮಕ ರೀತಿ-ಕೌಶಲಗಳನ್ನು ಕಾಣುವ, ಸಹೃದಯ ಓದುಗರಿಗೆ ಮೇಲೆ ಹೇಳಿದ ಮಾತುಗಳ ಸತ್ಯತೆ ಹೊಳೆಯದಿರದು.

ಮೊದಲಲ್ಲಿ ಸಪ್ಪೆಯಾಗಿ ಬರುವ ಕಥಾಶೈಲಿ ಕೂಡ ಎರಡನೆಯ ಹಂತದಿಂದ ಕಳೆಗೊಳ್ಳುತ್ತದೆ. ತಿಮ್ಮು ರಾಮು ಅವರ ಸಂದರ್ಶನ, ಸಹಜ ಸ್ವಾಭಾವಿಕ ಘಟನೆಯಾಗಿ ಒದಗಿದೆ. ರಾಮುವಿನ ದೈನ್ಯ-ಸಂಕೋಚ, ತಿಮ್ಮನ ಆತ್ಮೀಯತೆಗಳು ಕೂಡ ಅಷ್ಟೇ ನೈಜವಾಗಿ ಮೂಡಿವೆ. ತಿಮ್ಮನ ವೈಭವದ ಜೀವನ ಬಣ್ಣಿಸುವಲ್ಲಿ ಕತೆಗಾರರ ಕಲ್ಪನಾಶಕ್ತಿ ಕುದುರಿನಿಂತಿದೆ. ಸುಖಜೀವನದ ಸುಂದರ ಪರಿಪೂರ್ಣ ಚಿತ್ರವನ್ನು ಚಿತ್ರಿಸಿದ್ದಾರೆ. ಕತೆ ಓದುವಾಗ, ಸುಮ್ಮನೆ ಎಷ್ಟೊಂದು ಅತಿರೇಕವಾಗಿ ಹೇಳುತ್ತಿದ್ದಾರೇನೋ-ಎಂಬ ಭಾವನೆ ಹಣಿಕಿಕ್ಕಿದರೂ, ಓದಿ ನುಗಿಸಿದಾಗ, 'ಆಯ್ಯೋ! ತಿಮ್ಮನ ದೈವವೇ' ಎಂಬ ಮಾತಿನ ವ್ಯಂಗ್ಯತೆಯನ್ನು ಹೆಚ್ಚಿಸುವಲ್ಲಿ ಎಷ್ಟೊಂದು ಪ್ರಭಾವಶಾಲಿಯಾಗಿದೆ ಆ ವರ್ಣನೆಯೆಂಬುದು, ವಿಮರ್ಶಕ ಬುದ್ಧಿಗೆ ಹೊಳೆಯದಿರದು. ರಾಮು 'ತನ್ನ ಜೀವನಕ್ಕೂ ತಿಮ್ಮನ ಜೀವನಕ್ಕೂ ಎಷ್ಟೊಂದು ಅಂತರ?' ಎಂದೆಣಿಕೆ ಹಾಕುತ್ತ, ನಿದ್ರೆಯಿಲ್ಲದೆ ತನ್ನ ಪಾಡಿಗಾಗಿ ಮರುಗಿದರೂ, 'ಇದು ನನ್ನ ದೈವ—ಅದು ಅವನ ದೈವ' ಎಂದುಸುರಿ ನಿಟ್ಟುಸಿರು ಬಿಡುವ ದೃಶ್ಯ ಮನೋವೇಧಕವಾಗಿದೆ. ಸುಖವಾಗಿ ವಿಧವಿಧ ಭಕ್ಷ್ಯ ಭೋಜ್ಯಗಳನ್ನು ಸೇವಿಸುವಾಗ, ತನ್ನ ಹೆಂಡಿರು ಮಕ್ಕಳ ಚಿತ್ರ ಕಣ್ಣೆದುರು ಬಂದು ಕಳವಳಿಸುವ ರಾಮುವಿನ ಪಾತ್ರ ಚೆನ್ನಾಗಿಯೇ ಪೋಷಿತವಾಗಿ ಬಂದಿದೆ. ಅಲ್ಲಲ್ಲಿ ತಿಮ್ಮನ ಹೆಂಡತಿ ವಿಲಾಸಿನಿಯ ಉಚಿತ ಪರಿಚಯ ಮಾಡಿಕೊಡುವ ಬಗೆ ಅಂದವಾಗಿದೆ. 'ನಮ್ಮ ಬಾಬು ನೋಡಿರಿ .. .... ವಿಲಾಸಿನಿ ಬಾಬೂನ ಗುಣಗಾನ ಮಾಡಿದಳು', 'ಸ್ವಲ್ಪ ಊರಲ್ಲಿ ಸುತ್ತಾಡಿಕೊಂಡು ಬರೋಣವೇ?.....' ಎಂಬ ಮಾತುಗಳಲ್ಲಿ ಸಂದೇಹ ಮಂದಮಾರುತನ ಸೋಂಕು-ಸ್ಪರ್ಶ-ಓದುಗರಿಗಾಗುವುದು ಅಸಾಧ್ಯದ ಮಾತು. ಈ ಮೊದಲೆ ನಿರ್ಮಿಸಿದ ವಾತಾವರಣಕ್ಕೆ ಅನುಚಿತವೆನಿಸದಂತೆ ರೂಪಿಸಿ, ಬದಲು ಅವಳ ಸೌಜನ್ಯ-ಸಹೃದಯತೆಗಳ ಬಗೆಗೆ ಓದುಗರು ತಲೆದೂಗುವಂತೆ ಮಾಡಿದುದು ಕತೆಗಾರರ ಕೌಶಲ್ಯವೇ ಸರಿ. ತಿಮ್ಮರಾಯ ಅವಸರದ ಕೆಲಸಕ್ಕೆ ತೆರಳಿದಾಗ, 'ಅವಳ ಸಹವಾಸದಲ್ಲಿ ರಾಮೂನಿಗೂ ತಾನು ಹೆರವರ ಮನೆಯಲ್ಲಿ ಏಕಾಕಿಯಾಗಿರುವೆ.... ಉಂಟಾಗಲಿಲ್ಲ' ಎಂದು ಹೇಳುವ ಜತೆ ಪೋಷಕವಾಗಿ, ನವಸುಶಿಕ್ಷಿತ ಮಹಿಳೆಯ ಪ್ರತಿನಿಧಿಯಾಗಿ ವಿಲಾಸಿನಿ ಕಾಣುವಂತೆ ಚಿತ್ರಿಸುತ್ತಿರೆ ಕತೆಗಾರರು ಆಂತೆಯೆ ರಾಮುವಿಗೂ ವಿಲಾಸಿನಿಯ ಬಗೆಗೆ ಗೌರವಾದರ ಬುದ್ಧಿ ಉಂಟಾಗುತ್ತದೆ. ಅಷ್ಟೇಕೆ, ತನ್ನವಳ ಹಾಗೂ ವಿಲಾಸಿನಿಯ ರೂಪಗಳೆರಡೂ ಎದುರು ಬಂದು ತುಲನೆಗೊಡುವಷ್ಟು ಉತ್ಸೇಗಕ್ಕೂ ಒಳಗಾಗುವ ಚಿತ್ರ ಸ್ವಾಭಾವಿಕವಾಗಿಯೇ ಬಂದಿದೆ. ಆದರೆ ರಾಮನ ಇಡಿ ಚಿತ್ರದಲ್ಲಿ ಸಂಯಮ ಪ್ರತಿಕ್ಷಣಕ್ಕೆ ಕಂಡುಬಂದು, ಅವನಲ್ಲಿ ಆದರ್ಶ ವ್ಯಕ್ತಿತ್ವ ಎದ್ದು ಕಾಣುತ್ತದೆ. ರಾಮುವು ಸಿನೇಮಾಕ್ಕೆ ಅಸ್ವಾಸ್ಥ್ಯದ ನೆಪ ಹೇಳಿ ತಪ್ಪಿಸಲೆಳಸಿದಾಗ, 'ಏಕೆ ಮನೆಯ ನೆನಪಾಗುವುದೇನು?' ಎಂದು ವಿಲಾಸಿನಿ ಹಾಸ್ಯಮಾಡುವಲ್ಲಿ, 'ನೀವು ಬಂದು ನಾಲ್ಕುದಿನ ಆಯಿತು ... ದೂರೇ ಉಳಿಯಿತು' ಎಂದು ಗೊಣಗುವಲ್ಲಿ, ಓದುಗರಿಗೆ ಅವಳ ವಿಷಯವಾಗಿ ಸಂದೇಹಕ್ಕೆ ಅಸ್ಪದ ದೊರೆಯುತ್ತದೆ. ನಾಲ್ಕುದಿನದ

ಪರಿಚಯದಿಂದಾಗಿ, ಗಂಡನಿಲ್ಲದಾಗ ರಾಮುವನ್ನು ನೀನೇಮ ನೋಡಲು ಇನ್ನೊಂದು ಬಲವಂತ ಮಾಡುವುದು ಏಕೆ? ತುಂಟ ಮಾತುಗಳೇಕೆ? ಅನುಚಿತವಲ್ಲವೇ? — ಎಂಬ ಪ್ರಶ್ನೆಯಿಂದಾಗಿ ಅಸಮಾಧಾನ ಮೂಡುತ್ತದೆ. ಅಂತೆಯೆ ವಿಲಾಸಿನಿಯು ರಾಕ್ಷಸರೂಪವನ್ನು ಒಮ್ಮೆಲೆ ಪ್ರದರ್ಶಿಸಿದಾಗ, ಅಂತಹ ಆಘಾತವಾಗುವುದಿಲ್ಲ. ಇಲ್ಲಿ ಕತೆಗಾರರ ಜಾಣ್ಮೆ ಕಂಡುಬಾರದಿರದು. ಮುಂದೆ ಬರುವ ಘಟನೆ ತುಂಬಾ ಸಮರ್ಪಕವಾಗಿ ಅಕೃತ್ರಿಮವಾಗಿ ಚಿತ್ರಿತವಾಗಿದೆ. 'ಸ್ಯಾನ್ಸನ್ ಆ್ಯಂಡ್ ಡಿಲೈಲಾ' ಚಿತ್ರವನ್ನೆ ಆಯ್ದುದು, ಮುಂದೆ ವಿಲಾಸಿನಿಯ ಮನಶ್ಚಾಂಚಲ್ಯ-ಹೀನಬುದ್ಧಿಗಳನ್ನು ರೂಪಿಸುವಲ್ಲಿ, ಮನೋವಿಶ್ಲೇಷಣಾತ್ಮಕ ತತ್ತ್ವ-ಕ್ಕನುಸರಿಸಿ ಹಿನ್ನೆಲೆಯಾಗಿ ಮಾರ್ಪಡಿಸಿಕೊಂಡುದು, ಕತೆಗಾರರ ಸೂಕ್ಷ್ಮ ಬುದ್ಧಿಗೆ ನಿದರ್ಶನವಾಗಿದೆ. ಇಡಿ ಕತೆಯಲ್ಲಿ ರಾಮುವಿನ ಪಾತ್ರವನ್ನು ಅಗ್ನಿಪರೀಕ್ಷೆಯಿಂದ ಬೆಳಗಿಬರುವ ಜೊಕ್ಕ ಚಿನ್ನವಾಗಿ ಚಿತ್ರಿಸಿ, ಕತೆಗಾರರು ಕೊನೆಯವರೆಗೆ ತೂಕದಿಂದ ಪಾತ್ರಪರಿಪೋಷಣೆ ಮಾಡಿದ್ದಾರೆ. ವಿಲಾಸಿನಿಯೊಂದಿಗೆ ಬಾಬುವಿನ ಸಂಬಂಧ ಕಂಡು ಬಂದಾಗ ಕಳವಳಿಸುವ—ಹತಾಶನಾಗುವ—ರಾಮುವು, ನಾಲ್ಕುದಿನಗಳಲ್ಲಿ ಮನೆಯಲ್ಲಿ ಅವನಿಗಿರುವ ಪ್ರಾಧಾನ್ಯತೆ, ಅವನೂ ತಿಮ್ಮಣ್ಣನ ಮನೆಯವನೇ ಆಗಿಬಿಟ್ಟದ್ದ....ಅಲ್ಲಿ, ಸಾಗುತ್ತಿರಲಿಲ್ಲ' ಎಂಬುದರ ಪ್ರತ್ಯಕ್ಷ ಅನುಭವ ಬಂದರೂ, ಯಾವ ಸಂದೇಹ ತಾಳದಿರುವುದು ಅವನ ವ್ಯಕ್ತಿತ್ವಕ್ಕೆ ಭೂಷಣವೇ. ಓದುಗರೇನೋ ಸಂದೇಹಪಡಬಹುದಾದರೂ, ಇಂದಿನ ಆಧುನಿಕ ಅಧಿಕಾರಿಗಳ, ಸಿರಿವಂತರ ಕುಟೀರಗಳಲ್ಲಿ ನಿತ್ಯ ಕಂಡುಬರುವ ಚಿತ್ರ ಎದಿರು ಸುಳಿದು ನಿರಸನವಾಗುತ್ತದೆ ಸಂಶಯ. ಆದರೂ ಬಾಬುವಿನ ವಿಶೇಷವಿವರ ಹೆಚ್ಚಾಗಿ ಕಾಣಿಸಿಕೊಂಡು, ಮುಂದಿನದನ್ನು ಧ್ವನಿತವಾಗಿಸುತ್ತದೆ. ವಿಲಾಸಿನಿಯ ಪಾತ್ರವೇ ಸಮಸ್ಯೆಯಾಗಿ ನಿಂತ ನಮ್ಮನ್ನು ಕೆಣಕುತ್ತದೆ. ಒಂದು ಮಗುವಿನ ತಾಯಿಯಾಗಿ, ಒಳ್ಳೆಯ ಪತಿಸುಖ-ಸಿರಿಸಂಪದಗಳ ಒಡತಿಯಾಗಿ, ಈ ಮಾರ್ಗಕ್ಕಿಳಿಯಲು ಏನು ಕಾರಣವೆಂಬ ಗೂಢ ಹಾಗೆಯೇ ನಿಲ್ಲುತ್ತದೆ. ವ್ಯಾವಹಾರಿಕ ಜೀವನದಲ್ಲಿ ದಾಂಪತ್ಯಸೌಖ್ಯದೆಡೆಗೆ ಕೊಡಸೀಕಾದಸ್ಟು ಗಮನ ಕೊಡದೆ ಊರೂರು ಅಲೆವ ತಿಮ್ಮನದೇ ತಪ್ಪೇನೋ—ಎಂಬ ಸಂಶಯವುಂದರೂ, ಇದು ಅಂತಹ ಪ್ರಬಲ ಕಾರಣವಾಗದು. ವಿವೇಕವಿಚಾರಗಳಿಲ್ಲದ ಅಪ್ರಬುದ್ಧ ಬಾಲೆ ವಿಲಾಸಿನಿಯಲ್ಲ. ಅವಳ ಮಾನಸಿಕ ದೌರ್ಬಲ್ಯವನ್ನೇ ಬೊಟ್ಟುಮಾಡಿ ತೋರಿ ಮರುಗಬೇಕಾಗುತ್ತದೆ. ಇಲ್ಲಿ ವಿಲಾಸಿನಿಯ ದೌರ್ಜನ್ಯ ತಿಮ್ಮುವಿಗೆ ತಿಳಿಯದೆ ಹೋಗಿ, ಅವನನ್ನು ಸುಖ-ಶಾಂತಿಯಲ್ಲಿಟ್ಟಿರಬಹುದು. ಆದರೆ ಹೊತ್ತು ತಿರುವ ಕಡಿ ಮುಂದಾದರೂ ಉರಿಯಲೇಬೇಕು. ಇಂದು ಸಮಾಜದಲ್ಲಿ ಎಲ್ಲ ತಿಳಿದು ಮನದಲ್ಲಿಯೇ ಕೊರಗುವ, ಯೋಚನೆಯನುಭವಿಸುವ ಅನೇಕ ತಿಮ್ಮರನ್ನು ಬಹುಸಂಖ್ಯೆಯಲ್ಲಿ ಕಂಡು ಮೂಕರಾಗಿ ಕನಿಕರಿಸುವ ಓದುಗರು, ಇನ್ನೂ ಸುಪ್ತಿಯಾಗಿರುವ ತಿಮ್ಮನ ಬಗೆಗೆ 'ಪಾಪ! ಆಯ್ಯೋ ತಿಮ್ಮನ ದೈವನೇ?' ಎಂದು ಹೇಳುವುದು ಮಾತ್ರ ನಿಜ. 'ಸ್ತ್ರೀಯಶ್ಚರಿತ್ರಂ ಪುರುಷಸ್ಯ ಭಾಗ್ಯಂ ದೇವೋ ನ ಜಾನಾತಿ ಕುತೋ ಮನುಷ್ಯಃ' ಎಂಬ ಉಕ್ತಿಯನ್ನು ನೆನೆದು ನಿಟ್ಟುಸಿರು ಬಿಡುವುದಲ್ಲದೆ ಬೇರೆ ಉಪಾಯ ಮಾರ್ಗ ಸಂಶೋಧನೆಗೆ ತೊಡಗ ಬೇಕಾದುದು ಇಂದು ಅತ್ಯವಶ್ಯ—ಎಂಬುದನ್ನು ಕತೆಗಾರರು ಸುಂದರವಾಗಿ ಸೂಚ್ಯವಾಗಿ ಪ್ರತಿಪಾದಿಸಿದ್ದಾರೆ.

ಕಥೆ ಬರೆಯುವಲ್ಲಿ ಬಳಸಿದ ಭಾಷೆ ಕೊನೆಯವರೆಗೆ ಒಂದೇ ತೆರನಿಲ್ಲ. ಮೊದಲಲ್ಲಿ ರಾಮುವಿನ ತಾಯಿ ಅವನನ್ನು ಟೀಕಿಸುವು ದೇಕೆಂಬುದಕ್ಕೆ ಸಂದರ್ಭದೊಡನೆ ಸ್ಪಷ್ಟೀಕರಿಸಿದಂತೆ ವಿವರಣೆ ಕೊಡುವ ಅಗತ್ಯವಿರಲಿಲ್ಲವೆಂದು ತೋರುತ್ತದೆ. ಮೊದಲಿನ ಭಾಗವೆಲ್ಲ ಅದೇ ಒಂದು ಕತೆಯಾಗಿ, ಮುಂದಿನದೆಲ್ಲ ಉಪಾಖ್ಯಾನವಾದಂತೆನಿಸುವುದು. ಅಂತೆಯೆ 'ನೀಳ್ಗತೆ'ಯೆಂದು ಕರೆದಿರಬಹುದು. ತಲೆಬರೆಹ ಮಾತ್ರ ತುಂಬಾ ಅರ್ಥವತ್ತಾಗಿದೆ, ಧ್ವನಿಪೂರ್ಣವಾಗಿದೆ. ಪೂರ್ಣ ಕತೆ ಓದಿದಾಗ, ಎಣ್ಣೊಂದು ಅಣಕ ಕಳವಳ ಅವರಲ್ಲಿ ತುಂಬಿದೆ ಎಂಬುದು ತಿಳಿಯದಿರದು. 'ತಿಮ್ಮನ ದೈವ' ಎಂದಾಕ್ಷಣವೇ ಬರುವ ಅನೇಕ ವಿಚಾರಗಳೆಲ್ಲ ಒಂದೊಂದಾಗಿ ಮಾಯವಾಗಿ, ಕುತೂಹಲ ಕೆರಳುವ ಬಗೆ ಕಲಾತ್ಮಕವಾಗಿದೆ. ಚಿದಾನಂದರು ನಮ್ಮುನಾಗಿ ಹೇಳಬೇಕಾದ ವಿಷಯವನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿರುವುದರಿಂದ, ಅಲ್ಲಲ್ಲಿ ತಲೆದೋರಿರಬಹುದಾದ ದೋಷಗಳನ್ನು ಅಷ್ಟೊಂದು ಮಹತ್ತ್ವದ ದೋಷಗಳಾಗಿ ಗಣಿಸಲು ಬಾರದು. ಸರ್ವಶ್ರೇಷ್ಠ ಪರಿಪೂರ್ಣ ಕಲಾಕೃತಿಯಿದಾಗದಿದ್ದರೂ, ಉತ್ತಮ ಕಥೆಯ ಲಕ್ಷಣಗಳ—ವಸ್ತು, ತಂತ್ರ, ಶೈಲಿಗಳನ್ನಿಲ್ಲಿ ಕಾಣಬಹುದಾಗಿದೆ. ಚಿದಾನಂದರು ಇನ್ನೂ ಇಂತಹ ಇದಕ್ಕೂ ಹೆಚ್ಚು ಪರಿಪೂರ್ಣ ಕತೆಗಳನ್ನು ಬರೆದು ಸಮಾಜಕ್ಕೆ ಕನ್ನಡಿ ಹಿಡಿಯಲೆಂದು ಹಾರೈಸುವೆ.

ಗುಡಗೇರಿಯಲ್ಲಿ ನಮ್ಮ ಏಜಂಟರು
ಶ್ರೀ. ಡಿ. ಎನ್. ಹುಲಕೋಟಿ, ನ್ಯೂಜ್ ಏಜಂಟ್

ಜಮಖಂಡಿಯಲ್ಲಿ ನಮ್ಮ ಏಜಂಟರು
ಕುಲಕರ್ಣಿ ಬಂಧುಗಳು, ನ್ಯೂಜ್ ಏಜಂಟ್

ಸಾಹಿತ್ಯ ವಿಹಾರ

ದೇವನಾಗರ

●

ದಿಲ್ಲಿಯ ಸಂಸದೀಯ ಹಿಂದೀ ಪರಿಷತ್ತಿನ ಮುಖಪತ್ರವಾಗಿ ಈ ಹೆಸರಿನ ತ್ರೈಮಾಸಿಕವು ಕಳೆದ ವೈಶಾಖದಲ್ಲಿ ಪ್ರಾರಂಭವಾಗಿದೆ. ಪ್ರಕಟವಾದ ಮೊದಲನೆಯ ಸಂಚಿಕೆಯನ್ನು ನೋಡಿದರೆ, ಅಂತರಂಗ-ಬಹಿರಂಗಗಳೆರಡೂ ಸಹೃದಯರಿಗೆ ಆಕರ್ಷಕವೆನಿಸದಿರವು.

ರಾಷ್ಟ್ರಪತಿ ಬಾಬುರಾಜೇಂದ್ರ ಪ್ರಸಾದರು ಈ ಪತ್ರಿಕೆಗೆ ಸಂರಕ್ಷಕರಾಗಿ ಸಲಹೆಗಾರರಾಗಿ ನಿಂತುದು ಸಂತೋಷದ ಸಂಗತಿಯಾಗಿದೆ. ಏಕೆಂದರೆ ಎಂತಹ ವಿದ್ವಾಂಸರು ಎಂತಹ ಮಹಾ ಮಹಾ ಉದ್ದೇಶದಿಂದ ಹೊರಡಿಸಿದ ಆದರ್ಶಪತ್ರಿಕೆಗಳೂ ಹಣದ ಬಲವಿಲ್ಲದೆ ಸ್ವಲ್ಪ ಕಾಲದಲ್ಲಿಯೆ ಕಣ್ಮರೆಯಾಗುತ್ತಿರುವುದು ಎಲ್ಲರ ಅನುಭವಕ್ಕೆ ಬಂದ ಮಾತು. ರಾಷ್ಟ್ರಪತಿಗಳೇ ಇದಕ್ಕೆ ಸಂರಕ್ಷಕರಾಗಿ ನಿಂತುದರಿಂದ, 'ದೇವನಾಗರ' ಆರ್ಥಿಕಸಂಕಟವನ್ನೇನೂ ಎದುರಿಸಲಾರದೆಂದು ನಂಬಬಹುದು.

ಪತ್ರಿಕೆ ಹಿಂದೀ ಭಾಷೆಯಲ್ಲಿರುವುದಾದರೂ, ಆದರ ದೃಷ್ಟಿ ವಿಶಾಲಭಾರತದ ಎಲ್ಲ ಭಾಷೆಯ ಸಾಹಿತ್ಯಗಳ ಕಡೆಗೂ ವಿಶ್ವಾಸದಿಂದ ನೋಡುವಂತಹದಾಗಿರುವುದು. ಎಂತಲೇ ಸಂಪಾದಕೀಯದಲ್ಲಿ, ಇದರಲ್ಲಿ ಬರುವ ವಿಷಯಸಾಮಗ್ರಿಯ ರೂಪರೇಷೆಯ ವಿಚಾರವನ್ನು ಕುರಿತು ಹೀಗೆ ಹೇಳಲಾಗಿದೆ:

೧ (ದೇವನಾಗರಿ ಲಿಪಿಯಲ್ಲಿ) ಬೇರೆ ಬೇರೆ ಭಾಷೆಗಳ ಪ್ರಾತಿನಿಧಿಕ ಕೃತಿಗಳು ಅವುಗಳ ಅನುವಾದಗಳು.

೨ ಬೇರೆ ಬೇರೆ ಭಾಷೆಗಳ ಸಾಹಿತ್ಯಿಕ ಗತಿವಿಧಿಯ ವಿಚಾರದಲ್ಲಿ ಹಿಂದಿಯಲ್ಲಿ ಸಂಕ್ಷಿಪ್ತ ಲೇಖನಗಳು.

೩ ಹಿಂದಿಯ ಕೆಲವು ವಿಶಿಷ್ಟ ಕೃತಿಗಳನ್ನು ಅನ್ಯಭಾಷೆಗಳಲ್ಲಿ ರೂಪಾಂತರಿಸಿ ಬರೆದ ಲೇಖನಗಳು.

೪ ಮೂಲ ಉದ್ದೇಶಕ್ಕೆ ಅನುಗುಣವಾದ ಸಂಪಾದಕೀಯ ಮೊದಲಾದುವುಗಳು.

ಈ ಪತ್ರಿಕೆಯನ್ನು ಪ್ರಕಟಿಸುವ ಸಂಸದೀಯ ಹಿಂದೀ ಪರಿಷತ್ತೆಂದರೆ, ದಿಲ್ಲಿಯ ಸಂಸತ್ತಿನಲ್ಲಿರುವ ಸದಸ್ಯವರ್ಗದಿಂದ ಸ್ಥಾಪಿತವಾದುದಾಗಿದೆ. ಭಾರತದ ಬೇರೆ ಬೇರೆ ಭಾಷೆಯ ಸಾಹಿತ್ಯವನ್ನು ದೇವನಾಗರೀ ಲಿಪಿಯಲ್ಲಿ ಪ್ರಕಟಿಸುವುದೂ, ಆದರಂತೆಯೆ ಸಂಶ್ಲಿಷ್ಟಭಾರತದ ಒಂದು ಸಾಹಿತ್ಯವಿಕಾಸಕ್ಕೆ ನೆರವು ಕೊಡುವುದೂ ಈ ಪತ್ರಿಕೆಯ ಉದ್ದೇಶಗಳಾಗಿವೆ.

ಈ ಉದ್ದೇಶಕ್ಕನುಗುಣವಾಗಿ ಈ ಮೊದಲ ಸಂಚಿಕೆಯಲ್ಲಿ ತಮಿಳು, ಬಂಗಾಲಿ, ಆಸಾಮಿ, ಉರ್ದು, ಗುಜರಾತಿ, ಕನ್ನಡ ಕಾವ್ಯಗಳಿಗೂ ಮರಾಟಿಯ ಶ್ರೀ. ವಿ. ಸ. ಖಾಂಡೇಕರರ ನಿಬಂಧವೊಂದಕ್ಕೂ ಗುಜರಾತಿಯ 'ಧೂಮಕೇತು' ಎಂಬ ಕತೆಗಾರರದೊಂದು ಕತೆಗೂ ಅವಕಾಶಕೊಟ್ಟಿದೆಯಲ್ಲದೆ 'ಭಾರತೀಯವಾಙ್ಮಯ' ಎಂಬ ವಿಭಾಗದಲ್ಲಿ 'ತಮಿಳುಕಾವ್ಯದ ಪ್ರವೃತ್ತಿಗಳು' 'ಮರಾಠಿ ಉಪನ್ಯಾಸ (ಕಾದಂಬರಿ), 'ಚಂಡಿದಾಸ' 'ಆಧುನಿಕ ಹಿಂದಿ ಕವಿತಾ' ಎಂಬ ವಿಮರ್ಶಾತ್ಮಕ ಲೇಖನಗಳು ಪ್ರಕಟವಾಗಿವೆ.

ಕೊನೆಗೆ 'ಸೂರದಾಸ' ಕವಿಯ ಹಿಂದೀ ಕವಿತೆಯೊಂದನ್ನೂ ಹಿಂದೀ ಭಾಷೆಯ 'ಜಯಶಂಕರ ಪ್ರಸಾದ' ಎಂಬ ಕವಿಯ ಆಧುನಿಕ ಕವಿತೆಯನ್ನೂ ಕೊಟ್ಟು, ಅವುಗಳನ್ನು ಬೇರೆಬೇರೆಯವರಿಂದ ತೆಲುಗು, ಉಡಿಯಾ, ಮಲಯಾಳಿ, ಪಂಜಾಬಿ ಭಾಷೆಗಳಿಗೆ ಪರಿವರ್ತಿಸಿ ಪ್ರಕಟಿಸಲಾಗಿದೆ.

ಮಿಕ್ಕ ಭಾಷೆಗಳ ದೃಷ್ಟಿಯಿಂದ ಕನ್ನಡ ಭಾಷೆಗೆ ಈ ಸಂಚಿಕೆಯಲ್ಲಿ ದೊರೆತ ಅವಕಾಶ ತೀರ ಕಡಿಮೆಯೆನಿಸುವುದು. ಶ್ರೀಮಾನ್ ಮಾಸ್ತಿ ವೆಂಕಟೇಶ ಐಯಂಗಾರ್ ಅವರ 'ತಿರುಪಾಣಿ' ನಾಟಕದಲ್ಲಿಯ 'ಏತಕೆನ್ನನು ನಿಲಿಸಿದೆ' ಎಂಬ ಹದಿನಾಲ್ಕು ಪದ್ಯಗಳ ಗೀತವೂ ಶ್ರೀಮಾನ್ ಪು. ತಿ ನರಸಿಂಹಾಚಾರ್ಯರ 'ಕೃಷ್ಣನ ಕೊಳಲಿನ ಕರೆ' ಎಂಬ ಗೀತವೂ ಕವಿಪರಿಚಯ ಸಹಿತ ಹಿಂದಿ ಅನುವಾದದೊಂದಿಗೆ ಮೂರು ಪುಟಗಳಲ್ಲಿ ಪ್ರಕಟವಾಗಿರುವುವು. ಮರಾಠಿ, ತಮಿಳು, ಗುಜರಾತಿ ಕೃತಿಗಳಿಗೆ ಸಾಕಷ್ಟು ಪುಟಗಳ ಅವಕಾಶ ಪಡೆದಿರುವುವು. ಆಯ್ದು ಪ್ರಕಟಿಸಿರುವ ಕನ್ನಡ ಕವನಗಳೂ ಆಧುನಿಕ ಕನ್ನಡ ಕಾವ್ಯದ ರಸದ ಉಚ್ಚಮಟ್ಟವನ್ನು ಅಖಿಲಭಾರತಕ್ಕೆ ಪರಿಚಯ ಮಾಡಿಕೊಡಲು ಸಮರ್ಥವಾಗಿವೆಯೆಂದು ಅನೇಕರು ಒಪ್ಪಲಾರರು. ಇದೇ ಕವಿಗಳು ಬರೆದ ಕವನಗಳಲ್ಲಿ ಈಗ ಆಯ್ದುವಕ್ಕಿಂತ ರಸವತ್ತಾದುವುಗಳು ಬೇಕಾದಷ್ಟು ದೊರೆಯುತ್ತಲಿದ್ದುವು ಸಂಚಿಕೆಯ ೬೬ ಪುಟಗಳಲ್ಲಿ ಮರಾಠಿ ಭಾಷೆಯೊಂದಕ್ಕೇ ೩೧ ಪುಟಗಳು ದೊರೆತುದು, ಪ್ರತಿಯೊಂದು ಕ್ಷೇತ್ರದಲ್ಲಿಯೂ ಮುಂದೆ ನುಗ್ಗಿ ಕಾರ್ಯ ಮಾಡುವ ಮರಾಠಿಗರ ಸ್ವಭಾವಕ್ಕೆ ಸಾಕ್ಷಿಯಾಗಿದೆ.

ಸಂಸದೀಯ ಹಿಂದೀ ಪರಿಷತ್ತಿನವರು ಈ ಪತ್ರಿಕೆಯನು ಹೊರಡಿಸಿ, ಭಾರತೀಯ ಭಾಷಾಬಾಂಧವ್ಯದ ದೊಡ್ಡ ಆದರ್ಶವನ್ನು ಸಾಧಿಸುವ ಮಹಾಕಾರ್ಯಕ್ಕೆ ತೊಡಗಿದಂತಾಗಿದೆ. ಎಲ್ಲ ಸಾಹಿತ್ಯಕರೂ ಸಹೃದಯರೂ ಸಹಕರಿಸಿ ಈ ಪತ್ರಿಕೆಯ ಆದರ್ಶ ನನಸಾಗುವಂತೆ ಮಾಡಬೇಕು. ಮಾನ್ಯ ಹಿರಿಯರಾದ ಶ್ರೀಮಾನ್ ಮಾಸ್ತಿ ವೆಂಕಟೇಶ ಐಯಂಗಾರ್ ಅವರು, ಈ ಪತ್ರಿಕೆಯ ಸಂಪಾದಕ ಮಂಡಲಿಯಲ್ಲಿರುವುದು ಅಭಿಮಾನದ ಸಂಗತಿ.

—ಬಿ. ಪಿ. ಎಸ್. ರಾವ್

ಸಾದರ ಸ್ವೀಕಾರ

೯ ಲೋಕೋಪಕಾರಿ (ಮೂರು ಏಕಾಂಕಗಳು). ಬರೆದವರು ಶ್ರೀ. 'ನಿಶಾಕಾಂತ' ೧೨, ಬುಲ್‌ಟೆಂಪಲ್ ರಸ್ತೆ, ಬೆಂಗಳೂರು—೪. ಕಮಲ ಸಾಹಿತ್ಯಮಾಲೆ ೧. ಮಾರಾಟಗಾರರು ದಿ ಸ್ಟ್ಯಾಂಡರ್ಡ್ ಬುಕ್‌ಡಿಪೊ. ಅವಿನ್ಯೂರಸ್ತೆ, ಬೆಂಗಳೂರುಸಿಟಿ. ಕ್ರೌ. ಆ. ೬೫ ಪುಟಗಳು. ಬೆಲೆ ೦—೧೨—೦.

೧೦ ನಾಲ್ಕು ಅಧ್ಯಾಯಗಳು (ಅನುವಾದಿತ ಕಾದಂಬರಿ) ಮೂಲ ಲೇಖಕರು ಸ್ವರ್ಗೀಯ ರವೀಂದ್ರನಾಥ ಠಾಕೂರ್ ಅವರು. ಕನ್ನಡಿಸಿದವರು "ಧನ್ವಂತ." ಪ್ರಕಾಶಕರು ಪಿ. ಎಚ್. ಎನ್. ರಾವ್ ಬ್ರದರ್ಸ್. ಚಿಕ್ಕಪೇಟೆ, ಬೆಂಗಳೂರುನಗರ. ಕ್ರೌ. ಆ. ೬೪ ಪುಟಗಳು. ಬೆಲೆ ೧—೦—೦.

೧೧ ಶ್ರೀ ಅಶ್ವತ್ಥ ನರಸಿಂಹ ಕ್ಷೇತ್ರ ಮಹಾತ್ಮೆಯು ಲೇಖಕರು ಹಾಗೂ ಪ್ರಕಾಶಕರು ೧ ಶ್ರೀ. ನರಸಿಂಹಾಚಾರ್ಯ ಮಧ್ವಾಚಾರ್ಯ ಬೆಂಡಿಗೇರಿ. ೨ ಪ್ರಲ್ಹಾದಾಚಾರ್ಯ ನರಸಿಂಹಾಚಾರ್ಯ ಪೂಜಾರ, ಶ್ರೀ ಅಶ್ವತ್ಥ ನರಸಿಂಹದೇವರ ಅರ್ಚಕರು. ಪ್ರಕಾಶನ ಸ್ಥಳ: ಅಚ್ಯುತರಾಯನ ಕಟ್ಟೆ, ಹುಬ್ಬಳ್ಳಿ. ಪೋ. ಮು. ಹುಬ್ಬಳ್ಳಿ. ಜಿಲ್ಲಾ ಬೆಳಗಾಂವಿ. ಕ್ರೌ ಅ ೩೪ ಪುಟಗಳು. ಬೆಲೆ ೦—೮—೦.

ಮುಗುಟಖಾನ ಹುಬ್ಬಳ್ಳಿ, ಬಳಿಯ ಶ್ರೀನರಸಿಂಹದೇವರ ಕಟ್ಟೆಯು, ಉ. ಕರ್ನಾಟಕದಲ್ಲಿ ಅನೇಕ ಭಾವುಕರ ಆಕರ್ಷಣೆಗೆ ಪಾತ್ರವಾದ ಸ್ಥಳ. ವಿಜಯನಗರದ ದೊರೆ ಅಚ್ಯುತರಾಯನು ಈ ಚಿಕ್ಕ ದೇವಸ್ಥಾನಕ್ಕೆ ವಿಶಾಲವಾದ ಕಟ್ಟೆಯನ್ನು ಕಟ್ಟಿಸಿದನೆಂಬ ಐತಿಹ್ಯವಿದೆ. ಎಂತಲೇ ಇದು 'ಅಚ್ಯುತರಾಯನ ಕಟ್ಟೆ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಈ ಕ್ಷೇತ್ರವು ಪುರಾತನ ಪರಂಪರೆಯು. ದಿದ್ದು, ಸ್ಥಳಪುರಾಣವೂ ಇದೆ ಶ್ರೀನೃಸಿಂಹನ ಭಕ್ತರಾದ ಲೇಖಕರು, ಭಾವನಾತ್ಮಕ ರೀತಿಯಲ್ಲಿ ಈ ಕ್ಷೇತ್ರ ಮಹಾತ್ಮೆಯನ್ನು ಬರೆದಿದ್ದಾರೆ. ಶ್ರೀನೃಸಿಂಹ ಭಕ್ತರಿಗೂ ಕುತೂಹಲಿಗಳಿಗೂ ಈ ಪುಸ್ತಕ ಪ್ರಯೋಜನಕಾರಿಯೆನಿಸಬಹುದು.

೧೨ ಸೆರೆಯಾಳು (ಖಂಡಕಾವ್ಯ) ಬರೆದವರು ಶ್ರೀಮಾನ್ ಟಿದಂಬರ ದೀಕ್ಷಿತ, ಧಾರವಾಡ. ಪ್ರಕಾಶಕರು ಶ್ರೀ. ಭಾಲಚಂದ್ರ ವೆಂಕಟೇಶ ಫಾಣೇಕರ, ಪ್ರತಿಭಾ ಗ್ರಂಥಮಾಲೆ, ಧಾರವಾಡ. ಕ್ರೌ. ಆ. ೩೬ ಪುಟಗಳು. ಬೆಲೆ ೧—೦—೦.

೧೩ ಆಕಾಶಬುಟ್ಟಿ (ಕವನ ಸಂಕಲನ) ಬರೆದವರು ಶ್ರೀಮಾನ್ ಚೆನ್ನವೀರ ಕಣವಿಯವರು. ಪ್ರಕಾಶಕರು ಶ್ರೀ ಭಾಲಚಂದ್ರ ಫಾಣೇಕರರು. ಕ್ರೌ. ಆ. ೯೪ ಪುಟ. ಬೆಲೆ —೪—೦.

೧೪. **ಮುಂಬಡಿ** (ಪಸ್ತಲಿಪಿತ ಮಾಸಪತ್ರಿಕೆ). ಉತ್ತರ ಕನ್ನಡ ಜಿಲ್ಲೆಯ ಶಿರಾಲಿಯಲ್ಲಿ ಪ್ರಕಟವಾಗುತ್ತಿದೆ. ಸಂಪಾದಕರು ಶ್ರೀ ತರುಣರಾದ ಗೋಪಾಲ ಕಣ್ಣಿ, ಗುರುನಾಥ ಕೊಪ್ಪೀಕರ, ವಿ. ಶಹಾಣೆ ಅವರು. ಸಹಾಯಕರು ಶ್ರೀಯುತರುಗಳಾದ ಅನಂತ ನಾಗರಕಟ್ಟಿ, ಪೆಟ್ಟಿ. ಶಾಂಬಣ್ಣಿ, ಕೆ. ಎಸ್. ನಾಯಕ ಅವರು. ಕ್ರೌ. ೧೬ ಪುಟಗಳು.

ತರುಣರ ಸಾಹಿತ್ಯಪ್ರೀತಿ—ಪರಿಚಯಗಳೇ ಈ ಪತ್ರಿಕೆಗೆ ಪ್ರಜ್ಞೋದಕಗಳಾಗಿವೆ. ಸಂಚಾಲಕರು ಕನ್ನಡ ನಾಡು-ನುಡಿಗಳ ತುಂಬ ಅಭಿಮಾನಿಗಳೂ ಆಹುದು. ತರುಣರ ಲೇಖನ, ಕತೆ, ಕವನ ಪ್ರಬಂಧಗಳಲ್ಲದೆ, ಹಿರಿಯ ಲೇಖಕರ ಉದ್ಬೋಧಕ, ಪರಿಚಯಾತ್ಮಕ ಲೇಖನಭಾಗಗಳನ್ನೂ ವಚನಾವಲಿಗಳನ್ನೂ ಸಂಗ್ರಹಿಸಲಾಗಿದೆ ಈ ಕೈಬರೆಹದ ಸಂಚಿಕೆಗಳನ್ನೆ ಹೆಚ್ಚು ಸಂಖ್ಯೆಯಲ್ಲಿ ಬರೆದು ಪ್ರಕಟಿಸಿ ಕನ್ನಡ ನಾಡಿನ ಮುಖ್ಯ ಮುಖ್ಯ ವಾಚನಾಲಯಗಳಲ್ಲಿರಿಸಬೇಕೆಂದು ಸಂಚಾಲಕರ ಅಪೇಕ್ಷೆ. ಅದಕ್ಕಾಗಿ ಸಾರ್ವಜನಿಕರಿಂದ ಆರ್ಥಿಕ ಸಹಕಾರವನ್ನು ಕೋರಿದ್ದಾರೆ. ಪತ್ರಿಕೆ ಅಂತರಂಗ-ಬಹಿರಂಗಗಳೆರಡ. ರಲ್ಲಿಯೂ ಆಕರ್ಷಕವೆನಿಸುವಂತಿದೆ.

೧೫. **ದೇವನಾಗರ** (ನವೀನ ತ್ರೈಮಾಸಪತ್ರಿಕೆ) ಸಂರಕ್ಷಕರು ಡಾ. ರಾಜೇಂದ್ರ ಪ್ರಸಾದರು. ದೇವನಾಗರೀ ಲಿಪಿಯಲ್ಲಿ ಹಿಂದೀ ಭಾಷಾ ಮಾಧ್ಯಮದಲ್ಲಿ, ಭಾರತದ ಎಲ್ಲ ಪ್ರಮುಖ ಭಾಷಾ ಸಾಹಿತ್ಯ-ಗಳ ಪರಸ್ಪರ ಪರಿಚಯೋದ್ದೇಶದಿಂದ ಈ ಪತ್ರಿಕೆ ಹೊರಟಿದೆ. ಭಾರತದ ಪ್ರಮುಖ ೧೨ ದೇಶಭಾಷೆಗಳಿಗೂ ಒಬ್ಬೊಬ್ಬರಂತೆ ಸಂಪಾದಕರನ್ನು ಆಯ್ದುಕೊಂಡು, ಒಂದು ಸಂಪಾದಕ ಮಂಡಲವನ್ನು ರಚಿಸಲಾಗಿದೆ ಶ್ರೀಗಳಾದ ಡಾ. ಸತ್ಯೇಂದ್ರ, ಮತ್ತು ಸಚ್ಚಿದಾನಂದ ಹೀರಾನಂದ ವಾತ್ಸ್ಯಾಯನ ಅವರು ಮುಖ್ಯ ಸಂಪಾದಕರು. ಕರ್ನಾಟಕದಿಂದ ಶ್ರೀಮಾನ್ ಮಾಸ್ತಿ ವೆಂಕಟೇಶ ಐಯಂಗಾರ್ ಅವರನ್ನು ಸಂಪಾದಕ ಮಂಡಲದಲ್ಲಿ ಆಯ್ದುಕೊಳ್ಳಲಾಗಿದೆ. ರಾಯಲ್ ೧೮ ಆಕಾರದ ೯೬ ಪುಟಗಳು. ಸುಂದರವಾದ ಕಾಗದ ಮುದ್ರಣಗಳು. ದಿಲ್ಲಿಯ ಸಂಸದೀಯ ಹಿಂದೀ ಪರಿಷತ್ತಿನ ಪ್ರಕಾಶನ. ವಾ. ಜಂ. ೬-೦-೦. ಬಿಡಿ ಸಂಚಿಕೆಗೆ ೧-೮-೦.

೧೬. **ರುಕ್ಮಿಣಿ ಮತ್ತು ಕಾಂತಂ ಕತೆಗಳು.** (ಅನುವಾದಿತ ಕಾದಂಬರಿ ಮತ್ತು ಕತೆಗಳು) ಮೂಲ ತೆಲಗು ಲೇಖಕರು ಶ್ರೀಮಾನ್ ಮುನಿಮಾಣಿಕ್ಯಂ ನರಸಿಂಹರಾವ್. ಅನುವಾದಕರು ಶ್ರೀಮಾನ್ ಪಂ. ವೆಂಕೋಬಾಚಾರ್ಯ ಬಿ. ಎ., ಬಿ ಟಿ ಹುಬ್ಬಳ್ಳಿಯ ಆನಂದ ಗ್ರಂಥಮಾಲೆಯ ೩೬ನೆಯ ಪರ್ವದ ಕುಸುಮ ೧. ಕ್ರೌ. ಅ. ೧೫೬ ಪುಟಗಳು. ಬೆಲೆ ಸಾದಾ ಪ್ರತಿಗೆ ೧-೮-೦. ಉತ್ತಮ ಪ್ರತಿಗೆ ೨-೦-೦.

೧೭ ಮೋಪಾಸಾನ ಒಲೆಗಳು (ಜೀವನ ಚರಿತ್ರೆಯೊಂದಿಗೆ) ಮೂಲ ಫ್ರೇಂಚ್ ಪ್ರಸಿದ್ಧ ಸಾಹಿತ್ಯಿಕ ಗಾಯ್-ದಿ-ಮೋಪಾಸಾನ ಒಲೆಗಳನ್ನು ಶ್ರೀಮಾನ್ ಪಂ. ವೆಂಕೋಬಾರ್ಯರು ಕನ್ನಡಿಸಿ ಸಂಕಲನ ಮಾಡಿದ್ದಾರೆ. ಮೇಲಿನ ಆನಂದ ಗ್ರಂಥಮಾಲೆಯ ೩೬ನೆಯ ಪರ್ವದ ಕುಸುಮ ೨. ಕ್ರೌ. ಅ ೧೬+೨೬ ಪುಟಗಳು. ಬೆಲೆ ಸಾದಾ ಪ್ರತಿಗೆ ೧—೪—೦. ಉತ್ತಮ ಪ್ರತಿಗೆ ೨—೦—೦.

R. No. B. D 416

ಶರತ್‌ಪ್ರಕಾಶನ ಮಂದಿರ. ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು!
ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ ಸವಲತ್ತಿಗೆ ಸರಿಯಾಗಿ ಪೂರಯಿಸಲಾಗುವುದು.

ಆನಂದಕಂದ'ರ ಕಥೆ, ಕಾದಂಬರಿ, ಕವನಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು, ಎಲ್ಲವೂ ನಮ್ಮಲ್ಲಿ ದೊರೆಯುವವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮೀಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು.

ನಮ್ಮ ಮಂದಿರ ಪ್ರಕಟಿಸಿದ 'ಆನಂದಕಂದ'ರ ಸಾಮಾಜಿಕ ಕಾದಂಬರಿ:

ಮಗಳ ಮದುವೆ

೧೯೨೦ನೆಯ ಸತ್ಯಾಗ್ರಹ ಚಳವಳಿಯ ಹಿನ್ನೆಲೆಯಲ್ಲಿ ಉತ್ತರಕರ್ನಾಟಕದ ಸಾಮಾಜಿಕ ಜೀವನವನ್ನು ವಿವಿಧ ಮಜಿದಲ್ಲಿ ಚಿತ್ರಿಸಿ ತೋರಿಸಿದ ರಮ್ಯ ಕಥಾನಕ. ಓದಲು ಕೈಯ್ಯಲ್ಲಿ ತೆಗೆದುಕೊಂಡರೆ, ಮುಗಿಸುವ ವರೆಗೂ ಪುಸ್ತಕವನ್ನು ಕೆಳಗೆ ಇರಿಸಲಿಕ್ಕಾಗದಂತಹ ಆಕರ್ಷಕವಾದ ಕತೆಗಾರಿಕೆ. ಓದಿದ ರಸಿಕರಿಂದ ಧನ್ಯವಾದಗಳ ಸುರಿಮಳೆ!

ಕ್ರೌ. ಅ. ೩೫೦ ಪುಟಗಳು ಸಾದಾ ಪ್ರತಿಗೆ ೪-೦-೦; ಸುಂದರ ಪ್ರತಿಗೆ ೪-೧೨-೦

ಬೆಳವಡಿ ಮಲ್ಲಮ್ಮ

(ಕರಂಗನಾಟಕ ಸಂಕಲನ)

ಕ್ರೌ. ಅ. ೧೧೬ ಪುಟ. ಬೆಲೆ ೧-೪-೦

ಕಾರಹುಣ್ಣಿವೆ

(ಕವನಸಂಕಲನ)

ಕ್ರೌ. ಅ. ೧೨೪ ಪುಟ. ಬೆಲೆ ಸಾದಾ ೨-೦-೦
ಸುಂದರ ೨-೪-೦

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ವಿರಹಿಣಿ	ಬಡತನದ ಬಾಳು	ಕರ್ನಾಟಕ ಜನಜೀವನ
ಸುದರ್ಶನ	ಒಡನಾಡಿ	ನಮ್ಮ ಬದುಕು	ಜೀವನ ಚರಿತ್ರ
ಅಶಾಂತಿಪರ್ವ		ಸಂಸಾರ ಚಿತ್ರ	ಶ್ರೀ ಬಸವಣ್ಣನವರು
ಮಗಳ ಮದುವೆ		ಮಾತನಾಡುವ ಕಲ್ಲು	

ಅಲ್ಲದೆ ಶ್ರೀ ಹುದ್ದಾರರ 'ಚಿತ್ರಕಲಾಪ್ರವೇಶ'ವೂ ಚಾಡಿಯ ಚಾಣಕ್ಯನ 'ಜಾತೀಯ ಸಮಸ್ಯೆ' 'ಕರ್ನಾಟಕ ಏಕೀಕರಣ' ಈ ಕರಿಹೊತ್ತಿಗೆಗಳೂ ದೊರೆಯುವವು.

ಶರತ್‌ಪ್ರಕಾಶನ ಮಂದಿರಕ್ಕೆ ೫ ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೆ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ:

ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ, ಧಾರವಾಡ

Printed by N. A. Hoskeri at the Vijaya Press, Dharwar, and published for the Proprietors Jayanti Publications, by S. D. Dharmatti at the Jayanti Office, Dharwar

ಅಗಸ್ಟ್
ಟ
೧೯೫೩

ಈ ಸಂಚಿಕೆಯಲ್ಲಿ

ಕರ್ನಾಟಕ ರಾಜ್ಯನಿರ್ಮಾಣ (ಸಂಪಾದಕೀಯ)	— ಸಂಪಾದಕರು	೮೧
ನಾಡನಡೆ (ಪ್ರಾಸಂಗಿಕ ಟಿಪ್ಪಣಿ)	— 'ಕಾಲಭೈರವ'	೮೩
ಸಾವೋ ಬದುಕೋ? (ಸಣ್ಣಕತೆ)	— 'ಪ್ರಿಯದರ್ಶನ'	೮೫
ಕರ್ನಾಟಕದ ಕೀರ್ತನಕಾರರು (ಸಂಗೀತ ಚರಿತ್ರೆ)	ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ	೯೦
ಜಾನ್ ಡಾಲ್ಟನ್ (ವ್ಯಕ್ತಿಪರಿಚಯ)	ಶ್ರೀ. ವೆಂಕೋಬಾಚಾರ್ಯ ಉಪಾಧ್ಯಾಯ ಎಂ. ಎಸ್‌ಸಿ.	೯೪
ವಿಶ್ವದ್ರೋಹಿ (ಕವನ)	ಶ್ರೀ. ಮಂಗೇಶ ನಾಡಕರ್ಣಿ, ಧಾರವಾಡ	೯೬
ದಾಂಪತ್ಯ ದಂಡವಿಧಾನ (ವಿನೋದ ಪ್ರಬಂಧ)	ಶ್ರೀ. ಪಾ. ಭಿ ಜೋಶಿಪುರ ಎಂ. ಎ. ಜಬಲಪುರ	೯೮
ಸಸ್ಯತಳಿ ಶಾಸ್ತ್ರದ ಮುನ್ನಡೆ (ವೈಜ್ಞಾನಿಕ)	ಶ್ರೀ. ಎಚ್. ವಿ ಕಾಶ್ಯಪ ಎಂ. ಎಸ್‌ಸಿ.	೧೦೧
ಕಪ್ಪುಗೆರೆಗಳು (ಕಿರುಗತೆ)	ಶ್ರೀ. ದೇವೇಂದ್ರಕುಮಾರ	೧೦೩
ಕಲಂಕ (ಸಣ್ಣಕತೆ)	ಶ್ರೀ. ವೆಂ. ಮು. ಜೋಶಿ. ಧಾರವಾಡ	೧೦೪
ಪಂಚವಾರ್ಷಿಕ ಯೋಜನೆ (ಲೇಖಾಂಕ ೩)	ಶ್ರೀ. ವಿ. ಸಿ. ಹಿತ್ತಲಮನಿ ಬಿ. ಎಸ್‌ಸಿ (ಅಗ್ರಿ)	೧೦೯
ಹೊಸಬಾಳಿನ ಹೊಸ್ತಿಲಲ್ಲಿ (ಕವನ)	ಶ್ರೀ. ಸಿದ್ದಣ್ಣ ಮಸಳಿ, ಬಿ. ಎ. (ಆನರ್ಸ್) ಬೆಳಗಾಂವಿ	೧೧೨
ಗುಜರಾತಿ ಪತ್ರಿಕೋದ್ಯಮ (ಪರಿಚಯಾತ್ಮಕ)	ಶ್ರೀ. ಎ. ಎಸ್. ರಾಮಕೃಷ್ಣ, ಸುರತಕಲ್ಲು	೧೧೩
ಸಾಹಿತ್ಯವಿಹಾರ (ಎರಡು ಪತ್ರಗಳು)	ಇಬ್ಬರು ವಾಚಕಮಹನೀಯರು	೧೧೬
ಸಾಹಿತ್ಯವಿಮರ್ಶೆಯ ಶಿಕ್ಷಣರಂಗ	ವಿದ್ವಾನ್ ಕೆ. ಎನ್. ಶರ್ಮಾ, ಕಾಸರಗೋಡು	೧೧೮

ಸಂಪುಟ
೧೬

ಸಂಚಿಕೆ
೩

ಬೆಲೆ
೮ ಆಣೆ

ಜಯಂತಿ

ಸಂಪುಟ ೧೩ ಸಂಚಿಕೆ ೩

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

* *
*

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು:
ಶ್ರೀ. ಡಿ. ಶರತ್‌ಕುಮಾರ

**

ಸಂಚಿಕೆ ಪ್ರತಿ ೫ನೇ
ತಾರೀಖಿಗೆ
ಪ್ರಕಟವಾಗುವುದು.

**

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

**

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

卐

ಕರ್ನಾಟಕ ರಾಜ್ಯನಿರ್ಮಾಣ

ಕರ್ನಾಟಕ ಪ್ರದೇಶವನ್ನು ಒಳಗೊಂಡ ಪ್ರತ್ಯೇಕವಾದ ರಾಜ್ಯದ ನಿರ್ಮಿತಿಯಾಗುವುದು ಎಲ್ಲ ಕನ್ನಡಿಗರಿಗೂ ಬೇಕಾದ ಮಾತಾಗಿದೆ. ಆಂಧ್ರರಾಜ್ಯವು ಪ್ರತ್ಯೇಕಗೊಂಡುದರಿಂದಂತೂ ಕನ್ನಡ ಜನಸಾಮಾನ್ಯರು ಇನ್ನಿಷ್ಟು ಕಾತರರಾಗಿದ್ದಾರೆ. ಮೈಸೂರಿನ ಮುಖ್ಯ ಮಂತ್ರಿಗಳೂ ಬೇರೆಯ ಹೊಣೆಗಾರ ಮುಖಂಡರೂ ಆಗಾಗ ಅತ್ತ ತಿರುವ ಮಾತುಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ನೋಡಿದರೆ, ಅವರಿಗೆ ಮೈಸೂರುರಾಜ್ಯವನ್ನು ಭದ್ರಗೊಳಿಸುವುದರ ಕಡೆಗೇ ವಿಶೇಷ ಲಕ್ಷ್ಯವಿರುವುದೆಂದು ಎನಿಸುವುದು ಹೊರತು, ಅಖಂಡ ಕರ್ನಾಟಕ ನಿರ್ಮಿತಿಯ ಅತ್ತುರ ಅವರಿಗೆ ಇದ್ದಂತೆ ಕಾಣಿಸುವುದಿಲ್ಲ. ಮೈಸೂರುರಾಜ್ಯದ ಭದ್ರತೆಗೆ ಬಳ್ಳಾರಿ ಜಿಲ್ಲೆಯಿಂದ ಅನುಕೂಲತೆಯುಂಟು; ಎಂತಲೆ ಅದನ್ನು ಸ್ವೀಕರಿಸಲು ಸಿದ್ಧರಾದರು. ಅದರಂತೆಯೆ ದಕ್ಷಿಣಕನ್ನಡ ಜಿಲ್ಲೆಯ ಸೇರುವಿಕೆಯಿಂದ, ಮೈಸೂರುರಾಜ್ಯಕ್ಕೊಂದು ದೊಡ್ಡ ಕೊರತೆಯಾಗಿದ್ದ ಸಮುದ್ರತೀರ ಪ್ರದೇಶದ ಸಮಸ್ಯೆಯ ನಿವಾರಣೆಯಾಗುವುದರಿಂದ, ಪಶ್ಚಿಮ ಮೈಸೂರುರಾಜ್ಯವು ಅದನ್ನೂ ಒಳಗೊಳ್ಳಲು ಮುಂದುವರಿದೀತು. ಇದರಿಂದ ಮೈಸೂರುರಾಜ್ಯ ಸರ್ವಾಂಗಸಂಪೂರ್ಣವಾದೀತೇ ಹೊರತು, ಅಖಂಡ ಕರ್ನಾಟಕದ ಆವಶ್ಯಕತೆಯ ವಿಚಾರವೇನೂ ಪೂರ್ಣವಾದಂತಾಗುವುದಿಲ್ಲ.

ಈಗ ಅಖಂಡ ಕರ್ನಾಟಕದ ರಾಜ್ಯನಿರ್ಮಿತಿಯಾಗದೆ ಹೋದರೆ, ನಿರ್ಮಾಣವಾಗಲಿರುವ ಆಂಧ್ರರಾಜ್ಯಕ್ಕೂ ಶೇಷಮದ್ರಾಸರಾಜ್ಯಕ್ಕೂ ಸೇರಿ ಹೋಗಲಿರುವ ಕನ್ನಡಪ್ರದೇಶವು, ಕೊನೆಯವರೆಗೂ ಅಪ್ಪೆ ಉಳಿಯುವುದೇನಾಗಿ ಬಾರದು, ಅದು ಸಂಪೂರ್ಣವಾಗಿ ಪರ ರಾಜ್ಯಗಳೊಂದಿಗೆ ವಿಲೀನವಾಗಿ ಹೋಗಬಹುದು. ಇದೆರಿಂದು ಕರ್ನಾಟಕಕ್ಕೆ ಬಲವಾದ ಆಘಾತ. ಕೊಡಗು ಪ್ರದೇಶವನ್ನು ಮೈಸೂರುರಾಜ್ಯ ಒಳಗೊಂಡೀತು. ಉಳಿಯುವುದೆಂದರೆ ಮುಂಬಯಿ ರಾಜ್ಯಕ್ಕೆ ಸೇರಿದ ಧಾರವಾಡ, ಬೆಳಗಾಂವಿ, ವಿಜಾಪುರ, ಕಾರವಾರ ಜಿಲ್ಲೆಗಳು—ಸೊಲ್ಲಾಪುರ-ಸಾತಾರೆ ಜಿಲ್ಲೆಗಳಿಗೆ ಸೇರಿದ ಕನ್ನಡ ಭಾಗಗಳು. ಇವು ಮುಂಬಯಿ ರಾಜ್ಯದಲ್ಲಿ ಉಳಿಯುವುದರಿಂದ ಎಂತಹ ಹಾನಿಯಿದೆಯೆಂಬುದು, ಇದುವರೆಗೂ ಮುಂಬಯಿ ಸರಕಾರವು ತೋರಿಸುತ್ತ ಬಂದಿರುವ ಉಪೇಕ್ಷಾಭಾವದಿಂದ ಸಾಕಷ್ಟು ಕಂಡುಬಂದಿದೆ. ಪ್ರಜಾಪ್ರಭುತ್ವದ ವಿಶಾಲಭಾವದ ಆಡಳಿತದಲ್ಲಿಯೂ ಕನ್ನಡಿಗರು ಅನೇಕ ಬಗೆಯ ಉಪೇಕ್ಷೆ-ಔದಾಸೀನ್ಯಗಳಿಗೊಳಗಾಗಿ, ಹಲವು ರೀತಿಯ ಕಷ್ಟ-ನಷ್ಟಗಳನ್ನೂ ಅವಮಾನವನ್ನೂ ಸಹಿಸಿಕೊಂಡಿರಬೇಕಾಗಿ ಬಂದಿದೆ. ಹೀಗಿರುವಾಗ, ಅಖಂಡ ಕರ್ನಾಟಕದ ಮಾತು ಹಿಂದೆ ಬೀಳುತ್ತ ಹೋದರೆ, ಮುಂಬಯಿ ಕರ್ನಾಟಕದಲ್ಲಿಯ ಕನ್ನಡತನಕ್ಕೂ ನೆಲೆಯಿಲ್ಲದೆ ಹೋಗುವುದು. ಕಾಲ ಹೋದಮೇಲೆ ಅಖಂಡ ಕರ್ನಾಟಕದ ಪ್ರಶ್ನೆಯೆ ಅಡಗಿಹೋಗಬಹುದು.

ಕರ್ನಾಟಕದ ಪ್ರತ್ಯೇಕೀಕರಣ ಎಲ್ಲರಿಗೂ ಬೇಕಾಗಿದೆಯೇನೊ ನಿಜ; ಆದರೆ ಅದಕ್ಕಾಗಿ ಮಾಡಬೇಕಾದ ಕಾರ್ಯ-ಜನಸಂಘಟನೆಗಳು ಯೋಗ್ಯಕ್ರಮದಲ್ಲಿ ನಡೆಯುತ್ತಿದಾಗಿವೆ. ಅದು ಹೇಗೆಂಬುದನ್ನು ವಿಚಾರಮಾಡೋಣ:

ಸದ್ಯ ನಮ್ಮ ಮುಂದಾಳುಗಳೆನಿಸಿಕೊಳ್ಳುವವರು ಎರಡು ಪಕ್ಷಗಳಲ್ಲಿ ವಿಭಾಗಿತರಾಗಿರುವರು. ಮೊದಲನೆಯ ಪಕ್ಷವೆಂದರೆ ಸರಕಾರಪಕ್ಷ; ಎರಡನೆಯದೆಂದರೆ ಸರಕಾರದ ವಿರೋಧಿಪಕ್ಷ. ಮೊದಲನೆಯ ಪಕ್ಷದವರು ಸರಕಾರದಲ್ಲಿಯ ತಮ್ಮ ಸ್ಥಾನಗಳ ಕಡೆಗೆ ಮುಖ್ಯದೃಷ್ಟಿಯನ್ನು ಕೊಟ್ಟು, ಕರ್ನಾಟಕ ರಾಜ್ಯನಿರ್ಮಿತಿಯ ಕಡೆಗೆ ಗೌಣದೃಷ್ಟಿಯನ್ನು ಕೊಡುವರು. ಎರಡನೆಯ ಪಕ್ಷದವರದು ಮೊದಲನೆಯ ಪಕ್ಷದವರನ್ನು ಅಧಿಕಾರಸ್ಥಾನದಿಂದ ಇಳಿಸಿ ತಾವು ಆಕ್ರಮಿಸಬೇಕೆಂಬುದರ ಕಡೆಗೆ ಮುಖ್ಯದೃಷ್ಟಿಯಿದ್ದು, ಕರ್ನಾಟಕ ರಾಜ್ಯನಿರ್ಮಾಣ

ವಿಚಾರವು ಇನ್ನೂ ಗೌಣದೃಷ್ಟಿಯೇ ಇವೆ. ಅವರೆ ತಮ್ಮ ಮುಖ್ಯ ಧ್ಯೇಯಸಾಧನೆಗಾಗಿ ಕರ್ನಾಟಕ ರಾಜ್ಯನಿರ್ಮಾಣದ ಮಾತನ್ನು ಮುಖ್ಯ ಉಪಕರಣವನ್ನಾಗಿ ಉಪಯೋಗಿಸಿಕೊಂಡಿದ್ದಾರೆ. ಇದಕ್ಕಿಂತಲೂ ಅನುಕೂಲವಾದ ಬೇರೊಂದು ಉಪಕರಣ ಅವರಿಗೆ ತೋರಿತೆಂದೆ, ಆ ನಾಯಕರಲ್ಲಿಯ. ಬಹುಜನರು ಕರ್ನಾಟಕ ರಾಜ್ಯನಿರ್ಮಾಣದ ಮಾತನ್ನು ಬಿಟ್ಟು ಅವರ ಬೆನ್ನನ್ನು ಹತ್ತುವುದು. ಅವರಿಗೆ ಇದರ ಹೊರತು ಪ್ರಭಾವಿಯಾದ ಉಪಕರಣ ಅವರಿಗೆ ಕಾಣುತ್ತಿಲ್ಲವೆಂದೇ ಕರ್ನಾಟಕ ರಾಜ್ಯನಿರ್ಮಾಣದ ವಿಷಯವನ್ನು ಉಗ್ರವಾದ ಮಾತುಗಳಿಂದ ಬಿಗ್ಗಡಿಸುತ್ತಲಿದ್ದಾರೆ

ಎಂಡು ಪಕ್ಷದ ನಾಯಕರಿಗೂ ಸರಕಾರದ ಅಧಿಕಾರದ ಸೂತ್ರ ಮುಖ್ಯ—ಕರ್ನಾಟಕ ರಾಜ್ಯನಿರ್ಮಾಣ ಗೌಣವಾದರೂ, ಕನ್ನಡ ಜನಸಾಮಾನ್ಯರಿಗೆ ಕರ್ನಾಟಕ ರಾಜ್ಯನಿರ್ಮಿತಿಯು ಅತ್ಯಂತ ಅವಶ್ಯಕವಾದ ವಿಷಯವಾಗಿದೆ. ಇದು ಅವರ ಜೀವ-ಭಾವನ ವಿಷಯವಾಗಿ ಕುಳಿತಿದೆ.

ಎರಡು ಪಕ್ಷದ ನಾಯಕರೂ ಕರ್ನಾಟಕ ರಾಜ್ಯನಿರ್ಮಾಣದ ಮಾತನ್ನು ಆಡುತ್ತಲಿದ್ದಾರೆ. ಅಧಿಕಾರದಲ್ಲಿರುವವರು ಶಾಸನಸೂತ್ರ ಮಾರ್ಗದಿಂದ ಹೋಗೋಣವೆನ್ನುತ್ತಾರೆ. ವಿರೋಧಿ ಪಕ್ಷದವರು ಉಗ್ರ ಚಳವಳಿಯನ್ನು ಆರಂಭಿಸೋಣವೆಂದು ಗುಡುಗುತ್ತಲಿದ್ದಾರೆ. ಈಗ ಯಾರ ಮಾತನ್ನು ಕೇಳಬೇಕೆಂಬುದು ಜನಸಾಮಾನ್ಯರಿಗೆ ಬಗೆ. ಹರಿಯದ ಪ್ರಶ್ನೆಯಾಗಿರುವುದು ಸಹಜ ಸಂಗತಿ.

ಶಾಸನಸೂತ್ರ ಮಾರ್ಗದಿಂದಲೇ ಕರ್ನಾಟಕರಾಜ್ಯವನ್ನು ದೊರಕಿಸಿಕೊಳ್ಳಬೇಕೆಂದರೆ, ಔದಾಸೀನ್ಯಧೋರಣದ ಕೇಂದ್ರ ಸರಕಾರದ ನಾಯಕರ ವಿಷಯದಲ್ಲಿ ಕನ್ನಡ ಜನಸಾಮಾನ್ಯರಿಗೆ ವಿಶ್ವಾಸವಿಲ್ಲದಂತಾಗಿದೆ. ಉಗ್ರ ಚಳವಳಿಯಿಂದ ಅದನ್ನು ದೊರಕಿಸಿ ಕೊಳ್ಳಬೇಕೆಂದರೆ, ಸರಕಾರ ವಿರೋಧಿಪಕ್ಷದ ನಾಯಕರ ಸಾಮರ್ಥ್ಯ-ಸದಸದ್ವಿವೇಕ ಬುದ್ಧಿಯ ವಿಷಯದಲ್ಲಿ ನಂಬುಗೆ ಸಾಲದಂತಾಗಿದೆ. ಇದರಿಂದ ಸುಖ-ಶಾಂತಿಗಳಿಂದ ಸ್ವತಂತ್ರರಾಗಿ ದುಡಿದು ಬದುಕಬೇಕೆನ್ನುವ ಜನಸಾಮಾನ್ಯರು ಕಂಗೆಟ್ಟು ಹೋಗಿರುವರು. ಅವರಿಗೆ ತಮ್ಮದೆ ಆದ ಪ್ರತ್ಯೇಕ ರಾಜ್ಯವೇನೋ ಬೇಕು; ಆದರೆ ಅದನ್ನು ಪಡೆಯುವ ದಾರಿ ಯಾವುದು?

ವಿಧ್ವಂಸಕ ಮಾರ್ಗದಿಂದ ಯಾರಿಗೂ ಸುಖವಿಲ್ಲ—ಈ ಮಾತು ಸತ್ಯವಾದುದೆ. ಆದರೆ ವಿಧಾಯಕ ಮಾರ್ಗದಿಂದ ಅಪೇಕ್ಷಿತ ವಸ್ತು ದೊರೆಯದೆ ಹೋದರೆ ವಿಧ್ವಂಸಕ ಮಾರ್ಗದಿಂದಲೇ ಅದನ್ನು ಸಾಧಿಸಬೇಕಾದುದು ಅನಿವಾರ್ಯ. ಸದ್ಯ ಕಂಗೆಟ್ಟ ಜನಸಾಮಾನ್ಯರು ವಿಧ್ವಂಸಕ ಮಾರ್ಗದ ಕಡೆಗೆ ಅಡಿಯಿಡಬಾರದೆಂದಾದರೆ, ಅಡಳಿತದಲ್ಲಿರುವ ಹೊಣೆಗಾರ ಮುಂದಾಳುಗಳು, ಕನ್ನಡ ಜನಸಾಮಾನ್ಯರನ್ನು ಅತ್ಯೀಯತೆಯಿಂದ ಹತ್ತಿರ ಬರಮಾಡಿಕೊಳ್ಳಬೇಕು. ಅವರಲ್ಲಿ ರಾಜ್ಯನಿರ್ಮಾಣದ ಬಗೆಗೆ ವಿಶ್ವಾಸವನ್ನು ಹುಟ್ಟುಹಾಕಬೇಕು. ಅತ್ಯಾವಶ್ಯಕ ಕಾಲವಿಲಂಬವನ್ನಲ್ಲದೆ ಹೆಚ್ಚಿನ ವಿಲಂಬಕ್ಕೆ ಅವಕಾಶ ಕೊಡುವುದಿಲ್ಲವೆಂಬ ಸಂಗತಿಯನ್ನು ಕನ್ನಡಿಗರಿಗೆ ಮನವರಿಕೆ ಮಾಡಿ ಕೊಡಬೇಕು.

ಅತಿವಿಶಾಲದೃಷ್ಟಿಯು ಕೆಲವೊಂದು ನಾಯಕರಿಗೆ, ಭಾಷಾನುಗುಣ ರಾಜ್ಯನಿರ್ಮಾಣವು ಅವಶ್ಯವಲ್ಲವೆಂದು ಎನಿಸಬಹುದು. ಇದು ಅವರ ವೈಯಕ್ತಿಕ ಅಭಿಪ್ರಾಯವೂ ಆಗಿರಬಹುದು. ಆದರೆ ವ್ಯಕ್ತಿಯ ವೈಯಕ್ತಿಕ ಅಭಿಪ್ರಾಯದ ಹೊರೆಯನ್ನು ಜನಸಾಮಾನ್ಯರ ಮೇಲೆ ಹೊರಿಸಬಾರದೆಂಬುದು ಪ್ರಜಾಪ್ರಭುತ್ವ ರಾಜ್ಯ ಪದ್ಧತಿಯಲ್ಲಿಯದೊಂದು ಮುಖ್ಯತತ್ತ್ವವೆಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ. ಇಂದು ಕನ್ನಡ ಪ್ರಜಾವರ್ಗಕ್ಕೆಲ್ಲ ಕರ್ನಾಟಕ ರಾಜ್ಯನಿರ್ಮಾಣ ಬೇಕಾದ ಮಾತಾಗಿದೆ ಯಾವ ಕಾರಣದಿಂದಲೂ ಈ ಮಾತನ್ನು ಸಂಬಂಧಿತ ಸರಕಾರಗಳೂ ಅಧಿಕಾರಿ ವ್ಯಕ್ತಿಗಳೂ ಹಿಂದೆ ಸಾಕಬೇಕಾದ ಕಾರಣವಿಲ್ಲ ಆದುದರಿಂದ ಕನ್ನಡಿಗರಿಂದ ಉಗ್ರವಾದ ಯಾವ ಚಳವಳಿಯನ್ನೂ ನಿರೀಕ್ಷಿಸದೆ, ಹೊಣೆಗಾರರಾದ ನಾಯಕರು, ಕರ್ನಾಟಕ ರಾಜ್ಯನಿರ್ಮಾಣವು ಬೇಗನೆ ಆಗುವಂತೆ ನೋಡಿಕೊಳ್ಳಬೇಕೆಂದು ನಮ್ಮ ಅಭಿಪ್ರಾಯ

ಇನ್ನು ಕನ್ನಡಿಗರನ್ನು ಉಗ್ರ ಚಟುವಟಿಕೆಗಳಿಗಾಗಿ ಕರೆಯುತ್ತಲಿರುವವರು, ತಮ್ಮ ಶಕ್ತಿ-ಸಾಮರ್ಥ್ಯ, ಉದ್ದೇಶಶುದ್ಧಿಗಳನ್ನು ಸೂಕ್ಷ್ಮವಾಗಿ ನೋಡಿಕೊಳ್ಳಬೇಕು. ಸತ್ಯವನ್ನು ಸಾಧಿಸಲು ಹಿಡಿದ ಆಗ್ರಹವು ಸತ್ಯಾಗ್ರಹವೆನಿಸೀತೇ ಹೊರತು ಸ್ವಾರ್ಥಸಾಧಕ ರಾಜಕೀಯದ ಅಭಾಸಾತ್ಮಕ ಸತ್ಯಕ್ಕಾಗಿ ಹಿಡಿದ ಆಗ್ರಹವು ಸತ್ಯಾಗ್ರಹ ಎನಿಸದು; ಅದರಿಂದ ಜನತೆಯ ಕಲ್ಯಾಣವೂ ಸಾಧಿಸದು. ಇಂದು ಸರಕಾರಪಕ್ಷವನ್ನು ವಿರೋಧಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯನಿರ್ಮಿತಿಯ ಕೂಗನ್ನು ಸಾಧನವನ್ನಾಗಿ ಮಾಡಿಕೊಂಡಿರುವ ಮುಂದಾಳುಗಳು, ಜನತೆಯನ್ನು ರೇಗಿಸಿ ಚಳವಳಿಗೆ ಕರೆಯಬೇಕಾದರೆ, ಸಂಪೂರ್ಣ ವಿಚಾರ ಮಾಡಿ ನೋಡಿ ಕರೆಯಬೇಕು.

—ಸಂಪಾದಕರು

ಜಯಂತಿಗೆ ಚಂದಾದಾರರಾಗಿ ಸಹಕರಿಸಿರಿ!

ನಾಡನಡೆ

●

ಮುಂಬೈ ಅಸೆಂಬ್ಲಿಯ ಉಪಚುನಾವಣೆ :

ಈ ಮೊದಲು ನಡೆದ ಉಪಚುನಾವಣೆಯೊಂದರಲ್ಲಿ, ಕಾಂಗ್ರೆಸ್ ಪಕ್ಷದ ಶ್ರೀಮತಿ ಲೀಲಾವತಿ ಮಾಗಡಿಯವರು ಸೋತು ಕರ್ನಾಟಕ ಏಕೀಕರಣ ಪಕ್ಷದ ಶ್ರೀಮಾನ್ ಬಿ. ಎ. ದೇಸಾಯಿಯವರು ಗೆದ್ದರು. ಪ್ರಾದೇಶಿಕ ಚುನಾವಣೆಯಲ್ಲಿ ಗೆದ್ದರೂ ಶ್ರೀಮಾನ್ ದೇಸಾಯಿಯವರು, ಮುಂಬಯಿ ಅಸೆಂಬ್ಲಿಯಲ್ಲಿ ಸೋತವರಂತೆಯೆ ಇರಬೇಕಾಗಿ ಬಂದಿದೆ; ಸೋತರೂ ಕಾಂಗ್ರೆಸ್ ಪಕ್ಷ ಗೆಲುವಿನಿಂದ ತಲೆಯೆತ್ತಿ ಮೆರೆಯುತ್ತಲಿದೆ ಏಕೆಂದರೆ, ಮುಂಬಯಿ ಅಸೆಂಬ್ಲಿಯಲ್ಲಿ ಅಲ್ಪಸಂಖ್ಯಾಕವಾದ ಏಕೀಕರಣ ಪಕ್ಷಕ್ಕೆ ಬೆಲೆಯೇ ಇಲ್ಲ. ಬಹುಸಂಖ್ಯಾಕವಾದ ಕಾಂಗ್ರೆಸ್ ಪಕ್ಷ ಆಡಳಿತದ ಸೂತ್ರವನ್ನು ತನ್ನ ಕಡೆಗೆ ಸೆಳೆಸಿಕೊಂಡಿದೆ. ಆದುದರಿಂದಲೇ ಕನ್ನಡಿಗರು ಇಂದು ಕಾಂಗ್ರೆಸ್ಸಿಗರಲ್ಲದವನನ್ನು ಮುಂಬಯಿ ಅಸೆಂಬ್ಲಿಗೆ ಆರಿಸಿಕೊಡುವುದಾದರೆ, ತಮ್ಮ ಮತದಾನದ ಅಧಿಕಾರವನ್ನು ನಿಷ್ಪ್ರಯೋಜಕವಾಗಿಸಿದಂತೆಯೇ ಸರಿ! ಕನ್ನಡಿಗರು ಕರ್ನಾಟಕ ರಾಜ್ಯ ನಿರ್ಮಾಣವನ್ನು ಸಾಧಿಸಬೇಕಾಗಿರುವುದೇನೋ ಸರಿಯೆ; ಆದರೆ ಆ ಕಾರ್ಯವು ಅವಿರೋಧವಾಗಿ ಸಾಧಿಸುವಂತೆ ತಮ್ಮ ಜಟುವಟಿಕೆಗಳನ್ನು ನಡೆಯಿಸಬೇಕಾಗಿದೆ. ಆದುದರಿಂದ ರಾಜ್ಯ ಸರಕಾರಕ್ಕೂ ಕೇಂದ್ರ ಸರಕಾರಕ್ಕೂ ಪ್ರತಿನಿಧಿಗಳನ್ನಾಗಿ ಆಯ್ದು ಕಳುಹುವುದಿನ್ನಲ್ಲಿ, ಕರ್ನಾಟಕ ರಾಜ್ಯ ನಿರ್ಮಿತಿಗಾಗಿ ದುಡಿಯುವಂತಹವನೂ ಆಗಿರಬೇಕು—ಬಹುಸಂಖ್ಯಾಕ ಪಕ್ಷವಲ್ಲಿ ಇರುವಂತಹವನೂ ಆಗಿರಬೇಕು—ಇಂತಹ ಹುರಿಯಾಳನ್ನು ಆಯ್ದು ಕಳುಹುವುದು ಒಳ್ಳೆಯದು.

× × × ×

ಸದ್ಯ ಕರ್ನಾಟಕದ ಕಾಂಗ್ರೆಸ್ಸಿಗರಲ್ಲಿ ಏಕೀಕರಣಕ್ಕೆ ಯಾರೂ ವಿರೋಧಿಗಳಾಗಿಲ್ಲ. ಬಹಳವಾವತೆ ವಿಧಾಯಕ ಮಾರ್ಗದಿಂದ ಅವನ್ನು ಸಾಧಿಸಬೇಕೆನ್ನುವವರಾಗಿರಬಹುದು ಏಕೀಕರಣದ ಗುರಿಯನ್ನಿರಿಸಿಕೊಂಡವರೇ ಆಗಿ ಹೋಗಲಿರುವ ಒಬ್ಬಿಬ್ಬರು ವಿರೋಧಿಪ್ರತಿನಿಧಿಗಳಿಂದ ಯಾವ ಕಾರ್ಯವೂ ಸಾಧಿಸದೆಂದ ಮೇಲೆ, ಮುಂಬಯಿ ಅಸೆಂಬ್ಲಿಗೆ ಕಳುಹಬೇಕಾದ ಕನ್ನಡ ಪ್ರತಿನಿಧಿಗಳೆಲ್ಲ ಒಂದೆ ಪಕ್ಷದವರಾಗಿರುವುದರಿಂದ, ಹೆಚ್ಚಿನ ಪ್ರಯೋಜನವಾದೀತು. ಮುಂಬಯಿ ಅಸೆಂಬ್ಲಿಗೆ ಹೋಗುವ ಕನ್ನಡ ಪ್ರತಿನಿಧಿಗಳೆಲ್ಲ ಒಂದೆ ಪಕ್ಷದವರಾದರೆ, ಪಕ್ಷೀಯ ಸಭೆಗಳಲ್ಲಿ ಕರ್ನಾಟಕದ ಹಿತವನ್ನು ಕುರಿತು ಏಕಮುಖವಾಗಿ ಮಾತನಾಡಿ, ಏನಾದರೂ ಕಲ್ಯಾಣವನ್ನು ಸಾಧಿಸಬಹುದು. ಹಾಗಿಲ್ಲದೆ ಕನ್ನಡ ಪ್ರತಿನಿಧಿಗಳು ಕಾಂಗ್ರೆಸ್ ಪಕ್ಷದಲ್ಲಷ್ಟು, ವಿರೋಧಿ ಪಕ್ಷದಲ್ಲಷ್ಟು ಹಂಚಿಹೋದರೆ, ಅದರಿಂದ ನಾಡಿನ ಹಿತವನ್ನು ಯಾವ ರೀತಿಯಿಂದಲೂ ಸಾಧಿಸಲಿಕ್ಕಾಗದೆಂಬುದನ್ನು ನಾವು ಲಕ್ಷ್ಯದಲ್ಲಿಟ್ಟುಕೊಂಡು ನಡೆಯುವುದರ ಅಗತ್ಯವಿದೆ. ಶಕ್ತಿಯು ಕೇಂದ್ರೀಕೃತವಾದರೆ, ಇಂದಿಲ್ಲ ನಾಳೆ ಅದು ಉಪಯೋಗಕ್ಕೆ ಬಂದೀತು. ವಿಕೇಂದ್ರೀಕೃತವಾದ ಶಕ್ತಿ ಗಾಳಿಯಗೂಡ ಗಾಳಿಯಾಗಿ ಬಿಟ್ಟೀತು.

× × × ×

ಇಂದು ಇನ್ನೊಂದು ಚುನಾವಣೆ ನಡೆಯುವ ಸಂದರ್ಭ ಒದಗಿದೆ. ಶ್ರೀ ಕೆ. ಬಿ. ದುಂಡೂರ್ ಅವರ ನಿಧನದಿಂದ ತೆರವಾದ ಸ್ಥಳವನ್ನು ತುಂಬಬೇಕಾಗಿದೆ. ಈ ಸ್ಥಳಕ್ಕಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ಸು ತನ್ನ ಹುರಿಯಾಳನ್ನು ನಿಲ್ಲಿಸಿದೆ; ಏಕೀಕರಣ ಪಕ್ಷವೂ ತನ್ನ ಹುರಿಯಾಳನ್ನು ನಿಲ್ಲಿಸಿದೆ. ಕಮ್ಯುನಿಸ್ಟ್ ಪಕ್ಷಾದಿಯಾಗಿ ಕಾಂಗ್ರೆಸ್ಸೇತರ ಪಕ್ಷಗಳೆಲ್ಲವೂ ಏಕೀಕರಣ ಪಕ್ಷದ ಹುರಿಯಾಳಿಗೆ ಬೆಂಬಲಕೊಡುವ ರಾಜಕಾರಣ ನಾಟಕವನ್ನು ಹೂಡಿರುವುವು. ಕಾಂಗ್ರೆಸ್ಸಿಗರು ಜಾಗೃತರಾಗಿ, ತಮ್ಮ ಹುರಿಯಾಳನ್ನು ಎತ್ತಿ ಹಿಡಿಯುವ ಕಾರ್ಯಕ್ಕೆ ಸಿದ್ಧರಾದಲ್ಲಿ, ಕಾಂಗ್ರೆಸ್ ಹುರಿಯಾಳಿಗೆ ಜಯ ಸಿಕ್ಕುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಈ ಮೊನಲಿನ ಉಪಚುನಾವಣೆಯಲ್ಲಿ ನಡೆದುಕೊಂಡಂತೆ ಔದಾಸೀನ್ಯ ತಳೆದು ಬಿಟ್ಟರೆ ಕಾಂಗ್ರೆಸ್ ಹುರಿಯಾಳಿಗೆ ಜಯ ದೊರೆಯುವುದು ಸಾಧ್ಯವಿಲ್ಲ. ಏಕೀಕರಣ ಪಕ್ಷದ ಹುರಿಯಾಳು ಇಲ್ಲಿ ಗೆದ್ದರೂ, ಮುಂಬಯಿ ಅಸೆಂಬ್ಲಿಯಲ್ಲಿ ಉಗುಳುನುಂಗುತ್ತ ನಿಷ್ಕ್ರಿಯನಾಗಿ ಕುಳಿತುಕೊಳ್ಳಬೇಕಾಗುವುದೆಂಬುದರಲ್ಲಿ ಸಂಶಯವಿಲ್ಲ. ನಡೆಯಲಿರುವ ಉಪಚುನಾವಣೆಯಲ್ಲಿ ಕನ್ನಡಿಗರು ಯಾರನ್ನು ಪುರಸ್ಕರಿಸಬೇಕೆಂಬುದನ್ನು ಜಾಗೃತಬುದ್ಧಿಯಿಂದ ವಿಚಾರ ಮಾಡಿ ನಿರ್ಣಯಿಸಬೇಕು.

ಆಂಧ್ರರಾಜ್ಯವಿಧೇಯಕದ ಸ್ವೀಕಾರ :

ಮದ್ರಾಸ್ ರಾಜ್ಯ ವಿಧಾನಸಭೆಯಲ್ಲಿ ಆಂಧ್ರರಾಜ್ಯ ವಿಧೇಯಕ ಬಹುಮತದಿಂದ—ಇದ್ದುದಿದ್ದಂತೆಯೆ—ಸ್ವೀಕೃತವಾಯಿತು. ಯಾವ ಉಪಸೂಚನೆಗಳೂ ಗಟ್ಟಿಗೊಂಡು ನಿಲ್ಲಲಿಲ್ಲ. ಸದ್ಯ ಆಂಧ್ರರಾಜ್ಯ-ಶೇಷಮದ್ರಾಸುಗಳಲ್ಲಿ ಉಳಿಯುವ ಕನ್ನಡ ಪ್ರದೇಶವನ್ನೂ ಈಗಲೇ ಮೈಸೂರು ರಾಜ್ಯಕ್ಕೆ ಸೇರಿಸಬೇಕೆಂದು ತಂದ ದ. ಕ. ಜಿಲ್ಲೆಯ ಪ್ರತಿನಿಧಿಯೊಬ್ಬನ ಉಪಸೂಚನೆಯು ಬೆಂಬಲವಿಲ್ಲದೆ ಬಿದ್ದುಹೋಯಿತು. ಆಂಧ್ರರಾಜ್ಯ ವಿಧೇಯಕದ ಸ್ವೀಕೃತಿಯ ಪರಿಣಾಮ, ಮಿಕ್ಕ ಯಾವ ಜನತೆಗಿಂತಲೂ ಕನ್ನಡ ಜನತೆಯ ಮೇಲೆ ಹೆಚ್ಚಿನ ಆಪತ್ತಿಯನ್ನು ತರುವಂತಹದಾಗಿದೆಯೆಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ.

ಆಂಧ್ರರೂ ತಮಿಳರೂ ತಂತಮ್ಮ ಭಾಷೆ-ಸಂಸ್ಕೃತಿಗಳ ವಿಷಯದಲ್ಲಿ ಸಂಪೂರ್ಣ ಅಭಿಮಾನವುಳ್ಳವರು. ಆದುದರಿಂದ ಆಂಧ್ರ-ತಮಿಳು ಪ್ರಾಂತಗಳಲ್ಲಿ ಅಲ್ಪಸಂಖ್ಯಾಕರಾಗಿ ಉಳಿಯುವ ಕನ್ನಡ ಜನರ ಭಾಷೆ-ಸಂಸ್ಕೃತಿಗಳಿಗೆ ಸರಿಯಾದ ಸಂರಕ್ಷಣೆ ದೊರೆಯುವುದು ಅಶಕ್ಯಕೋಟಿಯ ಮಾತು. ಕನ್ನಡಿಗರು ತಮ್ಮ ಭಾಷೆ-ಸಂಸ್ಕೃತಿಗಳ ಅಭಿಮಾನವನ್ನು ಹಿಡಿದು ನಡೆಯಬೇಕೆಂದರೆ, ಕನ್ನಡಿಗರಿಗೆ ವಿರೋಧಕ ಪರಿಸ್ಥಿತಿಯನ್ನು ಎದುರಿಸಬೇಕಾಗುವುದು ಖಂಡಿತವಾದ ಸಂಗತಿ. ಪರಿಸ್ಥಿತಿಯ ಒತ್ತಾಯಕ್ಕೊಳಗಾಗಿ ಅವೆಲ್ಲ ಆಂಧ್ರ-ದ್ರವಿಡ ಭಾಷೆ-

ಸಂಸ್ಕೃತಿಗಳ ಬಲೆಗೆ ಒಮ್ಮೆ ಬಿದ್ದರೆಂದರೆ, ಆ ಬಲೆಯಿಂದ ಅವರನ್ನು ಹೊರಗೆ ತೆಗೆಯುವುದು ಅಸಾಧ್ಯವೇ ಆಗುವುದು ರೂಪುಗೊಳ್ಳಲಿರುವ ಅಖಂಡ ಕರ್ನಾಟಕ ಇದರಿಂದ ಪರಿಪೂರ್ಣವೆನಿಸುವುದು ಸಹಜ.

ಕೇಂದ್ರ ಸರಕಾರವು ಸಕಾಲದಲ್ಲಿ ಸಮರ್ಥವಾದ ಗಡಿಸಮಿತಿಯನ್ನು ನಿಯಮಿಸಿದರೆ, ಕನ್ನಡಿಗರು ಈ ನಷ್ಟದಿಂದ ಪಾರಾಗುವ ಸಂಭವವಿದೆ. ಆಮದರಿಂದ ಕರ್ನಾಟಕದಿಂದ ಹೋದ ರಾಜ್ಯ–ಕೇಂದ್ರ ಸರಕಾರಗಳ ಪ್ರತಿನಿಧಿಗಳೆಲ್ಲರೂ ಚಟುವಟಿಕೆ ನಡೆಯಿಸಿ, ಕೇಂದ್ರ ಸರಕಾರದ ಮೇಲೆ ಅದರ ಪ್ರಭಾವ ಬೀಳುವಂತೆ ಮಾಡಿ, ಆದಷ್ಟು ಬೇಗನೆ ಗಡಿ ಸಮಿತಿಯನ್ನು ನಿಯಮಿಸುವಂತೆ ಪ್ರಯತ್ನಿಸಬೇಕು. ಗಡಿಸಮಿತಿಯ ರಚನೆ ವಿಳಂಬವಾಗುತ್ತ ಹೋದಂತೆ, ಕರ್ನಾಟಕದ ಅಂಗಾಂಗಗಳು ಶಕಲಿತವಾಗುತ್ತ ಹೋಗುವುದು ನಿಸ್ಸಂಧಿಗ್ಧವಾದ ಸತ್ಯಸಂಗತಿ.

ಮುಖ್ಯ ಮಂತ್ರಿಗಳಿಬ್ಬರ ಮಿಲನ:

ಭಾರತ-ಪಾಕಿಸ್ತಾನಗಳು ಒಡೆದು ಬೇರೆಯಾದಂದಿನಿಂದಲೂ ಪಾಕಿಸ್ತಾನದಲ್ಲಿ ಭಾರತದ ವಿಷಯವಾಗಿ ದ್ವೇಷಭಾವದ ಪ್ರಚಾರವೇ ನಡೆದಿದ್ದಿತು. ಕಠೋರ ಹುಟವಾದಿಗಳಾದ ದಿವಂಗತ ಜಿನ್ನಾಸಾಹೇಬರು ಬದುಕಿರುವ ವರೆಗೂ—ಭಾರತದಲ್ಲಿಯ ಕೆಲವೊಂದು ವ್ಯಕ್ತಿಗಳ ಬಗೆಗಿರುವ ವೈಯಕ್ತಿಕ ದ್ವೇಷದ ಮೂಲಕ—ಭಾರತ ರಾಷ್ಟ್ರದ ವಿಚಾರದಲ್ಲಿ ಪಾಕಿಸ್ತಾನಿಗಳಲ್ಲಿ ಸಹಾನುಭೂತಿ ತಲೆದೋರದಂತೆಯೆ ವಾತಾವರಣವನ್ನು ಹುಟ್ಟಿಸಿ ಸಂರಕ್ಷಿಸುತ್ತಲಿದ್ದರು. ಅವರ ಕಾಲದಲ್ಲಿಯೆ ಮುಖ್ಯಮಂತ್ರಿಗಳಾಗಿದ್ದ ಲಿಯಾಖತ ಅಲ್ಲಿಖಾನರೂ, ಭಾರತದ ವಿಷಯದಲ್ಲಿ ಪಾಕಿಸ್ತಾನಿಗಳ ಮನಸ್ಸಿನಲ್ಲಿ ದ್ವೇಷ–ತ್ವೇಷಗಳು ಹುಟ್ಟುವಂತೆಯೆ ಕಾರ್ಯ ನಡೆಯಿಸಿದರು. ಪಾಕಿಸ್ತಾನಿಗಳು ಆಕ್ರಮಿಸಬೇಕೆಂದಿದ್ದ ಕಾಶ್ಮೀರಕ್ಕೆ ಭಾರತಸರಕಾರ ಸಂರಕ್ಷಣೆಯನ್ನು ಕೊಟ್ಟುದೂ ಹೈದರಾಬಾದಿನ ರಜಕಾರರ ಹಾವಳಿಯನ್ನು ತಗ್ಗಿಸಿ, ಅದನ್ನು ಅಧೀನ ಪಡಿಸಿಕೊಂಡುದೂ ದ್ವೇಷಪ್ರಚಾರದ ಮುಖ್ಯ ಸಾಧನಗಳಾಗಿದ್ದುವು. ಪಾಕಿಸ್ತಾನದ ಪತ್ರಿಕಾಕರ್ತರೂ ಆಗ ತಲೆತಿರುಗಿದರಂತೆ, ಭಾರತದ ವಿಷಯದಲ್ಲಿ ಪಾಕಿಸ್ತಾನದ ಜನರಲ್ಲಿ ದ್ವೇಷ-ವೈರಗಳು ಹುಟ್ಟುವಂತೆಯೆ ಕಿಡಿಗೇಡಿತನ ನಡೆಯಿಸಿದರು. ಇಷ್ಟೆಲ್ಲ ನಡೆದರೂ ಭಾರತ ಸರಕಾರವೇ ಆಗಲಿ, ಜನತೆಯೆ ಆಗಲಿ ಪಾಕಿಸ್ತಾನಿಗಳನ್ನು ಅಷ್ಟೊಂದು ಅಸಹಾನುಭೂತಿಯಿಂದ ನೋಡುತ್ತಿರಲಿಲ್ಲ. ಇಂದಿಲ್ಲ ನಾಳೆ ಪಾಕಿಸ್ತಾನಿಗಳಿಗೆ ವಾಸ್ತವವು ತಿಳಿದು ಒಳ್ಳೆಯ ಬುದ್ಧಿ ಬಂದೀತೆಂದು ಆಶಾವಾದಿಗಳಾಗಿಯೇ ಇದ್ದರು. ಪಾಕಿಸ್ತಾನದ ಪುಂಡರು ಭಾರತದ ಗಡಿಗಳಲ್ಲಿ ನುಗ್ಗಿ ಆಗಾಗ ಕೊಡುತ್ತಿರುವ ತೊಂದರೆಗಳನ್ನೂ ಈ ಆಶಾವಾದಿತನದಿಂದಲೇ ಸಹಿಸಿದರು. ಪಾಕಿಸ್ತಾನದ ಜಾತೀಯ ಭಾವನೆಯ ವಿಷವು ಅಲ್ಲಿಯ ಹಿಂದುಗಳನ್ನು ಕಟುವಾಗಿ ಬಾಧಿಸಿದರೂ, ಭಾರತೀಯ ಮುಸಲ್ಮಾನರು ಯಾವ ದುಃಖ–ದುಮ್ಮಾನಗಳೂ ಇಲ್ಲದಂತೆ ಬದುಕಲು ಭಾರತೀಯರು ಮಾರ್ಗ ಮಾಡಿಕೊಟ್ಟರು. ಒಂದು ರೀತಿಯಿಂದ ಪಾಕಿಸ್ತಾನಕ್ಕೆ ಹೆಚ್ಚಿನ ಸಹಾನುಭೂತಿಯನ್ನು ತೋರಿಸಿದುದರಿಂದಲೇ ಮಹಾತ್ಮರು ತಲೆತಿರುಕನೊಬ್ಬನಿಂದ ಕೊಲೆಗೊಳ್ಳಬೇಕಾಯಿತು.

ಆರು ವರ್ಷಗಳದೊಂದು ಈ ಚಿಕ್ಕ ಕಾಲಖಂಡ, ಪಾಕಿಸ್ತಾನ–ಭಾರತಗಳಲ್ಲಿ ಶಾಶ್ವತವಾಗಿ ದ್ವೇಷ-ವೈರಗಳನ್ನು ಪ್ರತಿಷ್ಠಾಪಿಸಿಬಿಡುವುದೇನೋ ಎನಿಸಿಬಿಟ್ಟಿತು. ಆದರೆ ಅಮೃತದ ಎದುರು ವಿಷದ ಆಟ ಎಷ್ಟು ದಿನ ನಡೆಯುವುದು? ಭಾರತದ ಸಮಾಧಾನ ಸ್ವಭಾವದ ಮುಂದೆ ಪಾಕಿಸ್ತಾನಿಗಳ ಕಿಡಿಗೇಡಿತನ ತಲೆಬಾಗಬೇಕಾಗಿ ಬಂದಿತು. ಈ ಕಿಡಿಗೇಡಿತನಕ್ಕೆ ಪ್ರಚೋದಕರಾಗಿ ಇದ್ದ ಪಶ್ಚಿಮಪಾಕ್ಷ್ಯಗಳ ಕುಟಿಲ ರಾಜಕಾರಣಿಗಳನ್ನೂ ಭಾರತದ ಉದಾತ್ತವರ್ತನ ಪರಾಜಯಗೊಳಿಸಿತು. ಎಂತಲೇ ಪಾಕಿಸ್ತಾನದ ಮೊದಲಿನ ಮುಖ್ಯಮಂತ್ರಿ ನಾಝಿಮುದ್ದೀನರ ಆಡಳಿತದ ಕೊನೆ–ಕೊನೆಯ ಭಾಗದಲ್ಲಿ ಭಾರತದ ವಿಷಯಕವಾದ ಸ್ನೇಹ–ಸಹಾನುಭೂತಿಗಳ ಮಾತು–ಕತೆಗಳು ಪಾಕಿಸ್ತಾನದಲ್ಲಿ ಕೇಳಬರಲು ತೊಡಗಿದವು. ಪ್ರಧಾನ ಮುಖ್ಯಮಂತ್ರಿ ಮಹಮ್ಮದ್ ಅಲ್ಲಿಯವರು ತಮ್ಮ ಆಸನವನ್ನು ವಿರುತ್ತಿರುವಾಗಲೇ ಭಾರತದೊಂದಿಗೆ ಬಂಧುತ್ವವನ್ನು ಕೋರುತ್ತ, ಸ್ನೇಹಹಸ್ತವನ್ನು ಚಾಚಿಯೇ ವಿರಿದರು. ಭಾರತಕ್ಕಿದು ಎಂದಿನಿಂದಲೂ ಬೇಕಾದ ಮಾತೇ ಆಗಿದ್ದಿತು. ಅದಕ್ಕನುಗುಣವಾಗಿ ಎರಡೂ ರಾಷ್ಟ್ರಗಳ ಮುಖ್ಯ ಮಂತ್ರಿಗಳು ಕೂಡಿ ಪರಸ್ಪರ ತೊಡಕು–ತೊಂದರೆಗಳ ನಿವಾರಣೆಯ ಮಾತನ್ನು ಪ್ರಾರಂಭಿಸಿದ್ದಾರೆ. ಲಂಡನ್ನಿನಲ್ಲಿ ಮಾತನಾಡಿದರು. ಕರಾಚಿಯಲ್ಲಿ ಕೂಡಿ ಮಾತನಾಡಿದರು. ಮಾತಿನ ವಿವರಗಳು ತಿಳಿದಿಲ್ಲವಾದರೂ ಇಬ್ಬರು ಮಂತ್ರಿಗಳೂ ಆಶೆಯ ಮಾತುಗಳನ್ನು ಘೋಷಿಸುತ್ತಲಿರುವುದು ಶುಭದ ಲಕ್ಷಣವೇ ಆಗಿದೆ.

ಭವಿಷ್ಯದ ಬಗೆಗೆ ಭಾರತದಂತೆಯೆ ಪಾಕಿಸ್ತಾನದ ಜನರೂ ಕುತೂಹಲಿಗಳಾಗಿರಬಹುದು. ಕಾಶ್ಮೀರ ರಾಜಕಾರಣದಂತಹ ಬಿಡಿಬಾರದ ತೊಡಕು ಎಲ್ಲರಿಗೂ ಸಮಾಧಾನಕರವೆನಿಸುವಂತೆ ಹೇಗೆ ಬಿಡಬಹುದೆಂಬ ಆತುರದ ನಿರೀಕ್ಷೆ ಎಲ್ಲರಿಗೂ ಇರಬಹುದು. ಆದರೆ ಒಂದು ಮಾತನ್ನು ಇಲ್ಲಿ ಹೇಳಬಹುದು: ಭಾರತದಂತೆಯೆ ಪಾಕಿಸ್ತಾನವೂ ನಿಜವಾಗಿ ಸ್ನೇಹಾಪೇಕ್ಷೆಯಾಗಿ ಬಂದಿದ್ದರೆ, ಯಾವ ತೊಡಕೂ ಬಿಡಲು ಕಠಿಣವೆನಿಸದು. ಬಂಧು–ಬಂಧುಗಳ ಜಗಳದಲ್ಲಿ, ಇಬ್ಬರೂ ಬಂಧುತ್ವಕ್ಕೆ ಮಹತ್ತ್ವ ಕೊಟ್ಟು, ತಂತಮ್ಮ ಹುಟಗಳನ್ನು ಕಡೆಗಣಿಸಿದರೆ, ಎಲ್ಲ ತೊಡಕುಗಳೂ ಬಿಟ್ಟು ಬಯಲಾಗುವುವು. ಭಾರತ-ಪಾಕಿಸ್ತಾನಗಳಲ್ಲಿ ಬಂಧುಸ್ನೇಹ ಬೆಳೆದು, ಎರಡೂ ರಾಷ್ಟ್ರಗಳು ಸುಖ-ಸಮೃದ್ಧಿಗಳಿಂದ ಬಾಳುವ ಕಾಲ ಬೇಗನೆ ಬರಲಿ!

ಸಾವೋ-ಬದುಕೋ?

(ಸಣ್ಣಕತೆ)

'ಪ್ರಿಯದರ್ಶನ'

●

ಮಾನವಜೀವನದಲ್ಲಿ ಒದಗಿದ ಅತಿಶಯವಾದ ನಿರಾಶೆಯ ಘಟನೆಗಳು, ಆಗಾಗ ಮರಣವನ್ನು ಬಯಸಹಚ್ಚುವುವಾದರೂ ಆ ಬಯಕೆ ನಿಜವಾದುದಲ್ಲ. ಮರಣ ಬಂದು ಮುಂದೆ ನಿಂತಾಗ 'ಬದುಕು' ಎಂದು ಅಳಲು ಹಚ್ಚುವುದು.

●

ಅಂತೂ ಒಂದು ವರ್ಷ ಚಿಂತೆಯಲ್ಲಿಯೆ ಕರಗಿಹೋಯಿತು.

ಅವನಿಗಿನ್ನೂ ಮೂವತ್ತು ವರುಷವಿರಬಹುದು. ಅವನ ಮುಖವನ್ನು ನೋಡಿದ್ದರೆ ನೀವು, 'ಇಲ್ಲ, ಇನ್ನೂ ಜಾಸ್ತಿಯಾಗಿದೆ,' ಎಂದು ಹೇಳುತ್ತಿದ್ದಿರೊ ಏನೊ! ಅವನ ಮುಖದ ಮೇಲೆ ಯಾವಾಗಲೂ ಏನೊ ಒಂದು ಚಿಂತೆಯ ಪರೆ; ಮುಖವು ಸಣ್ಣದು, ತಲೆಯ ತುಂಬ ಕೂದಲು; ಕಣ್ಣುಗಳು ಗುಳಿಬಿದ್ದು ಹೋಗಿದ್ದು, ಕಣ್ಣನ್ನು ಕರಿಯ ಉಂಗುರ ಸುತ್ತುವರೆದಿತ್ತು. ಹಣೆಯ ಮೇಲಿನ ಮತ್ತು ಕೆನ್ನೆಯ ಮೇಲಿನ ಚರ್ಮ ನೆರಿಗೆನೆರಿಗೆಯಾಗಿ ಸುತ್ತುಗಟ್ಟಿಕೊಳ್ಳುತ್ತಿತ್ತು. ಅವನೇನು ಮೈಕಟ್ಟಿನವನಲ್ಲ; ಅವನಿದ್ದುದು ತೆಳ್ಳಗೆ; ಸ್ವಲ್ಪ ಎತ್ತರವಾಗಿದ್ದನು. ಅವನು ತೊಡುತ್ತಿದ್ದ ಬಟ್ಟೆಯು ಸಾಧಾರಣವಾದುದೆ. ಯಾವತ್ತೂ ಮಡಿಮಾಡಿದ ಬಟ್ಟೆಯನ್ನು ತೊಟ್ಟುದಿಲ್ಲ. ಅವನನ್ನು ನೋಡಿದರೆ ಧಾರಾಳನಾಗಿ ನಲವತ್ತು ನಲವತ್ತೈದು ವರ್ಷಗಳೆಂದು ಯಾರಾದರೂ ಹೇಳಬಹುದಿತ್ತು. ಆದರೆ, ಅವನಿಗೆ ಮೂವತ್ತೇ ವರುಷವಾಗಿದ್ದುದು.

ಅವನು ಈಗ ಒಂದು ವರುಷದ ಹಿಂದೆ ಎಲ್ಲರಂತೆಯೆ ಇದ್ದ; ಎಲ್ಲರೊಡನೆಯೂ ವಿನೋದವಾಗಿ ಮಾತನಾಡುತ್ತಿದ್ದ, ನಗುತ್ತಿದ್ದ. ಇತ್ತೀಚೆಗೆ ಅವನ ರೀತಿಯೆ ಬದಲಾಯಿಸಿದಂತಿದೆ. ದಾರಿಯಲ್ಲಿ ಅವನು ಈಗ ಓಡಾಡುವುದೆ ಅಸರೂಪ. ಓಡಾಡಿದರೆ ಯಾರಾದರೂ ಪರಿಚಿತರನ್ನು ಕಂಡರೆ ತಲೆತಪ್ಪಿಸಿಕೊಂಡು ಹೋಗುತ್ತಾನೆ—ಅದೇಕೊ? ಒಮ್ಮೊಮ್ಮೆ, ದಾರಿಯಲ್ಲಿ ಹೋಗುವಾಗ ಅವನ ಸ್ನೇಹಿತರು ಗುಂಪುಕಟ್ಟಿಕೊಂಡು ನಿಂತಿರುತ್ತಾರೆ. ಅವರ ಮುಂದೆ ಹಾದು ಹೋಗಬೇಕೆಂದರೆ, ಅವನಿಗೆ ಏನೊ ಒಂದು ಬಗೆಯ ಅಂಜಿಕೆಯಾಗುತ್ತದೆ; ಅವರಿಗೆಲ್ಲ ಕಾಣಿಸಿಕೊಳ್ಳಲೆಕೂಡದಾಗಿತ್ತು—ಎಂದೆನ್ನಿಸುತ್ತದೆ. ನಡೆಯುತ್ತಿದ್ದಂತೆಯೆ, ಅವನ ಕೈಕಾಲುಗಳಲ್ಲಿಯ ಶಕ್ತಿ ಕಡಿಮೆ ಯಾದಂತಾಗುತ್ತದೆ; ಸರಾಗವಾಗಿ ನಡೆಯದೆ, ಮುಖವನ್ನೆಲ್ಲ-ಬೆವತರಿ ಒರಸಿಕೊಳ್ಳುವನಂತೆ-ಉಜ್ಜಿಕೊಳ್ಳುತ್ತಾನೆ. ಅವರನ್ನೆಲ್ಲ ನೋಡಬಾರದೆಂದು ಮನಸ್ಸಿನಲ್ಲಿ ಅಂದುಕೊಂಡರೂ, ಅವರತ್ತ ಅಂಜಿಕೆಯ ನೋಟವನ್ನು ಬೀರದಿರಲಾರ. ಪುನಃ ತಲೆ ತಗ್ಗಿಸಿಕೊಂಡು ನಡೆಯುತ್ತಾನೆ. ಅನಂತರ ಅವನ ತಲೆಯಲ್ಲಿ ಅಲ್ಲಿ ನಿಂತು ತನ್ನನ್ನೆ ನೋಡುತ್ತಿದ್ದ ಸ್ನೇಹಿತರುಗಳ ಯೋಚನೆಯೆ ಯೋಚನೆ:

'ಅವರುಗಳೆಲ್ಲ ಯಾರು? ಶಿವರಾಮು, ರಾಧಾಕೃಷ್ಣ, ವಿಶ್ವನಾಥ; ಮತ್ತಾರೊ ಇದ್ದರು? ನಾರಾಯಣ!'

'ಅವರೆಲ್ಲ ನನ್ನತ್ತ ಹೇಗೆ ನೋಡಿದರು! ಅವರನ್ನೆಲ್ಲ ನಾನು ಹಿಂದೆ ಮಾತನಾಡಿಸುತ್ತಿದ್ದೆ ಅಲ್ಲವೆ? ಈಗೇಕೊ ನನಗೆ ಅವರನ್ನು ಮಾತನಾಡಿಸಬೇಕೆಂದರೆ ಅಂಜಿಕೆಯೆ ಆಗುತ್ತದೆ. ಮಾತನಾಡಿಸಿ ಪ್ರಯೋಜನವೇನುಂಟು? ಅವರೆಲ್ಲ ನನ್ನನ್ನು ನೆರೆಮನೆಯಿಂದ ಹೊರಬಂದ ಬಂದಿಯನ್ನು ನೋಡುವಂತೆ ನೋಡಿದರಲ್ಲವೆ? ನನ್ನ ಪರಿ ಅವರಿಗೆ ವಿಚಿತ್ರವೆನಿಸಿರಬಹುದು. 'ಇವನೇಕೆ ಹೀಗಾದ?' ಎಂದು ಅವರೆಲ್ಲರಿಗೂ ಸಮಸ್ಯೆಯಾಗಿರಬಹುದು. ನಾನೇನಾಗಿದ್ದೇನೆ? ಅದೆಂತೊ, ಈಗಂತೂ ನಾನು ಅವರನ್ನು ಮಾತನಾಡಿಸಲಾರೆ; ನನ್ನನ್ನೂ ಅವರು ಮಾತನಾಡಿಸಲಾರರು. ಸರಿಯಾಗಿ ತಲೆಬಾಚಿಕೊಳ್ಳುವುದಿಲ್ಲ. ಮುಖದ ಮೇಲೆ ಕೂದಲು ಬೆಳೆದಿದ್ದರೂ ಕ್ಷೌರ ಮಾಡಿಸಿಕೊಂಡಿಲ್ಲ, ಬಟ್ಟೆಯೂ ಬೇಕಾಬಿಟ್ಟಿ, ಇದೇಕೆ ಹೀಗೆ?—ಎಂದು ಅವರೆಲ್ಲ ಮಾತನಾಡಿಕೊಂಡಿರುತ್ತಾರೆ. ನಾನು ಅವರನ್ನು ಹಾದುಹೋದಮೇಲೆ, ಅವರೆಲ್ಲ ನಗುತ್ತಿದ್ದರಲ್ಲವೆ? ನನಗೇಕೊ ನಗುವುದು ಸಾಧ್ಯವೇ ಇಲ್ಲ. ಹೌದು, ಅದೇ ವ್ಯತ್ಯಾಸ! ಅವರೆಲ್ಲರೂ ನಗಬಲ್ಲರು. ವಿನೋದವಾಗಿ ಮಾತನಾಡಬಲ್ಲರು, ಮಕ್ಕಳಂತೆ ಆಟವಾಡಿಕೊಂಡಿರಬಲ್ಲರು. ನಾನಾದರೊ? ಇಲ್ಲ; ನನಗೇಕೊ ಮಂಕು ಹಿಡಿದಿದೆ, ನಾನು ಬಾಯನ್ನು ಬಿಡಲಾರೆ. ನನ್ನ ಕಣ್ಣುಗಳ ಮುಂದೆ ಯಾವಾಗಲೂ ಕಪ್ಪನೆಯ ವಿಸ್ತಾರವೇಮೆ ಹರಡಿಕೊಂಡಿರುತ್ತದೆ. ನಾನು ಅದನ್ನು ನೋಡುವುದರಲ್ಲಿಯೆ ನಿರತನಾಗಿರುತ್ತೇನೆ; ಅದನ್ನು ಬಿಟ್ಟು ನನಗೆ ಮತ್ತೇನೂ ಕಾಣಿಸುವುದಿಲ್ಲ.

ಕೆಲವು ದಿನಗಳ ಹಿಂದೆ ನಾರಾಯಣ ಅವನನ್ನು ಕೇಳಿದ್ದ:

"ಏನು, ನಿನಗೆ ಬಹು ಬೇಸರವಾಗಿದೆಯಂತೆ?"

"ಬೇಸರ?—ಇಲ್ಲ. ನಿಜ, ಏನೊ ಒಂದು ತರಹೆಯ ಜುಗುಪ್ಸೆ."

ಅವನ ಮನಸ್ಸನ್ನು ಕಾಡುತ್ತಿರುವುದು ಏನೆಂಬುದು ಅವನಿಗೆ ಸ್ಪಷ್ಟವಾಗಿ ತಿಳಿದಿರಲಿಲ್ಲ. ಎಲ್ಲ ಮಸುಕು, ಮಸುಕು—ಹೊಗೆಯ ಮಧ್ಯೆ ಕುಳಿತಂತೆ.

ಹಳೆಯ ಪರಿಚಿತರೊಡನೆ ಅವನು ಈಗ ಸೇರುವುದೇ ಇಲ್ಲ; ಯಾವಾಗಲೂ ಒಬ್ಬಂಟಿಗನಾಗಿಯೆ ಇರುತ್ತಾನೆ. ಯಾರಾದರೂ ಸ್ನೇಹಿತರು ಸಿಕ್ಕು ಮಾತನಾಡಿಸಲು ತೊಡಗಿದರೆ, ಅವನಿಗೆ ಮುಳ್ಳಿನ ಮೇಲೆ ನಡೆದಂತಾಗುತ್ತದೆ. ಅವನು ಯಾವ ಮಾತನ್ನೂ ಆಡದೆ ಸುಮ್ಮನೆ 'ಹೂ'ಗುಟ್ಟುತ್ತಿರುತ್ತಾನೆ. ಅದನ್ನು ಕಂಡೊ-ಏನೊ, ಅವನನ್ನು ಯಾರೂ ಹೆಚ್ಚಾಗಿ ಮಾತನಾಡಿಸುವುದಿಲ್ಲ.

ಅವನೆಂದುಕೊಳ್ಳುತಿದ್ದ:

ಸಂಸ್ಕೃತಿಗಳ ಬಲೆಗೆ ಒಮ್ಮೆ ಬಿದ್ದರೆಂದರೆ, ಆ ಬಲೆಯಿಂದ ಅವರನ್ನು ಹೊರಗೆ ತೆಗೆಯುವುದು ಅಸಾಧ್ಯವೇ ಆಗುವುದು ರೂಪುಗೊಳ್ಳಲಿರುವ ಅಖಂಡ ಕರ್ನಾಟಕ ಇದರಿಂದ ಅಪೂರ್ಣವೆನಿಸುವುದು ಸಹಜ.

ಕೇಂದ್ರ ಸರಕಾರವು ಸಕಾಲದಲ್ಲಿ ಸಮರ್ಥವಾದ ಗಡಿಸಮಿತಿಯನ್ನು ನಿಯುಮಿಸಿದರೆ, ಕನ್ನಡಿಗರು ಈ ನಷ್ಟದಿಂದ ಪಾರಾಗುವ ಸಂಭವವಿದೆ. ಆದುದರಿಂದ ಕರ್ನಾಟಕದಿಂದ ಹೋದ ರಾಜ್ಯ–ಕೇಂದ್ರ ಸರಕಾರಗಳ ಪ್ರತಿನಿಧಿಗಳೆಲ್ಲರೂ ಚುರುವಟಿಕೆ ನಡೆಯಿಸಿ, ಕೇಂದ್ರ ಸರಕಾರದ ಮೇಲೆ ಅದರ ಪ್ರಭಾವ ಬೀಳುವಂತೆ ಮಾಡಿ, ಆದಷ್ಟು ಬೇಗನೆ ಗಡಿ ಸಮಿತಿಯನ್ನು ನಿಯುಮಿಸುವಂತೆ ಪ್ರಯತ್ನಿಸಬೇಕು. ಗಡಿಸಮಿತಿಯ ರಚನೆ ವಿಲಂಬವಾಗುತ್ತ ಹೋದಂತೆ, ಕರ್ನಾಟಕದ ಅಂಗಾಂಗಗಳು ಶಕಲಿತವಾಗುತ್ತ ಹೋಗುವುದು ನಿಸ್ಸಂಧಿಗ್ಧವಾದ ಸತ್ಯಸಂಗತಿ.

ಮುಖ್ಯ ಮಂತ್ರಿಗಳಿಬ್ಬರ ಮಿಲನ:

ಭಾರತ-ಪಾಕಿಸ್ತಾನಗಳು ಒಡೆದು ಬೇರೆಯಾದಂದಿನಿಂದಲೂ ಪಾಕಿಸ್ತಾನದಲ್ಲಿ ಭಾರತದ ವಿಷಯವಾಗಿ ದ್ವೇಷಭಾವದ ಪ್ರಚಾರವೇ ನಡೆದಿದ್ದಿತು. ಕಟೋರ ಹಟವಾದಿಗಳಾದ ದಿವಂಗತ ಜಿನ್ನಾಸಾಹೇಬರು ಬದುಕಿರುವ ವರೆಗೂ—ಭಾರತದಲ್ಲಿಯ ಕೆಲವೊಂದು ವ್ಯಕ್ತಿಗಳ ಬಗೆಗಿರುವ ವೈಯಕ್ತಿಕ ದ್ವೇಷದ ಮೂಲಕ—ಭಾರತ ರಾಷ್ಟ್ರದ ವಿಚಾರದಲ್ಲಿ ಪಾಕಿಸ್ತಾನಿಗಳಲ್ಲಿ ಸಹಾನುಭೂತಿ ತಲೆದೋರದಂತೆಯೆ ವಾತಾವರಣವನ್ನು ಹುಟ್ಟಿಸಿ ಸಂರಕ್ಷಿಸುತ್ತಲಿದ್ದರು. ಅವರ ಕಾಲದಲ್ಲಿಯೆ ಮುಖ್ಯಮಂತ್ರಿಗಳಾಗಿದ್ದ ಲಿಯಾಖತ ಅಲ್ಲಿಖಾನರೂ, ಭಾರತದ ವಿಷಯದಲ್ಲಿ ಪಾಕಿಸ್ತಾನಿಗಳ ಮನಸ್ಸಿನಲ್ಲಿ ದ್ವೇಷ–ದ್ವೇಷಗಳು ಹುಟ್ಟುವಂತೆಯೆ ಕಾರ್ಯ ನಡೆಯಿಸಿದರು. ಪಾಕಿಸ್ತಾನಿಗಳು ಆಕ್ರಮಿಸಬೇಕೆಂದಿದ್ದ ಕಾಶ್ಮೀರಕ್ಕೆ ಭಾರತಸರಕಾರ ಸಂರಕ್ಷಣೆಯನ್ನು ಕೊಟ್ಟುದೂ ಹೈದರಾಬಾದಿನ ರಜಕಾರರ ಹಾವಳಿಯನ್ನು ತಗ್ಗಿಸಿ, ಆದನ್ನು ಅಧೀನ ಪಡಿಸಿಕೊಂಡುದೂ ದ್ವೇಷಪ್ರಚಾರದ ಮುಖ್ಯ ಸಾಧನಗಳಾಗಿದ್ದುವು. ಪಾಕಿಸ್ತಾನದ ಪತ್ರಿಕಾಕರ್ತರೂ ಆಗ ತಲೆತಿರುಗಿದರಂತೆ, ಭಾರತದ ವಿಷಯದಲ್ಲಿ ಪಾಕಿಸ್ತಾನದ ಜನರಲ್ಲಿ ದ್ವೇಷ-ವೈರಗಳು ಹುಟ್ಟುವಂತೆಯೆ ಕಡಿಗೇಡಿತನ ನಡೆಯಿಸಿದರು. ಇಷ್ಟೆಲ್ಲ ನಡೆದರೂ ಭಾರತ ಸರಕಾರವೇ ಆಗಲಿ, ಜನತೆಯೆ ಆಗಲಿ ಪಾಕಿಸ್ತಾನಿಗಳನ್ನು ಅಷ್ಟೊಂದು ಅಸಹಾನುಭೂತಿಯಿಂದ ನೋಡುತ್ತಿರಲಿಲ್ಲ. ಇಂದಿಲ್ಲ ನಾಳೆ ಪಾಕಿಸ್ತಾನಿಗಳಿಗೆ ವಾಸ್ತವವು ತಿಳಿದು ಒಳ್ಳೆಯ ಬುದ್ಧಿ ಬಂದೀತೆಂದು ಆಶಾವಾದಿಗಳಾಗಿಯೇ ಇದ್ದರು. ಪಾಕಿಸ್ತಾನದ ಪುಂಡರು ಭಾರತದ ಗಡಿಗಳಲ್ಲಿ ನುಗ್ಗಿ ಆಗಾಗ ಕೊಡುತ್ತಿರುವ ತೊಂದರೆಗಳನ್ನೂ ಈ ಆಶಾವಾದಿತನದಿಂದಲೇ ಸಹಿಸಿದರು. ಪಾಕಿಸ್ತಾನದ ಜಾತೀಯ ಭಾವನೆಯ ವಿಷವು ಅಲ್ಲಿಯ ಹಿಂದುಗಳನ್ನು ಕಟುವಾಗಿ ಬಾಧಿಸಿದರೂ, ಭಾರತೀಯ ಮುಸಲ್ಮಾನರು ಯಾವ ದುಃಖ–ದುಮ್ಮಾನಗಳೂ ಇಲ್ಲದಂತೆ ಬದುಕಲು ಭಾರತೀಯರು ಮಾರ್ಗ ಮಾಡಿಕೊಟ್ಟರು. ಒಂದು ರೀತಿಯಿಂದ ಪಾಕಿಸ್ತಾನಕ್ಕೆ ಹೆಚ್ಚಿನ ಸಹಾನುಭೂತಿಯನ್ನು ತೋರಿಸಿದುದರಿಂದಲೇ ಮಹಾತ್ಮರು ತಲೆತಿರುಕನೊಬ್ಬನಿಂದ ಕೊಲೆಗೊಳ್ಳಬೇಕಾಯಿತು.

ಆರು ವರ್ಷಗಳದೊಂದು ಈ ಚಿಕ್ಕ ಕಾಲಖಂಡ, ಪಾಕಿಸ್ತಾನ–ಭಾರತಗಳಲ್ಲಿ ಶಾಶ್ವತನಾಗಿ ದ್ವೇಷ-ವೈರಗಳನ್ನು ಪ್ರತಿಷ್ಠಾಪಿಸಿಬಿಡುವುದೇನೋ ಎನಿಸಿಬಿಟ್ಟಿತು. ಆದರೆ ಅಮೃತದ ಎದುರು ವಿಷದ ಆಟ ಎಷ್ಟು ದಿನ ನಡೆಯುವುದು? ಭಾರತದ ಸಮಾಧಾನ ಸ್ವಭಾವದ ಮುಂದೆ ಪಾಕಿಸ್ತಾನಿಗಳ ಕಡಿಗೇಡಿತನ ತಲೆಬಾಗಬೇಕಾಗಿ ಬಂದಿತು. ಈ ಕಡಿಗೇಡಿತನಕ್ಕೆ ಪ್ರಚೋದಕರಾಗಿ ಇದ್ದ ಪಶ್ಚಿಮರಾಷ್ಟ್ರಗಳ ಕುಟಿಲ ರಾಜಕಾರಣಿಗಳನ್ನೂ ಭಾರತದ ಉದಾತ್ತವರ್ತನ ಪರಾಜಯಗೊಳಿಸಿತು. ಎಂತಲೇ ಪಾಕಿಸ್ತಾನದ ಮೊದಲಿನ ಮುಖ್ಯಮಂತ್ರಿ ನಾಝೀಮ್ ಉದ್ದೀನರ ಆಡಳಿತದ ಕೊನೆ–ಕೊನೆಯ ಭಾಗದಲ್ಲಿ ಭಾರತದ ವಿಷಯಕವಾದ ಸ್ನೇಹ–ಸಹಾನುಭೂತಿಗಳ ಮಾತು–ಕತೆಗಳು ಪಾಕಿಸ್ತಾನದಲ್ಲಿ ಕೇಳಬರಲು ತೊಡಗಿದವು. ಸದ್ಯದ ಮುಖ್ಯಮಂತ್ರಿ ಮಹಮ್ಮದ್ ಅಲ್ಲಿಯವರು ತಮ್ಮ ಆಸನವನ್ನು ಏರುತ್ತಿರುವಾಗಲೇ ಭಾರತದೊಂದಿಗೆ ಬಂಧುತ್ವವನ್ನು ಕೋರುತ್ತ, ಸ್ನೇಹಹಸ್ತವನ್ನು ಚಾಚಿಯೇ ಏರಿದರು. ಭಾರತಕ್ಕಿದು ಎಂದಿನಿಂದಲೂ ಬೇಕಾದ ಮಾತೇ ಆಗಿದ್ದಿತು. ಆದಕ್ಕನುಗುಣವಾಗಿ ಎರಡೂ ರಾಷ್ಟ್ರಗಳ ಮುಖ್ಯ ಮಂತ್ರಿಗಳು ಕೂಡಿ ಪರಸ್ಪರ ತೊಡಕು–ತೊಂದರೆಗಳ ನಿವಾರಣೆಯ ಮಾತನ್ನು ಪ್ರಾರಂಭಿಸಿದ್ದಾರೆ. ಲಂಡನ್ನಿನಲ್ಲಿ ಮಾತನಾಡಿದರು. ಕರಾಚಿಯಲ್ಲಿ ಕೂಡಿ ಮಾತನಾಡಿದರು. ಮಾತಿನ ವಿವರಗಳು ತಿಳಿದಿಲ್ಲವಾದರೂ ಇಬ್ಬರು ಮಂತ್ರಿಗಳೂ ಆಶೆಯ ಮಾತುಗಳನ್ನು ಪೋಷಿಸುತ್ತಲಿರುವುದು ಶುಭದ ಲಕ್ಷಣವೇ ಆಗಿದೆ.

ಭವಿಷ್ಯದ ಬಗೆಗೆ ಭಾರತದಂತೆಯೆ ಪಾಕಿಸ್ತಾನದ ಜನರೂ ಕುತೂಹಲಿಗಳಾಗಿರಬಹುದು. ಕಾಶ್ಮೀರ ರಾಜಕಾರಣದಂತಹ ಬಿಡಬಾರದ ತೊಡಕು ಎಲ್ಲರಿಗೂ ಸಮಾಧಾನಕರವೆನಿಸುವಂತೆ ಹೇಗೆ ಬಿಡಬಹುದೆಂಬ ಆತುರದ ನಿರೀಕ್ಷೆ ಎಲ್ಲರಿಗೂ ಇರಬಹುದು. ಆದರೆ ಒಂದು ಮಾತನ್ನು ಇಲ್ಲಿ ಹೇಳಬಹುದು: ಭಾರತದಂತೆಯೆ ಪಾಕಿಸ್ತಾನವೂ ನಿಜವಾಗಿ ಸ್ನೇಹಾಪೇಕ್ಷೆಯಾಗಿ ಬಂದಿದ್ದರೆ, ಯಾವ ತೊಡಕೂ ಬಿಡಲು ಕಠಿಣವೆನಿಸದು. ಬಂಧು–ಬಂಧುಗಳ ಜಗಳದಲ್ಲಿ, ಇಬ್ಬರೂ ಬಂಧುತ್ವಕ್ಕೆ ಮಹತ್ತ್ವ ಕೊಟ್ಟು, ತಂತಮ್ಮ ಹಟಗಳನ್ನು ಕಡೆಗಣಿಸಿದರೆ, ಎಲ್ಲ ತೊಡಕುಗಳೂ ಬಿಟ್ಟು ಬಯಲಾಗುವುವು. ಭಾರತ-ಪಾಕಿಸ್ತಾನಗಳಲ್ಲಿ ಬಂಧುಸ್ನೇಹ ಬೆಳೆದು, ಎರಡೂ ರಾಷ್ಟ್ರಗಳು ಸುಖ-ಸಮೃದ್ಧಿಗಳಿಂದ ಬಾಳುವ ಕಾಲ ಬೇಗನೆ ಬರಲಿ!

ಸಾವೋ-ಬದುಕೋ?

(ಸಣ್ಣಕತೆ)

'ಪ್ರಿಯದರ್ಶನ'

●

ಮಾನವಜೀವನದಲ್ಲಿ ಒದಗಿದ ಅತಿಶಯವಾದ ನಿರಾಶೆಯ ಘಟನೆಗಳು, ಆಗಾಗ ಮರಣವನ್ನು ಬಯಸಹಚ್ಚುವುವಾದರೂ ಆ ಬಯಕೆ ನಿಜವಾದುದಲ್ಲ. ಮರಣ ಬಂದು ಮುಂಪೆ ನಿಂತಾಗ 'ಬದುಕು' ಎಂದು ಅಳಲು ಪಚ್ಚುವುದು.

●

ಆಂತೂ ಒಂದು ವರ್ಷ ಚಿಂತೆಯಲ್ಲಿಯೆ ಕರಗಿಹೋಯಿತು.

ಅವನಿಗಿನ್ನೂ ಮೂವತ್ತು ವರುಷವಿರಬಹುದು. ಅವನ ಮುಖವನ್ನು ನೋಡಿದ್ದರೆ ನೀವು, 'ಇಲ್ಲ, ಇನ್ನೂ ಜಾಸ್ತಿಯಾಗಿಜೆ,' ಎಂದು ಹೇಳುತ್ತಿದ್ದಿರೊ ಏನೊ! ಅವನ ಮುಖದ ಮೇಲೆ ಯಾವಾಗಲೂ ಏನೊ ಒಂದು ಚಿಂತೆಯ ಪರೆ; ಮುಖವು ಸಣ್ಣದು, ತಲೆಯ ತುಂಬ ಕೂದಲು; ಕಣ್ಣುಗಳು ಗುಳಿಬಿದ್ದು ಹೋಗಿದ್ದು, ಕಣ್ಣನ್ನು ಕರಿಯ ಉಂಗುರ ಸುತ್ತುವರೆದಿತ್ತು. ಹಣೆಯ ಮೇಲಿನ ಮತ್ತು ಕೆನ್ನೆಯ ಮೇಲಿನ ಚರ್ಮ ನೆರಿಗೆನೆರಿಗೆಯಾಗಿ ಸುತ್ತುಗಟ್ಟಿಕೊಳ್ಳುತ್ತಿತ್ತು. ಅವನೇನು ಮೈಕಟ್ಟಿನವನಲ್ಲ; ಅವನಿದ್ದುದು ತೆಳ್ಳಗೆ; ಸ್ವಲ್ಪ ಎತ್ತರವಾಗಿದ್ದನು. ಅವನು ತೊಡುತ್ತಿದ್ದ ಬಟ್ಟೆಯು ಸಾಧಾರಣವಾದುದೆ. ಯಾವತ್ತೂ ಮಡಿಮಾಡಿದ ಬಟ್ಟೆಯನ್ನು ತೊಟ್ಟುದಿಲ್ಲ. ಅವನನ್ನು ನೋಡಿದರೆ ಧಾರಾಳನಾಗಿ ನಲವತ್ತು ನಲವತ್ತೈದು ವರ್ಷಗಳೆಂದು ಯಾರಾದರೂ ಹೇಳಬಹುದಿತ್ತು. ಆದರೆ, ಅವನಿಗೆ ಮೂವತ್ತೇ ವರುಷವಾಗಿದ್ದುದು.

ಅವನು ಈಗ ಒಂದು ವರುಷದ ಹಿಂದೆ ಎಲ್ಲರಂತೆಯೆ ಇದ್ದ; ಎಲ್ಲರೊಡನೆಯೂ ವಿನೋದವಾಗಿ ಮಾತನಾಡುತ್ತಿದ್ದ, ನಗುತ್ತಿದ್ದ. ಇತ್ತೀಚೆಗೆ ಅವನ ರೀತಿಯೆ ಬದಲಾಯಿಸಿದಂತಿದೆ. ದಾರಿಯಲ್ಲಿ ಅವನು ಈಗ ಓಡಾಡುವುದೆ ಅಪರೂಪ. ಓಡಾಡಿದರೆ ಯಾರಾದರೂ ಪರಿಚಿತರನ್ನು ಕಂಡರೆ ತಲೆತಪ್ಪಿಸಿಕೊಂಡು ಹೋಗುತ್ತಾನೆ—ಏದೇಕೊ? ಒಮ್ಮೊಮ್ಮೆ, ದಾರಿಯಲ್ಲಿ ಹೋಗುವಾಗ ಅವನ ಸ್ನೇಹಿತರು ಗುಂಪುಕಟ್ಟಿಕೊಂಡು ನಿಂತಿರುತ್ತಾರೆ. ಅವರ ಮುಂದೆ ಹಾದು ಹೋಗಬೇಕೆಂದರೆ, ಅವನಿಗೆ ಏನೊ ಒಂದು ಬಗೆಯ ಅಂಜಿಕೆಯಾಗುತ್ತದೆ; ಅವರಿಗೆಲ್ಲ ಕಾಣಿಸಿಕೊಳ್ಳಲೆಕೂಡದಾಗಿತ್ತು—ಎಂದೆನ್ನಿಸುತ್ತದೆ. ನಡೆಯುತ್ತಿದ್ದಂತೆಯೆ, ಅವನ ಕೈಕಾಲುಗಳಲ್ಲಿಯ ಶಕ್ತಿ ಕಡಿಮೆಯಾದಂತಾಗುತ್ತದೆ; ಸರಾಗವಾಗಿ ನಡೆಯದೆ, ಮುಖವನ್ನೆಲ್ಲ-ಬೆವತರೆ ಒರಸಿಕೊಳ್ಳುವನಂತೆ-ಉಜ್ಜಿಕೊಳ್ಳುತ್ತಾನೆ. ಅವರನ್ನೆಲ್ಲ ನೋಡಬಾರದೆಂದು ಮನಸ್ಸಿನಲ್ಲಿ ಅಂದುಕೊಂಡರೂ, ಅವರತ್ತ ಅಂಜಿಕೆಯ ನೋಟವನ್ನು ಬೀರದಿರಲಾರ. ಪುನಃ ತಲೆ ತಗ್ಗಿಸಿಕೊಂಡು ನಡೆಯುತ್ತಾನೆ. ಆನಂತರ ಅವನ ತಲೆಯಲ್ಲಿ ಅಲ್ಲಿ ನಿಂತು ತನ್ನನ್ನೆ ನೋಡುತ್ತಿದ್ದ ಸ್ನೇಹಿತರುಗಳ ಯೋಚನೆಯೆ ಯೋಚನೆ:

'ಅವರುಗಳಿಲ್ಲ ಯಾರು? ಶಿವರಾಮು, ರಾಧಾಕೃಷ್ಣ, ವಿಶ್ವನಾಥ; ಮತ್ತಾರೊ ಇದ್ದರು? ನಾರಾಯಣ!'

'ಅವರೆಲ್ಲ ನನ್ನತ್ತ ಹೇಗೆ ನೋಡಿದರು! ಅವರನ್ನೆಲ್ಲ ನಾನು ಹಿಂದೆ ಮಾತನಾಡಿಸುತ್ತಿದ್ದೆ ಅಲ್ಲವೆ? ಈಗೇಕೊ ನನಗೆ ಅವರನ್ನು ಮಾತನಾಡಿಸಬೇಕೆಂದರೆ ಅಂಜಿಕೆಯೆ ಆಗುತ್ತದೆ. ಮಾತನಾಡಿಸಿ ಪ್ರಯೋಜನವೇನುಂಟು? ಅವರೆಲ್ಲ ನನ್ನನ್ನು ಸೆರೆಮನೆಯಿಂದ ಹೊರಬಂದ ಬಂದಿಯನ್ನು ನೋಡುವಂತೆ ನೋಡಿದರಲ್ಲವೆ? ನನ್ನ ಪರಿ ಅವರಿಗೆ ವಿಚಿತ್ರವೆನಿಸಿರಬಹುದು. 'ಇವನೇಕೆ ಹೀಗಾದ?' ಎಂದು ಅವರೆಲ್ಲರಿಗೂ ಸಮಸ್ಯೆಯಾಗಿರಬಹುದು. ನಾನೇನಾಗಿದ್ದೇನೆ? ಅದೆಂತೊ, ಈಗಂತೂ ನಾನು ಅವರನ್ನು ಮಾತನಾಡಿಸಲಾರೆ; ನನ್ನನ್ನೂ ಅವರು ಮಾತನಾಡಿಸಲಾರರು. ಸರಿಯಾಗಿ ತಲೆಬಾಚಿಕೊಳ್ಳುವುದಿಲ್ಲ. ಮುಖದ ಮೇಲೆ ಕೂದಲು ಬೆಳೆದಿದ್ದರೂ ಕ್ಷೌರ ಮಾಡಿಸಿಕೊಂಡಿಲ್ಲ, ಬಟ್ಟೆಯೂ ಬೇಕಾಬಿಟ್ಟಿ, ಇದೇಕೆ ಹೀಗೆ?—ಎಂದು ಅವರೆಲ್ಲ ಮಾತನಾಡಿಕೊಂಡಿರುತ್ತಾರೆ. ನಾನು ಅವರನ್ನು ಹಾದುಹೋದಮೇಲೆ, ಅವರೆಲ್ಲ ನಗುತ್ತಿದ್ದರಲ್ಲವೆ? ನನಗೇಕೊ ನಗುವುದು ಸಾಧ್ಯವೇ ಇಲ್ಲ. ಹೌದು, ಅದೇ ವ್ಯತ್ಯಾಸ! ಅವರೆಲ್ಲರೂ ನಗಬಲ್ಲರು. ವಿನೋದವಾಗಿ ಮಾತನಾಡಬಲ್ಲರು, ಮಕ್ಕಳಂತೆ ಆಟವಾಡಿಕೊಂಡಿರಬಲ್ಲರು. ನಾನಾದರೊ? ಇಲ್ಲ; ನನಗೇಕೊ ಮಂಕು ಹಿಡಿದಿದೆ, ನಾನು ಬಾಯನ್ನು ಬಿಡಲಾರೆ. ನನ್ನ ಕಣ್ಣುಗಳ ಮುಂದೆ ಯಾವಾಗಲೂ ಕಪ್ಪನೆಯ ವಿಸ್ತಾರವೇಮೆ ಹರಡಿಕೊಂಡಿರುತ್ತದೆ. ನಾನು ಅದನ್ನು ನೋಡುವುದರಲ್ಲಿಯೆ ನಿರತನಾಗಿರುತ್ತೇನೆ; ಅದನ್ನು ಬಿಟ್ಟು ನನಗೆ ಮತ್ತೇನೂ ಕಾಣಿಸುವುದಿಲ್ಲ.

ಕೆಲವು ದಿನಗಳ ಹಿಂದೆ ನಾರಾಯಣ ಅವನನ್ನು ಕೇಳಿದ್ದ:

"ಏನು, ನಿನಗೆ ಬಹು ಬೇಸರವಾಗಿದೆಯಂತೆ?"

"ಬೇಸರ?—ಇಲ್ಲ. ನಿಜ, ಏನೊ ಒಂದು ತರಹೆಯ ಜುಗುಪ್ಸೆ. ಅವನ ಮನಸ್ಸನ್ನು ಕಾಡುತ್ತಿರುವುದು ಏನೆಂಬುದು ಅವನಿಗೆ ಸ್ಪಷ್ಟವಾಗಿ ತಿಳಿದಿರಲಿಲ್ಲ. ಎಲ್ಲ ಮಸುಕು, ಮಸುಕು—ಹೊಗೆಯ ಮಧ್ಯೆ ಕುಳಿತಂತೆ.

ಹಳೆಯ ಪರಿಚಿತರೊಡನೆ ಅವನು ಈಗ ಸೇರುವುದೇ ಇಲ್ಲ; ಯಾವಾಗಲೂ ಒಬ್ಬಂಟಿಗನಾಗಿಯೆ ಇರುತ್ತಾನೆ. ಯಾರಾದರೂ ಸ್ನೇಹಿತರು ಸಿಕ್ಕು ಮಾತನಾಡಿಸಲು ತೊಡಗಿದರೆ, ಅವನಿಗೆ ಮುಳ್ಳಿನ ಮೇಲೆ ನಡೆದಂತಾಗುತ್ತದೆ. ಅವನು ಯಾವ ಮಾತನ್ನೂ ಆಡದೆ ಸುಮ್ಮನೆ 'ಹೂ'ಗುಟ್ಟುತ್ತಿರುತ್ತಾನೆ. ಅದನ್ನು ಕಂಡೊ-ಏನೊ, ಅವನನ್ನು ಯಾರೂ ಹೆಚ್ಚಾಗಿ ಮಾತನಾಡಿಸುವುದಿಲ್ಲ.

ಅವನೆಂದುಕೊಳ್ಳುತಿದ್ದ:

'ನಾನು ಇಲ್ಲಿರಲಾರೆ. ನನಗೆ ಇಲ್ಲಿ ಸಮಾಧಾನವಿಲ್ಲ. ನಾನು ಬೇರೆ, ಎಲ್ಲಿಯಾದರೂ ದೂರ ಹೊರಟುಹೋಗಬೇಕು; ಕವಿ ಹೇಳಿದಂತೆ, "ದೂರ, ದೂರ, ಜನವಿದೂರ-ವಿಪಿನದೆಡೆಗೆ; ಗಾಢಾಂಧಕಾರ ಕವಿದ ಕಗ್ಗವಿಯ ಒಡಲಿಗೆ," ಓಡಿಹೋಗಬೇಕು. ನನ್ನನ್ನು ಮಾತನಾಡಿಸುವರಾರೂ ಇರಬಾರದು; ನಾನೊಬ್ಬನೆ ಇರಬೇಕು. ಇಲ್ಲ! ನಾನೊಬ್ಬನೆ ಇರುವುದೂ ಬೇಕಿಲ್ಲ. ಮೇಲಕ್ಕೆ ಕತ್ತನ್ನೆತ್ತಿ ನೋಡು. ನೀಲಿಯಾಗಸ ಕಣ್ಣಿಗೆ ನಿಲುಕುತ್ತದೆ; ಸಾಧ್ಯವಾಗಿದ್ದರೆ ಕೈಗೂ ನಿಲುಕತ್ತದೆಯೊ ಎಂಬಂತೆ ಅಕಾರ ತಳೆದು ನಿಂತಿದೆ. ಆದರೆ, ಅದು ಆಕಾಶವೆ? ಶೂನ್ಯ! ಹಾಗೆಯೆ ಈ ಜೀವನ. ಈ ಬಾಳು ಬೇಸರವಾಗಿದೆ ನನಗೆ.'

ಮತ್ತೊಮ್ಮೆ ಅವನು ಒಬ್ಬನೆ ಚಿಂತೆಯ ಹೊಗೆಯ ಮಧ್ಯೆ ಕುಳಿತುಕೊಂಡಿದ್ದ. ಹತ್ತಿರದಲ್ಲಿದ್ದ ಬೆಟ್ಟದ ಮೇಲೆ ರಾಶಿರಾಶಿ ಭೀಮಾಕಾರದ ಕಲ್ಲುಗಳು ಮುಗಿಲನ್ನು ಮುಟ್ಟುವಂತೆ ನಿಂತಿದ್ದುವು. ನೀಲಿಯಾಗಸದಲ್ಲಿ ಬಿಳಿಯ ಮೋಡಗಳು ವೇಗವಾಗಿ ಸಾಗುತ್ತಿದ್ದುವು. ಸಾವಿರ ಅಡಿ ಕೆಳಗಿನ ಕಾಡರದಲ್ಲಿಯ ಕಿರಿಯ ಕಲ್ಲೊಂದರ ಮೇಲೆ ಕುಳಿತಿದ್ದವನು, ಎದ್ದು ನಿಂತು ಅದೃಶ್ಯವನ್ನು ನಿಟ್ಟಿಸಕೊಡಗಿದ. ಆ ಭೀಮಾಕಾರದ ಕಲ್ಲುಗಳು ಚಲಿಸಲಾರಂಭಿಸಿದುವು 'ಅಬ್ಬ! ಆ ಕಲ್ಲುಗಳಲ್ಲಿ ಅಡಗಿ ಕುಳಿತಿರುವ ಚೇತನವೆಷ್ಟು!' ಎಂದು ಅಳೆಯತೊಡಗಿದ ಅವುಗಳ ಮುಂದೆ ತಾನು ಧೂಳಿನ ಕಣಕ್ಕಿಂತಲೂ ಕಡಿಮೆಯೆನಿಸಿತು. ಅವನು ಕೂಗಿ ಹೇಳಿದ:

"ಛಿ! ಇದೆಂತಹ ಬದುಕು! ನಿಶ್ಯಕ್ತರ ಬದುಕು!"

ಅದೇ ಮಾತು ಆ ಭೀಮಾಕಾರದ ಕಲ್ಲುಗಳಿಗೆ ತಾಕಿ ಪ್ರತಿಧ್ವನಿತವಾದುವು. ಅವನು ಅಲ್ಲಿ ನಿಲ್ಲಲಿಲ್ಲ. ಮುಖವನ್ನು ಕೆಳಗೆ ಮಾಡಿಕೊಂಡು ಮನೆಗೆ ಬಂದು, ಮತ್ತೆ ಮೌನವಾಗಿ ಕುಳಿತುಬಿಟ್ಟ.

ಅಂತೂ ಒಂದು ವರ್ಷ ಚಿಂತೆಯಲ್ಲಿಯೆ ಕರಗಿಹೋಯಿತು.

× × × ×

ಅವನ ಮನಸ್ಸಿಗೆ ಎಂದೂ ಸುಖಸ್ವಾಸ್ಥ್ಯವಿರಲಿಲ್ಲ. ಯಾವಾಗಲೂ ಚಿಂತೆ ಅವನನ್ನು ಆವರಿಸಿರುತ್ತಿತ್ತು. ಮತ್ತೆ ಅದೇ ಮಾತುಗಳು ಅವನ ಮನಸ್ಸಿಗೆ ಬರುವುವು:

"ಎಂತಹ ಕ್ಷುಲ್ಲಕ ಜೀವನ!"

ಆವನಿಗೊಮ್ಮೊಮ್ಮೆ ಎನಿಸುವುದು:

'ಸೃಷ್ಟಿಯಲ್ಲೆಲ್ಲ ಮನುಜನೆ ಅತಿ ಶ್ರೇಷ್ಠ ಎನ್ನುತ್ತಾರೆ. ನಿಜ ಅವನ ಶಕ್ತಿ ಎಲ್ಲೆ ಮೀರಿ ಓಡುತ್ತಿದೆ. ಅವನ ಬುದ್ಧಿಶಕ್ತಿ ಅಭೇದ್ಯ-ರಹಸ್ಯಗಳ ಕತ್ತಲಿನ ಗುಹೆಗಳೊಳಕ್ಕೆ ಬೆಳಕಿನ ತೊರೆಯನ್ನು ಹರಿಸಿದೆ. ಆದರೇನು? ಸಾವನ್ನು ಗೆಲ್ಲುವುದುಂಟೆ? ಸತ್ತಮೇಲೆ ಆ ಶಕ್ತಿಯಿಂದ ಉಪಯೋಗವುಂಟೆ? ಇಲ್ಲ.'

"ಸಾವು!"

ಆ ಮಾತನ್ನು ಕೇಳಿದೊಡನೆಯೆ ಅವನಿಗೆ ಮೈಯೊಳಗಿನ ರಕ್ತನಾಳಗಳೆಲ್ಲಿ ಹಿಮದ ನೀರು ಪ್ರವಹಿಸಿದಂತಾಗುವುದು. ಮಂತ್ರಮುಗ್ಧನಾದಂತೆ ಕುಳಿತು ಚಿಂತಿಸುವನು:

'ಸಾವು ಎಷ್ಟು ಅನಿರೀಕ್ಷಿತ, ಎಷ್ಟು ವಿಸ್ಮಯಕರ! ಮೊನ್ನೆ ದೆಹಲಿಯ ಬಳಿ ವಿಮಾನಾಪಘಾತದಲ್ಲಿ ಹದಿನೆಂಟುಮಂದಿ ಸುಟ್ಟು ಭಸ್ಮವಾದರು. ಅವರು ಸಾವು ಬರುವುದೆಂದು ಕಂಡುಕೊಂಡಿದ್ದರೆ? ಯಾವ ಸ್ವಪ್ನಲೋಕದಲ್ಲಿದ್ದರೊ, ಮಣ್ಣಿನ ಲೋಕಕ್ಕಿಳಿದರು. ನಾಯಿಗೆ ವಿಷದನ್ನವನ್ನಿಟ್ಟರೆ ತಿಂದು ಗರಗರ ಸುತ್ತಿ ಬಿದ್ದು ಸಾಯುತ್ತದೆ. 'ನಾಯಿ ಸತ್ತಿತು!' ಮನುಷ್ಯನ ಸಾವು ಅದಕ್ಕಿಂತ ಹೆಚ್ಚೇನಲ್ಲ. ಬೆಳೆದು ನಿಂತ ಮರ ಬಿರುಗಾಳಿ ಬೀಸಿದಾಗ ಬುಡ ಕಳಚಿ ಬೀಳುವುದಿಲ್ಲವೆ? ಅಂತೆಯೆ ಮನುಷ್ಯನೂ ಸಾಯುವವನೆ. ನಿಜ, "ಜಾತಸ್ಯ ಮರಣಂ ಧ್ರುವಂ." ಎಲ್ಲರೂ ಸಾಯಲೇಬೇಕು. ಸಾಯುವವರು ಹೇಗಿದ್ದರೇನು? ಎಂದು ಸತ್ತರೇನು? ಸಾವಿಗೇಕೆ ಅಂಜಬೇಕು! ಇಂದೇ ಸಾವು ಬರಲಿ.

"ಸಾವು!"

ಆ ಮಾತು ಅವನ ಸುಗಾತ್ರೆಯ ಸಾವನ್ನು ನೆನಪಿಗೆ ತರುವುದು:

ಸರೋಜ ಅತಿ ಸುಂದರಿ. ಮೊಗ್ಗು ಅರಳಿ ಹೂವಾಗುವಂತೆ ಗಳಿಗೆಗೊಮ್ಮೆ ಅರಳುತ್ತಿದ್ದ ಅವಳ ಕಣ್ಣುಗಳು, ಮೇಲೆ ಗೆರೆ ಕೊರೆದಂತೆ ಇಂದ್ರಚಾಪದ ಭ್ರೂದ್ವಯ, ರಾಗರಸವ ಚಿಮ್ಮುತಿದ್ದ ಅಧರಗಳು. ಹೆಗಲವೇಲೆ ಬಾಗಿ ಬೆನ್ನಿನ ಮೇಲೆ ತೂಗಾಡುತ್ತಿದ್ದ ಕಪ್ಪನೆಯ ರೇಶ್ಮೆಯ ಕೇಶರಾಶಿ. ಮುಖದ ಮೇಲೆ ಲಾಸ್ಯವಾಡುತ್ತಿದ್ದ ಮಂದಸ್ಮಿತಗಳಿಂದ ಒಪ್ಪುತ್ತಿದ್ದ ಅವಳನ್ನು ಸೌಂದರ್ಯೋಪಾಸಕನಾದ ಅವನು ನೋಡಿದಾಗ ಹುಚ್ಚನಾಗಿದ್ದ. ಅವಳನ್ನು ಒಲಿಸಿಕೊಳ್ಳಬೇಕೆಂಬ ಹಂಬಲಕ್ಕಿಂತ ಅವಳು ತನ್ನನ್ನು ಒಲಿದಾಳೆ ಎಂಬ ಶಂಕೆಯಲ್ಲಿಯೆ ಅವನು ಕುಗ್ಗಾಲಾಗಿದ್ದ. ಆಗ ಅವನು ಬರಿಯ ಕನಸುಗಾರನಾಗಿದ್ದ ಅವಳು ಅವನನ್ನು ನೋಡಿ ನೊದಲುಬಾರಿ ನಕ್ಕಾಗ, ಅವನು ಸ್ವರ್ಗಸುಖವನ್ನನುಭವಿಸಿದ್ದ. ತಾನು ಎಂದೆಂದೂ ನಿರೀಕ್ಷಿಸದ ಸೌಂದರ್ಯರತ್ನ ಅವನನ್ನು ಒಲೆದು ಬಂದಿತ್ತು. ಐದು ವರ್ಷಗಳ ಸಂಸಾರದಲ್ಲಿ ಅವನು ತಾನು ಭೂಮಿಯಮೇಲೆ

ಜೀವನಪ್ರಕಾಶ

(ಕನ್ನಡ ನೂತನ ಮಾಸಪತ್ರಿಕೆ)

ಸಂಪಾದಕರು: ಶ್ರೀಮತಿ ಪ್ರೇಮಾ ಹುಲಕೊಪ್ಪಕರ

ಸಾಮಾಜಿಕ ಪ್ರಗತಿ – ಶಿಕ್ಷಣ – ಮನೋರಂಜನೆಗಳಿಗಾಗಿ ಕಾರ್ಯಮಾಡಲು ಹೊರಟ ಸದಭಿರುಚಿಯ ಪತ್ರಿಕೆಯಿದು.

ವಾರ್ಷಿಕ ಚಂದಾ ೬–೦–೦ ಬಿ. ಸಂಚಿಕೆಗೆ ೦–೮–೦

ಪ್ರಭಾ ಡಿಸ್ಟ್ರಿಬ್ಯೂಟರ್ಸ್, ತಳಕವಾಡಿ-ಬೆಳಗಾಂವಿ

ಜೀವಿಸುತ್ತಿರುವುದು—ಎಂಬುದನ್ನು ಮರೆತಿದ್ದ. ಅವನದು ಸುಂದರವಾದ ಕಾವ್ಯಸುಖಮಯ ಜೀವನವಾಗಿತ್ತು.

ಇದ್ದಕ್ಕಿದ್ದಂತೆಯೆ ಬರಸಿಡಿಲೆರಗಿತು. ಗಾಳಿಯಲ್ಲಿ ಸಂತಸದಿಂದ ತೇಲಾಡುತ್ತಿದ್ದ ಪಕ್ಷಿಗೆ ವ್ಯಾಧನೊಬ್ಬನು ಬಾಣದಿಂದ ಹೊಡೆದಾಗ, ಅದರ ಒಂದು ರೆಕ್ಕೆ ತುಂಡಾಗಿ, ರಕ್ತ ಚೆಲ್ಲುತ್ತ ಅದು ತತ್ತರಿಸಿ ಭೂಮಿಗೆ ಬಿದ್ದಂತೆ, ಅವನು ತನ್ನ ಸ್ವಪ್ನಲೋಕದಿಂದ ದುಃಖ ಪ್ರಪಂಚಕ್ಕಿಳಿದ. ಅವನಿಗೆ ಜೀವನವೇ ಅಸಹ್ಯವಾಯಿತು.

ಸರೋಜ ಎರಡನೆಯ ಬಾರಿ ಗರ್ಭ ಧರಿಸಿದ್ದಳು. ಹೆರಿಗೆ ಪ್ರಯಾಸದಿಂದ ಆದರೂ, ತಾಯಿ ಮಗು ಇಬ್ಬರೂ ಬದುಕಿಕೊಂಡರು. ತನ್ನ ಇನಿಯಳು ಬದುಕಿಕೊಂಡಳಲ್ಲ—ಎಂದು ಅವನು ನಿರ್ಲಕ್ಷ್ಯಚಿತ್ತನಾಗಿದ್ದ. ಸ್ವಲ್ಪ ದಿನದೊಳಗೆ ಸಂಗಾತಿ ಬಾಣಂತಿ ಕ್ಷಯವಾಗಿ ತೀರಿಕೊಂಡಳು. ಇನಿಯಳನ್ನು ಉಳಿಸಿಕೊಳ್ಳಲು ಅವನು ಎಷ್ಟು ಹೆಣಗಿದ! ಎಲ್ಲ ವ್ಯರ್ಥ.

ಸಾವು! ಅದೊಂದೆ ಸುಖದ ಶತ್ರು
—ಅವನ ಮನಸ್ಸು ಕೂಗಿ ಹೇಳಿತ.

ತನ್ನ ಬಾಳ ಗೆಳತಿಯನ್ನಪ್ಪಿದ ಸಾವು ತನ್ನನ್ನೇಕೆ ಒಯ್ಯಬಾರದು—ಎಂದು ಹಂಬಲಿಸಿದ.

ಅಂತೂ ಒಂದು ವರ್ಷ ಚಿಂತೆಯಲ್ಲಿಯೆ ಕರಗಿಹೋಯಿತು.

× × × ×

ಅವನು ಚಿಂತಿಸುತ್ತಿದ್ದ :

'ಬದುಕು!'

'ಬದುಕಬೇಕೆ? ಏನೆಂದು ಬದುಕಬೇಕು? ಸಾಯುವುದಕ್ಕೆ ಹುಟ್ಟಿದ ಜೀವ ಬದುಕಬೇಕೆ? ನಾನು ಜಗತ್ತಿನ ಅತಿ ದೊಡ್ಡ ಮನುಷ್ಯ ಇಂದು; ಎಲ್ಲರೂ ನನ್ನನ್ನು ಪೂಜಿಸುವರೆ; ಎಲ್ಲರೂ ನನ್ನ ಹಿಂಬಾಲಕರೆ. ನನಗೆ ಯಾವ ಕೊರತೆಯೂ ಇಲ್ಲ; ನಾನು ಸುಖದ ಗೌರೀಶಂಕರದ ಮೇಲೆ ಕುಳಿತಿರುವೆ. ಮುಂದೆ? ಗೌರೀಶಂಕರಕ್ಕಿಂತ ಎತ್ತರವುಂಟೆ? ಆ ಎತ್ತರ ನನಗೆ ದೊರೆಯುವುದೆ?

'—ಇಲ್ಲ.'

'ಹಾಗಾದರೆ ಈ ಬದುಕಿನ ಸುಖವೆಲ್ಲ ವ್ಯರ್ಥ! ಶಾಶ್ವತವಲ್ಲ!'

'ಬದುಕಿನಲ್ಲಿ ಸುಖಪಡುವುದೆಂಬುದು ಗಾಳಿಯೊಡನೆ ಗುದ್ದಾಟ, ಮಂಜಿನ ಮಣಿಯನ್ನು ಹಿಡಿಯುವ ಆಶೆ, ನಕ್ಷತ್ರವನ್ನು ಮುಟ್ಟುವ ಹುಚ್ಚುಬಯಕೆ. ಹೇಗೊ ಹುಟ್ಟುತ್ತೇವೆ ಹೇಗೊ ಬದುಕಿದರಾಯಿತು, ಎಂದೊ ಸಾಯುತ್ತೇವೆ. ಇದಕ್ಕಿಂತ ಹೆಚ್ಚು ಮತ್ತೇನೂ ಇಲ್ಲ, ಇದರಲ್ಲಿ ಯಾವ ರಹಸ್ಯವೂ ಇಲ್ಲ. ನರನೂ ಒಂದೆ, ಮೃಗವೂ ಒಂದೆ. ಬೇಟೆಗಾರನ ಗುಂಡು ಮೃಗವನ್ನು ಕೊಲ್ಲುವಂತೆ ನರನನ್ನು ಯಾವುದೋ ಅಕಸ್ಮಿಕ ಕೊಲ್ಲುತ್ತದೆ. ಸಾವಿನ ಹೆಬ್ಬುಲಿಯ ಮುಂದೆ ಬದುಕಿನ ಭಕ್ಷ್ಯಾನ್ನಭೋಜನಕ್ಕೆ ಕೂಡುವುದೆ? ಭೋಜನ ಮುಗಿದೊಡನೆಯೆ ಹೆಬ್ಬುಲಿ ಕಡಿದು ತಿಂದು ಹಾಕುತ್ತದೆ ನರನನ್ನು. ಹೆಬ್ಬುಲಿಯ ಹೊಟ್ಟೆಯಲ್ಲಿಯ ನರನ ಮಾಂಸದ ತುಂಡಿಗೆ ಭೋಜನದ ರುಚಿ ಉಳಿಯುವುದೆ? ಇಲ್ಲ.

'ಬದುಕೆ?'

'ಅದಕ್ಕೆ ಅರ್ಥವಿಲ್ಲ, ರೂಪವಿಲ್ಲ; ಬರಿಯ ಭ್ರಮೆ!'

'ಬದುಕಿನಲ್ಲಿ ಎಲ್ಲರಿಗೂ ಸುಖವುಂಟೆ? ನನಗುಂಟೆ? ಯಾರಿಗೂ ಸುಖವಿಲ್ಲ. ಹಲ್ಲಿದ್ದವನಿಗೆ ಕಡಲೆಯಿಲ್ಲ, ಕಡಲೆಯಿದ್ದವನಿಗೆ ಹಲ್ಲಿಲ್ಲ. ಕೊರತೆಯುಂಟೆ ಉಂಟು; ದುಃಖವುಂಟೆ ಉಂಟು. ಹುಟ್ಟಿದ ಕೂಡಲೆ ತಾಯಿಯನ್ನು ಕಳೆದುಕೊಳ್ಳುವ ಹೆಸುಳೆಗೆ ಮಾತೃವಾತ್ಸಲ್ಯ ದೊರಕೀತೆ? ಮಕ್ಕಳಿಲ್ಲದ ಬಂಜೆಗೆ ಮಕ್ಕಳ ಸುಖ ಬಂದೀತೆ? ಯಂತ್ರದಂತೆ ದುಡಿಯುವ ಕಾರ್ಮಿಕನಿಗೆ ಸುಖವುಂಟೆ? ಕುಳಿತು ಬೊಜ್ಜು ಬೆಳೆಯಿಸುವ ಸಾವುಕಾರನಿಗೆ ಸುಖವುಂಟೆ? ಈ ಜಗತ್ತು ಶೋಕಮಯ. ಅದಕ್ಕೇ ಬುದ್ಧ ಹೆಂಡತಿ, ಮಗು, ರಾಜ್ಯವನ್ನು ತೊರೆದು ಬೋಧಿವೃಕ್ಷದ ನೆರಳಿಗೆ ತೆರಳಿದ.

'ಆದರೆ, ಆ ಬೋಧಿವೃಕ್ಷವನ್ನು ನಾನು ಕಾಣುವೆನೆ?'

'—ಸಾಧ್ಯವೇ ಇಲ್ಲ!'

'ನಾನಂತೂ ಸುಖವಾಗಿರಲಾರೆ. ಗೆಳತಿ ಕೈಸಾರಿ ಹೋದಳು ಅಂದಿನಿಂದ ಈ ಲೋಕ ನನಗೆ ಶೋಕದ ಬೀಡು. ನನ್ನನ್ನು ಹಗಲು ರಾತ್ರಿಯತ್ತ ಒದೆಯುತ್ತದೆ—ರಾತ್ರಿ ಹಗಲಿನತ್ತ ಒದೆಯುತ್ತದೆ. ದುಡಿತದೈತ್ಯನ ಕ್ರೂರಬಾಹುಬಂಧನಕ್ಕೆ ಸಿಕ್ಕಿ ನಾನು ಪುಡಿಪುಡಿಯಾಗುತ್ತಿದ್ದೇನೆ. ಈ ದುಃಖದ, ಈ ಕಷ್ಟದ, ತೊಳಲಾಟದ, ದೀರ್ಘ ಬದುಕು ನಿಮಿಷದ ಸಾವಿಗೆ ಸಿದ್ಧತೆಯಲ್ಲವೆ?'

'ಬದುಕು?'

'—ಬೇಕಿಲ್ಲ!'

'ಸಾವು?'

'—ಬರಲಿ!'

ಅಂತೂ ಒಂದು ವರ್ಷ ಚಿಂತೆಯಲ್ಲಿಯೆ ಕರಗಿ ಹೋಯಿತು.

× × × ×

"ಸಾವು!"

ಒಮ್ಮೊಮ್ಮೆ ಅವನು ಆ ಮಾತನ್ನು ಕೇಳಿ ತುಂಬ ಬೆದರುವನು. ಒಂದು ದಿನ ರಾತ್ರಿ ಹತ್ತುಘಂಟೆಯ ಸಮಯಲ್ಲಿ ಒಬ್ಬನೆ ಊರ ಹೊರಗೆ ಹೋಗಿ ಕುಳಿತಿದ್ದನು. ಅವನು ಕುಳಿತ ಸೇತುವೆಯಿಂದ ಸ್ವಲ್ಪ ದೂರದಲ್ಲಿ ಕ್ರಿಶ್ಚಿಯನ್ನರ ಮಸಣಭೂಮಿಯಿದ್ದಿತು. ಅವನ ಮನಸ್ಸಿನ ಕಾಸಾರದಲ್ಲಿ ಸಾವು-ಬದುಕಿನ ಮೀನುಗಳು ಒಂದನ್ನೊಂದು ನುಂಗಲು ಹವಣಿಸುತ್ತಿದ್ದುವು. ಚಂದ್ರನು ಬಹು ಕಾಂತಿಹೀನನಾಗಿದ್ದನು. ಕರಿಯ ಮೋಡಗಳು ಆಕಾಶದಲ್ಲಿ ಸೇರಿಸಿಕೊಳ್ಳಿಸುತ್ತಿದ್ದುವು. ಮಳೆ ಬರುವುದನ್ನು ಕಂಡೋ ಏನೊ, ಸಾಲುದೀಪಗಳು ಇದ್ದಕ್ಕಿದ್ದಂತೆಯೆ ಮೈಯೆಲ್ಲ ಬೆವತಿತು; ಮೈ ನಡುಗಿತು. ಯಾವುದೊ ಭೀತಿ ಅವನನ್ನು ಕಿತ್ತು ತಿನ್ನಲಾರಂಭಿಸಿತು. ಕಾಲುಗಳು ಓಡಲೆಳಸಿದುವು. ಕ್ರಿಶ್ಚಿಯನ್ನರ ಮಸಣಭೂಮಿಯಿಂದ ಸಾವು ಇವನತ್ತ ಓಡಿಬರುವಂತಾಯಿತು. ಇನ್ನು ಅಲ್ಲಿ ಕೂತಿರುವುದು ಅಲಗಿನ ಮೇಲೆ ಕೂರುವುದಾಗಿತ್ತು, ಅವನಿಗೆ. ಹಿಂದಕ್ಕೆ ತಿರುಗಿ ನೋಡದೆ

ಮಾಲ್ಗುಡಿ ಕಥಾ ಸಂಕಲನ :

ಸ್ವಾಮಿ ಮತ್ತು ಸ್ನೇಹಿತರು

ಮಾಲ್ಗುಡಿ ಡೇಸ್

ಲಾಯರ್ ಸಿದ್ಧಾರ್ಥ ಮತ್ತು ಇತರ ಕಥೆಗಳು

ಸ್ವಾಮಿ ಮತ್ತು ಸ್ನೇಹಿತರು ಕಾದಂಬರಿಯ ಮುಖ್ಯ ಪಾತ್ರಗಳು :

ಸ್ವಾಮಿ

ಶಂಕರ್

ಮಣಿ ಅಯ್ಯರ್

ಸ್ವಾಮಿಯ ತಂದೆ

ಸ್ವಾಮಿಯ ತಾಯಿ

ಸ್ವಾಮಿಯ ಸೋದರ ಸಂಬಂಧಿ ಕೃಷ್ಣ

ಸ್ವಾಮಿಯ ಸೋದರ ಸಂಬಂಧಿ ರಾಜಂ

ಸ್ವಾಮಿಯ ಸೋದರ ಸಂಬಂಧಿ ಮಣಿ

ಸ್ವಾಮಿಯ ಸೋದರ ಸಂಬಂಧಿ ಸೋಮು

ಸ್ವಾಮಿಯ ಸೋದರ ಸಂಬಂಧಿ ಸುಬ್ಬು

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ತಂದೆ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ತಾಯಿ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜಿ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜಿಯ ತಂದೆ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜಿಯ ತಾಯಿ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜಿಯ ಅಜ್ಜಿ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜಿಯ ಅಜ್ಜಿಯ ತಂದೆ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜಿಯ ಅಜ್ಜಿಯ ತಾಯಿ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜಿಯ ಅಜ್ಜಿಯ ಅಜ್ಜಿ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜಿಯ ಅಜ್ಜಿಯ ಅಜ್ಜಿಯ ತಂದೆ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜಿಯ ಅಜ್ಜಿಯ ಅಜ್ಜಿಯ ತಾಯಿ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜಿಯ ಅಜ್ಜಿಯ ಅಜ್ಜಿಯ ಅಜ್ಜಿ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜಿಯ ಅಜ್ಜಿಯ ಅಜ್ಜಿಯ ಅಜ್ಜಿಯ ತಂದೆ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜಿಯ ಅಜ್ಜಿಯ ಅಜ್ಜಿಯ ಅಜ್ಜಿಯ ತಾಯಿ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜಿಯ ಅಜ್ಜಿಯ ಅಜ್ಜಿಯ ಅಜ್ಜಿಯ ಅಜ್ಜಿ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜಿಯ ಅಜ್ಜಿಯ ಅಜ್ಜಿಯ ಅಜ್ಜಿಯ ಅಜ್ಜಿಯ ತಂದೆ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜಿಯ ಅಜ್ಜಿಯ ಅಜ್ಜಿಯ ಅಜ್ಜಿಯ ಅಜ್ಜಿಯ ತಾಯಿ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜಿಯ ಅಜ್ಜಿಯ ಅಜ್ಜಿಯ ಅಜ್ಜಿಯ ಅಜ್ಜಿಯ ಅಜ್ಜಿ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜಿಯ ಅಜ್ಜಿಯ ಅಜ್ಜಿಯ ಅಜ್ಜಿಯ ಅಜ್ಜಿಯ ಅಜ್ಜಿಯ ತಂದೆ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜಿಯ ಅಜ್ಜಿಯ ಅಜ್ಜಿಯ ಅಜ್ಜಿಯ ಅಜ್ಜಿಯ ಅಜ್ಜಿಯ ತಾಯಿ

ಸ್ವಾಮಿಯ ಸೋದರ ಸಂಬಂಧಿ ಸುಬ್ಬಿಯ ಅಜ್ಜ

ಊರು ಸಿಗುವವರೆಗೂ ಉಸಿರುಕಟ್ಟಿ ಓಡಿಬಂದ. ಎದೆ ಹೊಯ್ದು-ಕೊಳ್ಳುತ್ತಿತ್ತು. ಅವನೆ ಕೇಳಿಕೊಂಡ:

"ನಾನೇಕೆ ಓಡಿಬಂದೆ?"

"ಏಕೊ?"

ಅವನು ಚಿಂತಿಸುತ್ತಿದ್ದ:

'ಸಾವಿನ ಅನಂತರ?'

'—ಮಣ್ಣಿನೊಳಕ್ಕೆ ಮಣ್ಣು! ಸಾವಿನ ಅನಂತರ ಅನಂತವಾದ ಕತ್ತಲ ಸೀಮೆಯ ಪ್ರವೇಶ. ಸಾವಿನ ಅನಂತರ ಮತ್ತೊಂದು ಸ್ಥಿತಿ ಇದೆ ಎನ್ನುವುದೂ ಬರಿಯ ಭ್ರಮೆ. ಸಾವಿನ ಅನಂತರ ಎಂತಹುದೂ ಇಲ್ಲ. ಬದುಕಿರುವವರೆಗೆ ಈ ದೇಹ, ಈ ಕಾಲ, ಈ ಸುಖ; ಅನಂತರ ಎಲ್ಲವುದಕ್ಕೂ ಕೊನೆ. ಬದುಕಿನೊಳಗಿದೆ ಎಲ್ಲ; ಬದುಕಿನ ಅನಂತರ ಏನೂ ಇಲ್ಲ. ನಿಜ! ಗೌರಿಶಂಕರದ ಕೆಳಗೆ ಕೈಕಟ್ಟಿ ಕುಳಿತುಕೊಳ್ಳುವವನಿಗೂ ಸುಖವಿಲ್ಲ; ಗೌರಿಶಂಕರಕ್ಕೆ ಒಮ್ಮೆಯೆ ಹಾರಿ ಕುಳಿತುಕೊಳ್ಳುವವನಿಗೂ ಸುಖವಿಲ್ಲ; ಹತ್ತುತ್ತಿರುವವನಿಗೆ ಸುಖವುಂಟು. ಸಾಹಸದಲ್ಲಿ ಸಂತೋಷವುಂಟು, ಕಷ್ಟದಲ್ಲಿ ಸುಖವುಂಟು. ಬದುಕುವುದಕ್ಕಾಗಿ ಬದುಕು, ಸಾಯುವುದಕ್ಕಲ್ಲ.'

'ಉಮರ್ ಖಯ್ಯಾಂ!'

'—" ಒಮ್ಮೆ ತೆರಳಿದರೆ ಪುನರಾಗಮನನೆಂಬುದಿಲ್ಲ."

'—" ಗಿಡದ ಕೆಳಗಡೆ ಇಲ್ಲಿ, ತಿನಲೊಂದು ರೊಟ್ಟಿಚೂರು ಮಧುವಿನ ಪಾತ್ರೆ, ಕಾವ್ಯದ ಹೊತ್ತಿಗೆ—ಹಾ! ನೀನು."

'—" ಓರು,"

ಬಟ್ಟಲೊಳಗಿನ ಜೀವರಸವಿಂಗುವ ಮುನ್ನ....

'ನಿಜ! ಮಕ್ಕಳಿಬ್ಬರ ಬಿಸಿಯಪ್ಪುಗೆಯ ಸೌಖ್ಯ ಮಣ್ಣಿನ ಮೇಲೆ ದೊರೆತೀತೆ? ಈ ಜಗನ ಸೃಷ್ಟಿಸೌಂದರ್ಯದ ಅಸ್ವಾದನೆ ಮಣ್ಣಿನ ಮೇಲೆ ಸಾಧ್ಯವೆ? ಕೈಗೆ ನಿಲುಕದ ಆಕಾಶ ಶೂನ್ಯವಿದುವು. ಆದರೆ, ಮುಂಜಾವಿನಲ್ಲಿ ಸಂಧ್ಯಾಕಾಲದಲ್ಲಿ ದಿಗಂತದಲ್ಲಿ ತೋರುವ ಚಿತ್ತಾಪಹಾರಕವಾದ ಸ್ವರ್ಗೀಯ ವರ್ಣ ಸಮ್ಮಿಳನ-ದಿಂದುಂಟಾಗುವ ಆನಂದ ಮತ್ತೆ ದೊರೆತೀತೆ? ಹಿಮಗವಿದನು ಚೆಲ್ಲುವ ಹಾಲ್‌ಬೆಳುದಿಂಗಳ ಜ್ಞಾನ ಮಣ್ಣಿನ ಮೇಲೆ ಉಂಟೆ? ದೂರದಲ್ಲಿ ಮಿನುಗುವ ನಕ್ಷತ್ರಗಳನ್ನು ನೋಡುವ ಭಾಗ್ಯ ಮತ್ತೆ ಬರುವುದೆ? ಇಲ್ಲ!'

'ಬದುಕಿನ ಅನಂತರ?'

'—ಏನೂ ಇಲ್ಲ! ಶೂನ್ಯ!'

'ಸಾವು?'

'—ನೂರನಿರಲಿ!'

'ಬದುಕು?'

'—ಸಾಗಲಿ!'

ಅಂತೂ, ಚಿಂತೆಯಲ್ಲಿಯೆ ಒಂದು ವರ್ಷ ಕಳೆಯಿತು.

× × × ×

ಮಕ್ಕಳ ಸಮೃದ್ಧತೆಗಾಗಿ

"ಬಗೆನ ಬಾಲಾಮೃತ."

ಹೆಲ್ಲು ಬರುವಾಗ

ಎಸ್ಟನ್ಸ್ ಗ್ಯಾಇಜ್ ಹೀಲರ್



ಜಂತು ಆವರೆ

"ಪಮ್ಮ್ ಆಯಿಲ್"

ಉಪಯೋಗಿಸಿರಿ. ಇವು ಪತ್ರಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು.

The National Pharmacies & Pharmaceuticals Ltd., Dharwar.

ಸಾವು ಪ್ರತಿನಿತ್ಯವು ಅವನೆಡೆಗೆ ಧಾವಿಸುತ್ತಿರುವಂತೆ ಅವನಿಗೆ ತೋರತೊಡಗಿತು. ಒಮ್ಮೆ ಯಾರೊ ಅವನ ಕೈ ನೋಡಿ ಹೇಳಿದ್ದರು:

"ಮೂವತ್ತು ಮೂವತ್ತೊಂದನೆಯ ವರುಷದಲ್ಲಿ ಗಂಡಾಂತರ ವಿದೆ!"

ಆ ಮಾತುಗಳು ಅವನ ಕಿವಿಯೊಳಗೆ ಸದಾ ಮೊರೆ-ಲಾರಂಭಿಸಿದುವು. ಅವನು ಸದಾ ತನ್ನ ಕೈ ನೋಡಿಕೊಳ್ಳುವನು-ಜೀವರೇಖೆಯ ಮೇಲೆ ಆಸ್ಥವಾಗಿ ಗೆರೆಯೊಂದಿತ್ತು. ದಿನೇದಿನ ಅವನು ನಿರ್ಜೀವನಾಗುತ್ತಿರುವಂತೆ ಅವನಿಗೆ ಭಾಸವಾಗಲಾರಂಭಿಸಿತು.

ಅವನು ಚಿಂತಿಸುತ್ತಿದ್ದ:

'ಎಷ್ಟು ದಿನ ಬದುಕಬಹುದು? ನಾನು ಖಂಡಿತ ಸಾಯುವ ಸತ್ಯವೆ ಸತ್ಯ. ಇಂದೇ ಸಾವು ಬರಲಿ!'

"ಸಾವು!"

'ಈ ಬದುಕು ಪುನಃ ಬರುವುದೆ? ಸುಖವಂಟೆ, ಪುನಃ?'

'ಇಲ್ಲ. ಬದುಕಬೇಕು!'

ಮತ್ತೊಮ್ಮೆ ಚಿಂತಿಸುತ್ತಿದ್ದ :

'ಇನ್ನೇನು ಸಾಯುವೆ. ಅದು ನನ್ನ ಕೈಮೀರಿದುದು. ಯಾರಿಗೂ ಬಾರದ ಸಾವು ನನಗೆ ಬರುವುದಿಲ್ಲ. ಮಣ್ಣಿನ ಜೀವ ಮಣ್ಣಾಗಲಿ. ಅದಕ್ಕೇಕೆ ಚಿಂತೆ? ಇಂದೇ ಸಾವು ಬರಲಿ!'

'ಸಾವು?'

'–"ಒಮ್ಮೆ ತೆರಳಿದರೆ ಪುನರಾಗಮನನೆಂಬುದಿಲ್ಲ."

'ಬದುಕು?'

'–"ಜಾತಸ್ಯ ಮರಣಂ ಧ್ರುವಂ."

× × × ×

ವರ್ಷ ಕಳೆದು ಎರಡು ಮೂರು ದಿನಗಳಾಗಿದ್ದುವು.

ಅವನು ಚಿಂತೆಯ ಹೊಗೆಯ ಮಧ್ಯೆ ಕುಳಿತಿದ್ದ. ಅಳು ಶೋಕವಾರ್ತೆಯನ್ನು ತಿಳಿಸಿದ:

"ಕೂಸು ತೀರಿಕೊಂಡಿತು!"

"ಕೂಸು ತೀರಿಕೊಂಡಿತು!"

—ನಾಲ್ಕು ದಿಕ್ಕುಗಳೂ ಕೂಗಿಕೊಂಡವು.

ಅವನ ಎರಡನೆಯ ಕೂಸು ಬಹಳ ದಿವಸಗಳಿಂದ ನರಳುತ್ತಿತ್ತು; ಕಾದು ಸತ್ತಿತ್ತು. ಅವನು ಚಿಂತಿಸಿದ:

'ಸಾವಿನ ದರ್ಪ ಅತಿಯಾಯಿತು.... ಜಗತ್ತು ಶೋಕಮಯ.... "ಜಾತಸ್ಯ ಮರಣಂ ಧ್ರುವಂ."

ಅವನ ಸುತ್ತ ಕತ್ತಲೆಯ ನೋಡಗಳು ಮುಸುಕಿದಂತಾಯ್ತು. ಕಣ್ಣಿನಿಂದ ನೀರು ಧಾರಾಕಾರವಾಗಿ ಹರಿಯುತ್ತಲೆ ಇತ್ತು. ಅವನು ಕೂಗಿಕೊಂಡ:

'ಸಾವೂ, ಬದುಕೋ?'

"ಸಾವು!"–ಯಾರೊ ಉತ್ತರ ಹೇಳಿದಂತಾಯ್ತು.

ಪಿಸ್ತೂಲನ್ನು ಎದೆಗಿಟ್ಟುಕೊಂಡು ಗುಂಡು ಹಾರಿಸಿದ. ಅವನು ತನ್ನಲ್ಲಿಯೆ ಅಂದುಕೊಂಡ:

'ಸಾವಿಗೆ ಶರಣಾದೆ. ಸಾವಿನ ದರ್ಪ ತಾಳಲಾರೆ.'

ಅಳುಗಳು ಅವನನ್ನು ಹಾಸಿಗೆಗೊಯ್ದರು.

ಪಕ್ಕೆಯಲ್ಲಿ ಗುಂಡು ನೆಬ್ಬಿತ್ತು. ನೋವು ತಾಳದಾಯಿತು. ಸಾವು ತನ್ನನ್ನು ಆಕ್ರಮಿಸುತ್ತಿದೆಯೆಂಬುದು ಅವನಿಗೆ ಅರಿವಾಯಿತು.

'ಬದುಕು! ನಿಜ, ಬದುಕು ರಮ್ಯ!'

ಬದುಕು ಇಂದ್ರಚಾಪದ ಸೀಮೆಯಾಗಿ ಅವನ ಕಣ್ಮುಂದೆ ಸುಳಿಯಿತು. ಅದನ್ನು ಕೂಡಲೆ ಸಾವಿನ ಕಗ್ಗತ್ತಲು ಹೊದೆದೋಡಿಸಿತು. ನೀಲನಭದ ನಕ್ಷತ್ರರಾಶಿ, ಮುಂಜಾವಿನ—ಬೈಗಿನ ಕೆಂಗಾಂತಿ, ಮಗನ ಮುದ್ದುಮೊಗ, ಹೆಣ್ಣಿನ ಸೌಂದರ್ಯ ಎಲ್ಲ ಅವನ ಕಣ್ಮುಂದೆ ರೂಪುತಳೆದು ನಿಂತುವು. ಕೂಡಲೆ ಸಾವಿನ ಕತ್ತಲೆ ಅವುಗಳ ಮೇಲೆ ಮುಸಕುಹಾಕಿತು. 'ಬದುಕು ಇನ್ನಿಲ್ಲವಲ್ಲ!' ಎಂದು ಕಣ್ಣೀರುಗರೆದ. ಸ್ವರ್ಗಲೋಕವಿಂದ ಅವನನ್ನು ಕೆಳಕ್ಕೆ ತಳ್ಳುತ್ತಿರುವಂತೆ ಭಾಸವಾಯಿತು. ಸಾವಿನ ಕರಿಯ ವಿಸ್ತಾರ ಸೀಮೆ ಅವನನ್ನು ನುಂಗಲು ಬಾಯಿ ತೆರೆದು ನಿಂತಿತು. ಆ ಬಾಯಿ. ಯೊಳಗಡೆ ಏನಿದೆಯೆಂದು ಅರಸಿ ನೋಡಿದ. ಬರಿಯ ಕತ್ತಲು! ಏನೂ ಕಾಣಿಸಲಿಲ್ಲ. ಅವನಿಗೆ ಭಯವಾಯಿತು. ಕಡೆಗೆ ಕಾಣಿಸಿದುದು, ಅವನಿಗೆ ಹಿಡಿಮಣ್ಣು. ಸಾವಿನ ಸೀಮೆ ಬಾಯಿ ತೆರೆದು ಹತ್ತಿರ ಬಂದಿತು. ತಪ್ಪಿಸಿಕೊಳ್ಳುವೆನೆಂದು ಎದ್ದು ಓಡಿಹೋಗಲು ಯತ್ನಿಸಿದ. ಸಾವು ಅವನನ್ನು ಹಾಸಿಗೆಯ ಮೇಲೆ ಕೆಡಹಿತು. ಧಾವಿಸಿ ಬರುತ್ತಿದ್ದ ವೈದ್ಯರಿಗೆ ಅವನು ಪ್ರಯಾಸದಿಂದ ಹೇಳುತ್ತಿದ್ದ ಅವನ ಕೊನೆಯ ಮಾತು ಕೇಳದುದು:

"ಬ–ದು–ಕೆ–ಬೇ–ಕು!"

"ನೂತನ ಗಣಿತ"ಗಳ ತಿದ್ದಿದ ಹೊಸ ಆವೃತ್ತಿಗಳು

ಎಲ್ಲಕಡೆಗೂ ದೊರೆಯುವುವು

[೧ರಿಂದ ೭ ತರಗತಿಗಳ ವರೆಗೆ]

ಹಲವು ತಜ್ಞರ ನೆರವಿನಿಂದ ತಿದ್ದುಪಡಿಯನ್ನು ಕೈಕೊಂಡು, ಹೊಸ ಆವೃತ್ತಿಗಳನ್ನು ಹೊರಡಿಸಲಾಗಿದೆ. ಮನಶ್ಶಾಸ್ತ್ರ, ಗಣಿತಶಾಸ್ತ್ರ, ವ್ಯವಹಾರ ಇವುಗಳ ತ್ರಿವೇಣಿಸಂಗಮವನ್ನು ಇವುಗಳಲ್ಲಿ ಕಾಣಬಹುದು. ಚಿಲ್ಲರೆ ಗಣಿತದ ಎಲ್ಲ ವಿಭಾಗಗಳನ್ನೂ ಕೊಡಲಾಗಿದೆ.

ಎಲ್ಲ ಜಿಲ್ಲಾ ಸ್ಕೂ. ಬೋ. ಪಾಠು ಮ್ಯಾನೆಜಿಪಲ್ ಸ್ಕೂ. ಬೋ. ಗಳೂ ಮನ್ನಣೆಯಿತ್ತಿರುವುವು. ಎಂತಲೇ ನಿಮ್ಮ ಪ್ರತಿಗಳನ್ನು ಇಂದೇ ಸಂಗ್ರಹಿಸಿರಿ. ವ್ಯಾಪಾರಿಗಳಿಗೆ ಧಾರಾಳ ಕಮಿಶನ್

ಅಕಳವಾಡಿ ಬುಕ್‌ಡಿಪೊ, ಧಾರವಾಡ

ಕರ್ನಾಟಕದ ಕೀರ್ತನಕಾರರು

ಶ್ರೀ ಬಿಟಗೇರಿ ಕೃಷ್ಣಶರ್ಮ, ಧಾರವಾಡ

ಭಕ್ತಿಯೋಗಕ್ಕೂ ಸಂಗೀತಕ್ಕೂ ತುಂಬ ಸಾಮರಸ್ಯದ ಸಂಬಂಧ. ಎಂತಲೇ ಭಕ್ತಿಪ್ರಧಾನ ಕರ್ನಾಟಕದಲ್ಲಿ ಬೆಳೆದು ಬಾಳಿದ ಭಕ್ತಶಿರೋಮಣಿಗಳು, ಸಂಗೀತಪ್ರಪಂಚದ ಸಂವರ್ಧನೆಗೂ ಕಾರಣರಾಗಿ ನಿಂತಿದ್ದಾರೆ.

'ಕೀರ್ತನಕಾರರು' ಎಂಬ ಮಾತು, ಈಗ ನಮ್ಮ ನಾಡಿನಲ್ಲಿ ಹೆಚ್ಚಾಗಿ 'ಹರಿಕಥೆ ಇಲ್ಲವೆ ಶಿವಕಥೆಗಳ ಕಾಲಕ್ಷೇಪ ಮಾಡುವ ಉದ್ಯಮದವರು'— ಎಂಬ ಅರ್ಥದಲ್ಲಿ ಬಳಕೆಯಲ್ಲಿದೆ. ಆದರೆ ನಾನೀಗ ಮಾತನಾಡಬೇಕಾದುದು ಇಂತಹ ಕೀರ್ತನಕಾರರನ್ನು ಕುರಿತು ಅಲ್ಲ. ಸಂಗೀತದ ಪರಿಭಾಷೆಯಲ್ಲಿ 'ಕೀರ್ತನ' ಅಥವಾ 'ಕೃತಿ' ಎಂಬುದಾಗಿ ಯಾವ ಭಕ್ತಿಗೀತಗಳಿಗೆ ಹೇಳುತ್ತಾರೋ, ಆ ಭಕ್ತಿಗೀತಗಳನ್ನು ಕನ್ನಡ ಭಾಷೆಯಲ್ಲಿ ರಚಿಸಿದ ಕೀರ್ತನಕಾರರನ್ನು ಕುರಿತು ವಿವರಿಸಲಿದ್ದೇನೆ. ಸಂಗೀತ ಪ್ರಪಂಚದ ಪರಿಭಾಷೆಯಲ್ಲಿ ಇಂತಹ ಕೀರ್ತನಕಾರರನ್ನು 'ವಾಗ್ಗೇಯಕಾರರು' ಎಂದು ಹೇಳಲಾಗುವುದು. ಯಾವನಿಗೆ ಸಂಗೀತ ಶಾಸ್ತ್ರವು ಸಂಪೂರ್ಣವಾಗಿ ಅವಗತವಿದ್ದು, ಬೇರೆಬೇರೆ ರಾಗ-ತಾಳಗಳಲ್ಲಿ ಗೀತಿಸಲು ಬರುವಂತೆ ಯಾವನು ಸಾಹಿತ್ಯ ಕೃತಿಗಳನ್ನು ಸ್ವತಃ ನಿರ್ಮಿಸಬಲ್ಲನೋ ಅವನೇ ವಾಗ್ಗೇಯಕಾರ. ಇಂತಹ ವಾಗ್ಗೇಯಕಾರರಿಂದ ರಚಿತವಾದ ಭಕ್ತಿರಸಪ್ರಧಾನ ಗೀತಗಳಿಗೆ 'ಕೀರ್ತನಗಳು' ಎಂದು ಹೆಸರು. ಕೇವಲ ದೈವಭಕ್ತಿ ರಸಪ್ರಧಾನ ಗೀತಗಳನ್ನು ಎಂದರೆ ಕೀರ್ತನಗಳನ್ನು ರಚಿಸಿದವರೇ ಕೀರ್ತನಕಾರರು. ಕರ್ನಾಟಕದಲ್ಲಿ ಇಂತಹ ಕೀರ್ತನಕಾರರು ಹಲವಾರು ಜನರು ಆಗಿಹೋಗಿದ್ದಾರೆ.

ದೈವಭಕ್ತಿಪ್ರಧಾನವಾದ ಗೀತಗಳಿಗೆ 'ಕೀರ್ತನ' ಎಂಬ ಹೆಸರು ಏಕೆ ಬಂದಿರಬಹುದೆಂಬುದೂ ವಿಚಾರಮಾಡಿ ತಿಳಿದುಕೊಳ್ಳಬೇಕಾದ ಸಂಗತಿಯಾಗಿದೆ; ಭಕ್ತಿಯ ಒಂಬತ್ತು ವಿಧಗಳಲ್ಲಿ 'ಕೀರ್ತನ' ಎಂಬುದು ಎರಡನೆಯ ವಿಧವಾಗಿ ಪರಿಗಣಿತವಾಗಿದೆ. 'ಕೀರ್ತನ' ಎಂದರೆ ಭಕ್ತನು ತನ್ನ ಇಷ್ಟ ದೈವತದ ಗುಣ, ಮಾಹಾತ್ಮ್ಯ, ಲೀಲೆಗಳನ್ನು ಕೀರ್ತಿಸುವುದು—ಎಂದರೆ ಹೊಗಳಿ ಹಾಡುವುದು. ಮಹಾಭಾಗವತರಾದ ಶ್ರೀ ಶುಕಾಚಾರ್ಯರು ಈ ಬಗೆಯ ಕೀರ್ತನಭಕ್ತಿಯಿಂದಲೇ ಜೀವನಸಿದ್ಧಿಯನ್ನು ಪಡೆದವರೆಂದು ಪ್ರಾಚೀನ ಭಕ್ತಿ ಗ್ರಂಥಗಳಲ್ಲಿ ಉಕ್ತವಾಗಿದೆ. ಪರಮಾತ್ಮನ ಗುಣ, ಮಾಹಾತ್ಮ್ಯ ಲೀಲೆಗಳನ್ನು ಹೊಗಳಿ ಹಾಡುವುದೆಂದರೆ, ಅದು ಕೇವಲ ಗದ್ಯದ ಮಾತುಗಳಿಂದ ಸಾಧ್ಯವಾಗದು, ಸುಂದರವೆನಿಸದು. ನಾದ-ಲಯಗಳಿಂದ ಕೂಡಿದ ಪದ್ಯಗೀತಗಳೇ ಅದಕ್ಕೆ ಅವಶ್ಯಕವಾಗಿರುವುವು. ಕೀರ್ತನಮಾರ್ಗದ ಭಕ್ತರು ಪರಮಾತ್ಮನನ್ನು 'ಗಾನಲೋಲ' ಎಂಬ ಶ್ರದ್ಧೆಯಿಂದ ಕಾಣುವರು. ಎಂತಲೇ ಆತನ ವಿಷಯಕವಾದ ಕೀರ್ತನವು ಗಾನವಾಗಿಯೆ ಪ್ರವಹಿಸುತ್ತಿರಬೇಕೆಂಬುದು ಅವರ ಆಂತರಂಗಿಕ ಅಪೇಕ್ಷೆಯಾಗಿರುತ್ತದೆ. ಕೀರ್ತನವು ಗಾನವಾಗಬೇಕಾದರೆ, ಗಾನದ ಮುಖ್ಯ ಲಕ್ಷಣವಾದ ಸ್ವರ-ಲಯಗಳಿಂದ ಅದು ಕೂಡಿರಬೇಕು; ಅಲ್ಲದೆ ಪರಮಾತ್ಮನ ಗುಣಮಾಹಾತ್ಮ್ಯಲೀಲಾಯುತವಾದ ಪದವಿನ್ಯಾಸಗಳಿಂದ ಕೂಡಿದುದಾಗಿರಬೇಕು. ಭಕ್ತನ ಭಾವನೆಯ ಆವಿರ್ಭಾವಕ್ಕೆ ಅನುಗುಣವಾದ ಸ್ವರಸಮ್ಮೇಳನ, ನರ್ತನಕ್ಕೆ ಅನುಗುಣವಾದ ತಾಳ, ಲಯ, ಭಾವವನ್ನು ಪ್ರಕಟಿಸಿ ತೋರಿಸಬಲ್ಲ ಅರ್ಥಗುಣ—ಇವುಗಳ ಒಗ್ಗೂಟನೇ 'ಕೀರ್ತನ' ಎನಿಸಿಕೊಳ್ಳುವುದು. ಈ ಮೂರರಲ್ಲಿ ಯಾವುದೇ ಒಂದಕ್ಕೆ ಚ್ಯುತಿಬಂದರೆ, ಅದು ಕೀರ್ತನವೆನಿಸಿಕೊಳ್ಳಲಾರದು.

ಭಕ್ತಿಮಾರ್ಗ ಬೆಳೆದು ಪರಿವರ್ಧನಗೊಂಡುದೇ ಕನ್ನಡ ನಾಡಿನಲ್ಲಿ—ಎಂಬ ಮಾತು ಭಕ್ತವಾಙ್ಮಯದಲ್ಲಿ ಜನಜನಿತವಾಗಿದೆ. ಭಕ್ತಿಯನ್ನು ತಳಹದಿಯನ್ನಾಗಿಟ್ಟುಕೊಂಡು ಹೊರಟ ಶ್ರೀ ಬಸವೇಶ್ವರರ ವೀರಶೈವ ಪಂಥವೂ, ಶ್ರೀ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಪಂಥವೂ, ಶ್ರೀ ಮಧ್ವಾಚಾರ್ಯರ ದ್ವೈತ ಪಂಥವೂ ಕನ್ನಡ ನಾಡನ್ನೇ ತಂತಮ್ಮ ಪ್ರಧಾನ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು, ಇಲ್ಲಿಯೆ ತೊಳಗಿ-ಬೆಳಗಿದುವು. ಶಿವಭಕ್ತರಿಗಿಂತ ವಿಷ್ಣುಭಕ್ತರು ಕೀರ್ತನ ಭಕ್ತಿಮಾರ್ಗಕ್ಕೆ ನಮ್ಮಲ್ಲಿ ಹೆಚ್ಚಿಗೆ ಮಹತ್ವವನ್ನು ಕೊಟ್ಟಿದ್ದಾರೆಂಬುದನ್ನು ಆ ಆ ಭಕ್ತಿಪಂಥಗಳ ಸಾಹಿತ್ಯ ಚರಿತ್ರೆಗಳಿಂದ ನಾವು ಚೆನ್ನಾಗಿ ಅರಿತುಕೊಳ್ಳಬಹುದು. ಭಕ್ತಿಪ್ರಧಾನ ಪಂಥವೇ ಆದ ವೀರಶೈವವು ಕರ್ನಾಟಕಕ್ಕೆ ಮೊದಲು ಬಂದುದಾದರೂ, ಆ ಪಂಥದ ಪುರಾತನರು ಕೀರ್ತನ ಭಕ್ತಿಮಾರ್ಗದ ಕಡೆಗೆ ಹೆಚ್ಚಾಗಿ ಒಲಿಯಲಿಲ್ಲವೆಂದು ತೋರುವುದು. ಎಂತಲೇ ಅವರು ತಾಳ ಲಯ ನಿಬದ್ಧವಾದ ಕೀರ್ತನಗಳನ್ನು ರಚಿಸದೆ, ಕೇವಲ ಭಾವ ಆರ್ಥಗಳಿಗೆ ಪ್ರಾಧಾನ್ಯ ಕೊಟ್ಟು, ಅನಿಬದ್ಧವಾದ ವಚನರಾಶಿಗಳನ್ನು ಸೃಷ್ಟಿಸಿದರು. ವೈಷ್ಣವ ಭಕ್ತಿಪಂಥಗಳಲ್ಲಿ ಶ್ರೀ ರಾಮಾನುಜರ ವಿಶಿಷ್ಟಾದ್ವೈತ ಪಂಥವು ಕರ್ನಾಟಕಕ್ಕೆ ಮೊದಲು

ಕಾಲಿಕ್ಕೆ ಕಾರ್ಯ ಮಾಡಿಕಾದರೂ, ಅದೂ ಕೀರ್ತನ ಭಕ್ತಿಮಾರ್ಗದ ಕಡೆಗೆ ಹೆಚ್ಚಾಗಿ ಲಕ್ಷ್ಯ ಕೊಟ್ಟಂತಿಲ್ಲ. ಇಷ್ಟೇ ಅಲ್ಲ. ವಿಶಿಷ್ಟಾದ್ವೈತ ಪಂಥವು ಪ್ರಾರಂಭ ಕಾಲದಲ್ಲಿ ಕರ್ನಾಟಕದಲ್ಲಿ ಸಾಹಿತ್ಯನಿರ್ಮಿತಿಯನ್ನೂ ಮಾಡಿದಂತಿಲ್ಲ. ಆದರೆ ಶ್ರೀ ಮಧ್ವಾಚಾರ್ಯರ ದ್ವೈತ ಮತವು ಕರ್ನಾಟಕದಲ್ಲಿ ಮುಖ ತೋರಿಸಿದ ಅಲ್ಪ ಕಾಲದಲ್ಲಿಯೇ, ಕೀರ್ತನ ಭಕ್ತಿಮಾರ್ಗವನ್ನು ಪ್ರಾರಂಭಿಸಿತೆಂಬುದು ಒಡೆದುಕಾಣುವುದು. ಏಕೆಂದರೆ ಕ್ರಿ. ಶ. ೧೩ನೆಯ ಶತಮಾನದಲ್ಲಿ ಬದುಕಿದ್ದ ಶ್ರೀ ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀ ನರಹರಿತೀರ್ಥರಿಂದ ರಚಿತವಾದ ಕೀರ್ತನಗಳು ಕನ್ನಡ ಸಾಹಿತ್ಯದಲ್ಲಿ ಉಪಲಬ್ಧವಿವೆ. ಇವು ರಾಗ ತಾಳ ನಿಬದ್ಧ ಸಾಹಿತ್ಯಕೃತಿಗಳಾಗಿರುವುದು ವಿಶೇಷ. ಆದುದರಿಂದಲೇ ಕರ್ನಾಟಕದ ಕೀರ್ತನಕಾರರಲ್ಲಿ ಮೊದಲನೆಯ ಸ್ಥಾನದ ಪಟ್ಟ ಶ್ರೀ ನರಹರಿತೀರ್ಥರಿಗೆ ಸಲ್ಲುತ್ತದೆ.

ಶ್ರೀ ನರಹರಿತೀರ್ಥರ ತರುವಾಯ ೧೫ನೆಯ ಶತಮಾನದ ಕೊನೆಯ ವರೆಗೆ ನಮಗೆ ಯಾವ ಕೀರ್ತನಕಾರರ ಹೆಸರೂ ಕೃತಿಯೂ ಸಿಕ್ಕುವುದಿಲ್ಲ. ನರಹರಿತೀರ್ಥರ ಒಂದು ಕೀರ್ತನದಲ್ಲಿ 'ವಾಣಿನಲ್ಲಿ ಹರಿದಾಸತನ, ನೀತಿಯಲ್ಲಿ ಬಲು ವ್ಯಾಥತನ' ಎಂಬ ಮಾತು ಇರುವುದನ್ನು ನೋಡಿದರೆ, ಹರಿದಾಸಪರಂಪರೆ ಅವರಿಗಿಂತ ಮೊದಲಿನಿಂದಲೂ ನಡೆದುಕೊಂಡುಬಂದಿರಬಹುದೆನಿಸುವುದು. ಆದರೆ ಅವರಿಗಿಂತ ಮೊದಲಿನವು ಭೇದ; ಅವರ ತರುವಾಯ ಸುಮಾರು ಇನ್ನೂರು ವರ್ಷಗಳ ವರೆಗೂ ಹರಿದಾಸಪರಂಪರೆಯ ಇನ್ನಾರ ಕೀರ್ತನಗಳೂ ಸಿಕ್ಕುವುದಿಲ್ಲ. 'ಅಚಲಾನಂದ' ಎಂಬ ಹೆಸರಿನ ಕೀರ್ತನಕಾರರೊಬ್ಬರು ಬಹಳ ಹಿಂದಿನ ಕಾಲದಲ್ಲಿ ಆಗಿಹೋಗಿರುವರೆಂದು ಒಬ್ಬಿಬ್ಬರು ಹೇಳಿಕೆ. ಆದರೆ ಅವರ ಕೀರ್ತನಗಳ ರಚನೆ ಭಾಷಾ ಶೈಲಿಗಳನ್ನು ನೋಡಿದರೆ, ಅಷ್ಟು ಹಿಂದಿನ ಕಾಲಕ್ಕೆ ಅವರನ್ನು ಸೇರಿಸುವುದು ಯೋಗ್ಯವಲ್ಲವೆಂದೂ ಬಹಳ ಜನ ಸಂಶೋಧಕರ ಅಭಿಪ್ರಾಯವಿದೆ. ಅಚಲಾನಂದರ ನಿಶ್ಚಿತಕಾಲ ಗೊತ್ತಿಲ್ಲವಾದುದರಿಂದ, ೧೫೦೦ರಿಂದ ೧೫೦೦ರ ಮಧ್ಯದ ಕಾಲದ ಕೀರ್ತನಕಾರರಲ್ಲಿ ಅವರೊಬ್ಬ ಜ್ಞಾತಕೀರ್ತನಕಾರರೆಂದು ಹೇಳಬಹುದು. ಏಕೆಂದರೆ 'ಅಚಲಾನಂದ ವಿಠಲ' ಎಂಬ ಅಂಕಿತದಿಂದ ಇವರ ಅನೇಕ ಕೀರ್ತನಗಳೂ ಉಗಾಭೋಗಗಳೂ ಸಿಕ್ಕಿರುತ್ತವೆ.

ಹದಿನೈದನೆಯ ಶತಮಾನದ ಕೊನೆಯ ಭಾಗದಲ್ಲಿ, ಕೀರ್ತನಕಾರರಲ್ಲಿ ನಮಗೆ ಮೊಧಲನೆಯ ಹೆಸರು ದೊರೆಯುವುದೆಂದರೆ ಶ್ರೀ ಶ್ರೀಪಾದರಾಯರದು. ಇವರು 'ರಂಗವಿಠಲ' ಎಂಬ ಅಂಕಿತವನ್ನಿಟ್ಟುಕೊಂಡು ಅನೇಕ ಕೀರ್ತನಗಳನ್ನೂ ಸುಳಾದಿಗಳನ್ನೂ ರಚಿಸಿದ್ದಾರೆ. ದಕ್ಷಿಣದೇಶದ ಸಂಗೀತಕಾರರು ಈಗಲೂ ಇವರ ಕೃತಿಗಳನ್ನು ಬೇಕಾದಷ್ಟು ಹಾಡುತ್ತಾರೆ. ಇವರು ಮುಳುಬಾಗಲದಲ್ಲಿಯ ಒಂದು ವೈಷ್ಣವಮಠದಲ್ಲಿ ಸ್ವಾಮಿಗಳಾಗಿದ್ದರಲ್ಲದೆ, ಹರಿದಾಸಕೂಟ ಪಂಥಕ್ಕೆ ಪುನರುಜ್ಜೀವನ ಕೊಟ್ಟ ಶ್ರೀ ವ್ಯಾಸರಾಯರಿಗೆ ವಿದ್ಯಾಗುರುಗಳಾಗಿದ್ದರು. ಆದುದರಿಂದಲೇ ದಾಸಕೂಟಕ್ಕೆ ಸೇರಿದವರು ತಮ್ಮ ಗುರುಪರಂಪರೆಯನ್ನು ಹೇಳುವಾಗ,

" ನಮಃಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ
ನಮಃ ಪುರಂದರಾರ್ಯಾಯ ವಿಜಯರಾಜಾಯ ತೇ ನಮಃ "

ಎಂಬುದಾಗಿ ಶ್ರೀಪಾದರಾಯರಿಗೆ ಮೊದಲನೆಯ ಸೀಮಾಪುರುಷನ ಮನ್ನಣೆಯ ಸ್ಥಾನವನ್ನು ಕೊಟ್ಟು ಹೇಳುವರು. ಇವರಿಂದ ಮುಂದೆ ಕರ್ನಾಟಕದಲ್ಲಿ ಕೀರ್ತನಕಾರರ ಬಳಗ ದಿನದಿನಕ್ಕೆ ಬೆಳೆಯುತ್ತ ಹೋಯಿತೆಂದು ಹೇಳಬಹುದು. ಇದಕ್ಕೆ ಕಾರಣವೆಂದರೆ ವಿಷ್ಣುಭಕ್ತಿಯಲ್ಲಿ ಅಪಾರ ಶ್ರದ್ಧೆಯನ್ನಿಟ್ಟುಕೊಂಡು ಕರ್ನಾಟಕದಲ್ಲಿ ಆಡಳಿತ ನಡೆಯಿಸಿದ ವಿಜಯನಗರದ ವೈಭವಶಾಲಿ ಸಾಮ್ರಾಜ್ಯ; ಆ ಸಾಮ್ರಾಜ್ಯಪಟ್ಟದ ಮೇಲೆ ಅಧಿಷ್ಠಿತರಾಗಿ ಕುಳಿತ ಆಸ್ತಿಕ ಶಿರೋಮಣಿ, ವಿದ್ವತ್ ಪಕ್ಷಪಾತಿ ಶ್ರೀ ಕೃಷ್ಣದೇವರಾಯನ ಸಂಸ್ಕೃತಿ ಸಂಪೂರ್ಣ ವ್ಯಕ್ತಿತ್ವ; ಅವನಿಗೆ ಗುರುಗಳಾಗಿ ನಿಂತು ಕುಹುಯೋಗವನ್ನು ತಪ್ಪಿಸಿ, ಅತನ ಅತಿಶಯ ಭಕ್ತ್ಯಾದರಗಳಿಗೆ ಪಾತ್ರರಾದ ಶ್ರೀ ವ್ಯಾಸಯೋಗಿಗಳ ಕಾರ್ಯಕೌಶಲ. ಸಾಮ್ರಾಜ್ಯದಲ್ಲಿ ದೊರೆತ ಗೌರವಪದದ ಮೂಲಕ ಶ್ರೀ ವ್ಯಾಸಯೋಗಿಗಳಿಗೆ ದಾಸಕೂಟವನ್ನು ಸುಸಂಘಟಿತಗೊಳಿಸಲಿಕ್ಕೆ ಯೋಗ್ಯ ಸಂಧಿ ದೊರೆಯಿತು. ಈ ಕಾರಣದಿಂದಲೆ ರಾಜಧಾನಿ ವಿಜಯನಗರದಲ್ಲಿ ಸೋದೆಮಠದ

ಕರ್ನಾಟಕದ ಕೀರ್ತನಕಾರರು

ಶ್ರೀ ಬಿಟಗೇರಿ ಕೃಷ್ಣಶರ್ಮ, ಧಾರವಾಡ

●

ಭಕ್ತಿಯೋಗಕ್ಕೂ ಸಂಗೀತಕ್ಕೂ ತುಂಬ ಸಾಮರಸ್ಯದ ಸಂಬಂಧ. ಎಂತಲೇ ಭಕ್ತಿಪ್ರಧಾನ ಕರ್ನಾಟಕದಲ್ಲಿ ಬೆಳೆದು ಬಾಳಿದ ಭಕ್ತಶಿರೋಮಣಿಗಳು, ಸಂಗೀತಪ್ರಪಂಚದ ಸಂವರ್ಧನೆಗೂ ಕಾರಣರಾಗಿ ನಿಂತಿದ್ದಾರೆ.

●

'ಕೀರ್ತನಕಾರರು' ಎಂಬ ಮಾತು, ಈಗ ನಮ್ಮ ನಾಡಿನಲ್ಲಿ ಹೆಚ್ಚಾಗಿ 'ಹರಿಕಥೆ ಇಲ್ಲವೆ ಶಿವಕಥೆಗಳ ಕಾಲಕ್ಷೇಪ ಮಾಡುವ ಉದ್ಯಮದವರು'— ಎಂಬ ಅರ್ಥದಲ್ಲಿ ಬಳಕೆಯಲ್ಲಿದೆ. ಆದರೆ ನಾನೀಗ ಮಾತನಾಡಬೇಕಾದುದು ಇಂತಹ ಕೀರ್ತನಕಾರರನ್ನು ಕುರಿತು ಅಲ್ಲ. ಸಂಗೀತದ ಪರಿಭಾಷೆಯಲ್ಲಿ 'ಕೀರ್ತನ' ಅಥವಾ 'ಕೃತಿ' ಎಂಬುದಾಗಿ ಯಾವ ಭಕ್ತಿಗೀತಗಳಿಗೆ ಹೇಳುತ್ತಾರೋ, ಆ ಭಕ್ತಿಗೀತಗಳನ್ನು ಕನ್ನಡ ಭಾಷೆಯಲ್ಲಿ ರಚಿಸಿದ ಕೀರ್ತನಕಾರರನ್ನು ಕುರಿತು ವಿವರಿಸಲಿದ್ದೇನೆ. ಸಂಗೀತ ಪ್ರಪಂಚದ ಪರಿಭಾಷೆಯಲ್ಲಿ ಇಂತಹ ಕೀರ್ತನಕಾರರನ್ನು 'ವಾಗ್ಗೇಯಕಾರರು' ಎಂದು ಹೇಳಲಾಗುವುದು. ಯಾವನಿಗೆ ಸಂಗೀತ ಶಾಸ್ತ್ರವು ಸಂಪೂರ್ಣವಾಗಿ ಅವಗತವಿದ್ದು, ಬೇರೆಬೇರೆ ರಾಗ-ತಾಳಗಳಲ್ಲಿ ಗೀತಿಸಲು ಬರುವಂತೆ ಯಾವನು ಸಾಹಿತ್ಯ ಕೃತಿಗಳನ್ನು ಸ್ವತಃ ನಿರ್ಮಿಸಬಲ್ಲನೋ ಅವನೇ ವಾಗ್ಗೇಯಕಾರ. ಇಂತಹ ವಾಗ್ಗೇಯಕಾರರಿಂದ ರಚಿತವಾದ ಭಕ್ತಿರಸಪ್ರಧಾನ ಗೀತಗಳಿಗೆ 'ಕೀರ್ತನಗಳು' ಎಂದು ಹೆಸರು. ಕೇವಲ ದೈವಭಕ್ತಿ ರಸಪ್ರಧಾನ ಗೀತಗಳನ್ನು ಎಂದರೆ ಕೀರ್ತನ-ಗಳನ್ನು ರಚಿಸಿದವರೇ ಕೀರ್ತನಕಾರರು. ಕರ್ನಾಟಕದಲ್ಲಿ ಇಂತಹ ಕೀರ್ತನಕಾರರು ಹಲವಾರು ಜನರು ಆಗಿಹೋಗಿದ್ದಾರೆ.

ದೈವಭಕ್ತಿಪ್ರಧಾನವಾದ ಗೀತಗಳಿಗೆ 'ಕೀರ್ತನ' ಎಂಬ ಹೆಸರು ಏಕೆ ಬಂದಿರಬಹುದೆಂಬುದೂ ವಿಚಾರಮಾಡಿ ತಿಳಿದುಕೊಳ್ಳಬೇಕಾದ ಸಂಗತಿಯಾಗಿದೆ; ಭಕ್ತಿಯ ಒಂಬತ್ತು ವಿಧಗಳಲ್ಲಿ 'ಕೀರ್ತನ' ಎಂಬುದು ಎರಡನೆಯ ವಿಧವಾಗಿ ಪರಿಗಣಿತವಾಗಿದೆ. 'ಕೀರ್ತನ' ಎಂದರೆ ಭಕ್ತನು ತನ್ನ ಇಷ್ಟ ದೈವತದ ಗುಣ, ಮಾಹಾತ್ಮ್ಯ, ಲೀಲೆ-ಗಳನ್ನು ಕೀರ್ತಿಸುವುದು—ಎಂದರೆ ಹೊಗಳಿ ಹಾಡುವುದು. ಮಹಾ ಭಾಗವತರಾದ ಶ್ರೀ ಶುಕಾಚಾರ್ಯರು ಈ ಬಗೆಯ ಕೀರ್ತನಭಕ್ತಿ ಯಿಂದಲೇ ಜೀವನಸಿದ್ಧಿಯನ್ನು ಪಡೆದವರೆಂದು ಪ್ರಾಚೀನ ಭಕ್ತಿ, ಗ್ರಂಥಗಳಲ್ಲಿ ಉಕ್ತವಾಗಿದೆ. ಪರಮಾತ್ಮನ ಗುಣ, ಮಾಹಾತ್ಮ್ಯ, ಲೀಲೆಗಳನ್ನು ಹೊಗಳಿ ಹಾಡುವುದೆಂದರೆ, ಅದು ಕೇವಲ ಗದ್ಯದ ಮಾತುಗಳಿಂದ ಸಾಧ್ಯವಾಗದು, ಸುಂದರವೆನಿಸದು. ನಾದ-ಲಯ ಗಳಿಂದ ಕೂಡಿದ ಪದ್ಯಗೀತಗಳೇ ಅದಕ್ಕೆ ಅವಶ್ಯಕವಾಗಿರುವುವು. ಕೀರ್ತನಮಾರ್ಗದ ಭಕ್ತರು ಪರಮಾತ್ಮನನ್ನು 'ಗಾನಲೋಲ' ಎಂಬ ಶ್ರದ್ಧೆಯಿಂದ ಕಾಣುವರು. ಎಂತಲೇ ಅತನ ವಿಷಯಕವಾದ ಕೀರ್ತನವು ಗಾನವಾಗಿಯೆ ಪ್ರವಹಿಸುತ್ತಿರಬೇಕೆಂಬುದು ಅವರ ಆಂತ-ರಂಗಿಕ ಅಪೇಕ್ಷೆಯಾಗಿರುತ್ತದೆ. ಕೀರ್ತನವು ಗಾನವಾಗಬೇಕಾದರೆ, ಗಾನದ ಮುಖ್ಯ ಲಕ್ಷಣವಾದ ಸ್ವರ-ಲಯಗಳಿಂದ ಅದು ಕೂಡಿರ-ಬೇಕು; ಅಲ್ಲದೆ ಪರಮಾತ್ಮನ ಗುಣಮಾಹಾತ್ಮ್ಯಲೀಲಾಯುತವಾದ ಪದಗಳಿಂದ ಕೂಡಿದುದಾಗಿರಬೇಕು. ಭಕ್ತನ ಭಾವನೆಯ ಆವಿರ್ಭಾವಕ್ಕೆ ಅನುಗುಣವಾದ ಸ್ವರಸಮ್ಮೇಳನ, ನರ್ತನಕ್ಕೆ ಅನುಗುಣವಾದ ತಾಳ, ಲಯ, ಭಾವವನ್ನು ಪ್ರಕಟಿಸಿ ತೋರಿಸಬಲ್ಲ ಅರ್ಥಗುಣ—ಇವುಗಳ ಒಗ್ಗೂಟವೇ 'ಕೀರ್ತನ' ಎನಿಸಿಕೊಳ್ಳುವುದು. ಈ ಮೂರರಲ್ಲಿ ಯಾವುದೇ ಒಂದಕ್ಕೆ ಚ್ಯುತಿಬಂದರೆ, ಅದು ಕೀರ್ತನವೆನಿಸಿಕೊಳ್ಳಲಾರದು.

ಭಕ್ತಿಮಾರ್ಗ ಬೆಳೆದು ಪರಿವರ್ಧನಗೊಂಡುದೇ ಕನ್ನಡ ನಾಡಿ-ನಲ್ಲಿ—ಎಂಬ ಮಾತು ಭಕ್ತವಾಙ್ಮಯದಲ್ಲಿ ಜನಜನಿತವಾಗಿದೆ. ಭಕ್ತಿ ಯನ್ನು ತಳಹದಿಯನ್ನಾಗಿಟ್ಟುಕೊಂಡು ಹೊರಟ ಶ್ರೀ ಬಸವೇಶ್ವರರ ವೀರಶೈವ ಪಂಥವೂ, ಶ್ರೀ ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಪಂಥವೂ, ಶ್ರೀ ಮಧ್ವಾಚಾರ್ಯರ ದ್ವೈತ ಪಂಥವೂ ಕನ್ನಡ ನಾಡನ್ನೇ ತಂತಮ್ಮ ಪ್ರಧಾನ ಕಾರ್ಯಕ್ಷೇತ್ರವನ್ನಾಗಿ ಮಾಡಿ ಕೊಂಡು, ಇಲ್ಲಿಯೆ ತೊಳಗಿ-ಬೆಳಗಿದುವು. ಶಿವಭಕ್ತರಿಗಿಂತ ವಿಷ್ಣು ಭಕ್ತರು ಕೀರ್ತನ ಭಕ್ತಿಮಾರ್ಗಕ್ಕೆ ನಮ್ಮಲ್ಲಿ ಹೆಚ್ಚಿಗೆ ಮಹತ್ವ ವನ್ನು ಕೊಟ್ಟಿದ್ದಾರೆಂಬುದನ್ನು ಆ ಆ ಭಕ್ತಿಪಂಥಗಳ ಸಾಹಿತ್ಯ ಚರಿತ್ರೆಗಳಿಂದ ನಾವು ಚೆನ್ನಾಗಿ ಅರಿತುಕೊಳ್ಳಬಹುದು. ಭಕ್ತಿ ಪ್ರಧಾನ ಪಂಥವೇ ಆದ ವೀರಶೈವವು ಕರ್ನಾಟಕಕ್ಕೆ ಮೊದಲ ಬಂದುದಾದರೂ, ಆ ಪಂಥದ ಪುರಾತನರು ಕೀರ್ತನ ಭಕ್ತಿಮಾರ್ಗದ ಕಡೆಗೆ ಹೆಚ್ಚಾಗಿ ಒಲೆಯಲಿಲ್ಲವೆಂದು ತೋರುವುದು. ಎಂತಲೆ ಅವರು ತಾಳ ಲಯ ನಿಬದ್ಧವಾದ ಕೀರ್ತನಗಳನ್ನು ರಚಿಸದೆ, ಕೇವಲ ಭಾವ ಅರ್ಥಗಳಿಗೆ ಪ್ರಾಧಾನ್ಯ ಕೊಟ್ಟು, ಅನಿಬದ್ಧವಾದ ವಚನ ರಾಶಿಗಳನ್ನು ಸೃಷ್ಟಿಸಿದರು. ವೈಷ್ಣವ ಭಕ್ತಿಪಂಥಗಳಲ್ಲಿ ಶ್ರೀ ರಾಮಾನುಜರ ವಿಶಿಷ್ಟಾದ್ವೈತ ಪಂಥವು ಕರ್ನಾಟಕಕ್ಕೆ ಮೊದಲ

ಕಾಲಿಕ್ಕೆ ಕಾರ್ಯ ಮಾಡಿತಾದರೂ, ಅದೂ ಕೀರ್ತನ ಭಕ್ತಿಮಾರ್ಗದ ಕಡೆಗೆ ಹೆಚ್ಚಾಗಿ ಲಕ್ಷ್ಯ ಕೊಟ್ಟಂತಿಲ್ಲ. ಇಷ್ಟೇ ಅಲ್ಲ. ವಿಶಿಷ್ಟಾದ್ವೈತ ಪಂಥವು ಪ್ರಾರಂಭ ಕಾಲದಲ್ಲಿ ಕರ್ನಾಟಕದಲ್ಲಿ ಸಾಹಿತ್ಯನಿರ್ಮಿತಿಯನ್ನೂ ಮಾಡಿದಂತಿಲ್ಲ. ಆದರೆ ಶ್ರೀ ಮಧ್ವಾಚಾರ್ಯರ ದ್ವೈತ ಮತವು ಕರ್ನಾಟಕದಲ್ಲಿ ಮುಖ ತೋರಿಸಿದ ಅಲ್ಪ ಕಾಲದಲ್ಲಿಯೇ, ಕೀರ್ತನ ಭಕ್ತಿಮಾರ್ಗವನ್ನು ಪ್ರಾರಂಭಿಸಿತೆಂಬುದು ಒಡೆದುಕಾಣುವುದು. ಏಕೆಂದರೆ ಕ್ರಿ. ಶ. ೧೩ನೆಯ ಶತಮಾನದಲ್ಲಿ ಬದುಕಿದ್ದ ಶ್ರೀ ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀ ನರಹರಿತೀರ್ಥರಿಂದ ರಚಿತವಾದ ಕೀರ್ತನಗಳು ಕನ್ನಡ ಸಾಹಿತ್ಯದಲ್ಲಿ ಉಪಲಬ್ಧವಿವೆ. ಇವು ರಾಗ ತಾಳ ನಿಬದ್ಧ ಸಾಹಿತ್ಯಕೃತಿಗಳಾಗಿರುವುದು ವಿಶೇಷ. ಆದುದರಿಂದಲೇ ಕರ್ನಾಟಕದ ಕೀರ್ತನಕಾರರಲ್ಲಿ ಮೊದಲನೆಯ ಸ್ಥಾನದ ಪಟ್ಟ ಶ್ರೀ ನರಹರಿತೀರ್ಥರಿಗೆ ಸಲ್ಲುತ್ತದೆ.

ಶ್ರೀ ನರಹರಿತೀರ್ಥರ ತರುವಾಯ ೧೫ನೆಯ ಶತಮಾನದ ಕೊನೆಯ ವರೆಗೆ ನಮಗೆ ಯಾವ ಕೀರ್ತನಕಾರರ ಹೆಸರೂ ಕೃತಿಯೂ ಸಿಕ್ಕುವುದಿಲ್ಲ. ನರಹರಿತೀರ್ಥರ ಒಂದು ಕೀರ್ತನದಲ್ಲಿ 'ವಾತಿನಲ್ಲಿ ಹರಿದಾಸತನ, ನೀತಿಯಲ್ಲಿ ಬಲು ಪ್ರೌಢತನ' ಎಂಬ ಮಾತು ಇರುವುದನ್ನು ನೋಡಿದರೆ, ಹರಿದಾಸಪರಂಪರೆ ಅವರಿಗಿಂತ ಮೊದಲಿನಿಂದಲೂ ನಡೆದುಕೊಂಡುಬಂದಿರಬಹುದೆನಿಸುವುದು. ಆದರೆ ಅವರಿಗಿಂತ ಮೊದಲಿನವು ಬೇಡ; ಅವರ ತರುವಾಯ ಸುಮಾರು ಇನ್ನೂರು ವರ್ಷಗಳ ವರೆಗೂ ಹರಿದಾಸಪರಂಪರೆಯ ಇನ್ನಾರ ಕೀರ್ತನಗಳೂ ಸಿಕ್ಕುವುದಿಲ್ಲ. 'ಅಚಲಾನಂದ' ಎಂಬ ಹೆಸರಿನ ಕೀರ್ತನಕಾರರೊಬ್ಬರು ಬಹಳ ಹಿಂದಿನ ಕಾಲದಲ್ಲಿ ಆಗಿಹೋಗಿರುವರೆಂದು ಒಬ್ಬಿಬ್ಬರ ಹೇಳಿಕೆ. ಆದರೆ ಅವರ ಕೀರ್ತನಗಳ ರಚನೆ ಭಾಷಾಶೈಲಿಗಳನ್ನು ನೋಡಿದರೆ, ಅಷ್ಟು ಹಿಂದಿನ ಕಾಲಕ್ಕೆ ಅವರನ್ನು ಸೇರಿಸುವುದು ಯೋಗ್ಯವಲ್ಲವೆಂದೂ ಬಹಳ ಜನ ಸಂಶೋಧಕರ ಅಭಿಪ್ರಾಯವಿದೆ. ಅಚಲಾನಂದರ ನಿಶ್ಚಿತಕಾಲ ಗೊತ್ತಿಲ್ಲವಾದುದರಿಂದ, ೧೫೦೦ರಿಂದ ೧೫೫೦ರ ಮಧ್ಯದ ಕಾಲದ ಕೀರ್ತನಕಾರರಲ್ಲಿ ಅವರೊಬ್ಬ ಜ್ಞಾತಕೀರ್ತನಕಾರರೆಂದು ಹೇಳಬಹುದು. ಏಕೆಂದರೆ 'ಅಚಲಾನಂದ ವಿಠಲ' ಎಂಬ ಅಂಕಿತದಿಂದ ಇವರ ಅನೇಕ ಕೀರ್ತನಗಳೂ ಉಗಾಭೋಗಗಳೂ ಸಿಕ್ಕಿರುತ್ತವೆ.

ಹದಿನೈದನೆಯ ಶತಮಾನದ ಕೊನೆಯ ಭಾಗದಲ್ಲಿ, ಕೀರ್ತನಕಾರರಾಗಿ ನಮಗೆ ಮೊಧಲನೆಯ ಹೆಸರು ದೊರೆಯುವುದೆಂದರೆ ಶ್ರೀ ಶ್ರೀಪಾದರಾಯರದು. ಇವರು 'ರಂಗವಿಠಲ' ಎಂಬ ಅಂಕಿತವನ್ನಿಟ್ಟುಕೊಂಡು ಅನೇಕ ಕೀರ್ತನಗಳನ್ನೂ ಸುಳಾದಿಗಳನ್ನೂ ರಚಿಸಿದ್ದಾರೆ. ದಕ್ಷಿಣದೇಶದ ಸಂಗೀತಕಾರರು ಈಗಲೂ ಇವರ ಕೃತಿಗಳನ್ನು ಬೇಕಾದಷ್ಟು ಹಾಡುತ್ತಾರೆ. ಇವರು ಮುಳುಬಾಗಲದಲ್ಲಿಯ ಒಂದು ವೈಷ್ಣವಮಠದಲ್ಲಿ ಸ್ವಾಮಿಗಳಾಗಿದ್ದರಲ್ಲದೆ, ಹರಿದಾಸಕೂಟ ಪಂಥಕ್ಕೆ ಪುನರುಜ್ಜೀವನ ಕೊಟ್ಟ ಶ್ರೀ ವ್ಯಾಸರಾಯರಿಗೆ ವಿದ್ಯಾಗುರುಗಳಾಗಿದ್ದರು. ಆದುದರಿಂದಲೇ ದಾಸಕೂಟಕ್ಕೆ ಸೇರಿದವರು ತಮ್ಮ ಗುರುಪರಂಪರೆಯನ್ನು ಹೇಳುವಾಗ,

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

"ನಮಃಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ
ನಮಃ ಪುರಂದರಾರ್ಯಾಯ ವಿಜಯರಾಜಾಯ ತೇ ನಮಃ"

ಎಂಬುದಾಗಿ ಶ್ರೀವಾದರಾಯರಿಗೆ ಮೊದಲನೆಯ ಸೀಮಾಪುರುಷನ ಮನ್ನಣೆಯ ಸ್ಥಾನವನ್ನು ಕೊಟ್ಟು ಹೇಳುವರು. ಇವರಿಂದ ಮುಂದೆ ಕರ್ನಾಟಕದಲ್ಲಿ ಕೀರ್ತನಕಾರರ ಬಳಗ ದಿನದಿನಕ್ಕೆ ಬೆಳೆಯುತ್ತ ಹೋಯಿತೆಂದು ಹೇಳಬಹುದು. ಇದಕ್ಕೆ ಕಾರಣವೆಂದರೆ ವಿಷ್ಣುಭಕ್ತಿಯಲ್ಲಿ ಅಪಾರ ಶ್ರದ್ಧೆಯನ್ನಿಟ್ಟುಕೊಂಡು ಕರ್ನಾಟಕದಲ್ಲಿ ಆಡಳಿತ ನಡೆಯಿಸಿದ ವಿಜಯನಗರದ ವೈಭವಶಾಲಿ ಸಾಮ್ರಾಜ್ಯ; ಆ ಸಾಮ್ರಾಜ್ಯಪಟ್ಟದ ಮೇಲೆ ಅಧಿಪತಿಯಾಗಿ ಕುಳಿತ ಆಸ್ತಿಕ ಶಿರೋಮಣಿ, ವಿದ್ವತ್ ಪಕ್ಷಪಾತಿ ಶ್ರೀ ಕೃಷ್ಣದೇವರಾಯನ ಸಂಸ್ಕೃತಿ ಸಂಪೂರ್ಣ ವ್ಯಕ್ತಿತ್ವ; ಅವನಿಗೆ ಗುರುಗಳಾಗಿ ನಿಂತು ಕುಹಯೋಗವನ್ನು ತಪ್ಪಿಸಿ, ಅತನ ಅತಿಶಯ ಭಕ್ತ್ಯಾದರಗಳಿಗೆ ಪಾತ್ರರಾದ ಶ್ರೀ ವ್ಯಾಸಯೋಗಿಗಳ ಕಾರ್ಯಕೌಶಲ. ಸಾಮ್ರಾಜ್ಯದಲ್ಲಿ ದೊರೆತ ಗೌರವಪದದ ಮೂಲಕ ಶ್ರೀ ವ್ಯಾಸಯೋಗಿಗಳಿಗೆ ದಾಸಕೂಟವನ್ನು ಸುಸಂಘಟಿತಗೊಳಿಸಲಿಕ್ಕೆ ಯೋಗ್ಯ ಸಂಧಿ ದೊರೆಯಿತು. ಈ ಕಾರಣದಿಂದಲೆ ರಾಜಧಾನಿ ವಿಜಯನಗರದಲ್ಲಿ ಸೋದೆಮಠದ

ಶ್ರೀ ವಾದಿರಾಜರು, ಶ್ರೀ ಪುರಂದರದಾಸರು, ಕಾಗಿನೆಲೆಯ ಕನಕದಾಸರು, ಬೇಲೂರ ವೈಕುಂಠದಾಸರು ಇವರಂತಹ ಭಕ್ತಶಿರೋಮಣಿಗಳು ಬಂದು ಬಂದು ನಿಂತುಕೊಂಡರು. ಇದರ ಪರಿಣಾಮವಾಗಿ ಕನ್ನಡದಲ್ಲಿ ಭಕ್ತಿರಸಪ್ರಪೂರ್ಣ ಸಾಹಿತ್ಯನಿರ್ಮಿತಿಯೂ ಆಯಿತು. ಕರ್ನಾಟಕ ಸಂಗೀತವು ಕಳೆವೆತ್ತು ದಿಗ್ವಿಜಯ ಮಾಡಲು ಸಮರ್ಥವಾಗುವಂತಹ ಕೀರ್ತನ ರಾಶಿಗಳಿಂದ ತುಂಬಿಹೋಯಿತು. ಅಂದಿನ ವಿಜಯನಗರದ ಸಂಗೀತಗಾರರು ತಮ್ಮ ಸಂಗೀತ ಪ್ರದರ್ಶನ ಕಾಲದಲ್ಲಿ ಭಕ್ತಿರಸ ವಾಹಿನಿಗಳಂತಿರುವ ಈ ದಾಸಶ್ರೇಷ್ಠರ ಕೃತಿಗಳನ್ನೆ ಹಾಡಲು ತೊಡಗಿರಬಹುದು.

ಹದಿನಾರನೆಯ ಶತಮಾನದ ೨ನೆಯ ೩ನೆಯ ದಶಕಗಳು ಶ್ರೀ ವ್ಯಾಸಯೋಗೀಂದ್ರರ ಪ್ರಭಾವದ ಕಾಲ. 'ಶ್ರೀಕೃಷ್ಣ' ಎಂಬ ಅಂಕಿತದಿಂದ ಇವರು ಅನೇಕ ಕೀರ್ತನಗಳನ್ನು ರಚಿಸಿದ್ದಾರಲ್ಲದೆ ಶ್ರೀ ಪುರಂದರ–ಕನಕರಿಗೆ ಗುರುಗಳಾಗಿ ಅಂಕಿತವನ್ನು ದಯಪಾಲಿಸಿ ದಾಸಕೂಟದ ದೀಕ್ಷೆಯನ್ನು ಕೊಟ್ಟು, ಕೀರ್ತನ ರಚನೆಗೆ ಪ್ರಚೋದಕರಾಗಿ ನಿಂತರು. ಶ್ರೀ ವಾದಿರಾಜರು ಕನ್ನಡದಲ್ಲಿ ಹಲವಾರು ಕೀರ್ತನ–ಸುಳಾದಿ ಉಗಾಭೋಗಗಳನ್ನು ರಚಿಸುವುದಕ್ಕೆ ಶ್ರೀ ವ್ಯಾಸಯೋಗೀಂದ್ರರ ಸಹವಾಸ, ಸಖಕಾರಗಳೇ ಕಾರಣವಾಗಿರಬಹುದು. ಪುರಂದರದಾಸರು ಕನ್ನಡದಲ್ಲಿ ೪೭೫೦೦ ಕೃತಿಗಳನ್ನು ರಚಿಸಿದ್ದಾರೆಂದು ಪ್ರತೀತಿಯಿದೆ. ಇದನ್ನು ನಂಬಲಾರದವರೂ ಅವರ ಅಸಂಖ್ಯ ಅಗಣಿತ ಕೃತಿಗಳನ್ನು ನೋಡಿ ವಿಸ್ಮಯಮುಗ್ಧರಾಗುವಂತಿದೆ. ಶ್ರೀ ಪುರಂದರದಾಸರು ಬದುಕಿ ಬಾಳಿದ ಕಾಲವೆಂದರೆ, ಕರ್ನಾಟಕ ಸಂಗೀತದ ಉಚ್ಛ್ರಾಯ ಕಾಲ. ರಸಿಕರಿಂದ ತುಂಬಿದ ವಿಜಯನಗರದಲ್ಲಿ ಸಂಗೀತವಿದ್ಯೆಗೆ ತುಂಬ ಮನ್ನಣೆಯಿದ್ದಿತಲ್ಲದೆ ಆ ಶಾಸ್ತ್ರ ವಿಚಾರದಲ್ಲಿ ಸಂಶೋಧನೆಗಳೂ ನಡೆಯುತ್ತಲಿದ್ದುವು. ಶ್ರೀ ಪುರಂದರದಾಸರು ಭಕ್ತಕವಿಗಳಾಗಿದ್ದರಿಷ್ಟೇ ಅಲ್ಲ; ಸಂಗೀತಶಾಸ್ತ್ರ ಪ್ರವೀಣರೂ ಸಂಶೋಧಕರೂ ಆಗಿದ್ದರು. ಆದುದರಿಂದಲೇ ಪುರಂದರದಾಸರು ಪ್ರಯತ್ನಪಟ್ಟು, ತಮ್ಮದೇ ಆದ ರೀತಿಯಲ್ಲಿ ಕರ್ನಾಟಕ ಸಂಗೀತಕ್ಕೊಂದು ಹೊಸ ವ್ಯವಸ್ಥೆಯನ್ನು ಹಾಕಿಕೊಟ್ಟರೆಂದು ಹೇಳುತ್ತಾರೆ. ಇವರು ತಮ್ಮ ಕೃತಿರಚನೆಯಲ್ಲಿ ಭಕ್ತಿಗೊಂದಕ್ಕೇ ಅಲ್ಲದೆ ಸ್ವರ–ಲಯಗಳ ಕಡೆಗೂ ವಿಶೇಷ ಲಕ್ಷ್ಯವನ್ನು ಕೊಟ್ಟು, ತಮ್ಮ ಅನೇಕ ಕೀರ್ತನಗಳಲ್ಲಿ ಸಂಗೀತಶಾಸ್ತ್ರದಲ್ಲಿ ಲಕ್ಷಣ ಗೀತಗಳಾಗಿ ನಿಲ್ಲುವಂತಹ ಸಾಮರ್ಥ್ಯವನ್ನು ತುಂಬಿಬಿಟ್ಟಿದ್ದಾರೆ. ದಕ್ಷಿಣ ದೇಶದ ಇಂದಿನ ಸಂಗೀತಗಾರರೆಲ್ಲ ಪುರಂದರದಾಸರನ್ನು ಆದ್ಯ ಗುರುಗಳನ್ನಾಗಿ ಮನ್ನಿಸುತ್ತಾರೆ. ದಕ್ಷಿಣದಲ್ಲಿ ಆಂಧ್ರ ದೇಶಕ್ಕೆ ಹೋಗಿ ನೋಡಿರಿ, ದ್ರಾವಿಡ ದೇಶಕ್ಕೆ ಹೋಗಿ ನೋಡಿರಿ; ಕೇರಳದಲ್ಲಿ ಹೋಗಿ ನೋಡಿರಿ; ಎಲ್ಲ ಕಡೆಯ ಸಂಗೀತಗಾರರಿಗೂ ಪುರಂದರದಾಸರು ಪರಿಚಿತರಾಗಿರುವರು. ಏಕೆಂದರೆ ಈ ದಾಸರ ಕೀರ್ತನಗಳನ್ನು ಪ್ರಾರಂಭದಲ್ಲಿ ಕಲಿಯದೆ, ಅವರ ಸಂಗೀತಾಭ್ಯಾಸವೇ ಮುಂದುವರಿಯುವುದಿಲ್ಲ. ಭಕ್ತಿಪ್ರಪಂಚದಂತೆ ಸಂಗೀತಾಕಾಶದಲ್ಲಿಯೂ ಶ್ರೀಪುರಂದರದಾಸರು ತೊಳಗುವ ಸೂರ್ಯನಂತಿದ್ದಾರೆ. ಇವರ ಮಕ್ಕಳು ನಾಲ್ವರೂ ಆಪ್ತೆ! ತಂದೆಯ ಕೃತಿಯಂತೆ ಅಭಿನ್ನವೆಂದು ತೋರುವಷ್ಟು ಇವರ ಕೀರ್ತನಗಳೂ ನಿರ್ದುಷ್ಟಭಕ್ತಿ—ಗೇಯಸಾಮರ್ಥ್ಯಗಳಿಂದ ಕೂಡಿಕೊಂಡಿವೆ.

ಪುರಂದರದಾಸರ ಸಮಕಾಲೀನರೂ ಸಹಚಾರಿಗಳೂ ಆದ ಕನಕದಾಸರು ಸಂಗೀತವಿದರೆಂದು ಸುಪ್ರಸಿದ್ಧಿ ಪಡೆದಿರದಿದ್ದರೂ ಇವರೂ ಗೇಯಯೋಗ್ಯವಾದ ಅನೇಕ ಕೀರ್ತನಗಳನ್ನು ರಚಿಸಿದ್ದಾರೆ. ಇದೇ ಕಾಲದಲ್ಲಿ ಜೀವಿಸಿದ್ದ ಬೇಲೂರಿನ ವೈಕುಂಠದಾಸರು, ವಿಶಿಷ್ಟಾದ್ವೈತಿಗಳಾದರೂ ದ್ವೈತನಿಷ್ಠ ದಾಸಕೂಟದ ಪ್ರಭಾವಕ್ಕೆ ಒಳಗಾಗಿ, ಭಕ್ತಿರಸಭರಿತವಾದ ನೂರಾರು ಕೀರ್ತನಗಳನ್ನು ರಚಿಸಿದ್ದಾರೆ. ಹದಿನಾರನೆಯ ಶತಮಾನಕ್ಕೆ ಸೇರಿದ ಈ ಎಲ್ಲ ದಾಸರನ್ನೂ ಕರ್ನಾಟಕದ ವಾಗ್ಗೇಯಕಾರರ ಮಾಲಿಕೆಯಲ್ಲಿ ಪೋಣಿಸಿ ಹೇಳಬಹುದು.

೧೫೬೫ರಲ್ಲಿ ವಿಜಯನಗರದ ಕನ್ನಡ ಸಾಮ್ರಾಜ್ಯ ಹಾಳಾಯಿತು. ಅದರೊಂದಿಗೆ ಕರ್ನಾಟಕದ ಜ್ಞಾನ–ಸಂಸ್ಕೃತಿ–ವಿದ್ಯೆಗಳಿಗೆ ನಿಲ್ಲಲು ನೆಲೆಯಿಲ್ಲದೆ ಹೋಯಿತು. ಎಂತಲೇ ವಿಜಯನಗರದ ವಿದ್ಯಾನಿಪುಣರು ಎಲ್ಲೆಲ್ಲಿಗೆ ಅಜ್ಞಾತರಾಗಿ ಹೋಗಿಬಿಟ್ಟರೇನೊ! ಆದುದರಿಂದಲೇ ಕ್ರಿ. ಶ. ೧೭ನೆಯ ಶತಮಾನದ ಕೊನೆಕೊನೆಯ ಭಾಗದಲ್ಲಿ ಸುಪ್ರಸಿದ್ಧಿಗೆ ಬಂದ ಶ್ರೀ ವಿಜಯದಾಸರ ವರೆಗೂ ಬೇರೆ ಯಾವ ಕೀರ್ತನಕಾರರ ಹೆಸರೂ ಕಂಡುಬರುವುದಿಲ್ಲ. ವಿಜಯ

ಭಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ ನೀಲ ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರಿಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ ಜೀವಿನಿ ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ

ಅಜೀರ್ಣ ವಿಕಾರಗಳಿಗೆ ಪಂಚವಟಿ ರಾಮಬಾಣ

ಸದ್ವೈದ್ಯ ಶಾಲಾ, ನಂಜನಗೂಡು.

ನಂಜನಗೂಡು ಟೂತ್ ಪೌಡರು, ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ.

ದಾಸರೂ ಒಳ್ಳೆಯ ಕೀರ್ತನಕಾರರು. ಇವರ ಕೀರ್ತನೆ-ಸುಳಾದಿ ಉಗಾಭೋಗಗಳು ಸಂಗೀತಗಾರರಿಗೆ ನಿಜವಾಗಿಯೂ ಗೇಯ ಯೋಗ್ಯವಾಗಿವೆ. ಪುರಂದರರ ಸಾಕ್ಷಾತ್ ಶಿಷ್ಯರೆಂದೇ ಪವಾಡ ವನ್ನು ಮೆರೆಯಿಸಿದ ಈ ದಾಸರು, ಪುರಂದರದಾಸರ ಐದು ಲಕ್ಷ ಕೃತಿಗಳಿಗೆ ಕಡಿಮೆಬಿದ್ದ ೨೫೦೦೦ ಕೃತಿಗಳನ್ನು ಬರೆದು ಪೂರ್ಣ ಗೊಳಿಸಿರುವರೆಂಬ ಆಖ್ಯಾಯಿಕೆ ದಾಸಕೂಟದ ಪರಂಪರೆಯಲ್ಲಿದೆ. ಇವರ ಶಿಷ್ಯರಾದ ಭಾಗಣ್ಣದಾಸರು ಅಥವಾ ಗೋಪಾಲದಾಸರು, ತಿಮ್ಮಣ್ಣದಾಸರು, ಮೋಹನದಾಸರು—ಇವರೂ ಸಮರ್ಥರಾದ ಕೀರ್ತನಕಾರರು. ಕನ್ನಡ ಸಂಗೀತಗಾರರ ಬಾಯಿಂದ ಇವರ ಕೃತಿ ಗಳನ್ನು ಬೇಕಾದಷ್ಟು ಕೇಳಬಹುದು.

೧೫ನೆಯ ಶತಮಾನದ ಕನ್ನಡಸಾಹಿತ್ಯದಲ್ಲಿ ವೀರಶೈವ ಭಕ್ತರೂ ಕೆಲವರು ಆಗಾಗ ಶಿವಭಕ್ತಿಪರ ಹಾಡುಗಳನ್ನು ರಚಿಸುತ್ತ ಬಂದುದು ನೋಡಲು ಸಿಕ್ಕುವುದು. ಈ ಬಗೆಯ ಹಾಡುಗಾರರಲ್ಲಿ ನಿಜಗುಣಶಿವಯೋಗಿಗಳು ಮುಪ್ಪಿನ ಷಡಕ್ಷರಿ ಇವರು ಸುಪ್ರಸಿದ್ಧರು. ಸಮಾಜದಲ್ಲಿಯ ಶಿವಭಜನೆಗಳಲ್ಲಿ ಇವರ ಶಿವಕೀರ್ತನಗಳು ಪುರ ಸ್ಕೃತವಾದುವಾದರೂ, ಅದೇಕೋ ಏನೋ, ಶಾಸ್ತ್ರೀಯ ಸಂಗೀತ ಗಾರರಿಂದ ಅಂದಿನ ಕಾಲದಲ್ಲಿ ಪುರಸ್ಕೃತವಾದಂತೆ ಕಾಣುವುದಿಲ್ಲ. ಆದರೆ ಗೇಯಯೋಗ್ಯತೆಯ ದೃಷ್ಟಿಯಿಂದ ವೈಷ್ಣವದಾಸರ ಕೀರ್ತನ ಗಳಿಗಿಂತ ಈ ಶಿವಭಕ್ತರ ಕೀರ್ತನಗಳು ಯಾವ ಮಟ್ಟದಲ್ಲಿಯೂ ಕಡಿಮೆಯಾಗಿಲ್ಲ. ಸಂಖ್ಯೆಯಲ್ಲಿ ಮಾತ್ರ ತೀರ ಕಡಿಮೆಯಾಗಿರುವುವು.

ಮಂತ್ರಾಲಯ ಮಠದಲ್ಲಿ ಮಾಹಾತ್ಮ್ಯವನ್ನು ಮೆರೆಯಿಸಿದ ಶ್ರೀ ರಾಘವೇಂದ್ರ ಸ್ವಾಮಿಗಳು ಸ್ವತಃ ವೀಣಾವಾದನ ನಿಪುಣರಾಗಿದ್ದ ರಲ್ಲದೆ, ಅವರಿಂದ ರಚಿತವಾದುದೆಂದು ಹೇಳುವ ಒಂದೇ ಒಂದು ಕೀರ್ತನ: 'ಇಂದು ಎನಗೆ ಶ್ರೀ ಗೋವಿಂದ' ಎಂಬುದನ್ನು ನಮ್ಮ ಲ್ಲಿಯ ಅನೇಕ ಸಂಗೀತಗಾರರು ಹಾಡುತ್ತಾರೆ.

ಹದಿನೇಳನೆಯ ಶತಮಾನದ ಕೊನೆಯ ಭಾಗದಲ್ಲಿ ಬಾಗಿಲು ಕೋಟೆ ನಾಡಿನಲ್ಲಿದ್ದು ವೈಷ್ಣವಭಕ್ತಿಯನ್ನು ಪ್ರವಹಿಸಲು ಹಚ್ಚಿದ ಶ್ರೀ ಪ್ರಸನ್ನವೆಂಕಟದಾಸರೂ, ೧೮ನೆಯ ಶತಮಾನದ ಮಧ್ಯದಲ್ಲಿ ರಾಯಚೂರು ಜಿಲ್ಲೆಯ ಬ್ಯಾಗವಟ್ಟದಲ್ಲಿದ್ದು ಭಕ್ತಿಧ್ವಜವನ್ನು ಕನ್ನಡ ನಾಡಿನಲ್ಲಿ ಮೆರೆಯಿಸಿದ ಶ್ರೀ ಜಗನ್ನಾಥದಾಸರೂ ಶ್ರೇಷ್ಠ ರಾದ ಕೀರ್ತನಕಾರರು. ಇವರಿಬ್ಬರೂ ಕರ್ನಾಟಕದ ಸಂಗೀತಸಾಹಿತ್ಯ ಕ್ಷೇತ್ರಗಳಿಗೆರಡಕ್ಕೂ ಜೀವಕಳೆ ತುಂಬಿದ ವಾಗ್ಗೇಯಕಾರರು. ಜಗನ್ನಾಥದಾಸರ ಪರಂಪರೆಯಲ್ಲಿ ಸುಂದರ ವಿಠಲ, ಶ್ರೀಪತಿ ವಿಠಲ, ರಘುಪತಿ ವಿಠಲ, ಹನುಮೇಶ ವಿಠಲ, ಪ್ರಾಣೇಶ ವಿಠಲ, ಕಮಲೇಶ ವಿಠಲ, ಶ್ರೀಧರ ವಿಠಲ, ವಾಸುದೇವ ವಿಠಲ ಎಂಬುದಾಗಿ ಅಂಕಿತ ಗಳನ್ನಿಟ್ಟುಕೊಂಡ ಅನೇಕ ಹರಿದಾಸರು ತಂತಮ್ಮ ರೀತಿಯಲ್ಲಿ ಕೀರ್ತನಗಳನ್ನು ರಚಿಸಿದ್ದಾರೆ. ಇವೆಲ್ಲ ಗೇಯಯೋಗ್ಯವಾಗಿವೆ.

ಕಳೆದ ಶತಮಾನದಲ್ಲಿಯೆ ಬದುಕಿ ಬಾಳಿದ ಹಲವು ಹಿರಿ ಕೀರ್ತನಕಾರರೂ ನಮಗೆ ಸಿಕ್ಕುವರು. ಇವರಲ್ಲಿ ತುಂಬ ಲೋಕ ಪ್ರೀತಿಯನ್ನು ಪಡೆದವರೆಂದರೆ ಕಾಖಂಡಿಕೆಯ ಶ್ರೀ ಮಹಿಪತಿದಾಸರು ಮತ್ತು ಗೋಕಾವಿ ಅನಂತಾಚಾರ್ಯರು. ಇವರು ಅನೇಕ ಕೀರ್ತನ ಗಳನ್ನು ರಚಿಸಿದ್ದಾರೆ. ಇಷ್ಟೇ ಅಲ್ಲ; ಶ್ರೀ ಅನಂತಾಚಾರ್ಯರು ಶಾಸ್ತ್ರಶುದ್ಧವಾಗಿ ಹಾಡಿಹೇಳಲು ಬರುವಂತೆ 'ವೆಂಕಟೇಶ ಪಾರಿಜಾತ' 'ಶಿವಪಾರಿಜಾತ' 'ಧ್ರುವಚರಿತ್ರ' 'ಪ್ರಹ್ಲಾದಚರಿತ್ರ' ಮೊದಲಾದ ಸುಂದರ ಗೀತಕಾವ್ಯಗಳನ್ನು ರಚಿಸಿದ್ದಾರೆ. ಐಹೊಳೆಯ ವೆಂಕಪ್ಪಾಚಾರ್ಯರೂ, ಬಳ್ಳಾರಿಯ ವೆಂಕಪ್ಪಾಚಾರ್ಯರೂ, 'ಇಂದಿ ರೇಶ' ಎಂಬ ಅಂಕಿತವಿಟ್ಟುಕೊಂಡು ಕೀರ್ತನಗಳನ್ನು ರಚಿಸುತ್ತಲಿದ್ದ ದಿವಂಗತ ಪಾಂಡುರಂಗಿ ಹುಚ್ಚಾಚಾರ್ಯರೂ ಕಳೆದ ಶತಮಾನದ ಸಮರ್ಥರಾದ ವಾಗ್ಗೇಯಕಾರರು, ಎಂದರೆ ಕೀರ್ತನಕಾರರು. ಇವರ ಕೃತಿಗಳು ಶಾಸ್ತ್ರಶುದ್ಧ ಸಂಗೀತದಲ್ಲಿ ಹೇಳುವ ನಾದ-ಲಯ-ಸಾಹಿತ್ಯ ಶಕ್ತಿಗಳಿಂದ ಕೂಡಿಕೊಂಡಿವೆ. ಹೊಸ ಕನ್ನಡ ನಾಡಿನ ಸಂಗೀತಗಾರರು, ಅಂದಿನಿಂದಲೂ ಇಂದಿನವರೆಗಾದ ಕನ್ನಡ ಕೀರ್ತನಕಾರರ ಕೀರ್ತನಗಳನ್ನು ಹೆಚ್ಚು ಹೆಚ್ಚಾಗಿ ಪರಿಚಯ ಮಾಡಿ ಕೊಂಡು, ಅಭಿಜಾತಗೇಯಪದ್ಧತಿಯಲ್ಲಿ ಅವುಗಳನ್ನು ಹೊಂದಿಸಿ ಕೊಳ್ಳುವುದರ ಅವಶ್ಯಕತೆ ಇಂದು ತುಂಬ ಇದೆ.

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

(ಸಂಪಾದಕರು: ಶ್ರೀ. ಪಿ. ವೆಂಕೋಬಾಚಾರ್ಯ)

ಈ ವರುಷ ಪ್ರಕಟವಾದ ಪುಸ್ತಕಗಳು

ರುಕ್ಮಿಣಿ ಮತ್ತು ಕಾಂತಂ	೨-೦-೦
ಮೋಪಾಸಾನ ಓಲೆಗಳು	೨-೦-೦
ಮುಡಿಯದ ಹೂ (ಮೋಪಾಸಾನ ಕತೆಗಳು)	೧-೮-೦

ಈ ಎಲ್ಲ ಪುಸ್ತಕಗಳಿಗೆ ವಾರ್ಷಿಕ ಚಂದಾ ಹಣ ಕೇವಲ ರೂ. ೬-೮-೦

೬೦೬೨ ಗವಳೀಗಲ್ಲಿ
ಹುಬ್ಬಳ್ಳಿ

ಪಿ. ವಿ. ಆಚಾರ್ಯ ಅ್ಯಂಡ್ ಕಂ.
ಸಂಚಾಲಕರು

ಜಾನ್ ಡಾಲ್ಟನ್

(೧೭೬೬—೧೮೪೪)

(ಜೀವನವೃತ್ತ)

ಶ್ರೀ ವೆಂಕೋಬಾಚಾರ್ಯ ಉಪಾಧ್ಯಾಯ, ಎಂ. ಎಸ್‌ಸಿ.
ಹೈದರಾಬಾದ್

●

ಪ್ರಸಿದ್ಧ ವಿಜ್ಞಾನಿಗಳಾದ ಡಾಲ್ಟನ್‌ರು ಆಗರ್ಭಶ್ರೀಮಂತರಾಗಿ ಹುಟ್ಟಲಿಲ್ಲ. ಬಡತನದಲ್ಲಿಯೆ ಹುಟ್ಟಿ, ಬಡತನದಲ್ಲಿಯೇ ಬೆಳೆದು, ತಮ್ಮ ಕರ್ತೃತ್ವಶಕ್ತಿ-ಸಂಶೋಧನೆಗಳಿಂದ, ವಿಜ್ಞಾನಪ್ರಪಂಚದಲ್ಲಿ ಮಹತ್ತ್ವದ ಸ್ಥಾನ ಪಡೆದುಕೊಂಡರು.

ಜಾನ್ ಡಾಲ್ಟನ್ ಅವರು ಕಂಬರ್‌ಲ್ಯಾಂಡಿನಲ್ಲಿರುವ ಈಗಲ್ಸ್‌ಫೀಲ್ಡ್ ಎಂಬ ಊರಲ್ಲಿ ೧೭೬೬ ರಲ್ಲಿ ಹುಟ್ಟಿದರು. ಇವರ ಮನೆತನ ಸಾಮಾನ್ಯವಾಗಿತ್ತು. ಇದು ಬಡತನದ ಮನೆತನ. ಅವರ ತಂದೆ ಜೋಸಫ್ ಡಾಲ್ಟನ್ ಅವರು ನೇಕಾರರಾಗಿದ್ದರು. ಡಾಲ್ಟನ್ ಅವರ ಶಿಕ್ಷಣವು ಅವರ ವಯಸ್ಸಿನ ೧೧ನೆಯ ವರ್ಷದ ವರೆಗೆ ಅವರಿದ್ದ ಹಳ್ಳಿಯ ಮತ್ತು ಸುತ್ತುಮುತ್ತಲಿನ ಹಳ್ಳಿಗಳ ಶಾಲೆಯಲ್ಲಿ ನಡೆಯಿತು. ಈ ಅವಧಿಯಲ್ಲಿ ಅವರು ಕ್ಷೇತ್ರಗಣಿತ, ಭೂಮಿ ಅಳೆಯುವುದು, ಹಡಗು ನಡೆಸುವುದು ಮುಂತಾದುವುಗಳಲ್ಲಿ ಸಾಮಾನ್ಯವಾದ ತಿಳಿವಳಿಕೆಯನ್ನು ಉಂಟುಮಾಡಿಕೊಂಡರು.

ಮನೆತನದ ಸ್ಥಿತಿ ನೆಟ್ಟಗಿಲ್ಲದೆ ಇದ್ದುದರಿಂದ ಡಾಲ್ಟನ್ ಅವರು, ತಮ್ಮ ೧೨ನೆಯ ವಯಸ್ಸಿನಲ್ಲಿಯೇ ತಮ್ಮ ತಂದೆಯ ಉದ್ಯಾಣದಲ್ಲಿ ಚಿಕ್ಕ ಮಕ್ಕಳ ಸಲುವಾಗಿ ಒಂದು ಶಾಲೆಯನ್ನು ತೆಗೆದರು. ಮೂರು ವರ್ಷಗಳ ವರೆಗೆ ಈ ಶಾಲೆಯಲ್ಲಿ ಕೆಲಸ ಮಾಡಿದ ಅನಂತರ, ಅವರು ತಮ್ಮ ಹುಟ್ಟಿದ ಹಳ್ಳಿಯನ್ನು ಬಿಟ್ಟು ಅಲ್ಲಿಂದ ೪೦ ಮೈಲುಗಳಲ್ಲಿರುವ ಕೆಂಡಾಲ್ ಎಂಬ ಊರಿನ ಶಾಲೆಯಲ್ಲಿ ಸೇರಿಕೊಂಡರು. ಈ ಶಾಲೆಯಲ್ಲಿ ಅವರು ಅಧ್ಯಾಪಕರಂತೆ ೧೫ ವರ್ಷಗಳ ವರೆಗೆ ಕೆಲಸ ಮಾಡಿದರು. ಈ ಅವಧಿಯಲ್ಲಿ ಅವರು ಮನೆಯಲ್ಲಿಯೇ ಬಹಳ ಪರಿಶ್ರಮ ಪಟ್ಟು ಗಣಿತದ ವಿಷಯವನ್ನು ಅಭ್ಯಾಸ ಮಾಡಿ, ಒಬ್ಬ ದೊಡ್ಡ ಗಣಿತ ಶಾಸ್ತ್ರಜ್ಞರಾದರು. ಅಲ್ಲದೆ ಅದೇ ವೇಳೆಯಲ್ಲಿ ನ್ಯೂಟನ್ ಮತ್ತು ಇತರ ವಿಜ್ಞಾನಿಗಳು ಮಾಡುತ್ತಿದ್ದ ಕೆಲಸದ ಕಡೆಗೆ ಮನಸ್ಸು ಹಾಕಿದರು.

ತಮ್ಮ ೨೭ನೆಯ ವಯಸ್ಸಿನಲ್ಲಿ ಡಾಲ್ಟನ್ ಅವರು ಆ ಶಾಲೆಯನ್ನು ಬಿಟ್ಟು ಮ್ಯಾಂಚೆಸ್ಟರಿನಲ್ಲಿರುವ ಮ್ಯಾಂಚೆಸ್ಟರ್ ಕಾಲೇಜಿನಲ್ಲಿ ಅಧ್ಯಾಪಕರಾದರು. ಇಲ್ಲಿ ಅವರಿಗೆ ಒಂಭತ್ತು ತಿಂಗಳಿಗೊಮ್ಮೆ ೬೦ ಪೌಂಡು ವೇತನ ಸಿಕ್ಕುತ್ತಿತ್ತು. ಆರು ವರ್ಷಗಳ ವರೆಗೆ ಅವರು ಈ ಕಾಲೇಜಿನಲ್ಲಿ ಖಾಸಗಿ ಶಿಕ್ಷಕರಂತೆ ಗಣಿತ ಮತ್ತು ತತ್ತ್ವಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳನ್ನು ಬೋಧಿಸುತ್ತ ಸೇವೆ ಮಾಡಿದರು. ಅನಂತರ ನೌಕರಿಯನ್ನು ಬಿಟ್ಟು, ಖಾಸಗಿ ರೀತಿಯಿಂದ ಪಾಠಗಳನ್ನು ಹೇಳಿ ಜೀವನವನ್ನು ಸಾಗಿಸಿ, ತಮ್ಮ ಇಡಿಯ ವೇಳೆಯನ್ನು ವೈಜ್ಞಾನಿಕ ವಿಚಾರಗಳಲ್ಲಿ ಕಳೆದರು. ಇದೇ ವೇಳೆಯಲ್ಲಿ ಅವರು ಗಾಳಿಯ ಸಂಯೋಜನೆ ಮತ್ತು ಅನಿಲಗಳ ರಚನೆಯ ಬಗ್ಗೆ ಪ್ರಯೋಗಗಳನ್ನು ನಡೆಸಿ "ಅನಿಲಗಳ ಉಷ್ಣಪ್ರಸರಣದ ನಿಯಮ" ವನ್ನು ಕಂಡುಹಿಡಿದರು. ದ್ರವಗಳಲ್ಲಿ ಅನಿಲಗಳ ಹೀರುವಿಕೆಯ ವಿಷಯವಾಗಿ ಸಂಶೋಧನೆ ನಡೆಸಿ, "ಆಪೂರ್ಣ ಒತ್ತಡದ ನಿಯಮ"ವನ್ನು ಸ್ಪಷ್ಟೀಕರಿಸಿದರು. ಅಲ್ಲದೆ ಗಾಳಿಯ ವಿರುದ್ಧ ಮುಖವಾಗಿ ಒತ್ತುವುದರ ಮೂಲಕ ಅನಿಲಗಳನ್ನು ಕಾಯಿಸಬಹುದೆಂದೂ ಪ್ರಸರಣ ಮೂಲಕ ತಣ್ಣಗೆ ಮಾಡಬಹುದೆಂದೂ ತೋರಿಸಿಕೊಟ್ಟರು.

೧೮೦೦ರಲ್ಲಿ ಡಾಲ್ಟನ್ ಅವರು ಮ್ಯಾಂಚೆಸ್ಟರಿನ ಲಿಟರರಿ ಮತ್ತು ಫಿಲಸಾಫಿಕಲ್ ಸಂಸ್ಥೆಯ ಕಾರ್ಯದರ್ಶಿಗಳಾಗಿ ಕೆಲಸಮಾಡಿ, ಹದಿನಾರು ವರ್ಷಗಳ ಅನಂತರ ಅದೇ ಸಂಸ್ಥೆಯ ಅಧ್ಯಕ್ಷರಾದರು. ಮತ್ತು ಕೊನೆಯ ವರೆಗೂ ಅಧ್ಯಕ್ಷರಾಗಿ ಆ ಸಂಸ್ಥೆಗೆ ತಮ್ಮ ಸೇವೆಯನ್ನು ಸಲ್ಲಿಸಿದರು. ಈಗಲೂ ಕೂಡ ಆ ಸಂಸ್ಥೆಯಲ್ಲಿ ಡಾಲ್ಟನ್ ಅವರ ಕೈಬರೆಹಗಳನ್ನು ಕಾಣಿಡಲಾಗಿದೆ. ಇದೇ ಸಂಸ್ಥೆ ಅವರ ಅನೇಕ ವೈಜ್ಞಾನಿಕ ಪ್ರಬಂಧಗಳನ್ನು ಪ್ರಕಟಿಸಿದೆ.

ಡಾಲ್ಟನ್ ಅವರಿಗೆ ಪರಮಾಣುವಿನ ಅಸ್ತಿತ್ವದಲ್ಲಿ ಮೊದಲಿನಿಂದಲೂ ನಂಬಿಗೆಯಿತ್ತು. ಪದಾರ್ಥದ ರಚನೆಗೂ ಅದರ ಸ್ಥಿತ್ಯಂತರಗಳಿಗೂ, ಅದರಲ್ಲಿರುವ ಅತಿ ಸೂಕ್ಷ್ಮ ಕಣಗಳೇ ಕಾರಣವೆಂದು ಅವರಿಗೆ ಗೊತ್ತಿದ್ದಿತು. ನ್ಯೂಟನ್‌ನಿಂದ ಸೂಚಿಸಲಾದ ಪದಾರ್ಥದ ಪರಮಾಣುಸ್ವರೂಪದ ನಿರ್ದಿಷ್ಟ ವಿಚಾರಗಳೂ ಇದರ ಜೊತೆಗೆ ಸೇರಿಕೊಂಡಿದ್ದುವು. ಇವೆಲ್ಲವುಗಳ ಸಾರವನ್ನು ಬೆರಸಿ ಪದಾರ್ಥದ ರಚನೆಯ ವಿಷಯವಾಗಿ ಕೆಲವು ವಿಷಯಗಳನ್ನು ಒಂದು ತತ್ತ್ವದ ರೂಪದಲ್ಲಿ ಡಾಲ್ಟನ್ ಅವರು ನಿರೂಪಿಸಿದರು. ಈ ತತ್ತ್ವಕ್ಕೆ "ಡಾಲ್ಟನಿನ ಪರಮಾಣುತತ್ತ್ವ" ಎಂದು ಹೆಸರು. ಪರಮಾಣು ತತ್ತ್ವದ ಮುಖ್ಯಾಂಶಗಳು ಕೆಳಗಿನಂತಿವೆ:

(೧) ಪದಾರ್ಥವು ಅತಿ ಸೂಕ್ಷ್ಮವಾದ ಅಸಂಖ್ಯಾತ ಕಣಗಳಿಂದ ರಚಿತವಾದುದು. ಇಂಥ ಕಣಗಳಿಗೆ "ಪರಮಾಣುಗಳು" ಎಂದು ಹೆಸರು. ಪರಮಾಣು ಎಂಬ ಶಬ್ದಕ್ಕೆ ಇಂಗ್ಲೀಷಿನಲ್ಲಿ "Atom" ಎಂದು ಹೆಸರು. 'Atom' ಎಂದರೆ ಅವಿಭಾಜ್ಯ. ಕಣಗಳು ವಿಭಜಿಸಲಾರದುವುಗಳಾಗಿರುತ್ತವೆಂದೇ ಅವುಗಳಿಗೆ ಹೀಗೆ ಹೆಸರಿಸಲಾಯಿತು.

(೨) ಪ್ರತಿಯೊಂದು ತೆರದ ಪರಮಾಣುವಿನ ತೂಕ ನಿರ್ದಿಷ್ಟ ಮತ್ತು ನಿಯತ ಪ್ರಮಾಣದಲ್ಲಿರುತ್ತದೆ.

(೩) ಒಂದೇ ಮೂಲವಸ್ತುವಿನ ಎಲ್ಲ ಪರಮಾಣುಗಳು ಪರಸ್ಪರ ಸಾಮ್ಯವುಳ್ಳವೂ ಆದರೆ ಇತರ ಮೂಲ ವಸ್ತುಗಳಿಂದ ವಿಷಮವೂ ಆಗಿರುತ್ತವೆ.

(೪) ರಾಸಾಯನಿಕ ಕ್ರಿಯೆ ಪರಮಾಣುಗಳ ನಡುವೆ ನಡೆಯುತ್ತದೆ.

ಡಾಲ್ಟನ್ ಅವರ ತತ್ತ್ವ ಪ್ರತಿಯೊಂದು ದೃಷ್ಟಿಯಿಂದ ದೋಷಯುಕ್ತವಿದೆಯೆಂದೂ, ಭೌತಿಕವಿಜ್ಞಾನದಲ್ಲಿ ಇತ್ತೀಚೆಗೆ ಆದ ಬೆಳೆವಣಿಗೆಯ ಮೂಲಕ ಅವರ ಮೊದಲಿನ ಎರಡು ಕಲ್ಪನೆಗಳು ತಮ್ಮ ಬಲವನ್ನು ಕಳೆದುಕೊಂಡಿವೆಯೆಂದೂ ತಿಳಿದು ಬಂದಿದೆ. ಆದರೂ ಡಾಲ್ಟನ್ ಅವರ ಪರಮಾಣುಗಳು ರಾಸಾಯನಿಕ ವಿಜ್ಞಾನದಲ್ಲಿ ಪದಾರ್ಥದ ರಚನೆ ಮತ್ತು ರಾಸಾಯನಿಕ ವಸ್ತುಗಳ ನಡುವೆ ಆಗುವ ಕ್ರಿಯೆಯನ್ನು ಶೋಧಿಸಿಕೊಡುವಲ್ಲಿ ಈಗಲೂ ಉಪಯೋಗವಾಗುತ್ತವೆ.

ಪರಮಾಣು ತತ್ತ್ವದ ಆಧಾರದ ಮೇಲೆ ಡಾಲ್ಟನ್ ಅವರು 'ಪದಾರ್ಥವು ನಷ್ಟವಾಗುವುದೂ ಇಲ್ಲ, ಸೃಷ್ಟವಾಗುವುದೂ ಇಲ್ಲ' ಎಂಬುದನ್ನು ತೋರಿಸಿಕೊಟ್ಟರು. ಪರಮಾಣು ತತ್ತ್ವಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ೧೮೦೮ ರಲ್ಲಿ "ನಿವ್ ಸಿಸ್ಟಮ್ ಆಫ್ ಕೆಮಿಕಲ್ ಫಿಲಾಸಫಿ" ಯ ಮೊದಲನೆಯ ಭಾಗದಲ್ಲಿ ಅವರು ಪ್ರಕಟಿಸಿದರು. ಪರಮಾಣು ಮತ್ತು ರಾಸಾಯನಿಕ ಸಂಯುಕ್ತಗಳ ರಚನೆಯನ್ನು ರೇಖಾಚಿತ್ರದ ಮೂಲಕ ತೋರಿಸುವುದಕ್ಕಾಗಿ ಡಾಲ್ಟನ್ ಅವರು ಒಂದು ಸಂಕೇತ ಪದ್ಧತಿಯನ್ನು ರಚಿಸಿದರು. ಮತ್ತು ಬೇರೆ ಬೇರೆ ತೆರದ ಮೂಲವಸ್ತುಗಳ ಸಾಪೇಕ್ಷ ಪರಮಾಣು ತೂಕಗಳ ಸಲುವಾಗಿ ಮೌಲ್ಯಗಳನ್ನು ಕಂಡುಹಿಡಿದರು.

ಹೀಗೆ ಡಾಲ್ಟನ್ ಅವರ ತತ್ತ್ವದ ಎಲ್ಲ ಮುಖ್ಯಸಿದ್ಧಾಂತಗಳು ಪ್ರಾಯೋಗಿಕ ಆಧಾರಗಳಿಗೆ ಸಂಪೂರ್ಣ ಹೊಂದಿಕೊಂಡುವು. ಆ ತತ್ತ್ವವು ಶೀಘ್ರದಲ್ಲಿಯೇ ಸರ್ವಮಾನ್ಯತೆಯನ್ನು ಪಡೆಯಿತು. ವಿಜ್ಞಾನ ಪ್ರಪಂಚವು ಆ ತತ್ತ್ವದ ಪ್ರಖ್ಯಾತ ಪ್ರಸ್ಥಾಪಕರಾದ ಡಾಲ್ಟನ್ ಅವರಿಗೆ ಗೌರವವನ್ನು ಸಲ್ಲಿಸಲು ಆತುರದಿಂದ ಮುಂದೆ ಬಂದಿತು. ೧೮೨೬ ರಲ್ಲಿ ರಾಯಲ್ ಸೊಸೈಟಿ ಅವರನ್ನು 'ಫೆಲೊ' ಎಂದು ಆರಿಸಿತು. ೧೮೩೦ ರಲ್ಲಿ ಫ್ರೆಂಚ್ ವಿಜ್ಞಾನಸಮಿತಿ ಪಾಶ್ಚಿಮಾತ್ಯ ವಿಜ್ಞಾನಪ್ರಪಂಚದಲ್ಲಿ ಎಲ್ಲಕ್ಕೂ ಹೆಚ್ಚಿನ ಗೌರವವೆಂದು ಸರ್ವಸಾಮಾನ್ಯವಾಗಿ ಪರಿಗಣಿಸಲಾದ "ಫಾರಿನ್ ಅಸೋಸಿಯೇಟ್" ಎಂಬ ಉಚ್ಚ ಪದವಿಯನ್ನು ಅವರಿಗೆ ಸಲ್ಲಿಸಿತು. ೧೮೩೭ ರಲ್ಲಿ ಆಕ್ಸ್‌ಫರ್ಡಿನಲ್ಲಿ ಜರುಗಿದ ಬ್ರಿಟಿಷ್ ಅಸೋಸಿಯೇಷನ್ನಿನ ಸಭೆಯಲ್ಲಿ ಅವರಿಗೆ ಡಿ. ಸಿ. ಎಲ್. (D. C. L.) ಎಂಬ ಗೌರವಪದವಿಯನ್ನು ಸಲ್ಲಿಸಲಾಯಿತು. ಮತ್ತು ಈ ಬಗ್ಗೆ ಇರುವ ಐತಿಹ್ಯದಂತೆ ಡಾಲ್ಟನ್ ಅವರು ತಮ್ಮ ಕಡುಗೆಂಪು ಬಣ್ಣದ ಗೌನನ್ನು ಅವರ ಕಣ್ಣು ಬಣ್ಣಗಳನ್ನು ಗುರುತಿಸುವಷ್ಟು ಶಕ್ತಿಯುಳ್ಳವಾಗಿರದಿದ್ದರೂ, ಅವರ ಬಣ್ಣವನ್ನು ಮೆಚ್ಚದಿದ್ದರೂ, ಒಳ್ಳೆಯ ಹೆಮ್ಮೆಯಿಂದ ಹಾಕಿಕೊಂಡು ಬೀದಿಗಳಲ್ಲಿ ತಿರುಗಾಡುತ್ತಿದ್ದರಂತೆ. ೧೮೩೩ ರಲ್ಲಿ ಸರಕಾರವು ಡಾಲ್ಟನ್ ಅವರಿಗೆ ೧೫೦ ಪೌಂಡುಗಳನ್ನು ಸಿವಿಲ್‌ಲಿಸ್ಟ ಪೆನಷನ್ ರೂಪದಲ್ಲಿ ಸಲ್ಲಿಸಿತು. ಅನಂತರ ಈ ನಿವೃತ್ತಿವೇತನದ ಹಣವನ್ನು ೩೦೦ ಪೌಂಡುಗಳ ವರೆಗೆ ಹೆಚ್ಚಿಸಲಾಯಿತು. ಮರುವರ್ಷ ಅವರಿಗೆ ರಾಜರನ್ನು ಸಂದರ್ಶಿಸುವ ಗೌರವವನ್ನು ಕೊಡಲಾಯಿತು. ೧೮೫೨ರಲ್ಲಿ ಅವರ ಆರೋಗ್ಯವು ಕೆಡಲಾರಂಭಿಸಿತು. ಮತ್ತು ಅವರು ಪಾರ್ಶ್ವರೋಗದಿಂದ ಬಳಲಿಕೊಡಗಿದರು. ಈ ರೋಗದಿಂದ ಅವರು ಪೂರ್ಣವಾಸಿಯಾಗಲಿಲ್ಲ. ೧೮೫೪ ಇಸ್ವಿಯ ಜುಲೈ ತಿಂಗಳ ೨೬ನೆಯ ದಿನ ಬೇನೆ ಮರುಕಳಿಸಿತು. ಮರುದಿನವೆ ಅವರ ಮನೆಮಾಡುವಾಕೆ ಅವರನ್ನು ಎಚ್ಚರು ತಪ್ಪಿದ ಸ್ಥಿತಿಯಲ್ಲಿ ಕಂಡು, ವೈದ್ಯೋಪಚಾರದ ವ್ಯವಸ್ಥೆಯನ್ನು ಮಾಡುವಷ್ಟರಲ್ಲಿ, ಡಾಲ್ಟನ್ ಅವರು ಯಾವ ಒದ್ದಾಟವಿಲ್ಲದೆ ಮತ್ತು ಕಸವಿಸಿಯಿಲ್ಲದೆಯೆ, ಹಸಗೂಸು ಶಾಂತವಾಗಿ ನಿದ್ರೆಹೋಗುವಂತೆ ಕೊನೆಯವರೆಗೂ ಮಲಗಿಬಿಟ್ಟರು.

ಡಾಲ್ಟನ್ ಅವರ ಉಡಿಗೆ ಒಹಳ ಸಾಧಾರಣ ಮತ್ತು ವ್ಯವಸ್ಥಿತವಾಗಿದ್ದಿತು. ಗುರುವಾರ ಸಾಯಂಕಾಲವೊಂದನ್ನು ಬಿಟ್ಟು ಅವರು ತಮ್ಮ ಎಲ್ಲ ವೇಳೆಯನ್ನು ಪ್ರಯೋಗಶಾಲೆಯಲ್ಲಿ ಕಳೆಯುತ್ತಿದ್ದರು. ಗುರುವಾರ ಸಾಯಂಕಾಲ ಮಾತ್ರ ಕ್ರಿಕೆಟ್ ಆಡುವುದರಲ್ಲಿಯೂ, ಅನಂತರ ಹೊಗೆಸೊಪ್ಪನ್ನು ಸೇವಿಸಿ ವಿರಾಮ ಪಡೆಯುವುದರಲ್ಲಿಯೂ ಕಳೆಯುತ್ತಿದ್ದರು. ಪ್ರತಿನಿತ್ಯ ನಸುಕಿನಲ್ಲಿ ಎದ್ದು ಅವರು ತಮ್ಮ ಪ್ರಯೋಗಶಾಲೆಗೆ ಹೋಗುತ್ತಿದ್ದರು. ಡಾಲ್ಟನ್ ಅವರ ಪ್ರಯೋಗಶಾಲೆಯ ಎದುರಿನಲ್ಲಿರುತ್ತಿದ್ದ ಒಬ್ಬ ಹೆಣ್ಣುಮಗಳು, ಡಾಲ್ಟನ್ ಅವರ ವಿಷಯವಾಗಿ ಒಂದು ಸಾರಿ ಹೀಗೆ ಹೇಳಿದಳಂತೆ: "ಕಿಟಕಿಯನ್ನು ತೆಗೆದು ಉಷ್ಣಮಾಪಕದ ಉಷ್ಣತೆಯನ್ನು ನೋಡಲು ಬಂದ ಡಾಲ್ಟನ್ ಅವರನ್ನು ನೋಡಿ, ವೇಳೆ ಎಷ್ಟಾಗಿದೆಯೆಂಬುದನ್ನು ಸರಿಯಾಗಿ ತಿಳಿಸುಕೊಳ್ಳಬಹುದು." ನಿಜವಾಗಿಯೂ ಅವರು ತಮ್ಮ ಎಲ್ಲ ವೇಳೆಯನ್ನು

ಹಳ್ಳಿ–ಪಟ್ಟಣಗಳಲ್ಲಿ, ಬೀದಿ–ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ !

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯೂಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಹೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಕುಟಜಾರಿಷ್ಟ

ಅನುಬಂಧ - ಸಂಗ್ರಹಣೆಗಳಿಗೆ

●

ಕಾಸರಗೋಡು ಸಾರಿ

ವಸ್ತು - ಕೆಮ್ಮುಗಳಿಗೆ

ಸಕ್ಕರೆ ಕಾಯಿಲೆ ಇರುವವರಿಗೆ ವಿಷಕ್ತಗಳಿಗಾಗಿ

ಬಳಸಿರಿ

ಪ್ರಿ

ಪಿ ಸುಂದರ

ಪ್ರಾಯೋಜಕತ್ವದ ಕಾರ್ಯಕ್ರಮಗಳು ಲಿ.

ಸಿಂಹಪುರ

ಸಂಸ್ಥೆಯ ಮೊದಲ ಪ್ರಯತ್ನವಾಗಿ ಕೊಡಗು ಜಿಲ್ಲೆಯ ಮಡಿಕೇರಿ ಸಮೀಪದ ಕಾಲೂರು ಗ್ರಾಮದಲ್ಲಿ ಕಾಫಿ ಬೆಳೆಗಾರರಿಗಾಗಿ ಒಂದು ಶಿಬಿರವನ್ನು ಏರ್ಪಡಿಸಲಾಗಿತ್ತು. ಸುಮಾರು ಮೂವತ್ತು ಮಂದಿ ಕಾಫಿ ಬೆಳೆಗಾರರು ಶಿಬಿರದಲ್ಲಿ ಭಾಗವಹಿಸಿದ್ದರು. ಶಿಬಿರದ ಉದ್ದೇಶ — ಕಾಫಿ ಬೆಳೆಗಾರರಿಗೆ ಅವರವರ ತೋಟಗಳಲ್ಲಿ ಬೆಳೆಯಬಹುದಾದ ಔಷಧೀಯ ಸಸ್ಯಗಳ ಬಗ್ಗೆ ಮಾಹಿತಿ ನೀಡುವುದು. ಶಿಬಿರದಲ್ಲಿ ಭಾಗವಹಿಸಿದವರಿಗೆ ಉಚಿತವಾಗಿ ಸಸಿಗಳನ್ನು ವಿತರಿಸಲಾಯಿತು. ಶಿಬಿರಾರ್ಥಿಗಳಿಗೆ ಊಟ ಮತ್ತು ವಸತಿಯ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಶಿಬಿರದ ಕೊನೆಯ ದಿನ ಸಮಾರೋಪ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಸಮಾರಂಭದಲ್ಲಿ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು.

[illegible]

[illegible]

[illegible]

[

ದಾಂಪತ್ಯ ದಂಡವಿಧಾನ

(ವಿನೋದ ಪ್ರಬಂಧ) *

ಶ್ರೀ. ಪಾ. ಭೀ. ಜೋರಾಪೂರ ಎಂ. ಎ. ಜಬಲಪೂರ

'ವಿಧಾನ' ಎಂದರೆ ಕಾನೂನು. ಅನೇಕ ಕಾನೂನುಗಳು ಅವುಗಳ ಜನಕರಾದ ವ್ಯಕ್ತಿಗಳ ಬುದ್ಧಿಯ ವಿಕಾರಗಳೇ ಆಗಿರುವುವು. ವಿಕೃತಬುದ್ಧಿಯು ಕಾನೂನಿನ ವಿಡಂಬನೆ ಇದರಲ್ಲಿ ಚೆನ್ನಾಗಿ ಮೂಡಿದೆ.

ಅಬಲೆಯು ಸರಲೆಯೆಂದು ತಿಳಿದು, ಇಂದು ಸ್ತ್ರೀಯರ ಮೇಲೆ ಘೋರ ಅತ್ಯಾಚಾರ ನಡೆಯುತ್ತಿದೆ. ಪತಿಗಳು ಬಹಳ ಉನ್ಮತ್ತರಾಗಿದ್ದಾರೆ. ಸತಿಯರನ್ನು ಲಕ್ಷಿಸುವುದೇ ಇಲ್ಲ. ಸ್ತ್ರೀಯರ ಪ್ರಾಚೀನ ಹಕ್ಕುಗಳೆಲ್ಲ ಮಣ್ಣುಗೂಡುತ್ತಿವೆ. ಸತಿಯರ ಆಟವೇನೂ ನಡೆಯದಂತಾಗಿದೆ. ಸತಿಯರ ಹಕ್ಕು-ಬಾಧ್ಯತೆಗಳನ್ನು ಕಾಯ್ದುಕೊಳ್ಳಲು ನಾವು "ಸ್ತ್ರೀ-ಸ್ವ-ತ್ವ ರಕ್ಷಿಣೀ ಸಭೆ"ಯನ್ನು ಸ್ಥಾಪಿಸಿದ್ದೇವೆ. ನಮ್ಮ ಸ್ವತ್ವವನ್ನು ರಕ್ಷಿಸಲು ಸಭೆಯು ಒಂದು ಸದುಪಾಯವನ್ನು ಸಿದ್ಧಗೊಳಿಸಿದೆ. ಇದರ ಬಗ್ಗೆ ಭಾರತ ಸರಕಾರಕ್ಕೆ ಒಂದು ಮಜವಿಯನ್ನು ಕಳಿಸಿದ್ದೇವೆ. ಇದಲ್ಲದೆ ಎಲ್ಲ ಪ್ರದೇಶ ಶಾಸನಸಭೆಗಳ ಮಹಿಳಾಸದಸ್ಯರಿಗೆ ಶಾಸನ ಸಭೆಗಳಲ್ಲಿ ಮಂಡಿಸಲು ಒಂದು 'ದಾಂಪತ್ಯ ದಂಡವಿಧಾನ'ದ ಮಸೂದೆಯನ್ನು ಕಳಿಸಲಾಗಿದೆ.

ಎಲ್ಲೆಡೆ ತಮ್ಮತನವನ್ನು ರಕ್ಷಿಸುವ ಕಾನೂನುಗಳು ಹುಟ್ಟುತ್ತಿರುವಾಗ, ನಮ್ಮ ಸನಾತನ ನಮ್ಮತನವನ್ನು ಕಾಪಾಡಲು ಕಾನೂನು ಏಕೆ ಬೇಡ? ಈ ಮಸೂದೆಯು ಬೇಗನೆ ಸ್ವೀಕಾರವಾಗುವಂತೆ ನಾವೆಲ್ಲ ಜಳವಳಿ ಹೊಡೋಣ. ಇದರ ಬಗ್ಗೆ ಪ್ರಚಾರ ಮಾಡೋಣ. ವೀರ ವನಿತೆಯ ಹೆಸರು ತೊಟ್ಟ ನಮ್ಮ ಭಗಿನಿ "ಜಯಂತಿ"ಯು, ಸತಿಯರ ಹಕ್ಕು-ಬಾಧ್ಯತೆಗಳನ್ನು ಪತಿಜನಾಂಗಕ್ಕೆ ಚೆನ್ನಾಗಿ ತಿಳಿಸಿಕೊಡುವುದರಲ್ಲಿ ಜಯವತಿಯಾಗುವಳೆಂದು ಅರಿಸಿ ಮಸೂದೆಯ ಒಂದು ಪ್ರತಿಯನ್ನು ಕಳಿಸಿದ್ದೇವೆ. ಮೂಲಮಸೂದೆಯು ಇಂಗ್ಲೀಷಿನಲ್ಲಿಯೇ ಇದ್ದರೂ, ಕನ್ನಡಾಭಿಮಾನಿಗಳಾದ "ರಾಯಪ್ಪಂದ"ವು ಕನ್ನಡವನ್ನೇ ಆಪೇಕ್ಷಿಸಬಹುದೆಂಬ ಆಲೋಚನೆಯಿಂದ ಕನ್ನಡದ ಅವತರಣಿಕೆಯನ್ನೇ ಕಳಿಸಿದ್ದೇವೆ. "ಜಯಂತಿ"ಯು ಈ ಮಸೂದೆಯನ್ನು ಪ್ರಕಟಿಸಿ ಪ್ರಚಾರಗೊಳಿಸುವಳೆ(?)ಂದು ಹಾರೈಸುತ್ತೇವೆ.

ಇತಿ.

ಕು. ಸೌ. ಅನಂತ ಸುಂದರಾಬಾಯಿ
ಲೇದಿ ಲಾಯರಮ್ಮ
ಕಾರ್ಯದರ್ಶಿಗಳು, "ಸ್ತ್ರೀಸ್ವತ್ವರಕ್ಷಿಣೀ ಸಭಾ"

* ಸುಪ್ರಸಿದ್ಧ ಬಂಗಾಲಿ ಸಾಹಿತ್ಯಿಕರಾದ ದಿವಂಗತ ಬಂಕೀಮಚಂದ್ರ ಚಟರ್ಜಿಯವರ ವ್ಯಂಗ್ಯಪ್ರಬಂಧದ ಅನುವಾದವಿದು. — ಲೇ.

ದಾಂಪತ್ಯ ದಂಡವಿಧಾನ

ಪ್ರಥಮೋಧ್ಯಾಯ :

ಪ್ರಸ್ತಾವನೆ

ಸ್ತ್ರೀಯರ ಉದ್ದಂಡ ಗಂಡಂದಿರನ್ನು ಶಿಕ್ಷಿಸುವುದಕ್ಕೆ ಒಂದು ವಿಶೇಷ ಪ್ರಕಾರದ ಕಟ್ಟಳೆಯು ಅವಶ್ಯವಿರುವುದರಿಂದ, ಕೆಳಗೆ ಕಾಣಿಸಿದ ಕಾನೂನನ್ನು ವಿಧಿಸಲಾಗಿದೆ.

೧. ಈ ಕಾನೂನನ್ನು "ದಾಂಪತ್ಯ ದಂಡವಿಧಾನ" ಎಂಬ ಹೆಸರಿನಿಂದ ಕರೆಯಲಾಗುವುದು. ಭಾರತದ ದೇಶೀಯ ವಿವಾಹಿತ ನಿವಾಸಿಗಳಿಗೆ ಇದರ ಅಧಿಕಾರಕ್ಷೇತ್ರದಲ್ಲಿ ಬರುತ್ತಾರೆ.

ದ್ವಿತೀಯೋಧ್ಯಾಯ :

ವ್ಯಾಖ್ಯೆ

೨. **ಪತಿ :–** ಸ್ತ್ರೀಯರ ಸಂಪೂರ್ಣ ಅಧಿಕಾರದಲ್ಲಿರುವ ಜಂಗಮ ಸಜೀವ ಸಂಪತ್ತಿಗೆ 'ಪತಿ' ಎಂದು ಹೆಸರು. ಕನ್ನಡಭಾಷೆಗೆ ತಕ್ಕಂತೆ 'ಗಂಡ' ಎಂತಲೂ ಬಾಯಿತುಂಬ ಕರೆಯಿಬಹುದು.

ಉದಾಹರಣೆ :– (ಅ) ಪೆಟ್ಟಿಗೆ, ಕಲ್ಲು, ಮುಂತಾದುವುಗಳ ಎಂದೆನಿಸಿಕೊಳ್ಳಲಾರವು. ಏಕೆಂದರೆ ಜಂಗಮ ಅಸ್ತಿಯಿದ್ದರೂ ಕೂಡ ಅವು ಸಜೀವವಲ್ಲ.

(ಬ) ದನಕ್ಕೆ ಪತಿ ಎಂದು ಅನ್ನಲು ಬರುವುದಿಲ್ಲ. ಏಕೆಂದರೆ ಅದು ಸಜೀವವಿದ್ದರೂ, ಅದು ಒಬ್ಬ ಸತಿಯ ಸಂಪೂರ್ಣ ಅಧೀನದಲ್ಲಿ ಇರುವುದಿಲ್ಲ. ಎಷ್ಟೋ ಸಲ ಸ್ವೇಚ್ಛಾನುಸಾರ ವರ್ತಿಸುತ್ತದೆ.

(ಕ) ಸ್ವ-ಇಚ್ಛೆಯಿಲ್ಲದ ವಿವಾಹಿತ ಪುರುಷನೇ ಪತಿ. ಆದ್ದರಿಂದ ದನಕ್ಕೆ 'ಪತಿ' ಎನ್ನಬೆ, ಇಂಥ ಪುರುಷಮೃಗಕ್ಕೆ ಪತಿಯೆನ್ನಬೇಕು.

೩. **ಸತಿ :–** ಪತಿಸಂಪತ್ತಿಯ ಅಧಿಕಾರವುಳ್ಳವಳೇ ಸತಿಯು ಇದಕ್ಕೆ ಇನ್ನೊಂದು ಹೆಸರು ಹೆಂಡತಿ. ಕೆಲವು ಸಲ 'ಏ', 'ಲೇ', ಇ. ಇ

ಸ್ಪಷ್ಟೀಕರಣ :– ಸಂಪತ್ತಿಯ ಒಡೆತನದ ಅಧಿಕಾರದಲ್ಲಿ ಸಂಪತ್ತಿಯನ್ನು ಬೇಕಾದ ಹಾಗೆ (ವಕೀಲಿ ಭಾಷೆಯಲ್ಲಿ ಹೇಳುವುದಾದರೆ) 'ವಿಲೇವಾಟ' ಮಾಡಿಕೊಳ್ಳುವ ಆರ್ಥಾತ್ ಥಳಿಸುವ ಅಧಿಕಾರವೂ ಸಮಾವೇಶವಾಗುವುದು.

೪. **ವಿವಾಹ :–** ಪೂರ್ವಜನ್ಮದ ಪಾಪಗಳ ಪರಿಹಾರಾರ್ಥವಾಗಿ ತಾವಾಗಿಯೇ ಸ್ವೀಕರಿಸುವ ಪ್ರಾಯಶ್ಚಿತ್ತಕ್ಕೆ "ವಿವಾಹ"ವೆಂದು ಹೆಸರು.

ತೃತೀಯೋಧ್ಯಾಯ :

ಶಿಕ್ಷೆ

೫. ಈ ಕಾನೂನಿನ ಪ್ರಕಾರ, ದಾಂಪತ್ಯಅಪರಾಧಿಗಳಿಗೆ ಕೆಳಗೆ ಕಾಣಿಸಿದ ಶಿಕ್ಷೆಗಳನ್ನು ವಿಧಿಸಲಾಗುವುದು.

(ಅ) ಸ್ನಾನಬದ್ಧತೆ– ಶಯನಾಗಾರದಲ್ಲಿ ಇಲ್ಲವೆ ಮನೆಯ ನಾಲ್ಕು ಗೋಡೆಗಳ ಒಳಗೆ.

ಸ್ಥಾನಬದ್ಧತೆಯ ರೀತಿಗಳು :– (೧) ಕಟುಶಬ್ದಗಳಿಂದೊಡಗೂಡಿದ ಕಠಿಣ ಶಿಕ್ಷೆ, (೨) ಸಶ್ರಮ ಶಿಕ್ಷೆ.

(ಬ) ಗಡಿಪಾರು– ಎರಡನೆಯ ಶಯನಾಗಾರಕ್ಕೆ

(ಕ) ಪತ್ನಿಯ ದಾಸತ್ವ

(ಡ) ಮೇಲ್ಬರ್ಚಿನ ಹಣದ ಲೋಪ.

೬. ಈ ಕಾನೂನಿನ ಪ್ರಕಾರ "ಮರಣದಂಡನೆ" ಎಂದರೆ, ಪತಿಯು, ಬೇಗನೆ ಬರುವ ಆಹುರತೆಯಿಲ್ಲದೆ ತವರುಮನೆಗೆ ಅಥವಾ ಗೆಳತಿಯ ಮನೆಗೆ ಓಡಿಹೋಗುವಳು.

೭. ಕ್ಷುಲ್ಲಕ ಅಪರಾಧಗಳಿಗೆ ಕೆಳಗಿನ ಶಿಕ್ಷೆಗಳನ್ನು ಕೊಡಲಾಗುವುದು :—

(೧) ಹೆಂಡತಿಯ ತಿರಸ್ಕಾರಯುಕ್ತ ಮೌನ.

(೨) ಗಂಟುಮೊಸಡಿ.

(೩) ನೇತ್ರಾವತೀದರ್ಶನ ಅರ್ಥಾತ್ ಕಣ್ಣೀರಕಾವೇರಿ.

(೪) ಕುತ್ಸಿತಮಾತು ಇಲ್ಲವೆ ಬಯ್ಗಳು.

ಚತುರ್ಥೋಧ್ಯಾಯ :

ಸಾಧಾರಣ ಅಪವಾದಗಳು

೮. ಹೆಂಡತಿ ಏನು ಮಾಡಿದರೂ ಅಪರಾಧವಲ್ಲ.

೯. ಪತಿಯ ಆಜ್ಞಾನುಸಾರವಾಗಿ ಮಾಡಿದ ಗಂಡನ ಯಾವ ಕೆಲಸವೂ ಅಪರಾಧವಲ್ಲ.

೧೦. ಯಾವ ವಿವಾಹಿತ ಪುರುಷನೂ, ಯಾವುದೇ ಪ್ರಸಂಗದಲ್ಲಿಯೂ ದಾಂಪತ್ಯದಂಡವಿಧಾನದಿಂದ ಮುಕ್ತತೆ ಪಡೆಯಲಾರನು.

ಪಂಚಮೋಧ್ಯಾಯ :

ಅಪರಾಧಪ್ರಚೋದನೆ

೧೧. ಕೆಳಗೆ ಕಾಣಿಸಿದ ಕೃತಿಗಳು ಅಪರಾಧಪ್ರಚೋದನೆಗಳು.

(ಅ) ಅಪರಾಧಮಾಡಲು ಸಹಾಯಮಾಡುವುದು, ಉತ್ತೇಜಿಸುವುದು, ಮನವೊಲಿಸುವುದು ಇ. ಇ.

(ಬ) ಅಪರಾಧಿಯೊಂದಿಗೆ ಸಹಕರಿಸುವುದು ಇಲ್ಲವೆ ಅಪರಾಧ ಮಾಡುವಾಗ ಅವನೊಂದಿಗೆ ಇರುವುದು.

ಸ್ಪಷ್ಟೀಕರಣ :— ಅವಿವಾಹಿತ ಪುರುಷನು ಅಥವಾ ಅವಿವಾಹಿತ ಸ್ತ್ರೀಯು ಸಹ ಅಪರಾಧಪ್ರಚೋದಕರೆಂದು ಕರೆಯಲ್ಪಡಬಹುದು.

ಉದಾಹರಣೆಗಳು : – ರಮಾನ ಪತಿಯಾದ ರಾಮನೂ ಮತ್ತು ರಹೀಮನೂ ಕೂಡಿ

(೧) ಕುಡಿಯುತ್ತಾರೆ. ಕುಡಿತವು ದಾಂಪತ್ಯಅಪರಾಧವು. ಆದ್ದರಿಂದ ರಹೀಮನು ಅಪರಾಧಪ್ರಚೋದನೆ ಮಾಡಿದಂತಾಯಿತು.

(೨) ತಾಯಿಯು, ಸೊಸೆಗೆ ಬೇಡವಾದ ಕೆಲಸಕ್ಕೆ ಅರ್ಥಾತ್ ಪುರಾಣ, ಪೂಜೆ ಇ. ಇ. ಹಣ ಖರ್ಚುಮಾಡಲು ಮಗನ ಮನ ಒಲಿಸುತ್ತಾಳೆ. ಹೆಂಡತಿಯ ಮನಸ್ಸಿನ ವಿರುದ್ಧ ಮಾಡುವ ಕೆಲಸವು ದಾಂಪತ್ಯ ಅಪರಾಧ. ಆದ್ದರಿಂದ ತಾಯಿಯು ಅಪರಾಧಪ್ರಚೋದನೆಯ ಶಿಕ್ಷೆಗೆ ಪಾತ್ರಳಾಗುವಳು.

೧೨. ವಿವಾಹಿತ ಪುರುಷನೊಬ್ಬನು ಬೇರೊಬ್ಬ ವಿವಾಹಿತ ಪುರುಷನನ್ನು ದಾಂಪತ್ಯ ಅಪರಾಧಕ್ಕೆ ಪ್ರಚೋದನೆಗೊಳಿಸಿದರೆ, ಅವನೂ ಅಪರಾಧಿಯಂತೆಯೇ ಶಿಕ್ಷೆಗೆ ಗುರಿಯಾಗುವನು. ಅವನಿಗೆ ಉಚಿತ ನ್ಯಾಯಾಲಯದಿಂದ ಮಾತ್ರವೇ ಶಿಕ್ಷೆಯಾಗುವುದು.

ಸ್ಪಷ್ಟೀಕರಣ: — ಉಚಿತ ನ್ಯಾಯಾಲಯವೆಂದರೆ ಈ ಕಾನೂನಿನ ಪ್ರಕಾರ, ಅಪರಾಧಿ ಪತಿಯ ಮೇಲೆ ಅಧಿಕಾರವುಳ್ಳ ಪತ್ನಿಯೇ.

೧೩. ಅಪರಾಧಪ್ರಚೋದನೆಯ ದೋಷಕ್ಕೆ ಗುರಿಯಾದ ಅವಿವಾಹಿತ ಸ್ತ್ರೀ-ಪುರುಷರು, ತಿರಸ್ಕಾರ, ಬಯ್ಗಳು, ಗಂಟುಮೋರೆ, ಕಣ್ಣೀರು, ರೋದನಗಳಿಂದ ಮಾತ್ರ ಶಿಕ್ಷಿಸಲ್ಪಡುವರು.

ಷಷ್ಠೋಧ್ಯಾಯ :

ರಾ ಜ್ಯ ದ್ರೋ ಹ

೧೪. ಈ ಕಾನೂನಿನಲ್ಲಿ ವೈವಾಹಿಕಸ್ಥಿತಿಯೇ "ರಾಜ್ಯ" ಎಂಬುದರ ಅರ್ಥವು.

೧೫. ಯಾವನು ಹೆಂಡತಿಯೊಂದಿಗೆ ಜಗಳಾಡುತ್ತಾನೆಯೋ ಅಥವಾ ಜಗಳಾಡುವ ಪ್ರಯತ್ನ ಮಾಡುತ್ತಾನೆಯೋ ಅಥವಾ ಜಗಳಾಡಲು (ಬೇರೊಬ್ಬರನ್ನು) ಪ್ರಚೋದಿಸುತ್ತಾನೆಯೋ, ಅವನು "ಮರಣದಂಡನೆ"ಗೆ ಎಂದರೆ ವಿರಹಶಿಕ್ಷೆಗೆ ಇಲ್ಲವೆ ಬೇರೆ ಶಯನಾಗಾರಶಯನ ಶಿಕ್ಷೆಗೆ ಎಂದರೆ ಗಡಿಪಾರುಶಿಕ್ಷೆಗೆ ಗುರಿಯಾಗುತ್ತಾನೆ. ಮತ್ತು ಮೇಲ್ಬರ್ಚಿನ ಹಣವನ್ನು ಕಳೆದುಕೊಳ್ಳುತ್ತಾನೆ.

೧೬. ಯಾವನು ತನ್ನ ಗೆಳೆಯರನ್ನು ಅಥವಾ ಮಕ್ಕಳನ್ನು ತನ್ನ ಪಕ್ಷಕ್ಕೆ ಸೇರಿಸಿಕೊಳ್ಳುತ್ತಾನೆಯೋ ಅಥವಾ ಸೇರಿಸಿಕೊಳ್ಳಲು ಪ್ರಯತ್ನಿಸುತ್ತಾನೆಯೋ, ಅಥವಾ ಪತಿಯೊಂದಿಗೆ ಜಗಳಾಡುವ ಉದ್ದೇಶದಿಂದ ಇನ್ನು ಬೇರೆ ರೀತಿಯಿಂದ ಜಗಳದ ಸಿದ್ಧತೆಯನ್ನು ಮಾಡುತ್ತಾನೆಯೋ ಅವನಿಗೆ ಕೂಡಲೆ ಹದ್ದುಪಾರಿನ ಶಿಕ್ಷೆಯನ್ನು ಎಂದರೆ ಅನ್ಯಶಯನಾಗಾರಶಯನದ ದಂಡನೆಯನ್ನು ವಿಧಿಸಲಾಗುವುದು ಮತ್ತು ತಿರಸ್ಕಾರ, ಅಶ್ರುಪಾತ, ರೋದನ ಮುಂತಾದುವುಗಳಿಂದಲೂ ಹಿಂಸಿಸಲ್ಪಡುವನು.

೧೭. ಯಾವನು ಪರಸ್ತ್ರೀಗೆ ವಿಧೇಯನಾಗುವನೋ ಅವನು "ಲಾಂಪಟ್ಯ" ಅಪರಾಧಿಯೆನಿಸಿಕೊಳ್ಳುವನು.

ಸ್ಪಷ್ಟೀಕರಣ :— ಪರತರುಣಿಗೆ ಎಳ್ಳಷ್ಟು ದಯೆತೋರಿದರೂ ಆ (ಅ) ತರುಣಿಗೆ ವಿಧೇಯನಾದಂತೆ – ಲಾಂಪಟ್ಯ ಅಪರಾಧಿಯಾದಂತೆ.

ಉದಾಹರಣೆ :— ಕೃಷ್ಣನು ಸತ್ಯಭಾಮೆಯ ಗಂಡನು. ರಾಧೆ ನೆರಿಪುನೆಯ ತರುಣಿ. ರಾಧೆಯ ಮಗು ಬಹಳ ಮುದ್ದು. ಕಂಡರೆ ಪ್ರೀತಿ ತಾನೇ ಉಕ್ಕೇರುವುದು. ಕೃಷ್ಣನು ಅದನ್ನು ಮುದ್ದಾಡುವನು. ತಿನ್ನಲಿಕ್ಕೆ ಏನಾದರೂ ಕೊಡುವನು. ಇದರಿಂದ ಕೃಷ್ಣನು ರಾಧೆಗೆ ವಿಧೇಯನಾದಂತಾಯಿತು. ಲಾಂಪಟ್ಯದೋಷಕ್ಕೆ ಗುರಿಯಾಗುವನು.

(೮) ಈ ಕಾನೂನಿನ ೧೬ನೆಯ ಕಲಮಿನ ಪ್ರಕಾರ ಮಹಜರು ಪತ್ರಿಯನ್ನು ಅಪರಾಧಿಯೆಂದು ಕಲ್ಪಿಸಲು ಆಧಿಕಾರವಿದೆ. ಮತ್ತು ಮಹಜರು ತಾನು ಅಪರಾಧ ಮಾಡಿಲ್ಲ' ಎಂದು ಆಧಾರದ ಮೇಲೆ ವಿರುದ್ಧವಾದ ಸಾಕ್ಷಿ ಹೇಳಲಾರದು.

ಅರ್ಜಿಯ ಮೇಲಿನ ಅಪರಾಧಿ ಕೊನೆಯ ಪ್ರಮಾಣದಂತೆ ಗಣಿಸಲಾಗುವುದು.

(೯) ಈ ಅಧಿನಿಯಮ ಕಲಮಿನ ಪ್ರಕಾರ ಉಪಯೋಗಿಸಿದ ಅಧಿಕಾರಿಗೆ ಅಮಾಲ್ದಾರನು ಮೇಲಿನ ಅಧಿಕಾರವನ್ನು ಕೊಟ್ಟಿರುವ ಪತ್ರದಲ್ಲಿ ಕೊಟ್ಟ ಷರತ್ತುಗಳಿಗೆ ಒಳಪಟ್ಟಿರುತ್ತದೆ. ಕಲಮು ೪೫ ಅಧಿಕಾರವನ್ನು ಉಪಯೋಗಿಸಿದ ಅಧಿಕಾರಿಯು ಆ ಅಧಿಕಾರವನ್ನು ಮೇಲಿನ ಅಧಿಕಾರಿಗೆ ಕೊಟ್ಟಿರುವ ಪತ್ರದಲ್ಲಿ ಕೊಟ್ಟ ಷರತ್ತುಗಳಿಗೆ ಒಳಪಟ್ಟಿರುತ್ತದೆ. ಅಧಿಕಾರವನ್ನು ಉಪಯೋಗಿಸಿದ ಅಧಿಕಾರಿಯು ಆ ಅಧಿಕಾರವನ್ನು ಕೊಟ್ಟ ಅಧಿಕಾರಿಗೆ ಅಧಿಕಾರವನ್ನು ಉಪಯೋಗಿಸಿದ ಬಗ್ಗೆ ತಿಂಗಳಿಗೆ ಸಮಸ್ತ ಪಟ್ಟಿಯನ್ನು ಅಧಿಕಾರಿಯು ಅಧಿಕಾರವನ್ನು ಉಪಯೋಗಿಸಿದ ಬಗ್ಗೆ ಸಿದ್ಧಪಡಿಸಿ ಕಳುಹಿಸಬೇಕಾಗುವುದು.

೧೦. ಅಮಾಲ್ದಾರನಿಗೆ ಈ ಅಧಿನಿಯಮದಲ್ಲಿ ಇರುವ ಯಾವ ವಿಷಯವನ್ನು ಎಷ್ಟರ ಮಟ್ಟಿಗೆ ತಿಳಿಸಬೇಕಾಗುವುದು.

ಸಹಕಾರ ಸಂಸ್ಥೆಗಳು :

ಕಾಲ್ಪನಿಕ ಹೆಸರನ್ನು ಪ್ರೋತ್ಸಾಹದಾಯಕರಿಗೆ ಅಂಟಿಸುವುದರ ಬಗ್ಗೆ ನಿರ್ಬಂಧನೆ

೧೧. ಈ ಅಧಿನಿಯಮದ ಪ್ರಕಾರ ಹಾಗೂ ಇತರ ಯಾವುದೇ ಶಾಸನದ ಪ್ರಕಾರ ನೋಂದಾಯಿಸಲ್ಪಟ್ಟ ಸಹಕಾರ ಸಂಸ್ಥೆಯು ಯಾವುದೇ ವ್ಯಕ್ತಿಯ ಹೆಸರನ್ನು ತನ್ನ ಹೆಸರಿಗೆ ಸೇರಿಸಿ ಉಪಯೋಗಿಸಬಾರದು.

೧೨. ಸಂಸ್ಥೆಗೆ ಅಥವಾ ಸಂಸ್ಥೆಯಿಂದ ಅಧಿಕಾರ ಪಡೆದವರು ಯಾವುದೇ ವ್ಯಕ್ತಿಯ ಹೆಸರನ್ನು ಹೇಳಿದರೆ ಒಪ್ಪಿಸಿದರೆ ಅಥವಾ ಪ್ರಕಟಪಡಿಸಿದರೆ ಅಥವಾ ಸಹಿ ಮಾಡಿದರೆ ಅಥವಾ ಸಹಿ ಮಾಡಿಸಿದರೆ ಅಥವಾ ಸಹಿ ಮಾಡಿಸಲು ಪ್ರಯತ್ನ

ಸಪ್ತಶಲ್ಲಿ ಶಾಸ್ತ್ರದ ಪರಿಚಯ

(ಕೈಪಿಡಿಗಳ ಪ್ರಕಾರ)

ಶ್ರೀ. ಬಿ.ಜಿ. ಶಾಸ್ತ್ರಿ, ಧಾರವಾಡ

*

ಸಂಗೀತ ಕಲಿಯಲು ಆಸಕ್ತಿಯಿದ್ದರೂ ಸಮಯದ ಕೊರತೆಯಿಂದಾಗಿ ಕಲಿಯಲಾಗದವರಿಗಾಗಿ ಈ ಲೇಖನ. ಆದರೆ ಹೇಗೆ?
ಅಷ್ಟಮಂಜರಿಯಿಂದಾಗಿ ಪ್ರಪಂಚದಲ್ಲಿ ಎಷ್ಟೋ ಸಂಗೀತಗಾರರುಂಟಾದ ಸಂಗತಿ
ಪಠಿಸಿದವರಿಗೆ ಅಷ್ಟಸಿದ್ಧಿ ಕರತಲಾಮಲಕವಾಗುವುದು.

ಪೀಠಿಕೆಯ ಸಂಕ್ಷಿಪ್ತ ವಿವರಗಳು

ಸಂಗೀತವೆಂದರೆ ಆಸಕ್ತಿಯಿಲ್ಲದವರು ಯಾರಿದ್ದಾರೆ? ಅದರಲ್ಲೂ ಸಂಗೀತ ಕಲಿಯಲು ಆಸಕ್ತಿಯಿದ್ದರೂ ಸಮಯದ ಕೊರತೆಯಿಂದಾಗಿ ಕಲಿಯಲಾಗದವರು ಎಷ್ಟೋ ಜನರಿದ್ದಾರೆ. ಅಂಥವರಿಗಾಗಿ ಈ ಲೇಖನ. ಆದರೆ ಹೇಗೆ? ಅಷ್ಟಮಂಜರಿಯಿಂದಾಗಿ ಪ್ರಪಂಚದಲ್ಲಿ ಎಷ್ಟೋ ಸಂಗೀತಗಾರರುಂಟಾದ ಸಂಗತಿ ಪಠಿಸಿದವರಿಗೆ ಅಷ್ಟಸಿದ್ಧಿ ಕರತಲಾಮಲಕವಾಗುವುದು. ಇದೇ ಸಪ್ತಶಲ್ಲಿಯ ಪೀಠಿಕೆ. ಇದರಲ್ಲಿ ಸಂಗೀತ ಕಲಿಯಲು ಬೇಕಾಗುವ ಸಾಧನಗಳು, ಅವುಗಳ ಉಪಯೋಗ, ಸಂಗೀತ ಕಲಿಯಲು ಬೇಕಾಗುವ ಸಮಯ, ಸಂಗೀತ ಕಲಿಯುವ ಕ್ರಮ, ಸಂಗೀತ ಕಲಿಯುವಾಗ ಅಭ್ಯಾಸಿಗಳಲ್ಲಿರಬೇಕಾದ ಗುಣಗಳು, ಸಂಗೀತ ಕಲಿಯುವಾಗ ಅಭ್ಯಾಸಿಗಳು ಮಾಡಬಾರದ ತಪ್ಪುಗಳು, ಸಂಗೀತ ಕಲಿಯುವಾಗ ಅಭ್ಯಾಸಿಗಳು ಪಾಲಿಸಬೇಕಾದ ನಿಯಮಗಳು, ಸಂಗೀತ ಕಲಿಯುವಾಗ ಅಭ್ಯಾಸಿಗಳು ಅನುಸರಿಸಬೇಕಾದ ಕ್ರ

ಸಣ್ಣಪ್ಪಳಿ ಪಾಪಣ್ಣನ ಮಿಂಗಣ್ಣಡಿ

(ವೈಜ್ಞಾನಿಕ ಕಾದಂಬರಿ)

ಶ್ರೀ ಎಸ್. ಪಿ. ಚಾಲ್ಕಟ್ಟಿ ಧಾರವಾಡ

☆

ಒಂದೇ ಒಂದು ಚಾತಿರಂಟು ಗಂಡಾಸರಲ್ಲಿರುವುದು ಗಡಸ್ತಿಕೆ ಬೊಂತಿರುವ ಕೆಲಸಕ್ಕೆ ಅಡಿಗೆ ಬೀಳುವ
ಆಕಸ್ಮಿಕಂದವಿಲ್ಲಾಗಿ ಹೆಂಣಿಲಿರುವ ಬಾಸ್ಯ ಇಂದುಮೊಳ್ಳುಂದೇ ಬೀಳುವ
ಸಡೆಯುವಿಡ; ಅದರ ಬಗ್ಗೆ ನೆಂಬಲಿಂದಿಸಿ.

☆

ಮೊದಲನೆಯ ಅಧ್ಯಾಯ

ಪರಿಸ್ಥಿತಿಯನ್ನೂ ಸಮಸ್ಯೆಯನ್ನು ಅಥವಾ, ಬಾಳಿನ ಬಗೆಹರಿಸಲಾರದ ಪ್ರಶ್ನೆಗಳನ್ನು ಪರಿಹರಿಸುವ ಪರಿಣತಿ ಹೊಂದಿದ್ದ ಪಾಪಣ್ಣನ ಮನೆಗೆ ಮೊದಲು ಬಂದವರು ಬ್ಯಾಂಕಿನವರು. ಅವರು ಬಂದು ಬಾಗಿಲು ಬಡಿದಾಗ ಪಾಪಣ್ಣ ಮಲಗಿದ್ದ. ಬ್ಯಾಂಕಿನವರಲ್ಲಿ ಸ್ತ್ರೀ ಪುರುಷರಿದ್ದರು. ಅವರು ಬಂದು ಬಾಗಿಲು ಬಡಿದು ಪಾಪಣ್ಣನನ್ನು ಎಬ್ಬಿಸಿದರು. ಪಾಪಣ್ಣನ ಮನೆಯವರು—ಸ್ತ್ರೀಯರು—ಮಲಗಿದ್ದರು. ಪಾಪಣ್ಣನೊಬ್ಬನೇ ಹೊರಗೆ ಅಡ್ಡಗಾಲು ಹಾಕಿ ಮಲಗಿದ್ದ. ಬಂದವರು ಬ್ಯಾಂಕಿನವರೆಂದು ತಿಳಿದಾಗ ಪಾಪಣ್ಣನಿಗೆ ಆಶ್ಚರ್ಯವಾಯಿತು. ಬ್ಯಾಂಕಿನವರು ಬಂದು ಸಾಲ ಕೊಡುವುದಾಗಲೀ, ಸಾಲ ವಸೂಲಿ ಮಾಡುವುದಾಗಲೀ ಪಾಪಣ್ಣನ ಅನುಭವಕ್ಕೆ ಬಂದಿರಲಿಲ್ಲ. ಆದ್ದರಿಂದ ಅವರು ಬಂದಿದ್ದು ಏಕೆಂದು ಅವನಿಗೆ ತಿಳಿಯಲಿಲ್ಲ. ಅವರು ಬಂದಿದ್ದು ಅವನಿಗೆ ಆಶ್ಚರ್ಯವನ್ನುಂಟುಮಾಡಿತು. ಅವರು ಬಂದಿದ್ದು ಅವನಿಗೆ ಸಂತೋಷವನ್ನುಂಟುಮಾಡಿತು. ಅವರು ಬಂದಿದ್ದು ಅವನಿಗೆ ಭಯವನ್ನುಂಟುಮಾಡಿತು. ಅವರು ಬಂದಿದ್ದು ಅವನಿಗೆ ಅಸಹ್ಯವನ್ನುಂಟುಮಾಡಿತು. ಅವರು ಬಂದಿದ್ದು ಅವನಿಗೆ ಅನುಕಂಪವನ್ನುಂಟುಮಾಡಿತು. ಅವರು ಬಂದಿದ್ದು ಅವನಿಗೆ ಕೋಪವನ್ನುಂಟುಮಾಡಿತು. ಅವರು ಬಂದಿದ್ದು ಅವನಿಗೆ ಅಸೂಯೆಯನ್ನುಂಟುಮಾಡಿತು. ಅವರು ಬಂದಿದ್ದು ಅವನಿಗೆ ಅಪಮಾನವನ್ನುಂಟುಮಾಡಿತು. ಅವರು ಬಂದಿದ್ದು ಅವನಿಗೆ ಅಸಮಾಧಾನವನ್ನುಂಟುಮಾಡಿತು. ಅವರು ಬಂದಿದ್ದು ಅವನಿಗೆ ಅಸಹನೆಯನ್ನುಂಟುಮಾಡಿತು. ಅವರು ಬಂದಿದ್ದು ಅವನಿಗೆ ಅಸಹಾಯಕತೆಯನ್ನುಂಟುಮಾಡಿತು. ಅವರು ಬಂದಿದ್ದು ಅವನಿಗೆ ಅಸಹಕಾರವನ್ನುಂಟುಮಾಡಿತು. ಅವರು ಬಂದಿದ್ದು ಅವನಿಗೆ ಅಸಹಜತೆಯನ್ನುಂಟುಮಾಡಿತು. ಅವರು ಬಂದಿದ್ದು ಅವನಿಗೆ ಅಸಹಿಷ್ಣು

ಪೀಳಿಗೆಗೆ ಹೇಗೆ ಕೊಡಮಾಡಲ್ಪಡುತ್ತವೆ ಎಂಬುದನ್ನು ಪರಿಶೀಲಿಸಿದನು. ಯಾವುದೇ ಗುಣವನ್ನು ತೆಗೆದುಕೊಂಡಲ್ಲಿ, ಅದನ್ನು ಪರಸ್ಪರ ವಿರುದ್ಧವಾದ ಎರಡು ವಿಭಾಗಗಳನ್ನಾಗಿ ಮಾಡಬಹುದು. ಉದಾಹರಣೆಗಾಗಿ ಕಾಳಿನ ಬಣ್ಣವನ್ನು ತೆಗೆದುಕೊಂಡರೆ ಹಳದಿ ಮತ್ತು ಹಸಿರು, ಕಾಳಿನ ಹೊದಿಕೆಯನ್ನು ತೆಗೆದುಕೊಂಡರೆ— ನುಣುಪು ಮತ್ತು ಉರುಟು ಇತ್ಯಾದಿ. ಈಗ ಮೊದಲು ಒಂದು ಗುಣದ ಪರಸ್ಪರ ವಿರುದ್ಧ ವಿಭಾಗಗಳನ್ನು ತೆಗೆದುಕೊಂಡು ಮೆಂಡೆಲ್‌ನು ಮಾಡಿದ ಪ್ರಯೋಗವನ್ನು ತಿಳಿದುಕೊಳ್ಳೋಣ. ಹಳದಿ ಕಾಳಿನ ಗಿಡದೊಂದಿಗೆ ಹಸಿರು ಕಾಳಿನ ಗಿಡವನ್ನು ಮಿಶ್ರ ಮಾಡಿದರೆ ಉತ್ಪನ್ನವಾಗುವ ಕಾಳುಗಳೆಲ್ಲವೂ ಹಳದಿಯೇ ಆಗಿರುತ್ತವೆ. ಈ ಮಿಶ್ರ ಹಳದಿಯ ಕಾಳಿನ ಗಿಡಗಳನ್ನು ತಮ್ಮತಮ್ಮೊಳಗೆ ಸಂಕರ ಮಾಡಿದರೆ, ಹಳದಿಯ ಕಾಳಿನ ಜೊತೆಗೆ ಕೆಲವು ಹಸಿರು ಕಾಳುಗಳೂ ಕಂಡು ಬರುತ್ತವೆ. ಎಂದರೆ ಎರಡನೆಯ ಪೀಳಿಗೆಯಲ್ಲಿ ಕಾಣದಿದ್ದ ಹಸಿರು ಬಣ್ಣ ಮೂರನೆಯ ಪೀಳಿಗೆಯಲ್ಲಿ ಕಂಡುಬಂದಿತು. ಇದರ ಅರ್ಥವೇನು? ಎರಡನೆಯ ಪೀಳಿಗೆಯಲ್ಲಿ ಕಾಳುಗಳೆಲ್ಲ ಹಳದಿಯಾಗಿದ್ದರೂ ಹಸಿರು ಬಣ್ಣ ಇತ್ತು; ಆದರೆ ಅದು ಹಳದಿ ಬಣ್ಣದಿಂದ ಮುಚ್ಚಲ್ಪಟ್ಟಿತ್ತು—ಎನ್ನಬಹುದು. ಇದಕ್ಕೆ ಕಾರಣ ಮೂರನೆಯ ಪೀಳಿಗೆಯಲ್ಲಿ ಹಳದಿಯ ಪ್ರಭಾವವಿಲ್ಲದ ಕಾಳುಗಳೆಲ್ಲ ಹಸಿರಾಗಿ ಕಂಡವು. ಇದರಿಂದ ನಮಗೆ ತಿಳಿಯುವುದೆಂದರೆ : ಒಂದು ಗುಣದ ಪರಸ್ಪರ ವಿರೋಧ ವಿಭಾಗಗಳಲ್ಲಿ ಒಂದು ವಿಭಾಗ ಪ್ರಕಟವೂ (Dommiant) ಮತ್ತೊಂದು ಗೂಢವೂ (Recessive) ಇರುತ್ತದೆ. ಹಳದಿಯು ಪ್ರಕಟವಿಭಾಗ ಮತ್ತು ಹಸಿರು ಗೂಢವಿಭಾಗ. ಇದರಂತೆಯೇ ಕಾಳಿನ ಹೊದಿಕೆಯಲ್ಲಿ ನುಣುಪುತನ ಪ್ರಕಟವೂ, ಉರುಟುತನ ಗೂಢವೂ ಇರುತ್ತದೆ.

ಮೆಂಡೆಲ್‌ನು ಮುಂದೆ ಸಾಗಿ, ಎರಡು ಗುಣಗಳನ್ನು ಲಕ್ಷ್ಯದಲ್ಲಿಟ್ಟು ಪ್ರಯೋಗ ಮಾಡಿದನು. ಹಳದಿ–ನುಣುಪು ಕಾಳಿನ ಗಿಡವನ್ನು ಹಸಿರು–ಉರುಟು ಕಾಳಿನ ಗಿಡದ ಜೊತೆಗೆ ಮಿಶ್ರ ಮಾಡಿದಾಗ, ಆದ ಕಾಳೆಲ್ಲ ಹಳದಿ–ನುಣುಪಾಗಿದ್ದುವು. ಯಾಕೆಂದರೆ ಮೊದಲೇ ಹೇಳಿದಂತೆ ಹಳದಿ ಮತ್ತು ನುಣುಪುತನ ಇವೆರಡೂ ಪ್ರಕಟಗುಣಗಳು. ಮೂರನೆಯ ಪೀಳಿಗೆಯಲ್ಲಿ ಹಳದಿ—ನುಣುಪು, ಹಸಿರು—ಉರುಟು ಜೋಡಿಗಳ ಜೊತೆಗೆ ಹೊಸದಾದ ಎರಡು ಜೋಡಿಗಳು ಕಂಡುಬಂದುವು. ಅವು ಹಳದಿ—ಉರುಟು ಮತ್ತು ಹಸಿರು – ನುಣುಪು.

ಇವೆಲ್ಲದರ ತಾತ್ಪರ್ಯವೆಂದರೆ: ಅನುವಂಶಿಕ ಗುಣಗಳು ಎಂದರೆ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಕೊಡಮಾಡಲ್ಪಡುವ ಗುಣಗಳು ಹಾಲಿನೊಡನೆ ನೀರು ಬೆರೆಯುವಂತೆ ಕಂಡರೂ, ಹಂಸಕ್ಷೀರ ನ್ಯಾಯದಂತೆ ಮುಂದಿನ ಪೀಳಿಗೆಯಲ್ಲಿ ಹಾಲು ಹಾಲಾಗಿ, ನೀರು ನೀರಾಗಿ ಬೇರೆಯಾಗುತ್ತದೆ. ಪತ್ತೆಯ ಆಟದಲ್ಲಿ ಎಲೆಗಳನ್ನು ಒಂದು ಕಡೆ ಕೂಡಿಸಿ, ಟೀಪಿಸಿ ಮತ್ತೆ ಹಂಚುವಂತೆ.

ಅನುವಂಶಿಕ ಗುಣಗಳ ಪ್ರಕಟ—ಗೂಢ ಸಂಬಂಧ, ಅವುಗಳ ಸಂಪೂರ್ಣ ಸ್ವಾತಂತ್ರ್ಯ ಮತ್ತು ಅವು ಬೇರೆಬೇರೆಯಾಗಿ ಹಂಚಲ್ಪಡುವುದು—ಇವು ಮೆಂಡೆಲ್‌ನ ತತ್ತ್ವಗಳ ಸಾರ. ಇವುಗಳ ಆಧಾರದ ಮೇಲೆ ಆಧುನಿಕ ತಳಿಶಾಸ್ತ್ರದ ಬೆಳವಣಿಗೆಯಾಗಿದೆ. ಮೆಂಡೆಲ್‌ನು ಈ ತತ್ತ್ವಗಳನ್ನು, ಪುರಾವೆಗಳ ಸಹಿತ ೧೮೬೬ ರಲ್ಲಿ ಒಂದು ವಿಜ್ಞಾನಮಾಸಿಕದಲ್ಲಿ ಪ್ರಕಟಿಸಿದನು. ಆದರೆ ಸ್ವಾರ್ಥಚಿಂತನೆಯಿಂದ ತುಂಬಿದ ಆ ಕಾಲದಲ್ಲಿ ಈ ತತ್ತ್ವಗಳು ಯಾರ ಲಕ್ಷ್ಯವನ್ನೂ ಸೆಳೆಯಲಿಲ್ಲ. ತನ್ನ ತತ್ತ್ವಗಳ ಮಹತ್ತ್ವವನ್ನು ಅರಿತ ಮೆಂಡೆಲ್‌ನು ನಿರಾಶೆಯಿಂದ ಮರುಗಿ, ೬೫ ನೆಯ ವಯಸ್ಸಿನಲ್ಲಿ ಮರಣ ಹೊಂದಿದನು. ಸಾಯುವುದಕ್ಕೆ ಮೊದಲು "ನನ್ನ ಶುಭದಿನಗಳು ಮುಂದೆ ಬರಲಿವೆ" ಎಂದು ಅವನು ತನ್ನ ಆಪ್ತಮಿತ್ರ ನೋಟ್ಬಾನಿಗೆ ಹೇಳಿದ್ದನಂತೆ.

ಮೆಂಡೆಲ್‌ನ ಮರಣವಾದ ೧೬ ವರ್ಷಗಳನಂತರ— ಎಂದರೆ ೧೯೦೦ ನೆಯ ಇಸವಿಯಲ್ಲಿ ಅಂತಹ ಶುಭದಿನವು ಬಂದಿತು. ಹಾಲೆಂಡಿನ ಡಿಫ್ರೈಸ್, ಜರ್ಮನಿಯ ಕಾರಿನ್ಸ್ ಮತ್ತು ಆಸ್ಟ್ರಿಯಾದ ಟ್ಸೆರ್‌ಮಾಕ್, ಸ್ವತಂತ್ರವಾಗಿ ಪ್ರಯೋಗ ನಡೆಸಿ, ಮೆಂಡೆಲ್‌ನು ಬಂದ ಅನುಮಾನಕ್ಕೇ ಬಂದರು. ಆಗ ಹಳೆಯ ವಿಜ್ಞಾನಮಾಸಿಕಗಳನ್ನು ನೋಡುತ್ತಿದ್ದ ಸಮಯದಲ್ಲಿ ಮೆಂಡೆಲ್‌ನ ಲೇಖನವನ್ನು ಕಂಡು ಅವರು ಚಕಿತರಾದರು. ಮುಂದೆ ಅವರು ಅವನಪ್ರಯೋಗಗಳನ್ನು ವಿಜ್ಞಾನಿಗಳಿಗೆ ಪರಿಚಯ ಮಾಡಿಕೊಟ್ಟು, ಅವನ ಹೆಸರನ್ನು ಚಿರಸ್ಥಾಯಿಯಾಗಿ ಮಾಡಿದರು.

೧೯೦೦ ರಲ್ಲಿ ಮೆಂಡೆಲ್‌ನ ತತ್ತ್ವಗಳ ಪುನಃಶೋಧವಾದ ಮೇಲೆ, ತಳಿಶಾಸ್ತ್ರವು ಅತಿ ವೇಗದಿಂದ ಬೆಳೆಯಿತು. ಮೆಂಡೆಲ್‌ನ ಪ್ರಯೋಗಗಳನ್ನು ಪುನಃ ಮಾಡಿ ನೋಡುವುದರ ಜೊತೆಗೆ ವಿಧವಿಧವಾದ ಸಸ್ಯ ಮತ್ತು ಪ್ರಾಣಿಗಳ ಮೇಲೆ ಪ್ರಯೋಗ ನಡೆಸಿ, ಮೆಂಡೆಲ್‌ನ ತತ್ತ್ವಗಳನ್ನು ಒರೆಗಲ್ಲಿಗೆ ಹಚ್ಚಿ ನೋಡಿದ್ದಾಯಿತು. ಈ ತತ್ತ್ವಗಳಿಗೆ ಇಂಗ್ಲೆಂಡಿನ ಪ್ರಸಿದ್ಧ ಜೀವಶಾಸ್ತ್ರಜ್ಞನೂ, ಸಂಖ್ಯಾಶಾಸ್ತ್ರಜ್ಞನೂ ಆದ ಫ್ರಾನ್ಸಿಸ್ ಹಾಲ್ಟನ್‌ನಿಂದಲೂ, ಜರ್ಮನಿಯ ಪ್ರಖ್ಯಾತ ಜೀವವಿಜ್ಞಾನಿಯಾದ ಅಗಸ್ಟಸ್ ವೈಜಾಮನ್‌ನಿಂದಲೂ ಪುಷ್ಟಿ ದೊರೆಯಿತು. ಸಸ್ಯ ಮತ್ತು ಪಶುಪಾಲನೆಗೆ ಒಂದು ಶಾಸ್ತ್ರದ ಸ್ಥಾನ ದೊರೆಯಿತು.

ಪ್ರಕೃತಿಯು ಸಾಮ್ಯತೆಯಲ್ಲಿ ಭಿನ್ನತೆಯನ್ನು ತೋರುವುದು ಒಂದು ಸೋಜಿಗ. ಯಾವುದೇ ಎರಡು ಪ್ರಾಣಿಯಾಗಲಿ, ಎರಡು ಗಿಡವಾಗಲಿ, ಒಂದೇ ಜಾತಿಯದಿದ್ದರೂ, ಒಂದನ್ನೊಂದು ಹೋಲುವುದಿಲ್ಲ. ಒಂದೇ ಪಿಂಡದಿಂದ ಹುಟ್ಟಿದ ಅವಳಿಗಳನ್ನು ಬಿಟ್ಟು ಉಳಿದೆಲ್ಲ ಮನುಷ್ಯ, ಪಶು, ಪಕ್ಷಿ, ಗಿಡ, ಮರಗಳಲ್ಲಿ ಈ ಭಿನ್ನತೆಯು ಕಂಡುಬರುತ್ತದೆ. ಪ್ರಕೃತಿಯು ಈ ವಿರುದ್ಧ ಲಕ್ಷಣಗಳ ಸಮರಸದ ಸಮ್ಮಿಲನ. ಈ ಭಿನ್ನತೆಯ ಉತ್ಪತ್ತಿಯು ಹೇಗೆ? ಇಬ್ಬರು ಮನುಷ್ಯರು ಒಬ್ಬರನ್ನೊಬ್ಬರು ಸಂಪೂರ್ಣ ಹೋಲಬಾರದೇಕೆ?

ನಮ್ಮ ರೂಪರೇಷೆಗಳು ನಮಗೆ ಅನುವಂಶಿಕವಾಗಿ ಬಂದ ಗುಣಗಳನ್ನು ಅವಲಂಬಿಸಿರುತ್ತವೆ. ಮೆಂಡೆಲ್‌ನ ತತ್ತ್ವಕ್ಕೆ ಅನುಸಾರವಾಗಿ; ಸಂತಾನೋತ್ಪತ್ತಿಯ ಸಮಯದಲ್ಲಿ ಗಂಡು-ಹೆಣ್ಣಿನ ಗುಣಗಳು ಒಂದೆಡೆ ಕಲೆತು, ಯಾವುದೊಂದೂ ಗುರಿಯಿಲ್ಲದೆ ಸಂತಾನಕ್ಕೆ ಹಂಚಲ್ಪಡುತ್ತವೆ. ಆದುದರಿಂದಲೇ ಅಣ್ಣ-ತಮ್ಮಂದಿರಲ್ಲಿಯೂ, ಅಕ್ಕ-ತಂಗಿಯರಲ್ಲಿಯೂ ಭಿನ್ನತೆಯು ಎದ್ದು ಕಾಣುತ್ತದೆ. ಕೆಲವು ವೇಳೆ, ಹಾಲೆಂಡಿನ ಸಸ್ಯ

ಶಾಸ್ತ್ರಜ್ಞನಾದ ಡಿಫ್ರೈಸ್‌ನು ಪ್ರತಿಪಾದಿಸಿದಂತೆ, ಈ ಅನುವಂಶಿಕಗಳಲ್ಲಿ ಒಮ್ಮಿಂದೊಮ್ಮೆ ಬದಲಾವಣೆಯಾಗಿ, ಹೊಸಗುಣಗಳಾಗಿ ತಲೆದೋರ. ಬಹುದು. ಇಂತಹದಕ್ಕೆ ಉದಾಹರಣೆಯೆಂದರೆ, ಕೊಂಬಿಲ್ಲದ ವಿಲಾಯತಿ ರಾಸು, ಬಿಳಿ ಇಲಿ, ಬಿಳಿ ನವಿಲು. ಕೆಲವು ವೇಳೆ ಕಪ್ಪು ಬಣ್ಣದ ತಂದೆ-ತಾಯಿಗಳಿಗೆ ಹುಟ್ಟುವ ಬಿಳಿ ಬಣ್ಣದ, ಬಿಳಿ ತಲೆಗೂದಲಿನ ಕೂಸು, ಇತ್ಯಾದಿ. ಇಂತಹ ವೈತ್ಯಸ್ತ ಜೀವಿಗಳಿಂದಲೇ ಪ್ರಪಂಚದಲ್ಲಿ ನಮಗೆ ಕಾಣುವ ಪ್ರಾಣಿಗಳು ಮತ್ತು ಸಸ್ಯಗಳು ಉಂಟಾಗಿವೆಯೆಂದು ಡಿಫ್ರೈಸಿನ ಮತವಿದೆ.

ಇದುವರೆಗೆ ತಳಿಶಾಸ್ತ್ರದ ತತ್ತ್ವಗಳ ಪ್ರತಿಪಾದನೆಯಾಯಿತು. ಇಪ್ಪತ್ತನೆಯ ಶತಮಾನದ ಪ್ರಾರಂಭಕ್ಕೆ ಹೆಚ್ಚು ತೀಕ್ಷ್ಣವಾದ ಯಂತ್ರೋಪಕರಣಗಳಿಂದ ಉತ್ತೇಜಿತರಾದ ವಿಜ್ಞಾನಿಗಳು ಈ ತತ್ತ್ವಗಳಿಗೆ ಪ್ರಾಕೃತಿಕ ಅಥವಾ ಏಹಿಕ ಅಸ್ತಿತ್ವವಿದೆಯೇ ಎಂಬುದರ ಕಡೆಗೆ ಲಕ್ಷ್ಯ ಕೊಡಹತ್ತಿದರು. ಅವರ ಶೋಧನೆಯಿಂದ ಜೀವವಿಜ್ಞಾನದಲ್ಲಿಯೇ ಒಂದು ದೊಡ್ಡ ಕ್ರಾಂತಿಯಾಯಿತು. ಆಕಾರವಿಲ್ಲವೆಂದು ತಿಳಿದಿದ್ದ ಅನುವಂಶಿಕ ಗುಣಗಳಿಗೆ ಒಂದು ಆಕಾರ, ಒಂದು ಸ್ಥಾನ ದೊರೆತಂತಾಯಿತು. ಹೀಗೆ ಗುಣಗಳಿಗೆ ಏಹಿಕರೂಪಕೊಟ್ಟವರಲ್ಲಿ ವಿಲ್ಸನ್, ಥಾಮಸ್ ಹಂಟ್‌ಮಾರ್ಗನ್ ಮತ್ತು ಅವನ ಶಿಷ್ಯರಾದ, ಬ್ರಿಜಸ್, ಮುಲ್ಲರ್ ಮುಂತಾದವರು ಮುಖ್ಯರಾಗಿದ್ದಾರೆ. ಇವರಲ್ಲಿ ಮಾರ್ಗನ್‌ನಿಗೆ ಹತ್ತೊಂಬತ್ತು ನೂರಾ ಮೂವತ್ತು ಮೂರನೆಯ ಇಸವಿಯಲ್ಲಿ ನೊಬೇಲ್ ಪಾರಿತೋಷಕವೂ ದೊರೆಯಿತು.

ಯಾವುದೇ ಜೀವಿಯ ದೇಹವು ಕೋಟ್ಯಂತರ ಸೂಕ್ಷ್ಮ cells ಅಥವಾ ಕೋಶಗಳಿಂದ ಮಾಡಲ್ಪಟ್ಟಿದೆ—ಇಮಾರತು ಇಟ್ಟಂಗಿಯಿಂದ ಮಾಡಲ್ಪಟ್ಟಂತೆ. ಈ ಕೋಶವು ಜೀವವಸ್ತುವಿನ ಮೂಲರೂಪ. ಪ್ರತಿಯೊಂದು ಕೋಶದ ಮಧ್ಯದಲ್ಲಿ ನ್ಯೂಕ್ಲಿಯಸ್ ಎಂಬ ಮುಖ್ಯವಾದ ಜೀವಬಿಂದುವಿರುತ್ತದೆ. ಕೋಶವು ಬೆಳೆದು ದೊಡ್ಡದಾಗಿ ಎರಡು ಸರಿ ಕೋಶವಾಗಿ ವಿಭಜನೆಯಾಗುವ ಸಮಯದಲ್ಲಿ, ಈ ಜೀವಬಿಂದುವಿನಲ್ಲಿ ಕೆಲವೊಂದು ನಿರ್ದಿಷ್ಟವಾದ ಅತಿಸೂಕ್ಷ್ಮವಾದ ಎಳೆಗಳು ಕಾಣಿಸಿಕೊಳ್ಳುತ್ತವೆ. ಈ ಎಳೆಗಳ ಮೇಲೆ, ಹಾರದಲ್ಲಿ ಮುತ್ತುಗಳು ಜೋಡಿಸಲ್ಪಟ್ಟಂತೆ ಅನುವಂಶಿಕಗುಣಗಳ ಏಹಿಕರೂಪವಾದ "ಜೀನ್ಸ್" ಎಂಬ ಕಣಗಳು ಜೋಡಿಸಲ್ಪಟ್ಟಿವೆಯೆಂದು ಮಾರ್ಗನ್‌ನ ಅನುಮಾನವಿದೆ. ಇದಕ್ಕಾಗಿ ಅವನು ಡ್ರಾಸೋಫೈಲಾ ಎಂದು ಕರೆಯಲ್ಪಡುವ, ಕೊಳೆತ ಹಣ್ಣಿನ ಮೇಲೆ ಹಾರಾಡುವ ಸಣ್ಣ ನೊಣಗಳ ಮೇಲೆ ಅನೇಕ ವರ್ಷಗಳ ವರೆಗೆ ಪ್ರಯೋಗ ನಡೆಸಿ, ಸಾಕಷ್ಟು ಪುರಾವೆಗಳನ್ನು ವಿಜ್ಞಾನಿಗಳ ಮುಂದೆ ಇಟ್ಟಿದ್ದಾನೆ. ಜೀನ್ಸ್ ಕಣಗಳಲ್ಲಿ ಏನಾದರೂ ಬದಲಾವಣೆಯಾದಲ್ಲಿ ಅದಕ್ಕೆ ಅನುಗುಣವಾಗಿ ಅವು ಉಂಟುಮಾಡುವ ಗುಣಗಳಲ್ಲಿಯೂ ಬದಲಾವಣೆಯಾಗುತ್ತವೆ. ಇಂತಹ ಬದಲಾವಣೆಗಳಿಂದಲೇ ಡಿಫ್ರೈಸ್‌ನ ವೈತ್ಯಸ್ತ ಜೀವಿಗಳ ನಿರ್ಮಾಣವಾಗುತ್ತದೆ.

ಕಳೆದ ಅರ್ಧಶತಮಾನದಲ್ಲಿ ತಳಿಶಾಸ್ತ್ರವು ಜೀವವಿಜ್ಞಾನದ ಒಂದು ದೊಡ್ಡ ಅಂಗವಾಗಿ ಭರದಿಂದ ಮುಂದೆ ಸಾಗಿದೆ. ಸಸ್ಯ ಮತ್ತು ಪಶು-ಪಾಲನೆಯು, ಕತ್ತಲಲ್ಲಿ ಕಣ್ಮುಚ್ಚಿ ಹುಡುಕಿ, ಸಿಕ್ಕಿದರೆ ಸಿಕ್ಕಿತು ಇಲ್ಲದಿದ್ದರೆ ಇಲ್ಲ—ಎಂಬ ವ್ಯವಸಾಯವಾಗದೆ, ಶಾಸ್ತ್ರೀಯವಾದ, ನಿಖರವಾದ ಫಲಗಳನ್ನು ನಿರೀಕ್ಷಿಸಬಹುದಾದ ವೈಜ್ಞಾನಿಕ ನಿಯಮವಾಗಿದೆ. ಅದರ ಫಲವಾಗಿ ರೋಗಗಳಿಗೆ ತುತ್ತಾಗದ, ಹೆಚ್ಚು ಲಾಭಕಾರಿಯಾದ ಹೊಸ ಹೊಸ ಬೆಳೆಗಳೂ, ಸಾಕುಪ್ರಾಣಿಗಳೂ ನಿರ್ಮಿಸಲ್ಪಟ್ಟಿವೆ. ಇಷ್ಟಕ್ಕೇ ನಿಲ್ಲದೆ, ಸುದೃಢವಾದ, ಬುದ್ಧಿಶಾಲಿಯಾದ, ದೀರ್ಘಾಯುವುಳ್ಳ ಹೊಸ ಮಾನವಜನಾಂಗವನ್ನು ನಿರ್ಮಾಣ ಮಾಡುವ ಕನಸನ್ನೂ ವಿಜ್ಞಾನಿಯು ಕಾಣುತ್ತಿದ್ದಾನೆ. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಯಾವ ಕನಸಿಗಾಗಿ ದೃಢನಿಶ್ಚಯತೆಯಿಂದ, ಹತ್ತಾರು ವರ್ಷಗಳವರೆಗೆ ಅವಿಶ್ರಾಂತ ರೀತಿಯಿಂದ ಗ್ರಿಗರ್ ಜೋಹಾನ್ ಮೆಂಡೆಲ್‌ನು ದುಡಿದನೋ ಅದು ಇಂದು ನನಸಾಗಹತ್ತಿದೆ.

—o—

ಕಪ್ಪು ಗೆರೆಗಳು

ಶ್ರೀ· ದೇವೇಂದ್ರ ಕುಮಾರ

ಯೋಗ್ಯಕ್ರಮ

ಆ ಓಣಿಯ ಮೇಲೆ ದಾಳಿಯಾದಾಗ ದಾಳಿಕಾರರು ಅಲ್ಲಿಯ ಅಲ್ಪ ಸಂಖ್ಯಾಕರಲ್ಲಿ ಕೆಲವರನ್ನಂತೂ ಕಡಿದು ಚೆಲ್ಲಿದರು. ಉಳಿದ ಕೆಲವರು ತಮ್ಮ ಜೀವ ಉಳಿಸಿಕೊಂಡು ಓಡಿದರು. ಒಬ್ಬನು ಮಾತ್ರ ತನ್ನ ಹೆಂಡತಿಯೊಡನೆ ನೆಲಮಾಳಿಗೆಯಲ್ಲಿ ಅಡಗಿ ಕುಳಿತ.

ಎರಡು ಹಗಲು ಎರಡುರಾತ್ರಿ ಬಿಟ್ಟು ಬಿಡದೆ ಗಂಡ-ಹೆಂಡಿರು ದಾಳಿಗಾರರ ನಿರೀಕ್ಷಣೆಯಲ್ಲಿ ಕಳೆದರು. ಆದರೆ ಯಾರೂ ಬರಲಿಲ್ಲ.

ಮತ್ತೆ ಎರಡು ದಿನ ಉರುಳಿದುವು. ಸಾವಿನ ಭಯ ಕಡಿಮೆಯಾಯಿತು. ಹಸಿವು ನೀರಡಿಕೆ ಅವರನ್ನು ಪೀಡಿಸತೊಡಗಿದುವು.

ಮತ್ತೆ ನಾಲ್ಕು ದಿನ ಕಳೆದುವು. ಗಂಡ-ಹೆಂಡತಿ ಇಬ್ಬರಿಗೂ ಬದುಕು ಮತ್ತು ಸಾವು ಎರಡರಲ್ಲೂ ಅಭಿರುಚಿ ಉಳಿಯಲಿಲ್ಲ. ಇಬ್ಬರೂ ಹೊರಗೆ ಬಂದರು.

ಹೊರಗಿದ್ದ ಜನರ ಲಕ್ಷ್ಯ ಸಳೆಯುತ್ತ ಪತಿ ಬಹಳ ಮೆತ್ತನೆಯ ಸ್ವರದಲ್ಲಿ ನುಡಿದ; 'ಏನಾದರೂ ಮಾಡಿ! ನಾವಿಬ್ಬರೂ ನಿನ್ನ ಆಧೀನ!'

ಇತ್ತ ಗಮನಿಸಿದ ಆ ಜನರು ಸ್ವಲ್ಪ ವಿಚಾರದಲ್ಲಿ ತೊಡಗಿದರು: 'ನಮ್ಮ ಧರ್ಮದಲ್ಲಿ ಜೀವಹತ್ಯೆ ಪಾಪ'! ಅವರೆಲ್ಲರೂ ಜೈನರು. ಆದರೆ ಅವರು ತಮ್ಮಲ್ಲಿಯೇ ಮಾತನಾಡಿ ಒಂದು ನಿರ್ಣಕ್ಕೆ ಬಂದು, ಆ ಗಂಡ-ಹೆಂಡಿರ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳುವುದಕ್ಕಾಗಿ ಅವರನ್ನು ಎರಡನೆಯ ಓಣಿಯ ಜನರಿಗೆ ಒಪ್ಪಿಸಿದರು.

ಕಳಂಕ

(ಸಣ್ಣ ಕಥೆ)

ಶ್ರೀ. ಪಂ. ಮು. ಜೋಶಿ, ಧಾರವಾಡ

ಆತಿಪೂರ್ವದಲ್ಲಿ ನೇತಾಜಿಯವರ ಆಝಾದ್ ಹಿಂದ್ ಸರಕಾರ ಸ್ಥಾಪಿತವಾದ ವಾತಾವರಣದ ಹಿನ್ನೆಲೆಯಲ್ಲಿ ಕಥೆಯನ್ನು ಚಿತ್ರಿಸಲಾಗಿದೆ. ಬದುಕಲು ಹವಣಿಸಿದ ಜೋಡಿ ಯುಸುಫ್ ಖಾನನ ಸ್ವಾರ್ಥದ ಬೇವಸವೆತ್ತ; ದೇಶಭಕ್ತ ಜಸನನ ದೇಶಪ್ರೀತಿಯು ನಿಸ್ವಾರ್ಥಜೀವನವೆಂಬ ! ಒಂದು ನರಕ, ಇನ್ನೊಂದು ಸ್ವರ್ಗ !

ಸಿಂಗಪೂರಿನಲ್ಲಿ ಆಝಾದ್ ಹಿಂದ್ ಸರಕಾರ ಸ್ಥಾಪಿತವಾಗಿ ಅದೇ ೬-೭ ತಿಂಗಳುಗಳು ಕಳೆದಿದ್ದುವು. ಮಲಾಯಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಆಝಾದ್ ಹಿಂದ್ ಸೇನೆಯ ಠಾಣ್ಯಗಳನ್ನು ಮಾಡಲಾಗಿತ್ತು. ಫೂಲಾಲಂಪುರವು ಮಲಾಯಾದ ರಾಜಧಾನಿ. ಅಲ್ಲಿ ಬೀಡು ಬಿಟ್ಟ ಆಝಾದ್ ಹಿಂದ್ ಸೇನೆ, ಸಂಖ್ಯೆಯಲ್ಲಿ ಇತರ ಠಾಣ್ಯಗಳಿಗಿಂತ ಮಿಗಿಲಾಗಿದ್ದಿತು. ಸೈನಿಕ ಶಿಕ್ಷಣಕೇಂದ್ರಗಳನ್ನು ಮೊದಮೊದಲು ಎರಡೇ ಪಟ್ಟಣಗಳಲ್ಲಿ ತೆರೆಯಲಾಗಿತ್ತು. ಒಂದು ಸಿಂಗಪೂರಿನಲ್ಲಿ; ಮತ್ತೊಂದು ಕೋಲಾಲಂಪೂರಿನಲ್ಲಿ.

ಬಾಹೂ ರೋಡು ಕೋಲಾಲಂಪೂರಿನಲ್ಲಿಯ ಮುಖ್ಯ ರಾಜಮಾರ್ಗಗಳಲ್ಲೊಂದು. ರೇಲ್ವೆ ನಿಲ್ದಾಣವನ್ನು ಹಿಡಿದು ನೇರವಾಗಿ ಬುಕಿಟ್ ಬೆಂಟಾಂಗ್ ಪಾರ್ಕಿನ ವರೆಗೂ ಆ ರಾಜಮಾರ್ಗ ಹೋಗುತ್ತದೆ. ಬುಕಿಟ್ ಬೆಂಟಾಂಗ್ ಪಾರ್ಕು ಕೋಲಾಲಂಪೂರಿನಲ್ಲಿ ಬಿ. ಬಿ. ಪಾರ್ಕ್ ಎಂದೇ ಹೆಸರಾಗಿದೆ. ಈ ಬಿ. ಬಿ. ಪಾರ್ಕು ಯುದ್ಧಪೂರ್ವದಲ್ಲಿ ನೃತ್ಯ ಮತ್ತು ಇನ್ನಿತರ ವಿಲಾಸಮಯ ಜೀವನಕ್ಕೆ ಆಶ್ರಯಕೊಟ್ಟು ಸ್ಥಳವಾಗಿತ್ತು. ಒಮ್ಮೆ ಯಾವನೇ ಮನುಷ್ಯ ಬಿ ಬಿ. ಪಾರ್ಕಿನಲ್ಲಿ ಒಳಕೊಕ್ಕನೆಂದರೆ ತಿರುಗಿ ಹೊರಬರುವಾಗ, 'ಇಂದ್ರನ ಅಮರಾವತಿ ಇದಕ್ಕಿಂತ ಬೇರೆಯಲ್ಲ !' ಎಂದು ಹೇಳಿಕೊಳ್ಳುತ್ತಲೇ ಹೊರಬರುತ್ತಾನೆ. ಆದರೆ ಕೋಟೆಯ ಜೇಬುಗಳು ಖಾಲಿಯಾದ ಅನಂತರ ಮನೆ ಮುಟ್ಟುವಾಗ ಆಪತ್ತಿಗಾಗುತ್ತದೆ. ಇಂದು ಆದೇ ಬಿ. ಬಿ. ಪಾರ್ಕಿನಲ್ಲಿ ಆಝಾದ್ ಹಿಂದ್ ಸರಕಾರದ ಸೈನಿಕ ಶಿಕ್ಷಣವಿಭಾಗವನ್ನು ತೆರೆಯಲಾಗಿದೆ.

ನಧ್ಯಾಹ್ನದ ಒಂದುವರೆಯಾಗಿ ಹೋಗಿದೆ. ಬುಕಿಟ್ ಬೆಂಟಾಂಗ್ ಪಾರ್ಕಿನ ಎದುರಿನ ದೊಡ್ಡ ಪಟಾಂಗ (ಮೈದಾನು)ದಲ್ಲಿ ಆಝಾದ್ ಸೇನೆ ಶಿಸ್ತಿನಿಂದ ಕವಾಯಿತು ಮಾಡುತ್ತಿತ್ತು. ಕವಾಯಿತು ಮಾಡುತ್ತಿರುವ ತುಕಡಿ ಇನ್ನೇರಡು ವಾರಗಳಲ್ಲಿ ರಂಗೂನಿಗೆ ಹೋಗಬೇಕಾಗಿತ್ತು. ಪೂರ್ವನಿದ್ದತೆಯ ತಯಾರಿಗಾಗಿ ಈ ಪದೆ ತರಬೇತು ಹೊಂದುತ್ತಿತ್ತು. ಸತ್ತಿಯ ನೇಲಿಂದ ಸೂರ್ಯ ಕ್ಷಿತಿಜ ಮುಟ್ಟಿ ಹೋಗಿದ್ದರೂ ಉರಿಬಿಸಿಲು ಕಡಿಮೆಯಾಗಿರಲಿಲ್ಲ. ಆದರೂ ಯಾವ ಸೈನಿಕನೂ ಬಿಸಿಲಿನ ತಾಪಕ್ಕೆ ಕಳೆಗುಂದುತ್ತಿರಲಿಲ್ಲ.

ಎಲ್ಲರ ಕವಿಯಲ್ಲಿ ನೇತಾಜಿ ಸಿಂಗಪೂರಿನಲಿ ಮಾಡಿದ ಭಾಷಣದ ಕೆಲಸಾಲುಗಳು ಪ್ರತಿಧ್ವನಿಸುತ್ತಿದ್ದುವು:

"....ನಾಡಿನ ರಕ್ಷಣೆಗಾಗಿ ರಕ್ತದ ಕಾಣಿಕೆ ಕೂಡಿರಿ.....ಚಲೋ ದಿಲ್ಲಿ....ದಿಲ್ಲಿ ಚಲೋ...."

ರಕ್ತವನ್ನೇ ನೀಡುವುದಕ್ಕೆ ಸಿದ್ಧರಾಗಿ ಸೈನಿಕರು ಒಮ್ಮನಸ್ಸಿನಿಂದ ಕವಾಯತು ಮಾಡುತ್ತಿದ್ದರು. ಆ ಸೈನಿಕರ ನಿರ್ಧಾರ ಕಂಡು ಸೂರ್ಯನೇ ಮುಂದೆ ಮುಂದೆ ಸರಿಯುತ್ತಿದ್ದ.

ಎರಡು ಹೊಡೆದಾಗ ಊಟದ ಘಂಟೆಯಾಯಿತು. ಸೈನಿಕರೆಲ್ಲ ಶಿಸ್ತಿನಿಂದ ಕವಾಯತುಸಾಲಿನಿಂದ ಜಿಗಿದು ತಮ್ಮ ಊಟ ಇಸಿದುಕೊಳ್ಳುವುದಕ್ಕಾಗಿ ಊಟದ ಅಂಗಳಕ್ಕೆ ಬಂದರು.

ಸಾಲುಸಾಲಾಗಿ ನಿಂತು ಎಲ್ಲರೂ ಊಟ ಇಸಿದುಕೊಳ್ಳುತ್ತಿದ್ದರು. ಎಲ್ಲರಿಗೂ ಊಟ ಕೊಡಲಾಯಿತು. ಆದರೆ, ಕೂನೆಯಲ್ಲಿ ಮೂವರು ಸೈನಿಕರು ಉಳಿದರು. ಮಾಡಿದ ಅಡುಗೆ ಮುಗಿಸುಹೋಗಿತ್ತು. ಮೂವರ ಕೈಯಲ್ಲಿದ್ದ ಪ್ಲೇಟುಗಳು ಖಾಲಿಯಾಗಿಯೆ ಉಳಿದುವು. ಮುಂಜಾನೆಯಿಂದ ದುಡಿದು ದಣಿವಾಗಿತ್ತು ಎಲ್ಲರಿಗೂ. ಮನೆಯಲ್ಲಿ ಊಟಕ್ಕೆ ವೇಳೆಯಾಯಿತೆಂದರೆ ನಾವೆಲ್ಲ ಎಷ್ಟೊಂದು ಹರಿಹಾಯುತ್ತೇವೆ ! ಆ ಸೈನಿಕರ ಪಾಡೇನು ? ಆದರೆ ಆ ಮೂವರೂ ಕುಟಿ ಬಿಚ್ಚಲಿಲ್ಲ. ಊಟದ ಮೇಲ್ವಿಚಾರಕ ಹವಾಲ್ದಾರ ಅವರನ್ನು ವಿಚಾರಿಸಿಕೊಂಡ:

"ಇವೊತ್ತು ಪೆನಾಂಗಿನಿಂದ ರೇಶನ್ ಸ್ವಲ್ಪ ಕಡಿಮೆ ಬಂದಿತ್ತು.. ಕ್ಷಮಿಸಿ....ಆದರೂ...." ಆ ಮೂವರಲ್ಲಿ ಒಬ್ಬನು ಉತ್ತರಿಸಿದ

"ಏನೂ ತಿಳಿದುಕೊಳ್ಳಬೇಡಿ ಹವಾಲ್ದಾರಜಿ !"

"ಆದರೆ ಹೊಟ್ಟೆಗೆ ಏನಾದರೂ ಬೇಕೇ ಇಲ್ಲವೇ ? "

"ಕೈಯಲ್ಲಿ ಸ್ವಲ್ಪ ಹಣವಿದೆ"

"ಹಾಗಾದರೆ ಪೋಸ್ಟ್ ಆಫೀಸಿನ ಹತ್ತಿರಿನ ಅಯ್ಯರ್ಸ್ ಹೋಟಿಲ್ಲಿಗೆ ಹೋಗಿಬರ್ರೀರಾ ? "

"ಅದೂ ಈಗ ಮುಚ್ಚಿರುತ್ತದೆ. "

"ಹಾಗಾದರೆ ? "

"ಇದು ಮಲಾಯಾ ಅಲ್ಲವೇ ? "

"ಹೌದು ! "

"ಅಂದ ಮೇಲೆ, ಅನನಸ ಹಣ್ಣಿಗೇನು ಕಡಿಮೆ ? "

"ಹೌದು ನಿಜ, ಆದರೆ ಸರಕಾರದ ಕೆಲಸಮಾಡಿ ಸ್ವಂತ ಹಣದಿಂದ ಹೊಟ್ಟೆತುಂಬಿಸಿಕೊಳ್ಳಿರೆಂದು ಹೇಳುವುದಕ್ಕೆ ನನಗೆ ಸ್ವಲ್ಪ ನಾಚಿಕೆಯಾಗುತ್ತಿದೆ. "

ಹವಾಲ್ದಾರ ಸ್ವಲ್ಪ ಸಂಕೋಚದಿಂದಲೇ ಈ ಮಾತನ್ನು ಹೇಳಿದ. ಇದನ್ನು ಕೇಳಿದ ಆ ಮೂವರಲ್ಲಿ ಒಬ್ಬ ಉತ್ತರಿಸಿದ:

"ನಾಡಿನ ರಕ್ಷಣೆಗಾಗಿ ರಕ್ತದ ಕಾಣಿಕೆ ಕೊಡಲು ಸಿದ್ಧರಾಗಿದ್ದೇವೆ ಹವಾಲ್ದಾರ್ ! ಎಂದ ಮೇಲೆ ಕೈಸೊಳಗಿದ್ದ ೫೦-೬೦ ಸೆಂಟುಗಳನ್ನು ಖರ್ಚುಮಾಡಲು ಹಿಂಜರಿಯಬೇಕೆ ? "

ಮೂವರೂ ಗರ್ಜಿಸಿದರು : "ಚಲೋ ದಿಲ್ಲಿ—ದಿಲ್ಲಿ ಚಲೋ. "

"ಠಾಫಾ" ಬಿ.ಬಿ. ಪಾರ್ಕಿನ ಆಚ್ಚೆಯ ಮೇಲಿಂದ ಧ್ವನಿಯೊಂದು ಕೇಳಬಂತು :

ಮೂವರೂ ಹೊರಳಿದರು. ಹವಾಲ್ದಾರನೂ ಹೊರಳಿ ನೋಡಿದ. ಅಟ್ಟದ ಮೇಲೆ ನಿಂತವರು ಸುತ್ತಾರೂ ಅಲ್ಲ; ಕರ್ನಲ್ ಭೋಸಲೆಯವರು.

ಮತ್ತೊಮ್ಮೆ "ಶಾಭಾಸ್" ಎನ್ನುತ್ತ ಕರ್ನಲ್ ಭೋಸಲೆಯವರು ಆ ಮೂವರ ಬಳಿಗೆ ಬಂದರು. ಹವಾಲ್ದಾರ ಸೆಲ್ಯೂಟ್ ಹೊಡೆದ. ಆ ಮೂವರೂ ಸೆಲ್ಯೂಟ್ ಹೊಡೆದು "ಜಯಹಿಂದ್" ಎಂದು ಗರ್ಜಿಸಿದರು.

ಕರ್ನಲ್ ಭೋಸಲೆಯವರು ಪ್ರೇಮದಿಂದ ಕೇಳಿದರು:

"ಈಗ ನೀವಾಡಿದ ಮಾತನ್ನು ಕೇಳಿ ನನಗೆ ತುಂಬಾ ಆನಂದವಾಯಿತು; ಊಟ ಸಿಕ್ಕಲಿಲ್ಲವೆಂದು ನೀವು ಕೆರಳಲಿಲ್ಲ. ಅದರ ಬದಲು 'ನಾಡಿನ ರಕ್ಷಣೆಗಾಗಿ ರಕ್ತದ ಕಾಣಿಕೆ' ಎಂಬ ನೇತಾಜಿಯವರ ಪವಿತ್ರ ಮಾತನ್ನು ಜ್ಞಾಪಿಸಿಕೊಂಡಿರಿ. ಇಂತಹ ನಿಃಸ್ವಾರ್ಥಿ ಸೈನಿಕರ ಅಗತ್ಯವಿದೆ. ನಿಮ್ಮ ಹೆಸರೇನು?"

"ಮಹಮ್ಮದ್ ಯುಸೂಫ್‌ಖಾನ್" ಮೊದಲನೆಯ ಸೈನಿಕ ಉತ್ತರಿಸಿದ.

"ಅಸಲ್ ನೂರ್‌ಖಾನ್" ಎರಡನೇಯವನು ಹೇಳಿದ.

"ಮತ್ತೆ ನಿಮ್ಮದು?"

"ಸಯ್ಯದ್ ಮಹಮ್ಮದ್" ಮೂರನೆಯವ ಉತ್ತರಿಸಿದ.

ಭೋಸಲೆಯವರು ಹೆಸರನ್ನು ಕೇಳುತ್ತಿರುವಂತೆ ದಂಗುಬಡೆದು ನಿಂತರು. ಭಾರತದಲ್ಲಿ ನಡೆದ ಅಸೂಯಾಪರ ಸ್ಪರ್ಧೆಯ ಅಸ್ಪಷ್ಟಚಿತ್ರ ಅವರ ಕಣ್ಣೆದುರಿನಲ್ಲಿ ಸುಳಿಯಿತು. ಜಾತೀಯತೆಯ ಘಟಸರ್ಪ ನರ್ತನ ನಡೆಸಿತ್ತು ಅಲ್ಲಿ– ಅದರ ಹಾಲಾಹಲದ ಉರಿಗೆ ನಿಷ್ಪಾಪ ಜೀವಿಗಳು ಬಲಿಬೀಳುತ್ತಿದ್ದುವು. ಆದರೆ ಇಲ್ಲಿ? ಎಲ್ಲವೂ ವಿಚಿತ್ರ! ಹೆಚ್ಚು ಹೊತ್ತು ವಿಚಾರಿಸುವುದಕ್ಕೆ ಕರ್ನಲ್ ಭೋಸಲೆಯವರಿಗೆ ಸಮಯವಿರಲಿಲ್ಲ. ಹವಾಲ್ದಾರನಿಗೆ ಊಟಕೊಡಲು ಹೇಳಿ, ಆ ಮೂವರಿಗೂ ಊಟ ಮುಗಿಸಿ ತಮ್ಮ ಆಫೀಸಿಗೆ ಬರಹೇಳಿ ಹೊರಟರು.

ಊಟವಾದಾಕ್ಷಣ ಮೂವರೂ ಭೋಸಲೆಯವರ ಬಳಿ ಬಂದು ನಿಂತರು. ಭೋಸಲೆಯವರು ಮಹಮ್ಮದ್ ಯುಸೂಫ್‌ಖಾನನನ್ನು ಕೇಳಿದರು:

"ನೀವು ಈ ಮೊದಲು ಯಾವ ಯುನಿಟ್‌ನಲ್ಲಿದ್ದಿರಿ?"

"8th ಇನಫಂಟ್ರಿ ಬ್ರಿಗೇಡ್."

"ಸಿಂಗಪೂರಿನಲ್ಲಿ ಸೆರೆಹಿಡಿಯಲ್ಪಟ್ಟಿರಿ?"

"ಅಲ್ಲ. ಜೋಹರ್‌ಬಾರುವಿನಲ್ಲಿ!"

"ಯಾವಾಗ?"

"೧೯೪೨ನೆಯ ಸಪ್ಟೆಂಬರ್ ೧೯ಕ್ಕೆ."

"ಹೀಗೋ? ನಿಮ್ಮ ಬಳಗದಲ್ಲಿ ಮತ್ತಾರಾದರೂ ಬ್ರಿಟಿಷ್ ಸೈನ್ಯಖಾತೆಯಲ್ಲಿದ್ದಾರೆಯೇ?"

"ಇದ್ದಾರೆ. ನನ್ನ ತಮ್ಮ ಹಸನ್‌ಖಾನ್. ಅವನೂ ಆರಾಕಾನ್ ಫ್ರಂಟಿನಲ್ಲಿದ್ದ. ಈಗೆಲ್ಲಿದ್ದಾನೋ ತಿಳಿಯದು."

"ಯುಸೂಫ್‌ಖಾನ್, ನಿಮಗೊಂದು ಜವಾಬ್ದಾರೀ ಕೆಲಸ ಕೊಡಬೇಕೆಂದು ಯೋಚಿಸಿದ್ದೇನೆ. ಆ ಕೆಲಸಕ್ಕೆ ನೀವೇ ಯೋಗ್ಯರಾದವರೆಂದು ಕಂಡುಹಿಡಿದಿದ್ದೇನೆ. ಆ ಕೆಲಸವನ್ನು ಜೆನ್ನಾಗಿ ಪಾರುಗಾಣಿಸಿದರೆ, ಭಾರತದ ಇತಿಹಾಸದಲ್ಲಿ ನಿಮ್ಮ ಹೆಸರು ಅಚ್ಚಳಿಯದೇ ಉಳಿಯುತ್ತದೆ. ನಾಡಿನ ಸ್ವಾತಂತ್ರ್ಯಹೋರಾಟಕ್ಕಾಗಿ ಬಂಧುಬಳಗದವರಾರನ್ನೂ ಲೆಕ್ಕಿಸದೇ ಕೊಡಾಡಿದ ಮಹಾವೀರ, ಕರ್ಮಯೋಗಿ— ಎಂದು, ಇತಿಹಾಸ ಮುಂಬರುವ ಜನಾಂಗಕ್ಕೆ ಕೂಗಿ ಹೇಳಬಹುದು."

"..... ?"

"ನಿಮಗೆ ಕೊಡುವ ಕೆಲಸ ಈಗ ಹೇಳಲೇ?"

"ಪೇಳಿದರೆ ಒಳಿತು!"

"ಬೇಡ, ಅದನ್ನು ನೀವು ನೇತಾಜಿಯವರ ಬಾಯಿಂದಲೇ ಕೇಳುವಿರಂತೆ. ಆದರೆ ನೀವು ಮೂರೂ ಜನ ಇಂದೆಯೆ ಪೆನಾಂಗಕ್ಕೆ ಸ್ಪೆಶಲ್ ಕೋರ್ಸಿಗಾಗಿ ಹೋಗಬೇಕು. ಅಲ್ಲಿ ನಿಮಗೆ ಜಪಾನೀ ತಜ್ಞರಿಂದ ಶಿಕ್ಷಣ ಕೊಡಿಸುವ ಏರ್ಪಾಡನ್ನು ಮಾಡಲಾಗಿದೆ. ಕೇವಲ ೨೦ ದಿವಸ ಮಾತ್ರ!"

ಮೂವರೂ ಸೆಲ್ಯೂಟ್ ಹೊಡೆದು, ಪೆನಾಂಗಕ್ಕೆ ಹೊರಡಲು ಸಿದ್ಧರಾದರು.

* * * *

೧೯೪೪ನೆಯ ಫೆಬ್ರುವರಿ ೨೭ನೆಯ ದಿನ ಮೂಡಿತು. ನೇತಾಜಿ ಸುಭಾಸ್ ಬೋಸರು ಪೆನಾಂಗಿನಲ್ಲಿ ಬಂದಿಳಿದರು. ಅಲ್ಲಿ ಅವರಿಗಾಗಿ ತುಂಬಾ ಕೆಲಸಗಳು ಕಾಯ್ದುಕೊಂಡಿದ್ದುವು. ಮುಖ್ಯವಾದುವುಗಳಲ್ಲಿ— ಹವಾಲ್ದಾರ್ ಯುಸೂಫ್‌ಖಾನನ ಗುಂಪಿನವರಿಗೆ ಭಾರತಕ್ಕೆ ಹೊರಡುವ ಪೂರ್ವದಲ್ಲಿ ಕೊಡುವ— ಉಪದೇಶವೂ ಒಂದಾಗಿತ್ತು.

೨೦ದಿನಗಳ ಶಿಕ್ಷಣವನ್ನು ಪಡೆದ ಯುಸೂಫ್‌ಖಾನ್, ನೂರ್‌ಖಾನ್, ಸೈದ್‌ಮಹಮ್ಮದ್ ಅವರನ್ನು ನೇತಾಜಿಯವರಿದ್ದ ತಂಬೂಕ್ಕೆ ಕರೆತರಲಾಯಿತು. ತಂಬುವನ್ನು ಪ್ರವೇಶಿಸಿದ ಕೂಡಲೆ ಮೂವರೂ "ಜಯಹಿಂದ್" ಎಂದು ಗರ್ಜಿಸಿ ನೇತಾಜಿಯವರಿಗೆ ಪ್ರಣಾಮ ಸಲ್ಲಿಸಿ ನಿಂತರು. ನೇತಾಜಿಯವರು ನಿಷ್ಕಪಟ ನಗೆ ನಗುತ್ತ ಮೂವರನ್ನೂ ಸ್ವಾಗತಿಸಿದರು. ಆ ಮೂವರ ಹತ್ತಿರಕ್ಕೂ ಹೋಗಿ ಅವರ ಬೆನ್ನ ಮೇಲೆ ಪ್ರೇಮದಿಂದ ಕೈ ಸವರುತ್ತ ಹೇಳಿದರು:

"ನಿಮಗೆ ಈಗಾಗಲೇ, ನೀವು ಮಾಡಬೇಕಾದ ಕಾರ್ಯದ ರೂಪರೇಷೆಗಳನ್ನು ಕರ್ನಲ್ ಬೋಸಲೆ ತಿಳಿಸಿದ್ದಾರೆ. ನಿಮ್ಮಂಥ ಮುಸಲ್ಮಾನರು ಇಂದು ನಮ್ಮ ನಾಡಿಗೆ ಬೇಕಾಗಿದ್ದಾರೆ. ಭಾರತವನ್ನು ಬಹುಕಾಲ ಆಳಬೇಕೆಂದು ಹಾತೊರೆಯುವ ಬ್ರಿಟಿಷರಿಗೆ ಬುದ್ಧಿ ಕಲಿಸಲು ನಿಮ್ಮಂಥಹ ಮುಸಲ್ಮಾನರೇ ಬೇಕು. ನಮ್ಮನಮ್ಮಲ್ಲಿಯೇ ಒಡಕನ್ನು ಹುಟ್ಟಿಸಿ ತಮ್ಮ ಭೇದನೀತಿಯಿಂದ ಆಳುತ್ತಿರುವ ಬ್ರಿಟಿಷರಿಗೆ ನಾವು ಒಂದು ಕೈ ತೋರಿಸಲೇ ಬೇಕು. ನಾವು ಅನುಸರಿಸಿದ ಮಾರ್ಗ ಅಧರ್ಮದ್ದಲ್ಲ. ಇದರಲ್ಲಿ ಯಾವ ಪಾಪವೂ ಇಲ್ಲ. ನಿಮ್ಮ ಕೆಲಸವಿಷ್ಟೇ: ಭಾರತಕ್ಕೆ ಹೋಗಿ, ಅಲ್ಲಿ ಜಾತಿಯತೆಯ ಭೂತಕ್ಕೆ ಅಜ್ಞಾನದಿಂದ ಬಲಿಬಿದ್ದ ಮುಸ್ಲಿಮ್ ಬಂಧುಗಳನ್ನು ರಾಷ್ಟ್ರೀಯರನ್ನಾಗಿ ಪರಿವರ್ತಿಸುವುದು— ಐಕ್ಯತೆಯ ಬಗ್ಗೆ ಪ್ರಚಾರ ನಡಿಸುವುದು;

ಅವುಂಟಾಗುವ ಲಾಭವನ್ನು ಅವರ ಮನಸ್ಸಿನಲ್ಲಿ ಬಿಂಬಿಸಿ ಅವರನ್ನು ರಾಷ್ಟ್ರೀಯರನ್ನಾಗಿ ಮಾಡುವುದು! ಏಂಮೆಯ ನೀವು ಸೇನಾಂಗ ಬಂದರವನ್ನು ಬಿಡುತ್ತಿದ್ದೀರಿ. ನನಗೆ ಧೈರ್ಯವಿದೆ, ನಿರ್ವಾಸನೆ—ನೀವು ನಿಮ್ಮ ಕೆಲಸವನ್ನು ಜೀವದ ಬೆಲೆಯಿಟ್ಟಿಡಿದೇ ಕೊನೆಗಾಣಿಸುವಿರೆಂದು. ಜಯಹಿಂದ್!"

"ಜಯಹಿಂದ್" ಮೂವರೂ ಗರ್ಜಿಸಿದರು.

ಕರ್ನಲ್ ಭೋಸಲೆಯವರು ಬಂದು, ಪ್ರತಿಯೊಬ್ಬರಿಗೂ ೧೦೦ ರೂಪಾಯಿಗಳನ್ನು ಕೊಟ್ಟರು. ಯುಸೂಫ್‌ಖಾನ್ ಆಶ್ಚರ್ಯಚಕಿತನಾಗಿ ಕೇಳಿದ: "ಇಷ್ಟೊಂದು ರೂಪಾಯಿಗಳೇಕೆ?"

"ಫ್ರಾನ್ಸಿಗೆ ಹೋದ ಬಳಿಕ ಮುಂದಿನ ನಿಮ್ಮ ಸಾಕಾರ್ಯಕ್ಕಾಗಿ!" ಎಂದು ಹೇಳಿ ಕರ್ನಲ್ ಭೋಸಲೆಯವರು, ಮತ್ತೆ ಪ್ರತಿಯೊಬ್ಬರಿಗೆ ಎರಡೆರಡು ಪಿಸ್ತೂಲುಗಳನ್ನು, ಒಟ್ಟಿನಲ್ಲಿ ೨ ಪಜ್ರಗಳನ್ನು ತರಿಸಿಕೊಟ್ಟರು. ಕೊನೆಯಲ್ಲಿ ಮೂರು ಹುಕ್ಕಾಗಳನ್ನು ಜಪಾನೀಯೆರಿಂದ ತರಿಸಿ ಮೂವರಿಗೂ ಕೊಟ್ಟರು. ಯುಸೂಫ್‌ಖಾನ್ ಮತ್ತೆ ಹೇಳಿದ: "ನಮಗೆ ಹುಕ್ಕಾದ ಅವಶ್ಯಕತೆ ಇಲ್ಲ; ಈಗಾಗಲೇ ನಮ್ಮ ಪತ್ತಿರ ಹುಕ್ಕಾಗಳಿವೆ!"

"ಆ ಹುಕ್ಕಾ ನೇದುವುದಕ್ಕೆ; ಈ ಹುಕ್ಕಾ ಮಾತನಾಡುವುದಕ್ಕೆ! ಇವರ ಒಳಗುಟ್ಟನ್ನು ನಿಮ್ಮ ಸಬ್‌ಮರೀನಿನ ಜಪಾನೀ ಕಮಾಂಡರ್ ಮುಸಾಕಾ ನಿಮಗೆ ತಿಳಿಸಿ ಹೇಳುವರು. ಇನ್ನು ನೀವು ಹೊರಡಬಹುದು!" ಎಂದು ಕರ್ನಲ್ ಭೋಸಲೆಯವರು ಹೇಳಿದರು.

* * * *

ಅಂದೆಯೆ ಸಂಜೆಯ ಆರುಗಂಟೆ ಹೊಡೆದು ಹೋಗಿತ್ತು. ಮೂವರೂ ಸಬ್‌ಮರೀನನ್ನೇರಿದರು. ಜಪಾನೀ ಕಮಾಂಡರ್ ಮುಸಾಕಾ, ಮೂವರನ್ನೂ ಮುಗುಳುನಗೆಯಿಂದಲೇ ಸ್ವಾಗತಿಸಿದ. ೬॥ ಗಂಟೆಗೆ ಕಡಲು ಶಾಂತವಾಗಿತ್ತು. ಸಬ್‌ಮರೀನು ಪೆನಾಂಗಿನ ಕಡಲ ತಡಿಯಿಂದ ಕದಲಿತು.

ಯುಸೂಫ್‌ಖಾನ್, ನೂರಖಾನ್, ಮತ್ತು ಸಯ್ಯದ ಮಜಮ್ಮದ್ ಮೂವರೇ ಸಬ್‌ಮರೀನಿನಲ್ಲಿದ್ದ ಭಾರತೀಯರು. ಉಳಿದವರೆಲ್ಲ ಜಪಾನೀಯರು. ಅವರ ಭಾಷೆ ಇವರಿಗೆ ತಿಳಿಯುವಂತಿಲ್ಲ. ಇವರ ಭಾಷೆ ಅವರಿಗೆ ಬಾರದು. ಸಬ್‌ಮರೀನು ಇನ್ನೂ ನೀರಿನ ಪಾತಳಿಯ ಮೇಲೆಯೇ ನಡೆದಿತ್ತು. ಕೆಳಗಿದ್ದ ಮೂವರೂ ಊಟ ಮುಗಿಸಿಕೊಂಡು, ಹರಟೆ ಹೊಡೆಯಲಿಕ್ಕೆಂದು ಮೇಲಕ್ಕೆ ಬಂದು ಪಾತನಾಪುತ್ತ ಕುಳಿತರು.

ಕಡಲು ಭೋರ್ಗರೆಯುತ್ತಿತ್ತು. ಗಾಳಿ ವೇಗದಿಂದ ಬೀಸುತ್ತಿತ್ತು. ಪೆನಾಂಗ್ ದ್ವೀಪದ ದೀಪಗಳೂ ಕಾಣಿಸುತ್ತಿರಲಿಲ್ಲ. ತಮ್ಮ ಮಾತೃಭೂಮಿಯತ್ತ ಹೊರಟ ಮೂವರಿಗೂ ಪೆನಾಂಗ್ ದ್ವೀಪದ ದೀಪದ ಬೆಳಕು ಬೇಕಿರಲೂ ಇಲ್ಲ.

ಮೂವರ ಹರಟೆಗೆ ಜಪಾನೀ ಕಮಾಂಡರ್ ಮುಸಾಕಾನ ಆಗಮನದಿಂದ ಕಡೆಯಾಯಿತು. ಆ ಮೂವರ ಬಳಿಯಲ್ಲಿ ಬಂದು ಕುಳಿತು ಮುಸಾಕಾ, ಸನ್ನೆಯಿಂದಲೇ ಯೋಗಕ್ಷೇಮವನ್ನು ವಿಚಾರಿಸಿದ. ಸನ್ನೆಯಿಂದಲೇ ಮೂವರೂ "ಚೆನ್ನಾಗಿದ್ದೇವೆ" ಎಂದುತ್ತರಿಸಿದರು.

ಮುಸಾಕಾ ಮತ್ತೆ ಹೇಳಿದ:

"ನಿಮ್ಮ ಹುಕ್ಕಾ ತೆಗೆದುಕೊಂಡು ಬನ್ನಿ!" ಯುಸೂಫ್‌ಖಾನ್ ಆಗ ಹುಕ್ಕಾ ಎಳೆಯುತ್ತಿದ್ದ. ಆ ಹುಕ್ಕಾವನ್ನೇ ಕೊಡಹೋದ.

"ಇದಲ್ಲ ಇದು. ನೇತಾಜಿಯವರ ತಂಬುವಿನಲ್ಲಿ ನಿಮಗೆ ಕೊಟ್ಟದ್ದು!" ಮುಸಾಕಾ ಸ್ಪಷ್ಟೀಕರಿಸಿದ.

ನೂರಖಾನ್ ಕೂಡಲೇ ಸಬಮರೀನಿನ ದುಂಡಾದ ಬಾಗಿಲಿಂದ ಕೆಳಗಿಳಿದು, ಆ ಹುಕ್ಕಾವನ್ನು ತಂದು ಮುಸಾಕಾನ ಕೈಗಿರಿಸಿದ. ಮುಸಾಕಾ ಕಂದೀಲಿನ ಮಬ್ಬುಬೆಳಕಿನಲ್ಲಿಯೇ ಅದರ ಕೆಲ ಭಾಗ ಬಿಚ್ಚಿ ತೋರಿಸಿದ. ಮೂವರೂ ಸ್ತಂಭಿತರಾದರು.

ತಂಬಾಕು ಮತ್ತು ನೀರು ಇರುವ ಬದಲು ಆಲ್ಲಿದ್ದುದು ಬೇರೆಯೇ. ಅದು ವಾಯರ್‌ಲೆಸ್ ಸೆಟ್ಟಾಗಿದ್ದಿತು. ಅದನ್ನು ಉಪಯೋಗಿಸುವ ಬಗೆಯನ್ನು ಮುಸಾಕಾ ತಿಳಿಸಿ ಹೇಳಿದ. ಎಲ್ಲರಿಗೂ ನಿದ್ದೆ ಕಾಡುತ್ತಿತ್ತು. ಎಲ್ಲರೂ ಸಬ್‌ಮರೀನಿನ ಕೆಳಭಾಗಕ್ಕೆ ಇಳಿದರು. ಯುಸೂಫ್‌ಖಾ ಮುಸಾಕಾನನ್ನು ಅಧೀರನಾಗಿಯೇ ಕೇಳಿದ:

"ಇಷ್ಟೊತ್ತಾದರೂ ನಮ್ಮ ಸಬ್‌ಮರೀನು ನೀರ ಮೇಲೆಯೇ ನಡೆದಿದೆಯಲ್ಲಾ? ನಾವಿನ್ನು ಮಲಗುತ್ತೇವೆ. ಸಬ್‌ಮರೀನು ನೀರ ಕೆಳಗಿಳಿಯುವುದಿಲ್ಲವೇ?"

"ಆಂದಮಾನದ ವರೆಗೂ ಇದು ನೀರಮೇಲೆಯೇ ನಡೆಯುತ್ತದೆ. ಅಲ್ಲಿಯ ವರೆಗೆ ನಮಗಾವ ಭಯವೂ ಇಲ್ಲ. ಅನಂತರ ಮಾತ್ರ...."

"ಆಕಸ್ಮಾತ್ ವೈರಿಗಳ ವಿಮಾನಗಳು ಬಂದರೆ?"

"ನಮ್ಮ ಆಬ್ಸರ್ವರ್ ಇರುತ್ತಾನಲ್ಲ! ಅವನು ಎಚ್ಚರಿಕೆ ಕೊಡುತ್ತಾನೆ. ಅವನು ಎಚ್ಚರಿಕೆ ಕೊಟ್ಟಾಕ್ಷಣ, ಎರಡು ನಿಮಿಷದಲ್ಲಿ ನಾನು ಸಬ್‌ಮರೀನನ್ನು ಪಾತಳಿಯ ಕೆಳಕ್ಕೆ ಒಯ್ಯುತ್ತೇನೆ."

ಯುಸೂಫ್‌ಖಾನ್ ನಿಶ್ಚಿಂತತೆಯ ನಿಟ್ಟುಸಿರನ್ನು ಬಿಟ್ಟು, ಇಬ್ಬರ ಬತೆಯಲ್ಲಿ ಕೋಣೆಯ ಕಡೆ ಹೊರಳಿದ.

"ಜಯಹಿಂದ್" ಮುಸಾಕಾ ಒದರಿ ಹೇಳಿದ.

"ಜಯಹಿಂದ್" ಕೋಣೆಯ ಕಡೆ ನಡೆದ ಮೂವರೂ ಹೊರಳಿ ಉತ್ತರಿಸಿದರು.

* * * *

ದಿನ ಮೂಡುತ್ತಿತ್ತು; ಮುಳುಗುತ್ತಿತ್ತು. ಕಡಲು ಒಂದೇ ರಾಗದಲ್ಲಿ ಭೋರ್ಗರೆಯುತ್ತಿತ್ತು. ಆಂದಮಾನು ದಾಟಿ ಹೋಗಿದ್ದುದರಿಂದ, ಸಬ್‌ಮರೀನು ನೀರಿನೊಳಗಿಂದಲೇ ಮುನ್ನಡೆದಿತ್ತು. ಒಳಗಿದ್ದವರೆಲ್ಲ ಸೆಕೆಯಲ್ಲಿ ಕಸವಿಸಪಡುತ್ತಿದ್ದರು. ಹಗಲು ಕಳೆದು ರಾತ್ರಿಯಾಪಾಗಷ್ಟೇ ಸಬ್‌ಮರೀನು ನೀರ ಮೇಲೆ ಬರುತ್ತಿತ್ತು. ಆಗಲೇ ಮೂವರೂ ಹಾಯಾಗಿ ಉಸಿರಾಡಿಸಲು ಸಬ್‌ಮರೀನಿನ ಮೇಲೆ ಹೊರಬರುತ್ತಿದ್ದರು. ಒಂದೊಂದು ದಿನ ಒಂದೊಂದು ಯುಗವಾಗಿ ಪರಿಣಮಿಸುತ್ತಿತ್ತು. ಅಂಥದರಲ್ಲಿಯೇ ಮುಂಬಯಿಯನ್ನು

ಪಾಟ, ಕರಾಚಿಯ ಬಳಿ ಕಡಲಿಗೆ ಬಂದರು. ಯುಸೂಫ್‌ಖಾನ್ ಡಾಯರಿಯನ್ನು ತೆಗೆದು ನೋಡಿದ.

"೧೭ನೆಯ ಮಾರ್ಚ್ ೧೯೪೪. ಅಬ್ಬಾ! ೨೦ ದಿನಗಳನ್ನು ಕಳೆದೆವೇ?" ಎಂದುಕೊಂಡ.

ಅಂದೆಯೆ ರಾತ್ರಿ ಹನ್ನೆರಡು ಗಂಟೆಗೆ ಸಬ್‌ಮರೀನು ಸಮುದ್ರದ ಮೇಲ್ಭಾಗಕ್ಕೆ ಬಂದಿತು. ಯುಸೂಫ್‌ಖಾನ್ ಮೊದಲಿಗೆ ಮೇಲಕ್ಕೆ ಬಂದು ಹಾಯಾಗಿ ಉಸಿರಾಡಿಸಿದ. ಹಿಂದಿನಿಂದ ಎಲ್ಲರೂ ಬಂದರು. ಮುಸಾಕಾನೂ ಅವರನ್ನು ಹಿಂಬಾಲಿಸಿದ.

ಕಗ್ಗತ್ತಲೆ ಪಸರಿಸಿತ್ತು. ನೀರಿನ ಬಣ್ಣವೂ ಕಪ್ಪಾಗಿತ್ತು. ಕಡಲು ಭೋರ್ಗರೆಯುತ್ತಿತ್ತು. ಸಮುದ್ರದ ದೊಡ್ಡ ದೊಡ್ಡ ಅಲೆಗಳು ಸಬ್‌ಮರೀನಿಗೆ ಅಪ್ಪಳಿಸಿದಾಗ ಆಗುವ ಸಪ್ಪಳ ಭಯಂಕರವಾಗಿತ್ತು. ಆ ಅಲೆಗಳ ಹೊಡೆತ ಶಾಂತಿಯನ್ನು ಭಂಗಗೊಳಿಸುತ್ತಿತ್ತು. ಆ ಸಪ್ಪಳದಿಂದ ಕಾರ್ಗತ್ತಲೆಯ ರೌದ್ರತೆ ಹೆಚ್ಚುತ್ತಿತ್ತು.

ಕಂದೀಲಿನ ಮಬ್ಬುಬೆಳಕಿನಲ್ಲಿಯೇ ಮುಸಾಕಾ ನಕ್ಷೆಯನ್ನು ತೋರಿಸಿ, ಮೂವರಿಗೂ ಹೇಳತೊಡಗಿದ:

"ನಾವಿದ್ದ ಸ್ಥಳದಿಂದ ಭಾರತದ ಕಲಾತ ಸಂಸ್ಥಾನದ ಕಡಲ ತಟ ಕೇವಲ ೭ ಮೈಲು ಇದೆ. ಇಲ್ಲಿ ಯಾವ ಬಂದರವೂ ಇಲ್ಲ. ರಬ್ಬರಿನ ಬೋಟುಗಳಲ್ಲಿ ಹತ್ತಿ ನೀವು ಇಲ್ಲಿಂದ ದಂಡೆಯನ್ನು ಮುಟ್ಟಬೇಕು. ದಂಡೆಯಿಂದ ೩ ಫರ್ಲಾಂಗು ನಡೆದರೆ, ಅಲ್ಲಿ ನಿಮಗೊಂದು ಹಳ್ಳಿ ಹತ್ತುತ್ತದೆ. ಆ ಹಳ್ಳಿಯ ಹೆಸರು 'ಪಾಸ್ನಿ' ಎಂದು. ಮುಂದೆ ನೀವು... ನಿಮ್ಮ ಕಾರ್ಯ!"

ಮೂವರ ಎದೆ ಡವ ಡವ ಹೊಡೆದುಕೊಳ್ಳಲಾರಂಭಿಸಿತು. ಎಂಥ ಕಾಳರಾತ್ರಿ! ನೀರಿನ ಬಣ್ಣ, ಸಮುದ್ರದ ಭೋರ್ಗರೆಯುವ ಸಪ್ಪಳ, ಆ ರೌದ್ರತೆ! ಇಂಥದರಲ್ಲಿ ರಬ್ಬರಿನ ಬೋಟಿನಲ್ಲಿ ಹೋಗಬೇಕೆಂದರೆ! ಮುಂದೈದು ನಿಮಿಷದಲ್ಲಿಯೇ ರಬ್ಬರಿನ ಬೋಟುಗಳನ್ನು ಹೊರತೆಗೆಯಲಾಯಿತು. ಆದರೆ ದುರ್ದೈವದಿಂದ ಅವುಗಳ ತುದಿಗಳು ಹರಿದು ಹೋಗಿದ್ದುವು.

"ಘಾತವಾಯಿತು" ಮುಸಾಕಾ ನಿರಾಶನಾಗಿ ಹೇಳಿದ.

"ಮುಂದೆ ಹೇಗೆ?" ಮೂವರೂ ಕೇಳಿದರು.

ಮುಸಾಕಾ ಗದ್ದದ ಮೇಲೆ ಕೈಯಾಡಿಸುತ್ತ ಯೋಚಿಸತೊಡಗಿದ.

ಅನತಿದೂರದಲ್ಲಿ ಕಂದೀಲಿನ ಮಂಜುಬೆಳಕು ಕಾಣಿಸಿತು. ಎಲ್ಲರೂ ಹೌಹಾರಿದರು. ದುರ್ಬೀನಿನಿಂದ ನೋಡಿದಾಗ, ಅದೊಂದು ಮೀನುಗಾರನ ದೋಣಿ ಇದ್ದುದು ಗೊತ್ತಾಯಿತು. ಮುಸಾಕಾ ಒಮ್ಮೆಲೆ ಉತ್ಸಾಹಿತನಾಗಿ ಕೈಯಲ್ಲಿ ಬಂದೂಕನ್ನು ಸರಿಪಡಿಸಿಕೊಂಡು ಗುರಿ ಇಡತೊಡಗಿದ.

ಯುಸೂಫ್‌ಖಾನ್ ಗರ್ಜಿಸಿ ಕೇಳಿದ:

"ಇದೇನು ಮಾಡುತ್ತಿರುವಿರಿ ಮುಸಾಕಾ?"

"ನಿನಗಾಗಿ. ನಿನ್ನ ಸಲುವಾಗಿಯೇ. ಆ ಮೀನುಗಾರನನ್ನು ಕೊಂದುಬಿಟ್ಟರೆ, ಅವನ ದೋಣಿ ನಮ್ಮದಾಗುತ್ತದೆ. ನಿಮ್ಮ ಮುಂದಿನ ಪ್ರಯಾಣ ಸುಖಕರವಾಗುತ್ತದೆ."

ಯುಸೂಫಖಾನ್ ಬಂದೂಕಿಗೆ ಅಡ್ಡವಾಗಿ ಬಂದು ನಿಂತು ಹೇಳಿದ: "ಬೇಡ ಅವನೂ ಒಬ್ಬ ಭಾರತೀಯ. ಅವನ ಜೀವ ತೆಗೆದುಕೊಳ್ಳುವುದಕ್ಕೆ ನಾನು ಬಿಡುವುದಿಲ್ಲ!"

ಮುಸಾಕಾ ನಿರಾಶನಾಗಿ ಬಂದೂಕನ್ನು ಕೆಳಗಿಳಿಸಿ ಸಿಟ್ಟಿನಿಂದ ಹೇಳಿದ:

"ಏನು ಜೀವಕ್ಕಾಗಿ ಬಡಿದುಕೊಳ್ಳುತ್ತೀರಿ ನೀವು ಭಾರತೀಯರು? ೪೫ ಕೋಟಿಯಲ್ಲಿ ಒಂದು ತಗಣಿ ಸತ್ತರೆ, ಅದರಿಂದೇನೂ ಆಗುವುದಿಲ್ಲ. ಜೀವಕ್ಕೆ ಬೆಲೆ ಎಷ್ಟು ಇರಬೇಕೆಂಬುದನ್ನು ನೀವು ನಮ್ಮಿಂದ ಕಲಿಯಬೇಕು!"

ಮೂವರೂ ಏನೂ ಎದುರಾಡಲಿಲ್ಲ. ಮುಸಾಕಾ ರಬ್ಬರು ದೋಣಿಗಳನ್ನೂ ಸರಿಪಡಿಸುವುದಕ್ಕೆ ತನ್ನ ಸೈನಿಕರಿಗೆ ಆಜ್ಞೆ ವಿಧಿಸಿದ. ಆ ರಬ್ಬರುದೋಣಿಗಳನ್ನು ಸರಿಪಡಿಸಬೇಕಾದರೆ ೮ ದಿನ ಹಿಡಿಯಿತು. ೨೫ನೆಯ ಮಾರ್ಚ್ ೧೯೪೪ಳಕ್ಕೆ ಯುಸೂಫಖಾನ್, ನೂರಖಾನ್, ಮತ್ತು ಸಯ್ಯದ್ ಮಹಮ್ಮದ್, ಪಾಸ್ನಿ ಹಳ್ಳಿಯ ಹತ್ತಿರದ ದಂಡೆಗೆ, ಬಂದಿಳಿದರು.

ಸ ಚಿ ತ್ರ

● ಕಸೂತಿ ಕಲೆ ●

(ಯಂತ್ರದ ಹಾಗೂ ಕೈಯ ಕಸೂತಿ)

ಬರೆದವರು:- ಶ್ರೀಮತಿ ಸರೋಜಿನಿ ನುಹಿಷಿ, ಎಂ. ಎ.

ಕ್ರೌ. ಅ. ೧೪೦ ಪುಟಗಳು. ಬೆಲೆ: ೩—೮—೦

ಕನ್ನಡದಲ್ಲಿ ಇದುವರೆಗೂ ಇಂತಹ ಪುಸ್ತಕವಿರಲಿಲ್ಲ.
ಯಂತ್ರದ ಮತ್ತು ಕೈಕಸೂತಿಗಳ ಬಗೆಗೆ ಎಲ್ಲ
ಬಗೆಯ ವಿವರಗಳನ್ನೂ ಸಚಿತ್ರವಾಗಿ ತಿಳುಹಿ
ಕೊಡುವ ಅತ್ಯುತ್ತಮ ಶಿಕ್ಷಕನ ಕೆಲಸವನ್ನು
ಈ ಪುಸ್ತಕ ಮಾಡಬಲ್ಲದು. ಇಂದೆಯೇ
ನಿಮ್ಮ ಪುಸ್ತಕಕ್ಕಾಗಿ ಪತ್ರ ಬರೆಯಿರಿ.

■ ಕರ್ನಾಟಕ ಟೆಲರಿಂಗ್ ಕಾಲೇಜ್ ■

ಗಾಂಧಿ ಚೌಕ, ಧಾರವಾಡ

ಆಗ ಜನರ ಹತ್ತಿರವಿದ್ದ ವಸ್ತುಗಳೆಂದರೆ ಪ್ರತಿಯೊಬ್ಬರ ಹತ್ತಿರ ೯೦೦ ರೂಪಾಯಿಗಳು, ಎರಡೆರಡು ಪಿಸ್ತೂಲುಗಳು ಮತ್ತು ಒಂದೊಂದು ಪೆಕ್ಕಾ. ಮೂವರಿಗೂ ಒಟ್ಟಿನಲ್ಲಿ ೫ ನಜ್ರಗಳೂ ಇದ್ದುವು.

* * * *

ಆಕಾಶವಾಣಿ ಸ್ಟುಡಿಯೋದಲ್ಲಿ ೫೫ ನೆಯ ಡಿವಿಜನ್ನು ಕಾವಾಡುತ್ತಿತ್ತು. ಹಗಲುಪಾಳಿಯಿಂದ ತಿರುಗಿ ಬಂದ ಹಸನ್ ತಬುನಿನಲ್ಲಿ ಮಲಗಿಕೊಂಡೇ ಯೋಚನೆ ಮಾಡುತ್ತಿದ್ದ. ಅವನ ಮನಸ್ಸು ತನ್ನ ಪ್ರಿಯ ಅಣ್ಣ ಯುಸೂಫ್‌ಖಾನನ ಬಗ್ಗೆ ವಿಚಾರ ನಡೆಸಿತ್ತು. ಸಿಂಗಾಪೂರಕ್ಕೆ ಹೋದ ಬಳಿಕ ಅಣ್ಣನ ಬಗೆಗೆ ಯಾವ ಸಮಾಚಾರವೂ ಹಸನನಿಗೆ ಗೊತ್ತಾಗಿರಲಿಲ್ಲ. ಅವಕ್ಕೆ ಅವನು ತೀರ ಅಪ್ಪಚ್ಚನಾಗಿದ್ದ. ತಾಯಿಯನ್ನು ಕಳೆದುಕೊಂಡ ನಂತರ ಅಣ್ಣ ಯುಸೂಫನೇ ತನ್ನನ್ನು ಪ್ರೀತಿಯಿಂದ ನಲಿಸಿದ್ದ. ಇದೇ ಕಾರಣದಿಂದ ಹಸನನಿಗೆ ಎಲ್ಲಿಲ್ಲದ ಪ್ರೀತಿ—ತನ್ನಣ್ಣ ಯುಸೂಫ್‌ಖಾನನ ಮೇಲೆ. ಹಸನ್ ವಿಚಾರಿಸುತ್ತ ಮಲಗಿದ್ದಂತೆಯೇ ಯಾರೋ ಕೂಗು ಕೇಳಿಸಿತು :

"ಹಸನ್‌ಖಾನ್!"

ಹಸನ ಲನುಬಗೆಯಿಂದ ತಂಬೂವಿನಿಂದ ಹೊರಬಂದ. ಎದುರಿನಲ್ಲಿ ಮೇಜರ್ ಅಲೆಕ್ಸ್ಯಾಂಡರ್ ಸಾಹೇಬರು ನಿಂತಿದ್ದರು. ಹಸನ್ ಅವರನ್ನು ನೋಡುತ್ತಲೇ ಅವರಿಗೆ ಸೆಲ್ಯೂಟ್ ಹೊಡೆದು ನಿಂತ. ಮೇಜರ್ ಅಲೆಕ್ಸ್ಯಾಂಡರರು ನಗುಮುಖದಿಂದಲೇ ಹೇಳಿದರು :

"ಹಸನ್‌ಖಾನ್, ಕಾಂಗ್ರ್ಯಾಚ್ಯುಲೇಶನ್! ನಿಮ್ಮ ಅಣ್ಣ ನಿಮ್ಮ ಸೈನಿಕರಿಗೆ ತುಂಬಾ ಸಹಾಯ ಮಾಡಿದ. ಜಪಾನೀಯರನ್ನು ನೋಸ ಗೊಳಿಸಿ ಮತ್ತೆ ತನ್ನ ದೇಶಕ್ಕೆ ಬಂದಿದ್ದಾನೆ ಹಿಂದೆ ನಿನ್ನ ಅಣ್ಣ ನನ್ನ ಯುನಿಟ್‌ನಲ್ಲಿಯೇ ಇದ್ದ. ಆಗಲೇ ನಾನು ಕಂಡುಹಿಡಿದಿದ್ದೆ, ಈ ಜೀವ ಉಪ್ಪು ತಿಂದವರ ಮೇಲೆ ಹೊರಳುವುದಲ್ಲವೆಂದು. ಇಂದು ನೀ ತಿಳಿ ಅಲ್ಲವೇ? ನಜೆ. ಅವನ ಸಾಹಸಮಯ ಜೀವನದ ಕಥೆಯನ್ನು ಅವನ ಬಾಯಿಂದಲೇ ಕೇಳುವೆಯಂತೆ! ದಿಲ್ಲಿ ಆಕಾಶವಾಣಿ ಕೇಂದ್ರದಿಂದ ಅವನು ಮಾತನಾಡುವವನಿದ್ದಾನೆ."

ಹಸನ್ ಆನಂದಭರಿತನಾಗಿಯೇ "ನಜೆಯಿಂದ ಎಷ್ಟೋ ದಿನಗಳ ನಂತರ ನನ್ನ ಅಣ್ಣನ ಧ್ವನಿಯನ್ನು ಕೇಳುವ ಸುಯೋಗ ಬಂದಿತು" ಎಂದು ಹೇಳಿದ.

ಇಬ್ಬರೂ ರಿಕ್ರಿಯೇಶನ್ ತಂಬೂಕ್ಕೆ ಬಂದರು. ಅದಾಗಲೇ ಅಲ್ಲಿ ಪ್ಲಾಟೂನಿನ ಜನರೆಲ್ಲ ನೆರೆದಿದ್ದರು. ಮೇಜರ್ ಅಲೆಕ್ಸ್ಯಾಂಡರರು ರೆಡಿಯೋವಿನಲ್ಲಿ ದಿಲ್ಲಿ ಕೇಂದ್ರವನ್ನು ತಿರುವಿದರು.

".....ಯೂಹ ಆಲ್ ಇಂಡಿಯಾ ರೇಡಿಯೋ ದಿಲ್ಲಿ ಫ್ರೈ. ಆಜ್ ಮೇ ಇಕ್ಕೆಸ. 8th ಇನ್‌ಫಂಟ್ರಿ ಬ್ರಿಗೇಡಕೇ ನಬಜವಾನ್ ಯುಸೂಫಖಾನ್, ಅನನ ಸಾಹಸಮಯ ಕಹಾನೀ ಸುನಾಯೇಂಗೆ—ಯುಸೂಫ್‌ಖಾನ್."

ಹಸನ್ ಕಿವಿಗಳನ್ನು ನಿಮಿರಿಸಿಕೊಂಡು ಕೇಳಲು ಕುಳಿತ. ಯುಸೂಫ್ ಖಾನ್ ತನ್ನ ಸಾಧ್ಯಂತ ಸುದ್ದಿಯನ್ನು ಹೇಳತೊಡಗಿದ. ಅದನ್ನೆಲ್ಲ ಕೇಳುತ್ತಿರುವಂತೆ ಹಸನನಿಗೆ ರೋಮಾಂಚನೇಳತೊಡಗಿತು. ಸ್ಫೀತಿಯ ಬದಲು ತಿರಸ್ಕಾರ ಉತ್ಪನ್ನವಾಗತೊಡಗಿತು ಯುಸೂಫ್ ಆಕಾಶವಾಣಿಯಲ್ಲಿ ಹೇಳತೊಡಗಿದ್ದ :

".....ನಾವು ಮೂವರೂ ದೇಶಕ್ಕೆ ಪಾರಾಗಿ ಬರುವುದಕ್ಕೆ ಇನ್ನೊಂದೇ ಉಪಾಯವಿದ್ದುದನ್ನು ಕಂಡು, ಆಪರಿಗೆ ಒಳ್ಳೇ ವಿಧೇಯರಾಗಿದ್ದಂತೆ ತೋರಿಸಜೇಕೆಂದು ನಿರ್ಧರಿಸಿದೆವು. ಅಂತೂ ೨೭ ದಿನಗಳ ನಂತರ ಪಾಸ್ಸಿ ಹತ್ತಿರ ಇಳಿವೆವು ಅಲ್ಲಿ ಕಡಲ ದಂಡೆಗೆ ನಮ್ಮ ರಬ್ಬರು ಬೋಟುಗಳನ್ನು ಹುಗಿದು, ಆ ಹಳ್ಳಿಯ ಜಮೀನ್‌ದಾರನ ಎದುರು ನಮ್ಮ ಕರುಣ ಕಥೆಯನ್ನು ತೋಡಿಕೊಂಡೆವು. ಆಝಾದ್ ಸರಕಾರವೆಂದರೆ ಕೇವಲ ಜಪಾನೀಯರ ಕೈಗೊಂಬೆ. ನಾವು ಮತ್ತೆ ಮರಳಿ ನಮ್ಮ ದೇಶಕ್ಕೆ ಬಂದಿದ್ದೇವೆ. ನಮ್ಮನ್ನು ರಕ್ಷಿಸುವ ಬ್ರಿಟಿಶರ ಸೇವೆಗೆ ನಾವು ಕಂಕಣಬದ್ಧರಾಗಲು ಬಂದಿದ್ದೇವೆ. ಆಝಾದ್ ಸರಕಾರಕ್ಕಾವ ಅಸ್ತಿತ್ವವೂ ಇಲ್ಲ. ನಮಗೆ ಅವರು ಕೊಟ್ಟ ಕಷ್ಟವನ್ನು ಈ ಅರ್ಧಗಂಟೆಯಲ್ಲಿ ಹೇಳಲು ಆಗುವುದಿಲ್ಲ. ಸಬ್‌ಮರೀನಿನಲ್ಲಿ ಬರುವಾಗ ಒಂದು ದಿನ ತಿನ್ನಲು ಹಂದಿಯ ಮಾಂಸವನ್ನು ಬೇಕೆಂತಲೇ ಕೊಡಲಾಯಿತು. ಇದರಲ್ಲಿ ಆಝಾದ್ ಸರ್ಕಾರದ ಅಂಗವಿದ್ದರೂ ಇರಬಹುದು. ಅಂತೂ ನಾನು ಪ್ರತ್ಯಕ್ಷ ಕಂಡು ಮನಗಂಡದ್ದನ್ನು ನಿಮಗೆ ಹೇಳುತ್ತಿದ್ದೇನೆ. ಆಝಾದ್ ಸರ್ಕಾರವೆಂದರೆ, ಹೊಲದಲ್ಲಿ ಕಟ್ಟಿದ ಬೆದರು....."

"ಢಂ, ಢಂ, ಢಡಂ."

ಗುಂಡಿನ ಸಪ್ಪಳದ ಜತೆಯಲ್ಲಿ ೫-೬ ಜನರ ಕಿರುಚುವಿಕೆಗೆ ಪ್ರಾರಂಭವಾಯಿತು. ತಿರಸ್ಕಾರದಿಂದ ತಲೆ ಕೆಟ್ಟುಹೋದ ಜಸನ್, ಕೈಯಲ್ಲಿದ್ದ ಪಿಸ್ತೂಲನ್ನು ಹಾರಿಸತೊಡಗಿದ. ಅವನ ಪಿಸ್ತೂಲಿನಿಂದ ಹೊರಬಿದ್ದ ಗುಂಡುಗಳು ಮೇಜರ್ ಅಲೆಕ್ಸ್ಯಾಂಡರ್ ಹಾಗೂ ೫-೬ ಬ್ರಿಟಿಶ್ ಸೈನಿಕರನ್ನು ಬಲಿ ತೆಗೆದುಕೊಂಡುವು.

ಮೇಜರ್ ಅಲೆಕ್ಸ್ಯಾಂಡರ್ ನೆಲಕ್ಕುರುಳುವ ಪೂರ್ವದಲ್ಲಿಯೇ ಗುರಿ ಇಟ್ಟು ಇದಿರುಗುಂಡನ್ನು ಹಾರಿಸಿದ. ಆ ಗುಂಡು ಹಸನನ ಎದೆಯನ್ನು ಸೇರಿತು.

"ಜಯಹಿಂದ್" ಎನ್ನುತ್ತ ಹಸನ್ ನೆಲಕ್ಕುರುಳಿದ. ಕೂಡಿದ ಜನ ಅವನನ್ನು ಸಾವರಿಸುತ್ತ ಕೇಳಿದರು :

"ಹಸನ್, ಇದನ್ನೇನು ಮಾಡಿದೆ? ೬-೭ ಬ್ರಿಟಿಶ್ ಸೈನಿಕರನ್ನು ಹೊಡೆದುಹಾಕಿದೆ. ನೀನೂ ಸಾಯುತ್ತಿದ್ದೀಯಲ್ಲಾ? ಇದನ್ನೇನು ಮಾಡಿದೆ?"

ಹಸನ್ ನರಳುತ್ತಲೇ ಉತ್ತರಿಸಿದ :

"ಅಣ್ಣ ಯುಸೂಫ್‌ಖಾನ್, ನನ್ನ....ಮನೆತನಕ್ಕೆ.... ಹಚ್ಚಿದ ಕಲಂಕವನ್ನು....ನಾನು....ತೊಳೆದೆ.... ಜಯಹಿಂದ್!"

ಅದೇ ಹಸನನ ಕೊನೆಯುಸಿರಾಯ್ತು.

ಪಂಚವಾರ್ಷಿಕ ಯೋಜನೆ

ಶ್ರೀ. ವೀ. ಚ. ಹಿತ್ತಲಮನಿ, ಬಿ. ಎಸ್‌ಸಿ. (ಅಗ್ರಿ) ಆನರ್ಸ್. ಧಾರವಾಡ

★

ಉದ್ಯಮ-ಕೈಗಾರಿಕೆಗಳ ವಿಚಾರದಲ್ಲಿ ಪರಾವಲಂಬಿಯಾದ ರಾಷ್ಟ್ರವು ರಾಜಕೀಯ ಸ್ವಾತಂತ್ರ್ಯವನ್ನು ಅನುಭವಿಸುತ್ತಲಿದ್ದರೂ, ಅದು ಆರ್ಥಿಕದಾಸ್ಯದಲ್ಲಿ ಬಳಲುವುದು. ಭಾರತವು ಆರ್ಥಿಕದಾಸ್ಯದಿಂದ ಮುಕ್ತವಾದಾಗಲೇ ಅದಕ್ಕೆ ಸಂಪೂರ್ಣವಾದ ಸ್ವಾತಂತ್ರ್ಯಸೌಖ್ಯ.

★

ಲೇಖಾಂಕ ೩.

ಸಾರಿಗೆ, ಸಂಪರ್ಕ ಮತ್ತು ಉದ್ಯಮ

ಪಂಚವಾರ್ಷಿಕ ಯೋಜನೆಯಲ್ಲಿ ಒಕ್ಕಲುತನ, ನೀರಾವರಿ, ವಿದ್ಯುತ್ ಮತ್ತು ಅವುಗಳಿಗೆ ಸಂಬಂಧಿಸಿದ ಯೋಜನೆಗಳಿಗೆ ವಿಶೇಷ ಮಹತ್ತ್ವವಿದೆಯೆಂದು ಹೇಳಿಯಾಗಿದೆ. ಒಕ್ಕಲುತನದ ಹುಟ್ಟುವಳಿಯ ಯೋಗ್ಯ ವಿನಿಯೋಗಕ್ಕೆ, ದೇಶದ ಆರ್ಥಿಕಮಟ್ಟದ ಹೆಚ್ಚಳಕ್ಕೆ ಉದ್ಯಮ ಬೆಳೆಯುವುದು ಅವಶ್ಯವಿದೆ. ಸಾರಿಗೆ, ಸಂಪರ್ಕಗಳು ಅಧಿಕವಾಗಿ, ಸುಧಾರಣೆಗೊಂಡಾಗಲೇ ಪ್ರಗತಿ ಸಾಧ್ಯ. ಈ ಕಾರ್ಯಗಳಿಗಾಗಿ ಪಂಚವಾರ್ಷಿಕ ಯೋಜನೆಯ ಒಟ್ಟು ೨೦೬೯ ಕೋಟಿ ರೂಪಾಯಿಗಳಲ್ಲಿ ೬೭೦ ಕೋಟಿ ಎಂದರೆ ನೂರರಲ್ಲಿ ೩೨.೪ ರಷ್ಟು ರೂಪಾಯಿಗಳನ್ನು ತೆಗೆದಿರಿಸಲಾಗಿದೆ.

	ನೂರಕ್ಕೆ ಪ್ರಮಾಣ
ಪಂಚವಾರ್ಷಿಕ ಯೋಜನೆಯ ಒಟ್ಟುವೆಚ್ಚ ೨೦೬೯ ಕೋ. ರೂ.	೧೦೦
ಸಾರಿಗೆ ಮತ್ತು ಸಂಪರ್ಕ ೪೯೭ ,, ,,	೨೪
ಉದ್ದಿಮೆ ೧೭೩ ,, ,,	೮.೪

ಕೇಂದ್ರ ಮತ್ತು ರಾಜ್ಯಸರಕಾರಗಳ ಹಂಚಿಕೆಯು ಕೆಳಗಿನಂತಿದೆ:

ಸಾರಿಗೆ ಮತ್ತು ಸಂಪರ್ಕ

ಕೇಂದ್ರಸರಕಾರ	೪೧೯.೫	ಕೋಟಿ ರೂ. ಗಳು
'ಅ' ವರ್ಗದ ರಾಜ್ಯಗಳು	೫೬.೫	,, ,,
'ಬ' ,, ,,	೧೭.೪	,, ,,
'ಕ' ,, ,,	೪.೪	,, ,,

ಉದ್ಯಮ

ಕೇಂದ್ರಸರಕಾರ	೧೪೬.೭	ಕೋಟಿ ರೂ. ಗಳು
'ಅ' ವರ್ಗದ ರಾಜ್ಯಗಳು	೧೭.೯	,, ,,
'ಬ' ,, ,,	೭.೧	,, ,,
'ಕ' ,, ,,	೦.೫	,, ,,

ಸಾರಿಗೆ ಮತ್ತು ಸಂಪರ್ಕ

ದೇಶದಾದ್ಯಂತ ಪಸರಿಸಿರುವ ರೇಲ್ವೆ, ಉದ್ದ ಅಗಲಗಳಲ್ಲಿ ಹರಡಿರುವ ಲೈನುಮಾರ್ಗ, ಉಗೆಬಂಡಿ, ಮೋಟಾರು, ಹಡಗು, ಬಂದರ, ವಿಮಾನ, ಅಂಚೆ, ತಂತಿ, ಗ್ರಾಮರಸ್ತೆ ಮೊದಲಾದುವುಗಳೆಲ್ಲ ಈ ಯೋಜನೆಗಳಲ್ಲಿ ಅಡಕವಾಗಿವೆ. ಈ ಸೌಕರ್ಯಗಳ ಸುಧಾರಣೆಯಲ್ಲಿಯೇ ಇತರ ಯೋಜನೆಗಳ ಯಶಸ್ಸಿನ ಗುಟ್ಟಿದೆ. ತ್ವರಿತ ಸಾಗಾಟ ಮತ್ತು ಸಂಪರ್ಕಗಳ ಮಹತ್ತ್ವವೆಷ್ಟೆಂಬುದನ್ನು ಈಗಿನ ದಿನಗಳಲ್ಲಿ ಎತ್ತಿಹೇಳುವ ಅವಶ್ಯಕತೆ ಉಳಿದಿಲ್ಲ.

ರೇಲ್ವೆ ಸಾಗಾಟ

ಈಗಿದ್ದ ರೇಲ್ವೆರಸ್ತೆಯನ್ನು ಸುಸ್ಥಿತಿಯಲ್ಲಿ ಇಟ್ಟು, ಸುಧಾರಣೆ ಮಾಡುವುದಲ್ಲದೆ, ಅನೇಕ ಕಡೆಗಳಲ್ಲಿ ಹೆಚ್ಚಿನ ರಸ್ತೆಯನ್ನು ನಿರ್ಮಿಸಬೇಕಾಗಿದೆ. ಎಂಜಿನು ಮತ್ತು ಡಬ್ಬಿಗಳ ಪೂರಯಿಕೆಯಾಗಬೇಕಾಗಿದೆ. ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ೨೦೯೨ ಎಂಜಿನುಗಳು, ೬, ೫೩೫ ಪ್ರವಾಸಿಕರ ಡಬ್ಬಿ ಮತ್ತು ೪೭, ೫೩೩ಗಳ ಕಾರ್ಯಾನಧಿಮುಗಿಯುವುದರಿಂದ ಹೊಸ ಎಂಜಿನು, ಡಬ್ಬಿ, ವಾಗೀನುಗಳ ವ್ಯವಸ್ಥೆ ಮಾಡಬೇಕಾಗಿದೆ. ಸದ್ಯಕ್ಕೆ ಸುಮಾರು ೩೦೦೦ ಮೈಲುಗಳಷ್ಟು ರೇಲ್ವೆ ಮಾರ್ಗವಿದೆ. ಅದರ ವಿಸ್ತರಣೆ ನಡೆಯಲಿದೆ. ಈಗಿನ ದಿನಗಳಲ್ಲಿ ಸಾಗಾಟ ಹೆಚ್ಚಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಜನರು ಪ್ರವಾಸಮಾಡುತ್ತಿದ್ದಾರೆ. ಬಂಡಿಗಳಲ್ಲಿ ಹೆಚ್ಚಿನ ಸೌಕರ್ಯ ಒದಗಿಸುವುದೂ, ರೇಲ್ವೆ ನಿಲ್ದಾಣೆಗಳನ್ನು ವಿಸ್ತರಿಸಿ ಎಲ್ಲ ಬಗೆಯ ವ್ಯವಸ್ಥೆಗೆ ಏರ್ಪಾಡು ಮಾಡುವುದೂ, ತ್ವರಿತವಾಗಿ ಸಾಕಷ್ಟು ಸಂಖ್ಯೆಗಳಲ್ಲಿ ವಾಗೀನುಗಳನ್ನು ಪೂರಯಿಸುವುದನ್ನೂ ಮಾಡಬೇಕಾಗಿದೆ. ಪ್ರವಾಸ ಮಾಡುವವರಲ್ಲಿ ಹೆಚ್ಚಿನ ಜನರು ಮೂರನೆಯ ವರ್ಗದ ಪ್ರವಾಸಿಕರಾಗಿರುವುದರಿಂದ, ಅವರಿಗೆ ಮೊದಲು ಹೆಚ್ಚಿನ ಸೌಕರ್ಯ ಒದಗಿಸಲು ಯೋಜಿಸಲಾಗಿದೆ.

ಕಳೆದ ನಾಲ್ಕು ವರುಷಗಳಲ್ಲಿ ಎಂಜಿನು, ಡಬ್ಬಿ, ವಾಗೀನುಗಳ ಕೊರತೆ ಅತಿಯಾಗಿತ್ತು. ಪರದೇಶದ ಪೂರಯಿಕೆಯೂ ಸಾಕಷ್ಟಾಗ-

ಲ್ಲ; ಭಾರತದಲ್ಲಿಯೂ ವಿಶೇಷವಾಗಿ ನಿರ್ಮಾಣ ನಡೆಯಲಿಲ್ಲ. ಬಂಗಾಲದಲ್ಲಿ ಚಿತ್ತರಂಜನ ಮತ್ತು ಜಮಶೇದಪುರಗಳಲ್ಲಿ ಈ ಕಾರ್ಯಕ್ಕೆ ಕೈಹಾಕಲಾಗಿದೆ. ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಚಿತ್ತರಂಜನ ಕಾರ್ಖಾನೆಯಲ್ಲಿ ೨೬೮ ಎಂಜಿನುಗಳು ತಯಾರಾಗಲಿವೆ. ಟಾಟಾ ಲೋಕೊಮೋಟಿವ್ ಎಂಜಿನಿಯರಿಂಗ್ ಕಂಪನಿಯಲ್ಲಿ ೧೭೦ ಎಂಜಿನುಗಳು ತಯಾರಾಗಲಿವೆ ಅಲ್ಲದೆ ಹೊರಗಿನಿಂದ ೬೪೧ ಎಂಜಿನುಗಳನ್ನು ಗತ್ಯಂತರ ಕೊಪ್ಪುವ ದಪ್ಪು ಮತ್ತು ೧೯೦೦ ವಾಗೀನುಗಳನ್ನು ಯೋಜನೆಯು ಅವಧಿಯಲ್ಲಿ ತರಿಸಬೇಕಾಗುತ್ತದೆ.

ಈ ಯೋಜನೆಯನ್ನು ಕಾರ್ಯರೂಪಕ್ಕೆ ತಿಳಿಸಲು ಪ್ರತಿವರ್ಷಕ್ಕೆ ೬೦ ಕೋಟಿ ರೂಪಾಯಿಗಳಂತೆ ೪೦೦ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಕೇಂದ್ರವು ಇದರಲ್ಲಿ ೬೦ ಕೋಟಿ ರೂಪಾಯಿಗಳನ್ನು ಕೊಡಲಿದೆ. ಉಳಿದುದನ್ನು ರೇಲ್ವೆಯೇ ತನ್ನ ಸಂಪತ್ತಿನಿಂದ ಪಡೆಯಲಿದೆ.

ಕಡಲಸಾರಿಗೆ

ಪ್ರಯಾಣಿಕರ ಓಡಾಟಕ್ಕೆ ಹೆಚ್ಚಾಗಿ ಈ ಸಾಗಾಟದ ವ್ಯವಸ್ಥೆಯಾಗದಿದ್ದರೂ, ಔದ್ಯೋಗಿಕ ದೃಷ್ಟಿಯಿಂದ ಇದರ ಮಹತ್ವ ಹೆಚ್ಚಿದೆ. ಬಂದರಗಳ ಅಭಿವೃದ್ಧಿ, ನೌಕಾಪಡೆಗಳ ಕಟ್ಟುವಿಕೆಗಳು ಈ ಯೋಜನೆಯಲ್ಲಿ ಅಡಕವಾಗಿವೆ. ನಮ್ಮಲ್ಲಿ ಕಲಕತ್ತಾ, ಮುಂಬೈ, ಮದ್ರಾಸ, ಕೋಚೀನ್ ಮತ್ತು ವಿಶಾಖಾಪಟ್ಟಣಗಳು ಪ್ರಮುಖ ಬಂದರಗಳಾಗಿವೆ. ದೇಶದ ವಿಭಜನೆಯು ಪರಿಣಾಮವಾಗಿ ಕರಾಚಿ ಬಂದರದ ಕೆಲಸವನ್ನು ಪೂರೈಸುವುದಕ್ಕಾಗಿ ಬೇರೊಂದು ಬಂದರದ ಅವಶ್ಯಕತೆಯಿದೆ. ಸಮೀಪದಲ್ಲಿರುವ ಖಾಂಡಾಲಾ ಬಂದರವನ್ನು ಕಟ್ಟುವುದರಿಂದ ಈ ಕೊರತೆಯನ್ನು ನೀಗಿಸಬಹುದು. ಇದಕ್ಕೆ ೧೫೦ ಕೋಟಿ ರೂಪಾಯಿಗಳು ಬೇಕಾಗಲಿವೆ. ಅಲ್ಲದೆ ಕಲಕತ್ತಾ, ಮುಂಬೈ, ಮದ್ರಾಸ ಬಂದರಗಳ ಏರ್ಪಡಿಸಲು ನಡೆಯಲಿದೆ. ಈ ಎಲ್ಲ ಕಾರ್ಯಗಳಿಗೆ ೪೦೦ ಕೋಟಿ ರೂಪಾಯಿಗಳು ಬೇಕಾಗಬಹುದು. ಕೇಂದ್ರ ಸರಕಾರವು ೧೨ ಕೋಟಿ ರೂಪಾಯಿ ಕೊಡುವುದು.

ಬಂದರಗಳ ಯೋಜನೆಯಲ್ಲಿ ಎಣ್ಣೆಯ ಶುದ್ಧೀಕರಣವೂ ಮುಖ್ಯ ವಿಷಯವಾಗಿದೆ. ಈ ಕಾರ್ಯಕ್ಕೆ ಕೇಂದ್ರವು ೮ ಕೋಟಿ ರೂಪಾಯಿ ಕೊಡಲಿದೆ.

ರಸ್ತೆಗಳು

ಸದ್ಯಕ್ಕಿರುವ ರಸ್ತೆಗಳು ದೇಶದ ಅಗತ್ಯತೆಗೆ ತಕ್ಕದ್ದಿಲ್ಲ. ತಜ್ಞರ ಅಭಿಪ್ರಾಯದ ಮೇರೆಗೆ ೧೯೬೬ರಲ್ಲಿಯೇ ಮುಂಬರುವ ಹತ್ತುವರ್ಷಗಳಲ್ಲಿ ಉತ್ತಮ ಮತ್ತು ಮಧ್ಯಮ ರಸ್ತೆ ಸೇರಿ ೫೭೫೦೦ ಮೈಲು ರಸ್ತೆಗಳ ಅಗತ್ಯತೆಯಿತ್ತು. ಯಾವುದೇ ಹಳ್ಳಿ ಮುಖ್ಯ ರಸ್ತೆಯಿಂದ ಹೆಚ್ಚೆಂದರೆ ೫ ಮೈಲುಗಳಾಚೆಗಿರಬಾರದೆಂಬುದೇ ಮುಖ್ಯ ಉದ್ದಿಶ್ಯವಾಗಿತ್ತು. ಇದಕ್ಕೆಲ್ಲ ಈಗಿನ ಲೆಕ್ಕಾಚಾರದಂತೆ ೬೪೦ ಕೋಟಿ ರೂಪಾಯಿಗಳು ಬೇಕಾಗಬಹುದು. ಪರಿಸ್ಥಿತಿ ಸರಿಯಾಗಿರದ್ದರಿಂದ ಈ ಕಾರ್ಯ ಇನ್ನೂ ಹೆಚ್ಚಿನ ಅವಧಿಯಲ್ಲಿ ನಡೆಯಬಹುದು.

ಹೇರಲ್ಲಿಯ ರಸ್ತೆಗಳನ್ನು ನಾನಾರೀತಿಯಾಗಿ ವಿಭಾಗಿಸಲು ಮುಖ್ಯ ರಸ್ತೆ, ರಾಜ್ಯಗಳ ಮುಖ್ಯರಸ್ತೆ, ಜಿಲ್ಲಾ ಮತ್ತು ಹಳ್ಳಿಗಳ ರಸ್ತೆಗಳೆಂದು ವರ್ಗೀಕರಿಸಲಾಗಿದೆ. ಈ ಯೋಜನೆಯು ಅವಧಿಯಲ್ಲಿ ೨೫ ಮೈಲು ಹೊಸ ರಸ್ತೆ, ೪೬ ಹೊಸ ಪೂಲು ಮತ್ತು ಅನೇಕಾನೇಕ ಸಣ್ಣ ಪೂಲುಗಳ ನಿರ್ಮಾಣ ನಡೆಯಲಿದೆ. ರಸ್ತೆಯ ಬಗ್ಗೆ ಸಂಶೋಧನೆಯೂ ನಡೆಯಲಿದೆ. ಹಳ್ಳಿಗಳ ರಸ್ತೆಯ ನಿರ್ಮಾಣಕ್ಕೆ ಹೆಚ್ಚು ಮಹತ್ವವೀಯಲಾಗಿದೆ. ಸಹಕಾರ ತತ್ವದಿಯ ಮೇಲೆ ಈ ಕಾರ್ಯವನ್ನು ಕೈಗೊಳ್ಳಲು ಯೋಚಿಸಲಾಗಿದೆ. ರಸ್ತೆಯ ಸಾಗಾಟಕ್ಕಾಗಿ ಹೊಸ ಹೊಸ ತಂತ್ರಾಧುನಿಕ ಬಾಹನ ತಯಾರಾಗುವುದು. ದುರಸ್ತಿಯ ವ್ಯವಸ್ಥೆಗಾಗಿ ಅಲ್ಲಲ್ಲಿ 'ವರ್ಕ್‌ಶಾಪ್' ತೆರೆಯಲಾಗುವುದು. ೧೫೦೦ ಮೈಲು ರಸ್ತೆ ಸಾರಿಗೆಯ ಸಂಸ್ಥೀಯ ಕಾಮ್ಗಿಯ ನೋಡಿಕೆಗೆ ರಾಜ್ಯ ಸಾರಿಗೆ ಸಂಸ್ಥೆ ಸ್ಥಾಪಿಸಲು ಸ್ಫೂರ್ತಿಸಲಾಗಿದೆ. ಎಷ್ಟೋ ರಾಜ್ಯಗಳಲ್ಲಿ ಈ ಸಂಸ್ಥೆ ಸ್ಥಾಪಿಸಿಯೂ ಕಾರ್ಯ ನಡೆಯಿಸುತ್ತಲಿದೆ. ದೇಶದಲ್ಲಿ ಇಂದು ಸಾರ್ವಜನಿಕ ರಸ್ತೆ ಸಾರಿಗೆಗೆ ೧೬೦೦ ಕೋಟಿ ರೂಪಾಯಿ ಬೆಚ್ಚ ಮೀಸಲಾಗಿದೆ. ಯೋಜನೆಯ ಅವಧಿಯಲ್ಲಿ ಇನ್ನೂ ೮೦೦ ಕೋಟಿ ರೂಪಾಯಿ ಹೆಚ್ಚವಾಗಲಿವೆ. ರಸ್ತೆಗಳನ್ನು ಒಳ್ಳೆಯ ಸ್ಥಿತಿಯಲ್ಲಿರಿಸಿ ಉತ್ತಮ ಪಾಹನಗಳ ಏರ್ಪಾಡು ಮಾಡಿ. ಅನೇಕಾನೇಕ ನಾಗರಿಕ ಸೌಕರ್ಯ ಒದಗಿಸುವ ಹಿರಿಯುಯನ್ನಿರಿಸಿಕೊಳ್ಳಲಾಗಿದೆ.

ವಿಮಾನ ಸಾರಿಗೆ

ಇತ್ತೀಚಿಗಿನ ದಿನಗಳಲ್ಲಿ ವಿಮಾನ ಸಾರಿಗೆಗೂ ವಿಶೇಷ ಮಹತ್ವ ಬಂದಿದೆ. ಈ ದೇಶದಲ್ಲಿ ಅನೇಕ ಖಾಸಗೀ ಸಂಸ್ಥೆಗಳು ಈ ಕಾರ್ಯ ಮಾಡುತ್ತಲಿವೆ. ಇವುಗಳ ಕಾರ್ಯಕ್ಷಮತೆ ಹೆಚ್ಚಿಸುವುದಕ್ಕಾಗಿ ಒಂದು ವ್ಯವಸ್ಥಿತ ಸಂಘಟನೆ ಅವಶ್ಯವಿದೆ. ಈ ಸಂಸ್ಥೆಗಳ ಪರಿಹಾರಕ್ಕಾಗಿ ಯೋಜನೆಯಲ್ಲಿ ೯೫ ಕೋಟಿ ರೂಪಾಯಿಗಳ ವ್ಯವಸ್ಥೆಯಿದೆ.

ಅಂಚೆ-ತಂತಿ ಮತ್ತು ಪ್ರಸಾರಾಪಕ

೩೦೦೦ ಜನಸಂಖ್ಯೆಯಿರುವ ಪ್ರತಿಹಳ್ಳಿಗೆ ಅಂಚೆಮನೆಯಾಗುವುದು. ಶ್ರುತಿಪಟ್ಟಣಕ್ಕೆ ಧ್ವನಿವಾರ್ಧಕದ ವ್ಯವಸ್ಥೆ ಮಾಡಲಾಗುವುದು ಅನೇಕ ಕಡೆಗಳಲ್ಲಿ ತಂತಿರಹಿತ ಪಾಠಕಗಳನ್ನೂ ಏರ್ಪಡಿಸಲಾಗುವುದು. ಈ ಕಾರ್ಯಗಳಿಗಾಗಿ ಯೋಜನೆಯು ೫೦ ಕೋಟಿ ರೂಪಾಯಿಗಳ ವಿಧಾರಸು ಮಾಡಿದೆ.

ಉಪಸಂಹಾರ

ಇಲ್ಲಿಯ ವರೆಗೆ ಔದ್ಯೋಗಿಕ ಪ್ರಗತಿಯು ಭಾರತದಲ್ಲಿ ಕೆಲವೊಂದು ಆಯ್ದ ಮಾಡಿದ ಪ್ರದೇಶಗಳಲ್ಲಿ ಮಾತ್ರ ನಡೆದಿತ್ತು. ಅನೇಕ ಪ್ರದೇಶಗಳಲ್ಲಿ ಔದ್ಯೋಗಿಕ ಪ್ರಗತಿಯಾಗದೆ, ಇವು ಹಿಂದುಳಿದಿವೆ. ಹಣಕಾಸಿನ, ಸಾಗಾಟದ ಮತ್ತು ಕಚ್ಚಾವಸ್ತುಗಳ ಪೂರಯಿಕೆ ಸೌಕರ್ಯಗಳಿರುವಲ್ಲಿಯೇ ಉದ್ಯೋಗಗಳು ಬೆಳೆಯುವವಾದರೂ ದೇಶ ವಾದ್ಯಂತ ಪಸರಿಸುವುದು ಅವಶ್ಯವಿದೆ. ಉದ್ಯೋಗಗಳ ಬೆಳೆವಣಿಗೆಗೆ ಅವಶ್ಯವಿರುವ ಕಚ್ಚಾವಸ್ತುಗಳ ಪೂರೈಕೆಯ ಜೊತೆಗೆ ಶಕ್ತಿಯೂ ಅಲ್ಪವೆಚ್ಚದಲ್ಲಿ ದೊರೆಯಬೇಕಾಗಿದೆ. ಈ ಯೋಜನೆಯನ್ವಯ ಅನೇಕ

ಕಡೆಯಲ್ಲಿ ನಡೆಯಲಿರುವ ವಿವಿಧ ಉದ್ದೇಶಗಳ ಅನೇಕ ಯೋಜನೆಗಳಿಂದ ಜಲವಿದ್ಯುತ್ ಶಕ್ತಿ ಹುಟ್ಟಲಿದೆ. ಹಲವಾರು ಉದ್ದಿಮೆಗಳನ್ನು ಬೆಳೆಯಿಸಲಿಕ್ಕೆ ಮತ್ತು ಲಾಭದಾಯಕವಾಗಿ ಮಾಡಲು ಸಂಶೋಧನೆಗಳನ್ನು ನಡೆಯಿಸುವುದು ಅವಶ್ಯವಿದೆ. ಯಂತ್ರೋಪಕರಣಗಳನ್ನು ಈ ದೇಶದಲ್ಲಿಯೇ ಸಿದ್ಧಪಡಿಸುವುದೂ ಜೀವಾಳದ ವಿಷಯವಾಗಿದೆ.

ಉದ್ದಿಮೆಗಳನ್ನು ಪ್ರಾರಂಭಿಸುವ ಮತ್ತು ಮುಂದುವರಿಯಿಸುವ ಜೊಣೆಗಾರಿಕೆಯು ಜನತೆ ಮತ್ತು ಸರಕಾರಗಳಿಬ್ಬರ ಕರ್ತವ್ಯವಾಗಿದೆ ಅಂತೆಯೇ ಪಂಚವಾರ್ಷಿಕ ಯೋಜನೆಯಲ್ಲಿ ವೈಯಕ್ತಿಕ ಪ್ರಯತ್ನಗಳಿಗೆ ಅನುವು ಮಾಡಿಕೊಡಲಾಗಿದೆ. ಕೆಲವೊಂದು ವಿಷಯಗಳ ಮೇಲೆ ಸರಕಾರದ ನಿಯಂತ್ರಣ ಇದ್ದೇ ಇರುತ್ತದೆ. ಎಲ್ಲ ಯೋಜನೆಗಳಂತೆ ಈಗಾಗಲೇ ಕಾರ್ಯಗತವಾಗುತ್ತಿರುವ ಯೋಜನೆಗಳನ್ನು ಪೂರ್ತಿಗೊಳಿಸಲಿಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗುವುದು

ಸಾರ್ವಜನಿಕ ಉದ್ಯಮ

ಕೇಂದ್ರ ಮತ್ತು ರಾಜ್ಯಸರಕಾರಗಳು ಈ ಕಾರ್ಯ ನಡೆಯಿಸುತ್ತವೆ. ಇವುಗಳಿಗಾಗಿ ೯೪ ಕೋಟಿ ರೂಪಾಯಿಗಳನ್ನು ತೆಗೆದಿಡಲಾಗಿದೆ. ಈ ವಿಭಾಗದಲ್ಲಿಯ ಮುಖ್ಯ ಉದ್ಯಮವೆಂದರೆ ಕಬ್ಬಿಣ ಮತ್ತು ಉಕ್ಕಿನದು. ಅದಕ್ಕೆ ಒಟ್ಟು ೮೦ ಕೋಟಿ ರೂಪಾಯಿ ವೆಚ್ಚ ಬರಬಹುದು. ಯೋಜನೆಯ ಅವಧಿಯಲ್ಲಿ ೩೦ ಕೋಟಿ ರೂಪಾಯಿ ಖರ್ಚು ಮಾಡಲಾಗುವುದು. ೧೫ ಕೋಟಿ ರೂಪಾಯಿಗಳನ್ನು ಸರಕಾರ ಪೂರಯಿಸುತ್ತದೆ. ಉಳಿದ ೧೫ ಕೋಟಿ ರೂಪಾಯಿಗಳನ್ನು ದೇಶೀಯ ಮತ್ತು ವಿದೇಶೀ ಹೂಡಿಕಾರಿನಿಂದ ಕೂಡಿಸಲಾಗುವುದು. ಈ ಕಾರಖಾನೆಯು ೮೦,೦೦೦ ಟನ್ನು ಕಬ್ಬಿಣ ಮತ್ತು ೬೫,೦೦೦ ಟನ್ನು ಉಕ್ಕನ್ನು ಉತ್ಪಾದಿಸುವುದು. ಯೋಜನೆಯ ಅವಧಿಯಲ್ಲಿ ಕೇವಲ ೬೫,೦೦೦ ಟನ್ನು ಕಬ್ಬಿಣವನ್ನು ಮಾತ್ರ ಉತ್ಪಾದಿಸುವುದು. ಸಿಂಧ್ರಿಯಲ್ಲಿಯ ಗೊಬ್ಬರ ಕಾರಖಾನೆ, ಚಿತ್ತರಂಜನದಲ್ಲಿಯ ರೇಲ್ವೆ ಎಂಜಿನ್ ಕಾರಖಾನೆ, ಮೈಸೂರಲ್ಲಿಯ ಜಲಹಳ್ಳಿಯಲ್ಲಿಯ ಯಂತ್ರಗಳ ಸಾಮಾನುಗಳ ಕಾರಖಾನೆಗಳ ಕೆಲಸವನ್ನೂ ಪೂರ್ತಿಗೊಳಿಸಲಾಗುವುದು. ವಿಶಾಖಪಟ್ಟಣದಲ್ಲಿಯ ಹಡಗುಕಟ್ಟುವ ಕಾರಖಾನೆಯ ಅಭಿವೃದ್ಧಿಯೂ ನಡೆಯುವುದು. ರೇಲ್ವೆಡಬ್ಬಿ, ವಾಗೀನು, ಔಷಧ, ಇಲೆಕ್ಟ್ರಿಕ್ ಸಾಮಾನು, ಪೆನಿಸಿಲಿಯನ್— ಡಿ. ಡಿ. ಟಿ. ಮೊದಲಾದ ಔಷಧಗಳ ಕಾರಖಾನೆಗಳೂ ಯೋಜನೆಯಲ್ಲಿವೆ. ಈ ಯೋಜನೆಗಳಿಗೆ ೯೪ ಕೋಟಿ ರೂಪಾಯಿಗಳಲ್ಲದೆ ೫೦ ಕೋಟಿ ರೂಪಾಯಿಗಳನ್ನು ಮೂಲ ಉದ್ಯಮಗಳ ಅಭಿವೃದ್ಧಿಗೆ ಒದಗಿಸಲಾಗುವುದು.

ಖಾಸಗೀ ಉದ್ಯಮ

ಯೋಜನಾ ಆಯೋಗವು ವ್ಯವಸ್ಥಿತವಾಗಿ ಸಂಘಟಿತವಾದ ೪೭ ಉದ್ಯಮಗಳ ಬಗೆಯಲ್ಲಿ ವಿವರವಾದ ಕಾರ್ಯಕ್ರಮವನ್ನು ಸಂಬಂಧಿಸಿದ ಪ್ರತಿನಿಧಿಗಳೊಂದಿಗೆ ವಿಚಾರವಿನಿಮಯ ಮಾಡಿ ಸಿದ್ಧಗೊಳಿಸಿದೆ. ಈ ಕಾರ್ಯಗಳಿಗೆ ೬೫೫ ಕೋಟಿ ರೂಪಾಯಿಗಳ ವೆಚ್ಚ ತಗಲುವುದು. ಅದರಲ್ಲಿ ೧೫೦ ಕೋಟಿ ರೂಪಾಯಿಗಳು ಈಗಿರುವ ಯಂತ್ರಗಳನ್ನು ಬದಲಿಸಿ ಅತ್ಯಾಧುನಿಕ ಯಂತ್ರಸಾಕುವುದಕ್ಕಾಗಿಯೇ ಬೇಕಾಗುವುವು. ಉಕ್ಕು, ಕಬ್ಬಿಣ, ಪೆಟ್ರೋಲ್‌ಶುದ್ಧೀಕರಣ, ಸೀಮೆಂಟ್, ಅಲ್ಯುಮಿನಿಯಮ್, ಕೃತಕಗೊಬ್ಬರ, ಡಿಜೆಲ ಎಂಜಿನು, ಶಕ್ತಿಯಿಂದ ನಡೆಯುವ ಪಂಪು, ರಸಾಯನ, ಅಲ್ಕೊಹೋಲ್ ಇವೇ ಮೊದಲಾದ ಅನೇಕ ವಸ್ತುಗಳ ಉತ್ಪಾದನೆ ನಡೆಯಲಿದೆ. ಕೆಳಗಿನ ವಸ್ತುಗಳ ಉತ್ಪಾದನೆಯಲ್ಲಿ ಕೆಳಗಿನಂತೆ ಹೆಚ್ಚಳ ತೋರಿಬರುವುದು :

ಬಟ್ಟೆ	೧೮೬೩ ದಶಲಕ್ಷ ಯಾರ್ಡು.
ಸಕ್ಕರೆ	೩೮೪,೦೦೦ ಟನ್ನು
ಉಪ್ಪು	೪೭೯,೦೦೦ ,,
ಕಾಗದ ಮತ್ತು ರಟ್ಟು	೮೬,೦೦೦ ,,
ಕಾಜು (ಶೀಟು)	೨೦,೧೫೦ ,,
ವನಸ್ಪತಿ ಎಣ್ಣೆ	೧೮೩,೦೦೦ ,,

ಸಾಯಕಲ್, ಹೊಲಿಗೆಯಂತ್ರ, ಔಷಧ ಮೊದಲಾದ ವಸ್ತುಗಳ ಉತ್ಪಾದನೆಯಲ್ಲಿಯೂ ಹೆಚ್ಚಳ ತೋರಿಬರುವುದು.

ಒಟ್ಟು ಉದ್ದಿಮೆಗಳ ಅಭಿನ್ಯಾಸಕ್ಕೆ ೩೭೭ ಕೋಟಿ ರೂಪಾಯಿ ವೆಚ್ಚ ಬರಲಿದೆ. ಯಂತ್ರೋಪಕರಣ ಬದಲಿಸಲಿಕ್ಕೆ ೧೫೦ ಕೋಟಿ ರೂಪಾಯಿಗಳಲ್ಲದೆ ೬೦೭ ಕೋಟಿ ರೂಪಾಯಿ ಒಟ್ಟು ಈ ಯೋಜನೆಗಳ ವೆಚ್ಚವಾಗುವುದು. ಯೋಜನೆಯ ಅವಧಿಯಲ್ಲಿ ೩೦೭ ಕೋಟಿ ರೂಪಾಯಿಗಳನ್ನು ಮಾತ್ರ ವೆಚ್ಚ ಮಾಡಲಾಗುವುದು.

ಈ ಕಾರ್ಯಕ್ಕೆ ಬೇಕಾಗುವ ಬಂಡವಲವನ್ನು ದೇಶ ಮತ್ತು ವಿದೇಶಗಳಿಂದ ಪಡೆಯಲಾಗುವುದು. ವಿದೇಶದ ಬಂಡವಲನ್ನು ಹೆಚ್ಚು ಪ್ರಾಶಸ್ತ್ಯವಿರುವ ಉದ್ಯಮಗಳಲ್ಲಿ ತೊಡಗಿಸಲಾಗುವುದು. ದೇಶೀ ಮತ್ತು ವಿದೇಶೀ ಸಂಸ್ಥೆಗಳು ಪಾಲಿನಿಂದ ಕಾರ್ಯ ಮಾಡಲಿಕ್ಕೂ ಅನುಮತಿ ಕೊಡುವ ವ್ಯವಸ್ಥೆಯಿದೆ.

ಚಿಕ್ಕ ಉದ್ಯಮ ಮತ್ತು ಕೈಗಾರಿಕ

ಈ ದಿಶೆಯಲ್ಲಿ ಒಂದು ಕಾರ್ಯಕ್ರಮ ಏರ್ಪಡಿಸಿ, ಕೈಗಾರಿಕೆಗಾರರಿಗೂ, ಸುಶಿಕ್ಷಿತರಿಗೂ, ತರಬೇತಿ ಹೊಂದಿದವರಿಗೂ ಚಿಕ್ಕ ದೊಡ್ಡ ಕೈಗಾರಿಕೆಗಳನ್ನು ಉದರಪೋಷಣೆಗೆ ಕೈಕೊಳ್ಳುವ ವ್ಯವಸ್ಥೆಯಿದೆ. ಸಹಕಾರೀ ಮತ್ತು ವ್ಯಕ್ತಿಸಂಘಗಳನ್ನು ಸಂಘಟಿಸಿ, ತನ್ಮೂಲಕ ಪ್ರಗತಿ ಸಾಧಿಸಲಾಗುವುದು. ಕುಶಲ ಕೆಲಸಗಾರರನ್ನು ಸ್ಫೂರ್ತಾಪಿಸಿ, ನೆರವು ನೀಡುವುದೂ, ಅನೇಕಾನೇಕ ಕೈಗಾರಿಕೆಗಳಲ್ಲಿ ಸಂಶೋಧನೆ ನಡೆಯಿಸುವುದೂ ಅವಶ್ಯವೆಂಬ ಮಾತನ್ನು ಯೋಜನೆಗಾರರು ಕಂಡುಕೊಂಡಿದ್ದಾರೆ. ಒಕ್ಕಲುತನದ ತರುವಾಯ ದೇಶದ ಮುಖ್ಯ ಉದ್ಯೋಗವಾದ ಕೈಮಗ್ಗದ ಉದ್ಯೋಗಕ್ಕೂ ಪ್ರಾಶಸ್ತ್ಯ ಕೊಟ್ಟು, ಅದನ್ನು ಬೆಳೆಯಿಸುವ ಪ್ರಯತ್ನ ಮಾಡಲಾಗುವುದು.

ಗ್ರಾಮೋದ್ಯೋಗಗಳು

ಗ್ರಾಮದ ಉದ್ಯೋಗಗಳ ಅವನತಿಯೇ ದೇಶದ ಅವನತಿಯೆಂದು ಅರ್ಥಶಾಸ್ತ್ರಜ್ಞರು ಹೇಳುತ್ತಾರೆ ಕೇವಲ ಸರಕಾರದ ಸಹಾಯದಿಂದ ಇವುಗಳ ಅಭಿವೃದ್ಧಿ ಸಾಧ್ಯವಿಲ್ಲ ಹಳ್ಳಿಗರೇ ಸಂಘಟಿತರಾಗಿ ಮುಂದೆ ಬರಬೇಕಾಗಿದೆ. ಕೇಂದ್ರ ಮತ್ತು ರಾಜ್ಯಗಳಿಂದ ಸಂಘಟನೆಗಳ ವ್ಯವಸ್ಥೆ ಮಾಡಲಾಗಿದೆ ಈ ನಿಟ್ಟಿನಲ್ಲಿ ಸಂಶೋಧನೆ ನಡೆಯಲಿದ್ದು, ಅವಶ್ಯವಿರುವ ತರಬೇತಿಯ ವ್ಯವಸ್ಥೆಮಾಡಲಾಗಿದೆ. ಚಿಕ್ಕ ದೊಡ್ಡ ಉದ್ಯೋಗಗಳಿಗೆ ವಿದ್ಯುತ್ ಕೂಡ ಪೂರೈಸಲಾಗುವದು.

ಕಚ್ಚಾ ಮಾಲಿನ ಪೂರೈಕೆಯ ವ್ಯವಸ್ಥೆಮಾಡುವುದು ಅವಶ್ಯವಿದೆ. ಯೋಜನೆಯಲ್ಲಿ ೧೫ ಕೋಟಿ ರೂಪಾಯಿ ಈ ಕಾರ್ಯಗಳಿಗೆ ವಿನಿಯೋಗಿಸಿದೆ. ಕೆಳಗಿನ ಉದ್ಯೋಗಗಳ ಅಭಿವೃದ್ಧಿಗಳ ಬಗೆಗೆ ತಜ್ಞರೊಂದಿಗೆ ವಿಚಾರಿಸಿ ಕಾರ್ಯಕ್ರಮ ಸಿದ್ಧಪಡಿಸಲಾಗಿದೆ:

೧. ಎಣ್ಣೆಗಾಣ.
೨. ಜೇನಿನ ಎಣ್ಣೆ ಮಿಂದ ನಾಟೂನು.
೩. ಭತ್ತ ಒಡೆಯುವುದು.
೪. ತಾಳೆಬೆಲ್ಲ.
೫. ಬೆಲ್ಲ ಮತ್ತು ಸಕ್ಕರೆ.
೬. ಚರ್ಮ.
೭. ಕಂಬಳಿ.
೮. ಕೈಕಾಗದ.
೯. ಜೇನು ಸಾಕುವಿಕೆ.
೧೦. ಕಡ್ಡಿಪೆಟ್ಟಿಗೆ.

ಖಾದೀ ಮತ್ತು ಗ್ರಾಮ ಉದ್ಯೋಗಮಂಡಲವು, ರಾಜ್ಯಸರಕಾರ ಹಾಗೂ ಈ ಕ್ಷೇತ್ರಗಳಲ್ಲಿ ಕಾರ್ಯ ಕೈಕೊಂಡ ಸಂಸ್ಥೆಗಳೊಡನೆ ವಿಚಾರ ವಿನಿಮಯ ನಡೆಯಿಸಿ, ಮುಂದಿನ ಕ್ರಮ ಕೈಕೊಳ್ಳಲಿದೆ.

ಒಕ್ಕಲುತನದ ದೇಶವಾಗಿರುವ ಭಾರತವು, ಮುಂಬರುವ ಕೆಲವು ವರುಷಗಳಲ್ಲಿ ಒಕ್ಕಲುತನದ ಅಭಿವೃದ್ಧಿಗೂ ದೇಶದ ಸಂಪತ್ತಿನ ಹೆಚ್ಚಳಕ್ಕೂ ಅನೇಕಾನೇಕ ಉದ್ಯಮಗಳನ್ನು ಬೆಳೆಯಿಸಿಕೊಂಡು ಔದ್ಯೋಗಿಕ ಭಾರತವಾಗಬೇಕಾಗಿದೆ.

ಹೊಸ ಬಾಳಿನ ಹೊಸ್ತಿಲಲ್ಲಿ

ಶ್ರೀ. ಸಿದ್ದಣ್ಣ ಮುಸಳಿ, ಬಿ. ಎ. ಬೆಳಗಾಂವಿ

ಹೊಸ ಬಾಳಿನ ಹೊಸತಿಲಿನಲಿ
ರಂಗುರಂಗಿಸುವ ಜೋಕು
ನಿಶೆ ಸರಿದಳಿ ಉಷೆ ಸುರಿದಳಿ
ಒಳ ಹೊರಗೂ ಹೊಳಪು ! ೧

ಅರಿಸಿಣದೊಳು ಮಿಂದಾಯಿತೆ
ಬಂದಾಯಿತೆ ಜೊತೆಗೆ
ನೆರಳಿನ ಸರಿ ನಿಂದಾಯಿತೆ
ಶುಭ ಕೋರುತ ಪತಿಗೆ ! ೨

ಹಸನಾಯಿತೆ ಹೊಸದಾಯಿತೆ
ಮನೆಯಂಗಳ ಚೆಲುವು
ತಿಳಿನೀರಿನ ತಳಿಯಾಯಿತೆ
—ರಂಗೋಲಿಯ ರೂಹು ! ೩

ಬಾಗಿಲಿನಲಿ ಮಾಂದಳಿರಿನ
ತಳಿ ಹಸುರಿನ ನೆರಳು
ಶ್ರೀಗಂಧದ ಸೌಭಾಗ್ಯದ
ಸಿರಿಕುಂಕುಮ ಬೆರಳು. ೪

ಜೋಲ್ಮುಡಿಯಲಿ ಪುನರವಿದೆ
ಸಿಂಗಾರದ ಗೌರಿ !
ಎದೆ ಎದೆಗೂ ಸುಖ ನೀಡಿವೆ
ಕಣ್-ಮನವೂ ಸೇರಿ ೫

ಗಲ್ಲದೊಳೂ ಹೊವರಳಿದೆ
ಸೌರಭವನು ಸೂಸಿ
ಕಣ್ಣಿನೊಳೂ ಕೋಲ್—ಮಿಂಚಿದೆ
ಎದೆಯಾತೆಯ ಬಯಸಿ. ೬

ಮನದುಂಬಿಯ ಝೇಂಕಾರದ
ಓಂಕಾರಕೆ ಹೂವು
ಕಣ್ಣರಳಿಸಿ ಎದೆಯಲುಗಿಸಿ
ಮುಂಚಾಚಿದೆ ಬಾಹು. ೭

ಇಂದ್ರಾಣಿಯ ಚೆಲ್ವಿಕೆಯೂ
ಮೈತಳೆದರು ಕೂಡ
ಮನ ಮೋಹಿಸಿ ಮಾಯಾವಿನಿ
ರಮಿಸಿದರೂ ಬೇಡ! ೮

ಶ್ರೀ ಚಂದ್ರನ ರೋಹಿಣಿಯೊಲು
ಎದೆಗಿಳಿಯಿತು ಪ್ರೀತಿ
ಬಾಲ-ಜೇನಿನ ಹೊಳೆ ಹರಿಯಿತು
ಎರಡಂಚೂ ಸೂಸಿ. ೯

ಜೆಳುದಿಂಗಳ ಮಳೆಯಾಯಿತು
ಸುಖವಾಗಲಿ ಬದುಕು !
ಮಕರಂದವೊ ಮಲ್ಲಿಗೆಯೋ
ಮನೆ ತುಂಬಿತು ಬೆಳಕು ! ೧೦

ಗುಜರಾತಿ ಪತ್ರಿಕೋದ್ಯಮ

(ಪರಿಚಯಾತ್ಮಕ ಲೇಖನ)

ಎ. ಎಸ್. ರಾಮಕೃಷ್ಣ, ಸುರತ್ಕಲ್

●

ಗುಜರಾತಿ ಪತ್ರಿಕಾಪ್ರಪಂಚದ ಇತಿಹಾಸವನ್ನು ಪ್ರಾರಂಭಿಸಿ ಬೆಳಸಿದವರೆಂದರೆ, ಪಾರ್ಸಿ ಸಮಾಜದ ಧುರೀಣರು. ಒಂದು ಬಗೆಯಿಂದ ಆಧುನಿಕ ಗುಜರಾತಿ ಸಾಹಿತ್ಯದ ನಿರ್ಮಾತೃಗಳೆಂದರೆ ಪಾರ್ಸಿಗಳೆಂದೇ ಹೇಳಬಹುದಾಗಿದೆ.

●

ಗುಜರಾತಿ ಪತ್ರಿಕೋದ್ಯಮಕ್ಕೆ ಸುಮಾರು ಒಂದುವರೆ ಶತಮಾನದ ಇತಿಹಾಸವಿದೆ. ಪಶ್ಚಿಮ ಭಾರತದಲ್ಲಿ ಮೊದಲು ಕಾಣಿಸಿಕೊಂಡಿದ್ದುವು ಇಂಗ್ಲಿಷ ಪತ್ರಿಕೆಗಳೇ; ಅದಕ್ಕೆ ಅನಂತರ ಹೊರಡತೊಡಗಿದ ಗುಜರಾತಿ ಪತ್ರಿಕೆಗಳಿಗೇ ಜನಸಾಮಾನ್ಯರ ವಿಶಾಲವಾಚಕ ವರ್ಗ ದೊರೆಯಿತೆನ್ನಬಹುದು. ಏಕೆಂದರೆ ಆಗ ಇಂಗ್ಲಿಷ್ ಬಲ್ಲವರು ಬಹಳ ಕಡಿಮೆ ಮಂದಿ.

ಮುಂಬಯಿ ನಗರದ ಬೆಳೆವಣಿಗೆಯಲ್ಲಿ ಪಾರ್ಸಿಗಳು ವಹಿಸಿದ ಪಾತ್ರ ದೊಡ್ಡದೆಂದು ಹೇಳುವುದುಂಟು. ಪತ್ರಿಕೋದ್ಯಮದ ವಿಚಾರವಾದರೂ ಹಾಗೆಯೇ. ಪಾರ್ಸಿಗಳೇ ಅಲ್ಲಿಯ ಪತ್ರಿಕೋದ್ಯಮದ ಪ್ರಗತಿಗೆ ಪ್ರಾರಂಭದಲ್ಲಿ ಬಹುವಾಗಿ ದುಡಿದವರು. ಫರ್ದೂಂಜಿ ಮರ್ಜ್‌ಬಾನ್ ಎಂಬವರು, ಮುಂಬಯಿಯಲ್ಲಿ ಮೊತ್ತಮೊದಲನೆಯ ಗುಜರಾತಿ ಮುದ್ರಣಾಲಯವನ್ನು ಸ್ಥಾಪಿಸಿದರು. ಪ್ರಥಮದಲ್ಲಿ ಅಚ್ಚಿನ ಮೊಳೆಗಳನ್ನು ತಯಾರಿಸಿದ್ದು ಮರದಿಂದ; ಅನಂತರ ಸೀಸದ ಮೊಳೆಗಳು ಬಂದುವು. 'ಬಾಂಬೇ ಸಮಾಚಾರ ಕ್ಯಾಲೆಂಡರ್' ಎಂಬುದೇ ಮೊದಲನೆಯ ಗುಜರಾತಿ ಪ್ರಕಟಣೆ. ಇದು ೧೮೧೨ ರಲ್ಲಿ. ಆರು ವರ್ಷಗಳ ಅನಂತರ 'ಮುಂಬಯಿ ಸಮಾಚಾರ' ಎಂಬ ವೃತ್ತ ಪತ್ರಿಕೆಯನ್ನು ಹೊರಡಿಸಲಾಯಿತು. ಸುಮಾರು ೧೩೪ ವರ್ಷಗಳ ಹಿಂದೆ ಮರ್ಜ್‌ಬಾನರಿಂದ ಸ್ಥಾಪಿಸಲ್ಪಟ್ಟ ಈ ಪತ್ರಿಕೆ, ಇಂದಿಗೂ ಯಶಸ್ವಿಯಾಗಿ ಮುನ್ನಡೆಯುತ್ತಿದೆ ಮರ್ಜ್‌ಬಾನರು ಕ್ರಮೇಣ ಮುದ್ರಣಕಾರ್ಯವನ್ನು ಅಂದವಾದ ರೀತಿಯಲ್ಲಿ ನಡೆಯಿಸತೊಡಗಿದರು. ತಮ್ಮ ಪತ್ರಿಕೆಯಲ್ಲಿ-ಜನತೆಗೆ ಒಳ್ಳೆಯ ಶಿಕ್ಷಣವನ್ನೂ, ಯೋಗ್ಯ ಮನರಂಜನೆಯನ್ನೂ ನೀಡುವಂಥ ಉತ್ತಮ ತರದ ಸಾಹಿತ್ಯವನ್ನು ಒದಗಿಸತೊಡಗಿದರು. ಮರ್ಜ್‌ಬಾನರ ಮೂವರು ಮಕ್ಕಳು ಕೂಡ ಅವರೊಡನೆ ಈ ಕೆಲಸದಲ್ಲಿ ಸೇರಿಕೊಂಡಿದ್ದರು. ಈ ಮರ್ಜ್‌ಬಾನ್ ಬಂಧುಗಳು ಪೋರ್ಚುಗೀಸರ ಆಳ್ವಿಕೆಯಲ್ಲಿರುವ ದಮಣದಲ್ಲಿಯೂ ಒಂದು ಮುದ್ರಣಾಲಯವನ್ನು ಸ್ಥಾಪಿಸಿ, ಕೆಲವು ಕಾಲ ನಡೆಯಿಸಿಕೊಂಡು ಬಂದರು.

'ಮುಂಬಯಿ ಸಮಾಚಾರ' ಪತ್ರಿಕೆ ಬಹಳ ವರ್ಷಗಳ ಕಾಲ ಮರ್ಜ್‌ಬಾನ್ ಕುಟುಂಬದವರ ಕೈಯಲ್ಲಿದ್ದು, ಕೊನೆಗೊಮ್ಮೆ ಪ್ರಖ್ಯಾತ ಪತ್ರಿಕೋದ್ಯಮಿ ಮಾಣಿಕ್‌ಜಿಯವರ ವಶಕ್ಕೆ ಬಂದಿತು. ಆಗ ಅದು ಸಾರ್ವಜನಿಕ ಅಭಿಪ್ರಾಯಗಳನ್ನು ಪ್ರತಿಬಿಂಬಿಸುವ ಪ್ರಾಮುಖ್ಯ ಸಾಧನವಾಗಿ ರೂಪುಗೊಂಡು, ಬಹಳ ಸತ್ತ್ವಶಾಲಿಯಾಗಿ ಪರಿಣಮಿಸಿತು. ಅಗಿನ ಬ್ರಿಟಿಷ್ ಗವರ್ನರುಗಳು ಕೂಡ ಈ ಪತ್ರಿಕೆಗೆ ಅಂಜಿ ತಲಮಳಿಸಿದ್ದಿದೆಯಂತೆ. ೧೯೨೧ರಲ್ಲಿ ಪತ್ರಿಕೆ ಪುನಃ ಕೈ ಬದಲಾಯಿಸಿತು ನೌರೋಜೀ ಬೆಳಗಾಂವವಾಲಾ ಎಂಬ ನಿಷ್ಠಾವಂತ ಕಾಂಗ್ರೆಸ್ಸಿಗರೊಬ್ಬರು ಅದನ್ನು ಕೊಂಡುಕೊಂಡರು. ಕಟ್ಟಕಡೆಗೆ ೧೯೩೨ರಲ್ಲಿ 'ಮುಂಬಯಿ ಸಮಾಚಾರ' ಪತ್ರಿಕೆ, ಒಳ್ಳೆಯ ವ್ಯವಹಾರಜ್ಞರೆನಿಸಿದ ಎಂ. ಎನ್. ಕಾಮಾರವರ ವಶಕ್ಕೆ ಬಂದಿತು. ಪತ್ರಿಕೆಯ ಸಂಚಾಲಕತ್ವ ಹಾಗೂ ಸಂಪಾದಕತ್ವವನ್ನು ಅನುಭವಶಾಲಿ ಪತ್ರಿಕೋದ್ಯಮಿಗಳಾದ ಸೋರಾಬ್ಜಿ ಕಪಾಡಿಯಾರವರು ನಿರ್ವಹಿಸಿದರು. ಮೊದಲಿನಿಂದಲೂ ಈ ಪತ್ರಿಕೆ 'ಜನತೆಯ ಪತ್ರಿಕೆ' ಎಂಬಂತಿತ್ತು. ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ಬ್ರಿಟಿಷರ ವಿರುದ್ಧ ಹೂಡಿದ ಸ್ವಾತಂತ್ರ್ಯ ಚಳವಳಿಯಲ್ಲಿ ಈ ಪತ್ರಿಕೆ ನಿರ್ಭಯವಾಗಿ ದೇಶೀಯರ ಹೋರಾಟವನ್ನು ಸಮರ್ಥಿಸಿತು. ಸಂಪಾದಕರಾದ ಕಪಾಡಿಯಾರವರು ಸರಕಾರದ ಆಜ್ಞೆಯನ್ನು ಉಲ್ಲಂಘಿಸಿ, ಕಾಂಗ್ರೆಸ್ ಸಮಾಚಾರಗಳನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ, ಕಾರಾಗೃಹವಾಸವನ್ನನುಭವಿಸಲೂ ಹಿಂಜರಿಯಲಿಲ್ಲ.

ದೀರ್ಘಕಾಲ ನಡೆದು ಬಂದ ಇನ್ನೊಂದು ಪತ್ರಿಕೆಯೆಂದರೆ 'ಜಾಮ್-ಇ-ಜಾಮ್ಶೆದ್.' ೧೩೭ ವರ್ಷಗಳ ಹಿಂದೆ ಇದು ಸ್ಥಾಪಿಸಲ್ಪಟ್ಟಿತು. 'ಮುಂಬಯಿ ಸಮಾಚಾರ'ವನ್ನು ಹೊರಡಿಸಿದ ಮರ್ಜ್‌ಬಾನ್‌ರೇ ಈ ಪತ್ರಿಕೆಯ ಸುವಿಖ್ಯಾತಿಗೂ ಕಾರಣರಾದರು. ಮೊದಲು ಶೆಪ್ಪೋನ್ಜಿ ಎಂಬವರ ಕೈಯಲ್ಲಿದ್ದು, ಅನಂತರ ಜಹಾಂಗೀರ್ ಬೈರಾಮ್ಜಿ ಮರ್ಜ್‌ಬಾನರ ಕೈಗೆ ಬಂದು, ಪಾರ್ಸಿಗಳಿಗೆ ಮಾತ್ರವಲ್ಲದೆ ಗುಜರಾತಿ ಮಾತನಾಡುವ ಎಲ್ಲ ಪಂಗಡಗಳವರ ಅಭಿಪ್ರಾಯಗಳನ್ನೂ

ಸುಂಡಿಸುವ ಪತ್ರಿಕೆಯೆನಿಸಿತು. ಬೈರಾಂಜಿಯವರ ಮುಕ್ಕಳು ರುಸ್ತುಂಜಿ, ಫಿರೋಜ್‌ಷಾ, ಶಾವಸ್ಯಾಷಾ—ಇವರು ಪತ್ರಿಕೆಯನ್ನು ಜೆನ್ನಾಗಿ ನಡೆಸಿಕೊಂಡು ಬಂದರು ಈಗ ಅದು ಸಂಸ್ಥಾಪಕರ ಮೊಮ್ಮಕ್ಕಳ ಕೈಯಲ್ಲಿದೆ.

ಮುಂಬಯಿಯ ಮೊಟ್ಟಮೊದಲನೆಯ 'ಸಾಯಂಕಾಲದ ಪತ್ರಿಕೆ' ಎನ್ನಿಸಿಕೊಂಡ 'ಸಾಂಜ್ ವರ್ತಮಾನ್' ಕೂಡ ಪಾರ್ಸಿಗಳಿಂದಲೇ ಸ್ಥಾಪಿಸಲ್ಪಟ್ಟಿತು. ೧೯೦೦ರಲ್ಲಿ ರುಸ್ತುಂಜಿ ವಾಚ್ಚಾಪವರು ಇದನ್ನು ಹೊರಡಿಸಿದರು. ಬಲು ಬೇಗನೆ ಜನಪ್ರಿಯವಾಗಿ, ಐವತ್ತು ವರ್ಷಗಳ ಕಾಲ ಸಾಮಾಜಿಕ ಸುಧಾರಣೆಗಾಗಿಯೂ ಜನಾಭಿಪ್ರಾಯವನ್ನು ರೂಪುಗೊಳಿಸುವುದಕ್ಕಾಗಿಯೂ ಕೆಲಸ ಮಾಡಿದ ಈ ಪತ್ರಿಕೆ, ಈಗ ನಿಂತುಹೋಗಿರುವುದು ವಿಷಾದಕರ.

ಕೈಖುಸ್ರು. ಎನ್. ಕಾಬ್ರಾಜಿಯವರ ಸಮರ್ಥ ಸಂಪಾದಕತ್ವದಲ್ಲಿ ಹೊರಡುತ್ತಿದ್ದ 'ರಾಸ್ತ್ ಗೋಫ್ತರ್' ಎಂಬ ವಾರಪತ್ರಿಕೆ, ಸತ್ಯಪ್ರತಿಪಾದನೆಯಲ್ಲಿ ಎಂದೂ ಹಿಂಜರಿಯಲಿಲ್ಲ. ಕಾಬ್ರಾಜಿಯವರು ಸಾಮಾಜಿಕ ಸುಧಾರಣೆಗಾಗಿ ತುಂಬ ದುಡಿದವರಲ್ಲದೆ, ಅವರ ದೃಷ್ಟಿ ಪಾರ್ಸಿಜನಗಳಿಗೆ ಹಿತವಾಗಿ ಕಂಡಂತೆಯೇ ಹಿಂದುಗಳಿಗೂ ವಿಹಿತವೆನಿಸಿತು. ದಾದಾಭಾಯಿ ನವರೋಜಿ, ಖುರ್ಷೀದ್‌ಜಿ ನಶಿರ್ವಾನ್‌ಜಿ ಕಾಮಾ ಮೊದಲಾದ ವಿಖ್ಯಾತ ಸಮಾಜಸುಧಾರಕರು ಈ ಪತ್ರಿಕೆಗಾಗಿ ಕೆಲಸಮಾಡಿದ್ದುಂಟು. ಕಾಬ್ರಾಜಿಯವರ ಮರಣಾನಂತರ ಪಿ. ಬಿ. ದೇಸಾಯಿಯವರು ಅದನ್ನು ನಡೆಯಿಸಿದರು.

ಗಿಲಗರಲ್ಲಿ ಸ್ಥಾಪಿತವಾದ 'ಕೈಸರ್-ಇ-ಹಿಂದ್' ಎಂಬ ಸಾಪ್ತಾಹಿಕವು ಕೂಡ ಗುಜರಾತಿ ಪತ್ರಿಕೋದ್ಯಮದ ಬೆಳೆವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಫ್ರಾಮಜಿ ಮೆಹ್ತಾರವರ ಸಂಪಾದಕತ್ವದಲ್ಲಿ ಈ ಪತ್ರಿಕೆ ಜನಾಭಿಪ್ರಾಯವನ್ನು ಪ್ರತಿಬಿಂಬಿಸುವ ಸಾಧನವಾಯಿತು. ನಡುವೆ ಅದಕ್ಕೆ ಹಲವಾರು ಕಂಟಕಗಳೊದಗಿದುವು. ಕೊನೆಗೊಮ್ಮೆ ಕೈ ಬದಲಾಯಿಸಲ್ಪಟ್ಟು, ಹೀರ್‌ಜಿ ಭೇಡಿನ್ ಎಂಬವರ ವಶಕ್ಕೆ ಬಂದಾಗ, ಪತ್ರಿಕೆಗೆ ಹೊಸಜೀವ ಬಂದಂತಾಯಿತು. 'ಕೇಸರ್-ಇ-ಹಿಂದ್' ಜನತೆಯ ಆಚ್ಚು ಮೆಚ್ಚಿನ ಭಾನುವಾರದ ಪತ್ರಿಕೆಯೆಂದೆನಿಸಿತು. ಬೇದಿನ್‌ರ ಮಗ ಶ್ರೀ. ಜಾಲ್‌ರವರು ಈಗ ಈ ಪತ್ರಿಕೆಯನ್ನು ನಡೆಸುತ್ತಿದ್ದಾರೆ.

ಬಹಳ ಹಿಂದೆಯೇ ಹೊರಟು ಈಗ ನಿಂತುಹೋಗಿರುವ ಪತ್ರಿಕೆಗಳಲ್ಲಿ 'ಅಖ್ಬಾರ್-ಇ-ಸೌದಾಗರ್' ಎಂಬುದೂ ಒಂದು. ತಾತಾ ಬಂಧುಗಳಿಂದ ಸ್ಥಾಪಿಸಲ್ಪಟ್ಟ 'ಪ್ರಜಾಮಿತ್ರ' ಕೂಡ ಗುಜರಾತಿ ವಾಚಕರ ಅವಶ್ಯಕತೆಗಳನ್ನು ಯೋಗ್ಯರೀತಿಯಲ್ಲಿ ಪೂರಯಿಸಿತು. ಮೆಹರ್ಜಿ ಭಾಯಿ ಮೇಡನ್‌ರವರು ಅದರ ಸಂಪಾದಕರಾಗಿದ್ದರು. ಕೆಲ ಕಾಲದ ಅನಂತರ ಸುಧಾರಣಾದೃಷ್ಟಿಯ 'ಪಾರ್ಸಿ' ಎಂಬ ಪತ್ರಿಕೆ ಪ್ರಜಾಮಿತ್ರ'ದೊಡನೆ ಸಮಾವೇಶಗೊಂಡು 'ಪ್ರಜಾಮಿತ್ರ ಮತ್ತು ಪಾರ್ಸಿ' ಎಂಬ ಹೆಸರಿನ ಪತ್ರಿಕೆ ಹೊಂಟಿತು. ಸಂಪಾದಕ ಮೇಡನ್ ಅವರು ಪಕ್ಷ-ಪಂಗಡಗಳ ಅಥವಾ ಪ್ರಬಲ ವ್ಯಕ್ತಿಗಳ ಪ್ರತಿರೋಧಗಳನ್ನು ಲಕ್ಷಿಸದೆ, ತನಗೆ ಯೋಗ್ಯವೆನಿಸಿದ್ದನ್ನು, ನ್ಯಾಯವಾಗಿ ಕಂಡದ್ದನ್ನು ಆಂಜಿಕೆಯಿಲ್ಲದೆ ಬರೆಯುತ್ತಿದ್ದರು. ಪತ್ರಿಕೆಯ ಒಡೆಯರೊಡನೆ ಭಿನ್ನಾಭಿಪ್ರಾಯವುಂಟಾದಾಗ, ಮೇಡನ್‌ರವರು ತಮ್ಮ ಹುದ್ದೆಯನ್ನು ಬಿಟ್ಟು ಹೊರಬಂದರು. ಶ್ರೀ. ದಲಾಲ್ ಎಂಬವರನ್ನು ಕೂಡಿಕೊಂಡು 'ಸತ್ಯಮಿತ್ರ' ಎಂಬ ದೈನಿಕವನ್ನು ಸ್ಥಾಪಿಸಿದರು. ಈ ಪತ್ರಿಕೆ ಬಹಳ ಕಾಲ ಬದುಕಲಿಲ್ಲವಾದರೂ, ಹೊರಟಷ್ಟು ಕಾಲ ಒಳ್ಳೆಯ ಖ್ಯಾತಿಯನ್ನು ಗಳಿಸಿಕೊಂಡಿತು. ಕೊನೆಗೆ ದಲಾಲರು ಇದನ್ನು ವಾರಪತ್ರಿಕೆಯನ್ನಾಗಿ ಕೆಲವು ಕಾಲ ಹೊರಡಿಸಿದರು.

ಒಳ್ಳೆಯ ಸಾಹಿತಿಗಳೆಂದೂ, ಇತರ ವಿಧಗಳಲ್ಲಿಯೂ ಪ್ರಖ್ಯಾತಿ ಪಡೆದ ಮಹನೀಯರನೇಕರು, ಗುಜರಾತಿ ಪತ್ರಿಕೋದ್ಯಮಿಗಳಾಗಿ ಆ ಉದ್ಯಮವನ್ನು ಪೋಷಿಸಿ ಬೆಳೆಯಿಸಿದ್ದಾರೆ. ಆರ್. ಪಿ. ಕರ್ಕಾರಿಯಾ, ದಾದಾಭಾಯಿ ನವರೋಜಿ, ಬೈರಾಮ್‌ಜಿ ಮಲಬಾರಿ, ನರಿಮನ್ ಮುಂತಾದವರು ಅವರಲ್ಲಿ ಪ್ರಮುಖರು. ನರಿಮನ್ ಅವರು ಒಳ್ಳೆಯ ವಿದ್ವಾಂಸರಾಗಿದ್ದರು. ಗುಜರಾತಿ ಮಾತ್ರವಲ್ಲದೆ ಸಂಸ್ಕೃತ ಮತ್ತು ಪರ್ಶಿಯನ್ ಭಾಷೆಗಳಲ್ಲಿಯೂ ಅವರು ಪರಿಣತರೆನಿಸಿದ್ದರು. ಉತ್ತಮ ಹಾಸ್ಯ ಲೇಖಕರೂ ಆಗಿದ್ದರು. 'ಸಾಂಜ್ ವರ್ತಮಾನ್' ಪತ್ರಿಕೆಯ ಸ್ತಿರಶೀರ್ಷಿಕೆಯೊಂದರ ಕೆಳಗೆ ಬರುತ್ತಿದ್ದ ಅವರ ಲಘುಶೈಲಿಯ ತುಣುಕು ಬರೆಹಗಳು ತುಂಬ ಜನಪ್ರಿಯವಾಗಿದ್ದುವು. ಅವರ ಶೈಲಿಯಲ್ಲಿ ನೈವಿಧ್ಯವಿತ್ತು. ಪಾರ್ಸಿ ಜನರೇ ಹೆಚ್ಚಾಗಿ ಓದುವ ಯಾವುದಾದರೊಂದು ಪತ್ರಿಕೆಗಾಗಿ ಬರೆಯುವಾಗ, ಅವರ ಗುಜರಾತಿ ಬರೆವಣಿಗೆಯಲ್ಲಿ ಪರ್ಶಿಯನ್ ಶಬ್ದಗಳು ಹೇರಳವಾಗಿ ಬರುತ್ತಿದ್ದುವು. ಮುಖ್ಯವಾಗಿ ಹಿಂದು ವಾಚಕರಿಗೇ ಬರೆಯುವಾಗ, ಸಂಸ್ಕೃತ ಶಬ್ದಗಳನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದರು. ಸುಪ್ರಸಿದ್ಧ ಬರೆಹಗಾರರಾದ ಇಚ್ಛಾರಾಮ ಸೂರ್ಯರಾಮ್ ದೇಸಾಯಿಯವರ ಸಂಪಾದಕತ್ವದಲ್ಲಿ ಹೊರಬರುತ್ತಿದ್ದ 'ಗುಜರಾತಿ' ಎಂಬ ಪತ್ರಿಕೆಯಲ್ಲಿ ನರಿಮನ್‌ರವರು 'ಸಿಂಹಾವಲೋಕನ' ಎಂಬ ಶೀರ್ಷಿಕೆಯಡಿಯಲ್ಲಿ, ಪ್ರತಿವಾರವೂ ಬರೆಯುತ್ತಿದ್ದರು. ಇನ್ನು ರುಸ್ತುಮ್ ಮಸಾನಿ,

೫೫ ವರ್ಷಗಳಿಂದ ಅನುಭವಸಿದ್ಧ

ಕರ್ಕೀ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು

ವಿಳಾಸ:—

ಗಣೇಶ ರಾಮಚಂದ್ರ ಕರ್ಕೀ ಮತ್ತು ಕಂಪನಿ

ಗಿರಗಾಂವ, ಮುಂಬಯಿ. ೪

ಕೆ. ಎಂ. ಮುನ್ಷಿಯವರಂಥ ವಿದ್ವಾಂಸರೂ ಗುಜರಾತಿ ಪತ್ರಿಕೋದ್ಯಮದ ಪ್ರಗತಿಗೆ ನೆರವಾಗಿದ್ದಾರೆ. ಆರ್ದೇಶೀರ್ ದಲಾಲ್‌ರವರು ಗುಜರಾತಿನ ವಯೋವೃದ್ಧ ಜ್ಞಾನವೃದ್ಧ ಕವಿಗಳು. ದೇಹ ಗಳಿತ ವಾಗುತ್ತ ಬಂದಿದ್ದರೂ ಅವರು ಗುಜರಾತಿ ಪತ್ರಿಕೋದ್ಯಮದ ಮೇಲ್ಮೈಗಾಗಿ ಶ್ರಮಿಸುತ್ತಿದ್ದಾರೆ. ನಾನಾಲಾಲ್ ದಲಪತ್‌ರಾಮ್; ಪ್ರೊ. ವಿ. ಕೆ. ಥಾಕೂರ್, ಮಣಿಶಂಕರ ಭಟ್ ಮೊದಲಾದ ಶ್ರೇಷ್ಠ ಸಾಹಿತಿಗಳ ಕೃತಿಗಳೂ ಗುಜರಾತಿ ಪತ್ರಿಕೆಗಳಲ್ಲಿ ಬಂದಿವೆ.

ಗುಜರಾತಿ ಪತ್ರಿಕೋದ್ಯಮವನ್ನು ಕುರಿತು ಹೇಳುವಾಗ, ಮಹಾತ್ಮಾ ಗಾಂಧಿಯವರ 'ನವಜೀವನ'ವನ್ನು ಮರೆಯುವಂತಿಲ್ಲ. ಗುಜರಾತಿ ಪತ್ರಿಕೋದ್ಯಮಕ್ಕೂ, ಸಾಹಿತ್ಯಕ್ಕೂ, ಮಹಾತ್ಮಾ ಗಾಂಧಿಯವರಿಂದ ದೊರೆತ ಉಪಕಾರ ಅಪಾರವಾದುದು. ಅವರ ಸರಳವಾದ ಆದರೆ ಪರಿಣಾಮಕಾರಿಯಾದ ಭಾಷಾಶೈಲಿ ಎಂದಿಗೂ ಅನುಕರಣೀಯವಾದುದು.

ಮೊತ್ತಮೊದಲು ಗುಜರಾತಿ ಪತ್ರಿಕೆಗಳನ್ನು ಹೊರಡಿಸಿ ನಡೆಸಿಕೊಂಡು ಬಂದವರೆಂದರೆ, ಪಾರ್ಸಿ ಜನಗಳೇ ಹೆಚ್ಚು. ಆದರೆ ಈಚೆಗೆ ಎರಡು ಮೂರು ದಶಕಗಳಿಂದ ಗುಜರಾತಿ ಮಾತೃಭಾಷೆಯಾದ ಇತರರೂ ಪತ್ರಿಕಾಪ್ರಕಟನೆಯ ಕಾರ್ಯಕ್ಕೆ ಕೈಹಾಕತೊಡಗಿದರು. ಅಮೃತ ಲಾಲ್ ಶೇಠರ 'ಜನ್ಮ ಭೂಮಿ' ಇಂದಿನ ಪ್ರಮುಖ ದೈನಿಕ ವಾಗಿದೆ. ಅವರ ಮಗ ಮೋಹನಲಾಲರು ಈಗ ಅದನ್ನು ನಡೆಸುತ್ತಿದ್ದಾರೆ. 'ಅಖಂಡ ಆನಂದ್' ಎಂಬ ಸುಪ್ರಸಿದ್ಧ ಪತ್ರಿಕೆಗೂ ಅವರೇ ಸಂಪಾದಕರು. ನಾರಾಯಣದಾಸ್ ಗಾಂಧಿಯವರ 'ಮಂದೇಮಾತರಂ' ದಿನಪತ್ರಿಕೆಗೆ ಕೂಡ ವಿಶಾಲವಾದ ವಾಚಕವರ್ಗವಿದೆ.

ಇತರ ದೇಶಭಾಷಾ ಪತ್ರಿಕೆಗಳಂತೆ ಗುಜರಾತಿ ಪತ್ರಿಕೆಗಳೂ ಸ್ವಾತಂತ್ರ್ಯಸಮರದ ಕಾಲದಲ್ಲಿ ಜನಾಭಿಪ್ರಾಯವನ್ನು ರೂಪುಗೊಳಿಸುವ ಅಮೂಲ್ಯ ಕಾರ್ಯದಲ್ಲಿ ತೊಡಗಿದ್ದುವು. ಅವು ಆಗ ಎಲ್ಲ ಬಗೆಯ ಅಡಚಣೆಗಳನ್ನೂ ಎದುರಿಸಿ ಕೆಲಸಮಾಡಿದುವು.

ಗುಜರಾತಿ ಪತ್ರಿಕೆಗಳು ವಿದೇಶೀ ಸುದ್ದಿಗಳಿಗಿಂತ, ಒಳನಾಡಿನ ಹಾಗೂ ಪ್ರಾದೇಶಿಕ ಸುದ್ದಿಗಳಿಗೇ ಹೆಚ್ಚಿನ ಪ್ರಾಮುಖ್ಯವನ್ನು ಕೊಟ್ಟು ಬಂದಿರುವುದು ಅವುಗಳ ವೈಶಿಷ್ಟ್ಯವೆಂದು ಹೇಳಲಾಗಿದೆ.

ಗುಜರಾತಿಗಳು ಚತುರರು, ಉದ್ಯಮಶೀಲರು, ತಮ್ಮ ಭಾಷೆಯ ಕುರಿತು ತುಂಬ ಅಭಿಮಾನವುಳ್ಳವರು. ಆದ್ದರಿಂದ ಗುಜರಾತಿ ಪತ್ರಿಕೋದ್ಯಮಕ್ಕೆ ಒಳ್ಳೆಯ ಭವಿಷ್ಯವಿದೆ.*

*(South India Journalist ನಲ್ಲಿ ಶ್ರೀ A. M. P. Karai ಅವರು ಬರೆದ ಲೇಖನದ ಆಧಾರದಿಂದ. ಮೂಲದ ವಸ್ತುವನ್ನು, ಆ ಪತ್ರಿಕೆಯ ಅಪ್ಪಣೆ ಪಡೆದು ಉಪಯೋಗಿಸಲಾಗಿದೆ.)

— ಚೇ.



ಸಾಹಿತ್ಯವಿಹಾರ

ಎರಡು ಪತ್ರಗಳು

ಜಯಂತಿಯು ಸಾಹಿತ್ಯಕಾರ್ಯವನ್ನೂ ಸಂಪಾದಕೀಯ ವಿಚಾರ ಧೋರಣೆಯನ್ನೂ ಕುರಿತು ವಾಚಕವರ್ಗದಿಂದ ಆಗಾಗ ಮೆಚ್ಚಿಕೆಯ ಪತ್ರಗಳು ಬರುತ್ತಿರುತ್ತವೆ. ಕಳೆದ ಜುಲೈ ಸಂಚಿಕೆಯ ಸಂಪಾದಕೀಯ ಲೇಖನವನ್ನೋದಿ ಬಂದ ಎರಡು ಪತ್ರಗಳನ್ನು ನಮ್ಮ ವಾಚಕರ ಅವಗಾಹನೆಗಾಗಿ ಪ್ರಕಟಿಸಬೇಕೆನಿಸಿದುದರಿಂದ ಇಲ್ಲಿ ಪ್ರಕಟಿಸಲಾಗಿದೆ. ಸಾಮಾಜಿಕ ಹಿತಬುದ್ಧಿಯ ವಾಚಕರ ಸಾಹಿತ್ಯಿಕ ದೃಷ್ಟಿ, ಎಂತಹ ಸಾಹಿತ್ಯವನ್ನು ಅಪೇಕ್ಷಿಸುವುದೆಂಬ ಸಂಗತಿಯನ್ನು ಈ ಪತ್ರಗಳಿಂದ ಅರಿತುಕೊಳ್ಳಬಹುದಾಗಿದೆ.

—ಸಂ. ಜಯಂತಿ

೧ನೆಯ ಪತ್ರ

"ಸಾಹಿತ್ಯಾಮೃತ ವ್ಯಂಜಿನಿ ಜಯಂತಿ!

ಆರ್ಥಿಕ ದೃಷ್ಟಿಯಿಂದ, ಪೋಷಣೆ ಸಾಲದೆ ಸೊರಗಿ ಕೃಶಗಾಲಾದ ನಿನ್ನ ಅವಸ್ಥೆಗೆ ಕೊರಗಿದವ್ಳೇ. ನಿನ್ನ ಆಂತರಿಕ ಸೌಂದರ್ಯಕ್ಕಾಗಿ ನಾನು ಅತಿಶಯವಾಗಿ ಅನಂದಿಸುತ್ತೇನೆ. ಸುಪುಷ್ಟ ಭಾಷಾಸಂಪತ್ತಿನಿಂದ ಸಾಹಿತ್ಯದೇವಿಗೆ ನೀನರ್ಪಿಸುವ ಸೇವೆಯು ಅಪಾರವಾದುದು ಎಂಬುದು ನೀನೆತ್ತಿದ ಮಾರ್ಗದಿಂದಲೇ ವೇದ್ಯವಾಗುವುದು.

ಪ್ರಚಲಿತ ವಾತಾವರಣದಲ್ಲಿ ಜನತೆಯು ಮಾರುಹೋಗುವ ನಿನ್ನ ಸಹೋದರಿಯರಾದ (ಹೀಗೆನ್ನಲು ಅದೇಕೋ ಮನವೇ ಹೇಸುವುದು). ಕೆಲವೊಂದು ಪತ್ರಿಕೆಗಳು ಎಬ್ಬಿಸುವ ಆಂದೋಲನಕ್ಕೆ ಮಿತಿಯಿಲ್ಲ. ಯಾವುಯಾವುದೋ ಧ್ಯೇಯದಿಂದ ಹೊರಟು, ಸಾಹಿತ್ಯ ನೈಪುಣ್ಯಕ್ಕೆ ಕುಠಾರವಾಗಿ ಸಾಗುವ ಈ ಪತ್ರಿಕೆಗಳು. ಜನತೆಯಲ್ಲಿ ಅಸಭ್ಯತೆಯನ್ನು ತರುವುದಲ್ಲದೆ, ಹುಲುಸಾಗಿ ಬೆಳೆದು ಬಾಳಬೇಕಾದ ಭಾಷೆಯನ್ನೂ ಕೆಡಿಸಿ ಸಾಗುವುದೆಂದರೆ ನಾವೆಷ್ಟು ಮರುಗಬೇಕು? ಛೆ! ಅವಾದರೂ ಅದೆಷ್ಟು ನಾಚಬೇಕು? ಈ ಕಾರಣದಿಂದಲ್ಲವೇ ಅವು ಕೊಡೆಯೊಳಗೋ, ಪತ್ರದ ಅವರಣದೊಳಗೋ ಇನ್ನಾವ ಗುಪ್ತಮಾರ್ಗದಿಂದಲೋ ಜನತೆಯು ಕೈವಶವಾಗುವುದೆಂದೆ–ಮತ್ತಿನ್ನೇಕೆ ಅವುಗಳ ನಾಚಿಕೆಯು ವಿಸ್ತಾರ! ಕೇವಲ ವ್ಯಾಪಾರದೃಷ್ಟಿಯಿಂದ ಹೊರಟ ಈ ಪತ್ರಿಕೆಗಳು– ಅದರಿಮ್ಮಡಿ ಮುಮ್ಮಡಿ ಜನತೆಯು ಹೃದಯವನ್ನು ಕಲಕಿ ಮಾರಿಹೋಗುವುದೆಂದರೆ, ಈ ಪತ್ರಿಕೆಗಳ ಅವಲೋಕನಕ್ಕಾಗಿ ನಾವು ವಿಮುಖರಾಗಬೇಕೇ, ಅಲ್ಲ; ಅವುಗಳನ್ನು ಈ ರೂಪದಲ್ಲಿ ಹೊರಗೆತರುವ ಸಂಪಾದಕರಿಗಾಗಿ ನಾಚಬೇಕೆ? ನೀನೇ ಯೋಚಿಸು!

ಜುಲೈ ತಿಂಗಳ ನಿನ್ನ ಸಂಪಾದಕೀಯವನ್ನೋದಿ ನನಗೇಕೋ ತುಂಬಾ ಮರುಕವಾಯಿತು. ಅದರೊಂದಿಗೆ ನಿನ್ನ ದೃಢನಿಶ್ಚಯದ ಧೋರಣೆಯನ್ನು ಕಂಡು ಅತ್ಯಾನಂದವಾಯಿತು. ನಿನ್ನ ಅಭಿಮಾನಿಗಳಾದ ವ್ಯವಹಾರಿಗಳನೇಕರು ಸಾರಿದ ಆ ಮಾರ್ಪಾಟು ನಿನ್ನ ಹೃದಯಕ್ಕೆ ಒಪ್ಪುವುದಲ್ಲ; ನೀನೀವರೆಗೆ ನಡೆದುಬಂದ ದಾರಿಗದು ದೂರದ ಮಾತು. ಹೀಗೆ ನಡೆದು ಬಂದರೆ–ಆರ್ಥಿಕ ದೃಷ್ಟಿಯಲ್ಲಿ ನೀನು ಗೆಲ್ಲುವೆಯಾದರೂ, ನೀನೆತ್ತಿದ ಧ್ಯೇಯಧೋರಣೆಗಳು ಗತಿವಿಹೀನವಾಗದೆ ಉಳಿವ ಬಗೆಯೆಂತು? ಇವಾವುದಕ್ಕೂ ಮಾರುಹೋಗದೆ, ನಿನ್ನ ಆಂತರಿಕ ಸೌಂದರ್ಯವನ್ನು, ಮಾಸದಿಂದ ಮಾಸಕ್ಕೆ ಬೆಳಗುತ್ತಿರುವ ನಿನಗಾಗಿ, ನಿನ್ನ ಅವಲೋಕನಕ್ಕಾಗಿ— ಮೂಲೆಮೂಲೆಯಲ್ಲಿ ಜನತೆ ಕಾದಿದೆಯೆಂಬ ಮಾತನ್ನೂ ಮರೆಯದಿರು. ಇಂದಿನ ಬಡತನಕ್ಕಾಗಿ ಕೊರಗಬೇಡ. ನಾಳೆಯನ್ನು ಕಂಡವರಿಲ್ಲ. ಎತವಿದರೂ ಕುಂಗೆಡದೆ ಇಷ್ಟು ದೂರ ಬಂದ ನೀನು, ನಿನ್ನೆದುರಲ್ಲೇ "ನಾಯಿಕೊಡೆಗಳಂತೆ ಉರುಳಿದ ಪತ್ರಿಕೆಗಳನ್ನೂ" ಕಂಡಿಲ್ಲವೇ? ಅವರಿ ನೀನೇಕೆ ಉರುಳಿಲ್ಲ; ಅಥವಾ ನಿನ್ನ ಬಳಗವೇಕೆ ಉರುಳಿಸಿಲ್ಲ! ಈ ಬಾರಿ ನೀನು ಸಾರಿದ 'ಸಂಪಾದಕೀಯ'ವೇ ನಿನ್ನೆದೆಗೆ ಸಮಾಧಾನವೀಯುವುದಿಲ್ಲವೇ? ವಿಷಪೂರಿತ ಮೊಲೆವಾಲನ್ನುಣ್ಣಿಸಿ ಚಿಣ್ಣ ಕಣ್ಣನನ್ನು ಕೊಲ್ಲಲು ಬಂದ ಪೂತನಾರಕ್ಕಸಿಯರು, ಆ ಸುಂದರ ವೇಷಧಾರಿಗಳು (ಅಂತರಂಗ ಶೂನ್ಯರು) ನಿನ್ನನ್ನು ಕಂಡಾದರೂ ನಾಚುವ ದಿನ ಇರಲಾರದೆಂದು ಭಾವಿಸುವೆಯಾ? ನೀತಿಪತನಕ್ಕಾಗಿ ಮುಂದಿಟ್ಟ ಯಾವ ವಸ್ತು ಸ್ಥಿರವಾಗಿ ಉಳಿದಿದೆ? "ಸುಖಂ ಹಿ ದುಃಖಾನ್ಯನುಭೂಯ ಶೋಭತೇ ಘನಾಂಧಕಾರೇಷ್ವಿವ ದೀಪದರ್ಶನಂ" ಎಂಬ ಮಾತು ನಿನಗೆ ಹೊಸತಲ್ಲ ತಾನೇ?

ಜಯಂತಿ,

ನಮ್ಮೊಂದು ಬಳಗದಲ್ಲಿ ನಿನಗಾಗಿ ಯಾವ ಸ್ಥಾನವಿದೆ ಬಲ್ಲೆಯಾ? ನನ್ನ ಕೈಗೆ ನೀನು ಬಂದೊಡನೆ ನಿನ್ನನ್ನು ಕರೆದೊಯ್ಯುವ ಮನೆಗಳೆಷ್ಟು ಬಲ್ಲೆಯಾ? ಅವರಿ ನಿನಗಾಗಿ—ನಿನ್ನ ಪೋಷಣೆಗಾಗಿ ಅವರಿನ್ನೂ ಮುಂದಾಗರು. ನೋಡೋಣ. ದಿನದುತ್ತೆ ದಿನವಿಲ್ಲ.

ಈಗ ನಾನು ಕಳುಹುವ ಧನರೂಪವಾದ ಈ ಅಲ್ಪ ಕಾಣಿಕೆಯನ್ನು ಬಡ-ಕನ್ನಡಿಗನೊಬ್ಬನ ಉತ್ತುಗೊರೆಯೆಂಬ ಪ್ರೀತಿಯಿಂದ ಕೈಕೊಳ್ಳುವೆಯಾ? ಹಾಗಾದರೆ ಧನ್ಯನಾವೆ. ಜಗದೀಶನು ನಿನ್ನನ್ನು ಸರ್ವರೀತಿಯಿಂದಲೂ ತುಂಬಲಿ! ಅದೇ ಆಸೆ! ಇತಿ

ಕೆ. ಎಸ್. ಎಸ್.
ಕಾಸರಗೋಡು"

೨ನೆಯ ಪತ್ರ

"ಜಯಂತಿ ಪತ್ರಿಕೆಯ ಸಂಪಾದಕ ಮಹಾಶಯರ ಸೇವೆಯಲ್ಲಿ–

ಸಪ್ರೇಮ ಹರಿಸ್ಮರಣ,

ತಮ್ಮ ಮುತ್ತು ಕನ್ನಡನಾಡಿನ ನಚ್ಚಿನ 'ಜಯಂತಿ' ಪತ್ರಿಕೆಯ ಬಗ್ಗೆ ನಾಲ್ಕು ಮಾತುಗಳನ್ನು ಬರೆದು ತಮಗೆ ಕಳುಹಬೇಕೆಂಬ ಕುತೂಹಲ ಕಳೆದ ವರ್ಷದಿಂದಲೂ ಇತ್ತು; ಆದರೆ ನನ್ನ ಒಕ್ಕಲುತನದ ಉದ್ಯೋಗದಲ್ಲಿ ಅಂಥ ಯೋಗವು ಕೂಡಿ ಬಾರದಾಗಿತ್ತು. ಆದರೆ ಇದೇ ತಿಂಗಳ (ಜುಲೈ) ಜಯಂತಿಯ 'ಸಂಪಾದಕೀಯ' ಲೇಖನವನ್ನು ಓದಿ, ಕನ್ನಡ ಕವಿಗಳ ವರ್ಗಕ್ಕೆ ಭೂಷಣರಾದ, ಶ್ರೇಷ್ಠ ಸಾಹಿತಿಗಳೂ ಆದ ತಮ್ಮ ವಿಷಯಕ್ಕೂ ತಮ್ಮ ಪತ್ರಿಕೆಯ ವಿಷಯಕ್ಕೂ ನನ್ನ ಅಲ್ಪ ಬುದ್ಧಿಗೆ ತೋಚಿದ ನಾಲ್ಕು ಶಬ್ದಗಳನ್ನು ತಮ್ಮ ಸೇವೆಯಲ್ಲಿ ಸಮರ್ಪಿಸಿರುವೆ. ಆದರೆ ಅವನ್ನು ತಾವು ಒಬ್ಬ ಒಕ್ಕಲಿಗನು, ಪ್ರೇಮದಿಂದ ಸಲ್ಲಿಸುವ ಪುರಸ್ಕಾರವೆಂದು ತಿಳಿದು ಸ್ವೀಕರಿಸಬಹುದು. ಪೇಡವಾದರೆ ಕಸಗೂಡಿಸುವ ಬುಟ್ಟಿಯೊಳಗೆ ಜೆಲ್ಲಿಬಿಡಬಹುದು. ಯಾಕೆಂದರೆ ಹಳ್ಳಿಯ ಶಾಲೆಯೊಂದರಲ್ಲಿ ಕನ್ನಡ ೪–೫ ಈಯತ್ತೆಗಳವರೆಗೆ ಕಲಿತ ನನ್ನಂಥ ವಿದ್ಯಾಹೀನರಿಗೆ, ವಿದ್ಯೆಯ ಅಧಿದೇವತೆಯಾದ ಶಾರದೆಯ ವರಪುತ್ರರೆಂದೆನಿಸುವ ತಮ್ಮನ್ನು ಹೊಗಳುವ ಭಾಗ್ಯವೆಲ್ಲಿಂದ ಬರಬೇಕು? ಅಸ್ತು.

ನಮ್ಮೂರ ಶಾಲೆಯ ಮಾಸ್ತರರ ಪುಣ್ಯದಿಂದ ೩–೪ ವರ್ಷಗಳಿಂದ ಜಯಂತಿ ಪತ್ರಿಕೆಯು ಇಲ್ಲಿ ಬರುತ್ತಿದ್ದು, ಅದನ್ನು ಕನ್ನಡ ಮಾಸಪತ್ರಿಕೆಗಳ ಮುಕುಟಮಣಿಯೆಂದು ಭಾವಿಸಿ, ಅತ್ಯಂತ ಪ್ರೇಮಾದರಗಳಿಂದ ಬಿಡದಲೇ ಓದುವುದು ನನ್ನ ಸಂಪ್ರದಾಯವಾಗಿದೆ. ಅದರಲ್ಲೂ ಸಂಪಾದಕೀಯ ಲೇಖನವೆಂದರೆ, ನನಗೊಂದು ಹಬ್ಬದೂಟ. ಅಂಥ ಪಡ್ತಸಯುಕ್ತ ಊಟವನ್ನು ಮೊದಲುಂಡೇ ವ್ಯಂಜನ ಪದಾರ್ಥಗಳೋಪಾದಿಯಲ್ಲಿ ಇನ್ನುಳಿದ ಲೇಖನಗಳನ್ನು ಓದಿ ಮನನ ಮಾಡಿಕೊಂಬುದು ನನ್ನ ಚಟವಾಗಿದೆ.

ಕಳೆದ ಒಂದೆರಡು ವರ್ಷಗಳಿಂದ, ಸಾಹಿತ್ಯಶಿರೋಮಣಿಗಳಾದ ತಮ್ಮ ವಿವಿಧ ಕಲಾಪೂರ್ಣ ಲೇಖನಿಯಿಂದ ಧಾರ್ಮಿಕ, ಸಾಮಾಜಿಕ, ರಾಜಕೀಯ ವಿಷಯಗಳ ಬಗ್ಗೆ ಅಖಂಡವಾಗಿ ಹರಿಯುತ್ತಿರುವ ಟೀಕೆ, ಟಿಪ್ಪಣಿಗಳು ಅತಿಶಯ ಮನೋವೇಧಕವಾಗಿರುವುದಲ್ಲದೆ, ಅಖಿಲ ಕನ್ನಡ ಸಮಾಜದ ವ್ಯಕ್ತಿ–ವ್ಯಕ್ತಿಗಳಲ್ಲಿಯೂ, ಗುರಿ ಮರೆತು ನಡೆಯುವ ರಾಜಕೀಯ ಮುಖಂಡರಲ್ಲಿಯೂ, ಜನತಾರಾಜನಾರ್ದನನ ಸೇವೆ ಗೈಯುವ ನೆಪ ಹಾಕಿಕೊಂಡು ತೆರೆಯ ಮರೆಯಲ್ಲಿ ಹೀನವಾದ ಸ್ವಾರ್ಥಸಾಧನೆ ಮಾಡಿಕೊಳ್ಳುವ ದೇಶಾಭಿಮಾನೀ ಗಾಂಧಿ ಟೊಪ್ಪಿಗೆಯವರಲ್ಲಿಯೂ ಕ್ರಾಂತಿ ಮಾಡಿ, ಅವರು ಮಾಡಿನ ಕೃತಕರ್ಮದ ಪ್ರಾಯಶ್ಚಿತ್ತತೆಗಾಗಿ ತಲೆ ಬಗ್ಗಿಸಿ ನಡೆಯಹಚ್ಚಿದೆ. ನಿಜವಾಗಿಯೂ ಆ ಭಾವನೆಯು ಅವರಲ್ಲಿ ಸ್ಥಿರಪಟ್ಟರೆ, ಸರ್ವತೋಪರಿ ರಾಷ್ಟ್ರದ ಏಳ್ಗೆಯಾಗುವುದಲ್ಲದೆ, ಮಹಾತ್ಮರ ಕನಸಿನ ರಾಮರಾಜ್ಯವು ನನಸಾಗುವಲ್ಲಿ ಸಂದೇಹವಿಲ್ಲ.

ನಾಡಿನ ಸಾಮಾಜಿಕ, ಧಾರ್ಮಿಕ, ರಾಜಕೀಯ ಕ್ಷೇತ್ರಗಳ ರೀತಿ-ನೀತಿಗಳಲ್ಲಿ ಅನೇಕಾನೇಕ ಸಾಂಕ್ರಾಮಿಕ ಬದಲಾವಣೆಯಾಗುತ್ತಿರುವ ಈ ಸಂಧಿಕಾಲದಲ್ಲಿ, ಭಾರತೀಯರ ಸಾಂಸ್ಕೃತಿಕ ಮಟ್ಟವನ್ನು ಅವನತಿಯತ್ತ ಹೋಗಗೊಡದೆ, ಪ್ರಗತಿಪಥದತ್ತ ಎಳೆದೊಯ್ವ ತಮ್ಮ ಪ್ರಗತಿಪರ ವಿಚಾರಪರಂಪರೆಗಳಿಂದ ಕೂಡಿದ ಲೇಖನಶೈಲಿಯು ಬಹಳೇ ಸರ್ವಾಂಗ ಪರಿಪೂರ್ಣವಾಗಿರುವುದಲ್ಲದೆ, ಶುದ್ಧ ಸಾಮಾಜಿಕ ಸಂಸ್ಕೃತಿಯ ಆಡಿಗಲ್ಲಾಗಿದೆ. ಇಂಥ ಅಡಿಗಲ್ಲಿನ ಆಧಾರದ ಮೇಲೆ, ಭಾರತದ ಪ್ರತಿಯೊಂದು ಭಾಷೆಯಲ್ಲಿಯೂ ಸಾಂಸ್ಕೃತಿಕ ಶಿಕ್ಷಣದ ವ್ಯವಸಾಯವನ್ನು ಮಾಡುವಂಥ ಪತ್ರಿಕೆಗಳೂ, ನಿಯತಕಾಲಿಕೆಗಳೂ ತಲೆಯೆತ್ತಬೇಕಾದುದು ಅವಶ್ಯವಾಗಿದೆ. ಪ್ರಪಂಚದ ಅಶ್ಲೀಲ ಚಲಚ್ಚಿತ್ರ ಪಟಗಳ ಮಹಾಪ್ರವಾಹದೊಳಗೆ, ನಾಡಿನ ಮೂಲೆ ಮೂಲೆಗಳೊಳಗಿನ ಬಾಲ–ಬಾಲಿಕೆಯರು, ಸಾಮಾನ್ಯರು, ವೃದ್ಧರು ಸಹೆ–ಅಮೃತವು ಅಡಗಿರುವುದೆಂದು ಅಂಧರಾಗಿ, ಪ್ರಜ್ಞಾಹೀನರಾಗಿ, ವಿಷಪೂರಿತ ಲೈಂಗಿಕ ವಿಚಾರಗಳ ರಸವನ್ನೇ ಸವಿಯುತ್ತಿದ್ದಾರೆ. ಈ ತರದ ಆಧ್ಯಾತ್ಮಹೀನ ಆಚರಣೆಯ ಫಲಸ್ವರೂಪವಾಗಿ ದೇಶದ ತುಂಬ ಅತಿವೃಷ್ಟಿ, ಅನಾವೃಷ್ಟಿ, ಭೂಕಂಪ, ಕಾಳ್ಗಿಚ್ಚಿನಂಥ ಬಿಸಿಲು ಮೊದಲಾದ ದೈವಿಕ ಆಪತ್ತಿಗಳು ಒಂದೊಂದಾಗಿ ಎಡೆಬಿಡದೆ ನಡೆದು, ನಿರ್ಗತಿಕ, ನಿರಾಶ್ರಿತರಾದ ಜನಗಳಿಂದ "ಭುಭುಕ್ಷಿತಃ ಕಿಂ ನ ಕರೋತಿ ಪಾಪಂ" ಎಂಬ ಸಂಸ್ಕೃತೋಕ್ತಿಯಂತೆ, ಅಲ್ಲಲ್ಲಿ ಅನ್ಯಾಯ, ಅನಾಚಾರ, ದರೋಡೆ, ಖೂನು ಮೊದಲಾದ ಅತ್ಯಾಚಾರಗಳು ಪಸರಿಸಿ, ಅಶಾಂತತೆಯು ತಾಂಡವವಾಡುತ್ತಿದೆ. ಶಾಂತಿ–ಸಮಾಧಾನಗಳನ್ನೆ ಆಶ್ರಯಿಸಿಕೊಂಡಿರುವ, ಬಾಳ್ವೆನಂತರ ಬಾಳು ಗೋಳಿನದಾಗಿದೆ.

ಸತ್ಯವಂತರಿಗಿದು ಕಾಲವಲ್ಲವೆಂಬ ದಾಸರ ಪದದಂತೆ, ಸತ್ಯವಂತರೂ ಸನ್ಮಾರ್ಗಗಾಮಿಗಳೂ ಸತ್ತುಹೋಗುವುದೇ ಲೇಸೆಂದು ಬಿಸಿ ಉಸುರ್ಗರೆಯುತ್ತಲಿದ್ದಾರೆ. ಈ ತೆರ ವಿಧವಿಧದ ಬಿಡಿಸಲಾಗದ ಸಮಸ್ಯೆಗಳೆಷ್ಟೋ ವಿಚಾರವಂತರ ತಲೆಯಲ್ಲಿ ಇಣುಕಿ ಭಾರತದ ಭವಿಷ್ಯತ್ತಿನ ಜಟಿಲಸಮಸ್ಯೆಗಳ ಬಗೆಗೆ ಕಳವಳಪಡಹತ್ತಿದ್ದಾರೆ. ಅಲ್ಲದೆ ಮುಂಗಾಣಿಸುವ ಸಮಸ್ಯೆಗಳ ಪರಿಹಾರಕ್ಕೆ ತರುಣೋಪಾಯವಿದೆಯೇ?— ಎಂಬ ಪ್ರಶ್ನೆ ಧುತ್ತೆಂದು ನಿಲ್ಲುತ್ತದೆ. ಈ ಪ್ರಶ್ನೆಗೆ ಉತ್ತರರೂಪವಾಗಿ ಅವಶ್ಯವಾಗಿ ತರುಣೋಪಾಯವಿದೆ— ಎಂದು ನಾನು ಹೇಳಬಲ್ಲೆ.

ಅದಕ್ಕೆ ನಿಜವಾದ ಉತ್ತರವೇನೆಂದು ನೀವೂ ಕೇಳಬಹುದು, ಕದಾಚಿತ್ ತಾವು ಕೇಳಿದರೆ ಅದಕ್ಕೆ ನಾನು ಉತ್ತರವಾಗಿ—

"ನಮ್ಮ ನಾಡಿನ ವಾಚನಾಭಿರುಚಿಯ ಮಟ್ಟ" ಎಂಬ ತಮ್ಮ ಸಂಪಾದಕೀಯ ಲೇಖನವನ್ನೇ ಸಮರ್ಪಿಸಿ, ಜಯಂತಿಯ ಸಕಲ ವಾಚಕ ವರ್ಗಕ್ಕೂ ದೇವರು ಸದ್ಬುದ್ಧಿಯನ್ನು ದಯಪಾಲಿಸಿ ಇಂಥ ರಹಸ್ಯಪೂರ್ಣ ಲೇಖನಗಳನ್ನು ಓದಿ ಅವನ್ನು ಜೀರ್ಣಿಸಿಕೊಳ್ಳುವ ಶಕ್ತಿಯನ್ನು ಕೊಡಲೆಂದು ಪರಮಾತ್ಮನನ್ನು ಪ್ರಾರ್ಥಿಸಿ, ನನ್ನ ಪೆನ್ನಿಗೆ ರಜೆ ಕೊಡುವೆ.

ಕೆ. ಬಿ. ಚಿಟಿಣೀಸ

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ '**ಕಾಲ್ತೊಡರಿದ ಬಳ್ಳಿ**' ಎಂಬ ಕತೆಯನ್ನು ವಿಮರ್ಶಿಸಿ ಎಂಟು ಜನರಿಂದ ಲೇಖನಗಳು ಬಂದಿವೆ. ಆ ಎಂಟು ಜನರ ವಿವರ ಹೀಗಿದೆ:

೧ 'ಶ್ರೀ. ಸೆ. ಕಾ.' ಧಾರವಾಡ. ೨ ವಿದ್ವಾನ್ ಕೆ. ಶ್ರೀನಿವಾಸ ಶರ್ಮಾ, ಕಾಸರಗೋಡು. ೩ ಶ್ರೀ ಎಸ್. ಎಸ್. ಪುರುಷನ್, ಡಾಣಾಗೆರೆ. ೪ ಶ್ರೀ. ಬಿ. ಎ. ಗಾಡಗೀಳ, ಇಂಜನಿಯರಿಂಗ್ ಕಾಲೇಜ್, ಪುಣೆ. ೫ ಶ್ರೀ. ಜಯಂತ ಸುರತಕಲ್ಲು. ೬ ಶ್ರೀ. ಎಚ್. ಎನ್. ದೇವನಾಂಡೆ ಬಿ. ಎ. (ಆನರ್ಸ್). ಗವರ್ನ್‌ಮೆಂಟ್ ಲಾ ಕಾಲೇಜ್, ಮುಂಬಯಿ. ೭ ಶ್ರೀ. **ಎಂ. ಆರ್.** ನರಸಿಂಹಯ್ಯ. ಸ್ವಾನ್ಸನೇಟೆ (ಕೊಡಗು). ೮ ಶ್ರೀ. ಎಲ್. ವಿ. ಜೋಶಿ ಬಿ. ಎ., ಇಡಿ. **ಕೂಡಲಗಿ** (ಬಳ್ಳಾರಿ)

ಎಲ್ಲ ವಿಮರ್ಶೆಗಳನ್ನೂ ಸಂಪಾದಕ ಮಂಡಲಿಯೇ ಓದಿ ನಿರ್ಣಯ ಕೊಟ್ಟಿತು. **ವಿದ್ವಾನ್ ಕೆ. ಶ್ರೀನಿವಾಸ ಶರ್ಮಾ** ಅವರ ವಿಮರ್ಶೆ ಅತ್ಯುತ್ತಮ. ಶ್ರೀ. ಎಲ್. ವಿ. ಜೋಶಿಯವರ ವಿಮರ್ಶೆ ಉತ್ತಮವಾಗಿದೆಯಾದರೂ ತುಂಬ ದೀರ್ಘವಾಗಿದೆ. ಶ್ರೀ. ಎಚ್. ಎನ್. ದೇವನಾಂಡೆ ಮತ್ತು ಶ್ರೀ. ಬಿ. ಎ. ಗಾಡಗೀಳ ಅವರವೂ ಒಳ್ಳೆಯ ವಿಮರ್ಶೆಗಳು. ಮಿಕ್ಕುವೆಲ್ಲ ಸಾಮಾನ್ಯವಾಗಿವೆ.

ಒಬ್ಬಿಬ್ಬರು ವಿಮರ್ಶಕರು ಕತೆಗಾರರು ಸಮಾಜಸುಧಾರಣೆಯ ಪ್ರಚಾರೋದ್ದೇಶದಿಂದ ಕತೆಯನ್ನು ಬರೆದಿದ್ದಾರೆಂದು ಭಾವಿಸಿ, ಅವರನ್ನು ಟೀಕಿಸಿದ್ದಾರೆನ್ನೇ ಬಲ್ಲು. ಇಂತಹ ಕತೆಯನ್ನು ಸ್ವೀಕರಿಸಿದುದಕ್ಕಾಗಿ ಜಯಂತಿಯ ಸಂಪಾದಕರನ್ನೂ ಆಕ್ಷೇಪಿಸಿದ್ದಾರೆ. ಅವರ ಅವರ ಭಾವನೆ ತಪ್ಪೆಂದು ಸರಿಯಾದುದಲ್ಲ. ಕತೆಗಾರರು ಸಮಸ್ಯೆಯೊಂದರ ಚಿತ್ರಣವನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಪಾತ್ರವಾಗಿ ಚಿತ್ರಿಸಿದ್ದಾರೆ ಹೊರತು, **ಯಾವುದನ್ನೂ** ಪ್ರಚಾರ ಮಾಡಬೇಕೆಂಬ ಉದ್ದೇಶಕ್ಕೆ ಅವರು ಪ್ರಾಧಾನ್ಯಕೊಟ್ಟಿಲ್ಲ.

ಮುಂದಿನ ತಿಂಗಳ ವಿಮರ್ಶೆಯ **ಮೇಲಾಟಕ್ಕಾಗಿ, ಈ** ಸಂಚಿಕೆಯಲ್ಲಿ ಪ್ರಕಟವಾದ '**ಕಲಂಕ**' ಎಂಬ ಕತೆಯನ್ನು ತೆಗೆದುಕೊಳ್ಳಬೇಕು.

—**ಸಂಪಾದಕರು**

ಕಾಲ್ತೊಡರಿದ ಬಳ್ಳಿ

(ವಿಮರ್ಶೆ)

ವಿ. ಕೆ. ಎಸ್. ಶರ್ಮಾ ವಿದ್ವಾನ್ ಕಾಸರಗೋಡು ದ. ಕ.

ವ್ಯಕ್ತಿಯ ಜೀವನ-ಭಾವನೆಗಳ ಬೆನ್ನು ಹತ್ತಿ ಹೊರಟಾಗ, ಆ ಭಾವನೆಯು ಜೀವಿತದ ದುರ್ಗಕ್ಕೆ ಎರವಾಗಿ ಧರ್ಮಸಂಕಟದ ತಾತ್ಕಾಲಾಟವನ್ನೆಬ್ಬಿಸಿದಾಗ, "ಒಪಲೆರಜು, ಅನುಮೊಂದೆನೆ" ಎಂಬ ಹೊಂದಿದ ಗೆಳೆಯನ ಕೊನೆಯುಸಿರಿನ ಕೇಳಿಕೆಗೆ ತಲೆಣಾಗಿ, ಸಮಾಜದ ಮುಂದೆ, ಸಮಾಜಕ್ಕೆದುರಾಗಿ "ವಿಧವೆ ರತ್ನ "ನ ಬ್ಯಾಳನ್ನು ಬೆಳಗಿದ ತ್ಯಾಗ ಕೃಷ್ಣನ ಬೀಜದ ಕಥೆಯೇ ' ಕಾಲ್ತೊಡರಿದ ಬಳ್ಳಿ."

ಇದೊಂದು ಮುಂದಾ ಸಂಸ್ಕೃತಿಯಾದ ಚಿತ್ರಣ. ಒಂದು ಸಂಸಾರದ ಪುನರ್ಜಾರ್ ಚಿತ್ರಣವನ್ನು ಒಳಗೊಂಡ ಈ ಕತೆಯು, ತನ್ನದೇ ಆದ ಒಂದು ಪ್ರಜ್ಞೋದಕ ಸನ್ನಿವೇಶ ಹಾಗೂ ಇತಿವೃತ್ತದಿಂದ ಕಳೆಗೊಂಡಿದೆಯೆಂದು ತುಂಬುಮನಸ್ಸಿನಿಂದ ಹೇಳಬಹುದು.

ಕಾಲೇಜಿನಲ್ಲಿ ಎರಕ ಹೊಂದಿದ ಗೆಳೆಯರಿಬ್ಬರ ಹೃದಯಗಳು, ಕಾಲೇಜುಜೀವನದ ಬಳಿಕವೂ ಒಂದೇ ಹಾದಿಯಲ್ಲಿ ಜತೆಗೊಂಡು ಸಾಗಿದುವು. ಆ ಜೀವನದಲ್ಲಿ-ಅವರು ಆರಿಸಿದ ಆ ಉಪಾಧ್ಯಾಯ ಜೀವಿತದಲ್ಲಿ-ವಿದ್ಯಾರ್ಥಿನಿಯಾಗಿ ಬಂದ ರತ್ನಳು, ತನ್ನ ಆದರ್ಶ ಸರಣಿಯಿಂದ ಅವರ ಹೃದಯಕ್ಕೆ ಆಂತರ್ವಾಣಿಯಾಗಿ **ಕಳೆ** ಬೀರಿದಳು. ಆ ಪಾಣಿಯು ಉದ್ಬುದ್ಧವಾಗಿ ಪಲ್ಲವಿಸಿದಾಗ ರತ್ನಳು "**ಕೃಷ್ಣ**"ನೆಂಬ ಪತಿಯ ಗೆಳೆಯನ ಕೈಹಿಡಿವ ಭಾಗ್ಯವನ್ನು ಪಡೆದಳು. ಆ ಭಾಗ್ಯವನ್ನು ತನ್ನ ಗೆಳೆಯನಿಗೆ ಸಮೆದುಕೊಟ್ಟು, ನಿಷ್ಕಲ್ಮಷ ಮನೋವೃತ್ತಿಯ ಸುಚರಿತ್ರ ತರುಣನೇ ಕೃಷ್ಣ. ಆದರೇನು? ವಿಧಿಯು ಸ್ವಲ್ಪ ದಿನಗಳಲ್ಲೇ ಕಾಕದೃಷ್ಟಿಯಾಗಿ ಬಂದೆ, ಆ ಸುಂದರಸ್ವರ್ಗದ ಸೋಪಾನವನ್ನೆ ಕೆಡವಿ, ರತ್ನಳ ಕುಂಕುಮಭಾಗ್ಯವನ್ನು ಅಳಿಸಿತು. ರತ್ನಳ **ಹುಟ್ಟು-ಜೀವಕ**ವನ್ನು ಬಯಸಿ, ಆಕೆಯನ್ನು ಬೆಳಗಬಯಸಿದ್ದ **ಆಕೆಯ ಪತಿಯು**-

ಕೃಷ್ಣನ ಗೆಳೆಯನು–ತನ್ನ ಮರಣದ ದುರಂತ ಸನ್ನಿವೇಶದಲ್ಲಿ ಹೃದಯ ವ್ಯಾಪಕ ಭಾವಸ್ರಜೋದಕ ಅನುಭಾವದಿಂದ, ತನ್ನ ರತ್ನಳನ್ನು–ತನ್ನ ಗೆಳೆಯನಿಗಾಗಿ ಧಾರೆಯೆರೆಯುವನು. ಕೃಷ್ಣನು ತನ್ನ ಮುಂದಿರುವ ಸಮಾಜವನ್ನು ಅಲ್ಲಗಳೆಯಲು ಬೆದರಿದರೂ, ಗೆಳೆತನದ ಪರಾಕಾಷ್ಟತೆಯನ್ನು ಮುಟ್ಟಿದ ಆ ದೇಗುಲದಲ್ಲಿ 'ಶಶಿಧರ'ನ ಜೀವಿತಾಧಾರವಾದ ರತ್ನಳ ಅನಾಥ ಜೀವಿತದಲ್ಲಿ' ಮರುಕಹೊಂದಿ, ವಿಧವೆ ರತ್ನಳನ್ನು ಕೈ ಹಿಡಿದು, ಪುನಃ ಆ ಜೀವಿತದಲ್ಲಿ ಜ್ಯೋತಿಯನ್ನು ತುಂಬುವನು. ರತ್ನ ಇಂತಹ ಆದರ್ಶಸತಿಯ ಸೇರಿಕೆಯಲ್ಲಿ–ಗೆಳೆಯನ ನಿರ್ಧಾರವ ಕೊನೆಯುಸಿರಿನಲ್ಲಿ–ಸಮಾಜದ ಅವಹೇಳನೆಯನ್ನು ಮರೆತು " ಕಾಲ್ತೊಡರಿದ ಬಳ್ಳಿ " ಯಲ್ಲೂ ಪರಿಪ್ರೂತ ಕುಸುಮಗಂಧವನ್ನು ಸವಿದು ಸುಖಿಸುವನು. " ಇದು ಈ ಕಥೆಯ ಸಾರ.

ಈ ಚಿತ್ರವು ಇಂದಿನ ಸಮಾಜದಲ್ಲೊಂದು ನೂತನವಾದ ಕ್ರಾಂತಿಯಲ್ಲವಾಗಿದ್ದರೂ, ಇದರಲ್ಲಡಕವಾದ ಘಟನೆಗಳೂ, ಸನ್ನಿವೇಶಗಳೂ ಮಾರ್ಮಿಕವಾಗಿವೆಯೆನ್ನುವುದು ಖಂಡಿತದ ಮಾತು. ಆದುದರಿಂದಲೇ ಇದರಲ್ಲೊಂದು ವೈಶಿಷ್ಟ್ಯವಿದೆ; ಕಲಾಕುಶಲತೆಯಿದೆ. ನವ್ಯವಾದ ಕತೆಗಾರಿಕೆಯು ಕಾಲ್ತೊಡರಿದ ಬಳ್ಳಿಯನ್ನು ಅರಳಿಸಿದೆ. ಮಾಧುರ್ಯವಿದೆ. ಸಾಮಾಜಿಕ ನಿಯಮಗಳಿಗೆ ವಿರೋಧವಾದ ಭಗೆಯಿಂದ, ವ್ಯಕ್ತಿಯ ಜೀವನವು ಗುರಿಯಿಲ್ಲದ, ದುರಾಲೋಚನೆಯಿಲ್ಲದ ಮಾರ್ಗದಲ್ಲಿ ಅಡಿಯಿಟ್ಟಿದ್ದರೆ, ನಾವು ಈ ಸಂದರ್ಭದಲ್ಲಿ ಕೃಷ್ಣನನ್ನು ಕಡೆಗಣಿಸುತ್ತಿದ್ದೆವೋ ಏನೋ? ಆದರೆ ಇಲ್ಲಿ ಕಾಣುವ ಕೃಷ್ಣನು ತುಂಬೆಯ ಸ್ವಾಗತಕ್ಕೆ ಅರ್ಹನು. ನಿಮಿತ್ತ ಸಮ್ಮಪೇಕ್ಷೆಯಲ್ಲದ ಆದರ್ಶ ಮಿತ್ರತ್ವದ ಧಾರೆಯಲ್ಲಿ ತನ್ನ ಜೀವನವನ್ನು ಸಾಗಕೊಟ್ಟ ಧೀರಸಾಹಸಿ. ರತ್ನಳಿಗಾಗಿ ಅಕೆಯ ರತ್ನನಾದವ. ಆದುದರಿಂದಲೆ ಈ ಕತೆ " ಕಾಲಿಗೆ ತೊಡರಿದ ಬಳ್ಳಿಯಲ್ಲ. ಕಾಲೇ ತೊಡರಿದ ಬಳ್ಳಿ " ನೊಡಲನೆಯದರಲ್ಲಿ ಪಶ್ಚಾತ್ತಾಪಕ್ಕೆಡೆಯಿದೆ; ಎರಡನೆಯದರಲ್ಲಿ ಅತುಲ ತ್ಯಾಗದ ಲಕ್ಷಣವಿದೆ. ಹಿರಿಮೆಯಿದೆ.

ಈ ಚಿತ್ರದಲ್ಲಿ ಕಾಣಬರುವ ಪೂರ್ಣಜೀವಿಗಳು ನಾಲ್ವರು. ಗುಂಡ; ಕೃಷ್ಣನ ಗೆಳೆಯ; ಕೃಷ್ಣ; ಆದರ್ಶ ಸತಿ ರತ್ನ. ಉಳಿದುವೆಲ್ಲಾ–ಕಥಾಪ್ರೋಪಣೆಯಲ್ಲಿ ಪ್ರಾಸಂಗಿಕವಾಗಿ ಜತೆಸೇರಿಸುವುಗಳು. ಕೃಷ್ಣನ ಮನೆಗೆ ಅನಿರೀಕ್ಷಿತವಾಗಿ ಬಂದ ಗುಂಡನಿಗೆ ತನ್ನ ಜೀವಿತದ ಇತಿಹಾಸವನ್ನು ಹೇಳುವ ಒಂದು ನೂತನ ಸಂವಿಧಾನದಲ್ಲಿ ಈ ಚಿತ್ರವು ರಂಜಿತವಾಗಿದೆ. ಕೃಷ್ಣನ ಮಾತುಗಳಿಂದ, ಮಾತುಗಳಲ್ಲಡಕವಾದ ಚಿತ್ರದಿಂದ–ಆತನ ಗೆಳೆಯನ ಚಿತ್ರವು ರೂಪಿತವಾಗಿದೆ. ರತ್ನಳ ಜೀವಿತದ ಮೊದಲ ತೆರೆಯು, ಕೃಷ್ಣನು ಗುಂಡನಿಗೆ ಹೇಳುವ ಕತೆಯಿಂದಲೇ ಸರಿದುನಿಲ್ಲುವುದು. ಲೇಖಕರು ಕಥಾರಂಭದಲ್ಲೂ, ಕಥಾಮಧ್ಯದಲ್ಲೂ ಕೊನೆಯಲ್ಲೂ ರತ್ನಳ ಚಾರಿತ್ರ್ಯವನ್ನೂ ಸ್ತ್ರೀಹೃದಯದ ಸಹಜ ಚಿತ್ರವನ್ನೂ ರೂಪಿಸಿರುವರು. ಇಂತೂ ಹಾಸ್ಯರಸದ ವ್ಯಧುಸ್ಪಂದನದಿಂದ ಹೊರಟು ಈ ಕಥಾಮುಖವು, ಹೃದಯವಿದಾರಕವಾದ ಕರುಣರಸದ ಪ್ರವಾಹದಲ್ಲಿ ತೇಲಾಡಿಸಿ, ವಾಚಕನ ಹೃದಯವನ್ನು ಅವುದೋ ಒಂದು ಅಂತರಿಕ ವೇದನೆಯಿಂದ ಅದುಮಿ ಹಿಡಿಯುವುದು. ಆ ನೋವಿನ ಮುಂದೆ ಎಂತಹ ಕಲ್ಲೆದೆಯೂ ಕರಗಬೇಕು. ಆದರೆ ಅದೇಕೋ, ಸುಧಾರಕಪುಂಗಡವೂ ಶುಷ್ಕವಾಗಿ ನಿಂತಿರುವ ಸಮಾಜದ ನಿಯಮದ ಮುಂದೆ ಸ್ತಬ್ಧವಾಗಿದೆ.

ಗುಂಡ— ಇವನು ಕೃಷ್ಣನ ಗೆಳೆಯ. ಗೋಪಿಯ ಮನೆಯ ಮದುವೆಗಾಗಿ ಬಂದು, ಕೃಷ್ಣನ ಮನೆಗೂ ಕಾಲಿರಿಸಿದನು. ರಸಿಕ ವಿನೋದಪ್ರಿಯ. ಕಥಾರಂಭದಲ್ಲಿ ಉದ್ವೇಗ ಪೂರ್ವಕವಾಗಿಯೇ ಲೇಖಕರು ಗುಂಡನನ್ನು ತಂದಿದ್ದಾರೆ. ಕೃಷ್ಣ–ರತ್ನರ ಎರಕದ ಜೋಡಿಯನ್ನು ಮೆಚ್ಚಿ ಹರಟೆಗಿಳಿಯುತ್ತಾನೆ. ಕೃಷ್ಣನು ತನ್ನ ಜಾತಿಯ ಪ್ರಶ್ನೆಯನ್ನೆತ್ತಿ ಎಚ್ಚರಿಸಿದಾಗ, ಸಲವತ್ತೆರಡನೆಯ ಇಸವಿಯ ತನ್ನ ಅನುಭವವನ್ನೆತ್ತಿ, ಜಾತಿ-ನೀತಿಯ ವಿಚಾರವನ್ನು ಹರಿದೊಗಿದವನೆಂಬ ಧೈರ್ಯದಿಂದ ಕಾಫಿ ಗಿಟ್ಟಿಸಿದವನು. ಕೃಷ್ಣನು ಮಾಡಿದ ಕೃತ್ಯವನ್ನು ಕೇಳಿದಾಗ ಹರಸಿ-ಅನಂದಿಸಿ " ಆದರ್ಶ ಬೋಧಿಸಿದರೆ ಕೇಳುವುದಕ್ಕೆ, ಅನುಸರಿಸಿದರೆ ಮೆಚ್ಚುವುದಕ್ಕೆ ಜೆನ್ನು " ಎಂದಂದು ಭಾಷಣ ಮಾಡಿ, ಕೊನೆಗೆ " ಶಶಿಧರನಿಗೆ ನಿನ್ನ ಮಗಳನ್ನು ಕೊಡುತ್ತಿಯೇನೋ " ಎಂದಂದಾಗ ಪೆಚ್ಚಾಗಿ, ತಾನಾಡಿದ ಮಾತನ್ನೇ ತನ್ನ ಕೆನ್ನೆಗೆ ಹೊಡಿಸಿಕೊಂಡು ಮನೆಯಿಂದ ಹೊರಬಿದ್ದ ವ್ಯಕ್ತಿ. ಗುಂಡನಂತಹ ಸುಧಾರಕ ವರ್ಗವೇ ಇಂದು ಕಾಣಬರುತ್ತಿರುವುದಲ್ಲದೆ, ಕಾರ್ಯೋನ್ಮುಖವಾಗುವ ವರ್ಗವಿಲ್ಲ– ಎಂಬುದನ್ನು ಈ ಚಿತ್ರದಿಂದ ಸರಿಯಾಗಿ ಕಾಣಬಹುದು. ಅಂತೂ ಈ ಭಾಗದಲ್ಲಿ ಕಾಣಬರುವ ಹಾಸ್ಯರಸದ ಕೆಲವೊಂದು ಕಿಡಿಗಳು, ವೇದನಾಭರಿತವಾದ ಕಥಾಭಾಗಕ್ಕೆ ಕಳೆಬೀರಿವೆಯೆಂಬುದು ಖಂಡಿತ.

ಕೃಷ್ಣ— ಆದರ್ಶ ಮಿತ್ರ. ತನ್ನ ಗೆಳೆಯನಿಗಾಗಿ ರತ್ನಳಂತಹ ಆದರ್ಶ ತರುಣಿಯನ್ನು ವಿವಾಹವಾಗಿಸಿ, ಆ ದಂಪತಿಗಳಿಂದ ತನ್ನ ಮನೆಯನ್ನು ರತ್ನಳ ಒಪ್ಪ-ಓರಣದಿಂದ ತುಂಬಿ ಬಂದ ಸುಂದರ ದೃಶ್ಯವನ್ನು ಕಂಡು ಅನುಭವಿಸಿದ ಆದರ್ಶ ತರುಣ. ಅಂತಃಕರಣವ ಸೂತ್ರದಲ್ಲಿ ತನ್ನ ಗೆಳೆಯನ ಹಾಗೂ ರತ್ನಳ ಜೀವಿತವನ್ನು ನಿಸ್ತಲ್ಯಿಕ ಭಾವದಿಂದ ಕೋದು ಆನಂದಿಸಿದ ಭಾವಜೀವಿ. ಆದರೇನು? ವಿಧಿಯು ಗೆಳೆಯನನ್ನು ಬಲಿ ತೆಗೆದಾಗ, ಆ ನೋವನ್ನು ತಡೆಯಲಾರದೆ, ಉತ್ಕಟವಾದ ವೇದನೆಯಿಂದ ನೊಂದನು. ರತ್ನಳ ಜೀವಿತವನ್ನು ಬೆಳಗಬೇಕೆಂಬ ಭಾವನೆಯಿಂದ ರತ್ನಳ ಕೈ ಹಿಡಿದ ನೆಚ್ಚಿನ ಗೆಳೆಯನ ವಿಧಿಯು ಮಾಟಕ್ಕೆ ಬಲಿಯಾದಾಗ– ಅದೇ ಭಾವದ ಮಾತುಗಳನ್ನು ಗೆಳೆಯನಾಡಿದಾಗ, ಅಸಹ್ಯ ವೇದನೆಯಿಂದ ತೊಳಲಾಡಿದನು. ಗೆಳೆಯನ ಕೊನೆಯುಸಿರು " ರತ್ನಳನ್ನು ನೀನು ಮದುವೆಯಾಗು " ಎಂದಂದಾಗ, ದಿಙ್ಮೂಢನಾಗಿ ನಿಂತನು. ಗೆಳೆಯನು ಅಸ್ತಮಿಸಿದನು. ಆತನ ಮಾತನ್ನು ಮಾತ್ರ ವೆಯಲಾಗಲಿಲ್ಲ. ಸಮಾಜದ ಮುಂದೆ ಕೃಷ್ಣನು ತಿಲಿಸಾಗಿ ರತ್ನಳನ್ನು ವಾಲೆಗೆ ಕಳುಹುವನು. ಆದರೆ ಶಾಂತಿಯಿಲ್ಲ. ಗೆಳೆಯನ ಕೊನೆಯುಸಿರಿನ ನಿರ್ಧಾರಕ್ಕೆ ಒಳಗಾಗಿ ರತ್ನಳನ್ನು ಗೆಳೆಯನಿಗಾಗಿ, ಶಶಿಧರನಿಗಾಗಿ ಪುನರ್ಮದುವೆಯಾಗುವನು. ಸಮಾಜದ ಅವಹೇಳನೆಗೆ ಗುರಿಯಾದರೂ, ರತ್ನಳ ಸ್ಥೈರ್ಯದ ಮುಂದೆ ಜೀವಿತ.

ದಲ್ಲಿ ರತ್ನನನ್ನು ಕಂಡು ಗೆಳೆಯನ ಶಾಂತಿಗಾಗಿ ರತ್ನಳನ್ನು ಬೆಳಗಿನೆನು. ಕೃಷ್ಣನ ಪಾತ್ರವನ್ನಲ್ಲಿ ಲೇಖಕನು ಒಬ್ಬ ಆದರ್ಶವಾದಿಯ ಕಳೆಯನ್ನು ತುಂಬಿದ್ದಾನೆ. ಕೃಷ್ಣನು ಮಿತ್ರತ್ವಕ್ಕಾಗಿ ಪತಿತನನ್ನು ಧನವೆಯೆನು ರತ್ನಳಂತಹ ಅನಾಥಳನ್ನು ಉನ್ನತಿಸಿದ ಧೀಗ್ಯಗಳಿರಿಕಕ್ಕೂ ಪಾತ್ರನಾಗುತ್ತಾನೆ.

ನುಂದೆ ಕೃಷ್ಣನ ಗೆಳೆಯ. ವಿಶಾಲಭಾವನೆಯ ಹೃದಯದ ರತ್ನಳಂತಹ ಹೆಣ್ಣನ್ನು ಜೀವನಚರಿತೆಯಲ್ಲಿ ಪಾಲಿಸಬೇಕೆಂಬ ನಿರ್ಧಾರ ವೆಲ್ಲೀ ಮುಮನೆಯವನಲ್ಲಿ, ಜೀವನ ಧನವೆಯೂ ಇಲ್ಲ. ಆದುದ ರಿಂದಲೇ ತಾನು ಕಾರ್ಯರಂಗದ ಕತಿತೆಕ್ಕೆ ಬಲಿಪಶುವಾಗಿ ಬಿದ್ದು, ಜೀವಪ್ರ ವೇದನೆಯಿಂದ ಪರಿತಪಿಸಿ, ಮರಣೋನ್ಮುಖನಾಗಿ "ರತ್ನಳನ್ನು ಸುಖವಾಗಿಡುವ ಒಂದೇ ಹೆಂಬಲಡಿದ ಚಲ್ಲನೆ ನಾನಾಗಿ ನುಮನೆ ಯಾದನ್ನು? ನಮ್ಮ ಬುದ್ಧೀರಮುಮಗಿಯ ಕುತ್ತಿಗೆ ಕೊಯ್ಯುವನಿತ್ತೀ ಕೃಷ್ಣ?" ಎಂದಂದು ಕೃಷ್ಣನಿಂದ ಧಾಪೆ ಪಡೆದು ತನ್ನ ನೆಚ್ಚಿನ ಪತಿ ರತ್ನಳನ್ನು ಸುಖವಾಗಿಡಲು, ತನ್ನ ಜೀವಿತದ ಪ್ರತಿಮೂರ್ತಿಯೇ ಆಗಿರುವ ಕೃಷ್ಣನಿಗೊಪ್ಪಿಸುತ್ತಾನೆ. ಕೃಷ್ಣನ ನುಂದೆಯೂ 'ಗೆಳೆಯ'ನು ಹುಟಿಸಿದ ಈ ಹೃದಯಸ್ಪಂದನಗಳು—ಈ ಮಾತುಗಳು ಆದರ್ಶವಾದಿಯ, ವಿಶಾಲಹೃದಯದಿಂದ ಹೃದಯದಿಂದ ಬಂತಕ್ಕವುಗಳು. ಎಂತಹ ಮನವೂ ತಿಳಿದು ಸ್ಪಂಧೀಭೂತವಾಗಿ ಕರಗಿ ಶೀತಾಗಬೇಕು. "ರತ್ನ, ನಿಮ್ಮ ದಾಂಪತ್ಯವಲ್ಲಿ ನನ್ನ ಆಕ್ಷವಿದೆ, ನಿನ್ನ ಪ್ರಾಣ, ಆಶೆ ಎಲ್ಲಾ ನೆಲೆಗೊಳ್ಳಿತ್ತಿದೆ." ಎಂದೆನ್ನಬೇಕಾದರೆ, ಆ ಆಕ್ಷವಿರುವ ಜೀವಿಯ ಮುಂದೆ ನಾವು ಬಾಗಬೇಕು. ಅಪೂರ್ವವಾದ ಬಗೆಯಲ್ಲಿ, ವಾಸ್ತವ ವಿರೋಧವಲ್ಲದ ಬಗೆಯಲ್ಲಿ ಚಿತ್ರಿಸಿದ ಈ ಪಾತ್ರದಲ್ಲಿ ನಾವು ಪೆರಗಾಗ. ಬೇಕು. ಗೆಳೆಯನಿಬ್ಬರ ಪೂರ್ಣಚಿತ್ರಣಕ್ಕೆ ಈ ಮರಣಘಟ್ಟವು ಒಂದು ಆದರ್ಶ

ರತ್ನ ಬಾಲ್ಯದಲ್ಲಿಯೇ ವಿದ್ಯೆಯಲ್ಲೂ ನಡತೆಯಲ್ಲೂ ರತ್ನಳೆನಿಸಿ. ಯೋಗ್ಯ ಪತಿಯನ್ನೊಲಿಸಿಕೊಂಡವಳು. ಅದೃಷ್ಟಜೀನೆ. ಸಂತತಿ. ಯನ್ನು ಧರಿಸಿದಳಾದರೂ ಸ್ತ್ರೀಸಹಜವಾದ ಆಕೆ ಕುಡಿಯಿಡುವ ಪುತ್ರ ಮುಖವನ್ನು ಪತಿಗೆ ಕಾಣಿಸಲಾಗದ ದೌರ್ಭಾಗ್ಯದಂದ ಬೆಂದವಳು. ಮರಣೋನ್ಮುಖನಾದ ಪತಿಯ ಜೀವನವನ್ನು ಪಾಲಿಸಲು ಬದ್ಧಕಂಕಣ ಳಾಗಿ, ಪತಿಯ ಶಾಂತಿಗಾಗಿ, ಶಶಿಧರನ ಜೀವಿತಕ್ಕಾಗಿ, ಹೃದಯಾಂ. ತರಾಳದಲ್ಲಿ ಭರ್ತೃಶೋಕವನ್ನು ಅದುಮಿಟ್ಟು, ಪತಿವಾಯಣೆಯಾಗಿ "ಕೃಷ್ಣನ" ಕೈ ಹಿಡಿದ ಸತೀಮಣಿ. ಆಕೆ ಕಾಮುಕಳೆಯಲ್ಲ; ಪತಿನಿಷ್ಠೆ. ತನ್ನ ನಡೆ-ನುಡಿ-ಸಂಸ್ಕೃತಿಗಳು ಕಾಮುಕಳೆಯಿಂಗಳಾಗದಂತೆ ಕಾಪಾ. ಡಿದ, ತನ್ನ ಪತಿಯ ಉಂತಿಮವಾದ ಆಸೆಯನ್ನು ನೆರವೇರಿಸಿದ ಕೃಷ್ಣನು ಸಮಾಜದ ಉನಪಕ್ಷೇಪನೆಗಾಗಿ ಬೆಂದಾಗ—ಆ ಬಿರಿಯನ್ನು ತಣ್ಣಿಸಿ. ಆತನನ್ನು ಬೆಳಗಿದ ನಾರೀಮಣಿ. "ಹೊಪಲಿನಿಂದ ಆಚೆ ಸೀಮೆಯನ್ನು ಹುಡುಕಿ ನೂಡುವುದಕ್ಕಿಂತ, ಹೊಸಿಲ ಒಳಗೇ ಇದ್ದು ನೋಡಿ ಮಾಡು. ವುದು ಹೆಂಗುಸಿನ ಧರ್ಮ" ಎಂದು ತನ್ನ ಹೃದಯವಲ್ಲಿ ನೆಲೆಯೂರಿಸಿ, ಉಪಾಧ್ಯಾಯನೆಂದರಲ್ಲಿ ತನ್ನ ಹೃದಯವನ್ನು ಸಾರಿದಾಕೆ. ತನ್ನ ಸಂಸಾರವನ್ನು ಇತರರು ಮೆಚ್ಚಿಕೊಳ್ಳಬೇಕೆಂಬ ಸ್ತ್ರೀಸಹಜವಾದ ಆಸೆ

ಯಿನ್ನರೂ, ಅದಕ್ಕನುವಾಗದ ಸನ್ನಿವೇಶದಲ್ಲಿದ್ದಾಗಲೂ ಎದೆಗುಂದದೆ, ದುಃಖವನ್ನೊತ್ತರಿಸಿಟ್ಟ ರತ್ನ—ಹೆಣ್ಣಿನೆದೆಯ ಸಹಜ ಚಿತ್ರಕ್ಕೆ ಮಿರುಗು ಕೊಟ್ಟಿದ್ದಾಳೆ. ಕೃಷ್ಣನೊಡನಾದ ವಿವಾಹಕಾಲದಲ್ಲಿ ಕಣ್ಣಂಚಿ. ನಿಂದಲೂ ಹನಿ ತುಟುಕಿಸದ ರತ್ನ, ತನ್ನ ಪತಿಯ ದೇಗುಲಕ್ಕೆ ಬಂದಾಗ ಸುರಿಸಿದ ಕಣ್ಣೀರು ಆಕೆಯ ಪತಿಪ್ರೇಮಕ್ಕೆ ಸಾಕ್ಷಿ!

ಈ ಚಿತ್ರಾಂತರ್ಗತ ಸಮಸ್ಯೆಯಿಂದು ಸಮಾಜದ ನಿಯಮಗಳಿಗೆ ವಿರೋಧವಾಗಿದ್ದರೂ, ಕಾರಣಬದ್ಧವಾದ ಸನ್ನಿವೇಶದಲ್ಲಿ ಸಮಾಜವು ಸ್ವಾಗತವನ್ನು ನೀಡಲೇಬೇಕಾಗಿದೆ ಸಮಾಜದ ನಿಯಮಕ್ಕೆ ಒಳ. ಪಟ್ಟು ಕೃಷ್ಣನು ನಡೆದಿದ್ದರೆ, ಗೆಳೆಯನ ಕೊನೆಯುಸಿರಿಗೆ ಉತ್ತರವ. ನ್ನೆಂತು ಕೊಡಬೇಕು? ಹಾಗಾದರೆ ಸಮಾಜನಿಯಮ? ಸರಿ! ಕೃಷ್ಣನು ತಾನಾಗಿ ಪೊಂಟುದು ಗತಜೀವಿಯ ಶಾಂತಿಗಾಗಿ; ಆತನ ಉದ್ವೇಶಪೂರ್ತಿಗಾಗಿ! ಅದರೆ ಅವನು ಸಮಾಜಬಾಹಿರನಾಗ. ಬೇಕಾಯಿತು. ಸಮಾಜಬಾಹಿರನಾದರೂ ಅವನಿಗೊಂದು ಶಾಂತಿ. ಯಿದೆ; ಇಲ್ಲವಾಗಿದ್ದರೆ ಅವನು ಅಶಾಂತಿಯ ತಾಕಲಾಟಕ್ಕೆ ಬಲಿಬಿದ್ದು ನರಳಬೇಕಿತ್ತು. ಹಾಗಾಗಬಾರದು. ಇಂತಹ ಸದುದ್ದೇಶಪೂರ್ಣ ವಿಚಾರದಲ್ಲಿ ಸಮಾಜವೂ ನಿಯಮವನ್ನು ಸಡಿಲಿಸಬೇಕು. ಜೀವಿತ. ವನ್ನು ಬೆಳಗಬೇಕು. ಆದರೆ ಇನ್ನೂ ಕಾಲಾವಧಿ ಆದೆಷ್ಟು ಬೇಕೊ! ಇನ್ನು ಲೇಖಕರ ಕಥನ ಶೈಲಿ. ಬಹು ಮನೋಜ್ಞವಾದ, ರಸವ್ಯಂಜಕ ಶೈಲಿಯು ಲೇಖಕರ ಸುಂದರ ಭಾಷೆಯನ್ನು ಬೆಳಗಿದೆ. "ರೂಸ. ದರ್ಶಿ" ಕಾದಂಬರಿಯಂತಹ ಮನವನ್ನು ಕೆರಳಿಸುವ ಕಥನರೀತಿಯು ಈ ಕಥೆಗೆ ಅಲಂಕಾರವಿತ್ತಿದೆ. ವಿಚಾರಪೂರ್ಣವಾದ ಸಮಸ್ಯೆಗಳನ್ನು ಈ ಕಥೆಯಲ್ಲಿ ಯೋಗ್ಯ ವಾತಾವರಣದ ಹಿನ್ನೆಲೆಯಲ್ಲಿ ಲೇಖಕರು ಮೂಡಿಸಿದ್ದಾರೆ. ಶೈಲಿಯು ಮನೋವೇಧಕವಾಗಿದ್ದು, ವಾಚಕರ ಕುತೂಹಲವನ್ನು ಕೆರಳಿಸುತ್ತಿದೆ.

"ಮಾನವಮಿಯ ದಿಬ್ಬದ ಮೇಲೆ ಕುಳಿತಾಗ ಕಣ್ಣಿಗೆ ಕಾಣಿಸಿದ ಆ ದೃಶ್ಯವು ಹೃದಯಾವರ್ಜಕವಾಗಿದೆ. ಕವಿಹೃದಯವು ಅಲ್ಲಿ ಬೆಳ. ಗುತ್ತದೆ. ಮತ್ತೊಂದೆಡೆ "ರಾತ್ರಿರಾಣಿ" ಹೂವಿನ ಕಥೆಯನ್ನು ಕೃಷ್ಣನು ಆರಂಭಿಸಿ, ಕರಿ ನಾಗರಹಾವಿನ ಆಗಮನಕ್ಕೆರಿರುವ ಕಾರಣ. ವನ್ನು ಅಪೇಕ್ಷಿತವಾಗಿ ಸೂಚಿಸಿದ ಬಗೆಗಾಗಿ ಲೇಖಕರನ್ನು ಮೆಚ್ಚಬೇಕು. ಗೆಳೆಯ ಮತ್ತು ರತ್ನರ ಜೋಡಿಯ ಕುರಿತು ಮಾತಿತ್ತಿದ ಕೃಷ್ಣನು ವಾಚಕರನ್ನು "ಸೌಖ್ಯಸಾಗರದ ಮೇಲೆ" ತೇಲಾಡಿಸಿ, ಒಮ್ಮೆಗೆ ವಿಧಿಯ ಕ್ರೂರದೃಷ್ಟಿಗೆ ಬಲಿ ಬಿದ್ದ ಗೆಳೆಯನ ಇತಿವೃತ್ತವನ್ನು ಮುಗಿಸಿದಾಗ, ನಾವು ನೆನಸದೇನೇ ಕಂಗುಣಿಯಿಂದ ನೀರು ಹನಿಯು. ವುದು. ಈ ಬಗೆಯ ಚಿತ್ರಣವನ್ನು ನುರಿತ ಕತೆಗಾರಿಕೆಯೆಂದೇ ಕರೆಯಬೇಕು.

ಕೃಷ್ಣನ ಬಾಯಿಯಿಂದಲೇ ಜೀವಿತದ ಇತಿವೃತ್ತವನ್ನು ಹೇಳಿಸಿದ ಬಗೆ, ಆದೇ ಇತಿವೃತ್ತದಲ್ಲಿ ಕಾಣಸಿಗುವ ಗೆಳೆಯನ ಅಂತಿಮ ಚಿತ್ರಿಯ ಮರಣದ ಮೊದಲ ಸನ್ನಿವೇಶ, ಮರಣಕಾಲದಲ್ಲಿ ಗೆಳೆಯನ ಬಾಯಿಯಿಂದ ಹೊರಟ ಮಾತುಗಳು,—ಇವು ಹೃದಯಾವರ್ಜಕ. ವಾದ ರಸಪೂರ್ಣಘಾಟಿಯಲ್ಲಿ ನಿರುಗಿ ನಿಂತಿವೆಯೆಂದರೆ ಇದು ಅತಿಶ.

(ಕವ್ವರಿನೇ ಪುಟ ನೋಡಿರಿ)

ಸಾದರ ಸ್ವೀಕಾರ

೧೮ **ಸತ್ಯಾರ್ಥಿ** (ವ್ಯಕ್ತಿ ಪರಿಚಯ ಸಂಕಲನ) ಲೇಖಕರು ಶ್ರೀ. ಗೌರೀಶ ಕಾಯಕಿಣಿ, ಗೋಕರ್ಣ. ಪ್ರಕಾಶಕರು ಶ್ರೀ. ಬುರ್ಲಿ ಬೆಂದುದೂಧವ, ಮಿಂಚಿನಬಳ್ಳಿ ಚಾವಡಿ, ಧಾರವಾಡ. ಕ್ರೌ. ಅ. ೧೮೨ ಪುಟಗಳು. ಉತ್ತಮ ಪ್ರತಿಗೆ ೨-೪-೦. ಸಾದಾ ಪ್ರತಿಗೆ ೨-೦-೦.

೧೯ **ಯುನೋಚೀ ಕಾರ್ಯ ಪದ್ಧತಿ** (ಪರಿಚಯಾತ್ಮಕ ಗ್ರಂಥ-ಮುಂಬಯಿಯಲ್ಲಿ) ಮೂಲ ಇಂಗ್ಲಿಷ್ ಲೇಖಕರು ಟಾಮ್ ಗಾಲ್ಟ್. ಚಿತ್ರಕಾರರು ನಾರ್ಮನ್ ಟೇಟ್. ಪ್ರಕಾಶಕರು. ಯುನೈಟೆಡ್ ಸ್ಟೇಟ್ಸ್ ಇನ್‌ಫರ್ಮೇಶನ್ ಸರ್ವಿಸ್, ಮುಂಬಯಿ. ಕ್ರೌ. ಅ. ೨೧೦. ಪುಟಗಳು.

೨೦ **ದಾಂಪತ್ಯ ಜೀವನ** (ಮಾಸಪತ್ರಿಕೆಯ ದ್ವಿತೀಯ ಜನ್ಮ ದಿನೋತ್ಸವ ಸಂಚಿಕೆ). ಸಂಪಾದಕರು ಡಾಕ್ಟರ್ ಬೊಡ್ಡೇರಿ ವೆಂಕಟಗಿರಿರಾವ್, ಸಾಧನ ಪ್ರಕಟನಾಲಯ, ದೊಡ್ಡಬಳ್ಳಾಪುರ. ಡೆ. ಅ. ೬೪ ಪುಟಗಳು. ಬೆಲೆ ೦-೮-೦.

'ದಾಂಪತ್ಯ ಜೀವನ' ಎಂದೊಡನೆ ಲೈರಿಗಿಕ ವಿಚಾರ, ಸಂತಾನ ವಿಚಾರ—ಎಂದಿಷ್ಟೇ ಎರಿದು ಅನೇಕರ ಭಾವನೆಯಿದ್ದಂತಿದೆ. ಆದುದರಿಂದಲೇ ಈ ಸಂಚಿಕೆಯಲ್ಲಿ ಬಂದಿರುವ ಲೇಖನಗಳೆಂದರೆ ಇವೇ ವಿಚಾರಗಳನ್ನು ಕುರಿತು ಬರೆದ ಚರ್ವಿತಚರ್ವಣಗಳೇ ಆಗಿವೆ. ದಂಪತಿಗಳಿಗೆ ಈ ಜೀವನವಲ್ಲದೆ ಬೇರೆಯ ಜೀವನವೂ ಬೇಕಾದಷ್ಟಿದೆ. ಇಂತಹ ಪತ್ರಿಕೆಗಳಲ್ಲಿ ಅವುಗಳ ವಿಚಾರಚರ್ಚೆಯೂ ಆಗುತ್ತಲಿದ್ದರೆ, ಪತ್ರಿಕೆಯ ಪ್ರಯೋಜನ ಬೆಳೆದೀತು.

೨೧ **ಪ್ರಕಾಶಿನಿ** (ಮಾಸಪತ್ರಿಕೆ). ಸಂಪಾದಕರು ಶ್ರೀಮಾನ್ ಟಿ. ಶ್ರೀಪತಿ ಬಿ. ಎ. ಪ್ರಕಾಶಿನಿ ಆಫೀಸು, ಸುರತ್‌ಕಲ್ಲು, ದ. ಕ. ಜಿಲ್ಲಾ. ಡೆ. ಅ. ೨೪ ಪುಟಗಳು. ವಾ. ಚಂ. ೩ ರೂ. ಬಿಡಿ ಸಂಚಿಕೆಗೆ ೦-೪-೦.

೨೨ **ವಿಕಾಸ** (ಮಾಸಪತ್ರಿಕೆ). ಸಂಪಾದಕರು ಎಸ್. ಕೆ. ದೇಶಪಾಂಡೆ, ವಿಕಾಸ ಪಬ್ಲಿಕೇಶನ್ಸ್, ಹೆಬಸೂರ ಬಿಲ್ಡಿಂಗ್, ದೇಶಪಾಂಡೆ ನಗರ, ಹುಬ್ಬಳ್ಳಿ. ವಾರ್ಷಿಕ ಚಂದಾ ೩-೦-೦. ಬಿಡಿ ಸಂಚಿಕೆಗೆ ನಾಲ್ಕಾಣೆ.

೨೩ **ವೀರಮಾತೆ** (ಮಾಸಪತ್ರಿಕೆಯ ಜೂನ್ ಜುಲೈ ಸಂಯುಕ್ತಾಂಕ) ಸಂಪಾದಕರು ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ. ಧಾರವಾಡ. ಪ್ರಕಾಶಕರು ಶ್ರೀ. ಬಿ. ನಾ. ಬೈಚವಾಳ ಬಿ. ಎ. ವನಿತಾ ಸೇವಾಸಮಾಜ, ಧಾರವಾಡ. ಕ್ರೌನ್ ೪ ದ ೫೮ ಪುಟಗಳು. ವಾ. ಚಂದಾ ೫-೦ ೦.

ಮೊದಲು ಡೆಮಿ ಅಷ್ಟಪತ್ರದ ಆಕಾರದಲ್ಲಿದ್ದುದನ್ನು ಕ್ರೌನ್ ೪ ದ ಆಕಾರಕ್ಕೆ ಬದಲಿಸಲಾಗಿದೆ. ಎಂದಿನಂತೆ ಲೇಖನ-ಕವನ-ಕಥೆ-ಪ್ರಬಂಧಗಳಿವೆ.

೨೪ **ಗಾಂಧೀಬೋಧ** (ಚಾರ್ಕೋಸಯುಕ್ತ ಲೇಖನಗಳ ಅನುವಾದ ಸಂಕಲನ) ಸಂಪಾದಕರು ಶ್ರೀ ರಾಮಚಂದ್ರ ವಡವಿ.

೧೦ನೆಯ ಪುಟದಿಂದ ಬಂತು.

ಯೋಕ್ತಿಯಲ್ಲ. ಆದಿಯಿಂದ ಅಂತ್ಯದ ವರೆಗೂ ಭಾಷೆಯು ಸಮತೂಕವಾಗಿದ್ದು, ಹಿತಿತದಲ್ಲಿದ್ದು ರಸಾನುಗುಣವಾದ ಪದವಿನ್ಯಾಸದಿಂದ ಅಲಂಕೃತವಾಗಿದೆ

ಗುಂಡನೆದುರು ಬಂದ ರತ್ನನ ಕುರಿತಾಗಿ ಆಡಿದ ಗುಂಡನ ಮಾತುಗಳೂ, "ಬಯಕೆಯ ನಾಲಗೆಯನ್ನು ಹೊರಳಾಡಿಸಿ ಚಿಪ್ಪುದಿಸುವ ಯೋಗ-ಭೋಗ (?)" ಈ ಮಾತೂ, ಊಟ ಮಾಡಿ ಕತ್ತಲೆಯಲ್ಲೇ ಹೊರಬಿದ್ದ ಗುಂಡನ ವರ್ಣನೆಯೂ,—ಈ ಕಥಾಭಾಗದಲ್ಲಿ ಕಾಣುವ ಅಲ್ಪ ಕುಂದಲ್ಲದೆ, ಮತ್ತಾವ ದೋಷವೂ ಇಲ್ಲಿ ಕಾಣಿಸದು.

ಅಂತೂ ಜಯಂತಿಗೆ ಹೊಸಬ (?) ರಾದ ಈ ಲೇಖಕರು ಜಯಂತಿಯ ಅಲಂಕಾರವನ್ನು ಯೋಗ್ಯವಾದ ಓರಣದಲ್ಲೇ ಸಮೆದಿದ್ದಾರೆ. ಇನ್ನೂ ಇದೇ ಬಗೆಯ ಉತ್ತಮ ಬರೆಹಗಳನ್ನು ಲೇಖಕರ ಲೇಖನಿಯು ಒದಗಿಸಲಿ!

ಕಾಶಕರು ಶ್ರೀ. ತಿ. ಶ್ರೀ ನಾಯಿಕ, ಸಂಚಾಲಕ ಗಾಂಧೀ ಸ್ಮಾರಕ (ಕರ್ನಾಟಕ ಶಾಖೆ), ಪ್ರೋ. ಹಿರೇಗುತ್ತಿ, ವ್ಹಾಯಾ ಅಂಕೋಲಾ, ಕನ್ನಡ ಜಿಲ್ಲಾ. ಕ್ರೌ. ಅ. ೪೮ ಪುಟಗಳು. ಬೆಲೆ ೦-೫-೦.

೨೫ **ಜೀವನ ಪ್ರಕಾಶ** (ಮಾಸಪತ್ರಿಕೆಯ ಲಘುಕಥಾ ವಿಶೇಷಾಂಕ). ಸಂಪಾದಿಕೆಯರು ಶ್ರೀಮತಿ ಪ್ರೇಮಾ ಹುಲಕೊಪ್ಪಕರ. ಪ್ರಕಾಶಕರು ಪ್ರಭಾ ಡಿಸ್ಟ್ರಿಬ್ಯೂಟರ್ಸ್, ಬೆಳಗಾಂವಿ. ಡೆ. ಅ. ೧೩೬ ಪುಟಗಳು. ಬೆಲೆ ೧-೦-೦.

ಲಘುಕಥೆಗಳಲ್ಲದೆ ಬೇರೆ ಲೇಖನ ಕವನಗಳಿಗೂ ಇದರಲ್ಲಿ ಅವಕಾಶವನ್ನು ಕೊಡಲಾಗಿದೆ. ಪ್ರಕಟವಾಗಿರುವ ಲಘುಕಥೆಗಳಲ್ಲಿ ಕನ್ನಡ ಲಘುಕಥಾಪ್ರಪಂಚದಲ್ಲಿ ಹೊಸ ಸೊಗಸನ್ನು ಬೀರುವಂತಹವುಗಳ ಕೊರತೆ ವಿಶೇಷ ಕಾಣುತ್ತದೆ. ಗಾತ್ರದ ದೃಷ್ಟಿಯಿಂದ ನೋಡಿದರೆ ಇದೊಂದು ಸಂಪಾದಕರ ಸಾಹಸವೆಂದೇ ಎನಿಸುವಂತಿದೆ.

೨೬ **ಮುಂಬಯಿ ರಾಜ್ಯದಲ್ಲಿ ಸಾಪಪ್ರತಿಬಂಧ** (ಪ್ರಚಾರಾತ್ಮಕ ಸಚಿತ್ರ ಕಿರುಹೊತ್ತಗೆ). ಮುಂಬಯಿ ಸರಕಾರದ ಪ್ರಸಿದ್ಧಿ ಶಾಖೆಯ ಪ್ರಕಟನ. ಡೆ. ಅ. ೪೪ ಪುಟಗಳು.

The China Debate (ಪ್ರಚಾರಾತ್ಮಕ ಪುಸ್ತಕ) ಲೇಖಕರು: ಶ್ರೀ ಸೀತಾರಾಮ ಗೋಳೇ. ಪ್ರಕಾಶಕರು: ಸೊಸೈಟಿ ಫಾರ್ ಡಿಫೆನ್ಸ್ ಆಫ್ ಫ್ರೀಡಂ ಇನ್ ಏಶಿಯಾ, ೧೩, ಚೌರಂಘೀ ಸ್ಕ್ವೇರ್, ಕಲಕತ್ತಾ. ಡೆ. ಅ. ೫೦ ಪುಟಗಳು. ಬೆಲೆ ೦-೪-೦.

೨೮ **ಕಟ್ಟಿದ ಮನೆ** (ಸಾಮಾಜಿಕ ಕಾದಂಬರಿ) ಬರೆದವರು ಶ್ರೀಮಾನ್ ವಿ. ಪಿಂ. ಇನಾಮದಾರ ಅವರು. ಮೈಸೂರಿನ ಉಷಾ ಸಾಹಿತ್ಯಮಾಲೆಯ ೪೧-೪೨ನೆಯ ಗ್ರಂಥಕುಸುಮ. ಕ್ರೌ. ಅ. ೪೪೦ ಪುಟಗಳು. ಬೆಲೆ ೪-೮-೦

೨೯ **ಮರಣದ ಹೂ** (ಸಾಮಾಜಿಕ ಕಾದಂಬರಿ) ಬರೆದವರು ಶ್ರೀಮಾನ್ ತ. ರಾ. ಸು. ಅವರು. ಮೈಸೂರಿನ ಉಷಾ ಸಾಹಿತ್ಯ ಮಾಲೆಯ ೪೩-೪೪ನೆಯ ಗ್ರಂಥಕುಸುಮ. ಕ್ರೌ. ಅ. ೩೭೫ ಪುಟಗಳು. ಬೆಲೆ ೩-೧೨-೦

ಶರತ್‌ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.
ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳಿಗಾಗಿಯೂ
ಬೆಲೆಗೆ ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

ಆನಂದಕಂದರ ಕಥೆ, ಕಾದಂಬರಿ, ಕವನಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು ಎಲ್ಲವೂ ನಮ್ಮಲ್ಲಿ ದೊರೆಯುವವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮೀಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು.

ನಮ್ಮ ಮಂದಿರ ಪ್ರಕಟಿಸಿದ 'ಆನಂದಕಂದ'ರ ಸಾಮಾಜಿಕ ಕಾದಂಬರಿ:

ಮಗಳ ಮದುವೆ

೧೯೩೦ನೆಯ ಸತ್ಯಾಗ್ರಹ ಚಳವಳಿಯ ಹಿನ್ನೆಲೆಯಲ್ಲಿ ಉತ್ತರಕರ್ನಾಟಕದ ಸಾಮಾಜಿಕ ಜೀವನವನ್ನು ವಿವಿಧ ಮುಖದಲ್ಲಿ ಚಿತ್ರಿಸಿ ತೋರಿಸಿದ ರಮ್ಯ ಕಥಾನಕ. ಓದಲು ಕೈಯ್ಯಲ್ಲಿ ತೆಗೆದುಕೊಂಡರೆ, ಮುಗಿಸುವ ವರೆಗೂ ಪುಸ್ತಕವನ್ನು ಕೆಳಗೆ ಇರಿಸಲಿಕ್ಕಾಗದಂತಹ ಆಕರ್ಷಕವಾದ ಕತೆಗಾರಿಕೆ. ಓದಿದ ರಸಿಕರಿಂದ ಧನ್ಯವಾದಗಳ ಸುರಿಮಳೆ!

ಕ್ರೌ. ಅ. ೩೫೦ ಪುಟಿಗಳು ಸಾದಾ ಪ್ರತಿಗೆ ೪-೦-೦; ಸುಂದರ ಪ್ರತಿಗೆ ೪-೧೨-೦

ಬೆಳವಡಿ ಮಲ್ಲಮ್ಮ
(ಶರಂಗನಾಟಕ ಸಂಕಲನ)
ಕ್ರೌ. ಅ. ೧೧೬ ಪುಟ. ಬೆಲೆ ೧-೪-೦

ಕಾರಹುಣ್ಣಿವೆ
(ಕವನಸಂಕಲನ)
ಕ್ರೌ. ಅ. ೧೨೮ ಪುಟ. ಬೆಲೆ ಸಾದಾ ೨-೦-೦
ಸುಂದರ ೨-೪-೦

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ವಿರಹಿಣಿ	ಬಡತನದ ಬಾಳು	ಕರ್ನಾಟಕ ಜನಜೀವನ
ಸುದರ್ಶನ	ಒಡನಾಡಿ	ನಮ್ಮ ಬದುಕು	ಜೀವನ ಚಿಂತ್ರ
ಅಶಾಂತಿಪರ್ವ		ಸಂಸಾರ ಚಿತ್ರ	ಶ್ರೀ ಬಸವಣ್ಣನವರು
ಮಗಳ ಮದುವೆ		ಮಾತನಾಡುವ ಕಲ್ಲು	

ಅಲ್ಲದೆ ಶ್ರೀ ಹುದ್ದಾರರ 'ಚಿತ್ರಕಲಾಪ್ರವೇಶ'ವೂ ಚಾಡಿಯ ಚಾಣಕ್ಯನ 'ಜಾತೀಯ ಸಮಸ್ಯೆ' 'ಕರ್ನಾಟಕ ಏಕೀಕರಣ' ಈ ಕಿರಿಹೊತ್ತಿಗೆಗಳೂ ದೊರೆಯುವವು.

ಶರತ್‌ಪ್ರಕಾಶನ ಮಂದಿರಕ್ಕೆ ೫ ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ರಿಯಾಯತಿಗಳು. ಬೇಗನೆ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ:

ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ, ಧಾರವಾಡ

Printed by N. A. Hoskeri at the Vijaya Press, Dharwar, and published for the Proprietors Jayanti Publications, by S. D. Dharmatti at the Jayanti Office, Dharwar

ಸಪ್ಟಂಬ
೧೯೫೫

ಸಂಪುಟ
೧೬

ಸಂಚಿಕೆ
೪

ಬೆಲೆ
೮ ಆಣೆ

ಈ ಸಂಚಿಕೆಯಲ್ಲಿ

ಶ್ರೀ. ಕ. ರಾ. ನಿ. ಪತ್ನಿಯ ವಿಫಲಪ್ರಯತ್ನ (ಸಂಪಾದಕೀಯ)	ಸಂಪಾದಕರು	೧೫೧
ನೈತಾಳಿಕಗೀತ (ಕವನ)	'ಆನಂದಕಂದ'	೧೬೨
ನಾಡಸುದ್ದಿ (ಪ್ರಾಸಂಗಿಕ ಟಿಪ್ಪಣಿಗಳು)	'ಕಾಲಭೈರವ'	೧೬೩
ಅಡಿಗೆಯವಳು (ಪಣ್ಣಕತೆ)	ಶ್ರೀಮತಿ ಭಾರತೀ ಶ್ರೀನಿವಾಸ ಐರಣಿ, ಧಾರವಾಡ	೧೬೫
ಮಹಿಳೆಯರು—ರಾಜಕಾರಣ (ಪರಿಚಯಾತ್ಮಕ)	ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ. ಬೆಳಗಾಂವಿ	೧೬೦
ಕೃಷ್ಣಾತೀರದಿ (ಕವನ)	ಶ್ರೀ. ಭುಜೇಂದ್ರ ಮಹಿಷವಾಡಿ	೧೬೪
ಸ್ವಾಗತಗೀತ (ಕವನ)	ಶ್ರೀ. ರಾ. ಸು. ವೈಲಾಯ, ಉಡುಪಿ	೧೬೪
ಜೀರ್ಣೋದ್ಧಾರ (ಏಕಾಂಕ ನಾಟಕ)	ಶ್ರೀ. ಬಿ. ಆರ್ ವಾಡಪ್ಪಿ ಎಂ. ಎ. ಬಿ. ಟಿ. ಧಾರವಾಡ	೧೬೫
ಪಂಪನ ಆಶ್ರಯದಾತ ಯಾರು? (ಸಂಶೋಧನ)	ಶ್ರೀ. ಕೆ. ವೆಂಕಟರಾಚಾರ್ಯ, ಸುರತಕಲ್ಲು	೧೬೦
ಹೊರನಾಡಿನ ಕನ್ನಡಿಗರು (ವ್ಯಕ್ತಿಪರಿಚಯ)	ಶ್ರೀ. ಎಂ. ಕೆ. ಬಡಿಗೇರ ಬಿ. ಎಸ್‌ಸಿ. (ಆಗ್ರಿ) ರಾಣಪುರ	೧೭೬
ಎದುರೀಜು (ಲಲಿತ ಪ್ರಬಂಧ)	ಶ್ರೀ. ಲಕ್ಷ್ಮಣ ವಿ. ಜೋಶಿ ಬಿ. ಎ., ಬಿ. ಇಡಿ.	೧೭೮
ಪಂಚವಾರ್ಷಿಕ ಯೋಜನೆ (ಲೇಖಾಂಕಗಳು)	ಶ್ರೀ. ವಿ. ಸಿ. ಹಿತ್ತಲಮನಿ ಬಿ. ಎಸ್‌ಸಿ. ಧಾರವಾಡ	೧೫೨
ಬೆಳ್ಳಿದ ಮುತ್ತುಗಳು (ಅನುವಾದಿತ ಕವನ)	ಶ್ರೀ. ಜ. ಶ್ರೀ. ದೇಸಾಯಿ ಬಿ. ಎ., ಬಿ. ಟಿ.	೧೫೭
ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ	ಶ್ರೀ. ಕೆ. ಶ್ರೀನಿವಾಸ ಶರ್ಮ, 'ವಿದ್ವಾನ್'	೧೫೮
ಪುಸ್ತಕ ವಿಮರ್ಶೆ	ದೇರೆ ದೇರೆ ವಿಮರ್ಶಕರು	೧೫೯
ಸಾದರ ಸ್ವೀಕಾರ	ಹೊದಿಕೆಯ ಒಳಪುಟ	

JAYANTI

ಸಾದರ ಸ್ವೀಕಾರ

●

೩೦ **ಕಸೂತಿ ಕಲೆ** (ಸೂಚಿಶಿಲ್ಪ ವಿಷಯಕ ಸಚಿತ್ರ ಗ್ರಂಥ)—ಬರೆದವರು ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ. ಧಾರವಾಡ. ಪ್ರಕಾಶಕರು ಕರ್ನಾಟಕ ಟೀಚರಿಂಗ್ ಕಾಲೇಜ್, ಗಾಂಧೀಚೌಕು, ಧಾರವಾಡ. ಕ್ರೌ. ಅ. ೧೭೩ ಪುಟಗಳು. ಬೆಲೆ ೨-೮-೦.

೩೧ **ಹೈದರಾಬಾದಿನ ಕರ್ನಾಟಕ ಸಾಹಿತ್ಯ ಮಂದಿರದ** ೧೭ನೆಯ ವರ್ಷದ ವರದಿ. ಕಾರ್ಯಕಾರಿ ಮಂಡಲದವರಿಂದ ಪ್ರಕಾಶಿತವಾಗಿದೆ. ಕ್ರೌ. ಅ. ೩೪ ಪುಟಗಳು.

ಹೈದರಾಬಾದಿನಲ್ಲಿ ಕನ್ನಡದ ಸರ್ವತೋಮುಖವಾದ ಬೆಳವಣಿಕೆಯನ್ನು ನಡೆಯಿಸುವ ಸರ್ವಮಾನ್ಯ ಕನ್ನಡ ಸಂಸ್ಥೆಯಿದು. ವರದಿಯ ವರ್ಷದಲ್ಲಿ ಮಾಡಿದ ಕಾರ್ಯವು ಕನ್ನಡಿಗರಲ್ಲಿ ಉತ್ಸಾಹವನ್ನು ಹುಟ್ಟಿಸುವಂತಹದಾಗಿದೆ. ನಗರದ ಗಣ್ಯ ಕನ್ನಡಿಗರೆಲ್ಲ ಈ ಸಂಸ್ಥೆಯ ಸದಸ್ಯವರ್ಗದಲ್ಲಿದ್ದಾರೆ.

೩೨ **ಲೇಖಕ** (ಹೊಸ ಮಾಸಪತ್ರಿಕೆ): ಸಂಪಾದಕರು ಶ್ರೀ. ಶಾ. ಬಾಲೂರಾವ್, ಬೆಂಗಳೂರು. ಪ್ರಕಾಶಕರು: ಅಖಿಲ ಕರ್ನಾಟಕ ಲೇಖಕಸಂಘ, ರತನ್ ಮಹಾಲ್, ಬೆಂಗಳೂರು. ೩ ಕ್ರೌ. ೧ದ ೩೨ ಪುಟಗಳು. ವಾ. ಚಂ. ೩-೦-೦; ಬಿಡಿ ಸಂಚಿಕೆಗೆ ೦-೪-೦.

೩೩ **ಸಂತಾನ** (ಕವನ ಸಂಕಲನ) ಲೇಖಕರು ಶ್ರೀ. ಸು. ರಂ. ಯಕ್ಕುಂಡಿ; ಪ್ರಕಾಶಕರು: ಪ್ರೊ. ರಂ. ಶ್ರೀ. ಮುಗಳಿ, ವಿಶ್ರಾಮಬಾಗ್, ಸಾಂಗಲಿ. ಕ್ರೌ. ಅ. ೮೦ ಪುಟಗಳು. ಬೆಲೆ ೧-೪-೦.

೩೪ **ಪುಣ್ಯಸ್ಮೃತಿ** (ಕಥಾಸಂಕಲನ) ಬೇರೆಬೇರೆ ಲೇಖಕಿಯರು ಬರೆದುವು. ಪ್ರಕಾಶಕರು ವೀಣಾ ಪ್ರಕಟನಾಲಯ, ಶಿವಗಿ, ದ. ಕ. ಜಿಲ್ಲಾ ಕ್ರೌ. ಅ. ೧೧೨ ಪುಟಗಳು. ಬೆಲೆ ೧-೪-೦.

೩೫ **Mind Murder in Mao-Land** (ಪ್ರಚಾರಾತ್ಮಕ ಪುಸ್ತಕ). ಲೇಖಕರು ಶ್ರೀ. ಸೀತಾರಾಮ ಗೋಳೀ. ಪ್ರಕಾಶಕರು ಸೊಸೈಟಿ ಫಾರ್ ಡಿಫೆನ್ಸ್ ಆಫ್ ಫ್ರೀಡಮ್ ಇನ್ ಏಷ್ಯಾ, ಚೌರಂಗೀ ಸ್ಕ್ವೇರ್, ಕಲಕತ್ತಾ. ಡೆ. ಅ. ೫೮ ಪುಟಗಳು. ಬೆಲೆ ೦-೪-೦

೩೬ **An Outline of American History** (ಇತಿಹಾಸ ಪರಿಚಯ) ದಿ. ಯುನೈಟೆಡ್ ಸ್ಟೇಟ್ಸ್ ಇನ್ ಫರ್ಮೇಶನ್ ಸರ್ವಿಸ್ ಬಾಂಬೆ—ಅವರ ಪ್ರಕಾಶನ. ಪುಸ್ತಕ ದೊರೆವ ಸ್ಥಳ: ರಾಜಹಿಮಲ ಪಬ್ಲಿಕೇಶನ್ಸ್ ಲಿ. ಹಿಮಾಲಯ ಹೌಸ್, ಮುಂಬೈ. ಕ್ರೌ. ೧ದ ೧೪೮ ಪುಟಗಳು ಬೆಲೆ ೦-೧೫-೦. ಹಲವು ಸುಂದರ ಚಿತ್ರಗಳನ್ನೂ ಒಳಗೊಂಡಿದೆ.

೩೭ **ವಿಜ್ಞಾನ ಜ್ಯೋತಿಷ** (ಜ್ಯೋತಿಶ್ಶಾಸ್ತ್ರ ವಿಷಯಕ ಮಾಸಪತ್ರಿಕೆ). ಸಂಪಾದಕರು ಮತ್ತು ಪ್ರಕಾಶಕರು: ಶ್ರೀ. ಮಾನ್ ಬಿ. ಎಸ್. ಮಹದೇವರಾವ್ ಬಿ. ಎ. ಚಿಕ್ಕಪೇಟೆ ಬೆಂಗಳೂರು ನಗರ. ಡೆ. ಅ. ೪೦ ಪುಟಗಳು. ವಾ. ಚಂದಾ ೬-೦-೦. ಬಿಡಿ ಸಂಚಿಕೆಗೆ ೦-೮-೦.

ಕೇವಲ ಜ್ಯೋತಿಶ್ಶಾಸ್ತ್ರವನ್ನೇ ಮುಖ್ಯವನ್ನಾಗಿಟ್ಟುಕೊಂಡ ಪತ್ರಿಕೆ ಕನ್ನಡದಲ್ಲಿ ಇರಲಿಲ್ಲ. ಜ್ಯೋತಿಷ ಪ್ರೇಮಿಗಳು ಅವಶ್ಯವಾಗಿ ಇದನ್ನು ಬರಮಾಡಿಕೊಂಡು, ಸಂಪಾದಕರ ಯೋಗಕ್ಷೇಮ ನೋಡಿಕೊಳ್ಳಬೇಕು.

೩೮ **Estate Duty Bill** (ಕಾನೂನು ವಿಷಯಕ ಇಂಗ್ಲಿಷ್ ಗ್ರಂಥ). ಲೇಖಕರು ಶ್ರೀ. ವಿ. ಎಸ್. ಕುಲಕರ್ಣಿ ಬಿ. ಎ., ಎಲ್‌ಎಲ್. ಬಿ. ಅಡ್ವೊಕೇಟ್, ಪುಣೆ. ಪ್ರಕಾಶಕರು ಲಾ ಬುಕ್ ಹಾವುಸ್, ೩೭೮ ನಾರಾಯಣಪೇಟ, ಲಕ್ಷ್ಮಿ ರೋಡ್, ಪೂನಾ ೨, ಡೆ. ಅ. ೧೫೮ ಪುಟಗಳು. ಬೆಲೆ ೩-೦-೦

೩೯ **ವಿನಯ** (ವಾರ್ಷಿಕ ಪತ್ರಿಕೆ). ಹುಬ್ಬಳ್ಳಿಯ ನೂ ಇಂಗ್ಲಿಷ್ ಸ್ಕೂಲಿನ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಇಂಗ್ಲಿಷ ಕನ್ನಡ, ಮರಾಟಿ, ಹಿಂದಿ ಲೇಖನಗಳನ್ನು ಒಳಗೊಂಡ ಸಂಪುಟ ಡೆ. ಅ. ೮೪ ಪುಟಗಳು.

೪೦ **ಕಲ್ಪನಾವಿಲಾಸ** (ಅನುವಾದಿತ ಕಥೆಗಳ ಸಂಕಲನ) ಬರೆದವರು ಶ್ರೀ. ವೇಣುಗೋಪಾಲ. ಹುಬ್ಬಳ್ಳಿಯ ಅನಂತ ಗ್ರಂಥಮಾಲೆಯ ೩ನೆಯ ವರ್ಷದ ಕುಸುಮ ೪. ಕ್ರೌ. ೮ ೮೨ ಪುಟಗಳು. ಬೆಲೆ ಸಾದಾ ಪ್ರತಿಗೆ ೦-೧೫-೦; ಉತ್ತಮ ಪ್ರತಿಗೆ ೧-೮-೦.

೪೧ **ಬಣ್ಣದ ಕಾರಂಜಿ** (ಪ್ರೇಮಗೀತೆ ಸಂಕಲನ) ಲೇಖಕರು ಶ್ರೀಮಾನ್ ಮಹಾದೇವ ಬಣಕಾರ, ಧಾರವಾಡ ಪ್ರಕಾಶಕರು ಶ್ರೀ. ರುದ್ರಪ್ಪ ಕೆ. ಹಳ್ಳಿಕೇರಿ ಬಿ. ಎಸ್ಸಿ (ಅಗ್ರಿ). ಅಧ್ಯಾಪಕರು ಕರ್ನಾಟಕ ಪ್ರಾದೇಶಿಕ ಸಹಕಾರಿ ಶಾಲೆ, ಧಾರವಾಡ. ಕ್ರೌ. ಅ. ೭೪ ಪುಟಗಳು. ಬೆಲೆ ೧-೦-೦

೪೨ **ಸ್ವತಂತ್ರ** (ಹೊಸ ವಾರಪತ್ರಿಕೆ). ಸಂಪಾದಕರು ಮತ್ತು ಪ್ರಕಾಶಕರು ಶ್ರೀ. ಎಸ್. ಎಂ. ಕೊಟ್ಟೂರಯ್ಯ. ಸ್ವತಂತ್ರ ಕಾರ್ಯಾಲಯ, ಹೊಸಪೇಟೆ. ಕ್ರೌ. ಫ್ಲೊಯೊ ೧೬ ಪುಟ. ಬಿಡಿ ಸಂಚಿಕೆಗೆ ೦-೩-೦

ಪತ್ರಿಕೆಯು ಚಿರಾಯುವಾಗಿ ಬಾಳುವಂತೆ ಸಂಪಾದಕರ ಕಾರ್ಯ ಜನಪ್ರಿಯವಾಗಿ ಸಾಗಲಿ.

೪೩ **ಜೀವನ** (ಮಾಸಪತ್ರಿಕೆಯ ಕರ್ನಾಟಕ ಏಕೀಕರಣ ವಿಶೇಷಸಂಚಿಕೆ). ಸಂಪಾದಕರು ಶ್ರೀಮಾನ್ ಮಾಸ್ತಿ ವೆಂಕಟೇಶ ಐಯ್ಯಂಗಾರ್ ಬೆಂಗಳೂರು. ಕ್ರೌ. ೧ದ ೮೦ ಪುಟಗಳು. ಬೆಲೆ ೧-೦-೦

ಕರ್ನಾಟಕ ಏಕೀಕರಣ ವಿಚಾರವನ್ನೊಳಗೊಂಡ ಅನೇಕ ವಿಧಾಯಕ ಲೇಖನಗಳು ಇದರಲ್ಲಿ ಅಡಕವಾಗಿದ್ದು, ಎಲ್ಲರೂ ಓದಲೇ ಬೇಕೆನಿಸುವಂತಹವಿವೆ.

ಜಯಂತಿ

ಸಂಪುಟ ೧೬ ಸಂಚಿಕೆ ೪

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಜಿಟಿಗೇರಿ ಕೃಷ್ಣಶರ್ಮ

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು:
ಶ್ರೀ. ಡಿ. ಶರತ್‌ಕುಮಾರ

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೩ ರೂ.
ಬಿಡಿ ಸಂಚಿಕೆ ೪ ಆಣೆ

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

ಅಷ್ಟೇ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಅ. ಕ. ರಾ. ನಿ. ಪಕ್ಷದ ವಿಫಲಪ್ರಯತ್ನ

ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು ಪರಿಸ್ಥಿತಿಯ ಔಚಿತ್ಯವನ್ನು ಅರಿತುಕೊಳ್ಳದೆ, ತನ್ನ ಸಾಮರ್ಥ್ಯದ ಅಳತೆಯ ಅರಿವು ಇಲ್ಲದೆ, 'ಸತ್ಯಾಗ್ರಹ' ಎಂಬ ಹೆಸರಿನಿಂದ ಸರಕಾರಕ್ಕೆ ವಿರೋಧವಾಗಿ—ಉಗ್ರ ಚಳುವಟಿಕೆಗಳನ್ನು ನಡೆಯಿಸುವುದಾಗಿ ಸಾರಿತು. ಗೊತ್ತು ಮಾಡಿದ ದಿನಕ್ಕೆ ಚಳುವಟಿಕೆಯನ್ನೂ ಪ್ರಾರಂಭಿಸಲಿದ್ದಿತು. ಆದರೆ ಮುಂಬಯಿ ಕರ್ನಾಟಕದಲ್ಲಿರುವ ಅಲ್ಲಲ್ಲಿಯ ಜಿಲ್ಲಾಧಿಕಾರಿಗಳು, ಪೂರ್ವಯೋಜನೆಯನ್ನು ಉಗ್ರವಾಗಿಯೇ ಕೈಕೊಂಡುದರಿಂದ, ಅ. ಕ. ರಾ. ನಿ ಪರಿಷತ್ತಿನ ಉಗ್ರ ಚಳುವಟಿಕೆಗಳ ಪರಿಣಾಮವನ್ನು ಕಣ್ಣಾರೆ ಕಾಣುವ ಸಂದರ್ಭ ತಪ್ಪಿಹೋಯಿತೆಂದೇ ಹೇಳಬಹುದು.

ಮೊದಲನೆಯ ಮಾತೆಂದರೆ, ವಿಧ್ವಂಸಕ ಚಳುವಟಿಕೆ ರಾಜಕೀಯ ದೊಂಬೆಯೆನಿಸಿಕೊಂಡೀತೇ ಹೊರತು 'ಸತ್ಯಾಗ್ರಹ' ಎನಿಸಿಕೊಳ್ಳಲಾರದು. ಸತ್ಯಾಗ್ರಹಿಯಾದವನಿಗೆ ಮುಚ್ಚು-ಮರೆ-ಮೋಸಗಳು ದೂರದ ಮಾತು. ಜನತೆಗೆ ತೊಂದರೆಯನ್ನುಂಟುಮಾಡುವಂತಹ ವಿಧ್ವಂಸಕ ವಿಚಾರಗಳಂತೂ ಅವನ ಮನಸಿನಲ್ಲಿ ಸಹ ಸುಳಿಯಕೂಡದು. ಅ. ಕ. ರಾ. ನಿ. ಪರಿಷತ್ತಿನಲ್ಲಿಯೂ—ಈ ಸತ್ಯಾಗ್ರಹ ತತ್ತ್ವವನ್ನರಿತ—ಸದಸ್ಯರಾರೂ ಈ 'ವಿಧ್ವಂಸಕ ಸತ್ಯಾಗ್ರಹ' ಚಳವಳಿಯನ್ನು ಒಪ್ಪಿಕೊಂಡಿರಲಿಲ್ಲವೆಂಬ ಸಂಗತಿ, ಅಧ್ಯಕ್ಷರಾದ ಶ್ರೀ. ಕೆ. ಆರ್. ಕಾರಂತರವರು ಪ್ರಕಟಿಸಿದ ಅಭಿಪ್ರಾಯದಿಂದ ವ್ಯಕ್ತವಾಗುವುದು. ತನ್ನ ಸದಸ್ಯವರ್ಗದಲ್ಲಿಯೆ ಭಿನ್ನಾಭಿಪ್ರಾಯ ವಿರುವಾಗ, ಅ. ಕ ರಾ. ನಿ. ಪರಿಷತ್ತು ಉಗ್ರ ಚಳುವಟಿಕೆಯನ್ನು ಕೈಕೊಂಡು ಹೊರಟುದು ಪರಿಷತ್ತಿನ ಸುಸಂಘಟಿತತೆಯನ್ನೇ ಸಂದೇಹದೃಷ್ಟಿಯಿಂದ ನೋಡಲು ಹಚ್ಚುವಂತಹದಾಗಿದೆ. ಹುಬ್ಬಳ್ಳಿಯಲ್ಲಿ ಹನ್ನೊಂದು ಜನ ಮುಂದಾಳುಗಳನ್ನು ಸರಕಾರ ಹಿಡಿದು ಹಾಕಿದ ಮಾತ್ರಕ್ಕೆ, ಪರಿಷತ್ತು ಪೂರ್ಯರಿಸಿ ಎತ್ತಿದ ಹೆಜ್ಜೆಯನ್ನೇ ಬಡಿದಂತಾಗಿ ಬಿಟ್ಟುದು, ಪರಿಷತ್ತಿಗೆ ಜನತೆಯ ಬೆಂಬಲವು ಸಾಕಷ್ಟು ಇಲ್ಲವೆಂಬುದರ ಸ್ಪಷ್ಟ ನಿದರ್ಶನವಾಗಿದೆ. ಸಾಪ, ಅಲ್ಲಲ್ಲಿ ಶಾಲೆ-ಕಾಲೇಜುಗಳ ವಿದ್ಯಾರ್ಥಿಗಳು ತಮ್ಮ ಸ್ವಭಾವಕ್ಕೆ ಸಹಜವಾಗಿ, ಒಂದೊಂದು ದಿನ ಚಳವಳಿಯ ಆಟವನ್ನಾಡಿ ದೇಶತ್ಯಾಗ ಕೈಬಿಟ್ಟರು. ಅವರಿಗೆ ಮುಂದಿನ ದಾರಿಯನ್ನು ತೋರಿಸುವ ಮುಂದಾಳುಗಳು ಕೂಡ ಯಾರೂ ಮುಂದೆ ಬಾರದೆ, ನಿರಾಶಾದಾಯಕ ಪರಿಸ್ಥಿತಿಗೆ ಸಿಕ್ಕಿಕೊಳ್ಳಬೇಕಾಯಿತು ವಿದ್ಯಾರ್ಥಿಗಳು.

ಸಂಧಿಸಾಧಕರಾದ ಕಮ್ಯುನಿಸ್ಟ್ ಮನೋವೃತ್ತಿಯವರು, ಇದು ತಕ್ಕ ಕಾಲವೆಂದು, ರೈಲುಬಂಡಿಗಳನ್ನುರುಳಿಸುವ ಒಂದೆರಡು ಪ್ರಯತ್ನಗಳನ್ನು ಮಾಡಿದರು. ಆದರೆ ಅಧಿಕಾರಿಗಳ ಪೂರ್ವಜಾಗೃತಿ ಅವುಗಳನ್ನು ವಿಫಲಗೊಳಿಸಿತು. ಇವರ ಪರಿಣಾಮವಾಗಿ ಮಿರಜಿಯಿಂದ ಹರಿಹರದ ವರೆಗೆ ರೈಲುಬಂಡಿಗಳು ಮಂದಗತಿಯಿಂದ ನಡೆಯಬೇಕಾಗಿ ಬಂದು, ಪ್ರಯಾಣ ಮಾಡುವ ಕನ್ನಡ ಜನತೆಯೇ ಅನಾನುಕೂಲತೆಗಳನ್ನು ಸಹಿಸುವ ಸಂದರ್ಭ ಬಂದೊದಗಿತು.

ಅ. ಕ. ರಾ. ನಿ. ಪರಿಷತ್ತಿನ 'ಸತ್ಯಾಗ್ರಹ' ಚಳವಳಿಯ ಕಾರ್ಯಕ್ರಮಗಳಲ್ಲಿ ರೈಲುಬಂಡಿಯನ್ನು ಉರುಳಿಸುವ ಜನತಾವಿನಾಶಕ ಕಾರ್ಯಕ್ರಮ ಸಮಾವೇಶವಾಗಿದ್ದಿತೋ ಇಲ್ಲವೋ ನಮಗೆ ಗೊತ್ತಿಲ್ಲ. ಹಾಗದು ಸಮಾವೇಶವಾಗಿದ್ದುದು ನಿಜವಿದ್ದರೆ, ಅದು ತುಂಬ ದುಃಖದಾಯಕ ಸಂಗತಿಯಾಗಿದೆ. ಭಾರತದಲ್ಲಿ ಈಗ ಇರುವುದು ಜನತಾರಾಜ್ಯ. ರಾಜ್ಯದ ಪ್ರತಿಯೊಂದು ವಸ್ತು-ವಿಷಯಗಳೂ ಜನತೆಯ ಅಧಿಕಾರಕ್ಕೆ ಸೇರಿದುವು. ಅವುಗಳನ್ನು ನಾಶಗೊಳಿಸುವುದೆಂದರೆ ಜನತೆಯ ವಸ್ತು-ವಿಷಯಗಳ ಹಾನಿಯನ್ನೇ ಮಾಡಿದಂತಲ್ಲವೇ? ಯಾರದೋ ಮೇಲಿನ ರೋಷದಿಂದ ತನ್ನ ತಲೆಯನ್ನು ಚಚ್ಚಿ ಒಡೆದುಕೊಳ್ಳುವುದೆಂದರೆ ಹೇಡಿತನದ—ಅಜ್ಞಾನದ—ಲಕ್ಷಣವಲ್ಲವೇ?

ರೈಲುಬಂಡಿಗಳನ್ನು ಉರುಳಿಸುವುದರಿಂದ ಸರಕಾರಕ್ಕೆ ಸ್ವಲ್ಪ ಆರ್ಥಿಕನಷ್ಟವಾದೀತು; ಆದರೆ, ಪ್ರಯಾಣಿಕರಾದ ಜನರ ಪ್ರಾಣಕ್ಕೇ ಸಂಚಕಾರ ಬರುವುದೆಂಬುದರ ವಿನೇಕ ಬೇತನೇ ಈ ಜನತಾ ಪ್ರತಿನಿಧಿಗಳಿಗೆ? ನನ್ನದೇ ಆದ 'ಪರಕಾರ' ಈ ಸರಕಾರದ ಆರ್ಥಿಕ ನಷ್ಟದ ಹೊಣೆಯನ್ನು ನನ್ನ ಜನತೆಯ ತಲೆಯ ಮೇಲೆಯೆ ಹೊರಿಸಬಹುದು. ಆರ್ಥಿಕವಾದರೂ ಜನತೆಗೆ ಆದುದೆಯೇ ಎಂಬುದರ ತಿಳಿವಳಿಕೆ ಬೇತನೆ ಈ ಚಳುವಳಿಯ ಮುಂದಾಳುಗಳಿಗೆ?

ಹೋಗಲಿ ಈ ವಿಧ್ವಂಸಕ ಸತ್ಯಾಗ್ರಹವನ್ನಾದರೂ ಉಗ್ರವಾಗಿ ನಡೆಯಿಸಿ ತೋರಿಸುವ ಪ್ರಬುದ್ಧ ಸಂಘಟನಾಶಕ್ತಿಯು ಬೆಂಬಲವಾದರೂ ಇದೆಯೆನ್ನಬೇಕೆ ಅ. ಕ. ರಾ. ನಿ. ಪರಿಷತ್ತಿಗೆ? ಕೈತೋರಿಸಿ ಅವಲಕ್ಷಣ ಎನಿಸಿಕೊಳ್ಳುವಂತಹ ಪಡಿಬಾತನನ್ನು ಬಯಲಿಗೆ ಪಾಕಿತು. ಆಂಧ್ರರು ಉಗ್ರ ಚಳವಳಿ ನಡೆಯಿಸಿ, ಕಾರ್ಯ ಸಾಧಿಸಿದೆಬುದು ನಿಯನಾದ ಮಾತು; ಆದರೆ, ಆಂಧ್ರ ಜನತೆಯು ಲ್ಲಿದ್ದಂತಹ ಸಂಘಟನಾಸಾಮರ್ಥ್ಯ ನಮ್ಮ ನಾಡಿನಲ್ಲಿದೆಯೆ? ಅಲ್ಲಿ ರುದ್ಧ ಗಾಂಧೀವಾದಿಯಿಂದ ಮೊದಲುಮಾಡಿ ಕಟ್ಟರ್ ಕಮ್ಯುನಿಸ್ಟ್ ಸ್ವಯಂಸೇವಕನ ವರೆಗೆ ಪ್ರತಿಯೊಬ್ಬರೂ ಆ ಚಳವಳಿಯನ್ನು ಎತ್ತಿ ಹಿಡಿದರು. ಸರಕಾರೀ ಅಧಿಕಾರಿಗಳೂ ಆ ಚಳವಳಿಗೆ ಸಾಕಷ್ಟು ಪೋಷಣೆಕೊಟ್ಟು ಸಹಕರಿಸಿದರು. ಎಂತಲೇ ಬಳ್ಳಾರಿಯಂತಹ ಅಧಿಕೃತ ಕನ್ನಡ ನಗರದಲ್ಲಿಯೂ ಆಂಧ್ರರು ಕನ್ನಡಿಗರ ತಲೆಯಮೇಲೆ ಕೊನೆಯವರೆಗೂ ಮೆಣಸನ್ನು ಅರೆಯಲು ಸಾಧ್ಯವಾಯಿತು.

ನಮ್ಮಲ್ಲಿ ಇದೆಯೆ ಇಂತಹ ಅನುಕೂಲತೆ? ವಿಕೇಂದ್ರೀಕರಣ ಚಳವಳಿಯು ಉಗ್ರಪಥಕ್ಕೆ ಗಾಳಿಯಲ್ಲಿ ಹರಿತುಬಿಡುವುದಕ್ಕೆ ಮೊದಲೇ ನಮ್ಮಲ್ಲಿಯ ಅಧಿಕಾರಿವರ್ಗ, ಚಳವಳಿಯನ್ನು ಬಗ್ಗಬಡಿಯಲು ಸಿದ್ಧವಾಗಿ ನಿಂತು ಯತಸ್ಸನ್ನು ಪಡೆಯಿತು. ಬಹುಸಂಖ್ಯಾಕರೂ ಜನತೆಯಲ್ಲಿ ಸಜ್ಯ ಪ್ರತಿಷ್ಠಿತರಾಗಿ ವಿಜೃಂಭಿಸುತ್ತಿರುವವರೂ ಆದ ಕಾಂಗ್ರೆಸ್‌ಪಕ್ಷದ ಕನ್ನಡಿಗರಂತೂ ಈ ಚಳವಳಿಗೆ ತೀವ್ರ ವಿರೋಧಿಗಳು. ಹಳ್ಳಿಯ ರೈತರೂ ವ್ಯಾಪಾರಿವರ್ಗದವರೂ ಸಂಪೂರ್ಣ ಉದಾಸೀನರು ಅವರಲ್ಲಿಯೂ ಈ ಚಳವಳಿಯ ಮುಂದಾಳುಗಳೆನಿಸಿಕೊಳ್ಳುವ ಕೆಲವರು ಸಜ್ಯ ಗೃಹಸ್ಥಿಕೆಯ ವೈಷ್ಟ್ಯದಿಂದ ಜೆಸರು ಕೆಡಿಸಿಕೊಂಡು ಸಮಾಜದ ನೈತಿಕಬಲವನ್ನು ಕಳೆದುಕೊಂಡವರು. ಇವೆಲ್ಲವೂ ಏನೇ ಇರಲಿ; ಅ. ಕ. ರಾ. ನಿ. ಪಕ್ಷವು ತನ್ನ ಅಳವನ್ನು ಅರಿದು ನೋಡಿಕೊಳ್ಳದೆ ದುಡುಕಿ ಅಪಜಯವನ್ನು ಗಳಿಸಿದುದು, ಕನ್ನಡಿಗರ ರಾಜ್ಯ ನಿರ್ಮಾಣದ ದಾರಿಯನ್ನು ಒಂದು ಬಗೆಯಿಂದ ಮತ್ತಷ್ಟು ದುರ್ಗಮ ಗೊಳಿಸಿತೆಂದು ಹೇಳಬಹುದು. ಭಾಷಾನ್ಯಯ ಪ್ರಾಂತೀಕರಣ ಬೇಡವಾಗಿರುವ ರಾಜ್ಯ-ಕೇಂದ್ರಗಳಲ್ಲಿಯೆ ಘುರೀಣರ ಬಾಯಿಗೆ ಇದರಿಂದ ಇನ್ನಿಷ್ಟು ಬಲ ಬಂದುತಾಯಿತು. ಅ. ಕ. ರಾ. ನಿ ಪರಿಷತ್ತಿನ ಸದಸ್ಯರನ್ನು ಸರಕಾರ ಬಂಧಿಸಿದ್ದರೂ ಕನ್ನಡ ನಾಡಿನ ಜನಸಾಮಾನ್ಯರು ಸಂಪೂರ್ಣ ಔದಾಸೀನ್ಯ-ಉಪೇಕ್ಷಾ ಭಾವನೆಯನ್ನು ತೋರಿಸುತ್ಯಾಗಿದ್ದುಬಿಟ್ಟರು, ಅವರ ತತ್ತ್ವಪ್ರಚಾರಕ್ಕೆ ಹೆಚ್ಚಿನ ಅವಕಾಶವನ್ನೇ ಮಾಡಿಕೊಟ್ಟಂತಾಗಿದೆ.

ಅ. ಕ. ರಾ. ನಿ ಪರಿಷತ್ತಿನ ಈ ಚಟುವಟಿಕೆಯು ಯಶಾಪಯಶಗಳನ್ನು ಕನ್ನಡ ಜನಸಾಮಾನ್ಯರು ದೂರ ನಿಂತು ನೋಡಲು ಅಪೇಕ್ಷಿಸಿದರೇ ಹೊರತು, ಯಾರಿಗೂ ಇದರ ವಿಷಯದಲ್ಲಿ ಆಕ್ಷೆ-ಆತ್ಮಯತೆಗಳು ಕಾಣುತ್ತಿರಲಿಲ್ಲ ಇವರ ಪ್ರತ್ಯಕ್ಷ ಅನುಭವನವನ್ನು ಕಾಣಬೇಕಾದರೆ, ಗತಿಯನ್ನು ಮುಂದವಾಗಿಸಿಕೊಂಡು ಅನಿಯಮಿತ ವೇಳೆಯ. ಪತ್ರಿಕೆಯಿಂದ ಅಡ್ಡಾಡುತ್ತಲಿದ್ದ ರೈಲುಗಳಲ್ಲಿ ಪ್ರಯಾಣ ಮಾಡುವ ಪ್ರಯಾಣಿಕರು ಆಡುವ ಮಾತುಗಳನ್ನು ಕೇಳಬೇಕು. ಪ್ರತಿಯೊಬ್ಬನೂ ತನ್ನ ಪ್ರಯಾಣದಲ್ಲಿ ಒದಗಿದ ಅನನುಕೂಲತೆಯನ್ನು ಕುರಿತು ಕಳವಳನ ಉದ್ಗಾರವನ್ನು ತೆಗೆದು, ಚಳವಳಿಗಾರರಿಗೆ ಶಾಪದ ಕಾಣಿಕೆ ಕೊಡುವನನೇ! ಇದನ್ನು ನೋಡಿದಾಗ, ಕರ್ನಾಟಕ ರಾಜ್ಯನಿರ್ಮಾಣಯಾಗಿ ಬೇಕಾಗಿದೆಯೋ—ಎಂದನಿಸುವುದು. ಪ್ರಭಾವಶಾಲಿಗಳಾದ ಮುಂದಾಳುಗಳಿಲ್ಲದೆ ಬಲವಾದ ಸಂಘಟನೆಯಿಲ್ಲದೆ, ಜನಸಾಮಾನ್ಯರ ವಿಶ್ವಾಸ ಸಂಪಾದಿಸದೆ, ಪ್ರಭಾವಶಾಲಿಗಳಾದ ಪತ್ರಿಕೆಗಳ ಪ್ರಚಾರದ ಬೆಂಬಲವಿಲ್ಲದೆ ಹೂಡಿದ ಎಂತಹ ಧ್ಯೇಯಸಾಧಕ ಚಳವಳಿಯೂ ಹೇಗೆ ವಿಫಲವಾಗುತ್ತೇ ಅಷ್ಟೂ—ಮಸ್ಸಲಕಾರಿಯಾಗಿ ಪರಿಣಮಿಸುವುದೆಂಬುದನ್ನು ಈ ಸಂದರ್ಭವು ಕಣ್ಣಿಗೆ ಹೊಡೆದು ಹೇಳಿಕೊಟ್ಟಿತು. ವಿಕೇಂದ್ರೀಕರಣಕ್ಕಾಗಿ ಎಂದರೆ ಕರ್ನಾಟಕ ರಾಜ್ಯನಿರ್ಮಾಣಕ್ಕಾಗಿ ಚಳವಳಿ ಬೇಕಾಗಿಲ್ಲವೆಂದಲ್ಲ; ತೀಕ್ಷ್ಣವಾದ ಚಳವಳಿ ಅಖಂಡವಾಗಿ ನಡೆಯುಲೇ ಬೇಕಾಗಿದೆ. ಆದರೆ ಯೋಗ್ಯರಾದ ಮುಂದಾಳುಗಳಿಂದ ಯುಕ್ತ ದಾರಿಯಿಂದ ನಡೆಯುಬೇಕಾಗಿದೆ ಖಂಡಿತವಾದ—ಒಂದೆ ಒಂದು ಪ್ಯಾಂತನಿರ್ಮಾಣ ಸಾಧನೆಯ—ಪ್ಯಾಮಾಣಿಕ ನಿಷ್ಠೆಯಿಂದ ನಡೆಯುಬೇಕಾಗಿದೆ. ವೈಯಕ್ತಿಕ ದ್ವೇಷ, ಅಧಿಕಾರಲೋಭ, ಮತ್ಸರ-ವೈಮನಸ್ಯಗಳನ್ನು ಮರೆಯೊಳಗಿಟ್ಟುಕೊಂಡು, ಮೇಲೆ ಮಾತ್ರ ಕ. ರಾ. ನಿರ್ಮಾಣದ ಮಾತಿನ ತೆವಿಯನ್ನು ಹೊಚ್ಚಿ ನಡೆಸುವ ಚಳವಳಿ, ಯಾವ ಫಲವನ್ನೂ ಪಡೆಯಲಾರದೆಂಬ ಎಚ್ಚರವಿರಲಿ, ಈ ಚಳವಳಿಯ ನಾಯಕರಿಗಾಗಿ ನಿಲ್ಲಬೇಕು.

ವೈತಾಳಿಕ ಗೀತ

'ಆನಂದಕಂದ'

೧

ಕೇಳಿದೋ, ಕೇಳಿದೋ, ಕೋಳಿಯ ಕೂಗ ..
ಗಾಳಿ ಹಾಡುತಲಿದೆ ಉದಯದ ರಾಗ ....
ಬರುತಿಹ ಸೂರ್ಯ!
ಏಳಯ್ಯ, ಏಳೀಳು ಕನಡಕಂದ ....
ಜಾಗೃತಿಯಲ್ಲಿವೆ ನಿಜದ ಆನಂದ ....
ನಿನಗಿದೆ ಕಾರ್ಯ!

೨

ತಾವರೆ ಎದೆಯನು ಅರಳಿಸುತಿಹುದೋ ....
ಬಂಧನ ಬಿಟ್ಟುಕಳಿ ಹೊರಗೆ ಬಂದಿಹುದೋ ....
ಬಾನೆಲ್ಲಾ ಚಿನ್ನಾ!
ಹನಿಸನಿಯಾಗಿದೆ ಹೊಳೆಯುವ ಮುತ್ತು ....
ಹಸುರಿಂದ ತುಂಬಿದೆ ಜಗವೆಲ್ಲಾ ಸುತ್ತು ...
ತೆರೆದೇಳು ಕಣ್ಣಾ!

ನಾಡನಡೆ

卐

ಕ್ರಾಂತಿಯ ದಿನಗಳು

ಅದೇನೋ! ಜುಲೈ ಆಗಸ್ಟ್ ತಿಂಗಳಲ್ಲಿ ಕ್ರಾಂತಿಯ ಭಾವ ಪ್ರಕೃತಿಯ ಜೀವ-ಜಡಗಳೆಲ್ಲೆಲ್ಲ ತುಂಬಿಕೊಂಡಿರುವಂತೆ ತೋರುತ್ತಲಿದೆ. ವನಗಳಿಲ್ಲದೆ ಭಾರತಕ್ಕೆ ಮಳೆ ಬಾರದೆಂದು ಸರಕಾರ ಅಲ್ಲಲ್ಲಿ ವನಮಹೋತ್ಸವ ನಡೆಯಿಸಬೇಕೆಂಬ ವಿಚಾರದಲ್ಲಿರುವಾಗಲೇ, ನಿಸರ್ಗ ಶಕ್ತಿಯು ನೆಲೆಯಿನ್ನೂ ಮಾನವನಿಗೆ ತಿಳಿದಿಲ್ಲವೆಂಬುದನ್ನು ಸಿದ್ಧಮಾಡಿ ತೋರಿಸಲೆಂದೋ ಎನೋ— ಎಂದೂ ಇಲ್ಲದಷ್ಟು ಮಳೆ ಬೀಳಲು ತೊಡಗಿತು. 'ಸಾಕೋ ಸಾಕು!' ಎನಿಸಿಬಿಟ್ಟಿತು. ಅತಿವೃಷ್ಟಿಯ ಅನಿಷ್ಟಪರಿಣಾಮಗಳೇನೇನಿರಬೇಕೋ ಅವುಗಳನ್ನೆಲ್ಲ ಜನತೆ ಕ್ರಮವಾಗಿ ಅನುಭವಿಸಬೇಕಾಗಿ ಬಂದಿತು. ನದಿಗಳಿಗೆ ಎಂದೂ ಕಾಣದಂತಹ ಮಹಾಪೂರ. ಕೃಷ್ಣಾ, ಘಟಪ್ರಭಾ, ಮಲಾಪಹಾರಿ ಹೊಳೆಗಳು, ಕರ್ನಾಟಕದಲ್ಲಿಯ ಅನೇಕ ಜನರ ಬದುಕನ್ನು ಕೊಚ್ಚಿಕೊಂಡು ಹೋಗಿ, ಅವರನ್ನು ನಿರ್ಗತಿಕರನ್ನಾಗಿಸಿದುವು. ಅತಿವೃಷ್ಟಿಯಿಂದ ಮಹಾರಾಷ್ಟ್ರ-ಕರ್ನಾಟಕಗಳಲ್ಲಿಯ ಕರಾವಳಿ ಪ್ರದೇಶಕ್ಕಾದ ಹಾನಿ ಅಷ್ಟಿಷ್ಟಲ್ಲ. ಆಂಧ್ರದೇಶಕ್ಕೆ ಅನ್ನದಾತ್ರಿಯಾದ ಗೋದಾವರಿ, ಉಬ್ಬಿ ಉಕ್ಕೇರಿ ಕನಲಿದ ಕಾಳಿಯಾಗಿ ತನ್ನ ಪ್ರಲಯರೂಪವನ್ನು ತೋರಿಸಿದಳು. ಪರಿಣಾಮವಾಗಿ ಗೋದಾವರೀ ತೀರದ ನಗರ-ಗ್ರಾಮಗಳ ನಿವಾಸಿಗಳ ಬದುಕೆಲ್ಲ ನೀರ ಪಾಲಾಗಿಹೋಯಿತು. ಕಾವೇರೀ-ತುಂಗ ಭದ್ರೆಯರೂ ತಮ್ಮ ತೀರಪ್ರದೇಶದ ಜನರಿಗೆ ತೊಂದರೆ ಕೊಡದೆ ಬಿಟ್ಟಿಲ್ಲ. ಈಗ ಉತ್ತರ ಭಾರತದ ಬಾರಿಯೇನೋ! ಗಂಗೆ-ಗೋಮತಿಯರು ಮಾರಿದೇವತೆಗಳಾಗಿ ಉತ್ತರಪ್ರದೇಶ, ಬಂಗಾಲ, ಬಿಹಾರಗಳ ಜನಜೀವನವನ್ನು ತೊತ್ತಳದುಳಿಯುತ್ತಿದ್ದಾರೆ. ಪಂಜಾಬ, ಮಧ್ಯಪ್ರದೇಶ, ರಾಜಸ್ತಾನಗಳೂ ನೆರೆಹಾವಳಿಯ ಪಿಡುಗಿಗೆ ಬಲಿಯಾಗದೆ ಉಳಿದಿಲ್ಲ ಮಳೆ ಕೂಡ ಕ್ರಾಂತಿಕಾರಿಯಾಗಿಯೇ ಇಳಿಯಬೇಕೇ ನಮ್ಮ ನಾಡಿನಲ್ಲಿ!

ಭಾರತದ ಇಂದಿನ ಸರಕಾರದ ದುರ್ದೈವವೆಂದೇ ಹೇಳಬೇಕು. ದೇಶದಲ್ಲಿಯ ಅನೇಕ ಕ್ರಾಂತಿಕಾರಿ ಪಕ್ಷಗಳ ಕ್ರಾಂತಿ ಬಯಕೆಗಳನ್ನು ನಿರೋಧಿಸಬೇಕಾಗಿದೆಯಲ್ಲದೆ, ಅತಿವೃಷ್ಟಿ-ಮಹಾಪೂರಗಳೆಂಬ ಪ್ರಾಕೃತಿಕ ಕ್ರಾಂತಿಗಳನ್ನೂ ನಿರೋಧಿಸಬೇಕಾಗಿ ಬಂದಿದೆ ಇದ್ದ ಜೀವನವನ್ನು ಒಳ್ಳೆಯದನ್ನಾಗಿಸಲು ಮಾಡಬೇಕೆಂದಿದ್ದ ಧನವ್ಯಯವನ್ನು, ಮತ್ತೆ ಜೀವನದ 'ಶ್ರೀಗಣೇಶಾಯ ನಮಃ' ಕಾರ್ಯಕ್ಕಾಗಿ ಮಾಡಬೇಕಾಗಿ ಬಂದಿದೆ. ಅಂತೂ ಇಂತೂ ಕುಂತೀ ಮಕ್ಕಳಿಗೆ ರಾಜ್ಯವಿಲ್ಲ. ಭಾರತದ ಸ್ವಾತಂತ್ರ್ಯಯುದ್ಧದಲ್ಲಿ ಜೀವ-ಸಾವುಗಳ ಅರಿವಿಲ್ಲದೆ ಭಾಗವಹಿಸಿದವರು, ಸ್ವಾತಂತ್ರ್ಯ ದೊರೆತಮೇಲೆ, ಪ್ರಜಾಸ್ವಭುತ್ವದ ಆಡಳಿತ ಸೂತ್ರ ವಹಿಸಿ ಸಮಾಧಾನದ ಉಸಿರನ್ನು ಬಿಟ್ಟು ಸ್ವಲ್ಪ ವಿಶ್ರಾಂತಿಯನ್ನು ಪಡೆದುಕೊಳ್ಳಬೇಕೆಂದರೆ ಸಾಧ್ಯವಿಲ್ಲದಾಗಿದೆ. ದಿನ-ದಿನಕ್ಕೆ ಹೆಚ್ಚುತ್ತಿರುವ ವಿರೋಧಿಪಕ್ಷದ ಜನರಿಂದಲೂ ಕ್ರಾಂತಿ; ಪ್ರಕ್ಷುಬ್ಧಪ್ರಕೃತಿಯಿಂದಲೂ ಕ್ರಾಂತಿ ಈ ಕ್ರಾಂತಿಯ ದಿನಗಳು ಭಾರತದ ಜನತೆಯನ್ನು ಎಲ್ಲಿಗೊಯ್ದು ಮುಟ್ಟಿಸುವುವೋ ಏನೋ!

ತೋರ ನಾಣಿಕ ...ಭೂರಿ ಕೆಂಡವಾಯ್ತು!

ಕಾಶ್ಮೀರ ಸಿಂಹ ಶೇಖ್ ಅಬ್ದುಲ್ಲಾ ಅವರು ಭಾರತೀಯರ ಮನಸ್ಸಿನ ಮೇಲೆ ಎಂತಹ ವ್ಯಕ್ತಿತ್ವವನ್ನು ಸ್ಥಾಪಿಸಿದ್ದರು! ಪಂಡಿತ ಜವಾಹರಲಾಲರ ಮೇಲೆ ಅಖಿಲ ಭಾರತೀಯರೆಲ್ಲರದು ಸಂಪೂರ್ಣ ಶ್ರದ್ಧೆ-ವಿಶ್ವಾಸಗಳು. ಅವರ ಸಂಪೂರ್ಣ ವಿಶ್ವಾಸಕ್ಕೆ ಪಾತ್ರರಾಗಿದ್ದುದರಿಂದಲೇ ಭಾರತೀಯರೆಲ್ಲರೂ ಶೇಖ್ ಅಬ್ದುಲ್ಲಾ ಅವರನ್ನು ವಿಶ್ವಾಸ ಆತ್ಮೀಯಭಾವಗಳಿಂದ ಕಂಡರು. ಆದರೆ ಭಾರತೀಯರಿಗೆ ಪ್ರತಿಫಲವಾಗಿ ಅವರಿಂದ ದೊರೆತುದೇನು? ದುರ್ಧರವಾದ— ಅಸಹನೀಯವಾದ ಕೃತಘ್ನತೆ. ಮಹಾಪ್ರಧಾನ ಜವಾಹರಲಾಲರು ತೋರ ನಾಣಿಕವೆಂದು ಹಿಡಿದುದ್ದು ಹೃದಯವನ್ನೇ ಸುಡುವ ಭೂರಿ ಕೆಂಡವಾಗಿ ಪರಿಣಮಿಸಿತು ಶೇಖ್ ಅಬ್ದುಲ್ಲಾ ಅವರ ಅಸುರೀ ಸ್ವಾರ್ಥ ನೈತ್ರಿ. ಮಹಾಪ್ರಧಾನರನ್ನೂ ಭಾರತ ರಾಷ್ಟ್ರವನ್ನೂ ಎಷ್ಟೊಂದು ನೋಡಗೊಳಿಸಿಬಿಟ್ಟಿತು! ಮಹಾಪ್ರಧಾನರ ವಿರೋಧೀ ಪಕ್ಷದ ನಾರೀಣರು ಕಾಶ್ಮೀರ ಮತ್ತು ಶೇಖ್ ಅಬ್ದುಲ್ಲಾ ಅವರ ವಿಚಾರದಲ್ಲಿ ಹೆಜ್ಜೆ ಹೆಜ್ಜೆಗೆ ತಮ್ಮ ವಿರೋಧವನ್ನು ಸೂಚಿಸಿ ಎಚ್ಚರಿಕೆ ಕೊಡುತ್ತಲಿದ್ದರೂ, ಜವಾಹರಲಾಲರ ಭದ್ರವಾದ ವಿಶ್ವಾಸ ಅದನ್ನು ಎಣಿಕೆಗೆ ತಾರದೆಹೋಯ್ತು. ಅವರ ನಿರ್ಲಕ್ಷ್ಯವೇ ಡಾ ಶ್ಯಾಮಪ್ರಸಾದ ಮುಖರ್ಜಿಯಂತಹರ ಮರಣಕ್ಕೆ ಕಾರಣವಾಯಿತೇನೋ—ಎಂದು ಇಂದು ಬಹುಜನರು ಭಾವಿಸಲು ಅವಕಾಶವಾಗುವಂತೆ, ಶೇಖ್ ಅಬ್ದುಲ್ಲಾ ಅವರ ಕುಟಿಲ ರಾಜಕಾರಣ ನಡೆದುದು—ಬಯಲಿಗೆ ಬಿದ್ದಿತು.

ಸನಾತನ ಸಂಸ್ಕೃತಿಯಲ್ಲಿ ಬೆಳೆದ ವ್ಯಕ್ತಿಯ ಮನೋವೃತ್ತಿಗೂ ಅನ್ಯ ಸಂಸ್ಕೃತಿಯಲ್ಲಿ ಬೆಳೆದ ಮನೋವೃತ್ತಿಗೂ ಎಷ್ಟೊಂದು ಅಂತರ ವಿದೆಯೆಂಬುದನ್ನು, ಶೇಖ್ ಅಬ್ದುಲ್ಲಾ ಅವರ ಪ್ರಕರಣ ಜಗಕ್ಕೆ ಸಾರಿ ಹೇಳಿತು. ಕಾಶ್ಮೀರ-ಭಾರತ ಸಂಬಂಧದ ವಿಚಾರ ನಮ್ಮ ಮನದಲ್ಲಿ ಬಂದಾಗ, ಎರಡು ವ್ಯಕ್ತಿಗಳು ಕಣ್ಣ ಮುಂದೆ ನಿಲ್ಲುತ್ತಿದ್ದುವು. ಕಾಶ್ಮೀರದ ಪ್ರತಿನಿಧಿ ಶೇಖ್ ಅಬ್ದುಲ್ಲಾ; ಭಾರತದ ಪ್ರತಿನಿಧಿ ಜವಾಹರಲಾಲ ನೆಹರು. ಒಂದು ಹಸುವಿನ ಚರ್ಮವನ್ನು ಹೊತ್ತ ತೋಳ ಇನ್ನೊಂದು ಪವಿತ್ರಚರಿತ್ರದ ಹಸು. ತೋಳ ಒಳಗಿಂದೊಳಗೆ. ಹೊಂಚುಹಾಕಿ ಹಸುವನ್ನೆ ಹೊಡೆಯಬೇಕೆಂದಿದ್ದಿತು; ಆದರೆ ಭಾರತದ ಭಾಗ್ಯವಿಧಾತ ಪರಿಸ್ಥಿತಿಯನ್ನು ಅಲ್ಲಿಯವರೆಗೆ ಹೋಗಗೊಡಲಿಲ್ಲ ಕಾಶ್ಮೀರದಲ್ಲಿಯ ಭಾರತಾನುಕೂಲ ಪರಿಸ್ಥಿತಿಯೇ ಎಚ್ಚರ್ತು, ಸಕಾಲದಲ್ಲಿಯೇ ತೋಳವನ್ನು ಬಲೆಯಲ್ಲಿ ಹಿಡಿದು, ಹಸುವಿನ ಚರ್ಮವನ್ನು ಹರಿದೊಗೆದು ನಿಜಸ್ವರೂಪವನ್ನು ತೋರಿಸಿಕೊಟ್ಟಿತು.

ಹೊರಗಿನವರ ಕೈವಾಡ ಶೇಖ್ ಅಬ್ದುಲ್ಲಾ ಅವರನ್ನು ಅಡ್ಡ-ದಾರಿಗೆ ಒಯ್ಯಿತೆಂದು ಕೆಲವರು ಅಡಿಕೊಳ್ಳುತ್ತಲಿದ್ದರೂ, ಅವರ ಕೈ-ವಾಡಕ್ಕೆ ಒಳಗಾಗುವುದಕ್ಕೆ ಶೇಖ್ ಅಬ್ದುಲ್ಲಾ ಅವರ ವೈಯಕ್ತಿಕ ಸ್ವಾರ್ಥ-ಲೋಭಗಳೇ ಮುಖ್ಯ ಕಾರಣಗಳೆಂಬುದನ್ನು ಯಾರೂ ಮರೆಯಲಾಗದು. ಶೇಖ್ ಅಬ್ದುಲ್ಲಾ ಅವರ ವ್ಯಕ್ತಿತ್ವ-ಧ್ಯೇಯನಿಷ್ಠೆಗಳು ಭದ್ರವಾದುವಾಗಿದ್ದರೆ, ಯಾವ ಪರಕೀಯರ ಕೈವಾಡ ಅಲ್ಲಿ ಏನು ಮಾಡಲು ಸಮರ್ಥವಾಗುತ್ತಿದ್ದಿತು ?

ಪಾಕಿಸ್ತಾನದ ಮಂತ್ರಿಯ ಪರೀಕ್ಷಾ ಪ್ರಸಂಗ

ಕಾಶ್ಮೀರದ ಅಡಳಿತದಲ್ಲಿ ಉಂಟಾದ ಕ್ರಾಂತಿಯೂ ಶೇಖ್ ಅಬ್ದುಲ್ಲಾ ಅವರ ಪತನವೂ ಭಾರತ-ಪಾಕಿಸ್ತಾನ್ ರಾಜಕೀಯ ಸಮಸ್ಯೆಯಲ್ಲಿ ಇನ್ನಿಷ್ಟು ತೊಡಕನ್ನುಂಟುಮಾಡಿದೆಯೆಂದು ಹೇಳಬಹುದು. ಮೊದಲೇ ಪಾಕಿಸ್ತಾನದ ನಾಯಕರಲ್ಲಿ ಪರಸ್ಪರ ವಿಚಾರೈಕ್ಯವಿಲ್ಲ. ಎಲ್ಲರನ್ನೂ ಸೌಹಾರ್ದದಿಂದ-ತೇಜಸ್ಸಿನ ಪ್ರಭಾವದಿಂದ-ಏಕಸೂತ್ರದಲ್ಲಿ ಪವಣಿಸಿ, ಮುಂದುವರಿಸುವಂತಹ ವ್ಯಕ್ತಿಯಿಂದು ಪಾಕಿಸ್ತಾನದಲ್ಲಿ ಇಲ್ಲವೇ ಇಲ್ಲ. ಯಜ್ಞಪಶುವಿನಂತೆ ಯಾವುದೋ ಒಂದು ವ್ಯಕ್ತಿ ಮಹಾಪ್ರಧಾನ ಸ್ಥಳಕ್ಕೆ ನಿಯಾಮಕವಾಗಿ ಬರುತ್ತದೆ. ತನ್ನ ಶಕ್ತಿಯಂತೆ ಏನೇನೋ ಸಂಘಟನೆಯ ಕಾರ್ಯಗಳನ್ನು ಮಾಡಬೇಕೆಂಬ ಹವಣಿಕೆಯಲ್ಲಿರುತ್ತದೆ. ಆದರೆ ಸುತ್ತುಮುತ್ತಲೂ ಹೊಂಚುಹಾಕಿ ನಿಂತಿರುವ ಅಧಿಕಾರಲುಬ್ಧತೆ, ಸ್ವಾರ್ಥಸಾಧಕತೆಗಳು ಅಲ್ಲಿ ವಿಷಮ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ, ಯಾವ ವ್ಯಕ್ತಿಯ ಸದಿಚ್ಛೆಯೂ ಕಾರ್ಯಕಾರಿಯಾಗದಂತೆ ಮಾಡಿಬಿಡುತ್ತಲಿವೆ. ಪಶ್ಚಿಮ-ಪೂರ್ವ ಪಾಕಿಸ್ತಾನಗಳ ಜಗಳ, ಮುಸ್ಲಿಂ ಲೀಗ್-ಲೀಗೇತರ ಪಕ್ಷಗಳ ಜಗಳ, ಧರ್ಮದಲ್ಲಿಯ ಹಳೆಯ ಹೊಸವಿಚಾರಿಗಳಲ್ಲಿಯ ಜಗಳ, ರಾಜಕಾರ್ಯದಲ್ಲಿಯ ನಾಯಕ-ನಾಯಕತೊಳಗಿನ ವೈಯಕ್ತಿಕ ಜಗಳ, ಇವೆಲ್ಲವುಗಳ ಮೂಲಕ, ಪಾಕಿಸ್ತಾನದ ಸಾಮಾಜಿಕ-ರಾಜಕೀಯ-ಸಾಂಸ್ಕೃತಿಕ ಪ್ರಗತಿಯೇ ಕುಂಠಿತವಾಗಿದೆಯೆಂದು ಹೇಳಬಹುದು.

ಸ್ವತಂತ್ರ ಪಾಕಿಸ್ತಾನದ ಪ್ರಧಾನಮಂತ್ರಿಯ ಪಟ್ಟದ ಪರಂಪರೆಯ ಚರಿತ್ರೆ ಶುಭಕಾರಿಯಾದುದೇನೂ ಅಲ್ಲ. ಲಿಯಾಖತ್ ಅಲಿ ಖಾನ್ ಅವರು ಕೊಲೆಗೊಂಡರು; ಅವರ ತರುವಾಯದ ನಾಝಿಮುದ್ದೀನರು ಜೀವನ್ಮೃತರಾದರು. ಈಗ ಮಹಮ್ಮದ್ ಅಲಿಯವರು ಆ ಪಟ್ಟಕ್ಕೆ ಬಂದಿದ್ದಾರೆ. ಬರು-ಬರುವುದರಲ್ಲಿಯೇ ತಮ್ಮ ಒಳ್ಳೆಯ ವ್ಯಕ್ತಿತ್ವವನ್ನು ಪ್ರಕಟಿಸುತ್ತ ಬಂದಿದ್ದಾರೆ. ಪಾಕಿಸ್ತಾನದ ಸರ್ವತೋಮುಖ ಪ್ರಗತಿಗೆ ಭಾರತದೊಂದಿಗೆ ಸೌಹಾರ್ದವನ್ನು ಬೆಳೆಯಿಸುವುದೇ ಮೊದಲ ಕರ್ತವ್ಯವೆಂಬುದನ್ನವರು ಮನನಕ್ಕೆ ಮಾಡಿಕೊಂಡು ಹೊರಟ್ಟಿದ್ದಾರೆ. ಈಗೆರಡು ನೂರು ಸಲ ನಡೆದ ಜವಾಹರಲಾಲ-ಮಹಮ್ಮದ್ ಅಲಿ ಸಂದರ್ಶನದ ಪರಿಣಾಮವು, ಮಹಮ್ಮದ್ ಅಲಿಯವರ ಸಮಂಜಸ ತನವನ್ನು ಪ್ರಕಟಪಡಿಸುವಂತಹದೇ ಆಗಿದೆ. ಆದರೆ ಪಾಕಿಸ್ತಾನದ ರಾಜಕೀಯ ವಾತಾವರಣದಲ್ಲಿ ಮಹಮ್ಮದ್ ಅಲಿಯವರ ವ್ಯಕ್ತಿತ್ವವೂ ಚುಮುಟಿಕೆಗಳೂ ಯಾವ ಶರ್ಪರಿಣಾಮವನ್ನೂ ಉಂಟುಮಾಡಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಅಲ್ಲಿಯ ಪತ್ರಿಕೆಗಳು ತಮ್ಮ ಮನಸ್ಸಿಗೆ ಬಂದಂತೆ ವಿಕೃತ ವಿಚಾರಗಳನ್ನು ಹರಡುತ್ತಲಿವೆ. ಧುರೀಣರೆನಿಸಿಕೊಳ್ಳುವವರು ಬೇಕುಬೇಕಾದಂತೆ ಕೂಗಿ ವಿದ್ರೋಹ ವಾತಾವರಣವನ್ನು ನಿರ್ಮಾಣಮಾಡುತ್ತಲಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಈಜಿಪಾರಾದರೆಯೇ ಮಹಮ್ಮದ ಅಲಿಯವರು ತಾವೂ ಉದ್ಧಾರವಾದಾರು, ಪಾಕಿಸ್ತಾನವನ್ನೂ ಉದ್ಧಾರದ ಮಾರ್ಗದಲ್ಲಿ ನಡೆಯಿಸಲು ಸಮರ್ಥರಾದಾರು. ಬಲಶಾಲಿಗಳಾದರೆ, ಅವರ ಸಮಂಜಸ ವ್ಯಕ್ತಿತ್ವ ಅಲ್ಲಿ ಉಳಿಯುವುದು; ಬಲಹೀನ—ಅಧಿಕಾರಲುಬ್ಧರಾದರೆ, ಮಿಕ್ಕವರ ಕೈಗೊಂಬೆಗಳಾಗಿದ್ದುಕೊಂಡು, ತಮ್ಮ ಮಂತ್ರಿತ್ವಪೀಠವನ್ನು ಉಳಿಸಿಕೊಳ್ಳಬಹುದು.

ಕುಟಿಲ ರಾಜಕಾರ್ಯದ ಕೈವಾಡ

ಕಾಶ್ಮೀರದಲ್ಲಿ ಒಂದು ಬಗೆಯ ಕ್ರಾಂತಿಯಾದರೆ, ಭಾರತದ ಬಳಿಯ ರಾಷ್ಟ್ರವಾದ ಇರಾಣದಲ್ಲಿ ಇನ್ನೊಂದು ಬಗೆಯ ಕ್ರಾಂತಿ ನಡೆದಿದೆ ಈ ತಿಂಗಳಲ್ಲಿ. ಇರಾಣದ ಜನಮನವನ್ನಷ್ಟೇ ಅಲ್ಲ; ಬ್ರಿಟಿಷರೊಂದಿಗೆ ನಡೆಯಿಸಿದ ಎಣ್ಣೆಗಣಿಯ ಜಗಳಾಟದ ಮೂಲಕ ಜಗತ್ತಿನ ಜನಮನವನ್ನೇ ತನ್ನತ್ತ ಸೆಳೆದುಕೊಂಡಿದ್ದ ಪ್ರಧಾನಶಾಲಿ ಡಾ. ಮುಸಾದಿಕರು, ಒಮ್ಮೆಲೆ ಅಧಿಕಾರಪೀಠದಿಂದ ಪತನಹೊಂದಿ, ಶಹಾ ಅವರ ಸರಕಾರದ ಸೆರೆಯಾಳಾಗಬೇಕಾಗಿದೆ. ರಾಜ್ಯತ್ಯಾಗಮಾಡಿ, ರೋಮಪಟ್ಟಣಕ್ಕೆ ಓಡಿಹೋಗಿದ್ದ ಇರಾಣದ ಶಹರಿಗೆ ಕನಸು-ಮನಸಿನಲ್ಲಿ ಕೂಡ ಇಲ್ಲದಂತೆ, ವಿಜಯಲಕ್ಷ್ಮಿ ಮಾಲೆ ಹಾಕಿ ಮತ್ತೆ ಇರಾಣದ ಗದ್ದುಗೆಯನ್ನು ಏರಲು ಕರೆದು ತಂದಿದ್ದಾಳೆ. ಯಾವ ಕಲ್ಲಿನ ಬುಡಕ್ಕೆ ಎಂತಹ ಜೇಕೋ! ಶಹರು ಪ್ರತಿಗಾಮಿಗಳೆಂದೂ, ಭೋಗವಿಲಾಸಕ್ಕೆ ಮೆಚ್ಚಿದ ಸ್ವಾರ್ಥಿಗಳೆಂದೂ ಡಾ. ಮುಸಾದಿಕರ ಅಭಿಪ್ರಾಯವಾಗಿ, ಶಹರು ರಾಜ್ಯಬಿಟ್ಟು ಓಡಿಹೋಗುವಂತಾಯ್ತು. ಅನತಿಸಮಯದಲ್ಲಿಯೇ ಡಾ. ಮುಸಾದಿಕರೇ ರಾಷ್ಟ್ರದ್ರೋಹಿ-ಲಂಚಗುಳಿ-ಎಂಬ ಅಪಾದನೆಗೊಳಗಾಗಿ ಸೆರೆಯಾಳಾಗಬೇಕಾಯಿತು. ಇದನ್ನೆಲ್ಲ ನೋಡಿದರೆ, ಇಂದಿನ ಪ್ರಜಾಪ್ರಭುತ್ವ ಯುಗದಲ್ಲಿಯೂ ಇರಾಣದಲ್ಲಿ ಪ್ರಜೆಗಳೆನಿಸಿಕೊಳ್ಳುವವರಿಗೆ ಒಂದು ಸ್ವತಂತ್ರಾಭಿಪ್ರಾಯವೇ ಇಲ್ಲವೆಂದು ಹೇಳಬೇಕಾಗುವುದು. ಬಲಶಾಲಿ ವ್ಯಕ್ತಿಯು ಬೇಕಾದಾಗ ಅಲ್ಲಿ ಅಧಿಕಾರಸೂತ್ರವನ್ನು ವಹಿಸಬಲ್ಲ. ಡಾ. ಮುಸಾದಿಕರ ಮೇಲುಗೈಯಿದ್ದಾಗ ಶಹರು ಓಡಿ ಹೋದರು; ಶಹರ ಪಕ್ಷದ ಪುಂಡನ ಮೇಲುಗೈಯಾಗಲು ಮುಸಾದಿಕರು ಕೆಳಗೆಬಿದ್ದರು. ಈ ಗುದ್ದಾಟದಲ್ಲಿ ಪ್ರಜೆಗಳೆನಿಸಿಕೊಳ್ಳುವವರ ದುರವಸ್ಥೆ ಏನಾಗಿದೆಯೋ ಅವರಿಗೇ ಗೊತ್ತು.

ಇಂದಿನ ರಾಜಕಾರಣದ ಜಗತ್ತೇ ಒಂದು ವಿಚಿತ್ರಬಗೆಯದಾಗಿದೆ. ಡಾ. ಮುಸಾದಿಕರನ್ನು ಪುರಸ್ಕರಿಸಿ ಮಾತನಾಡುವವರು

(ಸಂಸಿಯ ಪುಟ ನೋಡಿರಿ)

ಅಡಿಗೆಯವಳು

(ಸಣ್ಣ ಕತೆ)

ಶ್ರೀಮತಿ ಭಾರತೀ ಶ್ರೀನಿವಾಸ ಐರಣಿ, ಧಾರವಾಡ

ಸುಮಿತ್ರೆ ಸಿರಿವಂತ ಗಂಡನೊಂದಿಗೆ ಸಂಸಾರ ಮಾಡುತ್ತ ಸುಂದರವಾದ ಪ್ರಾಸಾದದಲ್ಲಿರುವಳು. ಸುಶೀಲೆ ಇನ್ನೊಬ್ಬರಲ್ಲಿ ಅಡಿಗೆಯವಳಾಗಿದ್ದು ತನ್ನ ಮಕ್ಕಳನ್ನು ಹೊರೆಯುವಳು. ಸುಮಿತ್ರೆಯ ದೃಷ್ಟಿಗೆ ಸುಶೀಲೆಯ ಜೀವನ ಸುಖಪೂರ್ಣವಾದುದು. ಏಕೆ?

ಚಿಕ್ಕಂದಿನಿಂದಲೂ ಕೂಡಿಯೇ ಆಡಿ ಕೂಡಿಯೇ ಬೆಳೆದ ಆ ಇಬ್ಬರು ಗೆಳತಿಯರು, ಇಂದು ಭಿನ್ನ ಭಿನ್ನ ಜೀವನಪ್ರವಾಹದಲ್ಲಿ ಈಸುತ್ತಿದ್ದರೂ, ವಿಧಿಸಂಕಲ್ಪದಿಂದ ಈ ವಿಚಿತ್ರ ಪರಿಸ್ಥಿತಿಯಲ್ಲಿ ಭೆಟ್ಟಿಯಾಗಿದ್ದಾರೆ. ಸುಮಿತ್ರೆಯನ್ನು ಲಕ್ಷ್ಮೀಪತಿಗೆ ಧಾರೆಯೆರೆದ ವಿಧಿಯೇ ಸುಶೀಲೆಯನ್ನು ಒಬ್ಬ ಸುದಾಮನಿಗೆ ಧಾರೆಯೆರೆದಿತ್ತು. ವಿಧಿ ಸಂಕಲ್ಪಕ್ಕೆ ಹೆಸರಿಡುವವರಾರು?

ಈಗ ಸುಮಿತ್ರಾಬಾಯಿಯಾದರೂ ಸುಶೀಲೆಗೆ ಇದನ್ನೇ ತಿಳಿಸಿ ಹೇಳುತ್ತಿದ್ದಾಳೆ: "ಸೂಶೀ, ದೈವಕ್ಕೆ ಯಾರೂ ಏನೂ ಹೇಳುವ ಹಾಗಿಲ್ಲ. ನೀನೇನೂ ನಾಚಿಕೊಳ್ಳುವ ಕಾರಣವಿಲ್ಲ. ಹೇಗೂ ನೀನು ಕೆಲಸಮಾಡುತ್ತಲೇ ಇರುತ್ತೀ; ಅಲ್ಲದೇ ಈಗ ನಿನ್ನ ಆರ್ಥಿಕ ಪರಿಸ್ಥಿತಿಯೂ ಚೆನ್ನಾಗಿಲ್ಲ. ನನಗೂ ಒಳ್ಳೇ ಜೋಡಿಯಾಗುತ್ತದೆ. ನಾನು ಸುಮ್ಮನೆ ಸಹಾಯಮಾಡಿದರೆ, ಅಮ ನಿನಗೆ 'ದಯೆ' ಎನಿಸಿ ಬೇಡವಾಗುತ್ತದೆ. ಅದಕ್ಕೇ ನಿನಗೆ ಕೆಲಸವನ್ನು ಕೊಟ್ಟರೆ, ನಿನಗೆ ನನಗೆ ಇಬ್ಬರಿಗೂ ಹಗುರೆನಿಸುತ್ತದಲ್ಲವೆ? ನಿನಗೆ—ಆದರಲ್ಲಿ ನಮ್ಮ ಮನೆಯಲ್ಲಿ—ಅಡಿಗೆ ಮಾಡಲು ನಾಚಿಕೆಯಾಗುತ್ತಿದ್ದರೆ, ಆ ವಿಷಯ ನಾವು ಬಿಟ್ಟುಬಿಡುವ. ಬೇರೆ ಏನಾದರೂ ಮಾತಾಡುವ. ಇರಲಿ. ಕಾಫಿ ಆರಿ ಹೋಗುತ್ತದೆ, ತೆಗೆದುಕೊ ಬೇಗ. ಆದರೂ ನಾನು ನನ್ನ ಅಂತಃಕರಣದಿಂದ ಹೇಳುತ್ತೇನೆ, ನೀನು ನನ್ನ ಮಾತನ್ನು ಕೇಳುವದು ಒಳ್ಳೇದು."

ಸುಶೀಲೆ ಏನೂ ಮಾತನಾಡಲಿಲ್ಲ. ಆದರೆ ಮನಸ್ಸಿನಲ್ಲಿ ಮಾತ್ರ ಅಂದುಕೊಂಡಳು: "ದೈವಕ್ಕೆ ಬೈದು ಮಾಡುವದೇನು? ಶಾಲೆಯಲ್ಲಿರುವಾಗ ಸುಮಿತ್ರೆಯ ಮಧ್ಯಾಹ್ನದ ಊಟ ಯಾವಾಗಲೂ ನಮ್ಮ ಮನೆಯಲ್ಲೇ ಇತ್ತಲ್ಲವೆ? ನಾವಿಬ್ಬರೂ ಒಂದೇ ಮಾವಿನ ಗಿಡದ ಬುಡದಲ್ಲಿ ಕುಳಿತು, ಕದ್ದು ಕಾಯಿ ತಿನ್ನುತ್ತಿರಲಿಲ್ಲವೇ? ಎಂಜಲು ಕಾಯಿ ತಿನ್ನುವಾಗ ಆಗ ನಾಚಿಕೆ ಎಲ್ಲಿತ್ತು? ಕೂಡಿ ಆಡಿ, ಜಗಳಾಡಿ, ಮತ್ತೆ ಮಾವಿನಕಾಯಿ ಆರಿಸಲು ಬರುವಾಗ, ಎಂದಿನಂತೆ ಕೂಡಿಬಿಡುತ್ತಿದ್ದೆವು- ಆದರೆ ವಿಧಿಯಾಟದಿಂದ ಇಂದು ನಾನು ಆವಳಿಗೆ 'ಬಾಯಿಯವರು' ಎನ್ನುವ ಪರಿಸ್ಥಿತಿ ಬರಬೇಕೆ! ಏಕೆ ಇಂದು ಒಡತಿ. ನಾನು ಅಡಿಗೆಯಾಳು! ಸರಿ. ದುಃಖ ಮಾಡುತ್ತ ಕುಳಿತರೆ ಪರಿಸ್ಥಿತಿಯಲ್ಲಿ ಬದಲಾವಣೆ ಉಂಟೆ? ನನ್ನ ಮಕ್ಕಳಿಗೋಸ್ಕರವಾದರೂ ನಾನು ಕೆಲಸ ಮಾಡಲೇಬೇಕು.' ಕಾಫಿ ಕುಡಿದು, ಅದರ ಜತೆಗೆ ಸ್ವಾಭಿಮಾನವನ್ನೂ ನುಂಗಕೊಂಡು, ಸುಶೀಲೆ ತಾನು ಕೆಲಸಕ್ಕೆ ಬರುವುದಾಗಿ ಹೇಳಿದಳು.

ಸುಮಿತ್ರಾಬಾಯಿಗೆ ಈಗ ಸಮಾಧಾನವಾದಂತಾಗಿ, ಕಾಫಿಯ ಕೊನೆಯ ಗುಟುಕೊಂದನ್ನು ಕುಡಿದು, ಕಪ್ಪು ಕೆಳಗಿಟ್ಟರು. "ಅಂತೂ ನಿನ್ನ ಮನಸ್ಸಿಗೆ ಈಗ ನೆಮ್ಮದಿ ಆಯಿತು, ತಾಯಿ! ನಾನು ತುಂಬಾ ಗಾಬರಿಯಾಗಿದ್ದೆ. ಕೆಲಸಕ್ಕೆ ಕರೆದಾಕ್ಷಣ ನೀನೆಲ್ಲಿ ನನ್ನನ್ನು ತಪ್ಪು ತಿಳಿಯುವಿಯೊ ಎಂದು! ನೀನು ಎಲ್ಲಿಯಾದರೂ ಕೆಲಸ ಮಾಡುವವಳೇ—ಆದರೆ, ನನ್ನ ಮನೆಯಲ್ಲಿ ನೀನಿದ್ದರೆ ನನಗೆ ಅಷ್ಟೇ ಜೀವಕ್ಕೆ ಸಮಾಧಾನ! ವ್ಯವಹಾರದಲ್ಲಿ ನಾನು ಒಡತಿ, ನೀನು ಜೀತೆಯವಳಾದರೂ, ಯಾವಾಗಲೂ ನಮ್ಮ ಸ್ನೇಹಸಂಬಂಧವನ್ನು ಮಾತ್ರ ಮರೆಯಬೇಡ. ಇತರ ಕೆಲಸಗಾರಂತೆ ನೀನಲ್ಲ, ನನ್ನ ಚಿಕ್ಕಂದಿನಲ್ಲಿ ನಿಮ್ಮ ಮನೆಯಲ್ಲಿ ನನಗೆಷ್ಟು ಸ್ವಾತಂತ್ರ್ಯ ಇತ್ತೋ, ಅಷ್ಟೇ ಸ್ವಾತಂತ್ರ್ಯವನ್ನು ನೀನು ತೆಗೆದುಕೊ! ಆದರೆ ಒಂದು ಮಾತ್ರ ವಿಶೇಷ: ನಾನು ಈ ಮನೆಗೆ ಶಕ್ತಿಯಂತೆ ಸ್ಥಾನಮಾನ ಇಟ್ಟುಕೊಳ್ಳಬೇಕಲ್ಲವೆ? ಜಾಳಿದ ಅಳುಗಳ ದೃಷ್ಟಿಯಲ್ಲಿ ಪಕ್ಷಪಾತವೆನಿಸಕೂಡದು ನೋಡು ಯಾರಿಗೆ. ಅದಕ್ಕಾಗಿ ಹೇಳಿದೆ. ಮನಸ್ಸಿನಲ್ಲಿ ನೊಂದುಕೊಳ್ಳಬೇಡ ಏನು?" ಎಂದು ಸುಮಿತ್ರಾಬಾಯಿ ಹೇಳಿ ಎಲೆ-ಅಡಿಕೆ ತಟ್ಟು ತರಲು, ಪಕ್ಕದ ಕೋಣೆಗೆ ಹೊರಟರು. "ಹೂಂ, ಆಯಿತು." ಎಂದು ಸುಶೀಲೆ ನಿಟ್ಟುಸಿರು ಬಿಟ್ಟುದು ಅವರಿಗೆ ಕೇಳಿಸಿತೋ ಇಲ್ಲವೋ! ಅಂತೂ ಎಲೆ ಅಡಿಕೆ ಮೆಲ್ಲುತ್ತ ಸುಮಿತ್ರಾಬಾಯಿ ಸುಶೀಲೆಯನ್ನು ಹೊರಗೆ ಕಳಿಸಲು ಬಂದಾಗ, ಪುನಃ ಹೇಳಿದರು: "ಸುಶೀಲಾ, 'ಇವರಿಗೆ' ಬೆಳಿಗ್ಗೆ ಜೇಗ ಕಾಫೀ ಬೇಕಾಗುತ್ತದೆ; ಆದ್ದರಿಂದ ಏಳುವರೆಯ ಒಳಗೇನೇ ಬಾ ಬಿಡು!"

ಸುಶೀಲೆ ಗೇಟನ್ನು ದಾಟಿ ಹೋದ ಮೇಲೆ, ಸುಮಿತ್ರಾಬಾಯಿ ಸಮಾಧಾನದಿಂದ ಕೋಚಿನಲ್ಲಿ ನೈಯುರಿದರು. ಬಾಲ್ಯದ ಗೆಳತಿಗೆ ಆಪತ್ತಿನಲ್ಲಿ ಸಹಾಯಮಾಡಿದೆನೆಂದೊ, ಸ್ವಲ್ಪದರಲ್ಲಿ ನಂಬಿಗೆಯ ಅಡಿಗೆಯಾಕೆ ಸಿಕ್ಕಳೆಂದೊ, ಮತ್ತಾವುದಕ್ಕೊ—ಯಾರಿಗೆ ಗೊತ್ತು?

ಇತ್ತ ಸುಶೀಲೆ ತನ್ನ ದೀನಪರಿಸ್ಥಿತಿಯನ್ನು ನೆನೆಯುತ್ತ ಭಾರವಾದ ಹೆಜ್ಜೆಗಳನ್ನಿಡುತ್ತ ಹೊರಬಿದ್ದಳು. ಸ್ವಾಭಿಮಾನವೆನ್ನುತ್ತಿತ್ತು. "ತಿರುಗಿ ಹೋಗಿ, ಬರುವುದಿಲ್ಲೆಂದು ಹೇಳಿ ಬಾ. ಜೋಶಿಯವರಲ್ಲಿ ಅಡಿಗೆ ಮಾಡುವದು ಬೇರೆ; ಆದರೆ, ಸುಮ್ಮಿ—ಅಲ್ಲ ಸುಮಿತ್ರಾಬಾಯಿಯ ಮನೆಯಲ್ಲಿ ಅಡಿಗೆಮಾಡುವುದು ಬೇರೆ ಜೋಶಿಯವರದು ಅಪರಿಚಿತರ ಮನೆ. ಆದರೆ ಇವಳು ಗೆಳತಿ! ಚಿಕ್ಕಂದಿನಲ್ಲಿ ನನ್ನಿಂದ

ಎಂಜಲು ಮಾವು ಕಸಿದುಕೊಂಡು ತಿಂದ ಗೆಳತಿ!" ಆದರೆ ಮನಸ್ಸು ಎನ್ನುತ್ತಿತ್ತು; "ಇರಲಿ, ಈಗೇಕೆ ಮಾನಾಪಮಾನ? ಎಂದಿಗೆ ಮೊದಲ ಸಲ ಜೋಶಿಯವರ ಮನೆಯ ಕಟ್ಟೆ ಹತ್ತಿದೆನೋ, ಅಂದಿಯೆ ಅವರ ಮನೆಯ ಒಲೆಯಲ್ಲಿ ನನ್ನ ಸ್ವಾಭಿಮಾನ ಸುಟ್ಟುಹೋಗಿದೆ. ಇಂದು ತಾಯಿ ಇದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. 'ಇವರು' ಧ್ಯೇಯಕ್ಕಾಗಿ ಜೇಲು ಸೇರದಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ ಅವರು ಬಿಡುಗಡೆ ಹೊಂದಿ ಬಂದರೂ ಅವರಿಗೆ ಕೆಲಸ ಮಾಡಲಿಕ್ಕಾದೀತೇ? ನಾನೊಬ್ಬಳೇ ಇದ್ದರೆ ನನಗೆ ಹೊಲದ ಹಣ ಸಾಕಾಗುತ್ತಿತ್ತು; ಆದರೆ ನನ್ನ ಎರಡು ಕಂದಗಳವೆ! ನನಗೆ ಮ್ಯಾಟ್ರಿಕ್ ವರೆಗೆ ಶಿಕ್ಷಣವಾಗಿದ್ದರೆ ಇಂಥ ಕೆಲಸಕ್ಕೆ ನಿಲ್ಲಬೇಕಾಗುತ್ತಿರಲಿಲ್ಲ. ನನ್ನ ಮಕ್ಕಳಾದರೂ ಹೆಚ್ಚಿನ ಶಿಕ್ಷಣಪಡೆದು ಮುಂದೆ ಬರಲಿ!" ಎಂದು ತಾನೇ ಸಮಾಧಾನಪಟ್ಟು ಮನೆಯ ಕಡೆಗೆಹೋದಳು.

ಮರುದಿನ ಕೆಲಸಕ್ಕೆ ಹೊರಡುವವರೆಗೆ ಸುಶೀಲೆಗೆ ಸಮಾಧಾನ ವಿರಲಿಲ್ಲ. ಆದರೂ ಸುಮಿತ್ರಾಬಾಯಿ ಮಾತ್ರ ನಗುನ್ಮತ್ತಲೇ ಅಳಿಯನ್ನು ಸ್ವಾಗತಿಸಿ ಅಡಿಗೆಮನೆಗೆ ಕರೆದುಕೊಂಡು ಹೋದರು. ಅವಳಿಗೆ ಒಂದು ಸಲ ಎಲ್ಲ ಅಡಿಗೆಯ ವ್ಯವಸ್ಥೆ ತೋರಿಸಿಕೊಟ್ಟು, ಕೊನೆಯಲ್ಲಿ ಅವಳ ಹೆಗಲಮೇಲೆ ಕೈಯಿಟ್ಟು ಮೆಲ್ಲಗೆ 'ನಿನ್ನೆ ನಾನು ಹೇಳಿದ್ದು ಜ್ಞಾಪಕದಲ್ಲಿದೆಯಲ್ಲವೇ? ವ್ಯವಹಾರಕ್ಕೆ ಕ್ಷಿಪ್ರ ಬಾರದು. ನಾನಿನ್ನು ಹೊರಗೆ ಹೋಗಲೆ? ಕಾಫಿ ತೆಗೆದುಕೊಂಡು ಬರಲು ಅಳು ಬರುತ್ತಾನೆ. ಅವನ ಕೈಯಲ್ಲಿ ನಮ್ಮಿಬ್ಬರದನ್ನೂ ಕಳಿಸು. ನೀನು ಕೂಡ ತೆಗೆದುಕೊ. ಎನು? ಯಾವುದಕ್ಕೂ ಸಂಕೋಚಮಾಡಿಕೊಳ್ಳಬೇಡ." ಎಂದು ಗಂಡನ ಕೋಣೆಗೆ ಹೋದಳು. ಸುಶೀಲಾ ಒಂದೂ ಮಾತಿನಿಂದ ಉತ್ತರ ಕೊಟ್ಟರಲಿಲ್ಲ. ಎಲ್ಲದಕ್ಕೂ ಮೌನವಾಗಿ ತಲೆ ಅಲ್ಲಾಡಿಸಿ ಉತ್ತರ ಕೊಟ್ಟಿದ್ದಳು. ಅಳು ಕಾಫಿ ಒಯ್ದ ಮೇಲೆ, ಸುಶೀಲೆ ಅಡಿಗೆಯ ತಯಾರಿಗೆ ತೊಡಗಿದಳು. ಅಷ್ಟರಲ್ಲಿ ಅಳು ಬಂದು "ಬಾಯಿಯವರು ಹೊರಗೆ ಕರೆಯುತ್ತಿದ್ದಾರೆ" ಎಂದು ಹೇಳಿದ. ಸುಶೀಲೆ ಪತಸಾಲೆಯ ಬಾಗಿಲಲ್ಲಿ ಬಂದುನಿಂತಿದ್ದನ್ನು ಸುಮಿತ್ರೆಯ ಯಜಮಾನರು ಒಂದು ಸಲ ನೋಡಿ, ಅನಂತರ ವೇಪರಿನಲ್ಲಿ ಕಣ್ಣು ಹೊರಳಿಸಿದ್ದರು. "ನೋಡು, ಇಂದ ಬಟಾಟಾ ವಡಾ ಮತ್ತು ಸಪ್ಪಶೆಕಾಯಿ ಗೊಜ್ಜು ಮಾಡು. ತೆಂಗಿನ ಕಾಯಿ ಅಂತೂ ಇದ್ದೇ ಇವೆ. ಹಾವು ಹನ್ನೊಂದೂವರೆಗೆ ಊಟಕ್ಕೆ ಕುಳಿತುಕೊಳ್ಳೋಣ." ಎಂದು ಹೇಳಿ, ಸುಮಿತ್ರಾಬಾಯಿ ಸುಶೀಲೆಗೆ ಒಳಗೆ ಹೋಗಲು ಸನ್ನೆ ಮಾಡಿದಳು. ಸುಶೀಲೆ ಮೆಲ್ಲಗೆ ಅಡಿಗೆಯ ಮನೆಗೆ ಬಂದು, ಪುನಃ ತನ್ನ ಕೆಲಸ ಪ್ರಾರಂಭಿಸಿದಳು. ಸುಶೀಲೆ ತನ್ನ ಪತಿಯನ್ನು ನೆನೆಯುತ್ತ ಗೊಜ್ಜಿಗೆ ಸಪ್ಪಶೆಕಾಯಿ ಕೊಚ್ಚುತ್ತಿರುವಾಗ, ಸುಮಿತ್ರಾಬಾಯಿ ಒಳಗೆ ಬಂದರು. ಒಂದು ಚಾಪೆ ಸುತ್ತೆಲ್ಲಾ ನೋಡಿ ಸುಶೀಲೆಯ ಹತ್ತಿರ ಬಂದು ಕುಳಿತರು: "ನೋಡು, ನಿನ್ನನ್ನು ಹೊರಗೆ ಕರೆದು ಹೇಳುವಾಗ ನನಗೇ ಮರ್ಯಾದೆ ಹೋದಹಾಗೆ ಆಯಿತು. ಆದರೇನು ಮಾಡುವುದು? "ಇವರಿಗೆ" ಅಂಥ ಆತುರವೇ ಸೇರುತ್ತದೆ. ನಿಜವಾಗಿ ನನ್ನ ಮನೆಯ ಕೆಲಸ ಮಾಡುವುದರಲ್ಲಿ ನನಗೇನೂ ಕಷ್ಟವಿಲ್ಲ. ಆದರೆ ಮಾಡುವುದೇನು "ಇವರಿಗೆ" ಅದು ಸರಿಬರುವುದಿಲ್ಲ. ನಾನೂ ನಿನ್ನ ಜೊತೆ ಕೆಲಸ ಮಾಡಿ ಸ್ವಲ್ಪ ಸ್ವೇಚ್ಛೆಯಾಗಿ ಓಡಾಡಿ ನಗೆಯಾಡಬೇಕೆಂದರೆ, ನನಗೆ ಆ ಸ್ವಾತಂತ್ರ್ಯ ವಿಲ್ಲ. ಸುಶೀ. ಹೆಚ್ಚೇನು? ನಿನ್ನ ಜೊತೆ ಹೆಚ್ಚು ಸಲುಗೆಯಿಂದ ಮಾತನಾಡಿದರೂ ಅವರಿಗೆ ಅದು ಸರಿಬರಲಿಕ್ಕಿಲ್ಲ. ದಯಮಾಡಿ ನನ್ನ ವಿಷಯಕ್ಕೆ ತಪ್ಪು ತಿಳಿಯಬೇಡ, ಏನು? ಹಾಂ. ಇನ್ನೊಂದು ವಿಷಯ: ಊಟಕ್ಕೆ ಬಡಿಸುವಾಗ ಸ್ವಲ್ಪ ಎಚ್ಚರದಿಂದಿರು. ಒಮ್ಮೆಲೆ ಬಡಿಸಬೇಡ. ಅವರು ಥಟ್ಟನೆ ನಿನಗೆ ಏನಾದರೂ ಅಂದರೆ, ನನಗೇ ಆ ಮೇಲೆ ಮುಖ ಉಳಿದೀತೆ? ಅದಕ್ಕಾಗಿ ಚಿಕ್ಕ ವಿಷಯ. ಕೂಡ ಹೇಳ ಬೇಕಾಗಿದೆ, ಅಷ್ಟೇ! ನೀನು ಕಾಫಿ ಕುಡಿದಾಯಿತೇ? ನೋಡು ಒಂಬತ್ತು ಗಂಟೆಗೆ ಮತ್ತೊಮ್ಮೆ ಕಾಫಿ ಮಾಡು. ನೀನೂ ತೆಗೆದುಕೊ, ಏನು? ಸಂಕೋಚ ಮಾಡಿಕೋಬೇಡ." ಎಂದು ಸುಮಿತ್ರಾಬಾಯಿ ಸುಶೀಲೆಯ ಬೆನ್ನು ಚಪ್ಪರಿಸಿ ಮತ್ತೆ ಹೊರಗೆ ಹೋದಳು.

ಊಟ ಕೆಲಸ ಮುಗಿಸಿ ಸುಶೀಲಾ ಮನೆಗೆ ಹೊರಟಳು. ಮಂಚದ ಮೇಲೆ ಎಲೆ-ಅಡಿಕೆ ಮೆಲ್ಲುತ್ತಿದ್ದ ಸುಮಿತ್ರಾಬಾಯಿ ಸುಶೀಲೆಯನ್ನು ಕರೆದು, "ಸಂಜೆಯ ಆರುಗಂಟೆಗೆ ಬಂದರೆ ಸಾಕು. ಇಂದು ಬಹುಶಃ ಹಾಂ. ಅಂದ ಹಾಗೆ ಹೌದು. ನಾನು ಮನೆಯಲ್ಲಿ ಇರುವದಿಲ್ಲ. ಮಹಿಳಾಮಂಡಳಕ್ಕೆ ಹೋಗಬೇಕಲ್ಲ! ಬೇಡಾರು, ಅದೊಂದು ಪೀಡೆ. ದೊಡ್ಡಿಸ್ತಿಕಗೋಸ್ಕರ ಮಾಡುವ ಕೆಲಸ! ಇವಲಿ ಸಂಜೆ ಬಂದಾಕ್ಷಣ ನೀನು ಕಾಫಿ ಮಾಡಿಕೊ. ಆಮೇಲೆ ಅಡಿಗೆಗೆ ತೊಡಗಿದರೆ ಆದೀತು. ಬೆಳಿಗ್ಗೆ ಅಡಿಗೆ ತುಂಬಾ ಚೆನ್ನಾಗಿತ್ತು. ರಾತ್ರಿ ಚಪಾತಿ ಮಾಡು, ತಿಂಗಳವರೆ ಪಲ್ಯ, ಸಂಡಿಗೆಗುಂಬಳ ಹುಳಿ ಆದೀತು. ಇದೇನು? ನೀನು ಬರೀ ಕೈಯಿಂದಲೇ ಹೊರಟಿಯೇನು ಮನೆಗೆ? ಮಕ್ಕಳಿಗೆ ಒಂದು ನಾಲ್ಕು ಬಟಾಟೆವಡೆ ತೆಗೆದುಕೊಂಡು ಹೋಗು ಸಾಷ್ಟ ಅವರಿಗೆ ನಿನ್ನ ಕೈಯ ಅಡಿಗ ಇಲ್ಲದಿದ್ದರೂ ಮಕ್ಕಳಾದರೂ ತಿನ್ನಲಿ." ಎಂದು ಸುಮಿತ್ರಾಬಾಯಿ ಅವಳಿಗೆ ಒತ್ತಾಯದಿಂದ ವಡೆ ಕೊಟ್ಟರು.

ಸುಶೀಲೆ ಮನೆಗೆ ಬಂದಳು. ಅವಳ ಹಿರಿಯ ಮಗಳು ತುಳಸಿ ಚಿಕ್ಕ ಮೂರು ವರ್ಷದ ಸುಶೀಲ ನನ್ನು ಮಲಗಿಸುತ್ತಿದ್ದಳು. ಸುಶೀಲೆ ಹೋದೊಡನೆಯೆ ಅಕ ತಂದೆಯಿಂದ ಬಂದ ಕಾಗದವನ್ನು ಕೊಟ್ಟಳು. ಅದರಲ್ಲಿ ಶ್ರೀಧರ ಕೇಳಿದ್ದ: 'ಈಗ ನೀನೆಲ್ಲಿ ಕೆಲಸ ಮಾಡುತ್ತಿದ್ದೀ" ಎಂಬೆಲ್ಲ ವಿವರವನ್ನು. ಸುಶೀಲೆಗೆ ಆ ಪತ್ರ ನೋಡಿ ಇಂದು ಎಂದಿಲ್ಲದ ಸಿಟ್ಟುಬಂತು. "ಇವರ ಧ್ಯೇಯವಾದದ ಚಳವಳಿಯಲ್ಲಿ ನನ್ನ ಜೀವನವೆಲ್ಲಾ...." ಎಂದು ಏನೋ ಗೊಣಗಿಕೊಳ್ಳುತ್ತಿದ್ದಂತೆ, ಹತ್ತಿರ ಮಗಳನ್ನು ನೋಡಿ ಸುಮ್ಮನಾದಳು. ಆ ವಡೆ ನೋಡಿ ಅವಳಿಗೆ ತನ್ನ ಚಿಕ್ಕಂದಿನ ಹಿತ್ತಲಿನ ಮಾವು ಮತ್ತೆ ನೆನಪಿಗೆ ಬಂತು. ಮತ್ತೊಂದು ಮನಸ್ಸು ಹೇಳುತ್ತಿತ್ತು: "ಇಷ್ಟೇಕೆ ನಿನಗೆ ಮನಸ್ಸು ಕಲಕದೆ? ಜೋಶೀಬಾಯಿ ನಿನಗೆ ಎಷ್ಟು ಸಲ ಹೀಗೆ ಕೊಟ್ಟರಲಿಲ್ಲ? ಇಂದು ಜೋಶೀಬಾಯಿ ಇದ್ದರೆ ನೀನು ಅಲ್ಲಿಯೆ ಹೋಗುತ್ತಿರಲಿಲ್ಲವೆ? ಇನ್ನು ೨-೩ ತಿಂಗಳಿಗೆ ಅವರು ಬಂದ ಮೇಲೆ ಮತ್ತೆ ಅವರ ಮನೆಗೇ ನೀನು ಹೋಗುವೆಯಲ್ಲವೇ? ಜೋಶೀಬಾಯಿ ನಿನಗೆ ಇಪ್ಪತ್ತೈದು ರೂಪಾಯಿ ಕೊಡುತ್ತಿದ್ದರೆ, ಸುಮಿತ್ರಾಬಾಯಿ ೪೦ ರೂ. ಸಂಬಳ

ಕೊಡುತ್ತಾಳೆ. ನಿನ್ನದೇನು ಕೆಟ್ಟಿತು?" ಇಷ್ಟು ಮನಸ್ಸು ಹೇಳಿದರೂ ಸುಶೀಲೆಯ ಸ್ವಾಭಿಮಾನ ಅವಳನ್ನು ಕೊರೆಯುತ್ತಲೇ ಇತ್ತು. 'ಎಂಥ ಕಷ್ಟ ಬಂದರೂ ದೈನ್ಯತೆ ಬೇಡ. ೧೫ ರೂಪಾಯಿ ಜಾಸ್ತಿಯಾದರೂ ಅದು ನನ್ನ ಗಾಯಕ್ಕೆ ಉಪ್ಪು ತಿಕ್ಕಿದಹಾಗೆ' — ಸುಮಿತ್ರೆಯ ಮನೆಯ ಕೆಲಸ. ನನ್ನ ದೈನ್ಯತೆಯ ಪರಮಾವಧಿ—ಇದು ಬೇಡ. ಉಪವಾಸ–ಸಾವು ಬೇಕು, ದೈನ್ಯತೆ ಬೇಡ. ಮುಂದಿನ ತಿಂಗಳಿಂದ ಕೆಲಸವನ್ನೆ ಬಿಡುತ್ತೇನೆ. ಇಂತಹ ವಿಚಾರಗಳಲ್ಲಿ ಎಂಟು ದಿನ ಕಳೆಯಿತು.

ಸುಶೀಲೆ ಕೆಲಸಕ್ಕೆ ಬಂದಾಗ, ಆ ಮನೆಯ ದೊಡ್ಡ ಗಡಿಯಾರ ನಾಲ್ಕು ಬಾರಿಸಿದಾಗಲೇ ಅವಳಿಗೆ ಎಚ್ಚರ: ತಾನು ಸುಮಿತ್ರೆಯ ಮನೆಗೆ ಬಂದಿದ್ದೇನೆಂದು. ಎತ್ತ ಗಮನವಿತ್ತೋ? ಕ್ಯಾಲೆಂಡರ ಕಡೆ ನೋಡುತ್ತ ಸುಶೀಲೆ ಒಳಬಾಗಿಲಿಗೆ ಹೊರಟಿದ್ದಳು. ಆದರೆ ಯಾರೊ ಜೋಕರಿಸಿದ್ದನ್ನು ನೋಡಿ ಬೆಚ್ಚಿಬಿದ್ದಳು. ಸುಮಿತ್ರೆಯ ಯಜಮಾನರು ಸಿಗರೇಟು ಸೇದುತ್ತ ಕುಳಿತಿದ್ದರು. ಇವಳನ್ನು ನೋಡಿ ದೊಡನೆ "ಕಾಫಿ ಬೇಗ ಆಗಲಿ. ನನಗೆ ಹೊರಗೆ ಹೋಗುವದದೆ." ಎಂದು ನಕ್ಕು, ಪೇಪರ ಓದತೊಡಗಿದರು. ಸುಶೀಲೆ ಕಾಫಿ ತಂದಿಡು. ವಾಗ ಅವಳ ಕೈ ನಡುಗಿದುವು. ಮನೆಯ ಉಳಿಗಳಾರೂ ಇನ್ನೂ ಬಂದಿರಲಿಲ್ಲ.

"ಕೂತುಕೊಳ್ಳಿ" ಸುಮಿತ್ರೆಯ ಯಜಮಾನರು ಆಜ್ಞಾಪಿಸಿದರು. ಸುಶೀಲೆ 'ಇರಲಿ' ಎಂದು ಸೌಜನ್ಯದಿಂದ ಗೋಡೆಯ ಹತ್ತಿರ ಹೋಗಿ ನಿಂತಳು, ಸೋಫಾದ ಎದುರುಗಡೆ. ಸುಮಿತ್ರೆಯ ಯಜಮಾನರು ಒಂದು ಗುಟುಕು "ಕಾಫಿ" ಕುಡಿದು ಗಂಟಲು ಸರಿಪಡಿಸಿಕೊಂಡು "ಕಾಫಿ ಬಹಳ ಚೆನ್ನಾಗಿದೆ" ಎಂದು ನಕ್ಕರು. ಸುಶೀಲೆ ಮಾತನಾಡಲಿಲ್ಲ, ಹೊರಗೆ ಹೊಟಂತೆ ಮಾಡಿದಳು. ಸುಮಿತ್ರೆಯ ಯಜಮಾನರು ಇದನ್ನು ಕಂಡೇ—

"ಈಕೆ ನಿಮ್ಮ ವಿಷಯ ಹೇಳಿದ್ದಾಳೆ. ನೀವೇನೂ ನಮ್ಮ ಮನೆಯಲ್ಲಿ ಯಾವುದಕ್ಕೂ ಸಂಕೋಚ ಪಡುವದು ಬೇಡ, ನಿಮ್ಮದೇ ಮನೆ ಇದು ಎಂದು ತಿಳಿಯಿರಿ. ಉಪಾಯವಿಲ್ಲ. ಆದರೆ ಒಂದು ಮಾತ್ರ ನಿಜ. ಸುಮಿತ್ರೆಗಿಂತ ನೀ....ವು—" ಸುಶೀಲೆಗೆ ಅವರ ಮಾತಿನ ಮತ್ತು ಧ್ವನಿಯ ರೀತಿ ನೋಡಿ ಒಂದು ತರಹೆ ಆಗಿ ಅಡಿಗೆಮನೆಯ ಕಡೆ ಓಡಿದಳು. ಆ ಭರದಲ್ಲಿ ಅವಳಿಗೆ 'ಪ–ರ–ವಾ–ಯಿ–ಲ್ಲ' ಎಂಬಂತೆ ನಕ್ಕಿದ್ದು ಕೇಳಿಸಿತೊ, ಇಲ್ಲವೊ!

ಸುಶೀಲೆ ಅಡಿಗೆ ಮನೆಗೆ ಬಂದು ಮಂಗಳಸೂತ್ರ ಗಟ್ಟಿ ಹಿಡಿಕೊಂಡಳು. ಈ ಮನುಷ್ಯ ಘಾತಕ! ಇನ್ನು ಇಲ್ಲಿರುವುದು ಯೋಗ್ಯವಲ್ಲ, ಸಿರಿವಂತಿಕೆಯ ಸೆರೆ ಕುಡಿದು ಮತ್ತನಾದವನಿಗೆ ಬೇರೆಯವರ ದಿರಲಿ, ತನ್ನ ಮರ್ಯಾದೆ ಏನೆಂದು ಗೊತ್ತೆ? ಅಯ್ಯೋ! ನನ್ನ ಶ್ರೀಧರ ತನ್ನ ಧ್ಯೇಯಕ್ಕೆ ನನ್ನ ಜೀವವನ್ನೇ ಬಲಿಹಚ್ಚಿ ಜೇಲಿಗೆ ಹೋದ! ಅತ ನಾಲ್ಕು ಜನರ ಹಾಗೆ ದೈನಿಕ ಜೀವನದಲ್ಲಿ ತೃಪ್ತನಿದ್ದರೆ ಇಂದು ನನಗೆ ಬೇರೆಯವರಲ್ಲಿ ನನ್ನ ಮರ್ಯಾದೆ ಸುಟ್ಟುಕೊಳ್ಳುವ ಹೊತ್ತು ಬರುತ್ತಿತ್ತೆ? ಅದರೂ ಒಂದು ತಿಂಗಳು, ಮಾಡಬೇಕಲ್ಲ ಕೆಲಸ! ಇನ್ನೂ

ಹಳ್ಳಿ–ಪಟ್ಟಣಗಳಲ್ಲಿ, ಬೀದಿ–ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಆರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಮೂರು ವಾರ! ನನ್ನ ಈ ಹಣದ ದೈನ್ಯತೆಗೆ ಧಿಕ್ಕಾರವಿರಲಿ! ನಾಳೆ ನಾನು ಕೆಲಸಕ್ಕೆ ಬರುವುದಿಲ್ಲ. ಕಮ್ಮಿದರೂ ಹೊಟ್ಟೆ ತುಂಬಿಕೊಳ್ಳುತ್ತೇನೆ. ಆದರೆ ಇಲ್ಲಿ ಬೇಡ."

ಮತ್ತೆ ಎಂಟು ದಿನ ಕಳೆಯಿತು. ಸುಶೀಲೆ ಕೆಲಸಕ್ಕೆ ಹೋಗುತ್ತಲೇ ಇದ್ದಳು. ಮಗುವಿಗೆ ಕಾಯಿಲೆಯಾದ್ದರಿಂದ ಅಡಿಗೆ ಮಾಡಿಟ್ಟು ಬೇಗ ಮನೆಗೆ ಹೋಗಬೇಕೆನ್ನುವ ಬಗ್ಗೆ ಸುಶೀಲೆ ಒಂದು ಸಲ ಸುಮಿತ್ರೆಯನ್ನು ಕೇಳಿದ್ದಳು "ಬಾಯೀ! ನಿಮಗೆ ಮಧ್ಯಾಹ್ನ ಮನೆಯಲ್ಲಿರಲು ಬೇಜಾರಾಗುತ್ತದೆಯೇನು?" ಎಂದು. ಸುಮಿತ್ರೆ ಇದಕ್ಕೆ ಮರುಪ್ರಶ್ನೆ ಹಾಕಿದ್ದಳು "ಯಾಕೆ? ನಿನಗೆ ನಾನಿಲ್ಲದಿದ್ದರೆ ಸಂಕೋಚವಾಗುವದೇನು ಮನೆಯಲ್ಲಿ?" ಎಂದು. ಸುಶೀಲೆ ಆದಕ್ಕೆ "ಇಲ್ಲ" ಎಂದು ಸುಮ್ಮನಾಗಿದ್ದಳು. ಆದರೆ, ಸುಮಿತ್ರೆಯ ಯಜಮಾನರು ಹೊತ್ತು ತಪ್ಪಿಸಿ ಮಧ್ಯಾಹ್ನ ಬಂದು ಹೋಗುತ್ತಿದ್ದುದನ್ನು ಹೇಳಲು ಸುಶೀಲೆಗೆ ಧೈರ್ಯ ಸಾಲಲಿಲ್ಲ.

ಇನ್ನೊಂದು ದಿನ. ಒಳಕೋಣೆಗೆ ಹೊರಟಾಗ "ಕಾಫಿ ಬೇಗ ಆಗಲಿ ಜೊತೆಗೆ ಉಪ್ಪಿಟ್ಟು!" ಎಂದು ಸುಮಿತ್ರೆಯ ಯಜಮಾನರ ಆರ್ಡರ್ ಆಯಿತು. ಕಾಫಿ ಉಪ್ಪಿಟ್ಟು ತೆಗೆದುಕೊಂಡು ಅಲ್ಲಿ ಒಯ್ದಿಟ್ಟಳು ಸುಶೀಲಾ. ಕೂಡಲೇ ಹೊರಬಂದು ಒಳಗೆ ಕಾಫಿ ಪಾತ್ರೆ ತೆಗೆದಿಡುತ್ತಿದ್ದಳು. ಅಷ್ಟರಲ್ಲಿ ಕಾಲಿನ ಸಪ್ಪಳಾಯಿತು. ಸುಶೀಲೆ ಮಂಗಳ ಸೂತ್ರ ಹಿಡಿದುಕೊಂಡಳು. "ನಮ್ಮ ಮನೆಯಲ್ಲಿ ಈ ವರೆಗೆ ಯಾರೂ ಇಷ್ಟು ಒಳ್ಳೆಯ ಅಡಿಗೆ ಮಾತುವವರು ಸಿಕ್ಕಿರಲಿಲ್ಲ," ಸುಮಿತ್ರೆಯ ಯಜಮಾನರು ಅಡಿಗೆಮನೆಯ ಬಾಗಿಲಲ್ಲಿ ನಿಂತು ನಗುತ್ತ ನುಡಿದರು. ಸುಶೀಲೆ ಮಾತಾಡಲಿಲ್ಲ. ಪುನಃ "ಸುಮಿತ್ರೆ ನಿಮ್ಮ ಹಾಗಿದ್ದರೆ ಅಡಿಗೆ. ಯಾಕೆ ನಮಗೆ ಬೇಕೆ ಆಗುತ್ತಿರಲಿಲ್ಲ. ಅದು ನಮ್ಮ ದುರ್ವಿಧಿ ನೋಡಿರಿ! ಎಂಥವರಿಗೆ ಎಂಥ ಚೋಡು! ಮನೆಯಲ್ಲಿ ನಿಮ್ಮಂಥ ಪತ್ನಿ ಇರುವಾಗ ಅವರಿಗೆ ಬೇರೆ ಕಡೆ ಲಕ್ಷ್ಯ ಹೇಗೆ ಹೋಯಿತೊ...." ಸುಶೀಲೆಗೆ ಈಗ ತಡೆಯಲಾಗಲಿಲ್ಲ. "ಅದರಲ್ಲೆ ಅವರ ದೊಡ್ಡತನ ವಿದೆ. ಕ್ಷಮಿಸಿ, ನಾನು ಸಾಮಾನು ತರಲು ಹೊರಗೆ ಹೋಗಬೇಕು."

ಎಂದು ಸುಮಿತ್ರೆಯ ಯಜಮಾನರನ್ನು ನೂಕಿಕೊಂಡೇ ಅಡಿಗೆಯ ಮನೆ ಬಿಟ್ಟುಬಂದಳು.

ಇಂದು ಮಂಗಳವಾರ. ಸುಮಿತ್ರೆ ಮಹಿಳಾಮಂಡಳಕ್ಕೆ ಹೋಗಿದ್ದಳು. ಸುಶೀಲೆಗೆ ಈಗ ಅಭ್ಯಾಸವಾಗಿಬಿಟ್ಟಿತ್ತು- "ಕಾಫಿ, ಬೋಂಡ" ಎಂದು ಸುಮಿತ್ರೆಯು ಯಜಮಾನನು ಕರೆದರೂ ಉತ್ತರಕೊಡದೇ 'ಹೂಂ' ಕೂತ ಅನ್ನದೆ ಅಡಿಗೆಮನೆ ಪ್ರವೇಶಿಸಿದಳು. ತಯಾರಾದ ಮೇಲೆ ಅವುಗಳನ್ನು ಬಯ್ದು ಹೊರಗೆ ಕೊಟ್ಟಳು. ಸುಮಿತ್ರೆಯ ಯಜಮಾನರು ಅವಳಿಗೆ ಅಲ್ಲಿಯೇ ನಿಲ್ಲಲು ಹೇಳಿದರು. ಸುಶೀಲೆ ನಿಲ್ಲಬೇಕಾಯಿತು. ಸುಮಿತ್ರೆಯ ಯಜಮಾನರು ದೇಣಾವೇ ನಗೆ ನಗುತ್ತ "ನನ್ನನ್ನು ಕಂಡರೆ ನಿನಗೆ ಹೆದರಿಕೆಯಾಗುವದೆ?" ಎಂದು ಕೇಳಿದರು.

ಸುಶೀಲೆಯು ಅಂಗಾಂಗದಲ್ಲಿ ಬೆವರಿನ್ದಿತ್ತು. ಆದರೂ ಸಿಟ್ಟು ನುಂಗಿ "ಮನುಷ್ಯನನ್ನು ಕಂಡರೆ ನನಗೆ ಹೆದರಿಕೆಯಾಗುವದಿಲ್ಲ." ಎಂದಳು. ಸುಮಿತ್ರೆಯ ಯಜಮಾನರು ಮುಂದುವರಿಸಿ, "ಹಾಗಾದರೆ ನಾನು ಮನುಷ್ಯನಲ್ಲವೆ?" ಎಂದು ನಕ್ಕರು. ಸುಶೀಲೆ "ಹಾಗಲ್ಲ".... ಎಂದು ತೇಲಿಸುತ್ತಿರುವಾಗಲೇ ಸುಮಿತ್ರೆಯ ಯಜಮಾನರು "ನಿನ್ನ ಗುಣ ದೊಡ್ಡದು ನಿಜವಾಗಿ ನಾನೀವರೆಗೆ ನಿನ್ನಂಥ ಹೆಣ್ಣನ್ನೇ ನೋಡಿರಲಿಲ್ಲ. ನಿನ್ನ ಸುತನೆಂಥ ಹುಚ್ಚು, ನಿನ್ನನ್ನು ಬಿಟ್ಟು ಜೇಲಿಗೆ ಹೋಗಲು? ಇರಲಿ. ಈಗಲೂ ನೀವು ಬೇಜಾರುಮಾಡಿಕೊಳ್ಳುವ ಕಾರಣವಿಲ್ಲ. ಈ ಮನೆಯನ್ನು ನಿಮ್ಮ ಮನೆಯಂತೆಯೇ ತಿಳಿಯಿರಿ. ಹೇಗೆ ಸುಮಿತ್ರೆ ಹಾಗೇ- ಅವಳಿಗಿಂತ .... ಒಂದು .... ಪಾಲು .... ಹೆಚ್ಚೇ ಎಂಬುದಕ್ಕೆ." ಸುಶೀಲೆಯನ್ನು ಈಗ ಮುಟ್ಟುವವರೆಗೆ ಯಾರಾದರೂ 'ಶಾಕ್' ಹತ್ತಿ ಸತ್ತೇ ಹೋಗುತ್ತಿದ್ದರು—ಅಂಥ ವಿಚಿತ್ರಶಕ್ತಿ ಬಂದಿತ್ತು ಅವಳಲ್ಲಿ. ರಕ್ತ ಒಂದೇ ಸವನೆ ಕುದಿಯುತ್ತಿತ್ತು. ಅದರೆ ಬಾಯಿ ತುಟಿ ಮಾತ್ರ ಎರಡಾಗಲಿಲ್ಲ. ಅಡಿಗೆ ಮನೆ ಕಡೆಗೆ ಹೋದವಳೆ ಬಾಗಿಲಿಕ್ಕಿಕೊಂಡಳು. ಸುಮಿತ್ರೆಯ ಯಜಮಾನರು ನಗುತ್ತ, ಅಡಿಗೆ ಮನೆಯ ಬಾಗಿಲನ್ನು ಬಡಿದರು. ಅವರ ಧ್ವನಿ ನಡುಗುತ್ತಿತ್ತು "ಸುಶೀಲಾ, ನಾನು ಜೇಲಿಗೆ ಮಾತಿನಿಂದ ಈಗ ನಿನಗೆ ಸಿಟ್ಟು ಬಂದಿರಬಹುದು. ಅದರೆ ಪೊಲೀಸು ಸ್ವಲ್ಪ ಜೋರಾದರೂ ಆ ಮೇಲೆ ನಿನಗೆ ಆ ಮಾರ್ಗದಿಂದ ಇಡೀ ಜೀವನವನ್ನೆಲ್ಲಾ ಸುಖಮಯವಾಗಿ ಮಾಡಿಕೊಳ್ಳಲು ದಾರಿ ಇದೆ. ನಿನ್ನ ಗಂಡ ನಾಳೆ ಜಂದರೂ ಅವನನ್ನು ಕೂಡಾ ನೀನು ಸುಬದಲ್ಲಿಡಬಹುದು. ನಿನ್ನ ಹರಕು ಸೀರೆ ನೋಡಿ ನನ್ನ ಜೀವ ಮರಗುತ್ತಿದೆ. ಹೊರಗೆ ಸೀರೆಗೆ ರೂಪಾಯಿ ಇಟ್ಟಿದ್ದೇನೆ ತೆಗೆದುಕೊ, ನಾನು ಹೋಗುತ್ತೇನೆ." ಎಂದು ಒಂದು ಸಲ ಅವಳಿಗೆ ಕೇಳುವಂತೆ ನಕ್ಕು ಸುಮಿತ್ರೆಯ ಯಜಮಾನರು ಹೊರಗೆ ಹೋದರು. ಅವರು ಹೋದುದೊಂದೇ ತಡ, ಸುಶೀಲೆ ಬಾಗಿಲಿಗೆ ತಲೆ ಚಪ್ಪಳಿಸಿಕೊಂಡು ಅಳಲು ಆರಂಭಿಸಿದಳು. ಏಕೆಂದರೆ ಎರಡಲು ಕಣ್ಣಿನಿಂದ ನೀರು ಬರಲಿಲ್ಲ. "ದೈನ್ಯತೆಗೆ, ನನ್ನ ದುರ್ಬಲತೆಗೆ ಇಂದು ನಾನು ಸೋತೆ. ಅವನ ಕೆನ್ನೆಗೆ ಚನ್ನಾಗಿ ಎಟು ಕೊಟ್ಟು ಬರಬೇಕಿತ್ತು. ನನ್ನ ಗಂಡನ



ಮಕ್ಕಳ ಸದೃಢತೆಗಾಗಿ
"ಬಗೆನ ಬಾಲಾಮೃತ"

ಹೆಲ್ಲು ಬರುವಾಗ
"ಎಸ್ಸೆನ್ಸ್ ಗ್ರಾಇಪ್ ಹೀಲರ್"

ಜಂತು ಆದರೆ
"ವರ್ಮ್ ಆಯಿಲ್"

ಉಪಯೋಗಿಸಿರಿ. ಇವು ಪತ್ರಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೇಕಾಗುವ ಔಷಧಗಳು.

The National Pharmacies & Pharmaceuticals Ltd., Dharwar.

ಪಾಲಿಗೆ ಸತ್ತೆ" ಎಂದು ರೋದಿಸಿದಳು. "ಇನ್ನೂ ಸುಮ್ಮನೆ ಕೂಡು. ತ್ತೇನೆ. ಇಂದು ಸ್ಪಷ್ಟ ಹೇಗಾಡಿದ ಮನುಷ್ಯ ನಾಳೆಯೇ ನನ್ನ ಮಾನ ತೆಗೆಯೆಲಾರನೇ? ಆ ಮೇಲೆ ನಾನು ಹೀಗೆ ಒಳಗೊಳಗೆ ಕುದಿಯುತ್ತ ಸಾಯುತ್ತೇನೆ. ಛೀ. ಧಿಕ್ಕಾರವಿರಲಿ, ಹೆಣ್ಣು ಜನಕ್ಕೆ! ಇದೆಲ್ಲಾ ಬಂದಿದ್ದು ನನ್ನ ಹಣವ ದೈನ್ಯ ಪರಿಸ್ಥಿತಿಗಾಗಿ! ನಾನು ಭಿಕಾರಿಯಾಕಾಗಲಿಲ್ಲ ಇಂತಹ ಜೀವನಕ್ಕೆಂತ? ಶ್ರೀಧರಾ, ಬಾ, ನೋಡುಬಾ! ನಿನ್ನ ಅರ್ಧಾಂಗಿಯ ಅವಸ್ಥೆ! ನಾವಿರಾರು ಕುಟುಂಬಗಳ ಜೀವನದ ಕಷ್ಟವನ್ನು ಪರಿಹರಿಸಲು ಬಡಿದಾಡುತ್ತ ಜೇಲುಕಂಡೆ ನೀನು. ಈ ಅಬಲೆಯನ್ನು ಯಾರು ಬಿಡಿಸುವವರು. ಹೆಣ್ಣಾಗಿ ಹುಟ್ಟಿದ್ದಕ್ಕೆ ಇಂದು ನನ್ನನ್ನು ನಾನೇ ಶಪಿಸುತ್ತೇನೆ, ಮನೆಗೆ ಈಗಲೇ ಹೋಗಿ ಆ ತುಳಸಿಯ ಕುತ್ತಿಗೆ ಹಿಚುಕು....ಸುಶೀಲೆ. ಏನಾಲ್ಲಾ ವಿಚಾರದಲ್ಲಿ ಮುಳುಗಿದ್ದಳು. ಅಡಿಗೆ ಅರ್ಧಕ್ಕೆ ಉಳಿಯಿತು.

"ಅಷ್ಟರಲ್ಲಿ ಕಾರಿನಿಂದ ಇಳಿದು" ಸುಮಿತ್ರಾಬಾಯಿ ಒಳಗೆ ಬಂದರು. ಸುಶೀಲೆಯ ಮುಖನೋಡಿದ ಕ್ಷಣ ಅವಳಿಗೆ ಎಲ್ಲವೂ

ಗೊತ್ತಾಯಿತೆಂಬಂತೆ ಅವರ ಮುಖ ನಿಸ್ತೇಜವಾಯಿತು. ಏನೂ ಮಾತಾಡಲಿಲ್ಲ. ಸುಶೀಲೆಯ ಕೈ ಹಿಡಿದು ತಮ್ಮ ಕೋಣೆಗೆ ಕರೆದೊಯ್ದು ಬಾಗಿಲಿಕ್ಕಿಕೊಂಡರು. ಕೋಣೆಗೆ ಹೋದಮೇಲೆ ಸುಶೀಲೆಯ ಹೆಗಲಮೇಲೆ ತಲೆಯಿಟ್ಟು ತಾವೆ ಅಳಲು ಪ್ರಾರಂಭ ಮಾಡಿದರು. ಸುಶೀಲೆಗೆ ತುಂಬ ಆಶ್ಚರ್ಯವಾಯಿತು! ಅವಳ ಸಿಟ್ಟೆಲ್ಲ ಎಲ್ಲಿ ಹೋಯಿತೊ ಏನೋ, ಅವಳೇ ಸುಮಿತ್ರೆಯನ್ನು ಸಮಾಧಾನ ಪಡಿಸಬೇಕಾಯಿತು. "ಏನಾಯಿತು ಸುಮೀ, ಏಕೆ ಕಣ್ಣೀರು?" ಎಂದು ಸುಶೀಲೆಯೇ ಸುಮಿತ್ರೆಯ ತಲೆಯನ್ನು ನೇವರಿಸಿದಳು. ಸುಮಿತ್ರೆ "ಸುಶೀ, ನನಗೆ ಗೊತ್ತಾಗಿದೆ ಎಲ್ಲವೂ! ನೀನು ನಮ್ಮ ಮನೆಯ ಕೆಲಸ ಬಿಟ್ಟು ಹೊರಟೆಯಲ್ಲವೆ? ಸುಶೀ, 'ಇವರು' ಎಷ್ಟು ಸಲ ಮಧ್ಯಾಹ್ನ ಇಲ್ಲಿ ಬಂದಿದ್ದರು?" ಎಂದು ಸುಶೀಲೆಯ ಕಡೆ ದೈನ್ಯದಿಂದ ನೋಡಿದಳು.

ಸುಶೀಲೆಗೆ ಏನು ಮಾತನಾಡಬೇಕೆಂಬುದು ತಿಳಿಯದಂತಾಯಿತು. ನಿಟ್ಟುಸಿರೊಂದು ಹೊರಬಂತು. ಅದರೊಟ್ಟಿಗೆ ಕಣ್ಣಿನಿಂದ ನೀರೂ ಬಂತು. ಸುಮಿತ್ರೆ "ಸತ್ಯ ಹೇಳು ಸುಶಿ, 'ಇವರು' ಏನು ಹೇಳಿದರು ನಿನಗೆ? ಎಷ್ಟು ಸಲ ಬಂದಿದ್ದರು?" ಸುಶೀಲೆಗೆ ಸುಮಿತ್ರೆಯ ಕಣ್ಣೀರು ನೋಡಿ, ದಯೆ ಬಂತು. "ಸುಮಿತ್ರಾ, ನೀನು ಬೇಜಾರು ಪಟ್ಟುಕೊಳ್ಳಬೇಡ. ನನ್ನ ಅಸಹಾಯತೆಯ ಫಲ ನಾನು ಅನುಭವಿಸಬೇಕಾಗಿದೆ. ಜೋಶೀಬಾಯಿ ಬರುವವರೆಗೆ ಎರಡು ತಿಂಗಳು ಉಪವಾಸ ಸಾಯಲಾರದೇ ನಾನಾಗಿ ಕೆಲಸಕ್ಕೆ ಒಪ್ಪಿದೆನಲ್ಲವೇ? ಅದರಲ್ಲಿ ನಿನ್ನ ತಪ್ಪೇನು?" ಸುಮಿತ್ರೆ ತುಂಬ ಅಳುತ್ತಿದ್ದಳು "ಸುಶೀ, ಅವರದು ನನಗೆ ಗೊತ್ತಿಲ್ಲವೆ? ಎಷ್ಟು ಸಲ ಮಹಿಲಾಮಂಡಲಕ್ಕೆ ಹೋಗಿದ್ದೇನೆಯೋ, ಎಷ್ಟು ಸಲ ನನ್ನನ್ನು ಆ, ಈ, ಕಾರಣದಿಂದ ಮಧ್ಯಾಹ್ನ ಮನೆ ಬಿಟ್ಟು ಹೊರಗೆ ಕಳಿಸಿದ್ದರೋ, ಅಷ್ಟು ಸಲವೂ ಬಂದಿರಬೇಕು. ನನಗೆ ನಿನ್ನನ್ನು ನೇಮಿಸುವಾಗ ಇದೇ ಒಂದು ಹೆದರಿಕೆ ಇತ್ತು. ಅದರೆ ನಿನ್ನ ಮೇಲೆ ನನ್ನದು ಸಂಪೂರ್ಣ ನಂಬಿಕೆ ಇತ್ತೆಂದೇ ನಿನ್ನನ್ನು ನಾನು ನೇಮಿಸಿದೆ. ಅವರು ಎಷ್ಟೇ ಕೆಟ್ಟದ್ದರೂ ಹೆಣ್ಣಿನ ಸಮ್ಮತಿ ಇಲ್ಲದೇ ಅವಳನ್ನು ಮುಟ್ಟುವ ಧೈರ್ಯ ಅವರಿಗಿಲ್ಲ! ಅದೇ ನನಗೊಂದು ಧೈರ್ಯ. ಅದರೆ ಹೆಣ್ಣನ್ನು ಒಲಿಸಿಕೊಳ್ಳಲು ಬೇಕಾದ್ದು ಮಾಡುತ್ತಾರೆ. ಇದೇ ಕಾರಣದಿಂದ ಇಲ್ಲಿಯವರೆಗೆ ನಮ್ಮ ಮನೆಯಲ್ಲಿ ಒಬ್ಬಳಾದರೂ ಅಡಿಗೆಯಾಕೆ ಕಾಯಂ ಆಗಿ ಇಲ್ಲ. ಮರ್ಯಾದಸ್ಥರು ಕೆಲವರು ನಿನ್ನ ಹಾಗೆ ಹೀಗೆ ಕೆಲಸ ಬಿಟ್ಟು ಹೋದರು. ಹಣದ ಆಶೆಯಿಂದ ಕೆಲವರು ಇರಲು ಪ್ರಯತ್ನಿಸಿದರು. ಅವರನ್ನು ನಾನು ತೆಗೆದು ಹಾಕಿದೆ. ನಿನಗೆನಿಸಬಹುದು, ನಾನು ಬಹಳ ಸುಖದಲ್ಲಿದ್ದೇನೆಂದು. ಅದರೆ ಈಗ ನೋಡಿಕೊ, ನನ್ನ-ನಿನ್ನಲ್ಲಿಯ ಅಂತರ. ನನಗೆ ನಿರಂತರವೂ ಈ ಹೆದರಿಕೆ ಇದೆ. ನಿನ್ನ ಸುಖ ನೋಡಿ ನಾನು ಎಷ್ಟು ವೇಳೆ ಅಸೂಯೆ ಪಟ್ಟಿದ್ದೇನೆ. ಈ ಸಿರಿವಂತಿಕೆಯ ಆಡಂಬರವೆಲ್ಲವೂ ವಿಷಮಯ. ಇದರಲ್ಲಿ ಒಂದೂ ಅರ್ಥವಿಲ್ಲ. ನಿನ್ನ ಗಂಡನ ಹಾಗೆ ನನ್ನ ಗಂಡನಿದ್ದರೆ, ಬೇರೆಯವರ ಪಾತ್ರೆ ತಿಕ್ಕಿಯಾದರೂ ಸುಖದಿಂದಿರುತ್ತಿದ್ದೆ. ಸುಶೀ, ನಮಗೆ ಮಕ್ಕಳಿಲ್ಲ. ಏಕೆ ಗೊತ್ತಿದೆಯೆ? ಇದಕ್ಕಾಗಿಯೇ! ನನಗೆ ಆ ಮನುಷ್ಯನ ಹತ್ತಿರ ಹೋಗಲು ಕೂಡ ಸೇರುವುದಿಲ್ಲ. ಆದರೆ ನನ್ನ ದೈನ್ಯತೆ ನಿನಗಿಂತ ಘೋರವಾದುದು. ನಾನು ಅವರನ್ನು ಬಿಟ್ಟುರೆ ಇರುವುದಿಲ್ಲ? ಆದರೆ ಹೆದರಿಕೆಯಾಗುತ್ತದೆ. ಅವರ ಕೃತಿಗೆ ಅಡ್ಡಬರುವಷ್ಟು ಧೈರ್ಯವೂ ನನ್ನಲ್ಲಿಲ್ಲ. ಈಗಿನ ಜಗತ್ತಿನಲ್ಲಿ ಹೆಣ್ಣು ಹುಟ್ಟಬಾರದು. ಹುಟ್ಟಿದರೂ ಒಬ್ಬಳೇ ಇರಬಾರದು. ಬೇಗ ಸಾಯಬೇಕೆಂದೆನಿಸುತ್ತದೆ. ಸುಶೀ, ಈಗ ಈ ಜೀವನ—ಅಲ್ಲ, ಸಾವು ನನಗೆ ಚೆನ್ನಾಗಿ ಒಗ್ಗಿ ಹೋಗಿದೆ. ನಿನ್ನಂಥವರನ್ನು ನೋಡಿದರೆ ಸತ್ಯ ಜೀವನದ ಅರಿವಾಗಿ ಅಳು ಬರುತ್ತದೆ, ಅಷ್ಟೇ. ನೀನು ಹೋಗಬೇಡ. ನನ್ನನ್ನು ನಿನ್ನ ಮಗಳೆಂದು ತಿಳಿದುಕೊ. ಅವರ ಅಪರಾಧವನ್ನು ನನಗಾಗಿ ಹೊಟ್ಟೆಯಲ್ಲಿ, ಹಾಕಿಕೊಂಡು ನಮ್ಮ ಮನೆಯಲ್ಲೇ ಇರು. ನೀನು ಬೇಡಿದ್ದು ನಾನು ಕೊಡುತ್ತೇನೆ. ನಿನ್ನಲ್ಲಿ ಅನ್ಯಾಯವನ್ನು ಎದುರಿಸುವ ಚೇತನೆ ಇದೆ. ಎಂತಲೇ ಇಷ್ಟು ದಿನಗಳವರೆಗೆ ನಿನ್ನ ಏಕಾಂಗಿ ಜೀವನದಲ್ಲಿ ನಿನ್ನ ಪಾವಿತ್ರ್ಯಉಳಿದಿದೆ. ಸುಶೀ, ನಿಜವಾಗಿ ನಿನ್ನ ಶ್ರೀಧರ ಧನ್ಯ. ಶ್ರೀಧರನಂಥ ಸದ್ಭಾವನೆಯ ಮನುಷ್ಯ ನನ್ನ ಪತಿಯಾಗಿದ್ದರೆ, ನನ್ನನ್ನೇ ನಾನು ತೆಯ್ದು ನನ್ನ ಪ್ರೀತಿಯನ್ನು ತೋರಿಸುತ್ತಿದ್ದೆ!" ಸುಶೀ, ನನಗೆ ಹೆದರಿಕೆ ಬರುತ್ತದೆ. ನೀನು ಇಲ್ಲೇ ಇರು. ——"

ಸುಶೀಲೆಗೆ ಸುಮಿತ್ರೆಯ ಈ ರೋದನದ ಮಾತು ಎಷ್ಟು ಕೇಳಿಸಿತೊ? ಆಕೆ ತನ್ನ ಮಂಗಳಸೂತ್ರದ ಜೊತೆ ಆಟವಾಡುತ್ತ ಶ್ರೀಧರನನ್ನು ನೆನೆಯುತ್ತ ಕುಳಿತಿದ್ದಳು. ಅವಳ ಶಾಂತವಿದ್ದ ಮುಖದ ಮೇಲಿಂದ ಅಂದು, ಆಕೆ ಶ್ರೀಧರನ ವಿಷಯದಲ್ಲಿ ಹೆಮ್ಮೆಪಡುತ್ತಿದ್ದ ಳೆಂಬುದು ಮಾತ್ರ ನಿಶ್ಚಿತ ಗೊತ್ತಾಗುತ್ತಿತ್ತು.

೫೫ ವರ್ಷಗಳಿಂದ ಅನುಭವಪಟ್ಟ

ಕರೀರ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೧

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು

ವಿಳಾಸ:—

ಗಣೇಶ ರಾಮಚಂದ್ರ ಕರೀರ ಮತ್ತು ಕಂಪನಿ

ಗಿರಗಾಂವ, ಮುಂಬಯಿ. ೪

ಎಂದು ಸುಮಿತ್ರೆಯು ಯಜಮಾನರನ್ನು ನೂಕಿಕೊಂಡೇ ಅಡಿಗೆಯ ಮನೆ ಬಿಟ್ಟುಬಂದಳು.

ಇಂದು ಮಂಗಳವಾರ. ಸುಮಿತ್ರೆ ಮಹಿಳಾಮಂಡಳಕ್ಕೆ ಹೋಗಿದ್ದಳು. ಸುಶೀಲೆಗೆ ಈಗ ಅಭ್ಯಾಸವಾಗಿಬಿಟ್ಟಿತ್ತು- "ಕಾಫಿ, ಬೋಂಡ" ಎಂದು ಸುಮಿತ್ರೆಯ ಯಜಮಾನರು ಕರೆದರೂ ಉತ್ತರಕೊಡದೇ 'ಹೂಂ' ಕೂಡ ಅನ್ನದೆ ಅಡಿಗೆಮನೆ ಪ್ರವೇಶಿಸಿದಳು. ತಯಾರಾದ ತೀಲೆ ಅವುಗಳನ್ನು ವಯ್ದು ಹೊರಗೆ ಕೊಟ್ಟಳು. ಸುಮಿತ್ರೆಯ ಯಜಮಾನರು ಅವಳಿಗೆ ಅಲ್ಲಿಯೇ ನಿಲ್ಲಲು ಹೇಳಿದರು. ಸುಶೀಲೆ ನಿಲ್ಲಲೇಕಾಯಿತು. ಸುಮಿತ್ರೆಯ ಯಜಮಾನರು ದೇಹಾವರೀ ನಗೆ ನಗುತ್ತ "ನನ್ನನ್ನು ಕಂಡರೆ ನಿನಗೆ ಹೆದರಿಕೆಯಾಗುವದೆ?" ಎಂದು ಕೇಳಿದರು.

ಸುಶೀಲೆಯು ಅಂಗಾಂಗದಲೆಲ್ಲ ಬೆವರಿದ್ದುವು. ಆದರೂ ಸಿಟ್ಟು ನುಂಗಿ "ಮನುಷ್ಯರನ್ನು ಕಂಡರೆ ನನಗೆ ಹೆದರಿಕೆಯಾನುವದಿಲ್ಲ." ಎಂದಳು. ಸುಮಿತ್ರೆಯ ಯಜಮಾನರು ಮುಂದುವರಿದು, "ಹಾಗಾದರೆ ನಾನು ಮನುಷ್ಯನಲ್ಲವೆ?" ಎಂದು ನಕ್ಕರು. ಸುಶೀಲೆ "ಹಾಗಲ್ಲ".... ಎಂದು ತೀಲಿಸುತ್ತಿರುವಾಗಲೇ ಸುಮಿತ್ರೆಯು ಯಜಮಾನರು "ನಿನ್ನ ಗುಣ ದೊಡ್ಡದು. ನಿಜವಾಗಿ ನಾನೀವರೆಗೆ ನಿನ್ನಂಥ ಹೆಣ್ಣನ್ನೇ ನೋಡಿರಲಿಲ್ಲ. ನಿನ್ನ ಗಂಡನೆಂಥ ಹುಚ್ಚ, ನಿನ್ನನ್ನು ಬಿಟ್ಟು ಜೇಲಿಗೆ ಹೋಗಲು? ಇರಲಿ. ಈಗಲೂ ನೀವು ಬೇಜಾರುಮಾಡ್ಕೊಳ್ಳುವ ಕಾರಣವಿಲ್ಲ. ಈ ಮನೆಯನ್ನು ನಿಮ್ಮ ಮನೆಯಂತೆಯೇ ತಿಳಿಯಿರಿ. ಹೇಗೆ ಸುಮಿತ್ರೆ ಹಾಗೇ- ಅವಳಿಗಿಂತ .... ಒಂದು .... ಪಾಲು .... ಹೆಚ್ಚೇ ಎಂಬುದಕ್ಕೆ." ಸುಶೀಲೆಯನ್ನು ಈಗ ಮುಟ್ಟುವ್ವರೆ ಯಾರಾದರೂ 'ಶಾಕ್' ಹತ್ತಿ ಸತ್ತೇ ಹೋಗುತ್ತಿದ್ದರು—ಅಂಥ ವಿಚಿತ್ರಶಕ್ತಿ ಬಂದಿತ್ತು ಅವಳಲ್ಲಿ. ರಕ್ತ ಒಂದೇ ಸವನೆ ಕುದಿಯುತ್ತಿತ್ತು. ಅದರೆ ಬಾಯಿ ತುಟಿ ಪಾತ್ರ ಎರಡಾಗಲಿಲ್ಲ. ಅಡಿಗೆ ಮನೆ ಕಡೆಗೆ ಹೋದವಳೆ ಬಾಗಿಲಿಕ್ಕಿಕೊಂಡಳು. ಸುಮಿತ್ರೆಯ ಯಜಮಾನರು ನಗುತ್ತ, ಅಡಿಗೆ ಮನೆಯ ಬಾಗಿಲನ್ನು ಜಡಿದರು. ಅವರ ಧ್ವನಿ ನಡುಗುತ್ತಿತ್ತು "ಸುಶೀಲಾ, ನಾನು ಹೇಳಿದ ಮಾತಿನಿಂದ ಈಗ ನಿನಗೆ ಸಿಟ್ಟು ಬಂದಿರಬಹುದು. ಆದರೆ ಪೊದಲು ಸ್ವಲ್ಪ ಬೇಜಾರಾದರೂ ಆ ಮೇಲೆ ನಿನಗೆ ಆ ಮಾರ್ಗದಿಂದ ಇಡೀ ಜೀವನವನ್ನೆಲ್ಲಾ ಸುಖಮಯವಾಗಿ ಮಾಡಿಕೊಳ್ಳಲು ದಾರಿ ಇದೆ. ನಿನ್ನ ಗಂಡ ನಾಳೆ ಬಂದರೂ ಅವನನ್ನು ಕೂಡಾ ನೀನು ಸುಖದಲ್ಲಿಡಬಹುದು. ನಿನ್ನ ಹರಕು ಸೀರೆ ನೋಡಿ ನನ್ನ ಜೀವ ಮರಗುತ್ತದೆ. ಹೊರಗೆ ಸೀರೆಗೆ ರೂಪಾಯಿ ಇಟ್ಟಿದ್ದೇನೆ ತೆಗೆದುಕೊ, ನಾನು ಹೋಗುತ್ತೇನೆ." ಎಂದು ಒಂದು ಸಲ ಅವಳಿಗೆ ಕೇಳುವಂತೆ ನಕ್ಕು ಸುಮಿತ್ರೆಯ ಯಜಮಾನರು ಹೊರಗೆ ಹೋದರು. ಅವರು ಹೋದುದೊಂದೇ ತಡ, ಸುಶೀಲೆ ಬಾಗಿಲಿಗೆ ತಲೆ ಆಪ್ಪಳಿಸಿಕೊಂಡು ಅಳಲು ಆರಂಭಿಸಿದಳು. ಏಕೆಂದರೆ ಪೊದಲು ಕಣ್ಣಿನಿಂದ ನೀರು ಬರಲಿಲ್ಲ. "ದೈನ್ಯತೆಗೆ, ನನ್ನ ದುರ್ಬಲತೆಗೆ ಇಂದು ನಾನು ಸೋತೆ. ಅವನ ಕೆನ್ನೆಗೆ ಚನ್ನಾಗಿ ಏಟು ಕೊಟ್ಟು ಬರಬೇಕಿತ್ತು. ನನ್ನ ಗಂಡನ

ಮಕ್ಕಳ ಸದೃಢತೆಗಾಗಿ "ಬಗೆನ ಬಾಲಾಮೃತ"

ಹೆಲ್ಲು ಬರುವಾಗ "ಎಸ್ಪನ್ಸ್ ಗ್ರಾ ಇಪ್ ಹೀಲರ್"

ಜಂತು ಆದರೆ "ವರ್ಮ್ ಆಯಿಲ್"

ಉಪಯೋಗಿಸಿರಿ. ಇವು ಪತ್ರಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು.

The National Pharmacies & Pharmaceuticals Ltd., Dharwar.

ಪಾಲಿಗೆ ಸತ್ತೆ" ಎಂದು ರೋದಿಸಿದಳು. "ಇನ್ನೂ ಸುಮ್ಮನೆ ನಿಂತಿರಬಾರದು. ಹೋಗಲೇಬೇಕು. ಇಂದು ಸ್ಪಷ್ಟ ಹೇಳಿಬಿಡಬೇಕು. ಇಲ್ಲದಿದ್ದರೆ ಮನುಷ್ಯ ನಾಳೆಯೇ ನನ್ನ ಮಾನ ತೆಗೆಯೆಲಾರನೇ? ಆ ಮೇಲೆ ನಾನು ಹೀಗೆ ಒಳಗೊಳಗೆ ಕುದಿಯುತ್ತ ಸಾಯುತ್ತೇನೆ. ಛೀ. ಧಿಕ್ಕಾರವಿರಲಿ, ಹೆಣ್ಣು ತನಕ್ಕೆ! ಇದೆಲ್ಲಾ ಬಂದಿದ್ದು ನನ್ನ ಹಣವ ದೈನ್ಯ ಪರಿಸ್ಥಿತಿಗಾಗಿ! ನಾನು ಭಿಕಾರಿಯಾಕಾಗಲಿಲ್ಲ ಇಂತಪ ಜೀವನಕ್ಕೆಂತ? ಶ್ರೀಧರಾ, ಬಾ, ನೋಡುಬಾ! ನಿನ್ನ ಅರ್ಧಾಂಗಿಯ ಅವಸ್ಥೆ! ಸಾವಿರಾರು ಕುಟುಂಬಗಳ ಜೀವನದ ಕಷ್ಟವನ್ನು ಪರಿಹರಿಸಲು ಬಡಿದಾಡುತ್ತ ಜೇಲುಕಂಡೆ ನೀನು. ಈ ಅಬಲೆಯನ್ನು ಯಾರು ಬಿಡಿಸುವವರು. ಹೆಣ್ಣಾಗಿ ಹುಟ್ಟಿದ್ದಕ್ಕೆ ಇಂದು ನನ್ನನ್ನು ನಾನೇ ಶಪಿಸುತ್ತೇನೆ. ಮನೆಗೆ ಈಗಲೆ ಹೋಗಿ ಆ ತುಳಸಿಯ ಕುತ್ತಿಗೆ ಹಿಚುಕು....ಸುಶೀಲೆ. ಏನಾಲ್ಲಾ ವಿಚಾರದಲ್ಲಿ ಮುಳುಗಿದ್ದಳು. ಅಡಿಗೆ ಅರ್ಧಕ್ಕೆ ಉಳಿಯಿತು.

"ಅಷ್ಟರಲ್ಲಿ ಕಾರಿನಿಂದ ಇಳಿದು" ಸುಮಿತ್ರಾಬಾಯಿ ಒಳಗೆ ಬಂದರು. ಸುಶೀಲೆಯ ಮುಖನೋಡಿದ ಕ್ಷಣ ಅವಳಿಗೆ ಎಲ್ಲವೂ

ಗೊತ್ತಾಯಿತೆಂಬಂತೆ ಅವರ ಮುಖ ನಿಸ್ತೇಜವಾಯಿತು. ಏನೂ ಮಾತಾಡಲಿಲ್ಲ. ಸುಶೀಲೆಯ ಕೈ ಹಿಡಿದು ತಮ್ಮ ಕೋಣೆಗೆ ಕರೆದೊಯ್ದು ಬಾಗಿಲಿಕ್ಕಿಕೊಂಡರು. ಕೋಣೆಗೆ ಹೋದಮೇಲೆ ಸುಶೀಲೆಯ ಹೆಗಲಮೇಲೆ ತಲೆಯಿಟ್ಟು ತಾವೆ ಅಳಲು ಪ್ರಾರಂಭ ಮಾಡಿದರು. ಸುಶೀಲೆಗೆ ತುಂಬ ಆಶ್ಚರ್ಯವಾಯಿತು! ಅವಳ ಸಿಟ್ಟೆಲ್ಲ ಎಲ್ಲಿ ಹೋಯಿತೊ ಏನೋ, ಅವಳೇ ಸುಮಿತ್ರೆಯನ್ನು ಸಮಾಧಾನ ಪಡಿಸಬೇಕಾಯಿತು. "ಏನಾಯಿತು ಸುಮೀ, ಏಕೆ ಕಣ್ಣೀರು?" ಎಂದು ಸುಶೀಲೆಯೇ ಸುಮಿತ್ರೆಯ ತಲೆಯನ್ನು ನೇವರಿಸಿದಳು. ಸುಮಿತ್ರೆ "ಸುಶೀ, ನನಗೆ ಗೊತ್ತಾಗಿದೆ ಎಲ್ಲವೂ! ನೀನು ನಮ್ಮ ಮನೆಯ ಕೆಲಸ ಬಿಟ್ಟು ಹೊರಟಿಯಲ್ಲವೆ? ಸುಶೀ, 'ಇವರು' ಎಷ್ಟು ಸಲ ಮಧ್ಯಾಹ್ನ ಇಲ್ಲಿ ಬಂದಿದ್ದರು?" ಎಂದು ಸುಶೀಲೆಯ ಕಡೆ ದೈನ್ಯದಿಂದ ನೋಡಿದಳು.

ಸುಶೀಲೆಗೆ ಏನು ಮಾತನಾಡಬೇಕೆಂಬುದು ತಿಳಿಯದಂತಾಯಿತು. ನಿಟ್ಟುಸಿರೊಂದು ಹೊರಬಂತು. ಅದರೊಟ್ಟಿಗೆ ಕಣ್ಣಿನಿಂದ ನೀರೂ ಬಂತು. ಸುಮಿತ್ರೆ "ಸತ್ಯ ಹೇಳು ಸುಶಿ, 'ಇವರು' ಏನು ಹೇಳಿದರು ನಿನಗೆ? ಎಷ್ಟು ಸಲ ಬಂದಿದ್ದರು?" ಸುಶೀಲೆಗೆ ಸುಮಿತ್ರೆಯ ಕಣ್ಣೀರು ನೋಡಿ, ದಯೆ ಬಂತು. "ಸುಮಿತ್ರಾ, ನೀನು ಬೇಜಾರು ಪಟ್ಟುಕೊಳ್ಳಬೇಡ. ನನ್ನ ಅಸಹಾಯತೆಯ ಫಲ ನಾನು ಅನುಭವಿಸಬೇಕಾಗಿದೆ. ಜೋಶೀಬಾಯಿ ಬರುವವರೆಗೆ ಎರಡು ತಿಂಗಳು ಉಪವಾಸ ಸಾಯಬಾರದೇ ನಾನಾಗಿ ಕೆಲಸಕ್ಕೆ ಒಪ್ಪಿದೆನಲ್ಲವೇ? ಅದರಲ್ಲಿ ನಿನ್ನ ತಪ್ಪೇನು?" ಸುಮಿತ್ರೆ ತುಂಬ ಅಳುತ್ತಿದ್ದಳು "ಸುಶೀ, ಅವರದು ನನಗೆ ಗೊತ್ತಿಲ್ಲವೆ? ಎಷ್ಟು ಸಲ ಮಹಿಲಾಮಂಡಲಕ್ಕೆ ಹೋಗಿದ್ದೇನೆಯೋ, ಎಷ್ಟು ಸಲ ನನ್ನನ್ನು ಆ, ಈ, ಕಾರಣದಿಂದ ಮಧ್ಯಾಹ್ನ ಮನೆ ಬಿಟ್ಟು ಹೊರಗೆ ಕಳಿಸಿದ್ದರೋ, ಅಷ್ಟು ಸಲವೂ ಬಂದಿರಬೇಕು. ನನಗೆ ನಿನ್ನನ್ನು ನೇಮಿಸುವಾಗ ಇದೇ ಒಂದು ಹೆದರಿಕೆ ಇತ್ತು. ಅದರೆ ನಿನ್ನ ಮೇಲೆ ನನ್ನದು ಸಂಪೂರ್ಣ ನಂಬಿಕೆ ಇತ್ತೆಂದೇ ನಿನ್ನನ್ನು ನಾನು ನೇಮಿಸಿದೆ. ಅವರು ಎಷ್ಟೇ ಕೆಟ್ಟವರಾದರೂ ಹೆಣ್ಣಿನ ಸಮ್ಮತಿ ಇಲ್ಲದೇ ಅವಳನ್ನು ಮುಟ್ಟುವ ಧೈರ್ಯ ಅವರಿಗಿಲ್ಲ! ಅದೇ ನನಗೊಂದು ಧೈರ್ಯ. ಅದರೆ ಹೆಣ್ಣನ್ನು ಒಲಿಸಿಕೊಳ್ಳಲು ಬೇಕಾದ್ದು ಮಾಡುತ್ತಾರೆ. ಇದೇ ಕಾರಣದಿಂದ ಇಲ್ಲಿಯವರೆಗೆ ನಮ್ಮ ಮನೆಯಲ್ಲಿ ಒಬ್ಬಳಾದರೂ ಅಡಿಗೆಯಾಕೆ ಕಾಯಂ ಆಗಿ ಇಲ್ಲ. ಮರ್ಯಾದಸ್ಥರು ಕೆಲವರು ನಿನ್ನ ಹಾಗೆ ಹೀಗೆ ಕೆಲಸ ಬಿಟ್ಟು ಹೋದರು. ಹಣದ ಆಶೆಯಿಂದ ಕೆಲವರು ಇರಲು ಪ್ರಯತ್ನಿಸಿದರು. ಅವರನ್ನು ನಾನು ತೆಗೆದು ಹಾಕಿದೆ. ನಿನಗೆನಿಸಬಹುದು, ನಾನು ಬಹಳ ಸುಖದಲ್ಲಿದ್ದೇನೆಂದು. ಆದರೆ ಈಗ ನೋಡಿಕೊ, ನನ್ನ-ನಿನ್ನಲ್ಲಿಯ ಅಂತರ. ನನಗೆ ನಿರಂತರವೂ ಈ ಹೆದರಿಕೆ ಇದೆ. ನಿನ್ನ ಸುಖ ನೋಡಿ ನಾನು ಎಷ್ಟು ಬೇಳೆ ಅಸೂಯೆ ಪಟ್ಟಿದ್ದೇನೆ. ಈ ಸಿರಿವಂತಿಕೆಯ ಆಡಂಬರವೆಲ್ಲವೂ ವಿಷಮಯ. ಇದರಲ್ಲಿ ಒಂದೂ ಅರ್ಥವಿಲ್ಲ. ನಿನ್ನ ಗಂಡನ ಹಾಗೆ ನನ್ನ ಗಂಡನಿದ್ದರೆ, ಬೇರೆಯವರ ಪಾತ್ರೆ ತಿಕ್ಕಿಯಾದರೂ ಸುಖದಿಂದಿರುತ್ತಿದ್ದೆ. ಸುಶೀ, ನಮಗೆ ಸುಳ್ಳಿಲ್ಲ. ಏಕೆ ಗೊತ್ತಿದೆಯೆ? ಇದಕ್ಕಾಗಿಯೇ! ನನಗೆ ಆ ಮನುಷ್ಯನ ಹತ್ತಿರ ಹೋಗಲು ಕೂಡ ಸೇರುವುದಿಲ್ಲ. ಅದರೆ ನನ್ನ ದೈನ್ಯತೆ ನಿನಗಿಂತ ಘೋರವಾದುದು. ನಾನು ಅವರನ್ನು ಬಿಟ್ಟರೆ ಇರುವುದೆಲ್ಲಿ? ಆದರೆ ಹೆದರಿಕೆಯಾಗುತ್ತದೆ. ಅವರ ಕೃತಿಗೆ ಅಡ್ಡಬರುವಷ್ಟು ಧೈರ್ಯವೂ ನನ್ನಲ್ಲಿಲ್ಲ. ಈಗಿನ ಜಗತ್ತಿನಲ್ಲಿ ಹೆಣ್ಣು ಹುಟ್ಟಬಾರದು. ಹುಟ್ಟಿದರೂ ಒಬ್ಬಳೇ ಇರಬಾರದು. ಬೇಗ ಸಾಯಬೇಕೆಂದೆನಿಸುತ್ತದೆ. ಸುಶೀ, ಈಗ ಈ ಜೀವನ—ಅಲ್ಲ, ಸಾವು ನನಗೆ ಚಿನ್ನಾಗಿ ಒಗ್ಗಿ ಹೋಗಿದೆ. ನಿನ್ನಂಥವರನ್ನು ನೋಡಿದರೆ ಸತ್ಯ ಜೀವನದ ಅರಿವಾಗಿ ಅಳು ಬರುತ್ತದೆ, ಅಷ್ಟೇ. ನೀನು ಹೋಗಬೇಡ. ನನ್ನನ್ನು ನಿನ್ನ ಮಗಳೆಂದು ತಿಳಿದುಕೊ. ಅವರ ಅಪರಾಧವನ್ನು ನನಗಾಗಿ ಹೊಟ್ಟೆಯಲ್ಲಿ, ಹಾಕಿಕೊಂಡು ನಮ್ಮ ಮನೆಯಲ್ಲೇ ಇರು. ನೀನು ಬೇಡಿದ್ದು ನಾನು ಕೊಡುತ್ತೇನೆ. ನಿನ್ನಲ್ಲಿ ಅನ್ಯಾಯವನ್ನು ಎದುರಿಸುವ ಚೇತನೆ ಇದೆ. ಎಂತಲೇ ಇಷ್ಟು ದಿನಗಳವರೆಗೆ ನಿನ್ನ ಏಕಾಂಗಿ ಜೀವನದಲ್ಲಿ ನಿನ್ನ ಪಾವಿತ್ರ್ಯಉಳಿದಿದೆ. ಸುಶೀ, ನಿಜವಾಗಿ ನಿನ್ನ ಶ್ರೀಧರ ಧನ್ಯ. ಶ್ರೀಧರನಂಥ ಸದ್ಭಾವನೆಯ ಮನುಷ್ಯ ನನ್ನ ಪತಿಯಾಗಿದ್ದರೆ, ನನ್ನನ್ನೇ ನಾನು ತೆಯ್ದು ನನ್ನ ಪ್ರೀತಿಯನ್ನು ತೋರಿಸುತ್ತಿದ್ದೆ!" ಸುಶೀ, ನನಗೆ ಹೆದರಿಕೆ ಬರುತ್ತದೆ. ನೀನು ಇಲ್ಲೇ ಇರು. ——"

ಸುಶೀಲೆಗೆ ಸುಮಿತ್ರೆಯ ಈ ರೋದನದ ಮಾತು ಎಷ್ಟು ಕೇಳಿಸಿತೊ? ಆಕೆ ತನ್ನ ಮಂಗಳಸೂತ್ರದ ಜೊತೆ ಆಟವಾಡುತ್ತ ಶ್ರೀಧರನನ್ನು ನೆನೆಯುತ್ತ ಕುಳಿತಿದ್ದಳು. ಅವಳ ಶಾಂತವಿದ್ದ ಮುಖದ ಮೇಲಿಂದ ಅಂದು, ಆಕೆ ಶ್ರೀಧರನ ವಿಷಯನಲ್ಲಿ ಹೆಮ್ಮೆಪಡುತ್ತಿದ್ದ ಳೆಂಬುದು ಮಾತ್ರ ನಿಶ್ಚಿತ ಗೊತ್ತಾಗುತ್ತಿತ್ತು.

——

೫೫ ವರ್ಷಗಳಿಂದ ಅನುಭವಪಟ್ಟ

ಕರ್ಕೀ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು

ವಿಳಾಸ:—

ಗಣೇಶ ರಾಮಚಂದ್ರ ಕರ್ಕೀ ಮತ್ತು ಕಂಪನಿ

ಗಿರಗಾಂವ, ಮುಂಬಯಿ. ೪

ಭಾರತೀಯ ಮಹಿಳೆಯರು-ರಾಜಕಾರಣ

ಶ್ರೀ. ಸರೋಜಿನಿ ಮಹಿಷಿ ಎಂ. ಎ. ಬೆಳಗಾಂವ

●

ಕಾಲ ಬದಲಾದಂತೆ ಭಾರತೀಯ ಸಾಮಾಜಿಕ ನಿಯಮ-ನಿಯಂತ್ರಣಗಳು ಬದಲಾಗುತ್ತ ನಡೆದಿವೆ. ಎಂತಲೇ ಭಾರತದ ಮಹಿಳೆಯರು ಇಂದು ಕೇವಲ ಗೃಹಿಣಿಯರಾಗಿ ಮನೆಯಲ್ಲಿ ಉಳಿಯದೆ, ಸಮಾಜ-ಕಾರ್ಯದಲ್ಲಿ ತೊಡಗಿ ತಮ್ಮ ಕಾರ್ಯಕಾರಿತ್ವವನ್ನು ತೋರಿಸುತ್ತಲಿದ್ದಾರೆ.

ಶತಮಾನಗಳ ಇತಿಹಾಸದ ಹಿನ್ನೆಯನ್ನು ಹೆಮ್ಮೆಯಿಂದ ಕೊಚ್ಚಿಕೊಳ್ಳಬಹುದಾದರೂ, ಆ ಇತಿಹಾಸ ಇಂದಿನ ಪೀಳಿಗೆಯನ್ನು ಎಷ್ಟುಮಟ್ಟಿಗೆ ಬಲಗೊಳಿಸಿದೆಯೆಂಬುದು ಭಿನ್ನಾಭಿಪ್ರಾಯಗಳಿಗೆ ಎಡೆಗೊಡುವಂತಹ ವಿಷಯ; ಝಾನ್ಸೀ ಲಕ್ಷ್ಮೀ, ಹಿಂದುಸ್ತಾನದ ಇತಿಹಾಸದಲ್ಲೇ ಕ್ರಾಂತಿಯನ್ನುಂಟುಮಾಡಿದ ಗಂಡಾಂತರ ಸಿವಾಯಿಗಳ ಬಂಡಾಯದಲ್ಲಿ-ಶೌರ್ಯದಿಂದ-ಅಮರಳಾದಳು; ಅಹಲ್ಯಾಬಾಯಿ ಹೋಳಕರ, ಪತಿಯ ಮರಣಾನಂತರ ರಾಜ್ಯಸೂತ್ರಗಳನ್ನು ವಹಿಸಿಕೊಂಡಳು; ಚಾಂದಬೀಬಿ, ರಾಜಕೀಯ ಇತಿಹಾಸದಲ್ಲಿ ಹೆಸರು ಗಳಿಸಿದರು. ಕನ್ನಡ ನಾಡಿನ ರಾಜಕೀಯ ಇತಿಹಾಸದಲ್ಲೂ ಪ್ರಜೆಗಳನ್ನು ಮಕ್ಕಳಂತೆ ಕಾಣುತ್ತ ರಾಜ್ಯವಾಳಿದ ಮಹಿಳೆಯರಿದ್ದಾರೆ: ಕದಂಬಕುಲದ ಏಕ್ಕಾದೇವಿ ರಣಧೈರವಿಯಾಗಿ ರಾಜ್ಯವನ್ನು ರಕ್ಷಿಸಿದಳು. ಇಂತಹ ಅದ್ವಿತೀಯ ರಾಜಕೀಯ ವೈಭವದ ಹಿನ್ನೆಲೆಯಿದ್ದರೂ, ಇಪ್ಪತ್ತನೆಯ ಶತಮಾನದವರೆಗೂ, ಆ ವೈಭವ ಮರೆಯಾಗಿತ್ತು, ಹೊರಬರಲು ಅದಕ್ಕೆ ಅಪ್ಪಣೆ ಬೇರೆತಿರಲಿಲ್ಲ ಎಂದು ಹೇಳಬಹುದು. ಚಿಕ್ಕ ಪುಟ್ಟ ಸಂಸ್ಥಾನಗಳಲ್ಲಿ, ಮಹಿಳೆಯರು ರಾಜಕೀಯದಲ್ಲಿ ಭಾಗ ವಹಿಸಿದರು-ಅದರೆ ಅಪ್ರತ್ಯಕ್ಷವಾಗಿ ಮಾತ್ರ!

೧೯೦೦ರ ವರೆಗೂ ಭಾರತದ ಮಹಿಳೆಯರು ಸಾಮಾಜಿಕ, ರಾಜಕೀಯ ದಾಸ್ಯಗಳೆರಡರಲ್ಲೂ ಬಾಧಿತರು: ಅದರೆ ಕೇವಲ ನಲವತ್ತು ವರುಷಗಳ ಅವಧಿಯಲ್ಲಿ, ಶೈಕ್ಷಣಿಕ, ಸಾಮಾಜಿಕ ರಾಜಕೀಯ ರಂಗಗಳಲ್ಲಿ ಅವರು ಸಾಧಿಸಿದ ಪ್ರಗತಿಯನ್ನು ನೋಡಿದರೆ, ಭಾರತವು ಹಿಂದುಳಿದ ದೇಶವೆಂದು ಯಾರೂ ಹೇಳಲಾರರು. ಯಾವುದೇ ದೇಶದ ಪ್ರಗತಿಯನ್ನರಿಯಬೇಕಾದರೆ, ಆ ದೇಶದ ಸ್ತ್ರೀಯರ ಸಾಮಾಜಿಕ, ರಾಜಕೀಯ ಸ್ಥಾನಮಾನಗಳನ್ನು ತಿಳಿಯಬೇಕಂತೆ! ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಲು ಬ್ರಿಟಿಷರು ಎತ್ತಿದ ಆಕ್ಷೇಪಗಳಲ್ಲಿ ಇದೂ ಒಂದು—ಅಲ್ಲಿಯ ಸ್ತ್ರೀಯರು ಅಜ್ಞಾನಿಗಳು ಎಂಬುದು.

ಆದರೆ ೧೯೪೦ರಲ್ಲಿ ನೋಡಿದರೆ, 'ಸ್ತ್ರೀಯರು ಸಾಮಾಜಿಕ, ರಾಜಕೀಯ ರಂಗಗಳಲ್ಲಿ ಹೆಚ್ಚು ಹಕ್ಕಿಕಾರ ಸಂಪಾದಿಸಿದ ರಾಷ್ಟ್ರಗಳಲ್ಲಿ,' ಭಾರತವು ಮೂರನೆಯದು! ವಿವಿಧ ಸ್ಥಾನಗಳ ಮತ್ತು ಸಂಸ್ಥಾನಗಳ ಕಾರ್ಯಕಾರೀ ಮಂಡಳಿಗಳಲ್ಲಿ, ಭಾರತದಲ್ಲಿ ಒಟ್ಟಿಗೆ ಎಂಬತ್ತು ಜನ ಸದಸ್ಯೆಯರು!

ಭಾರತವೇ ಪಾರತಂತ್ರ್ಯದಲ್ಲಿದ್ದಾಗ, ಅಲ್ಲಿಯ ಸ್ತ್ರೀಯರು ಅಥವಾ ಇಂಥದೊಂದು ಜನಾಂಗ ಸ್ವತಂತ್ರವಿಲ್ಲ, ಎಂದು ಹೇಳುವುದು ಅಸಂಬದ್ಧವಾದೀತು! ಜಾತಿ, ಮತಗಳನ್ನು ಬಿಟ್ಟಿರಿಸಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕಾದ ಪ್ರಸಂದವದು!

೧೮೮೫ರಲ್ಲಿ ಸಂಸ್ಥಾಪಿಸಲ್ಪಟ್ಟ ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ದೇಶದಲ್ಲಿ ಸ್ವಾತಂತ್ರ್ಯವನ್ನು ಕುರಿತು ನವಜಾಗೃತಿಯನ್ನುಂಟುಮಾಡುವ ಕಾರ್ಯವನ್ನು ಕೈಕೊಂಡಿತು! ಯಾವ ಭೇದವೂ ಇಲ್ಲದೆ ಸಂಸಮಾನರಾಗಿ ಸ್ತ್ರೀ-ಪುರುಷರು ಅದರ ಸದಸ್ಯರಾಗಬಹುದಿತ್ತು. ವರುವರುಷಕ್ಕೆ ಕಾಂಗ್ರೆಸ್ಸಿನಲ್ಲಿ ಸದಸ್ಯೆಯರ ಸಂಖ್ಯೆ ಬೆಳೆಯಿತು. ಸದಸ್ಯೆಯರಾದ ಟಾಗೋರ ಮನೆತನದ ಸರಲಾದೇವಿ ಚೌಧುರಾನಿಯವರು 'ವಂದೇಮಾತರಂ' ಗೀತೆಯನ್ನು ರಾಷ್ಟ್ರ ಗೀತೆಯನ್ನಾಗಿ ಆಗಲೇ ಪರಿವರ್ತಿಸಿಕೊಂಡರು; ಆಗ ಅವರು ಕವೀ ವಿಶ್ವವಿದ್ಯಾಲಯದ ಸಿನೇಟ ಸದಸ್ಯೆಯರೂ ಆಗಿದ್ದರು!

೧೯೧೭ರಲ್ಲಿ ಶ್ರೀಮತಿ ಅನಿಬೆಸಂಟ್ ಕಾಂಗ್ರೆಸ್ಸನ್ನು ಸೇರಿದಾಗ, ದೇಶದಲ್ಲಿನೇ ಹೊಸ ಚೈತನ್ಯ ತುಂಬಿತು. ಅಲ್ಲಿಯ ವರೆಗೆ ಕಾಂಗ್ರೆಸ್ ಸದಸ್ಯೆಯರು ಸ್ವಂತ ಹೊಣೆಯಿಂದ ಯಾವ ವಿಶೇಷ ಕಾರ್ಯಭಾರವನ್ನೂ ಹೊರುತ್ತಿರಲಿಲ್ಲವೆಂದೇ ಹೇಳಬಹುದು. ಅವರು ಕಾರ್ಯಕಾರೀ ಮಂಡಳಿಯಲ್ಲಿದ್ದ ತಮ್ಮ ಪತಿಗಳ ಸಹಾಯಕಿಯರಾಗಿದ್ದರೆಂಬುದು ಮಾತ್ರ ನಿರ್ವಿವಾದ. ಯುದ್ಧದ ಸಮಯದಲ್ಲಿ ದೇಶಾಭಿನಾನವನ್ನು ಹರಡುತ್ತಿರುವ ಶ್ರೀ ಅನಿಬೆಸಂಟರನ್ನು ಮದರಾಸಿನ ಗವ್ಹರ್ನರರು ಬಂಧನದಲ್ಲಿರಿಸಿದರು. ಈ ಬಂಧನ ದೇಶದ ಮಹಿಳೆಯರನ್ನು ಕೆಣಕಿತು! ಪುರುಷರೊಡನೆ ಅವರೂ ಅಸಹಕಾರ ಚಳವಳಿಯಲ್ಲಿ ಭಾಗ ವಹಿಸಲು ಮುಂದೆ ಬಂದರು: ಅನಿಬೆಸಂಟ ಬಂಧನದಿಂದೀಚೆಗೆ ಬಂದಾಗ, ಜನತೆ ಪ್ರಚಂಡ ಸ್ವಾಗತವನ್ನಿತ್ತಿತು. ಅನೇಕ ಮಹಿಳೆಯರು ಅನಿಬೆಸಂಟರ ಅನುಯಾಯಿಗಳಾದರು; ಅನೇಕರು ಭಾರತದ 'ಗೃಹರಕ್ಷಕ ದಲ'ವನ್ನು ಸೇರಿದರು!

ಕಾಂಗ್ರೆಸ್ಸಿನ ಇತಿಹಾಸದಲ್ಲಿ ಅಧ್ಯಕ್ಷಿಣಿಯಾದ ಪ್ರಥಮ ಮಹಿಳೆ ಯೆಂದರೆ ಶ್ರೀಮತಿ ಆನಿಬೆಸಂಟರೇ! ಅದು ೧೯೧೭ರಲ್ಲಿ, ಕಲಕತ್ತೆಯಲ್ಲಿ ಕಾಂಗ್ರೆಸ್ ಅಧಿವೇಶನ ಸೇರಿದಾಗ! ಬೆಸಂಟರು ತಿರಪಿಲ್ಲದೆ, ಭಾರತದ ಮೂಲೆ ಮೂಲೆಯ ವರೆಗೂ ಅಡ್ಡಾಡಿ, ಯುವಕರಲ್ಲಿಯ ಕೆಚ್ಚನ್ನು ಜಾಗೃತಗೊಳಿಸಿದರು. ಅವರ ಕಾರ್ಯಶಕ್ತಿ ಅಗಾಧವಾದುದು; ಹಾಗೆಯೇ ಅವರ ಅಧ್ಯಾತ್ಮಿಕ ಶಕ್ತಿಯೂ ಕೂಡ! ಕೇವಲ ರಾಜಕೀಯ ರಂಗದಲ್ಲಿಷ್ಟೇ ಅಲ್ಲ, ಅಧ್ಯಾತ್ಮಿಕ ರಂಗದಲ್ಲೂ ಬೆಸಂಟರಿಗೆ ಅಪಾರ ಮನ್ನಣೆ! ಆ ಕಲಕತ್ತಾ ಕಾಂಗ್ರೆಸ್ಸಿನಲ್ಲಿ ಪ್ರಾಮುಖ್ಯತೆ ಯುಂದ ಕಂಡುಬಂದ, ಮೂವರು ಮಹಿಳೆಯರೆಂದರೆ, ಅಧ್ಯಕ್ಷ ಸ್ಥಾನವನ್ನಲಂಕರಿಸಿದ ಶ್ರೀಮತಿ ಆನಿಬೆಸಂಟ್, ಅವರ ಬಲಭಾಗದಲ್ಲಿದ್ದ ಶ್ರೀಮತಿ ಸರೋಜಿನಿ ನಾಯಿಡು, ಮತ್ತೆ ಅವರ ಎಡಮಗ್ಗಲಿಗೆ ಕುಳಿತಿದ್ದ ಬೇಗಂ ಅಮ್ಮನ್‌ಬೀಬಿ—ಮಹಮ್ಮದ ತುಕ್ಲ ಶೌಕತ ಅಲಿಯವರ ತಾಯಿ! ಕಾಂಗ್ರೆಸ್ಸಿನಲ್ಲಿ ಇನ್ನು ಪಡೆದ ಸ್ಥಾನ, ಭಾರತೀಯ ಮಹಿಳೆಯರು ರಾಜಕೀಯ ರಂಗವನ್ನು ಪ್ರವೇಶಿಸಿದ ಹೊಸ ಮನ್ವಂತರದ ಹೆಗ್ಗುರುತು! ಅಲ್ಲಿಂದೀಚೆ ಎರಡು ವರುಷ ಗಳಲ್ಲಿಂದರೆ, ಶ್ರೀಮತಿ ಸರೋಜಿನಿ ನಾಯಿಡು, ರಾಜಕಾರಣದ ಸೂತ್ರಧಾರಿ. ಅವರ ಶಬ್ದಲಿತ ವಾಗ್ಧಾರಿ, ಕಾವ್ಯವಾಣಿ, ರಾಜಕಾರಣಜ್ಞತ್ವ—ಎಲ್ಲವೂ ಅವರಿಗೆ ಭಾರತದ ಮುಂದಾಳುತನದ ಪಟ್ಟವನ್ನು ಕೊಟ್ಟವು; ಪರರಾಷ್ಟ್ರಗಳಲ್ಲಿ ಭಾರತದ ಸಂಸ್ಕೃತಿ ಸಾಹಿತ್ಯ ವನ್ನು ಕುರಿತು ಅರುಹುವ ರಾಯಭಾರಿ—ಜನತೆಯ ಪ್ರತಿನಿಧಿಯಾದರು! ಯಾವ ರಾಜಕೀಯ ಅಧಿವೇಶನಗಳಿಗೂ ಅಂದು ಸರೋಜಿನಿಯೇ ಅಧ್ಯಕ್ಷಿಣಿ. ೧೯೨೫ರಲ್ಲಿ ವಿಜಾಪುರದಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೂ ಅವರೇ ಅಧ್ಯಕ್ಷಿಣಿ!

೧೯೨೦-೨೨ರ ಅಸಹಕಾರ ಚಳವಳಿಯಲ್ಲಿ ಸ್ತ್ರೀಯರು ಪ್ರತ್ಯಕ್ಷ-ಅಪ್ರತ್ಯಕ್ಷವಾಗಿ ಕೂಡಿಯೇ ಭಾಗವಹಿಸಿದರು. ಜನಸಾಮಾನ್ಯರು ಗಣ್ಯಮಿಸುವಂತೆ, ಅದು ಆಗಬೇಕಾದ ರಾಜಕೀಯ ಕಾರ್ಯ. ಮೊದಲೆ, ಸ್ತ್ರೀಯರು ತಮ್ಮ ಹೆಸರುಗಳನ್ನೂ ಮತದಾರ ಯಾದಿಯಲ್ಲಿ ಸೇರಿಸುವುದು. ೧೯೨೦ರ ಯಾದಿಯಲ್ಲಿ ಹೆಸರು ಸೇರಿದರೆ, ಮುಂದಿನ ವರ್ಷ ಮತಗಟ್ಟೆಗೆ ಹೋಗಬಹುದು. ಮತದಾನದ ಅಧಿಕಾರವುಳ್ಳ ಸ್ತ್ರೀ ಮನೆಮನೆಗೆ ಹೋಗಿ, ಪ್ರಚಾರ ವಾಣಿ ಬರುವವರೂ ಒಗ ಒಂದು ಮಹತ್ವದ ಕೆಲಸವೇ! ಅಂತೂ ೧೯೨೧ರ ವೆಂಟಿಗೊ-ಜೇನ್ಸುಧರ್ಮ ಸುಧಾರಣೆಗಳಲ್ಲಿ ಭಾರತದ ಹತ್ತು ಕೋಟಿ ಮಹಿಳೆಯರು ಮತದಾನದ ಅಧಿಕಾರವನ್ನು ಪಡೆದರು! ೧೯೨೩ರಲ್ಲಿ ತುಂಡೋಪತುಂಡವಾಗಿ ಮತಗಟ್ಟೆಗೆ ಸಾಗಿ, ಮಹಿಳೆಯರು ತಮ್ಮ ಅಧಿಕಾರವನ್ನು ಪ್ರಯೋಗಿಸಿ ಕೊಂಡರು. ಸ್ತ್ರೀಯರ ಈ ರಾಜಕೀಯ ಪ್ರಗತಿ ಇನ್ನೂ ಮುಂದುವರಿಯುತ್ತಿತ್ತೆನೋ! ಅಥವಾ ವಿಘ್ನಗಳು ಬಾಯಿದರಿನಲೇ ಹೆಚ್ಚು ಮುಂದುವರಿಯುವುದೋ!—೧೯೨೭ರಲ್ಲಿ ಗಾಂಧೀಜಿಯ ದಾಂಡೀ ಯಾತ್ರೆ ಪ್ರಾರಂಭವಾಯಿತು. ಕಾರ್ಯಕಾರೀ ಮಂಡಳಗಳಲ್ಲಿಯ ಸದಸ್ಯರು, ಪ್ರತಿನಿಧಿಗಳು, ನಿಯಾಕಾಯಿದೆರೂ ಕೂಡ 'ವೈಸ್‌ರಾಯ್'ರು ಉಪ್ಪಿನ ಮೇಲಿನ ಕರವನ್ನು ತಮ್ಮದೇ ಆದ ಅಧಿಕಾರದಲ್ಲಿ ಹೆಚ್ಚಿಸಿದ್ದರು. ಅದನ್ನು ಪ್ರತಿಭಟಿಸಲು, ಸಮುದ್ರತೀರದಲ್ಲಿ ಉಪ್ಪನ್ನು ತಯಾರಿಸಬೇಕಿತ್ತು; ಗಾಂಧೀಜಿ ಕಾಲ್ನಡಿಗೆಯಿಂದಲೇ ಹೊರಟರು; ಅವರ ಅನುಯಾಯಿಗಳಲ್ಲಿ ಸ್ತ್ರೀಯರ ಸಮಾವೇಶವಿರದಿದ್ದರೂ, ಸರೋಜಿನಿ ನಾಯಿಡು ಅವರನ್ನು ಕೂಡಿಕೊಂಡರು; ಈ ಅಹಿಂಸಾತ್ಮಕ ಅಸಹಕಾರ ಚಳವಳಿಯಲ್ಲಿ ಭಾಗ ವಹಿಸಿದ್ದಕ್ಕೇ ಅವರು ಸೆರೆಮನೆಯನ್ನು ಸೇರಬೇಕಾಯಿತು. ಅನೇಕರಿಕೆಯ ಸ್ವಾತಂತ್ರ್ಯಯುದ್ಧ ಜಲಿಯಾದಿಂದ ಪ್ರಾರಂಭವಾದರೆ, ಭಾರತದ ಸ್ವಾತಂತ್ರ್ಯಯುದ್ಧ ಉಪ್ಪಿನಿಂದ! ಪರಕೀಯರ ಅನ್ಯಾಯದ ಆಕ್ರಮಿತೆಯನ್ನು ಸಹಿಸಲಾರದೆ, ಸ್ತ್ರೀಯರೂ ಅಸಂಖ್ಯರಾಗಿ, ತಮ್ಮ ಪ್ರತಿಕ್ರಿಯೆಯನ್ನು ತೋರಿಸಿದರು; ಮೂರುಸಾವಿರದ ಸಾಜ್ಯೆಗಿಂತ ಮಿಗಿಲಾಗಿ ಸ್ತ್ರೀಯರು ಅಸಹಕಾರ ಚಳವಳಿಯಲ್ಲಿ ಭಾಗ ವಹಿಸಿ, ಸೆರೆಮನೆಯ ವಾಸವನ್ನನುಭವಿಸಿದರು, ಅಂತೀ ಪೆಟ್ಟುಗಳನ್ನು ತಿಂದರು, ಅಪಮಾನವನ್ನು ಸಹಿಸಿದರು, ನಿಂದೆಯನ್ನು ನುಂಗಿಕೊಂಡರು! ಮದ್ಯಪಾನ ಪ್ರತಿಬಂಧಕ್ಕಲ್ಲಿ, ಸ್ವದೇಶೀಬಟ್ಟೆಯ ಪ್ರಚಾರದಲ್ಲಿ; ಗಾಯಗೊಂಡು ಸಿಕ್ಕು ಬಿದ್ದು ನ್ಯಾಯಾಸ್ಥಾನಗಳನ್ನೂ ಸಾಜಸಿಸಿದರು! ಸ್ವಾತಂತ್ರ್ಯ ಸಿದ್ಧಿಯ ಪಥದಲ್ಲಿ, ಸೆರೆಮನೆಯ ಅಂಧಕಾರದಲ್ಲಿ, ಜಾತಿ, ಮತಗಳನ್ನು ಕುರಿತು ಸ್ತ್ರೀಯರಲ್ಲಿದ್ದ ಅಂಧಶ್ರದ್ಧೆಗಳು ಅಳಿದುಹೋದವು! 'ಮಾನವ ಜಾತಿಯೊಂದು' ಎಂಬ ಭಾವನೆ ಕ್ರಮೇಣ ದೃಢವಾಗುತ್ತ ನಡೆದಿತು.

ರಾಷ್ಟ್ರದ ಕರೆಗೆ ಮನ್ನಣೆ ಕೊಟ್ಟು, ವ್ಯಕ್ತಿ ಸುಖವನ್ನು ಬದಿಗಿಟ್ಟು, ರಾಷ್ಟ್ರಸೇವೆಯ ಭಾರವನ್ನು, ತಮ್ಮ ಹೊಣೆಯಿಂದಲೇ—ಯಾವ ಅಗ್ರಹವೂ ಇಲ್ಲದೆ-ಕೈಕೊಳ್ಳುವಲ್ಲಿ ಸ್ತ್ರೀಯರಿಗೆ ಒಂದು ಬಗೆಯ ಸಮಾಧಾನ ದೊರೆತಿತು, ಧೈರ್ಯ ಕಲೆದೋರಿತು; ಸ್ತ್ರೀಯರೆಂಬ ಒಂದೇ ಕಾರಣಕ್ಕಾಗಿ ಬಯಿಗಿರಿಸಬೇಕಾಗಿದ್ದ ಎಷ್ಟೋ ಸಾಮಾಜಿಕ ಕಾರ್ಯಗಳನ್ನು ಕೈಕೊಂಡು ಪೂರ್ತಿಗೊಳಿಸುವಲ್ಲಿ, ಅವರಿಗೆ ವಿಶ್ವಾಸವೆನಿಸಿತು; ಸ್ತ್ರೀ ಪುರುಷರೆಂಬ ಭೇದದ ಸಂಕುಚಿತ ದೃಷ್ಟಿಯಳಿಯಿತು, ರಾಷ್ಟ್ರದ ಕಾರ್ಯಕ್ಕಾಗಿ ಅತ್ಯೋನ್ನತಿಯ ಭಾವ ತಲೆಯೆತ್ತಿತು! ಪರಸ್ಪರರ ದುರ್ಬಲತೆಗಳನ್ನೆತ್ತಿ ತೆಗಳುವುದಕ್ಕಿಂತ, ಸಾಮರ್ಥ್ಯ, ಕಾರ್ಯ ಶಕ್ತಿಗಳನ್ನೆತ್ತಿ, ಪ್ರೋತ್ಸಾಹಿಸುವಲ್ಲಿಯೇ ಇವತ್ತಿನ ಕಾರ್ಯವತಗಿದೆ ಎಂಬುದರ ಅರಿವು ಅವರಿಗಾಯಿತು! ಮತ್ತೆ ಅವರ ವಿಚಾರಪರಿಷ್ಕೃತವಾದ ಯಾವ ಕಾರ್ಯಕ್ಕೂ ಗಾಂಧೀಜಿಯ ಜೊತೆಯಲಿ ಸಿದ್ಧವಾಗಿತ್ತು!

೧೯೩೫ರಲ್ಲಿ 'ಮುಂಡಮೇಜಿನ ಪರಿಷತ್ತು' ಅಸಹಕಾರ ಚಳುವಳಿಯನ್ನು, ಹುಬ್ಬಾಲಿಸಿತು. ಈ ವೇಳೆಗಾಗಲೇ ತನ್ನ ಪ್ರತಿನಿಧಿತ್ವವನ್ನು ಸಿದ್ಧಪಡಿಸಿದ, 'ಅಖಿಲ ಭಾರತ ಮಹಿಳಾ ಪರಿಷತ್ತು' ಆ ಪರಿಷತ್ತಿಗೆ ತನ್ನ ಪ್ರತಿನಿಧಿಗಳನ್ನು ಕಳುಹಲೆಳಸಿತು. ಆ ವೇಳೆಗೆ ಕೆಲ ಹೊತ್ತುವಳಿಗಳನ್ನು ಸಿದ್ಧಪಡಿಸಿತು. ಭಾರತದ ಹೊಸ ರಾಜ್ಯ ಘಟನೆಯಲ್ಲಿ (೧) ಜಾತಿ ಪ್ರಧಾನವಾದ ಮತದಾರ ವಿಭಾಗಗಳಿರಕೂಡದು, ಬರೀ ಸಾಮಾನ್ಯ ಮತದಾರ ವಿಭಾಗಗಳಿರಬೇಕೆಂದು



ಶ್ರೀಮತಿ ಪದ್ಮಿನಿಯವರು, ಮಾಯಮ್ಮ, ಶ್ರೀಮತಿ ಹೀರಾಬಾಯಿ ಬೋಡಿ, ಶ್ರೀಮತಿ ಮುನ್ನಾಬಾಯಿ, ಜೋಗಿ ಶಾಕ ಸವಾಯಿ, ಡಾ. ಎಸ್. ಮುದ್ದಣ್ಣ, ಶ್ರೀಮತಿ ಲೆಕ್ಕಿ, ಶಾಲಿನಿಮಾಡಿ ಅಮ್ಮಚಿಕೋಡಿ, ಜೋಗಿ ಪೆಟ್ಟುಬಾಯಿ ಇವರು ಭಾಗವಹಿಸಿದ್ದರು. ಅಜ್ಜಿ, ಕೊಡಗಿನ ಹುಡಿ, ಭಾಷಣಗಳು ಮಧ್ಯಾಹ್ನ ಮೂರು ಗಂಟೆಗೆ ಪ್ರಾರಂಭವಾಗಿ ಸಂಜೆ ಆರು ಗಂಟೆಯವರೆಗೂ ನಡೆದವು. ಭಾಷಣಕಾರರು ಸಂಸ್ಕೃತಿಯ ಬಗ್ಗೆ ಮಾತನಾಡಿದರು. ಕೆಲವ

ಕಾಲದಲ್ಲಿ ಪಶ್ಚಿಮದಿಕ್ಕಿಗೆ ಗುಡ್ಡೆ ಸಿಗತೊಡಗಿತು. ಇದಕ್ಕೆ ಸಾತೊಡ್ಡಿನ ಹೊರಮೈಲಿಲ್ಲ. ಇದನ್ನು ಎಡಬಿಡಂಗಿ ಮಾಡಿಕಾಯುವುದಕ್ಕೆ ಗತಿಯಾಗಿರಲಿಲ್ಲ! ಅಲ್ಲಲ್ಲಿ ಗುಡ್ಡೆಕಾಲಾಗಲ್ಲಿ ಸಾಧಾರಣ ಸಮಾಜಗಳು ಕೆಲವು ಅದಿಕಾರಿಗಳು ಕೆಲವು. ಗಣಿಯಲ್ಲಿ ಬಳ್ಳಿ ಸಾಧಾರಣಗಳ ಸಮಾಗಮತ್ವಕ್ಕೆ ಮುಖ್ಯ ಸಾಧಿಸಿದರೆ, ಭೂಗರ್ಭಶಾಸ್ತ್ರಜ್ಞರಿಗೆ ಕೆಲಸಗಳಿಲ್ಲ. ಸಂಪತ್ತಿನ ಪರಿಶೀಲನೆಯಲ್ಲಿ ಬಳ್ಳಿಸಾಧಾರಣಗಳಲ್ಲಿ ಕಾಂಗ್ರೆಸ್ ಮುಂತಾದವೇ ಅಧಿಕಾರದಲ್ಲಿದ್ದಿರಬೇಕು, ಸ್ವಲ್ಪ ದಿನಗಳಲ್ಲಿ ಗಾಡಿಸಾಮಾನು ಮಿಕ್ಕ ಕೊಂಡಿಗೆ ಬರಬೇಕಾಯಿತು. ಮತ್ತೆ ಗಣಿಯಲ್ಲಿ ಇನ್ನು ಸಮಯವೆಂದು ಸಾಧಿಸಿಕ ಅಧಿಕಾರಿಗಳಾದ ಜಿಲ್ಲಾಕಲೆಕ್ಟರನ್ನು ಅಭಿಪ್ರಾಯಪಟ್ಟಿ ಬಂಧಿಸಲ್ಪಟ್ಟಿದ್ದು! ಆಗಸ್ಟ್ ಕಾರಣ ಸಾಧಿಸಿದ ಸೂಚನಾಲಾಗಿ ಮೇಲಿನ ಮುಖಂಡರು ನಿರೀಸುಕೆಯನ್ನು ಬರೆದರು. 'ಮಂಕಿ ಬಸ್ಸು ಕೊಡಿಸಿ,' ಎಂಬ ಸಂಧಿಯಲ್ಲಿ ಕೊನೆಗೆ ಎಲ್ಲಿಗೂ ಕಳ್ಳಸಾಕಿಟ್ಟಿಲ್ಲ. ಕೊನೆಗೂ ಕಿನ್ನ ಜಾಡಮಾಲಿಯ ಮೊಂಬಾಸೆ ಗಾಡಿ ಸಾಧಿಸಿಕ್ಕಿತು. ಕಾಗದ್ಗಾಂಡ ಸಾಧಿಸಿಕ್ಕಿತು ಬರಲು ಇದು ಬರುವ ಗಣಿ ಸಿಗದಾಯಿತು. ಭಾಷಣದಲ್ಲಿ ಮಾತ್ರವೆ ಮೊಂಬಾಸೆಯಾಗಿ ಗುಡ್ಡೆಯ ಸಂಪತ್ತಿನ ಸಂಪತ್ತಿನಲ್ಲಿ ಜಾಲವಾಯಿತು. ಗಣಿಯ ಭಾಗಸ್ವಾಮ್ಯಕ್ಕೆ ಮಾತ್ರ ಸ್ವೀಯರು ಸಂಪತ್ತಿನಲ್ಲಿ ಸಂಪತ್ತಿನ ಮೊಂಬಾಸೆ ಸಿಬ್ಬಾಗಿಸಿಕೊಳ್ಳಲು, ಅಲ್ಲಿ—ಅಲ್ಲಿಯಾಗಲಿಲ್ಲ ಕಾರಣವು ಕೊಟ್ಟರು. ಜಾಲಯಾಯಲ್ಲಿ ಗುಮಾಸ್ತರನ್ನು ಸರಬರಾಜು ಇಲ್ಲ ಇನ್ನು ಸಮಾಜಿಸಿಯಲ್ಲಿ ಜಾಲಾಯಾಯಲ್ಲಿ ಸಂಪತ್ತಿನ ಮೊಂಬಾಸೆ ಮಾಡಿದರು. ಮಾಲಿಕಾಲಾಯಾಗಿ ಯಾವಾಗಲೂ ರಜ್ಜಕ್ಕೆಯ್ಯಿಕ್ಕಾಲು ಬಿಂಬಿಸಿಲ್ಲ.

ಮಂಗಳವು ಇಮಾಯ್ಕಾಮಿಯ ಅಧ್ಯಾಗಲೂ ಬಂದು ಸ್ವಾಧೀನ ಸ್ವಾಮಿಸ್ಥಾಪ್ಯಾಯಕ್ಕೆ ಇಲಾಖೆ ಬರಬೇಕಾದ್ದು. ಸ್ವಲ್ಪಂತೆ ಭಾಷಾಯಲ್ಲಿ ಮಿಂಬಾಸೆಯನ್ನು ಇಲಾಖೆ ಒ ಗುಮಾಸ್ತ ಆಗಾಕಿಸ್ಥಾಪಿಸಿದರೆ ಸಂಪತ್ತಿನ ಇಲಾಖೆ ಇಲಾಖೆಯಾಯಾಗಿ ಸಂಪತ್ತಿನಾಸ್ತಿ. ಸಂಪತ್ತಿನ ಸ್ವಾಮಿಸಿ ಮೊಂಬಾಸೆಯಲ್ಲಿ ಸಂಪತ್ತಿನ ಸಂಪತ್ತಿನ ಸಂಪತ್ತಿನ

ಕೃಷ್ಣಾ ತೀರದಿ

ಶ್ರೀ. ಭುಜೇಂದ್ರ ಮಹಿಪನಾಡಿ

ಕೃಷ್ಣಾತೀರದಿ ಕುಣಿಯುತಲಿರುವಳು
ಸೃಷ್ಟಿಯ ಸುಂದರ ಪೋತಶ ರಮಣಿ!
ಹೊನ್ನಿನ ಹೊಳೆ ಹರಿಹರಿದಂತಿದೆಯದೊ
ಕಣ್ಣಾಡಿಸುತಿರುವನು ತುಂಬಿದ ತರಣಿ!

* * * * * *

ಮಾಮರ ಕಾತಿದೆ ಮಲ್ಲಿಗೆ ಹೂತಿದೆ
'ಕುಹುಕುಹು' ಕೋಗಿಲೆ ಕೂಗಲು ಬಂದ
ಜನ-ವನ ದನಕರು ತರುಲತೆ ನೆಲಜಲ
ನವಿಪೊಡೆಪಾಲಿಸುವಂತಿದೆ ನಿಂದು!
ತರತರ ಗಿಡಗಳು ತುಂಬಿದ ಬನವಿದೆ
ಹಾಡುತಲಿರುವುದು ಹಕ್ಕಿಯ ಹಿಂಡು!
ಪೇರಳೆ ನೇರಳೆ ಹಣ್ಣಿನ ಬೇಟೆಗೆ
ಗಳವುತ ಬರುವುದು ಗಿಳಿಗಳ ದಂಡು!
ಕೃಷ್ಣಾತೀರದಿ ಕುಣಿಯುತಲಿರುವಳು
ಸೃಷ್ಟಿಯಸುಂದರ ಪೋತಶ ರಮಣಿ!
ಹೊನ್ನಿನ ಹೊಳೆ ಹರಿಹರಿದಂತಿದೆಯದೊ
ಕಣ್ಣಾಡಿಸುತಿರುವನು ತುಂಬಿದ ತರಣಿ!

* * * * * *

ಹುಕ್ಕುಕ್ಕಿನ್ನುತ ಬಿತ್ತರಗೊಳ್ಳುವ
'ಡೂರದ ಬಾನುಲಿ ಅಲಿಸು ಒಮ್ಮೆ!
ಅದು ಬಗಯೋಗಿಯ 'ಶಂಬರಗಾಗಿ'ಯ
ಎದೆಯೋಗಾತುವ ಮಂತ್ರದ ಮೈಮೆ!
ಚಿಚ್ಚೀ ಚಿಚ್ಚೀ ಗುಬ್ಬಿಯ ಮೇಳುಲಿ
ಚುಕ್ಕುಚು ಚುಕ್ಕುಚು ಹಕ್ಕಿಯ ತಾಳಗೆ
ಗೊಜ್ಗೊಜ್ಗೊಜ್ ಗೊಂಗಾಹಕ್ಕಿಯ ವಾದ್ಯ
ಸರಿಪೊಂದಿದೆ ನೋಡದೊ ಹಿಮ್ಮೈಳಗ!
ಕೃಷ್ಣಾತೀರದಿ ಕುಣಿಯುತಲಿರುವಳು
ಸೃಷ್ಟಿಯ ಸುಂದರ ಪೋಡಶ ರಮಣಿ!
ಹೊನ್ನಿನ ಹೊಳೆ ಹರಿಹರಿದಂತಿದೆಯದೊ
ಕಣ್ಣಾಡಿಸುತಿರುವನು ತುಂಬಿದ ತರಣಿ!

ಸ್ವಾಗತಗೀತೆ

ಶ್ರೀ. ರಾ. ಸು. ಸೈಲಾಯ

ಗ

ಎನಿತು ಕಾಲದುರು ಬಯಕೆಯ ಸಿದ್ಧಿಯೊ!
ನಲ್ಲ ಬರುವ ಮನೆಗೆ!
ಮಬ್ಬು ಸರಿದ ಮುಂಜಾವ ನಸುಕಿನಲಿ
ಸ್ವಪ್ನವಾಯಿತೆನಗೆ.

೨

ಹಲವು ದಿನ-ನೀರಿಟ್ಟು ಬೆಳೆಯಿಸಿದ
ಕಾತರೆಂಬ ಗಿಡವು-
ಗರ್ಭ ಧರಿಸಿ ನವಮಾಸ ತುಂಬಿತಾ
ಹೆರುವ ದಿವಸವು ಇಂಳೆ!

೩

ತಾಯ್ತಂದಾ- ತಂದೆವಿರ ನೀವ್ ಮೊದಲೇ
ಗೈದ ಪುಣ್ಯ-ಹರಕೆ
ಫಲಿಸಿತೈ! ನಲ್ಲ ಬರುವನ್ಯೆ! ತಣ್ಣ-
ಗಿರಲಿ ನಿಮ್ಮ ಒಡಲು!

೪

ಅಕ್ಕತಂಗಿಯರೆ ಕೇಳಿರೆಂತು ನಿ-
ಮ್ಮಿನಿಯನೆಂತು ಬಂದ?
ಅನ ಬಗೆಯಿಂದದಾವ ಸಿಂಗರದಿ
ಒಳಗೆ ಕರೆದಿರಂದು?

೫

ಯಾವ ಬೆಡಗು ಬನ್ನಾಣವರಿಯೆನೋ
ಮೆಚ್ಚಬೇಕು ಏನ?
ಯಾವ ಗಾಡಿಯಲಿ ಮೋಡಿ ವಿದ್ಯೆಯಿಂ
ಮೆಚ್ಚಬೇಕು ಅವನ?

೬

ವ ನದಂಗಳವನ್ನುಡಿಗಿ ಶಾಂತಿ ಸುವಿ-
ಚಾರ ರಂಗವಲ್ಲಿ-
ಹಾಕಿ ನಿಲುವೆನೋ ಬಾಗಿಲಲಿ, ವಿಮೇ
ಭಾವಪೀಠದಲ್ಲಿ

೭

ಕುಳಿತಾಜ್ಞೆಯೆನಗೆ ಬೆಸಸಬೇಕೊಡೆಯ
ನಿನ್ನ ದಾಸಿ ನಾನು!
ಹಿರಿದಾದ ಅರಸಿ ಪಟ್ಟವದುನ್ಯೆ ಎ-
ನ್ನಂತರಾತ್ಮ ನೀನು!

ಜೀರ್ಣೋದ್ಧಾರ

(ವಿಡಂಬನ ನಾಟಕ)

ಶ್ರೀ. ಬಿ. ಆರ್. ವಾಡಪ್ಪಿ ಎಂ. ಎ., ಬಿ. ಟಿ. ಧಾರವಾಡ

●

[ತೆರೆ ತೆರೆದಾಗ ೬ ಗಂಟೆ ಗಡಿಯಾರದಲ್ಲಿ ಬಾರಿಸುವುದು. ಸಾಮಾಂ. ಕಾಲದ ತರುಗಾಟಕ್ಕಾಗಿ ಸಿದ್ಧರಾಗಿ ನಿಂತ ಭೀಮರಾಯರು — ರಂಗದ ಮಧ್ಯದಲ್ಲಿ ನಿಂತು—ಒಳಗಡೆಯ ಬಾಗಿಲತ್ತ ನೋಡಿ ನಮಾಡಿ, ಹೆಂಡತಿಯನ್ನು ' ಏ, ಏ, ' ಎಂದು ಕೂಗುವರು.]

ಭೀಮರಾಯ :— ಈಗ ಆರು ಹೊಡೀತು; ಹೊರಗ ಹೋಗ ಬೇಕಂತೀನಿ .... ಒಳಗ ಇದ್ದೀಯೇನು ?

ಕಮಲಕ್ಕ :— (ಒಳಗಿನಿಂದಲೇ) ಹೂಂ, ಇದ್ದೇನಿ .... ಇದ್ದೇನಿ .... ಏನು ಬೇಕಾಗಿತ್ತು ಽ ಽ

ಭೀಮ— ಇಲ್ಲೆ ಬಂದರೆ.... ಬಾ..... ಒಳಗಿನಿಂದನು ನನ್ನ ಹೊರಗ ದಾಟಪಾಕಬೇಕಂತೀ ಏನು ?

ಕಮಲಕ್ಕ :— ಅಯ್ಯ ! ಯಾವಾಗಾದರೂ ಸುಳ್ಳುಸುಳ್ಳ ಸಿಟ್ಟು ಮಾಡತೀರಿ ! ಏನು ಬೇಕಾಗಿತ್ತು ? (ಹೊರಗೆ ಬರುವಳು.)

ಭೀಮ:— ಮಧ್ಯಾನ್ಹದಾಗ ಒಂದು ಕಪ್ಪು ಚಹಾ ಮಾಡಿಕೊಂಡು ನಾನೇ ಕುಡ್ಯೂದೇ ?.... ಯಾರ ಮನಿಗೆ ಹೋಗಿದ್ದಿ ? ಹೆಂಗಸರ ಹರಟ್ಯೇ ಅಂದ್ರ ಮುಗಿಯುವ ಹಾಂಗೇ ಇಲ್ಲ !

ಕಮಲಕ್ಕ:— ಏನು ತಪ್ಪು ಆತ್ಯ ? ' ಗಂಡಸರ ಕೈಲೆ ಚಹಾ ನಿಟ್ಟಗ ಆಗತದ .... ಹೆಂಗಸರು ಬರೇ ಸಕ್ಕರಿ ಸುರುವ್ತಾರ ' ಅಂತ ಒದರಾಡತಿರತೀರಿ. .... ತಾವೇ ಮಾಡಿಕೊಳ್ಳೀ ಅಂತ ಅಲ್ಲೇ ಕೂತೆ !

ಭೀಮ :— ಛೆ, ಛೀ, ಈ ಬುದ್ಧಿ ನನಗ ನಿನ್ನಿಂದನ ಬಂತು ನೋಡು.

ಕಮಲಕ್ಕ:— ಬುದ್ಧಿ ಇರೋದು ಬ್ಯಾರೆ.... ರೊಕ್ಕ ಬರೋದು ಬ್ಯಾರೆ ! ಈ ಮಾತು ನಿಮಗ ಹೊಳಿಯವಲ್ಲದಲ್ಲ.... ಇಷ್ಟು ದಿನಸ ಅದರೂ !

ಭೀಮ:— ಏನ ಮಾತಿಗೆ ಮಾತು ಹೊಂದದ ಹಾಂಗ ಮಾತಾಡ್ಲಿಕ್ಕೆ ಎಲ್ಲಿ ಕಲತೀ ?

ಕಮಲಕ್ಕ: ಬರೇ ಸರಳ ಮಾಕಾಡಿತೋತ ನಿಮ್ಮಂಗ ಕೂತರ, ಮಂದಿ ಹ್ಯಾಂಗ ಮುಂದ ಬಂದಾರೂ ಽ ಽ ?

ಭೀಮ:— ಏನೋ ನಿನ್ನ ಮಾತಿನ್ಯಾಗ ಬಹಳ ಅರ್ಥ ಇದ್ದಾಂಗ ಕಾಣಸ್ತದೆ. ಈ ಖುರ್ಚೀ ಮ್ಯಾಲೆ ಕೂತು ಜಿಜ್ಞಾಸಾ ಮಾಡು. ಸಂಭವಳಾಗು. ಹ ಹ !

ಕಮಲಕ್ಕ:— ಮತ್ತೂ ಅನೇ ಸಂಸ್ಕೃತದಾಗಿನ ಸುಟ್ಟಮಾತು ! ಕಾಳಿದಾಸ ಹೀಂಗ ಅಂತಾನ,.... ಕನಕದಾಸ ' ವಿಷಯದ ವಿಚಾರ ಬಿಡು ' ಅಂತಾನ.... ಅಂತ. ಎಲ್ಲಾ ಬಿಟ್ಟು ಕೂತರ ಮನೀ ಒಂದು ನಡೀಬೇಕಲ್ಲ ಅಂತ ಅಂತೀನಿ ! ... ' ವಕೀಲಿಕಿಗೆ ಬಹಳ ಹರೇಮಿ ಇರಬೇಕಾಗ್ತದ ಮತ್ತ ದುಡೀಬೇಕಾಗತದ ' ಅಂತ ನನ್ಮುಸ್ಪ ಮ್ಯಾಲಿಂದಮ್ಯಾಲೆ ಅಂತಿರತಾನ.

ಭೀಮ:— ಕಾಲೇಜದಾಗ ಕಲಿಸೊ ಪ್ರೊಫೆಸರಂಗಿಂತಾ ನಿನ್ನ ಬುದ್ಧಿ ಮುಂದೋಡತದ ನೋಡು ! ನಿನ್ನಿಂದನ ನಾ ಇನ್ನ ..... ಮುಂದ ಆಗೋ ಪ್ರಸಂಗ ಬಿತ್ತು. ಹುಚ್ಚೀ ಹುಚ್ಚೀ, ನಿನಗ ಏನು ತಿಳೀತದ ?

ಕಮಲಕ್ಕ:— ಪ್ರೊಫೆಸರಂದು ಕಲಸೋದಿಷ್ಟ ಕೆಲಸ ! ಹೊಟ್ಟೀ ತುಂಬಿಕೊಳ್ಳೋ ಮುಂದ ಕಲಿತದ್ದು ಮರೀತ ಬಿಡಬೇಕೂ ಅಂತೀನಿ ನಾ. ಅಂದರ, ನಾಕು ದುಡ್ಡು ಳಿಸಿ ಮಂದೀ ಒಳಗ ಬರತೀವಿ.

ಭೀಮ:— ನೀ ಈವತ್ತ ನಿಮ್ಮ ಚರ್ಚಾಕೂಟದ ಅಧ್ಯಕ್ಷ ಆಗಿದ್ಯೋ ಏನು ಮಣ್ಣೋ.... ಏನೇನು ಚರ್ಚಾ ನಡೀತು ಕಟ್ಟೇಮ್ಯಾಲೆ ?

ಕಮಲಕ್ಕ:— ಖರೇ ವಿಚಾರಮಾಡ್ರಿ.... ಆ ನಮ್ಮ ಸುಂದ್ರಾಬಾಯಿಗಂಡ ಏನು ಕಲಿತಾನ ? ಊರಾಗ ಇರೋದಿಲ್ಲ ಪ್ರಾಣಿ.... ಳಿಸಿ ತಂದು ಹಾಕತಾನ ! ನಿನ್ನೆ ಎರಡು ಶಹಾಪೂರದ ಸೀರೀ ತಂದಾನ..... ತಂದು ತೋರಸಲೇನು ನಿಮಗ ?

ಭೀಮ:— ಮಹಾರಾಯಳ, ಹಾಂಗ ಮಾತ್ರ ಮಾಡಬ್ಯಾಡ ! ನಿನಗ ಸೀರಿ ಬೇಕಾಗಿದ್ದರ, ನಾಕು ದಿನಾ ಸುಮ್ಮನಿರು. ಹೊಲದ ರೊಕ್ಕ ಬಂದಮ್ಯಾಲೆ ತಂದುಕೊಡತೀನಿ.

ಕಮಲಕ್ಕ:— ಅಯ್ಯ ಹೊಲಾನ ! ಹೊಲದ ಮ್ಯಾಲೆ ಯಾರು ನಂಬಿ ಮುಂದಾಗ್ಯಾರ ? ಅದಕ್ಕ ನಾ ಹೇಳೋದು ... ಏನ್ರೀ ಈ ವಕೀಲಕ್ಕೇ ಬಿಟ್ಟು ಒಂದು ಧಂಡೇ ಮಾಡ್ರಿ — ಅಂತ.

ಭೀಮ:— ಅಂದ್ರ.... ವಕೀಲಕ್ಕೇ ಅಂಬೂದು ಧಂಡೇನ ಅಲ್ಲಾ ಅಂತೀ ಏನು ?

ಕಮಲಕ್ಕ:— ಆ ಸುಂದರಕ್ಕನ ಗಂಡನ್ನ ನೋಡ್ರಿ.... ಈಗ ಮೂರು ವರ್ಷದಾಗ ನಾಕು ಸಾವಿರ ರೂಪಾಯಿ ಕೊಟ್ಟು ಮನೀನ ಖರೀದಿ ಹಿಡಿದ. ಅವ ಏನು ಕಲತಾನ ?.... ಮ್ಯಾಟ್ರಿಕ್ ಸಹಿತ ಆಗಿಲ್ಲಂತ ! ಸುಂದರಾಬಾಯಿ ಕೈಯಾಗ ರೊಕ್ಕಾ ಕೊಟ್ಟರ ತಾನ ಪಾಸ !

ಭೀಮ:— ಹೂಂ, ಹೀಂಗೇನು ? ನಾನು ನಿನ್ನ ಕೈಯಾಗ ಎಲ್ಲಾ ಒಪ್ಪಿಸಿ ಸುಮ್ಮನ ಕೂಡಬೇಕೂ — ಅಂತೀ ಏನು ?

ಕಮಲಕ್ಕ:— ಅಕಾ ನೋಡ್ರಿ.... ಒಮ್ಮೆಲೇ ಸಿಟ್ಟ ಬರತದ ನಿಮಗ ! ರೊಕ್ಕಾ ತಗಿಯೋದು ಒಂದು ಗುಣಾ ಇರತದ ! ನೀವ ವಿಚಾರ ಮಾಡ್ರಿ, ನಾ ಹೇಳೋದು ಸುಳ್ಳೇನು ?

ಭೀಮರಾಯ:— ನೀನು ಖರೇ ಅರ್ಧಾಂಗಿ ನೋಡು ! ಯಾಕಂದ್ರ ಮೊನ್ನೆ ನನ್ನ ಅಂಗಿ ಹರಿದದ್ದನ್ನ — ಹೊಲಿದು ಪೂರಾ ಅಂಗೀ ಮಾಡಿದಿ ! ಮತ್ತ ಈಗ ರೊಕ್ಕಾ ಹ್ಯಾಂಗ ಹುಟ್ಟಿಸಬೇಕು ಅನ್ನೋದನ್ನ ಇಷ್ಟು ತಿಳಿಸಿ ಬಿಡಬಾರದ ? ನಿನ್ನ ಬುದ್ಧಿ ಹರತ ಅದ ಅನ್ನೋದು ನನಗ ಮೊದಲ ಹೊಳೆದಽದ !

ಕಮಲಕ್ಕ :— ಬಾ೯ ನಿಜಾಗ ಹೆಣಾಡಿದ್ರ ... ಈ ಬಗಕ್ಕಿಗ್ಯಾಗ ಕ್ಯಾಶೇತನ ಉಪಯೋಗ ಬೀಳೋದಲ್ಲ ಗುಳ್ಳುಸುಳ್ಳು ಇಲ್ಲ ದೊಂಗ. ಸೋಗು ಮಾಡೋ ಅವಗಿ .... ನಮ್ಮ ಸುಗೀತದ ಅಂತೀನ. . ನಾ.

ಭೀಮರಾಯ :— ನನ್ನ ಮಾತಿಗೆ ನನ್ನ ಒಪ್ಪಿಗಿ ಅದ! ಅದರ ರೂಪ ಕೊಡ್ಗ, ಕಾಕಿದರ ಹಣಾತ ಪುಣೀ ಹೋತೀರಾಗ ಹೇಳು! ಕೊಡ್ಬೇ ಸಲಾಮಾಗಿ ಕೊಡ್ಗ, ಬ ಕೊ ಜನರನ್ನ ಕಾಯೂ ಪುರಂದರದಾಸರು "ನಿಗರನೆಲ್ಲಾಗ್ಯನಿಮು!" ಎಂದು ಬಾಯಿ ನಮ್ಮು ಬುಟ್ಟರು. . . ಅಕಾ . . ಅಬಗ! . .

ಕಮಲಕ್ಕ : - ಅವರು ಕಂಪೂ ಕಾಂಡೂ ಪ ಪರು . . ನೀವೂ ಈಗ ತಾಂಬೂ ತಂಬಾರೀ ಹಿಡಿತೀರಿ ಕೀರೀನ? ಮನಸ್ಸಾ ಒಗ್ಗ ಬಿಗಬೇಕು . . ರಾವಣನಾಲೀಲಿ ಕಲಿಬೇಡು ಮುಗಬೇಕ!

ಭೀಮರಾಯ :— ಅಲ್ಲು, ಇದ್ದಕ್ಕಿಂಗ ಅಂತೀರೀ? ನಾ ಸಂನ್ಯಾಸಿ ಆಗತೀನಿ ಅಂತ ತಿಳಿದೇನು?

ಕಮಲಕ್ಕ :— (ಸೊಗಸಾಗಿ ನಗು) ಹೂ..... ನಾ ಯಾಕ ಅಂಜಲಿ! ನೀವ್ಯಾಕ ಸಂನ್ಯಾಸಿ ಆಗತೀರಿ ..... ಅದೇನೋ ಅಂತ ಕಲ್ತು..... .....

ಭೀಮರಾಯ :— ಹೋಗಲಿ ಏತ! ನಾ ಮನ್ಯಾಗs ಕೂತಕ್ಕ ಬಿಟ್ಟೆ....ಒಗಕ ಹೋಗಿ ಒಂದಿಗ. ಏ ನಕಾ ಮಾತು.....ನಿ ಬಹಳ ಗಂಟಲು ಬಿಗಿಗತ್ತು.

ಕಮಲಕ್ಕ :— ಆಗಲಿ ಮನ್ಯಾರಾಯರ! ನೀವು ಮನ್ಯಾಗಿದ್ದರ ನಮಗ ಕೆಲಸಾನs ತಪ್ಪುವಿಲ್ಲ.

[ಕಮಲಕ್ಕ ಒಳಗೆ ಹೊರಟು ಹೋಪಮಟ್ಟಿಗೆ — ರಾಯರು ತಮ್ಮ ಕೋಟಿನ್ನು ಗೂಟಕ್ಕೆ ತಗುಲಿಸಿ — ಪತ್ರಿಕೆಯ ಮುಖ ಒರಸಿಕೊಳ್ಳುತ್ತ ಏರಿಯಾ ಕುರ್ಚಿಯಲ್ಲಿ ಕುಂಡಿಯುತ್ತಿರುವಾಗಲೇ — ತಿಮ್ಮಣ್ಣನ ಪ್ರವೇಶ.]

ತಿಮ್ಮಣ್ಣ :— ಭೀಮರಾಯರು, ಮನ್ಯಾಗಿದ್ದೀರಿನs ?

ಭೀಮು :— ಬಾ೯ ತಿಮ್ಮಣ್ಣ. ಏನು ಸಮಾಚಾರಿಪಾ ..... ಮೀನಿನ ಬೇಳವಲ್ಲದು ..... ಯಾಕ? ನಿಂತಿರೆಲ್ಲ ಕೂತ್ರಿ ಬುರ್ಜಿ ಮ್ಯಾಲೆ..... (ನಡುಮನೆಯ ಬಾಗಿಲತ್ತ ಹೋಗಿ ಮಾತಿ) ಏ.... ...ತಿಮ್ಮಣ್ಣಿ ಬಾವಾರೆ, ಎರಡು ಗ್ಲಾಸು ಪಾನಕಾ ತೊಗೊಂಡು ಬಾ)

ತಿಮ್ಮಣ್ಣ :— ಪಾನಕಾ ಮಾತ್ರಿಕೆ ಹೇಳಿದ್ರೀನು? ಫೆಲೋನಸ ಆತು! ನಾನೂ ಎರಡು ದಿವಸ ಬಾರಾಸ ಇದ್ದಿದ್ದಿಲ್ಲ.

ಭೀಮು :— ಏನು ವಸೂಲಿಗೆ ಹೋಗಿದ್ದಿರೇನು? ಕೊಟ್ಟರೇನು ರೈತರು ರೊಕ್ಕಾನ?

ತಿಮ್ಮಣ್ಣ : - ಎಲ್ಲೀದರೀ....ನಾ ಸ್ಪಾರಾಗಿ ಬರಬೇಕಾದ್ರ ಸಾಕಾಗಿ ಹೋತು: ಮಳೀ ಇಲ್ಲಾ...ಬೆಳೀ ಬಂದಿಲ್ಲ....ಈ ವರುಸ ಕೊಡೂದಿಲ್ಲ—ಅಂತ ಹೇಳೀ ಬಿಟ್ರು.... ಎನು ಮಾಡೋಕು ಹೇಳ್ರಿ ?

ಭೀಮರಾಯ :— ನಾನೂ ಅದು ಗೊಂದಲದಾಗ ಬಿದ್ದೀನ್ರೀ! ಕೈಯಾಗ ದುಡ್ಡ ಇಲ್ಲದಾಗ ಅಕ್ಕಿ ಇದ್ರ, ನನಗ ತಲೀನ ಕೆಟ್ಟಾಗ ಆಗತದ! ಇಪ್ಪತ್ತೈದರಾ ನಮ್ಮಾನೆಗೂ ನೂರಗೂ ಸ್ವಲ್ಪ ಜಾಸ್ತೀನಾ ಅಕ್ಕಿ ಇದ್ದ್ರ.... ಈ ಪೆಟ್ಟಿ ಕೆಟ್ಟಿದೀ....ತಿಮ್ಮಣ್ಣಾ.

ತಿಮ್ಮಣ್ಣ :— ನಮಗೇನ ಬಿಚ್ಚಿ ಬಾ ಬಾಯಾರ! ಪಕೀಲಕೆಯಿಂದ ಬೆರಾ ಜಾರು ಬಂದು ಒರಸದ! ಬಿಚ್ಚೀನು ಮತ್ತೆ ?

ಭೀಮು :— ಅದೇನಿರಾ ನಿಮ್ಮ! ತಮ್ಮಣ್ಣಾ ಈ ವಿಷಯದಾಗ ನಮೋ ಇಲ್ಲಾಂತಾಗ್ತದ. ಎರಡು ಕೆಲಸಾಯಿತಿ ಮಾಡಾಗ. ಮೊದಲ ಮೀಂಡಿಕೊಂಡು ಇದ್ದರ ನಾಕ. ಮತ್ತ ಸಿಗತದ ನಮ್ಮಂತಹ ಸರಕ ಜನರಿಗೆ ಎರಡೂ ಇಲ್ಲ.

[ಒಂದು ಕಪ್ಪೆಯು ಕಿಂಗರವ ಎರಡು ಗ್ಲಾಸುಗಳನ್ನು ತಂದಿಟ್ಟು ಕಮಲಕ್ಕ ಒಳಹೋಗುವಳು. ಭೀಮರಾಯರು ಒಂದು ಗ್ಲಾಸು ತಿಮ್ಮಣ್ಣನಿಗೆ ಕೊಟ್ಟು ತಮ್ಮ ಗ್ಲಾಸು ಬಾಯಿಗಿಟ್ಟು ಕುಡಿಯುತ್ತಿರುವರು. ಕಮಲಕ್ಕ ಒಂದು ತಟ್ಟೆಯಲ್ಲಿ ಒಂದೆರಡು ಮಿಠಾಯಿ ತಂದಿಟ್ಟು ಹೋಗುವಳು.]

ಕಮಲಕ್ಕ :— ಏನ, ತಿಮ್ಮಣ್ಣಾರವರ . . ಒಪ್ಪ ಆದರಾತ ?

ಮಗನಿಗೆ ಪದಾ ಸಿಕ್ಕಸೋ ಏನು ?

ತಿಮ್ಮಣ್ಣ :— ಎಲ್ಲೆಂದು ಕಮಲಕ್ಕಾ ... ದೊಡ್ಡವರು ಬಾಯಿ ಬಿಟ್ಟು ಹೇಳಾಗಿ ಈ ವರಸಿಗೆ ಕಾಲು ಬಂದು ಬೀಳೂದ ಹೌದಾತ. !

ಭೀಮು :— ಅಲಾ ತಿಮ್ಮಣ್ಣಾ ಬಾಯಿ ಬಿಡಾಕ ಏನಾ! ಹಿಂಗ ಬೀಳೂ ಒಡ ನಮಸಮಾಚಾರವ ... ಹೇಳಬಾರ್ದಾ

ಕಮಲಕ್ಕ :— ನಮ್ಮ ಮನಿಷ ನರು ಮನಿಕ್ಕ ಸಿಕ್ಕಿಂತ ಪೂರ್ತಾಸ ನೋಡ್ತಿ ತಿಮ್ಮಣ್ಣಾ! ಮನಾವ್ರಿಂತ ಮಚ್ಚಿಕೊಂಬಾವಿಲ್ಲ!

ಭೀಮು :— ನೆಗಾಡ್ತೀ ತಿಮ್ಮಣ್ಣಾ ... ನಾ ಏನ ಮಾತಾಡಾಂವನ ಅಂತ ತಿಳಕೀನ? ಕೂಸಾನ ವಿವಾಹಾನ್ನ ಕೆಟ್ಟ ... ಎಂಥ ಮಾಡೋದದ !

ಕಮಲಕ್ಕ :— ನಾ ಹೇಳ್ಲೀನು ? ನಮ್ಮ ತಂಗೀಲಿಂಗನ್ನ ಎನರಿ ಉಸಾಯಿ ಹುಡುಕಲೇಕ. ಪ್ರಯತ್ನಾನ ಆಗಾಂವದು .. ಪುಣ್ಯದೇ ಬಂದಿರಬೇಕ. !

ಭೀಮು :— ತಿಮ್ಮಣ್ಣಾ ಈಕೀ ಮಾತ ನಿನ್ನ ಒಪ್ಪಿ ಆನಸದು. ನೀನೂ ನಾನೂ ಕೂಡಿ ಎನರಿ ಬಾಯಿ ಬಿಡಾ ಹಾಂಗಿಲ್ಲಾ ಧಂಡಿ ತಗಿಯೋಣಾ .... ವಿಚಾರವಾತ. !

ಕಮಲಕ್ಕ :— ಒಬ್ಬರಿಂತ ಇಬ್ಬರು ಬೇಗ ಎನರಿ ಬಾಯಿ ಕವಾಟ ಪವಾಟ ಮಾತಾಡ್ರಿ. ... ಅಂದಹಂಗ ಒಳ ಬಿಸಿಕ್ಕ ಬೇಕತ್ತದ !

ತಿಮ್ಮಣ್ಣ :— ಕಮಲಕ್ಕಾ, ನಿಮ್ಮ ಮಾತಿಗೆ ನನ್ನ ಒಪ್ಪಿಗೀನs ಇದ ಆದರ ಯಾರ ಕೆಲಸಾ ಕೈಕೊಳ್ಳಬೇಕ! ಇದs ತಿಳಿಯೂದಿಲ್ಲ ನಮಗ.

ಭೀಮರಾಯ :— ಆದರೂ ತಿಮ್ಮಣ್ಣಾ, ಒಂದು ಸಣಕಾಜದ ಕಾರ್ಯ ಕ್ಕೆ ಕೊಂಡರ ನೆಟ್ಟಗಲ್ಲ ?

ಕಮಲಕ್ಕ :— (ಕೈಯಲ್ಲಿಯ ತಟ್ಟೆ ಗೋಡೆಗೆ ಹೊಂದಿಸಿಟ್ಟು ಭೀಮ ರಾಯರ ಎದುರಿನ ಗೋಡೆಗೆ ಬಂದು ನಿಂತು, ಹುಬ್ಬುಗಳ ಧ್ವನಿ ಯಿಂದ) ನೀವು ಹೀಂಗೆಲ್ಲಾ ವಿಚಾರ ಮಾಡೋದು ನೋಡಿ ರರ, ನಮ್ಮ ಹಾಳಗುಡಿ ಹನುಮಪ್ಪನ ಕೈಯಾ ಆತ್ಕೊಂಡ ಏನೇನೋ ಅಂತ ಸಂಕಡವು ಬರ್ತ್ತದ ನನಗ !

ತಿಮ್ಮಣ್ಣಾ :— (ತುಸು ತಡೆದು ಮೂವರೂ ಒಬ್ಬರಮ್ಮೊಬ್ಬರು ನೋಡು ತ್ತಿರುವಾಗ) ಹಾ – ಹಾ . . ಕಮಲಕ್ಕಾ . . ಈಗ ನನಗ ಹೊಳೀತು ನೋಡ್ರಿ ! ಒಟ್ಟು ದೇವರು ದೊಡ್ಡವ !! (ಕೈಮು ಯುತ್ತ) ದೊಡ್ಡಾವಾ ಅಂದೆ !!!

ಭೀಮರಾಯ :— ಏನು ಹೊಳೀತೋ . . ತಿಮ್ಮಣ್ಣಾ ? ಕಗ್ಗೇದು ಮುಚ್ಚ್ಕೆತೀ, ಕೈಯೇನು ಮುಗೀತೀ ಮುಚ್ಚಣ್ಣಾಂಗ . . !

ತಿಮ್ಮಣ್ಣಾ :— ಅಲ್ಲಿದ್ದೀ ಭೀಮರಾಯಾ . . ಈ ಹಾಳು ಹನುಮಪ್ಪನ ಗುಡೀ ಜೀರ್ಣೋದ್ಧಾರ ಕಮೀಟಿ – ಅಂತ ಸ್ಥಾಪನಾ ಮಾಡಿ ಬಿಡೋಣ . . ಏನಂತೀ ?

ಕಮಲಕ್ಕ :— (ಖುಶ್ಕಾಕೆ ತುಂಬಿ) ಆಕಾ ನೋಡ್ರಿ; ದೇವರ ಮಹಿಮಾ ಅಂದ್ರ ಹೀಂಗಿರತ್ತದ ! ನಿನ್ನೆ ಶನಿವಾರ ನಾ ಗುಡಿಗೆ ಹೋದಾಗ ಬೇಡಿಕೊಂಡು ಬಂದಿದ್ದೆ – ನಮ್ಮ ಮನಿಯವರಿಗೆ ಅನುಗ್ರಹ ಮಾಡೂ ಅಂತ !

ಭೀಮರಾಯ :— ತಿಮ್ಮಣ್ಣಾ, ನೀನು ಬಿಡ್ಮುಖ್ತ ಆಗಿಬಿಡು; ನಾನು ಕಾರ್ಯದರ್ಶಿಯಾಗಿ–ಬಿಡತೇನಿ.

ತಿಮ್ಮಣ್ಣಾ :— ಛೇ . . ಛೇ . . ಹಾಂಗ್ಮಾತ್ರಂಗದು . . ನಿವು ಪಕೀ ಲರು, ಮಹನದಾರ್ರು . . ನೀವು ಅಧ್ಯಕ್ಷ ಆಗ್ರಿ !

ಕಮಲಕ್ಕ :—ಅದರಾಗೇನದ . . ನೀವು ಅಧ್ಯಕ್ಷರಾಗ್ರಿ . . ತಿಮ್ಮಣ್ಣಿ ಮತ್ತೇನರೇ ಆಗ್ರಿ !

ಭೀಮರಾಯ :— ಮತ್ತೇನದೆ ಆಗ್ಲೀ ಅಂದ್ರ . . ಹಾಂಗಾದ್ರೆ ಬೇಳ್ಳೀ ಆತೀಯೇನು ? ಹುಚ್ಚಕ್ಕಾ, ನಿಂದು ಗಡಿಬಿಡೀ ಮಾಡ ಬ್ಯಾಡ ದೇವರು ಒಬ್ಬಿ ಕೊಟ್ಟು ಮಾಳ್ಯಾಕ್ಕ . . ಕಳಕೆ ಕೈಗೀದು ಬ್ಯಾಡಾ. ಒಂದು ಸಾಲೀನ ತೊಗೊತೀನಿ – ಎಲ್ಲ ಬರೀಬಿಟ್ಟರ ನೆಟ್ಟಗ ಆಗತ್ತದ.

ತಿಮ್ಮಣ್ಣಾ :— ಜೋದರಿ . . ಒಮ್ಮೊಮ್ಮೆ ಹೊಳೆದದ್ದು ತಿರುಗಿ ನೆನಪು ಆಗತಿರೂದಿಲ್ಲ. ಅದಕ್ಕs ಲೇಖೀ ಬೇಕು ಅಂತಾರಲ್ಲಾ ನೃಪ ಮಾರದಾಗ . . ಲೇಖೀ ! ಹ ಹ ಹ . . .

(ಇದರ ಮಧ್ಯ ರಭಸಕ್ಕೀಂದಾಗ ಕಮಲಕ್ಕ ಒಳಗೆ ಹೋಗಿರುವರು.)

ಭೀಮು :— ಇಲ್ಲಿ ನೋಡು ತಿಮ್ಮಣ್ಣಾ, ಕಮೀಟಿಗೆ ಎಲಂತ ಹೆಸರಿಡ ಬೇಕು ? (ಕಮಲಕ್ಕ ನಿಂತ ಸ್ಥಳ ನೋಡಿ ತುಸು ದಿಗಿಲು ಗೊಂಡು) ಯ್ಯ ನೀ ಒಳಗ ಹೋದೇನು ? ಬಾ ಮಾತಾಡಾಮಳ..

(ಕಮಲಕ್ಕ ಕಾಣೀಲು ಕ್ಷು ತಂದಿಟ್ಟು .

ಕಮಲಕ್ಕ :— ಹೂಂ, ನಡೀರಿ ನಿಮ್ಮ ಕೆಲಸ. ಕತ್ತಲಾಗಿತ್ತೂ ಅಂತ ದೀಪಾ ತಂದಿಟ್ಟೆ. — ಎಲ್ಲಾದಕ್ಕೂ ಅವರನ್ನ ಏನ ಕೇಳತೀರಿ ನಾವ ! ನೀವs ಬರೆದುಬಿಡ್ರೀಲಾ !

ಭೀಮು :— ಹಾಂಗಂದ್ರ ಹ್ಯಾಂಗ, ತಿಮ್ಮಣ್ಣಾ ನಮ್ಮ ಜೀವದ ಗೆಳೆಯ ! ಯಾಕ್ಕೆ ತಿಮ್ಮಣ್ಣಾ ?

ತಿಮ್ಮಣ್ಣಾ :— ಅದ್ಯಾಗೇನದs ಭೀಮರಾಯರs . . . ಒಟ್ಟು ಕೆಲಸ ಒಂದು ಚೊಕ್ಕ ಆದ್ರ ಆತು !

ಭೀಮು :— ಒಳ್ಳೇದು "ಹಾಳಗುಡಿ ಹನುಮಂತದೇವರ ಜೀರ್ಣೋ ದ್ಧಾರ ಕಮೀಟಿ" ಅಂತ ಅಂತೀನಿ.

ತಿಮ್ಮಣ್ಣಾ :— ಹಾಳುಗುಡಿ ಅಂತ ಅನ್ನಬ್ಯಾಡ್ರಿ; ಕೇವಲ "ಹನು ಮಂತದೇವರ ಗುಡೀ ಜೀರ್ಣೋದ್ಧಾರ ಕಮೀಟಿ" ಅನ್ರಿ; ಅಂದರ ನೆಟ್ಟಗ ಆಗತ್ತದ.

ಭೀಮು :— ಆಗಲಿ, ಹಾಂಗನ್ನು ಬರೀತೀನಿ. ಮುಂದ ಹೀಂಗ ಬನ್ನಿಹ ಮಾಡಿಕೇತೀನಿ :

ಮಾನ್ಯರೇ,

ಊರ ಮಧ್ಯದಲ್ಲಿದ್ದರೂ ಗುಡಿ ಹಾಳುಬಿದ್ದು ಬಹಳ ದಿನ ಗಳಾದವು. ಇದನ್ನು ನೋಡಿ . . . ಜೀರ್ಣೋದ್ಧಾರ ಅವಶ್ಯ ಮಾಡಲೇಬೇಕಾದ ಕೆಲಸ ಅಂತ ನಮಗೆ ಅನಿಸಿದುದರಿಂದ, ಈ ಕಮೀಟ್ಟಿನಿಮ್ಮನ್ನ ತಾವೀಲಿ ೭–೧–೧೯೩೬ ರಂದು ಸ್ಥಾಪಿಸಲಾ ಯಿತು. ಎಲ್ಲ ಮಾನ್ಯರೀಯರು ಇದನ್ನು ತಿಳಿದು, ಮುಕ್ತಹಸ್ತ ಧನಸಹಾಯ ಮಾಡಿ ಹನುಮಂತದೇವರ ಕೃಪೆಗೆ ಪಾತ್ರರಾಗ ಬೇಕೆಂದು ವಿನ್ನಪ.

ಕಾರ್ಯದರ್ಶಿ ಅಧ್ಯಕ್ಷ
ತಿಮ್ಮಣ್ಣಾ ಭೀಮರಾಯ

ತಿಮ್ಮಣ್ಣಾ :— ಭೀಮರಾಯ, ನಾಳ್ಳು ದುಡ್ಡು ವಿಚಾರ ಆದರ ಆಗಲಿ, ಒಮ್ಮೆ ಪರ್ತಮಾನದಕ್ಕ ನಾಗ ಕೆಲಸ್ಟು ಬಿಡೋಣು. ಭಕ್ತ-ವೃಂದ ಮನಿಯವರ್ಗಿ ಮಾಡಿದರೂ ಮಾಡಲಿ.

ಕಮಲಕ್ಕ :— ಹಾಂಗ್ ಮಾಡ್ರಿ. ಜನರಿಗೆ ತಿಳಿದರ ದೇವರ ಸೇವಾ ಮಾಡೋದೂ ಮಾಡತಾರ.

ಭೀಮು :— ಕೆಲವ ಸಲ್ಹಾದಬಲ್ಲೂ ಮತ್ತ ನಾವತೀ ಪುಸ್ತಕಾನೂ ನಾಳೇ ಭಾವಿಸಲಿಕ್ಕೆ ಕೊಟ್ಟುಬಿಡೋಣು.

ಕಮಲಕ್ಕ :— ಇವತ್ತ ಮಾತ್ರಿಯನ್ನ ಫೆಲೋ ಆದ ! ನೋಡ್ರಿ, ಕೂತಕಲ್ಲಿನ ಮಾತ್ರಿ ಕೆಲಸ ಸಲ್ಲಂಗ ಮಂದಿ ಆಗಿಬಿಟ್ಟಿತು ?

ಭೀಮು :— ಇದೆಲ್ಲಾ ನಿನ್ನ ಪುಣ್ಯ ಮಂಜಾರಾಯಳ ! ಮನಿಕೋ ತಿಮ್ಮಣ್ಣಾ ?

ತಿಮ್ಮಣ್ಣಾ :— ಕಮಲಕ್ಕಾ, ನೀವೂ ಹೆಣ್ಣುಮಕ್ಕಳೊಳಗ ಈ ಮಿಸ್ಟೀ ಕೇಳಿತೀರತಕ ? ಇನ್ರಿ, ಭಾಳಾಕರು ನಾಳು ದುಡ್ಡು ಕೊಟ್ಟರ ನಮಗ ಬುದ್ಧಿಹೇಳಕ ಬೇಕತದ ... ಮತ್ತ.

ಭೀಮು :— (ಸಮಾಧಾನಭಾವದಿಂದ) ಇದು ನೋಡು ತಿಮ್ಮಣ್ಣಾ ಇದಂತಾಗ ಇಪ್ಪಾಗಿನ ಸಾಧನ್ಯದ–ಮುಂದಿನ ಸಾಧನ್ಯದ ಏನಂತೀ ?

ತಿಮ್ಮಣ್ಣ:— ಭೀಮರಾಯಾ, ಇನು ನಮ್ಮ ಉನಶನ್ಯೆರಾಗ್ಯ ದೇವರ ಹೆಸರಲೇ ನಾಕು ಮತ್ತು ಗಳಿಸಿಕೊಂತು ರಾವು, ರಾಮ' ಅಂತ ಭಜನೇ ಹೊತವರಾತು,—ದೇವರ ಮುಂದ ಕೂತು.

ಭೀಮ:— ಅಯ್ಯಾಕೋ ತಿಮ್ಮಣ್ಣಾ! ದಿನಾ ನಾವು ಇನ್ನ ಹನುಮಪ್ಪನ ಗುಡೀಗೇ ಹೋಗಿ ಕೂಡೋಣ; ಅಂವ್ರ ಮಬ್ಬು ಜನ ನಮ್ಮನ್ನೆ ಕಂಡು ನಮುಸ್ಕಾರ ಮಾಕತಾರ, ತಿಳೀತಿಲ್ಲೇ ?

ಕಮಲಕ್ಕ:— ನಿಮಗ ಈಗ ಐದೇ ವ್ಯವಹಾರ ತಿಳೀತು ನೋಡ್ರಿ. ಹಿಂಗ ಮಾತಿಕೋತ ಹೋದ್ರ ನಾಕು ವರ್ಷಾಗ ಗುಡೀನೂ ಜೀರ್ಣೋದ್ಧಾರ ಆಗತಾವ.... ನಮ್ಮ ಮನೀ—ತಿಮ್ಮಣ್ಣನವರ ಮನೀನೂ ಉದ್ಧಾರ ಆಗತಾವ. ಯಾಕರೀ ತಿಮ್ಮಣ್ಣಾ ?

ಭೀಮ:— (ಹೆಂಡತಿಯ ಪಾವ ಭಾವ ತೀವಿ ನೋಡಿ, ಪುಸಿ ಕೋಪನಲ್ಲಿ) ನೀ ಇಲ್ಲೀ ಬರೇ ಮಾತಾಡಿಕೋತ ನಿಂತ್ರೆ ಹ್ಯಾಂಗ! ತಿಮ್ಮಣ್ಣಾನೂ ಇಲ್ಲೇ ಊಟಕ್ಕ ಉಳೀತಾನ. .... ಒಳಗ ಹೋಗಿ ಅತಿನೀ ಇಷ್ಟು ರಂಗುಮಾತಲಾ! ಒಬ್ಬ ಹನುಮಪ್ಪನ ಅನುಗ್ರಹ ನಮ್ಮ ಮ್ಯಾಲೆ ಅತೂ ಅಂತ ಈ ಬುದ್ಧಿ ಹೊಳೀತು ನಮಗ.

ತಿಮ್ಮಣ್ಣ:— 'ಶುಭಸ್ಯ ಶೀಘ್ರಂ' ಅಂತ, ನಾಳೇ ಈ ಪಾನತೀ ಪುಸ್ತಕ ಛಾಪಿಸಿ, ಕಾರ್ಯ ಸುರುವು ಮಾಡೇಬಿಡೋಣ!

ಭೀಮ:— ಓಹೋ, ಹಾಂಗs ಅಗ್ಲಿ. ಮತ್ತ ತಿಮ್ಮಣ್ಣಾ, ನಾಲ್ಕು ಊರು ತಿರುಗಿ ಮತ್ತು ಕೂಡಿಸಬೇಕಾಗ್ತದ . . .

ತಿಮ್ಮಣ್ಣ:— ಭೀಮರಾಯರೇ, ಅವರ ಕಾಳಜೀ ಬಿಡ್ರಿ. ತಿರುಗಲಿಕ್ಕೆ ನಾ ಫಟ್ಟು ಇಪ್ಪೀನಿ. ಪ್ಯಾಂಗ ಪ್ಯಾಂಗ ರಕಮು ಕೂಡತಕ್ಕದ, ಮನಿಯಾರ್ತರು ಮಾತತೀನಿ; ನಮ್ಮ ಮನೀ ಯೋಗ-ಕ್ಷೇವ ನೀವು ನೋಡಿಕೊಳ್ರಿ ತೀರಿತು.

ಭೀಮ:— ಅವರ ಚಿಂತೀ ಬಿಟ್ಟು ನೀ ಹೊರಡು ತಿಮ್ಮಣ್ಣಾ, . . ಕೈ ಮೇಲೆ ಕೈ ಹಾಕತೀನಿ . . . ಮತ್ತೇನು ? ನಾಡ್ದ ನೀ ಹೊರಟ್ಟ ಬಿಡು, ಫಿರ್ತಿ ಮ್ಯಾಲೆ!

ತಿಮ್ಮಣ್ಣ:— ನನಗಂತೂ ಇವತ್ತ ಮನಸಿಗೆ ಬಹಳ ಆನಂದ ಆನಸಲಕ್ಕೆ ಹತ್ತೈದ; ದೇವರ ಕೆಲಸ ಅಂದ್ರ ಹೀಂಗs ನೋಡ್ರಿ.

[ತುಸು ತಡೆದು]

ಭೀಮ:— ಹಾಂ . . . ಆತು, ನಾ ಒಳಗ ಅಡಿಗಿ ಆಗೇದೇನೋ ನೋಡಿ ಬರತೀನಿ; ಆರಾಮ ಕೂತ್ಯ. (ಒಳಗೆ ಹೋಗುವನು.)

ತಿಮ್ಮಣ್ಣ:—ಓಹೋ ಹಾಂಗs ಅಗ್ಲಿ ! ರಾಮ ರಾಮ! (ವರ್ತಮಾನ ಪತ್ರ ತಿರುವುತ್ತ) ನಾವು ಫಿರ್ತಿ ಮ್ಯಾಲೆ ಹೋದಾಗ . . ನಮಗ ತಿಳಿದ್ಹಾಂಗ ನಾವು ಮಾಡಿದ್ರಾತು!

ಭೀಮ:— (ಪ್ರವೇಶಿಸಿ) ಏನು ಮಾಡಿದ್ರಾತು ಅಂತೀದಿ ತಿಮ್ಮಣ್ಣಾ ?

ತಿಮ್ಮಣ್ಣ:— (ಮುಖ ಒರಸಿಕೊಂತು) ಇಲ್ಲೇನು, ಮನ್ಯಾಗೇನು ? ಒಬ್ಬ ಊಟಾ ಮಾಡಿದ್ರಾತು—ಅಂತ ಒಟಗುಡತಿದ್ದೆ . .

ಭೀಮ:— ಮತ್ತ . . ಬಾಯೀಸಾಹೇಬರು ಬೈತಾರೇನು ಮನ್ಯಾಗ ತಿಮ್ಮಣ್ಣಾ ?

ಜೀವನಪ್ರಕಾಶ

(ಕನ್ನಡ ನೂತನ ಮಾಸಪತ್ರಿಕೆ)

ಸಂಪಾದಕರು: **ಶ್ರೀಮತಿ ಶ್ಯೇನೂ ಹುಲಕೊಪ್ಪಕರ**

ಸಾಮಾಜಿಕ ಪ್ರಗತಿ – ಶಿಕ್ಷಣ – ಮನೋರಂಜನೆಗಳಿಗಾಗಿ ಕಾರ್ಯಮಾಡಲು ಹೊರಟ ಸದಭಿರುಚಿಯ ಪತ್ರಿಕೆಯಿದು.

ವಾರ್ಷಿಕ ಚಂದಾ ೬-೦-೦ ಬಿ. ಸುಂಚಿಕೆಗೆ ೦-೮-೦

ಪ್ರಭಾ ದಿಸ್ಟ್ರಿಬ್ಯೂಟರ್ಸ್, ಕಳಕವಾಡಿ-ಬೆಳಗಾಂವಿ

ತಿಮ್ಮಣ್ಣ:— ಭೇ . . ಭೀಮರಾಯಾ . . . ತಿರುಗಿ ನಾಲ್ಕು ಮಕ್ಕಳ ತಂದ್ಯಾದೆ! ಹ ಹ ಹ . . .

ಭೀಮ:— ನಡಿ, ಕೈಕಾಲು ತೊಳಕೊಳ್ಳೋಣ . . ರಾತ್ರೀನೂ ಆತು.

[ಇಬ್ಬರೂ ಒಳಗೆ ಹೋಗುವಾಗ ತೆರೆ]

ತಿನೆಯ ದೃಶ್ಯ

[ಈಗಾಗಲೇ ೭-೮ ದಿನಗಳು ಕಳೆದುಹೋಗಿವೆ. ಮುಂಜಾನೆ ೮ ಗಂಟೆಗೆ ಭೀಮರಾಯರು ತನ್ನ ನೋಕರ-ಶಿವಾರಿಯುಳ್ಳಿರುವಾಗ ಅವರ ಹಳೆಯ ಗೆಳೆಯ ನಾರಾಯಣರಾಯ ಪ್ರವೇಶಿಸುವನು.]

ನಾರಾಯಣರಾಯ:— ಏನು ಭೀಮರಾಯರೆ, ಹೊರಗ ಹೊರಟೇನು ? ಬಹಳ ಗಡಿಬಿಡಿ ಕಾಣಿಸ್ತ್ತದೆ.

ಭೀಮರಾಯ:—ಎಲಾ, ಇದೇನು ? ಬಡವರ ಮನಿಗೆ ಭಾಗೀರಥಿ ಬಂದ ಹಾಂಗ ಬಂದ್ರೆಲ್ಲಾ! ಬಹಳ ದಿನಸಾತು. ಕೂಡ್ರಿ ಖುರ್ಚೀಮ್ಯಾಲೆ.

ನಾರಾಯಣರಾಯ:— ನಿನ್ನೆ ರಾತ್ರೀನs ಬಂದೆ....ನಮ್ಮ ಮಗಳ್ನ ಕರಕೊಂಡು. ನಮ್ಮ ಅಳಿಯದೇವರು, ನೀವು ಜೀರ್ಣೋದ್ಧಾರ ಕೆಲಸ ಹಿಡಿವದ್ದು ಹೇಳಿದ್ರು. ಮತ್ತ ಪೇಪರನ್ಯಾಗೂ ಓದಿದ್ದೆ. ಆ, ಅವರ್ಯಾರೋ....ನಿಮ್ಮ ಹೆಸರು ಹೇಳಿ ನಮ್ಮ ಊರಾಗ ಈಗಾಗಲೇ ಎರಡುನೂರು ರೂಪಾಯಿ ಕೂಡಿಸ್ಯಾರ.

ಭೀಮರಾಯ:— ಅವನs—ನಮ್ಮ ಬೀಗರ ಪೈಕಿ. ತಿಮ್ಮಣ್ಣಿ ಅಂತ ಹೆಸರು. ನಾನs ಕಳಿಸೀನಿ.

ನಾರಾಯಣರಾಯ:— ಹೀಂಗೇನು ? :ಇದೊಂದು ಬಹಳ ದೊಡ್ಡ ಕೆಲಸಾ ಕೈಕೊಂಡೀರಿ. ಬಹಳ ಆನಂದ ಆಯಿತು. ಅದಕ್ಕ ಭೆಟ್ಟಿ ಆಗಿ ಹೋಗೋಣ ಅಂತ ಬಂದೆ.

ಭೀಮರಾಯ:— ದೇವರ ಸೇವಾ ನಮ್ಮ ಕೈಲಾದಷ್ಟು ಮಾಡೋದು! ಅವನೇ ಮಾಡಿಸಿಕೊಳ್ಳೋ ಅವ! ಈಗತ್ತ ಊಟ ನಮ್ಮಲ್ಲೇ ಅಗ್ಲಿ.

ನಾರಾಯಣರಾಯರು:— ಛೇ. ನಾ ಇವತ್ತು ಊರಿಗೆ ಹೋಗ್ಲಿಕ್ಕೇ ಬೇಕಾಗೇದ. ನಮ್ಮದೊಂದು ಮುದ್ದತು ಅದ ಕೋರ್ಟನ್ಯಾಗ ಏನ್ರೆಪಾ. ಒಟ್ಟು ಸಂಸಾರಾ ಅಂದ್ರ ತೊಂದ್ರೀನಽ ನೋಡ್ರಿ!

ಭೀಮರಾಯರು:— ಹೀಂಗೂ ಇನ್ನೇನು ಮಾಡೋದದ? ಬಹಳ ದಿವಸಕ್ಕ ಬಂದಿದ್ರಿ. ಹಳೇ ಗೆಳೆಯರು ಅಂತ ಅಂದೆ.

ನಾರಾಯಣರಾಯರು:— ಅದು ಖರೇ ಅದ ಬಿಡ್ರಿ. ನೀವs ಒಮ್ಮೆ ನಮ್ಮೂರಿಗೆ ಬರ್ರಿ. ನಾನೂ ನಾಕು ಮಂದೀ ಕಡೆ ತಿರುಗ್ಯಾಡಿ ಹಣ ಕೂಡಿಸಿ ಕೊಡತೇನಿ

ಭೀಮರಾಯರು:— ಬಹಳ ಸಂತೋಷ! ನೋಡ್ರಿ, ಮುಖ್ಯ ಧರ್ಮದ ಮ್ಯಾಲೆ, ದೇವರ ಮ್ಯಾಲೆ, ಶ್ರದ್ಧಾ ಬೇಕು. ಅಂದರ ದೇವರು ಒಳ್ಳೇದು ಮಾಡತಾನ!

ನಾರಾಯಣರಾಯರು:— ಭೀಮರಾಯರ, ಅಪ್ಪಣಿ ಕೊಡ್ರಿ; ನನಗ ಬಹಳ ಗಡಿಬಿಡಿ ಅದ. ಏನೋ ಸ್ವಲ್ಪ ಸವಡು ಮಾಡಿಕೊಂಡು ಬಂದಿದ್ದೆ. ಬರತೇನಾ!

ಭೀಮರಾಯರು:— ಗಡಿಬಿಡಿ ಮುಂದs ಇಟಕೊಂಡು ಬಂದುಬಿಟ್ಟೀರಿ. ಮತ್ತೊನ್ಮೆ ಬರ್ರೀ. ಮರೀಬ್ಯಾಡ್ರಿ....

[ನಾರಾಯಣರಾಯನು ಹೋದಮೇಲೆ, ಶತಪಥ ಮಾಡಿ, ನಡುಮನೆಯ ಬಾಗಿಲಿಗೆ ತಿರುಗುವನು. ಕಮಲಕ್ಕನೂ ಎದುರಿಗೆ ಬರುವಳು.]

ಕಮಲಕ್ಕ:— ಯಾರು ಬಂದಿದ್ರು? ನನಗೆ ಗುರುತsನ ಹತ್ತಲಿಲ್ಲ!

ಭೀಮರಾಯರು:— ಇವರು ನಮ್ಮ ಸಹಪಾಠಿಗಳು....ನಾರಾಯಣರಾಯಾ ಅಂತ ಹೆಸರು. ಒಳ್ಳೇ ಮನುಷ್ಯ. ನಾ ಪೇಪರಿನ್ಯಾಗ ಕೊಟ್ಟದ್ದೆನಲ್ಲಾ.. ಜೀರ್ಣೋದ್ಧಾರದ ಸುದ್ದೀ? ಅದನ್ನ ಓದಿ ಇಲ್ಲೀ ತನಕಾ ಬಂದು ಹೇಳಿಹೋದ.

ಕಮಲಕ್ಕ:— ಬರೀ ಹೇಳಿ ಹೋದ್ರೋ, ಏನರೆ ಕಾಂಚಾಣ ಕೊಟ್ಟು ಹೋದ್ರೊ?....ಅ ತಿಮ್ಮಣ್ಣ ಅಂತೂ ರೂಪಾಯಿ ಕಳಸಲೇ ಇಲ್ಲ!

ಭೀಮರಾಯರು ನೋಡು, ಪೇಪರಿನ್ಯಾಗ ಕೊಟ್ಟರ ಪ್ರಚಾರ ನೆಟ್ಟಗ ಆಗತsದ.

ಕಮಲಕ್ಕ:— ಬರೀ ಪ್ರಚಾರಾ ತೊಗೊಂಡು ಏನು ಮಾಡೋದದ? ರೊಕ್ಕ ಕೂಡಬೇಕು ಅಂದ್ರ ನೆಟ್ಟಗ! ನನ್ನ ಮಾತು ಸುಳ್ಳ ?s

ಭೀಮರಾಯರು:—ನಿನ್ನ ಮಾತು ಸುಳ್ಳು ಅಂತ ಯಾರು ಅಂತಾರs.... ಈವತ್ತ ಬರೋ ಮುಂದ ಎರಡು ಶಹಾಪೂರದ ಸೀರಿ ತಂದs ಬಿಡತೇನಿ ದೇವಿಗೆ—

ಕಮಲಕ್ಕ:— ಯಾವ ದೇವಿಗೆ ಮಹಾರಾಯರ ?

ಭೀಮರಾಯರು:— ಮತ್ತ್ಯಾವ ದೇವಿ... ಎದುರಿಗೇ ನಿಂತಾಳಲ್ಲ, ಪ್ರತ್ಯಕ್ಷ .... ಹಹಹ

ಕಮಲಕ್ಕ:—ಮುದುಕರಾದ್ರೂ ಇನ್ನೂ ಹುಡುಗಾಟ ತಪ್ಪಲಿಲ್ಲ. ಮಗಳು ಮದಿವಿಗೆ ಬಂದ್ಲು ತಿರಗಿ.

ಭೀಮ;— ನನ್ನ ಕಡೇ ಕೂಡಿದ ರಕಮು.... ತಿಮ್ಮಣ್ಣಗೇನೂ ಹೇಳೋದು ಬೇಡ..ಅದರೂ ತಿಮ್ಮಣ್ಣ ನಮ್ಮ ನಾರಾಯಣರಾಯರ ಊರಾಗs ಎರಡು ನೂರು ರೂಪಾಯಿ ಕೂಡಿಸ್ಯಾನಂತ ಇನ್ನೂ ಯಾಕೋ ಕಳಸೇ ಇಲ್ಲ!

ಕಮಲಕ್ಕ:— ಕಳಸ್ತಾನ ಕಾಣ್ರಿ! ಮೊನ್ನೆ ಅವರ ಮನಿಗೆ ಮನಿಯೂರ್ದರು ಬಂತು.. ಅವರ ಹೆಂಡತಿನ್ನ ಕಳಿದ್ರ, ಹೊಲದ ರೈತ ಕಳಸ್ಯಾನ ಅಂತ ಏನೇನೋ ಅಂದ್ಲು.

ಭೀಮರಾಯರು:— ಹೀಂಗೇನು! ಇರಲಿ. ಸದ್ಯಕ್ಕಂತೂ ಹನುಮಪ್ಪನನುಗೂ ಕಡಿಮಿ ಮಾಡಿಲ್ಲ! ಅದರೂ ದೇವರ ಗುಡೀ ಮುಂದ ನಾಲ್ಕು ಭಕಡಿ ಕಲ್ಲೊಂದು ಒಗಿಸಿಬಿಡತೇನಿ. ಅಂದರ ಜನಾ ತಪ್ಪು ತಿಳಕೊಂಬೂದಿಲ್ಲ.

ಕಮಲಕ್ಕ:— ಹಾಂಗ್ಮ ಮಾಡ್ರಿ, ದೇವರು ಎಲ್ಲಾನೂ ಭೆಲೋನs ಮಾಡತಾನ. ನಾ ಅಂತೂ ಪ್ರತೀ ಶನಿವಾರ, ಹನಮಪ್ಪಗ ಜೋಡುಕಾಯಿ ಒಡಿಸಲಿಕ್ಕೆ ಹತ್ತೇನಿ!

ಭೀಮರಾಯರು:— ಅಂತೂ ವೈರಾಗ್ಯದಿಂದನs ಹೊಟ್ಟೆ ತುಂಬತಿದ್ರ, ನಾವು ಅದನ್ನs ಯಾಕ ಹಿಡಿಬಾರದೂ ಅಂತೇನಿ!

ಕಮಲಕ್ಕ:— ನಿಮಗ ಈ ಮಾತು ಬಹಳ ತಡಾ ಆಗಿ ಹೋಗೀತು.

ಭೀಮರಾಯರು:— ಅಹಹ . . . ನೀನs ತಿಳಿಸಿ ಕೊಟ್ಟ ಮಹಾರಾಯಳ!

[ಕಮಲಕ್ಕ ಗಂಡನನ್ನು ಒಂದು ನೋಡಕಣ್ಣಿನಿಂದ ನೋಡುತ್ತಿರುವಾಗ ತೆರೆ ಬೀಳುವುದು.]

ಭಷಗ್ರಸ್ತ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ ನೀಲ ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರಿಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ ಜೀವಿನಿ ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ

ಅಜೀರ್ಣ ವಿಕಾರಗಳಿಗೆ ಪಂಚವಟಿ ರಾಮಬಾಣ

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ.

ಪಂಪನು ಆಶ್ರಯಿಸಿದ

ಚಾಳುಕ್ಯರ ಮೂಲಪುರುಷನು ಯಾರು?

(ಕವಿವಿಚಾರ)

ಡಿ. ಕೆ. ವೆಂಕಟರಾಯಾಚಾರ್ಯ, ಸುರತಕಲ್ಲು

ಕನ್ನಡ ಪ್ರಾಚೀನ ಕವಿಗಳ ಸ್ಥಲ-ಕಾಲಗಳ ಸತ್ಯತೆಯ ಬಗೆಗೆ ಇನ್ನೂ ಸಂಶೋಧನೆ ನಡೆದೇ ನಡೆಯಬೇಕಾಗಿದೆ. ಪಂಪಮಹಾಕವಿ ನಮ್ಮ ಆದಿಕವಿಯಾಗಿ ಮನ್ನಣೆ ಪಡೆದಿರುವನಾದರೂ ಆತನ ಸ್ಥಲ-ಕಾಲಗಳು ಇದುವರೆಗೂ ಸಂಶೋಧನೆಯ ವಿಷಯಗಳೇ ಆಗಿವೆ.

●

ಕನ್ನಡದ ಆದಿಕವಿಯಾದ ಪಂಪನು, ತನ್ನ ಆಶ್ರಯದಾತೃವಾದ ಚಾಳುಕ್ಯ-ಮನೆತನದ ಎರಡನೆಯ ಅರಿಕೇಸರಿಯನ್ನು ವ್ಯಾಸಭಾರತದ ಅರ್ಜುನನೊಂದಿಗೆ ಹೋಲಿಸಿ, ಕಾವ್ಯಕಥಾನಾಯಕನನ್ನಾಗಿಸಿ ರಚಿಸಿದ ಆತ ಏನ ವಿಕ್ರಮಾರ್ಜುನ ವಿಜಯ ಅಥವಾ ಸಮಸ್ತಭಾರತವೆಂಬ—ಚಂಪೂ ಕಾವ್ಯದಲ್ಲಿ, ಆ ರಾಜವಂಶಾವಳಿಯನ್ನು ನಿರೂಪಿಸಿದ್ದಾನೆ. ಅದೇ ಅರಿಕೇಸರಿಯು ಬರೆಸಿದ—ಪಂಪಭಾರತಕ್ಕಿಂತ ಮೊದಲೇ ಬರೆಸಿದ—ವೇಮುಲವಾಡದ ಶಾಸನದಲ್ಲೂ, ಆತನ ಮೊಮ್ಮಗನಾದ ಮೂರನೆಯ ಅರಿಕೇಸರಿಯು ಬರೆಸಿದ ಪರಭಣಿಯ ಶಾಸನದಲ್ಲೂ ಆ ವಂಶಾವಳಿಯು ಹೇಳಲ್ಪಟ್ಟಿದೆ. ಈ ಮೂರು ಪರಸ್ಪರ ಹೊಂದಿಕೊಳ್ಳುವಂತಿವೆಯೆಂಬುದು ಚಾರಿತ್ರಿಕ ಪ್ರಸಿದ್ಧವಿದೆ:



ಈ ಎರಡನೆಯ ಅರಿಕೇಸರಿಯ ಹೆಂಡತಿಯೆಂದರೆ 'ಇಂದ್ರನ ಮಗಳಾದ ರೇವಕನಿರ್ಮಡಿ'ಯೆಂದು ವೇಮುಲವಾಡದ ಶಾಸನದಿಂದಲೂ, 'ಲೋಕಾಂಬಿಕೆ'ಯೆಂದು ಪರಭಣಿಯ ಶಾಸನದಿಂದಲೂ ತಿಳಿದುಬರುವುದು. **ಇನ್ನೆರಡು ಹೆಸರುಗಳೂ ಅದೊಬ್ಬಳಿಗೇನೇ ಅನ್ವಯಿಸಬರುವುದೆಂದು** ಡಿ. ಎಂ. ಗೋವಿಂದ ಪೈಯವರು ಬರೆದಿದ್ದಾರೆ. **ಇದು ಚರ್ಚಾಸ್ಪದವಾಗಿದೆ.** ಪ್ರಕೃತಕ್ಕೆ, ಪ್ರಾಮುಖ್ಯವಲ್ಲಾಗಿ ನೀಗಿಯುದೆ. (ಈ ಬಗೆಗೆ ನನ್ನ ಲೇಖನವೊಂದು ಸದ್ಯದಲ್ಲೇ ಪ್ರಕಟವಾಗಲಿದೆ)

ಈ ಚಾಳುಕ್ಯ ಮನೆತನವು ಅದಾವ ರಾಜನಿಂದ ಪ್ರವರ್ತಿತವಾಯಿತೆಂದು ಈಗಾಗಲೇ ಒಂದೆರಡು ಚರ್ಚೆಗಳಾಗಿವೆ. ಆ ಚರ್ಚೆಗಳು ಅದೇಕೆ ಸರಿಯಲ್ಲೆಂದು ಬರೆಯುವ ಮೊದಲಾಗಿ, **ನಮಗೆ ಕಾಣುವ ಹೊಸತೊಂದು ವಿಷಯಾಂತರವನ್ನು ನಿರೂಪಿಸಲೆಳಸಿದ್ದೇನೆ.** ಇದು ತಾನೇ ಪರಮಸಿದ್ಧಾಂತವೆಂದು ನಮ್ಮ ವಾದವಲ್ಲ; ಆದರೆ, 'ವಾದೇ ವಾದೇ ಜಾಯತೇ ಸತ್ಯಬೋಧಃ' ಎಂಬಾ ವೇದಾಂತವಾಕ್ಯವು ಚಾರಿತ್ರಿಕ ವಿಷಯಗಳಲ್ಲೂ ಒಪ್ಪುವುದರಿಂದ, ಆ **ಸತ್ಯಾಂಶದ ಗೊತ್ತುನಳಿಗೆಸಗಿದ ಪ್ರಯತ್ನವಾತ್ರವೆಂದು** ಮೊದಲಾಗಿ ವಿನಂತಿಸುತ್ತೇನೆ.

ಕೊಲ್ಲಿಪಾರ ಶಾಸನದಲ್ಲಿ—: ಈ ಮೇಲೆ ಬರೆದ ವಂಶಾವಳಿಯ ಒಂದನೆಯ ಯುದ್ಧಮಲ್ಲನ ಮಗನಾದ ಒಂದನೆಯ ಅರಿಕೇಸರಿಯು ಬರೆಸಿದ ಕೊಲ್ಲಿಪಾರ ಶಾಸನದಲ್ಲಿ ತತ್ಪೂರ್ವಜರ ಗೊತ್ತುವಳಿಯಾಗುವುದು. ಆದರೆ, ಅಲ್ಲಿ ನಮೂದಿಸಿದ ಅವೆಲ್ಲಾ ಸವಗಳು ಬಾದಾಮಿ ಚಾಳುಕ್ಯರ ಬಿರುದುಗಳಾಗಿರುವುದರಿಂದ, ಅವೆಲ್ಲಾ ಬಿರುದುಗಳಿಂದ ಸೂಚಿತರಾದವರು ಬಾದಾಮಿ ಚಾಳುಕ್ಯರಿಂದೇ ಚಾರಿತ್ರಿಕವಿದ್ವಾಂಸರೆಲ್ಲರು ಒಮ್ಮತದಿಂದ ಒಪ್ಪುವಂತಹದಾಗಿದೆ. ಅಲ್ಲಿನ ಬಿರುದುಗಳೂ ಬಾದಾಮಿ ಚಾಳುಕ್ಯರ ಬಿರುದುಗಳೂ ಹೀಗಿವೆ; (ಈ ಶಾಸನದ ಕಾಲವಿಚಾರದಲ್ಲಿ ಅನುಬಂಧ ಎರಡನ್ನು ನೋಡಿರಿ):

ಕೊಲ್ಲಿಪಾರ ಶಾಸನ	ಬಾದಾಮಿ ಚಾಳುಕ್ಯರು
ಸತ್ಯಾಶ್ರಯ ರಣವಿಕ್ರಮ	ಸತ್ಯಾಶ್ರಯ ರಣವಿಕ್ರಮ
|	ಒಂದನೆಯ ಪುಲಿಕೇಶಿ
|	|
ಪೃಥಿವೀಪತಿ	ಪೃಥ್ವೀವಲ್ಲಭ
|	ಒಂದನೆಯ ಕೀರ್ತಿವರ್ಮ
|	|
ಮಹಾರಾಜಕ	ಮಹಾರಾಜಾಧಿರಾಜ
|	ಎರಡನೆಯ ಪುಲಿಕೇಶಿ
|	|
ರಾಜಾದಿತ್ಯ	ರಾಜಾ ಆದಿತ್ಯವರ್ಮ
|	|
ಒಂದನೆ ಯುದ್ಧಮಲ್ಲ	ಒಂದನೆಯ ಯುದ್ಧಮಲ್ಲ
ವಿನಯಾದಿತ್ಯ	ವಿನಯಾದಿತ್ಯ.
|	|
ಒಂದನೆ ಅರಿಕೇಸರಿ	ಒಂದನೆಯ ಅರಿಕೇಸರಿ

ಈ ಕೊಲ್ಲಿಪಾರ ಶಾಸನದಲ್ಲಿ 'ವಿನಯಾದಿತ್ಯ ಯುದ್ಧಮಲ್ಲನ ತಂದೆ ರಾಜಾದಿತ್ಯ' ಎಂದಿದೆಯಷ್ಟೆ! ಎರಡನೆಯ ಪುಲಿಕೇಶಿಗೆ ಆದಿತ್ಯವರ್ಮ ಚಂದ್ರಾದಿತ್ಯ ವಿಕ್ರಮಾದಿತ್ಯ ಹಾಗೂ ಜಯಾಶ್ರಯರೆಂಬ ನಾಲ್ವರು ಮಕ್ಕಳಿದ್ದರೆಂದು ಚರಿತ್ರಸಿಪ್ರಸಿದ್ಧವಾಗಿದೆ. ಇವರಲ್ಲೊಬ್ಬನಾದ ಆದಿತ್ಯವರ್ಮನನ್ನೇ ಕೊಲ್ಲಿಪಾರ ಶಾಸನದಲ್ಲಿ 'ರಾಜಾದಿತ್ಯ' ಎಂದಿರಬೇಕೆಂದು ನಮಗೆ ತೋರುವುದು. **ಇದುವೇ ಹೆಚ್ಚಿನ ಮಟ್ಟಿಗೆ ಸಮಂಜಸವಾಗಿದೆ.** ಹಾಗಲ್ಲವೆ, ಆದಿತ್ಯವರ್ಮನ ಸೋದರರಾದ ಚಂದ್ರಾದಿತ್ಯ ಹಾಗೂ ವಿಕ್ರಮಾದಿತ್ಯರಲ್ಲೊಬ್ಬನಾಗಿರಬಹುದೆಂದರೆ, ಇವರಿಬ್ಬರ ಹೆಸರಿನಲ್ಲಿ ಆದಿತ್ಯನೆಂಬ ಶಬ್ದವು ವಿಶೇಷಣಪರವಾಗಿ **ಉತ್ತರಪದವಾಗಿರುವುದರಿಂದ** ಅಸಮಂಜಸವೆನ್ನಿಸದಿರದು. ಹಾಗೂ ಚಂದ್ರಾದಿತ್ಯನ ವಿಷಯಕ ಚಾರಿತ್ರಿಕಾಧಾರಗಳೇನೂ ಹೆಚ್ಚು ದೊರೆತಿಲ್ಲ. ಇನ್ನು ಅವರಲ್ಲಿ ಕೊನೆಯವನಾದ ಜಯಾಶ್ರಯನ ಹೆಸರಲ್ಲಿ ಆದಿತ್ಯ ಶಬ್ದದ ಸಂಬಂಧವೇ ಇಲ್ಲದ ಕಾರಣ, ಅವನಂತೂ ಇಲ್ಲಿ ಸಮನ್ವಯವಾಗಲಾರನು.

ಈ ಆದಿತ್ಯವರ್ಮನು 'ಮಹಾರಾಜಾಧಿರಾಜ ಪರಮೇಶ್ವರ ಪೃಥ್ವೀವಲ್ಲಭ'ನೆಂಬ ಬಿರುದುಗಳುಳ್ಳವನೆಂದು ಕರ್ನೂಲು ಶಾಸನದಿಂದ ತಿಳಿಯುವುದು **ಈತನು ವೆಂಗಿಯಲ್ಲಾಳುತ್ತಿದ್ದನೆಂದು** ಡಾ. ಭಾಂಡಾರಕರರು ದ. ಭಾರತಚರಿತ್ರೆಯ ಮೊದಲ ಆವೃತ್ತಿಯಲ್ಲಿ (ಇಸ್ವಿ ೧೯೨೮) ಬರೆದಿದ್ದರು. ಅದೇ ಗ್ರಂಥದ ಎರಡನೆಯ ಆವೃತ್ತಿಯಲ್ಲಿ (ಇಸ್ವಿ ೧೯೨೯) 'ಕೃಷ್ಣಾ ತುಂಗಭದ್ರೆಗಳ ನಡುವಣ ರಾಜ್ಯ' ವೆಂದಿದೆ. 'ಕೃಷ್ಣಾ ಗೋದಾವರೀ ನದಿಗಳ ನಡುವಣ ರಾಜ್ಯ ವೆಂಗಿ' ಯೆಂದು ಚಾರಿತ್ರಿಕರೆಲ್ಲರೂ ಒಪ್ಪುವುದರಿಂದ, ಆದಿತ್ಯವರ್ಮನು ವೆಂಗಿಯಲ್ಲಾಳಿದನೆಂಬುದು ತುಸಮಟ್ಟಿಗೆ ಒಪ್ಪಬರುವುದು. **'ವೆಂಗಿಯು ಆಜ್ಞ ಆಂಧ್ರ ದೇಶವಾಗಿರಬೇಕು' ಎಂದು ಕೆಲವರ ಆಶಯವಿದೆ. ಇದಾದರೋ, 'ಪಂಪನು ಆಂಧ್ರಬ್ರಾಹ್ಮಣ' ಎಂಬಂತೆ ಸರಿ ಬೀಳದು.** ಎರಡನೆಯ ಪುಲಿಕೇಶಿಯ ತಮ್ಮನಾದ— ಈ ಆದಿತ್ಯವರ್ಮನ ಚಿಕ್ಕಪ್ಪನಾದ—**ಕುಬ್ಜವಿಷ್ಣುವರ್ಧನನೇ ವೆಂಗಿಯನ್ನಾಳುತ್ತಿದ್ದನೆಂದು** ಸುಪ್ರಸಿದ್ಧವಿದೆ. ಆದರೆ, ಎರಡನೆಯ ಅರಿಕೇಸರಿಯು ಬರೆಸಿದ ಪಂಪಭಾರತ ಹಾಗೂ ಆ ವೇಲೂರು ಪರಭಣಿ ಶಾಸನಗಳಲ್ಲಿ **'ಒಂದನೆಯ ಅರಿಕೇಸರಿಯು ವೆಂಗಿಯನ್ನೊತ್ತಿದ್ದನೆ'ಂಬಲ್ಲಿ ಈ ಮೂಡಣ ವೆಂಗಿಯಾಗಿರಲೂ ಬಹುದು.** ಅಂತೂ **'ಆದಿತ್ಯವರ್ಮನು ಪಶ್ಚಿಮವೆಂಗಿಯಲ್ಲಿ ಆಳುತ್ತಿದ್ದ'**ನೆಂದು ತಾನೇ ತಿಳಿಯಬರುವುದು!

'ಪಂಪನಾದರೂ ವೆಂಗಿಮಂಡಳದ ವೆಂಗಿಪಳುವಿನಲ್ಲಿದ್ದ ಮಾಧವ ಸೋಮಯಾಜಿಯ ಮಗ' ನೆಂದು ಹೇಳಿಯದೆ (ಪಂ. ಭಾ. ೧೪-೪೦). ಅದುಕಾರಣ **"ಪಂಪನ ಹುಟ್ಟೂರು ವೆಂಗಿ"** ಯೆಂದೂ ವಿಮರ್ಶಕರಲ್ಲಿ ಅಶಯವಿದೆ (ಶ್ರೀ ದೇಸಾಯಿ ಪಾಂಡುರಂಗರಾಯರು ಇಸ್ವಿ ೧೯೩೩ರಲ್ಲಿ ಜಯಕರ್ನಾಟಕ ನಾಸಸಪತ್ರಿಕೆಯಲ್ಲಿ ಬರೆದುದನ್ನು ಓದಬಹುದು). ಅಂದರೆ, ಪಂಪನು ತನ್ನ ಪೂರ್ವಜರೂ ತಾನೂ ವಾಸಿಸುತ್ತಿದ್ದ ವೆಂಗಿಯನ್ನಾಳುತ್ತಿದ್ದ ಆದಿತ್ಯವರ್ಮನ ಪೀಳಿಗೆಯ ಎರಡನೆಯ ಅರಿಕೇಸರಿಯನ್ನು ಆಶ್ರಯಿಸಿ, ಅತನನ್ನೇ ಕಥಾನಾಯಕನನ್ನಾಗಿಸಿ ಪಂಪಭಾರತವನ್ನು ಬರೆದನೆಂಬುದು ಇಲ್ಲಿಗೆ ಸಾಧುವಾಗಿದೆ.

ಆದಿತ್ಯವರ್ಮನ ಪೀಳಿಗೆ.

ಈ ಆದಿತ್ಯವರ್ಮನ ಶಾಸನವೊಂದು ಮಾತ್ರ ಕರ್ನೂಲು ಜಿಲ್ಲೆಯಲ್ಲಿ ದೊರೆತಿದೆ. ಅನಂತರ ಅತನ ಮುಂದಿನ ಪೀಳಿಗೆಯವರ ಪೆಸರಿಲ್ಲ! ಅದರಿ, ಇತ್ತೀಚೆಗೆ **ಶ್ರೀ. ಹುಲ್ಲೂರು ಶ್ರೀನಿವಾಸ ಜೋಯಿಸರಿಗೆ ದೊರೆತ ತಾಮ್ರಶಾಸನವಲ್ಲಿ, ಈ ಆದಿತ್ಯವರ್ಮನ ಹಿಂದು ಮುಂದಣವರ ಪೆಸರಿದೆಯೆಂದು** ತಿಳಿದುಬಂದಿದೆ. **ಶ್ರೀಯುತರ ಅನುಮತಿಯಂತೆ ಆ ಶಾಸನದ ಕೆಲವೊಂದು ಭಾಗವನ್ನು ಇಲ್ಲಿ ಬರೆದಿದೆ:** (ಈ ಸಂಗ್ರಹ ಮಾಡಲು ಈ ನನ್ನ ಲೇಖನದ ಬಗ್ಗೆ ತನ್ನ ಅತ್ಯಮೂಲ್ಯ ಸಹಕಾರವನ್ನು ನೀಡಿದ ಶ್ರೀ. ಹುಲ್ಲೂರು ಶ್ರೀನಿವಾಸ ಜೋಯಿಸರಿಗೆ ನನ್ನ ಕೃತಜ್ಞತೆ ಸಲ್ಲಬೇಕು.)

" ..... ಸಕಲೋತ್ತರಾಪಥೇಶ್ವರ ಶ್ರೀಹರ್ಷವರ್ಧನ ಪರಾಜಯೋಪಲಬ್ಧ ವರಮೇಶ್ವರಾದಿನಾಮಧೇಯಸ್ಯ ಶ್ರೀಸತ್ಯಾಶ್ರಯ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರಸ್ಯ ಪೌತ್ರಃ, ಶ್ರೀವಿಜಯಾದಿತ್ಯವರ್ಮ ಪೃಥಿವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರಸ್ಯ ತನಯಃ, ನಯವಿನಯಾದಿ ಸಾಮ್ರಾಜ್ಯಗುಣ ಸಂಪನ್ನಃ ಪನ್ನಗಪತಿಭೋಗ ವಲ್ಗುಭುಜಾಪಳೆಯುಗಳಃ **ಶ್ರೀಮದಭಿನವಾದಿತ್ಯಪರನಾಮಧೇಯಃ** ಶ್ರೀಸತ್ಯಾಶ್ರಯ ಪೃಥ್ವಿವಲ್ಲಭ ಮಹಾರಾಜಾಧಿರಾಜ ಪರಮೇಶ್ವರಃ— "

ಈ ಶಾಸನದಿಂದ ತಿಳಿವ ವಂಶಾವಳಿಯೆಂದರೆ:

ಎರಡನೆಯ ಪುಲಿಕೇಶಿ
|
ಆದಿತ್ಯವರ್ಮ
|
ಅಭಿನವಾದಿತ್ಯ

ಈತನಕ ಆದಿತ್ಯವರ್ಮನ ಸಂತತಿಯವರಾರೆಂಬ ವಿಷಯವೇನೂ ತಿಳಿಯಬಂದಿಲ್ಲವಾದರೂ; ಈ ಮೇಲಣ ಶಾಸನಭಾಗದಿಂದ (ಶ್ರೀ. ಹುಲ್ಲೂರು ಶ್ರೀನಿವಾಸ ಜೋಯಿಸರು ಸಂಗ್ರಹಿಸಿದ ತಾಮ್ರಶಾಸನದಿಂದ), **'ಆದಿತ್ಯವರ್ಮನಿಗೆ ಮಕ್ಕಳು (ಅಥವಾ ಮಗ) ಇದ್ದರೆಂದು' ತಿಳಿಯುವುದಕ್ಕೇನೂ ಸಂಶಯವಿಲ್ಲ!** ಇತ್ತ ಕೊಲ್ಲಿಪಾರ ಶಾಸನದಲ್ಲಿಯು 'ಮಹಾರಾಜಕನ ಮಗ'ನೆಂದ ರಾಜಾದಿತ್ಯನಾದರೂ ಆದಿತ್ಯವರ್ಮನಿರಬೇಕೆಂದೂ, ಇವನೀಗೇ 'ವಿಜಯಾದಿತ್ಯಮಲ್ಲ'ನೆಂಬವನು ಮಗನಿದ್ದಿರಬೇಕೆಂದೂ—ಅದು ಮಾತ್ರವಲ್ಲ ಆ ಆದಿತ್ಯವರ್ಮನಿಗೆ ಅಭಿನವಾದಿತ್ಯನೆಂಬ ಮಗನೊಬ್ಬನು (ಇನ್ನೊಬ್ಬನು) ಇದ್ದನೆಂದೂ—ಇಲ್ಲಿ ತಿಳಿಯಬರುವುದು. ಈ ಆದಿತ್ಯವರ್ಮನ ಮೊಮ್ಮಗನು ಅಥವಾ ಸಂಬಂಧು ಹೇಳಿದ ಒಂದನೆಯ ಪುಂದ್ರಮಲ್ಲವಿನಯಾದಿತ್ಯನ ಮಗನು ತಾನೇ ಈ ಕೊಲ್ಲಿಪಾರ ಶಾಸನೋಕ್ತ ಒಂದನೆಯ ಅರಿಕೇಸರಿಯೆಂದು ತಿಳಿಯಬಹುದೆ! ಆಗ ವಂಶಾವಳಿ ಹೀಗಿದೆ:

ಎರಡನೆಯ ಪುಲಿಕೇಶಿ
|
ಆದಿತ್ಯವರ್ಮ
|
ಅಭಿನವಾದಿತ್ಯ — ಒಂದನೆಯ ಪುಂದ್ರಮಲ್ಲವಿನಯಾದಿತ್ಯ
|
ಒಂದನೆಯ ಅರಿಕೇಸರಿ ಇತ್ಯಾದಿ

ಇತರ ಕಾರಣಗಳು:

೧) ಆದಿತ್ಯವರ್ಮನು ಚಕ್ರಾಧಿಪತಿಯಾಗಿದ್ದನೆಂಬ ವಿಷಯದಲ್ಲಿ ಚಾರಿತ್ರಿಕರಲ್ಲಿ ಭಿನ್ನಾಭಿಪ್ರಾಯವಿದೆಯೇನೋ ನಿಜ. ಆದರೆ, ಎರಡನೆಯ ಪುಲಿಕೇಶಿಯನ್ನು ಕುರಿತು ಹೇಳಿದ " ಮಹಾರಾಜಾಧಿರಾಜ ಪರಮೇಶ್ವರ ಪೃಥ್ವೀವಲ್ಲಭ " ಎಂಬಾ ಬಿರುದುಗಳು ಆದಿತ್ಯವರ್ಮನ ಕರ್ನೂಲು ಶಾಸನದಲ್ಲೂ ಇವೆ, ಹಾಗೂ ಆದಿತ್ಯವರ್ಮನ ಮಗನಾದ ಅಭಿನವಾದಿತ್ಯನ ಈ ಶಾಸನದಲ್ಲೂ ಇವೆಯೆಂದು ಈಮೇಲೆಯೇ ತಿಳಿದು ಬಂದಿದೆ. ಈ ಬಿರುದುಗಳಾದರೋ, ಸಾಮಂತರಾಗಲಿ, ರಾಜಪ್ರತಿನಿಧಿಗಳಾಗಲಿ, ಪ್ರಾಂತಾಧಿಕಾರಿಗಳಾಗಲಿ, ಮಂಡಳೇಶ್ವರರಾಗಲಿ ಧರಿಸುವ ಬಿರುದುಗಳಲ್ಲೆಂದು ಸ್ಪಷ್ಟವಾಗಿ ಹೇಳಬರುವುವು. **ಇವು ಚಕ್ರೇಶ್ವರರ ಬಿರುದುಗಳೇ ಸೈ!** ಅಂದರೆ, ಎರಡನೆಯ ಪುಲಿಕೇಶಿಯ ನಂತರ ಸೋದರರಾದ ಆದಿತ್ಯವರ್ಮ ಮತ್ತು ವಿಕ್ರಮಾದಿತ್ಯರು ಅಕ್ಕ-ಪಕ್ಕ ರಾಜ್ಯಗಳಲ್ಲಿ ಚಕ್ರೇಶ್ವರರೆಂದೇ ಆಳಿರಬೇಕು. ಆ ಆದಿತ್ಯವರ್ಮನ ಪೀಳಿಗೆಯವರು ಮುಂದೆ ಸ್ವತ್ಯೇಕವಾಗಿ ರಾಜ್ಯವಾಳುತ್ತಿದ್ದಿರಬೇಕು

೨) ರನ್ನ ಮಹಾಕವಿಯು ತಾನು ರಚಿಸಿದ ಗದಾಯುದ್ಧ ಕಾವ್ಯದಲ್ಲಿ ಈ 'ಆದಿತ್ಯವರ್ಮನನ್ನು ಚಕ್ರಾಧಿಪತಿಗಳ ಪಂಕ್ತಿಯಲ್ಲಿ ಸೇರಿಸಿರುವುದೂ' ಹಾಗೂ ಅರನೆಯ ವಿಕ್ರಮಾದಿತ್ಯನ ದಾವಣಗೆರೆ ಶಾಸನದಲ್ಲೂ ಆದಿತ್ಯವರ್ಮನನ್ನು ಹೆಸರಿಸಿರುವುದೂ ಈ ಮೇಲಿನ ಊಹೆಯನ್ನು ಬಲಪಡಿಸುತ್ತವೆ.

'ಸಂಕ್ಷೇಪಶಾರೀರಕ' ಎಂಬ ಶಾಂಕರಗ್ರಂಥದಲ್ಲಿ " ಮನುಕುಲಾದಿತ್ಯೇ ಭುವಂ ಶಾಸತಿ " ಎಂಬುದೂ ಈ ಮೇಲೆ ಹೇಳಿದ ಎರಡನೆಯ ಪುಲಿಕೇಶಿಯು ನುಗ ಆದಿತ್ಯವರ್ಮನೇ ಆಗಿರಬೇಕೆಂದು ಚಾರಿತ್ರಿಕ ಸಂಶೋಧಕರಲ್ಲಿ ಆಶಯವಿದೆ. **ಶಂಕರಾಚಾರ್ಯರನ್ನು ಕೊಲ್ಲಲು ಬಂದ ಕಾಪಾಲಿಕನು ಕೊಲ್ಲಲ್ಪಟ್ಟಿದ್ದು ಶ್ರೀಶೈಲದಲ್ಲಿ** ತಾನೆ? ಈ ಶ್ರೀಶೈಲದ ಒಳಿಯಲ್ಲೇ ಆದಿತ್ಯವರ್ಮನ ಲಿಪಿ (ಕರ್ನೂಲು ಶಾಸನ) ದೊರೆತಿದ್ದು. ಅಂದರೆ, ಶ್ರೀಶೈಲದ ಬಳಿಯು ಈ ಆದಿತ್ಯವರ್ಮನೇ ಆ ಗ್ರಂಥಕಾಲದಲ್ಲಿದ್ದನೆಂದು ('ಮನುಕುಲಾದಿತ್ಯ' ನೆಂದು ಇಲ್ಲಿ ವ್ಯಕ್ತವಾಗುವುದು (ಈ ಬಗೆತಕ್ಕೆ ದಾವಣಗೆರೆಯ ಸಂಜಯ ವಾರಪತ್ರಿಕೆಯ ಇಸ್ವಿ ೧೯೫೩ ಏಪ್ರಿಲ್ ಸಂಚಿಕೆ- ಶೃಂಗೇರಿ ವಿಶೇಷಾಂಕ-ಯಲ್ಲಿರುವ ಶ್ರೀನಾನಾ ಹುಲ್ಲಾರು ಶ್ರೀನಿವಾಸ ಜೋಯಿಸರು ಬರೆದ 'ಶ್ರೀಶಂಕರಾಚಾರ್ಯರ ಕಾಲನಿರ್ಣಯ' ಎಂಬ ಲೇಖ ಓದಿರಿ).

೪) ಈ ಒಂದನೆಯ ಯುದ್ಧಮಲ್ಲನಿಂದ ಕಳಲೊಡೆದು ಮುಂದುವರಿದ-ಸಂತತಿಯವರು ಆಶ್ರಯಿಸಿದ-ಚಾಳುಕ್ಯಶಾಖೆಯವರು ಮಾತ್ರವೇ **'ತಾವು ಆದಿತ್ಯವಂಶದವರೆಂದು'** ಹೇಳಿಕೊಂಡಿದ್ದಾರೆ. (ಅಸ್ಮಾತ್ಕುಲಾದಿತ್ಯಭವೋ ವಂಶಶ್ಚಾಳುಕ್ಯ ಇತಿ ವಿಶ್ರುತಃ - ಪರಭಣಿಶಾಸನ) ಪರಂತು. ಚಾಳುಕ್ಯರ **ಉಳಿದ ಶಾಖೆಯವರೆಲ್ಲರೂ 'ತಾವು ಚಂದ್ರವಂಶೀಯರೆಂದು'** ತಾನೇ ತಮ್ಮ ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಅಂದರೆ ಇಲ್ಲಿ ನಾವೆಂದಂತೆ— **ಈ ಆದಿತ್ಯವರ್ಮನ ಪೀಳಿಗೆಯವರೇ ತಾನೆಂದು ಸೂಚಿಸಲಿಕ್ಕಾಗಿಯೇ—** (ಅಪೂರ್ಣ)

ನಿಲ್ಲರೂ **ಚಂದ್ರವಂಶಿಗರಾದರೂ) ಈ ಶಾಖೆಯು ಆದಿತ್ಯ ಭವವೆಂದು ಹೇಳಿರಬೇಕೆಂದು ವ್ಯಕ್ತವು!**

(೫) ಎರಡನೆಯ ಪುಲಿಕೇಶಿಯ ನಂತರ ಆದಿತ್ಯವರ್ಮನೂ, ತದನಂತರ ಅಭಿನವಾದಿತ್ಯನೂ, ಆ ಮೇಲೆ ಅವನ ತಮ್ಮನಾದ ಒಂದನೆಯ ಯುದ್ಧಮಲ್ಲನೂ, ತರುವಾಯದ ಒಂದನೆಯ ಅರಿಕೇಸರಿಯು ಕೆಲಗಾಲವೂ, ಈ ಮೇಲೆ ನಮೂದಿಸಿದ (ಕೊಲ್ಲಿಪಾರ ಶಾಸನದಲ್ಲಿ ಇರುವ) ಚಕ್ರೇಶ್ವರರು ಧರಿಸುವ ಅವೆಲ್ಲಾ ಪ್ರಶಸ್ತಿಗಳನ್ನು ಹೊಂದಿ ಆಳಿರಬೇಕು! ರಾಷ್ಟ್ರಕೂಟರು ಚಕ್ರಾಧಿಪತ್ಯವನ್ನು ಆಕ್ರಮಿಸಿದ ನಂತರ (ಸು. ಇಸ್ವಿ ೭೫೦), ಒಂದನೆಯ ಅರಿಕೇಸರಿ (ಅಥವಾ ಆತನ ಪೀಳಿಗೆಯವನು) ಆ ರಾಷ್ಟ್ರಕೂಟರನ್ನೆ ಹೊಂದಿಕೊಂಡು, ಚಕ್ರಾಧಿಪತಿಯ ಬಿರುದುಗಳನ್ನು ತೊರೆದು, ಅವರ ಸಾಮಂತನಾಗಿರಲು ಒಪ್ಪಿರಬೇಕು! ಈ ಅರಿಕೇಸರಿಯನ್ನು ಕುರಿತು "ನಿರುಪಮದೇವನ ರಾಜ್ಯದೊಳರಿಕೇಸರಿ ಮೆಂಗಿವಿಷಯ ಮಂತ್ರಿ ಪಳಂದು ಬೆರಸೊಟ್ಟಕೊಂಡು ಗರ್ವದೆ ಬರೆಯಿಸಿದಂ ಪೆಸರನಖಿಲ ದಿಗ್ವಿತ್ತಿಗಳೊಳ್" ಎಂದು ಪಂಪಭಾರತದಲ್ಲಿ ವಿಶೇಷಿಸಿ ಹೇಳಿದೆ (೧-೨೦). ಇಲ್ಲಿನ '**ನಿರುಪಮ**'ನೆಂದರೆ ರಾಷ್ಟ್ರಕೂಟ ಧ್ರುವ ರಾಜನೆಂದೂ, ಈತನ ಕಾಲ ಇಸ್ವಿ ೭೮೨–೯೩ ಎಂದೂ ಚಾರಿತ್ರಿಕ ಸಮ್ಮತವಿರುವುದು. ಅಂದರೆ, **ಈ ಒಂದನೆಯ ಅರಿಕೇಸರಿಯು ಕ್ರಿ.ಶ. ಎಂಟನೆಯ ಶತಕದ ಉತ್ತರಾರ್ಧದಲ್ಲಿದ್ದನೆಂದು** ಸುಸ್ಪಷ್ಟವಾಗುವುದು.

ರಾಜಾದಿತ್ಯ ಹಾಗೂ ವಿನಯಾದಿತ್ಯ ಯುದ್ಧಮಲ್ಲರು ಯಾರು?

(೧) ಈ ಕೊಲ್ಲಿಪಾರ ಶಾಸನೋಕ್ತ ಒಂದನೆಯ ಯುದ್ಧಮಲ್ಲ ವಿನಯಾದಿತ್ಯನೆಂದರೆ, ಎರಡನೆಯ ಪುಲಿಕೇಶಿಯ ಮೊಮ್ಮಗನೂ ಗನೆಯ ವಿಕ್ರಮಾದಿತ್ಯನ ಮಗನೂ ಆದ ಗನೆಯ ವಿನಯಾದಿತ್ಯನಾಗಿರಬೇಕೆಂದು ಆಶಯವು ಚಾರಿತ್ರಿಕವಿದ್ವಾಂಸರಲ್ಲಿ ಇದೆ. (ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆಯ ಸಂಪುಟ ೩೧, ಸಂಚಿಕೆ ೨ ರಲ್ಲಿ ಶ್ರೀ. ಆರ್. ಎಸ್. ಪಂಚಮುಖಿಯವರು ಬರೆದುದನ್ನು ನೋಡಿಕೊಳ್ಳಬಹುದು). **ಈ ಅಭಿಪ್ರಾಯವು – ಈ ಮೇಲೆ ಬರೆದುದಕ್ಕೆ ಕೂಡಿಗೆಯಾಗುವುದಿಲ್ಲ, ಹಾಗೂ—ಸರಿಬೀಳದೆಂದು ತೋರುವುದು.**

ಬಾದಾಮಿಯ ಚಾಳುಕ್ಯ ಮನೆತನದ ಗನೆಯ ವಿಕ್ರಮಾದಿತ್ಯನ ಮಗನಾದ ಗನೆಯ ವಿನಯಾದಿತ್ಯನಿಗೆ 'ಯುದ್ಧಮಲ್ಲ'ನೆಂಬ ಬಿರುದು ಹೇಳಿದುದು ಆತನಿಂದ –೪ ಶತಕಗಳ ಮೇಲಿನ ಶಾಸನದಲ್ಲಿ ತಾನೆ ಹಾಗೂ ಆತನು ಇಸ್ವಿ ೬೮೦–೯೬ ರಲ್ಲಿದ್ದನೆಂಬ ಚಾರಿತ್ರಿಕ ಸಮ್ಮತವದೆ **ವೇಮುಲವಾಡ ಶಾಸನಾದಿ ಆಧಾರಗಳೆಲ್ಲೂ 'ಗನೆಯ ಯುದ್ಧಮಲ್ಲನ ಮಗನಾದ ಗನೆಯ ಅರಿಕೇಸರಿಯು ನಿರುಪಮದೇವನ (ಇಸ್ವಿ ೭೮೨–೯೩) ಸಮಕಾಲಿಕ'ನೆಂದಿದೆ. ಅಂದರೆ, ಶ್ರೀಯುತರೆಂದ ಇ. ೬೮೦–೯೬ಕ್ಕೂ ಇದಕ್ಕೂ ಕಾಲದ ಹೊಂದಿಕೆಯಾಗುವುದಿಲ್ಲ!** ಹಾಗೂ ಒಂದನೆಯ ಯುದ್ಧಮಲ್ಲನನ್ನು ಕುರಿತು ಪಂಪಭಾರತದಲ್ಲಿ '**ಕಾಂತಿಯನೊಳಕೊಂಡೀವುಹಿಯೆಳ್—ಸಪಾದಲಕ್ಷಕ್ಷಿತಿಪ**'ನೆಂದೂ, ಸಕಳಿಂಗಕಳವಾದ ವೆಂಗಿಮಂಡಲಾಳುತ್ತಿದ್ದನೆಂದು ಶಾಸನದಲ್ಲೂ ಹೇಳಿದುದು ನಮಗೆಲ್ಲಾ ತಿಳಿದುದೇ ಆಗಿದೆ (ಇದರ ವಿವರಣೆಗೆ **ಅನುಬಂಧ ೧** ನೋಡಿರಿ). ಈ ಯಾವತ್ತೂ ವಿಶೇಷಣಗಳು ಮೇಲಿನ ವಿಕ್ರಮಾದಿತ್ಯನ ಮಗನಿಗೆ ಅದಾವ ಶಾಸನದಲ್ಲೂ ಹೇಳಿಲ್ಲವಾಗಿ ಹೊಂದಿಕೆಯಿಲ್ಲವಷ್ಟೆ! ಪರಂತು, ಆ 'ಕಾಂತಿಯುಧೀಶತೆ' ಹಾಗೂ 'ಸಪಾದಲಕ್ಷಭೂಭರ್ತೃತ್ವ'ಗಳು ಎರಡನೆಯ ಪುಲಿಕೇಶಿಗೆ ಹೇಳಿದ್ದು, ಅವುಗಳ ಅಂಶವು ಆತನಿಂದ ಮುಂದುವರಿದು ಆದಿತ್ಯವರ್ಮನಿಂದ ಪ್ರವರ್ತಿತವಾಯ್ತೆಂದು ನಾವು ಈ ಮೊದಲು ಕಂಡ ಯುದ್ಧಮಲ್ಲನಲ್ಲಿ ಉಳಿದಿರುವುದೆಂದು ತಿಳಿಯಬರುವುದು. ಅಮುಕಾರಣ, ಆದಿತ್ಯವರ್ಮನ ಮಗನೇ ಒಂದನೆಯ ಯುದ್ಧಮಲ್ಲನೆನ್ನುವವುದರಲ್ಲಿ ಸಾಜತನವಿದೆ!

"ಕರ್ನೂಲು ಶಾಸನವು 'ವಿಕ್ರಮಾದಿತ್ಯ' ಹೆಸರನ್ನೇ ಎತ್ತುವುದಿಲ್ಲ. ಆದಿತ್ಯವರ್ಮನು ಪುಲಿಕೇಶಿಯು ಪ್ರಿಯತನಯನನೆಂದು ಮಾತ್ರ ಹೇಳಿದೆ. ಇದರಿಂದಾಗಿ 'ಆದಿತ್ಯವರ್ಮನು ತನ್ನ ತಮ್ಮನಾದ ವಿಕ್ರಮಾದಿತ್ಯನು ಬಲ್ಲವರಿಂದ ರಾಜ್ಯವನ್ನು ಕಿತ್ತುಕೊಂಡ ಮೇಲೆ ಅವನಿಂದ ಅದನ್ನು ಕಸಿದುಕೊಳ್ಳಲು ಪ್ರಯತ್ನಿಸಿದನೆಂದೂ ಅಶಕ್ತನಾಗಿಯೇ ಮುಂದೆ ಆದಿತ್ಯವರ್ಮನ ಹೆಸರು ವಿಕ್ರಮಾದಿತ್ಯನ ವಂಶಜರ ಶಾಸನಗಳಲ್ಲಿ ನಿರ್ದಿಷ್ಟವಾಗಿಲ್ಲ' ಎಂದೂ ಫ್ಲೀಟರು ಬರೆದಿದ್ದಾರೆಂದು" ಶ್ರೀ. ಆರ್. ಎಸ್. ಪಂಚಮುಖಿಯವರು ಬೇರೊಂದೆಡೆ ಬರೆದಿದ್ದಾರೆ (ಕರ್ನಾಟಕ ಅರಸು ಮನೆತನಗಳು). ಇದೀಗ "ಆದಿತ್ಯವರ್ಮನಿಂದ ಪ್ರವರ್ತಿತವಾದ ಚಾಳುಕ್ಯ ಶಾಖೆಯು ಪ್ರಶ್ಯೇಕವಾಗಿದ್ದು, ತನ್ನದೊಂದು ರಾಜ್ಯವನ್ನು ನಡೆಸುತ್ತಿರುವುದರಿಂದಾಗಿ, ವಿಕ್ರಮಾದಿತ್ಯನ ವಂಶಜರ ಶಾಸನಗಳಲ್ಲಿ ಆದಿತ್ಯವರ್ಮ ಹಾಗೂ ತದ್ವಂಶಜರ ಹೆಸರು—ಆದಿತ್ಯವರ್ಮನವರಲ್ಲಿ ವಿಕ್ರಮಾದಿತ್ಯನ ಹೆಸರೂ — ಹೇಳಿಲ್ಲದಿರಬಹುದೆಂಬುದೇ" ನಮಗೆ ತೋರುವುದು!

ಚಿತ್ರಗುಪ್ತ

ಕರ್ನಾಟಕದ ಅತ್ಯಂತ ಜನಪ್ರಿಯ ವಾರಪತ್ರಿಕೆ

ವಾರದಕಥೆ—ಕಾವ್ಯೋದ್ಯಾನ—ಪುಸ್ತಕ ಪ್ರಪಂಚ
ಛಾಯಾಲೋಕ–ನಾವು ನೀವು ವಾರಭವಿಷ್ಯ
ರಾಜಕೀಯ ಸಿಂಹಾವಲೋಕನ
ಇತ್ಯಾದಿ ಇತ್ಯಾದಿ
ಏಜೆಂಟರಿಲ್ಲದ ಕಡೆ ಏಜೆಂಟರು ಬೇಕಾಗಿದ್ದಾರೆ
ವಿವರಗಳಿಗೆ

ಚಿತ್ರಗುಪ್ತ—ಪೋ. ಬಾಕ್ಸ್ ೧೪೯—ಬೆಂಗಳೂರು ೨

ಶಾ. ಶ ೬೧೫ (ಇಸ್ವಿ ೬೯೩)ರಲ್ಲಿ ಬರೆದ ಚಾಳುಕ್ಯ ವಿಕ್ರಮಾದಿತ್ಯನ ಮಗ ವಿನಯಾದಿತ್ಯನ ತಾಸನವೊಂದರಲ್ಲಿ – ಆ ರಾಜನು ಕಲಿಂಗೇತಿ (ಕಲಿಂಗಪತಿ)ಯು ವಿಜ್ಞಾಪನೆಯ ಎತಿ ಕೆಲವು ದತ್ತಿಬಿಟ್ಟ-ನೆಂದು ಹೇಳಿದೆಯೆಂದರೆ, ಅಲ್ಲಿನ ವಿನಯಾದಿತ್ಯನು 'ಕಲಿಂಗೇತಿ'ಗಿಂತ ಭಿನ್ನನೆಂದು ತಾನಾಗಿ ಸ್ಪಷ್ಟವಾಗುವುದು. ಇತ್ತ 'ಕಳಿಂಗ-ತ್ರಯದಿಂದೊಡಗೂಡಿದ ವೆಂಗಿಯನ್ನು ಆಳುತ್ತಿದ್ದನೆಂಬ—ಅತನಿಂದ ಅದನ್ನು (ಕಳಿಂಗವನ್ನು)ಗೆದ್ದಿರುವ — ೧ನೆಯ ಯುದ್ಧಮಲ್ಲನು (ಅಥವಾ ತತ್ಕಾಲದಲ್ಲಿಯ ಒಂದನೆಯ ಅರಿಕೇಸರಿಯು ಗೆದ್ದಿದ್ದರೂ ಇರಬಹುದು!) **ತಾನೇ ಈ ವಿಕ್ರಮಾದಿತ್ಯನ ಮಗನೆಂದು ಹೇಳಲಳವಲ್ಲ!**

ಒಟ್ಟಾರೆ ಕೊಲ್ಲಿಪಾಕ ತಾಸನೋಕ್ತವಾದ ರಾಜಾದಿತ್ಯ ಯುದ್ಧಮಲ್ಲರಿಂದರೆ ಬಾದಾಮಿ ಚಾಳುಕ್ಯ ವಂಶೇತನದ ೧ನೆಯ ವಿಕ್ರಮಾದಿತ್ಯ ಹಾಗೂ ಇವನ ಮಗ ವಿನಯಾದಿತ್ಯರಾಗಿರಲಿಕ್ಕಿಲ್ಲವೆಂದು ವಿದಿತವಾಗುವುದರಲ್ಲಿ ಸಂದೇಹವಿಲ್ಲ!

(೩) ಎರಡನೆಯ ಪುಲಿಕೇಶಿಯು ನೊಮ್ಮನೂ ಲಾಟದ ಧಾರಾಶ್ರಯ ಜಯಸಿಂಹವರ್ಮನ ಮಗನೂ ಆದ ಜಯಾಶ್ರಯ **ಮುಂಗಲರಸನೂ 'ವಿನಯಾದಿತ್ಯ ಯುದ್ಧಮಲ್ಲ'ನೆಂದು ಬಿರುದಿನಿಂದ ಹೊಗಳಲ್ಪಟ್ಟಿದ್ದಾನೆ** (ನವಸಾರಿಯ ತಾಸನ). ಅದು ಕಾರಣ **ಈತನೇ ಇಲ್ಲಿಯ ಯುದ್ಧಮಲ್ಲ** ವಿನಯಾದಿತ್ಯನೆಂದೂ ಹೇಳುವರು. (ನಾಡೋಜ ಪಂಪ) **ಇದೂ ಸರಿಯಲ್ಲ!** ಇವನ ಪೂರ್ಣ ಹೆಸರು 'ಜಯಾಶ್ರಯ ಮುಂಗಲರಸ'ನೆಂದು. **ಈ ಹೆಸರನು ಕೊಲ್ಲಿಪಾರ ತಾಸನದಲ್ಲಾಗಲೀ, ವೇಮುಲವಾಡದ ತಾಸನದಲ್ಲಾಗಲೀ, ಪಂಪ ಭಾರತದಲ್ಲಾಗಲೀ, ಪರಭಣಿಯ ತಾಸನದಲ್ಲಾಗಲೀ ಇರುವುದಿಲ್ಲ. ಅಷ್ಟು ಮಾತ್ರವಲ್ಲ, ಅತನು ಲಾಟದಲ್ಲೇ ಆಳುತ್ತಿದ್ದನೆಂದು** ಆದೇ ನವಸಾರಿಯ ತಾಸನ ಮತ್ತು ಬಲ್ಸಾರಿಯವುಗಳಲ್ಲಿದೆ. **ಈ ಲಾಟದಧೀಶತೆಯ** ಒಂದಿಷ್ಟು ತಿಳಿವಾದರೂ ೧ನೆಯ ಯುದ್ಧಮಲ್ಲ ಹಾಗೂ ಒಂದನೆಯ ಅರಿಕೇಸರಿಯ ಬರಿಹಗಳಲ್ಲಿಲ್ಲ. ಇನ್ನು 'ಕಾಂತಿಯಧೀಶತೆ' ಹಾಗೂ 'ಸವಾದಕ್ಷಿತಿ'ಯ ಒಡೆತನದ ಹೆಸರಿಕೆಯಾದರೂ ಆ ಲಾಟದರಸನಿಗೆ ಇದ್ದಿಲ್ಲ. ಅಂತೂ, ಈ ಕೊಲ್ಲಿಪಾರ ತಾಸನೋಕ್ತ ರಾಜನು ತದ್ಭಿನ್ನನೆಂದೇ ಸ್ಪಷ್ಟವಾಗುವುದು.

(೩) ೨ನೆಯ ಪುಲಿಕೇಶಿಯ ತನ್ಮನಾದ ಕುಬ್ಜ ವಿಷ್ಣುವರ್ಧನನು ವೆಂಗಿಯಲ್ಲಿದ್ದವನು. ಇವನಿಂದ ಪ್ರವರ್ತಿತವಾದ ಮೂಡಣ ಚಾಳುಕ್ಯರ ಸೀಳಿಗೆಯಲ್ಲಿಯೂ ಯುದ್ಧಮಲ್ಲನೆಂಬ ಹೆಸರಿನ ಇಬ್ಬರು ರಾಜರಿದ್ದರು.

ಪಂಪಭಾರತದ ಭೀಮಸೇನನೊಂದಿಗೆ ಸಮೀಕೃತನಾಗಿರಬೇಕು ಎಂದು ಶ್ರೀ. ಮುಳಿಯ ತಿಮ್ಮಪ್ಪಯ್ಯನವರು ಹೆಸರಿಸಿದ ರಾಜ ಭೀಮನ (ಇಸ್ವಿ ೭೩೬–೪೫) ತಂದೆಯು ಯುದ್ಧಮಲ್ಲನೆಂದು ತಿಳಿಯುಬರುವುದು (೯೨೭–೩೩), ಹಾಗೂ ಆತನ ತಜ್ಜನೂ ಯುದ್ಧಮಲ್ಲನೆಂದೇ ವ್ಯವಹೃತನಾಗಿದ್ದನು (ಇವನಾಳಿಕೆಯ ದೇಶ-ಕಾಲಾದಿಗಳು **ಮಾತ್ರ ಗೊತ್ತಾಗಿಲ್ಲ!**). ಇವರಿಬ್ಬರೂ ಒಂದನೆಯ ಅರಿಕೇಸರಿಗಿಂತ ತೀರ ಇತ್ತೀಚಿನವರಾದುದರಿಂದ, ಈ ಪ್ರಸ್ತಾವಕ್ಕೊಳಪಡರೆಂದೇ ಪ್ರತ್ಯೇಕ ಹೇಳಬೇಕಾಗಿಲ್ಲ.

೪) ಪಂಪನು ತಿಶ್ರಯಿಸಿದ ಚಾಳುಕ್ಯರ **ಮೂಲಪುರುಷನೆಂದೆ, ಎರಡನೆಯ ಕೀರ್ತಿವರ್ಮನಾಗಿರಬೇಕೆಂದೂ ಹೇಳುವರು** (ಶ್ರೀ. ರಾ. ಹ. ದೇಶಪಾಂಡೆಯವರ 'ಕರ್ನಾಟಕ ಸಾಮ್ರಾಜ್ಯ' **ನೋಡಿರಿ**) ಇದು ಹೇಳಿಕೇಳಿಯೂ ಒಂದಿಷ್ಟು ತಾಳಿಕೆಯಾಗುವುದಿಲ್ಲವೆಂದು ಹೇಳಿದರೆ ಅಡ್ಡಿಯೇನಿಲ್ಲ. **ಅಂತೂ ಈ ನಾಲ್ಕು ವಿಷಯಗಳೂ ನೀಗ ತಳ್ಳುವೇ ಸೈ.**

ಅನುಬಂಧ ೧

ಪಂಪಭಾರತದಲ್ಲಿ ಒಂದನೆಯ ಯುದ್ಧಮಲ್ಲನನ್ನು ಕುರಿತು ಹೇಳಿದುದು :

ಶ್ರೀಮಚ್ಚಳುಕ್ಯವಂಶ-
ವ್ಯೋಮಾಮೃತಕಿರಣನೆನಿಸ ಕಾಂತಿಯನೊಳಕೊಂ– ॥
ದೀಮಹಿಯೊಳಾತ್ಮವಂಶ ಶಿ- ।
ಖಾಮಣಿ ಜಸನೆಸೆಯೆ ಯುದ್ಧಮಲ್ಲಂ ನೆಗಳ್ದಂ ॥
ಅತಂ ನಿಜಭುಜವಿಜಯ ।
ಖ್ಯಾತಿಯಿನಾಳ್ವಾಳ್ದನಧಿಕಬಲನನ್ನಿಪತಿ– ।
ವ್ರಾತಮಣಿಮಕುಟ ಕಿರಣ ।
ದ್ಯೋತಿತಪಾದಂ ಸಪಾದಲಕ್ಷ ಕ್ಷಿತಿಯಂ ॥
ಏನಂ ಪೇಳ್ವುದೊ ಸಿರಿಯು ।
ದ್ದಾನಿಯನೆಸ್ಗೆಯೊಳೆ ತೀವಿ ದೀರ್ಘಿಕೆಗಳನಂ– ।
ತಾನೈಪತಿ ನಿಶ್ಚಲಯ್ಯೂ ।
ರಾನೆಯನವಗಾಹಮಿರಿಸುವಂ ಬೋದನದೊಳ್ ॥

(೧–೧೫ರಿಂದ ೧೭ ಪದ್ಯ)

ಈ ಮೊದಲಿನ ಪದ್ಯದ 'ಕಾಂತಿಯನೊಳಕೊಂಡ' ಎಂಬುದು ಆ ಮೊದಲ 'ಶ್ರೀಮಚ್ಚಳುಕ್ಯವಂಶ ವ್ಯೋಮಾಮೃತ ಕಿರಣನೆನಿಸ' ಎಂಬ ರೂಪಕಾಲಂಕಾರದಿಂದ ಪೂರ್ಣಾಂಗವೆನಿಸುವ ವಾಕ್ಯಕ್ಕೆ ಅದೆಂತೂ ಕೂಡಿಗೆಯಾಗುವುದಿಲ್ಲವೆಂದು ನಮಗೆಲ್ಲಾ ತಿಳಿದು ಬರುವುದು! ಅಂದ ಮೇಲೆ, ಹಾಗೆಂದುದರ ಆಶಯವೇನಿರಬಹುದು?

ಒಂದನೆಯ ಪುಲಿಕೇಶಿಯನ್ನು ಕುರಿತು ಆಯ್ಹೊಳೆ ತಾಸನದಲ್ಲಿ ಹೇಳಿದುದು – 'ಶ್ರೀತೇಂದುಕಾಂತಿರಪಿ ಶ್ರೀವಲ್ಲಭೋಪ್ಯಯಾಸೀದ್-ವಾತಾಪೀಪುರೀ ವಧೂವರತಾಂ' ಎಂದು. ಈ ಇಂದುಕಾಂತಿಯೆಂದರೆ ಚಂದ್ರನಂತೆ ಕಾಂತಿಯುಳ್ಳವನೆಂದು ಕೆಲವರೂ (ಕರ್ನಾಟಕ ಸಾಮ್ರಾಜ್ಯ), ಇಂದುಕಾಂತಿಯೆಂಬವಳು ಪುಲಿಕೇಶಿಯ ಹೆಂಡತಿಯೆಂದು ಕೆಲವರೂ (ಕರ್ನಾಟಕ ಅರಸುಮನೆತನಗಳು ಪುಟ ೫೧.) ಹೇಳುವರು! ಆದರೆ, ಫ್ರೆಂಚ್ ಪಂಡಿತನಾದ ಜಿ. ಜೆ. ಡುಬ್ರ್ಯಾಯಿಲರು 'ಇಂದುಕಾಂತಿಯೆಂಬ ಪಟ್ಟಿಣ'ವೆಂದು ತರ್ಜುಬರೆದುದು ತಾನೇ

ಇಲ್ಲಿನ ಪಂಪಭಾರತ ವಾಕ್ಯಾಂಶದಿಂದ ಪುಷ್ಟಿಗೊಳ್ಳುವುದೆಂದೂ, ಇದೇ ಅರ್ಥದಿಂದಲೇ ಪಂಪನೂ ವಿಶೇಷಿಸಿರಬೇಕೆಂದೂ ತಿಳಿಯುವುದರಲ್ಲಿ ತಪ್ಪಿಲ್ಲ! ಇಂದುಕಾಂತಿ—ಕಾಂತಿಯೆಂದುದು ಭೀಮಸೇನ—ಭೀಮ ನೆಂಬಂತೆ ಸಣ್ಣಿಸಿದ ಹೆಸರಾಗಿದೆ!

ಇನ್ನು, 'ಸಪಾದಲಕ್ಷಕ್ಷಿತಿಯೆಂದರೇನು?' ಚಾಳುಕ್ಯ ಮನೆತನದ ಮೂಲ ಪುರುಷನಾರೆಂದು ಮೂಡಣ ಚಾಳುಕ್ಯರ ಶಾಸನದಲ್ಲಿ ಕಥಾಂತರವಿದೆ. (ಬೆಲ್ಲೂರು ಶಾಸನ. ಇಂಡಿಯನ್ ಆಂಟಿಕ್ವರಿ. ೧೪೯೦ ಇಸ್ವಿ). ಅಲ್ಲಿನ ಕಥಾಂತರವು ಮಿಕ್ಕೆಲ್ಲಾ ಶಾಸನಗಳಿಂದ ಭಿನ್ನವಾಗಿರುವುದರಿಂದ ಬಿಡಬೇಕಾಗುವುದು, ಆದರೆ, ಅಲ್ಲಿ ಹೇಳಿದ ಕಲವೊಂದು ವಿಶೇಷಾಂಶಗಳು ಬೇರೆಯವಕ್ಕೆ ಹೊಂದಿಕೆಯಾಗುವಂತಿದ್ದರೆ ಕೊಳ್ಳಲಡ್ಡಿಯಿಲ್ಲವೆಂದು ನಾವು ಹೇಳಿದರೆ ಹೆಚ್ಚಾಗದು. ಅಂತೆ, ಒಂದನೆಯ ಪುಲಿಕೇಶಿಯ ಪೂರ್ವಜನು 'ನರ್ಮದಾಮಧ್ಯಂ ಸಾರ್ಧಸಪ್ತಲಕ್ಷಂ ದಕ್ಷಿಣಾಪಥಂ ಪಾಲಯಾ ಮಾಸ' ಎಂದುದು ತಾನೇ ಈ ಪಂಪಭಾರತದ ವಾಕ್ಯಾಂಶಕ್ಕೆ ಆಧಾರವಾಗಿದೆಯೆನ್ನ ಬಹುದು. ಒಂದನೆಯ ಪುಲಿಕೇಶಿಯ ಪೂರ್ವಜನಿಂದ ತೊತಗಿದ 'ಏಳುವರೆಲಕ್ಷ (ಗ್ರಾಮಗಳ) ಒಡೆತನವು' ಅನೂಚಾನವಾಗಿ ಸಾಗಿಬಂದುದೆಂದೂ, ಎರಡನೆಯ ಪುಲಿಕೇಶಿಯಿಂದ ಕವಲೊಡೆದ ಚಾಳುಕ್ಯರಿಗೆ ಬೇರ್ಬೇರೆ ಕಡೆಗೊಡೆತನದಂತೆ ರಾಜಾದಿತ್ಯನ ಪೀಳಿಗೆಯ ಈ ಯುದ್ಧಮಲ್ಲನಿಗೆ ಸಪಾದಲಕ್ಷಕ್ಷಿತಿಯ ದೊರೆತನವು ದೊರೆತಿರಬೇಕೆಂದೇ ತಿಳಿಯುವುದರಲ್ಲಿ ಔಚಿತ್ಯವಿದೆ!

'ಒಂದನೆಯ ಯುದ್ಧಮಲ್ಲನ ರಾಜಧಾನಿಯು ಬೋದನವಿದ್ದಿರ. ಬೇಕೆಂದು' ಶ್ರೀ. ಎಂ. ಗೋವಿಂದ ಪೈಯವರು ಬರೆದಿದ್ದಾರೆ. ಅಂದರೆ, ಪಂಪಭಾರತದ 'ಬೋದನದೊಳ್' ಎಂಬುದರ ಸಾರ್ಥಕತೆ ತಿಳಿವುದು.

ಅಂತೂ, ಪಂಪಭಾರತದ ಮೇಲಣ ಪದ್ಯಗಳಿಂದ ತಿಳಿದ-ಯುದ್ಧಮಲ್ಲನು 'ಕಾಂತಿಯುಧಿಷ್ಠಿತೆ' ಹಾಗೂ 'ಸಪಾದಲಕ್ಷ ಭೂ ಭರ್ತೃತ್ವ'ಗಳುಳ್ಳವನೆಂದು—ಹೊಗಳಿಕೆಯು ಚಾಳುಕ್ಯ ಕುಲದ ಇನ್ನಾವ ಶಾಖೆಯವರಿಗೂ ಇಲ್ಲದುದೆಂದು ನಾವೆಲ್ಲಾ ಒಪ್ಪತಕ್ಕುದೇ ಆಗಿದೆ. ಅದು ತಾನೇ ಈ ರಾಜಾದಿತ್ಯನ ಮಗನಾದ ಯುದ್ಧಮಲ್ಲನ ಪರಂಪರೆಯ ಒಂದು ವೈಶಿಷ್ಟ್ಯವೆಂದೂ ಹೇಳಬಹುದು!

ಒಟ್ಟಾರೆ, ಈ ಯುದ್ಧಮಲ್ಲ ಹಾಗೂ ಅರಿಕೇಸರಿಯು ತಿನೆಯ ಪುಲಿಕೇಶಿಯ ಚಾಳುಕ್ಯ ಮನೆತನಕ್ಕೆ ಸೇರತಕ್ಕವರೆಂದು ತಿಳಿಯು-ವಲ್ಲಿಗೆ ಸರಿಕೆಯಿದೆ.

(ಈ ಅನುಬಂಧವು ಜೂನ್ ತಿಂಗಳ ಸುಬೋಧದಲ್ಲಿ ಅಚ್ಚಾಗಿದೆ. ಅದಕ್ಕಾಗಿ ಶ್ರೀ. ಸಂಪಾದಕರಿಗೆ ಕೃತಜ್ಞತೆ ಸಲ್ಲಬೇಕು.)

ಅನುಬಂಧ ೨

ಕೊಲ್ಲಿಪಾರ ಶಾಸನದ ಕಾಲವಿಚಾರ— ಈ ಶಾಸನದ ಅದೊಂದು ಪದ್ಯ ಹೀಗಿದೆ:

ಕಲೌ ವ್ಯಾಪ್ತೇ ಜಗತ್ಯಸ್ಮಿನ್ ಸುರೇಂದ್ರೇಭಾರ್ಕ ಸಾಗರಾಃ।
ದಾನೇನ ತೇಜಸಾ ಸ್ಥಿತ್ಯಾ ಜಿತಾಯೇನ ಮಹಾತ್ಮನಾ॥

ಇದರಲ್ಲಿರುವ 'ಸುರೇಂದ್ರೇಭಾರ್ಕ ಸಾಗರ'ಗಳೆಂಬ ಪದಗಳು ಈ ಶಾಸನದ ಕಾಲಮಾನಸೂಚಕವೆಂದು ಬಗೆದು, ಕಲಿಯುಗದ ವರ್ಷ ಗಳಲ್ಲಿ ೪೨೭೭ (೪) ನೆಗೆ ಸರಿಯಾದ ಇಸ್ವಿ ೧೦೨೭ (೪) ರಲ್ಲಿ ತಾನೇ ಇದು ರಚಿತವಾಯ್ತೆಂದು ಕೆಲವರು ಅಭಿಸುತ್ತಾರೆ! ಆ ಬಗ್ಗೆ ಮತ್ತೂ ವಿವೇಚಿಸಿದುದೆಂದರೆ:

If the date is genuine, it refers to 1027 A. D. when Western Chalukya Jagadekmalla Jayasimha was ruling. Perhaps Arikesari took his title 'Tribhuvana malla' from Vikramaditya V who was also known as Tribhuvanamalla.

ಈ ಆಶಯವು ಸರಿಯಾಗಿರುವುದಿಲ್ಲವೆಂದು ನಮ್ಮೈಣಿಕೆ! ಕೊಲ್ಲಿ-ಪಾರ ಶಾಸನದ ಮೇಲಣ ಪದ್ಯದ ಅರ್ಥವು ಹೀಗಿದೆ:

ಕಲಿಯು ಲೋಕದಲ್ಲಿ ವ್ಯಾಪಿಸಿರಲು, ( ) ಭಾವ ಮಹಾತ್ಮನಿಂದ (ಒಂದನೆಯ ಅರಿಕೇಸರಿಯಿಂದ) ಸುರೇಂದ್ರೇಭ–ಅರ್ಕ–ಸಾಗರಗಳು ಅನುಕ್ರಮವಾಗಿ ದಾನ–ತೇಜಸ್ಸು–ಸ್ಥಿತಿ (ಗಾಂಭೀರ್ಯ) ಗಳಿಂದ ಗೆಲ್ಲಲ್ಪಟ್ಟವುಗಳೆಂದು ತಾನೇ ಆ ಪದ್ಯಾರ್ಥವೆಂದು ಕಾವ್ಯರಸಿಕರಿಗೆಲ್ಲ ತಿಳಿದುಬರುವಂತಹುದೇ ಆಗಿದೆ! ಇಂತಹ ಅಲಂಕಾರವಾಕ್ಯಗಳು ಶಾಸನಗಳಲ್ಲಿ ಹೊಸತಲ್ಲ. ಪರಂತು, ಈ ಶಾಸನದಲ್ಲಿ ಅದಾವ ಕಾಲಮಾನವನ್ನೂ ಹೇಳಿಲ್ಲ! ಇಂತಹ ಕಾಲನಿರ್ದೇಶವಿಲ್ಲದ ಶಾಸನಗಳು ಹಲವಿವೆ. ಅಂದಮೇಲೆ ಈ ಮೇಲಣ ಅಂಗ್ಲವಾಕ್ಯವು ತೀರಾ ಹೊಂದಿಕೆಯಾಗದು.

ಈ ಒಂದನೆಯ ಅರಿಕೇಸರಿಯು ರಾಷ್ಟ್ರಕೂಟ ನಿರುಪಮ ಧ್ರುವನ (ಇಸ್ವಿ ೭೮೪–೯೧) ಸಮಕಾಲಿಕನೆಂದು ಪಂಪಭಾರತದಿಂದ ತಿಳಿಯುವುದು. ಇನ್ನು, ಈ ಕೊಲ್ಲಿಪಾರ ಶಾಸನದ ತೇದಿ ಕ್ರಿ. ಶ. ಸು. ೭೭೦–೮೦ ರೊಳಗಿರಬೇಕೆಂದೂ, ಈ ಅರಿಕೇಸರಿಯ ತಂದೆಯಾದ ಒಂದನೆಯ ಯುದ್ಧಮಲ್ಲನೂ ಕ್ರಿ. ಶ. ಸು. ೭೫೦ ರಲ್ಲಿದ್ದಿರಬಹುದೆಂದೂ ಚಾರಿತ್ರಿಕಸಂಶೋಧಕರ ಆಶಯವಿದೆ (ಆ ಶಾಸನವನ್ನು ಪ್ರಕಟಿಸಿದ ಆಂಧ್ರಪತ್ರಿಕೆ ಹಾಗೂ ಶ್ರೀ. ಎಂ. ಗೋವಿಂದ ಪೈಯವರ ಲೇಖನಗಳನ್ನು ನೋಡಿರಿ). ಈ ಕಾಲಮಾನಕ್ಕೂ— ನಾವೆಂದಂತೆ ಆದಿತ್ಯವರ್ಮನ ಮಗನೇ ೧ನೆಯ ಯುದ್ಧಮಲ್ಲನೆಂದೂ, ಆತನ ಮಗನೇ ಈ ಕೊಲ್ಲಿ-ಪಾರ ಶಾಸನಕರ್ತೃ ೧ನೆಯ ಅರಿಕೇಸರಿಯೆಂದೂ, ಹಾಗೂ ಇವರಿಬ್ಬರನ್ನು ಕುರಿತು ನಾವೆಣಿಸಿದ ಕಾಲಮಾನಕ್ಕೂ ಹೆಚ್ಚಿನ ಮಟ್ಟಿಗೆ ಹೊಂದಿಕೆಯಾಗುವುದು!

ಹೊರನಾಡಿನ ಕನ್ನಡಿಗರು

(ವ್ಯಕ್ತಿಪರಿಚಯ)

ಪರಿಚಯಕಾರರು: ಶ್ರೀ. ಎಂ. ಕೆ. ಬಡಿಗೇರ ಬಿ. ಎಸ್ ಸಿ (ಆನ್ರಿ) ಅನರ್ಸ್. ರಾಣಾಪುರ

●

ಶ್ರೀ. ಬಾಡಗಂಡಿಯವರಂತೆ ಹೊರನಾಡಿನಲ್ಲಿದ್ದು ಹೆಸರು ಪಡೆದೂ ಕನ್ನಡತನವನ್ನು ನಿಷ್ಠೆಯಿಂದ ಕಾಯ್ದುಕೊಂಡ ಕರ್ತೃತ್ವಶಾಲಿ ಕನ್ನಡ ವ್ಯಕ್ತಿಗಳು ಅಪೂರ್ವವಾಗಿ ನೋಡಲು ಸಿಕ್ಕುವರು. ಇಂತಹ ವ್ಯಕ್ತಿಗಳು ಇನ್ನೆಲ್ಲಿಯಾದರೂ ಇದ್ದು ಕಾರ್ಯ ಮಾಡುತ್ತಲಿದ್ದರೆ, ಅವರ ಪರಿಚಯಕ್ಕೂ ಜಯಂತಿಯಲ್ಲಿ ಅವಕಾಶವಿದೆ.

●

ನೀವು ಜಳಗಾಂವಕ್ಕೆ ಹೋಗಿದ್ದೀರಾ? ಅಂದ ಮೇಲೆ ನಿಮಗೂ ಶ್ರೀಮಾನ್ ಬಾಡಗಂಡಿಯವರ ಪರಿಚಯವಿರಬೇಕಲ್ಲವೆ? ಯಾವನೊಬ್ಬ ಕನ್ನಡಿಗನು ಜಳಗಾಂವಕ್ಕೆ ಹೋದರೆ, ಇವರಿಗೆ ಭೆಟ್ಟಿಯಾಗದೆ ಬರನು; ಅಥವಾ ಇವರು ಈ ಹೊಸ ಕನ್ನಡಿಗನಿಗೆ ಭೆಟ್ಟಿಯಾಗದೆ ಬಿಡರು ಎಂದರೂ ಅಡ್ಡಿಯಿಲ್ಲ. ಅವರಿಗೆ ಭೆಟ್ಟಿಯಾಗುವುದೂ ಒಂದು ಮೋಜಿನ ಸಂಗತಿಯೇ! ಅವರಿಗೆ ಹೊಸತಾಗಿ ಬಂದ ಕನ್ನಡಿಗರ ಸುದ್ದಿ ಹೇಗೆ ಹತ್ತುವುದೋ ಯಾರು ಬಲ್ಲರು? "ಇಂದು ಸಬ್-ಇನ್ಸ್ಪೆಕ್ಟರು ಕರ್ನಾಟಕದಿಂದ ಬಂದಿದ್ದಾರಂತೆ. ಸ್ಟೇಶನ್ ಮಾಸ್ತರರು ಕರ್ನಾಟಕದವರಂತೆ!" ಒಬ್ಬರೆ-ಇಬ್ಬರೆ. ಅವರೆಲ್ಲರನ್ನೂ ಕಂಡು ಭೆಟ್ಟಿಯಾಗಿ ಮಾತಾಡಿಸದೆ ಸಮಾಧಾನವಿಲ್ಲ ಇವರಿಗೆ.

ದುಂಡುಮುಖ; ಕುಳ್ಳಗಿನ ಶರೀರ; ನೆರೆತ ಕೂದಲಾದರೂ ನಯವಾಗಿ ಬಾಚಿದ ತಲೆ. ಕಣ್ಣಿಗೆ ಕನ್ನಡಕವನ್ನು ಹಾಕಿಕೊಂಡು, ಬಾಯಲ್ಲಿ ಚರ್ಚಿಲ್ಲರಂತೆ ಸಿಗಾರನ್ನು ಹೊತ್ತಿಸಿ, ಗಂಟೆಗಂಟೆಗಳವರೆಗೆ ಸರಸವಾಗಿ ಮಾತನಾಡಬಲ್ಲರು. ಮನೆಗೆ ಹೋದೊಡನೆ 'ನಿಮಗೆ ಚಹ ಬೇಕೆ? ಕಾಫಿ ಬೇಕೆ? ಕೋಕೋ ಬೇಕೆ?' ಎಂದು ಕೇಳಿದವರ ಹಾಗೆಮಾಡಿ, ನಿಮ್ಮ ಮುಂದೆ ನಿಮಗೆ ಬೇಕಾದ್ದು ಬಂದೇಬರುವಂತೆ ಮಾಡುವರು. ಇವರು ಜಳಗಾಂವಕ್ಕೆ ಬಂದಾಗ, ಕನ್ನಡ ಜನ ಬೆರಳಿನ ಮೇಲೆ ಎಣಿಸುವಷ್ಟಿದ್ದರಂತೆ.

ಇವರ ಹೆಸರು ಕೇತವರಾವ ಗೋವಿಂದರಾವ ಬಾಡಗಂಡಿ ಎಂದು. ಇವರು ಬಾಗಿಲುಕೋಟೆಯವರು. ಮಾಧ್ಯಮಿಕ ಶಿಕ್ಷಣವನ್ನು ವಿಜಾಪುರದಲ್ಲಿ ಪಡೆದು, ಮುಂದೆ ಇವರು ಪುಣೆಯ ಎಂಜಿನಿಯರಿಂಗ್ ಕಾಲೇಜನ್ನು ಸೇರಿದರು. ಅಲ್ಲಿ ಡಿ. ಸಿ. ಈ. ಯನ್ನು ಪಡೆದು. ಹಲವಾರು ವರುಷ ಪಬ್ಲಿಕ್ ವರ್ಕ್ಸ್ ಖಾತೆಯಲ್ಲಿ ಕೆಲಸ ಮಾಡಿ, ಮುಂದೆ ಜಳಗಾಂವದ ಮ್ಯುನಿಸಿಪಾಲಿಟಿಯಲ್ಲಿ ಚೀಫ್ ಆಫೀಸರರೆಂದು ಕಾರ್ಯವಹಿಸಿ, ಸತತ ೩೫ ವರ್ಷಗಳವರೆಗೆ ಎಲ್ಲರಿಗೂ ಅಚ್ಚುಮೆಚ್ಚಿನವರಾಗಿ ಕೆಲಸಮಾಡಿದರು. ಕಾಲಕಾಲಕ್ಕೆ ಕನ್ನಡ ಮಂತ್ರಿಗಳು ಅಲ್ಲಿಗೆ ಬಂದಾಗ, ಇವರ ಕೆಲಸವನ್ನೂ- ಅದಕ್ಕೆಂತಲೂ ಹೆಚ್ಚಾಗಿ ಪರನಾಡಿನಲ್ಲಿ ಎಲ್ಲರಿಗೂ ಬೇಕಾಗಿ ಕೆಲಸಮಾಡುವ ಇವರ ರೀತಿಯನ್ನೂ ಕಂಡು ಬೆರಗಾದರಂತೆ.

ಇವರು ಜಳಗಾಂವಕ್ಕೆ ಬಂದು ನೆಲಸಿದಂದಿನಿಂದ ಎಷ್ಟೋ ಕನ್ನಡಿಗರಿಗೆ ಅಕ್ಷಯೆ ಇರಲು ಎಲ್ಲ ಸೌಕರ್ಯಗಳನ್ನು ಒದಗಿಸಿ ಕೊಟ್ಟಿದ್ದಾರೆ. ಅದಕ್ಕೆಂದೇ ಇವರಿಗೆ ಎಲ್ಲರೂ "ಬಾಬಾ" ಎಂದು ಕರೆಯುವುದುಂಟು. ಇವರಂತೆ ಇವರ ಪತ್ನಿಯವರಾದರೂ ಕನ್ನಡ ಮಹಿಳೆಯರಿಗೆ ಹಿಂಗಾವಲಿದ್ದಂತೆ. ಮನೆಗೆ ಬಂದವರನ್ನು ಆದರದಿಂದ ಬರಮಾಡಿಕೊಂಡು, ಅಕ್ಕರತೆಯಿಂದ ಮಾತಾನಾಡಿಸಿ, ಆ ಹೊಸ ಸ್ಥಳಗಳಲ್ಲಿ ಇದ್ದ ಎಲ್ಲ ಅನನುಕೂಲತೆಗಳನ್ನು ನಿವಾರಿಸುವರು. ಇವರಿಬ್ಬರನ್ನು ನೋಡಿದಾಕ್ಷಣ ಕನ್ನಡಿಗರಿಗೆ ಇಲ್ಲದ ಹೆಮ್ಮೆ; ಆದರ, ಆತ್ಮೀಯಭಾವ.

ಕಾಲಕ್ರಮೇಣ, ಸರಕಾರೀ ಕೆಲಸ ಇಲ್ಲವೇ ಸ್ವತಂತ್ರ ಉದ್ಯೋಗಕ್ಕಾಗಿ ಕನ್ನಡಿಗರು ಜಳಗಾಂವಕ್ಕೆ ಬಂದು ನೆಲಸಹತ್ತಿದ್ದರಿಂದ, ಇವರು ಅಲ್ಲಿ 'ಕರ್ನಾಟಕ ಸಂಘ' ವನ್ನೊಂದು ಸ್ಥಾಪಿಸಿದರು. ಇಲ್ಲಿಯವರೆಗೆ ಅದನ್ನು ಎಲ್ಲ ರೀತಿಯಿಂದ ಬೆಳಿಸಿಕೊಂಡು ಬಂದವರೆಂದರೆ ಇವರೆ. ಕರ್ನಾಟಕಸಂಘವೆಂದರೆ ಎಲ್ಲರನ್ನೂ ಕೂಡಿಸಿ-ವರ್ಗಣಿ ಎತ್ತಿ ಕರ್ನಾಟಕ ಏಕೀಕರಣ ಮುಂತಾದುವುಗಳ ಬಗ್ಗೆ ಚರ್ಚಾಸ್ಪರ ಮಾಡಿ, ಮರುದಿನ ಪತ್ರಿಕೆಯಲ್ಲಿ ಬರುವಂತೆ ಮಾಡುವ ಸ್ವಭಾವವಲ್ಲ ಇವರದು. ಕರ್ನಾಟಕ ಸಂಘವು ಕನ್ನಡಿಗರ ಸಂಘ. ಕನ್ನಡಿಗರೆಲ್ಲರೂ ಒಂದೆಡೆ ಸೇರಿ-ಒಬ್ಬರಿಗೊಬ್ಬರು ಪರಿಚಯಮಾಡಿಕೊಂಡು ಸ್ನೇಹ ಸೌಹಾರ್ದಗಳನ್ನು ಬೆಳೆಸಿ, ಒಂದೆತನದಿಂದ ನಡಿಯುವುದೇ ಇದರ ಉದ್ದೇಶ. ಆಗಾಗ ಸಭೆಸೇರಿಸಿ, ಬಲ್ಲವರಿಂದ ಅನೇಕ ವಿಷಯಗಳ ಬಗ್ಗೆ ಭಾಷಣಗಳನ್ನೂ ಚರ್ಚಾಕೂಟಗಳನ್ನೂ ಏರ್ಪಡಿಸುವರು.

ಡಸಾಹಿತ್ಯದಲ್ಲಿ ಆಭಿರುಚಿಯುಳ್ಳವರಿಗೆ ವಾರಪತ್ರಿಕೆ, ಮಾಸ
ಕಗಳನ್ನು ತರಿಸುವುದಲ್ಲದೇ ಒಂದು ಚಿಕ್ಕ ವಾಚನಾಲಯವನ್ನೂ
ರಂಭಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಹುಟ್ಟಿ ಬೆಳೆದ ಕನ್ನಡ
ಕ್ಕಳಿಗೆ ಕನ್ನಡ ಓದಲು ಬರೆಯಲು ಬರಬೇಕೆಂಬ ಹವ್ಯಾಸವಿದೆ.
ವಿಶೆಯಲ್ಲಿ ಪ್ರಯತ್ನವೂ ನಡೆದಿದೆ. ಇದಲ್ಲದೆ ಇವರು ದಿಲ್ಲಿಯಲ್ಲಿ-
ವ " ಹೊರನಾಡ ಕನ್ನಡಿಗರ ಸಂಸ್ಥೆಯ " ಕಾರ್ಯಕಾರಿ ಮಂಡಳದ
ಸ್ಯರಲ್ಲೊಬ್ಬರು. ಆದುದರಿಂದ ಇವರು ಕೇವಲ ಜಳಗಾಂವಕ್ಕಷ್ಟೇ
ಲ್ಲದೆ, ಕರ್ನಾಟಕಸಂಘಗಳಿರುವ ಹೊರನಾಡಿನ ಮುಖ್ಯ ನಗರದ
ನ್ನಡಿಗರಿಗೆ ಕೂಡ ಚಿರಪರಿಚಿತರಾಗಿದ್ದಾರೆ. ಇವರ ಮನೆಯೆಂದರೆ
ಚನಾಲಯವಿದ್ದಂತೆ. ಕನ್ನಡ, ಮರಾಠಿ, ಇಂಗ್ಲೀಷ್ ಪುಸ್ತಕಗಳು
ಶಿರಾಶಿಯಾಗಿದ್ದು, ಅವೆಲ್ಲವೂ ಶಿಸ್ತಿನಿಂದ ಜೋಡಿಸಲ್ಪಟ್ಟಿವೆ. ಕರ್ನಾ-
ಕ ಸಂಘವೆಂದರೆ ಇವರ ಮನೆ. ಇವರ ಮನೆಯೇ ಕರ್ನಾಟಕ
ಂಘವೆಂದರೂ ಒಪ್ಪುತ್ತದೆ.

ಇಂದು ಜಳಗಾಂವ ಊರು ನಗರದಂತೆ ಕಂಗೊಳಿಸುತ್ತಿದೆ.
ವರ ಆಡಳಿತದಲ್ಲಿಯೇ ನಗರದ ಎಲ್ಲ ತರದ ಸುಧಾರಣೆಗಳಾದುವು
ಂದು ಜಳಗಾಂವಕ್ಕೆ ಬಂದುನೋಡಿದರೆ, ಅಂದವಾದ ಟಾರುರೋಡು-
ಗಳು, ಮಾರ್ಕೆಟ್ಟು. ಎಲ್ಲಕ್ಕೂ ಹೆಚ್ಚಾಗಿ ಮೆಚ್ಚುವಂತಹದೆಂದರೆ
ನಗರದ ರಚನೆ. ಇವರ ಪ್ರಯತ್ನದಿಂಗಲೇ " ಮೂಲಜೀ ಜೇಥಾ
ಕಾಲೇಜ್ " ಸ್ಥಾಪಿತವಾಯಿತು. ಇಂದು ಇವರು ನಿವೃತ್ತಿ ಹೊಂ-
ದಿದ್ದರೂ, ನಾಗರಿಕರೆಲ್ಲರೂ ಇವರನ್ನು ಆದರ-ಮನ್ನಣೆಗಳಿಂದ
ಕಾಣುತ್ತಾರೆ.

ಇವರು ತಮ್ಮ ಆಯುಷ್ಯದ ಬಹುಭಾಗವನ್ನು ಹೊರನಾಡಿನಲ್ಲಿ
ಕಳೆದಿದ್ದರೂ ತಮ್ಮ ಮಾತೃಭಾಷೆಯ ಮೇಲಿನ ಪ್ರೇಮ ಹೋಗಿಲ್ಲ.
ಅದು ನಂದಾದೀಪದಂತೆ ಉರಿಯುತ್ತಿದೆ. ಇವರೇನೂ ಉದ್ದಾಮ
ಸಾಹಿತಿಗಳಲ್ಲ. ವಾಙ್ಮಯಿಗಳಲ್ಲ. ಆದರೆ ಜಳಗಾಂವದಲ್ಲಿ ನೆಲೆಸಿದ
ಕನ್ನಡಿಗರನ್ನು ಒಂದೆತನದಿಂದ ಕೂಡಿಕೊಂಡು ಬಂಧುಪ್ರೇಮವನ್ನು
ಬೀರುವುದು ಒಂದು ಪವಾಡದಂತಾಗಿದೆ. ಪ್ರತಿವರುಷ ಜರಗುವ
ಹೊರನಾಡಿನ ಕನ್ನಡಿಗರ ಸಮ್ಮೇಲನಕ್ಕೆ ಕರೆ ಇದ್ದೇ ಇರುವುದು;
ಇವರು ಅಲ್ಲಿಗೆ ಹೋಗಿ ಉತ್ಸಾಹದಿಂದ ಭಾಗವಹಿಸುವರು.

ಈ ಹೊರನಾಡಿನ ಕನ್ನಡಿಗನ ಕಡೆಗೆ ಕರ್ನಾಟಕದವರು ಒಮ್ಮೆ
ಯಾದರೂ ಕಣ್ಣೆತ್ತಿ ನೋಡಲಿ! ಅಂದರೆ ನಮ್ಮ ನಾಡು ಇವರನ್ನು
ಘನತೆ-ಗೌರವಗಳಿಂದ ನೋಡುವಂತಾದೀತು

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

(ಸಂ.: ಶ್ರೀ. ಪಿ. ವೆಂಕೋಬಾಚಾರ್ಯ ಬಿ ಎ. ಬಿ. ಟಿ.)

ಪುಷ್ಪಹಾರ (ಕಾದಂಬರಿ)	೧-೧೨-೦
ಮನೋರಾಜ್ಯ (ನಾಟಕ)	೨-೪-೦
ಇವೆತ್ (ಮೋಪಾಸಾ ಕಾದಂಬರಿ)	೧-೧೨-೦
ಪೂರ್ಣಿಮಾ (ಸಂಸಾರ ಚಿತ್ರಗಳು)	೨-೪-೦
ಸೈಮನ್ನನ ತಂದೆ (ಮೋಪಾಸಾನ ಕತೆಗಳು)	೨-೪-೦
	೧೪-೪-೦

ಈ ಮೇಲಿನ ೫ ಪುಸ್ತಕಗಳು ಕೇವಲ ೭-೦-೦ ರೂ. ಗಳಿಗೆ ಕೊಡಲ್ಪಡುವವು.

(ಸ್ವಾತಂತ್ರ್ಯದಿನದ ಸವಲತ್ತು)

೬೦೭೦ ಗವಳೀಗಲ್ಲಿ
ಹುಬ್ಬಳ್ಳಿ

ಸಂಚಾಲಕರು
ಆನಂದ ಗ್ರಂಥಮಾಲಾ

ಧಾರವಾಡಕ್ಕೆ ಬರುವ ಪ್ರವಾಸಿಕರಿಗೆ ವಸತಿ-ಭೋಜನದ ಸೌಕರ್ಯ!

ಯೋಚನೆಯನ್ನೇ ಮಾಡಬೇಡಿರಿ! ನೇರವಾಗಿ ಇಲ್ಲಿಯೇ ಬನ್ನಿರಿ!

ಶ್ರೀ ಕೃಷ್ಣ ಮಂದಿರ

ಧಾರವಾಡದ ಜ್ಯುಬಲಿ ಸರ್ಕಲಿನಲ್ಲಿ ಬೋರ್ಡಿಂಗ್ ಮತ್ತು ಲಾಜಿಂಗ್ ಹೌಸ್

ಶುಚಿಯಾದ ವಾತಾವರಣ! ರುಚಿರುಚಿಯಾದ ಪದಾರ್ಥಗಳು! ಆದರದ ಸ್ವಾಗತ!

ಕೋರ್ಟು-ಕಚೇರಿ-ಶಾಲೆ-ಕಾಲೇಜುಗಳಿಗೆ ಹತ್ತಿರವಾಗಿದ್ದು, ರೇಲ್ವೆಸ್ಟೇಶನಿಗೆ ಹೋಗುವ
ದಾರಿಯಲ್ಲಿಯೇ ಇದೆ. ವಸತಿಗಾಗಿ ಅಚ್ಚುಕಟ್ಟಾದ ಏರ್ಪಾಡು ಇದೆ.

ಮಾಲಕರು:— ಮೆಸರ್ಸ್ ಎಂ. ಆರ್. ಮುಳಿಯೆ

SHRI KRISHNA MANDIRA, DHARWAR
BOARDING & LODGING HOUSE

ಎದುರೀಜು

(ಲಲಿತಪ್ರಬಂಧ)

ಶ್ರೀ. ಲಕ್ಷ್ಮಣ ಮೋಸಿ, ಬಿ. ಎ. ಬಿ. ಇಡಿ: ರಾ. ಭಾ. ನಿಲಾವದ
ಸೈನ್ಸ್ ಅಸಿಸ್ಟೆಂಟ್, ಹೋ. ಪ್ರೈ. ಸ್ಕೂಲ್ ಕೂಡ್ಲಿಗಿ

●

ಆದರ್ಶವಾದಿಗಳೆನಿಸಿಕೊಳ್ಳುವವರು ಜಗತ್ತಿನಲ್ಲಿ ಎಂದಿನಿಂದಲೂ ಇದ್ದಂತೆ ಕಾಣುವುದು. ಇವರ ಮೊದಲ ಲಕ್ಷಣವೆಂದರೆ ಅಸಂತೃಪ್ತಿ; ಇದ್ದ ಪರಿಸ್ಥಿತಿಯನ್ನು ಇದ್ದಂತೆಯೆ ಸ್ವೀಕರಿಸುವುದಕ್ಕೆ ಇವರೆಂದೂ ಸಮ್ಮತಿಸರು.

●

ಒಂದು ಚಿಕ್ಕ ಕಥೆ: ಯಾವ ಮಹದವನಾದರೇನು—ಒರ್ವ ಮತಗುರುವು ತಲಯವಲ್ಲಿ ದೊಡ್ಡದನಿಯಲ್ಲಿ ಗಂಭೀರವಾಗಿ ಪ್ರಾರ್ಥನೆ ಗೈಯುತ್ತ ಮಧ್ಯದಲ್ಲಿ ಅಕಸ್ಮಾತ್ತಾಗಿ ನಿಲ್ಲಿಸಿ, ಗುಂಪುಗೂಡಿದ್ದ ಭಕ್ತವೃಂದವನ್ನು ದೃಷ್ಟಿಸಿ ಪ್ರಶ್ನಿಸಿದನಂತೆ: "ನಿಮ್ಮೊಳಗೆ ನರಕಕ್ಕೆ ಹೋಗಲು ಇಷ್ಟವಿಲ್ಲದವರೆಲ್ಲಾ ಕೈ ಎತ್ತಿರಿ" ಎಂದು. ಒಬ್ಬ ಹುಚ್ಚನನ್ನುಳದು ಎಲ್ಲರೂ ಕೈಗಳನ್ನೆತ್ತಿದರು. ಮತಾಧಿಕಾರಿಯ ಮತ್ತೂ ಉಜ್ಜಾಯಿಸಿದನು: "ಒಳ್ಳೇದು, ನಿಮ್ಮೊಳಗೆ ಸ್ವರ್ಗಕ್ಕೆ ಹೋಗುವುದಕ್ಕೆ ಕುತೂಹಲ ಉಳ್ಳವರಿಲ್ಲಾ ಕೈಗಳನ್ನೆತ್ತಿರಿ" ಎಂದು. ಮತ್ತೂ ಆ ಹುಚ್ಚನನ್ನು ಹೊರತು ಎಲ್ಲರೂ ಕೈಗಳನ್ನೆತ್ತಿದರು. ಮತಾಧಿಕಾರಿಗೆ ಆಶ್ಚರ್ಯವಾಗಿ ಆ ಹುಚ್ಚನನ್ನು ಕೇಳಿದನು: "ಅಪ್ಪಾ! ನೀನು ನರಕಕ್ಕೂ ಹೋಗದೆ, ಸ್ವರ್ಗಕ್ಕೂ ಹೋಗದೆ ವತ್ತೆ ನೀನ ಮಾಡಬೇಕೆಂದುಕೊಂಡಿರುವೆ?" ಹುಚ್ಚನು ತಕ್ಷಣವೇ ತಡಬಡಿಸದೇ ಹೀಗೆ ಹೀಗೆ ಸಮಾಧಾನವನ್ನು ಹೇಳಿದನು: "ಸ್ವಾಮೀ, ಇಂದಿಗೆ ನನಗೆಲ್ಲಿಗೂ ಹೋಗಬೇಕೆನಿಸಿಲ್ಲ. ಈ ಭೂಮಿಯ ಮೇಲೆ ನೋಡಿಕೊಳ್ಳಬೇಕಾದ ಕೆಲಸಗಳು ಬಹಳ ಇವೆ." ಎಂದು.

ಇನ್ನೊಂದು ಸಣ್ಣ ಕಥೆ: ವಿದೇಶೀಯನೊರ್ವನು ಚಿರಕಾಲವೂ ಅಮೇರಿಕಾದಲ್ಲಿದ್ದು, ತನಗೆ ಅಮೇರಿಕಾ ಪೌರತ್ವದ ಹಕ್ಕನ್ನು ಕೊಡಬೇಕೆಂದು ಅಧಿಕಾರಿಗಳಿಗೆ ಅರ್ಜಿ ಇಟ್ಟುಕೊಂಡನು ಸಕಾಲಕ್ಕೆ ಅಧಿಕಾರಿಗಳು ಅವನನ್ನು ಕರೆಯಿಸಿ ಅತನ ಕೋರಿಕೆಯನ್ನು ಮಂಜೂರು ಮಾಡಿದರು. ಅಮೇರಿಕಾ ಪೌರನಂತೆ ಅತನಿಂದ ಪ್ರಮಾಣ ಸ್ವೀಕಾರವನ್ನು ಮಾಡಿಸುವ ಮುನ್ನ, ಅಮೇರಿಕಾ ರಾಜ್ಯಾಂಗದಲ್ಲಿ ಪ್ರತಿ ಪೌರನಿಗೂ ಇರುವ ಅವಕಾಶಗಳನ್ನು ಕುರಿತು ಅವನಿಗೆ ಬೋಧಿಸಬೇಕೆಂದೆಣಿಸಿ, ಅವೂ ಇವೂ ಎಲ್ಲವನ್ನೂ ಹೇಳಿ "ನಿನಗೆ ಅಮೇರಿಕಾದ ಅಧ್ಯಕ್ಷನಾಗಬೇಕೆಂಬ ಇಚ್ಛೆ ಇದೆಯೇ?" ಎಂದು ಪ್ರಶ್ನಿಸಿದರು. ಆ ಹುಚ್ಚ ತಕ್ಷಣವೇ "ಕ್ಷಮಿಸಿ ಸ್ವಾಮೀ! ಅಂತಹ ಕೆಲಸಗಳಿಗೆ ಯಾವುದಕ್ಕೂ ನನಗೆ ಸಮಯವಿಲ್ಲ. ಬೀದಿಗಳೆಲ್ಲಾ ತಿರಿಗಿ ಆಯಿಸ್‌ಕ್ರೀಂ ಮಾರಿಕೊಳ್ಳುವುದಕ್ಕೆ ನನಗೆ ಇರುವ ಸಮಯ ಸಾಲುವುದಿಲ್ಲ" ಎಂದು ಅಂಗಲಾಚಿದನಂತೆ ಮನೆ—ಮಳುಗಿಸಿ ಆ ಅಧ್ಯಕ್ಷಗಿರಿಯನ್ನು ತನ್ನ ಕೊರಳಿಗೆ ಅಂಟಿಸಿ ಬಿಡುತ್ತಾರೇನೋ ಎಂದು ಭಯಪಡುತ್ತಾ.

ಈ ಹುಚ್ಚರಿಬ್ಬರೂ ನಮ್ಮೊಳಗೆ ಅಧಿಕ ಸಂಖ್ಯಾಕರಿಗೆ ಪ್ರತಿನಿಧಿಗಳು. ನಾವೂ ಆ ಪಂಗಡಕ್ಕೆ ಸೇರಿದವರೇ; ಅಕಸ್ಮಾತ್ತಾಗಿ ಯಾರಾದರೂ ನಮ್ಮನ್ನು ನಿಲ್ಲಿಸಿಬಿಟ್ಟು ನರಕಕ್ಕೆ ಹೋಗುವುದೆಂಬು. ದನ್ನು ತಪ್ಪಿಸಿಕೊಳ್ಳುವಿಯಾ? ಸ್ವರ್ಗಕ್ಕೆ ಹೋಗಬೇಕೆಂದಿದೆಯೋ? ಹೋಗಲಿ, ಅಮೇರಿಕಾದ ಅಧ್ಯಕ್ಷನಾಗೋಣವೆಂದಾದರೂ ಇಲ್ಲವೆ? ಹೋಗಲಿ-ವಾಹಾಕವಿ, ಗಾಯಕ ಶಿಲ್ಪಿ ವಿಜ್ಞಾನವೇತ್ತ—ಏನಾದರೂ ಆಗಿ ಈ ಪತಿತಪ್ರಪಂಚವನ್ನು ಪಾವನ ಮಾಡಬಾರದೇ?—ಇಂತಹ ಪ್ರಶ್ನೆಗಳನ್ನು ಹಾಕಲು ಗಂಟುಬಿದ್ದರೆ, ನಾವು ಕಣ್ಣು ಕಣ್ಣು ಬಿಡುತ್ತೇವೆ ಹೃದಯ ಜೇಜಾಗಟ್ಟುಕೊಳ್ಳುತ್ತದೆ. ಆ ರೀತಿ ಕೇಳಿದವರಿಗೆ ಒಂದು ನಮಸ್ಕಾರ ಬಾಣವನ್ನೊಗೆದು "ಸ್ವಾಮೀ, ಏನೋ, ಹೀಗೇ ನನ್ನಮ್ಮನ್ನು ಬದುಕಲು ಬಿಡಿರಿ. ಏನೋ ನಾಲ್ಕು ಕಾಸು ಸಂಪಾದಿಸಿಕೊಂಡು ಗುಟ್ಟಾಗಿ ಕಾಲಕ್ಷೇಪವನ್ನು ಮಾಡಗೊಡಿರಿ. ಆದರ್ಶಗಳ ಮಾತು ದೇವರು ಬಲ್ಲ" ಎನ್ನುತ್ತೇವೆ. ಅಸಲು ಅಂತಹ ಆದರ್ಶಗಳ ಗೊಡವೆ ಹೇಳಿದರೇನೆ ಮೈಗೆ ಒಂಟೋಲ್ಲಾ. ಏನೋ ಹಸಿವೆಯಾದರೆ ಅನ್ನವನ್ನುಂಡು, ಮಳೆಗರೆಯದೆ ಕೊಡೆಯನ್ನು ಹಿಡಿದುಕೊಂಡು, ಚಳಿಯಾದರೆ ಕಂಬಳಿ ಹೊತ್ತುಕೊಂಡು, ಯಾವನಾದರೂ ಜಬರ್ದಸ್ತೀ ಮನುಷ್ಯ ದಬಾಯಿಸಿದರೆ ಬಾಯಿ ಮುಚ್ಚಿಕೊಂಡು, ಸೊಣಕ ಕಣ್ಣಿಗೆ ಬಿದ್ದರೆ ಅವನ ತಲೆಯಮೇಲೇರಿ ಸವಾರಿ ನಡೆಸಿ, ಮೈಮೇಲೆ ಬಂದರೆ ಸುಳ್ಳು ಹೇಳಿ, ಉಪಕಾರವನ್ನು ಮಾಡಿದರೆ ಸ್ನೇಹಮಾಡಿ, ಲಾಭವಾಗುವಂತಿದ್ದರೆ ದ್ರೋಹವನ್ನು ಗೈದು—ಒಟ್ಟಿನ ಮೇಲೆ ಜೀವಯಾತ್ರೆಯನ್ನು ತಳ್ಳುತ್ತ ಇರುತ್ತೇವೆ. ಹಚ್ಚಗಿದ್ದಲ್ಲಿ ಎರಗಿಸಿ, ಬೆಚ್ಚಗಿದ್ದಲ್ಲಿ ಪವಡಿಸುವುದೇ ನಮ್ಮ ಆದರ್ಶ. ಹೋದರೆ, ಇನ್ನೊಂದು ತರದ ಮನುಷ್ಯರು ನಮಗೆ ಗಂಟುಬೀಳುತ್ತಾ ಇರುತ್ತಾರೆ. ಮೇಲೆ ನೋಡುವುದಕ್ಕೆ ಮಾತ್ರ ಲಾಲಸೂಲಾಗಿ ಎಲ್ಲರಂತೆ ಕಾಣಿಸುವರಾಗಲಿ, ಸ್ವಲ್ಪ ಕದಲಿಸಿದರೆ ಇವರ ಮನಸ್ಸುಗಳೂ, ಹೃದಯಗಳೂ, ಇಂದ್ರಧನುಸ್ಸಿನಂತೆ ವರ್ಣಗಳನ್ನು ಪ್ರತಿಫಲಿಸುತ್ತವೆ.

ನಮಗೆ ಯಾವ ಮಾತ್ರವೂ ಹಿಡಿಸದ ವಿಷಯಗಳನ್ನು ಕುರಿತು ಇವರು ಕಡಿದುಕೊಂಡು ಬಿದ್ದು ಆಲೋಚಿಸಿ, ಪ್ರತಿ ವಿಷಯಕ್ಕೂ ಯಾವುದೋ ಕೆಲವು ವಿಚಿತ್ರವಾದ ನಿಬಂಧನೆಗಳ ಮಧ್ಯದಲ್ಲಿ ನುಚ್ಚು ನುಗ್ಗಾಗುತ್ತಾರೆಯಾಗಲಿ, ಬಯಲಿಗೆ ಒಂದು ಅಡಿಯಿಡರು. ಇವರೊಡನೆ ಏಗುವುದು ಮಹಾಕಷ್ಟ. ಇವರಲ್ಲಿ ಪ್ರತಿಯೊಬ್ಬರಿಗೂ ದೂರದಲ್ಲಿ ಮಿಣುಗುವ ಒಂದು ಚುಕ್ಕಿ ಕಾಣುತ್ತದೆ. ಆ ಚುಕ್ಕಿಯನ್ನು ತೆಗೆದು ಕೊಳ್ಳಬೇಕೆಂದು ನಿರತಂರವೂ ಪ್ರಯತ್ನವನ್ನು ಮಾಡುತ್ತಾರೆ. ಎಷ್ಟು ಪ್ರಯಾಸಪಟ್ಟರೂ, ಎಷ್ಟು ದೂರ ನಡೆದರೂ, ಆ ಚುಕ್ಕಿ ಇನ್ನೂ ದೂರವಾಗುತ್ತದೆಯಾಗಲಿ, ಇವರಿಗೆ ನಿಲುಕದು. ಯಾವ ಪೂರಕ್ಕೋ

ಕೋಟಿಗೋ ಒಬ್ಬರಿಗೆ ಆ ಜುಕ್ಕಿ ಕೈಗೆ ಸಿಕ್ಕು, ಅತೀ ಮಾಡಿ, ಅದು ಒಂದಿಷ್ಟು ಗಾಜಿನ ತುಂಡು ಆಗಿಹೋದ ವಿಷಾದಕರವಾದ ಘಟ್ಟಗಳು ಕೂಡ ಇರುತ್ತವೆಂದುಕೊಳ್ಳಿ.

ಮುಖ್ಯವಾದುದೇನೆಂದರೆ— ಆ ಅನ್ವೇಷಣೆ. ಇಂತಹ ವಿಚಿತ್ರ ವ್ಯಕ್ತಿಗಳು ಜೀವನದ ಪಥಕ್ಕೆ ನಿಲುವಾಗಿ ಅಡ್ಡವಾಗಿ ಗೆರೆಗಳನ್ನು ಗೀಚಿ ಆ ಗೆರೆಗಳಲ್ಲಿ ಯಾವುದೋ ಸ್ವಪ್ನಗಳನ್ನು ಕಟ್ಟಿ, ಅವುಗಳನ್ನು ಸಾಧಿಸಲಿಕ್ಕೆ ತಾಪತ್ರಯಪಡುತ್ತಾ ಇರುತ್ತಾರೆ. ಅಲ್ಲಿಯವರೆಗೂ ಚೆನ್ನಾಗಿಯೇ ಇವೆ— ನಮ್ಮ ತುಟಿಗೆ ಬಾರದ ನಲಿಗೂ. ಆದರೆ ದುರದೃಷ್ಟವಶದಿಂದ ಇವರೊತನೆ ನಮ್ಮ ಜೀವನ ಹೆಣೆದುಕೊಂಡಿರೆಂದರೆ, ನಮ್ಮನ್ನು ಸಾವು-ಗೋಳು ಹೊಯ್ದಿಸಿ ಏಳು ಕೆರೆಯ ನೀರನ್ನು ಕುಡಿಸಿ ಬಿಡುತ್ತಾರೆ.. ಅವರು ಸುಖಿಸುವುದಿಲ್ಲ; ಇನ್ನೊಬ್ಬರನ್ನು ಸುಖಪಡಲು ಬಿಡುವುದಿಲ್ಲ. ಇವರನ್ನೇ ಲೋಕವು ಆದರ್ಶವಾದಿಗಳೆನ್ನುವುದು.

ಈ ಭೂಮಿಯ ಮೇಲೆ ಮಾನವನು ಹುಟ್ಟಿದಂದಿನಿಂದ, ಈ ಆದರ್ಶವಾದಿಗಳೇಬರು ಇದ್ದಂತೆಯೇ ಕಾಣಿಸುತ್ತದೆ. ಪುರಾಣಗಳೂ ಇತಿಹಾಸಗಳೂ ಕಾವ್ಯಗಳೂ-ಇವುಗಳ ತುಂಬ ಅಲ್ಲದೆ, ಚರಿತ್ರೆಯಲ್ಲಿ ಕೂಡ ಇವರು ಸಮೃದ್ಧಿಯಾಗಿ ಗೋಚರಿಸುತ್ತಾರೆ. ಇವರ ಮೊದಲನೆಯ ಲಕ್ಷಣವೇನೆಂದರೆ, ಅಸಂತೃಪ್ತಿ. ಇದ್ದ ಪ್ರಪಂಚವನ್ನು ಯಥಾವತ್ತಾಗಿ, ಹೇಗಿದ್ದುದನ್ನು ಹಾಗೆಯೇ ಸ್ವೀಕರಿಸರು. ಹಸಿ ಮಾಂಸವನ್ನು ತಿನ್ನುವುದರಿಂದ ಸಂತೃಪ್ತಿಯನ್ನು ಪಡೆಯದೆ, ಬೆಂಕಿಯನ್ನು ಮಾತುವುದನ್ನು ಕಂಡುಹಿಡಿದ ಚಾದಪ್ಪನು, ಕಾಲ್ನಡಿಗೆಯಿಂದ ಸಮಾಧಾನವನ್ನು ಹೊಂದದೆ ಚಕ್ರವನ್ನು ಕಂಡುಹಿಡಿದು ಕಾಲ್ನಡಿಗೆಯನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ಸೋನಾರಿಯು, ಬರಿಯ ವಚನಗಳಿಂದ ಸಂತುಷ್ಟನಾಗದೆ ಲಯಬದ್ಧವಾಗಿ ಮಾತುಗಳನ್ನು ಕೂಡಿಸಿದ ಸಾಹಸಿ — ಇವರೆಲ್ಲ ಅಂದಿನ ಆದರ್ಶವಾದಿಗಳು. ಅಂದಿನಿಂದ ಇಂದಿನ ವರೆಗೂ ಏನೋ ಒಂದು ರೂಪದಲ್ಲಿ ಇವರು ಹುಟ್ಟಿಕೊಂಡು ಬರುತ್ತಲೇ ಇರುವರು. ಸಮಕಾಲಿಕರಿಗೆ ಸಿಡುಕುತನವನ್ನು ಕಲಿಸುತ್ತಲೇ ಇರುವರು. ಒಂದೊಂದು ಸಲ ಸಮಕಾಲಿಕರಿಗೆ ಮತ್ತಿಷ್ಟು ಹುಚ್ಚು ರೇಗುವಷ್ಟು ವೊಂಡತನದಿಂದ ಪ್ರವರ್ತಿಸಿ, ಪರಿಸ್ಥಿತಿಯು ಇನ್ನಿಷ್ಟು ದುರ್ಧರವಾಗುವಷ್ಟಕ್ಕೆ, ಸಮಕಾಲಿಕರು ಇನ್ನು ಲಾಭವಿಲ್ಲ ವೆಂದು ಅವರನ್ನು ಹತನಾಮಾಡಿಬಿಟ್ಟಿದ್ದಾರೆ. ಈ ರೀತಿಯ ಮೊಂಡರಲ್ಲಿ (ಹತನಾಮಗಳಲ್ಲಿ ಗ್ರೀಕ್ ವೀರನಾಂತ ಸೊಕ್ರೆಟೀಸ್ ಒಬ್ಬನು. ಆತನು ಹೇಳುವ ಛಾಂದಸದ ಸುದ್ದಿಗಳೂ, ಮಾತುವ ವಿಚಿತ್ರವಾದ ಬೋಧಗಳೂ, —ಸತ್ಯನನ್ನು ಆರಾಧಿಸಿ, ಸತ್ಯವನ್ನು ಅರಿತುಕೊಳ್ಳಿರಿ ವಗೈರೆಗಳನ್ನು ಕೇಳಿ ಕೇಳಿ, ಸಮಕಾಲಿಕರಿಗೆ ಮೈ ಯುರಿದು ಆತನಿಗೆ ಒಂದು ಗ್ಲಾಸಿನ ತುಂಬಾ ಒಕ್ಕೆಯ ಘಟ್ಟಿಯಾದ ವಿಷವನ್ನು ಕೊಟ್ಟು "ಏನಣ್ಣಾ, ನಿನ್ನ ತಲೆ ಕೆಟ್ಟ ಪ್ರಲಾಪದಿಂದ ನಮ್ಮನ್ನು ಕೊಲ್ಲುವೆ, ಈ ವಿಷ ಸ್ವಲ್ಪ ಕುಡಿದುಬಿಟ್ಟು ನಮ್ಮನ್ನು ಉದ್ಧರಿಸು" ಎಂದೊತನೆ, ಆ ವೊಂಡಿಘಟ್ಟು, ಗ್ಲಾಸಿನ ತುಂಬ ವಿಷವನ್ನ ಅಷ್ಟೂ ಕುಡಿದುಬಿಟ್ಟನಾಗಲಿ, ತನ್ನ ಧೋರಣೆಯನ್ನು ಬದಲಾಯಿಸಿಕೊಳ್ಳಲಿಕ್ಕೆ ಒಪ್ಪಿಕೊಳ್ಳಲಿಲ್ಲ. ಈ ಜಾತಿಗೆ ಸೇರಿದವನೇ ಜೋಸಸ್ ಕ್ರೈಸ್ತ.

ಈತನ ರಗಳೆಯನ್ನು ಭರಿಸಲಾರದೆ, ಪ್ರಜರು ಕೊನೆಗೆ ತೆಗೆದುಕೊಂಡೊಯ್ದು, ಒಂದು ತಿಲು ಬೆಗೆ ಏರಿಸಿ ಮೊಳೆಗಳನ್ನು ಬಿಗಿಸಿಬಿಟ್ಟರು— ಅಲ್ಲಿಗಾದರೂ ಆ ಕಂತವು ವಿಶ್ರಾಂತಿಯನ್ನು ತೆಗೆದುಕೊಳ್ಳುವುದೆಂದು. ಅದರೆ ಪ್ರತಿಸಲವೂ ಏನಾಗುತ್ತದೆಂದರೆ: ಇವರು ಬದುಕಿ ಸಾಧಿಸಿದುದಕ್ಕಿಂತ ಸತ್ತು ಹೋಗಿ ಮತ್ತಿಷ್ಟು ಸಾಧಿಸುತ್ತಾರೆ. ಅದೇ ಇವರಲ್ಲಿ ಬಂದಿರುವ ತೊಡಕೆಲ್ಲ.

ಇಂತಹ ಆದರ್ಶವಾದಿಗಳು ಇಂದಿನ ಜೀವನದಲ್ಲಿ ಎಲ್ಲಿರುವರೇಳು — ಎಲ್ಲಿಯೋ ಪುರಾಣಗಳಲ್ಲಿ ಮಾತ್ರ. ಚರಿತ್ರೆಯಲ್ಲೂ ಉಳಿದಿರುತ್ತಾರೆಂದಾಗಲಿ— ಎಂದು ಅಂದುಕೊಂಡು ಸಂತೃಪ್ತಿಹೊಂದುವುದಕ್ಕೆ ಆಸ್ಪದವಿಲ್ಲ. ಸ್ವಲ್ಪದರಲ್ಲಿ ಸ್ವಲ್ಪ ಈ ಶತಾಬ್ದಿಯಲ್ಲಿ ಹುಟ್ಟಿದವರು-ಅವರಲ್ಲಿ ಶತಾಬ್ದದ ಉತ್ತರಾರ್ಧದಲ್ಲಿ ಬದುಕುತ್ತಿರುವವರು-ಇದ್ದಿಷ್ಟವಂತರು. ಏಕೆಂದರೆ, ಬೆನ್ನಮೇಲೆ ಕೈ ಹಾಕಿ ಅನುಕ್ಷಣವೂ ಜೀವನವು ನಮ್ಮನ್ನು ದೂಡಿಕೊಂಡು ಹೋಗುತ್ತಲಿರುತ್ತದೆ, ಅದು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದೆಯೋ ಅಲ್ಲಿಗೆ ಹೊಂದಿಬಿಡುತ್ತಿದ್ದೇವೆ— ಆಲೋಚಿಸುವುದಕ್ಕಾದರೂ ಬಿಡುವುದಿಲ್ಲ. ಇನ್ನು ಆದರ್ಶಗಳನ್ನು ಕುರಿತು ಎಲ್ಲಿ ತರ್ಕನೆ ಭರ್ಜನೆ ಮಾಡಿಕೊಳ್ಳಬಲ್ಲೆವು ಬದುಕುವುದು-ಅದು ನಮಗೆ ಮುಖ್ಯವಾದುದು— ಅದಕ್ಕೆ ಏನು ಬೇಕು? ಧನ; ಸರಿಯೇ, ಅದನ್ನು ಬೇಟೆಯಾಡುವ; ಸಿಕ್ಕರೇ ಬಾಧಿಸೋಣ. ಅಂತರಾತ್ಮಗಳೆನ್ನುವವು ಆಗಾಗ್ಗೆ ಬಾಧೆ ಕೊಡುತ್ತವೆ. ಕಾರಣ ಅವುಗಳಿಗೆ ಜೋಗುಳವನ್ನು ಪಾಡಿ ಮಲಗಿಸೋಣ. ಈ ತೆರನಾದ ಜೀವನಕ್ಕೆ ಅಭ್ಯಸ್ತರಾಗಿಬಿಟ್ಟಿರುವೆವಾದ್ದರಿಂದ, ಆದರ್ಶಗಳೆನ್ನುವು ಹಾಗೇ ನಮ್ಮನ್ನು ಬಾಧಿಸವು. ಆದರ್ಶವಾದಿಗಳಿಗೆ ದೂರವಾಗಿರುತ್ತೇವೆ ಕಾರಣ, ಅವರ ಹುಚ್ಚು ಕೂಗಾಟ ನಮಗೆ ಕೇಳಿಸದು.

ಆದರ್ಶವಾದವೆಂಬುದು ನೊಟ್ಟನೊದಲು ತಾರುಣ್ಯದಲ್ಲಿ ಅಂಕುರಿಸುತ್ತದೆ. ಅನೇಕರು ಹುಟ್ಟಿನಿಂದಲೇ ಮುದುಕರೆಂದುಕೊಳ್ಳಿ. ಅವರ ವಿಷಯ ಬಿಟ್ಟುಬಿಡೋಣ. ತಾರುಣ್ಯದಲ್ಲಿ ಕಾಲಿಡುತ್ತಿರಲಿಕ್ಕೆ— ಈ ಜಗತ್ತೆಲ್ಲಾ ತನಗಾಗಿಯೇ ಸೃಷ್ಟಿಸಲ್ಪಟ್ಟಂತೆ ಮೊದಲು ಅನಿಸುತ್ತದೆ. ತತ್‌ಕ್ಷಣವೇ ಒಂದು ಸಾರಿ ಎಲ್ಲವನ್ನೂ ಸಿಂಹಾವಲೋಕಿಸಿ ಲೋಪಗಳನ್ನೆಲ್ಲ ಕಂಡುಹಿಡಿಯುತ್ತಾನೆ "ಆಕಾಶದಲ್ಲಿ ಈ ನಕ್ಷತ್ರಗಳೆಲ್ಲಾ ಏನಿದು ಹೀಗೆ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ? ಅವನ್ನು ಒಂದು ಕ್ರಮದಲ್ಲಿ ಅಂದವಾಗಿ ಕೂಡಿಹಾಕದರೆ ಎಷ್ಟು ಚೆನ್ನಾಗಿರುತ್ತದೆ!" ಎಂದುಕೊಳ್ಳುವನು. ಆ ರೀತಿಯಾಗಿ ಆಕಾಶದಲ್ಲಿಯ ನಕ್ಷತ್ರಗಳನ್ನು ಮೊದಲುಮಾಡಿಕೊಂಡು ಭೂಮಿಯಮೇಲಿನ ಮರುಭೂಮಿಗಳ ವರೆಗೂ ಎಲ್ಲವೂ ಬದಲಾವಣೆ ಹೊಂದಬೇಕೆಂದು ತಹತಹಪಡುತ್ತಾನೆ. ಮರಳು ಕಾಡಿನಲ್ಲಿ ಚಿನ್ನದ ಬೆಳೆ ಬೆಳೆಯಬೇಕು, ಭಿಕ್ಷುಕರು ಐಶ್ವರ್ಯವಂತರಾಗಬೇಕು, ರೋಗಿಗಳು ನಿರೋಗಿಗಳಾಗಿ ಮರುಜನ್ಮ ಆನುವಂಶಿಯ ತುಂಬಿ ತುಳುಕಾಡಬೇಕು, —ಹೀಗೆ ಅನಂತೇಕಾವ ಕೆಲಸಗಳನ್ನೆಲ್ಲ ಹಚ್ಚಿಕೊಳ್ಳುವನು ಈ ಹುಚ್ಚಿನಲ್ಲಿ ಅನಾಮತ್ತಿನಲ್ಲಿರುವುದೆಲ್ಲಾ ಬಂದು ಬಿಡುತ್ತದೆ. ಬಾಲ್ಯವಿವಾಹಗಳು ಕೂಡದು, ವಿಧವಾಪುನರ್ವಿವಾಹ ಮಾಡಿಕೊಳ್ಳುವ ಅಧಿಕಾರವಿರಬೇಕು. ಮನುಷ್ಯರಲ್ಲಿ ವರ್ಣದ್ವೇಷಗಳು ನಿಷೇಧಿಸಲ್ಪಡಬೇಕು, ಪ್ರೇಮವಿವಾಹ ಮಾಮೂಲಿಯಾಗಬೇಕು,

ರೈಲ್ವೆ ಸ್ಟೇಷನ್ನಿನಲ್ಲಿ, ಪೋಸ್ಟಾಫಿಸಿನಲ್ಲಿಯೂ ಇನ್ನಿತರ ಸ್ಥಳಗಳಲ್ಲಿಯೂ ಅಧಿಕಾರಿಗಳು ಜನರೊಡನೆ ಮರ್ಯಾದೆಯಿಂದ ವ್ಯವಹರಿಸಬೇಕು; ಅವರು ಲಂಚವನ್ನು ಸ್ವೀಕರಿಸಬಾರದು – ಹೀಗೆ ಈ ಪಟ್ಟಿ ಹನುಮನ ಬಾಲದಂತೆ ಬೆಳೆಯುತ್ತದೆ.

ಇಂತಹ ಪಟ್ಟಿಯನ್ನು ತೆಗೆದುಕೊಂಡು ಕೈಯೊಳಗೆ ಒಂದು ಸುತ್ತಿಗೆಯನ್ನು ಹಿಡಿದುಕೊಂಡು ಲೋಕವನ್ನು ಮರಮ್ಮತ್ತು ಮಾಡೋಣ ವೆಂದು ಹೊರಡುತ್ತಾನೆ. ಅಲ್ಲಿಂದ ರಭಸವು ಪ್ರಾರಂಭಿಸುತ್ತದೆ. ಹೆಜ್ಜೆ ಯನ್ನು ಹೊರಗಿಡುವುದರೊಳಗೇನೇ ಚೌಕಟ್ಟು ತಗುಲಿ ಮೆಲಕುಗಳು ಒಡೆಯುತ್ತವೆ. ಕ್ರಮವಾಗಿ ನಿತಿ ಇಳಿದು, ಈ ಜಗತ್ತಿನ ನಿಜಸ್ವರೂಪ ಗೋಚರಿಸುವಷ್ಟರಲ್ಲಿ, ಕೈಯೆತ್ತಿ ಸಮುಸ್ಕರಿಸಿ, ಸುತ್ತಿಗೆಯನ್ನತ್ತ ಬಿಸುಟು, ಬಂದು ನಮ್ಮಲ್ಲಿ ಸೇರಿಬಿಡುತ್ತಾನೆ. ಅದು ಬುದ್ಧಿವಂತನ ಲಕ್ಷಣ. ಅಲ್ಲಿಂದ ಜೀವನ ಸಜ್ಜೆತವಾಗಿಯೇ ಸಾಗಿಹೋಗುತ್ತದೆ ತಂದೆ ಮಾಡಿಕೋ ಎಂದ ಹುಡುಗಿಯನ್ನೇ ಮದುವೆಮಾಡಿಕೊಂಡು, ಅತ್ತೆಯವರು ಕೊಟ್ಟ ವರದಕ್ಷಿಣೆಯನ್ನು – ತೃಣವೋ ಧನವೋ – ಸ್ವೀಕರಿಸಿಬಿಡುತ್ತಾನೆ. ಗೀಚುತ್ತಿದ್ದ ಗೊಂಬೆಗಳೂ, ಬರೆಯುತ್ತಿದ್ದ ಪದ್ಯಗಳೂ, ಎಲ್ಲವನ್ನೂ ಆಡಿಗೆಸೆದು, ಏನು ಕೆಲಸ ಮಾಡಿದರೆ ನಾಲ್ಕು ಕಾಸುಗಳು ಬರುತ್ತವೆಯೋ ನೋಡಿಕೊಂಡು, ಆ ಕೆಲಸದಲ್ಲಿ ಮಗ್ನ ನಾಗಿ ಸಂತೃಪ್ತಿಯಿಂದ ಬದುಕಿಬಿಡುತ್ತಾನೆ. ಇನ್ನು ಅರ್ಧರಾತ್ರಿಯ ವೇಳೆಯಲ್ಲಿ ಯಾವುದೋ ಅರ್ಥವಿಲ್ಲದ ಕನಸಿಗೆ ಬೀಳುವುದಿಲ್ಲ. ರೋಡಿನ ಪಕ್ಕಕ್ಕೆ ಬಿದ್ದ ಭಿಕ್ಷುಕನನ್ನು ನೋಡಿ ಅಂತರಾತ್ಮ ಬಾಧೆಯನ್ನು ಕೊಡುವುದಿಲ್ಲ. ಜೀವನದಲ್ಲಿ ಯಾವ ಘಟ್ಟದಲ್ಲಿ ಯಾವ ರೀತಿ ಪ್ರವರ್ತಿಸ ಬೇಕು ಎಂಬ ಸಮಸ್ಯೆ ಬರುವುದಿಲ್ಲ. ನೀರನ್ನು ಯಾವ ಪಾತ್ರೆಯಲ್ಲಿ ಸುರುವಿದರೆ ಆ ಪಾತ್ರೆಯ ರೂಪವನ್ನೇ ಪಡೆಯುವಂತೆ, ಪರಿಸ್ಥಿತಿಯು ತನ್ನಿಂದ ಯಾವ ಭಂಗಿಯನ್ನು ಕೋರುತ್ತದೆಯೋ ಆ ಭಂಗಿಯಲ್ಲಿಯೇ ತಯಾರಾಗುತ್ತಾನೆ.

ಈ ರೀತಿಯಲ್ಲಿ ಬಟ್ಟೆ ಕಟ್ಟಿ ನಾವಿ ಸೋಸಿದರೆ, ಎಲ್ಲರೂ ವಸ್ತ್ರ ವನ್ನು ಹಾದು ಜಾರಿಕೊಂಡು ಹೋದರೂ, ನೂರಕ್ಕೆ ಕೋಟಿಗೆ ಯಾವ ಒಬ್ಬನೋ ಅರ್ಧನೋ ಮನುಷ್ಯ ಉಳಿಯುವನು. ಅವನು ಜಪ್ಪೆಂದರೂ, ಶೋಧಕದಲ್ಲಿ ಹಾಕಿ ತಿಕ್ಕಿದರೂ, ವಸ್ತ್ರವನ್ನು ತೂರಿಹೋಗಲು ಒಪ್ಪುವುದಿಲ್ಲ. ಏನಾದರೂ ಸರಿಯೇ, ನೆಟ್ಟನೇ ನಿಲ್ಲುವನು. ಮಣಿ ಯುವುದಿಲ್ಲ. ಮೆಲುಕಿಗೆ ಎಷ್ಟು ಬುಗ್ಗಟಿಗಟ್ಟಿದರೂ ಸರಿಯೇ, ಅವನು ನಿರ್ಣಯಿಸಿಕೊಂಡ ದಾರಿಯಲ್ಲಿಯೇ ನಡೆಯುವನೇ ಆಗಲಿ, ಇನ್ನು ಯಾವುದಕ್ಕೂ ಒಪ್ಪುವುದಿಲ್ಲ ಅಂತಹವನನ್ನು ಒಪ್ಪಿಸುವುದು ಬ್ರಹ್ಮ ನಿಂದಲೂ ಸಾಧ್ಯವಿಲ್ಲ.

ಇಲ್ಲಿಯವರೆಗೂ ಅಂದುಕೊಂಡಂತೆ ಇಂತಹ ಮೊಂಡರು ನಮಗೆ ಪುರಾಣಗಳಲ್ಲಿ ಅನೇಕರು ಕಾಣುತ್ತಾರೆ. ಸ್ವಲ್ಪ ಹೆಚ್ಚು ಕಡಿಮೆ ಪ್ರತಿ ಪುರಾಣಪುರುಷನೂ ಇಂತಹವನೇ; ಪ್ರತಿ ಪುರಾಣ ನಾರೀ ಮಣಿಯೂ ಇಂತಹಳೇ! ಅವರ ನೆಂತುತನವನ್ನು ನೋಡಿದರೆ, ನನ್ನಂತಹ ಭವದೀಯನಿಗೆ ಭಯವಾಗುತ್ತದೆ. ಹೋಗಲಿ, ಸ್ವಲ್ಪ ಪ್ರಬಂಧಗಳಲ್ಲಿಯಾದರೂ ನಮಗೆ ಹಾಯಾಗಿರುವ ಮನುಷ್ಯರು ಕಾಣಿಸುವರೇ ಎಂದರೇ,— ಅಪುಗಳಲ್ಲಿಯೂ ತಲೆತಿರುಕರಾಯರೇ ಹೆಚ್ಚು, ವರೂಧಿನಿಯಂತಹ ಅಸದೃಶ ಸುಂದರಿ. ಪ್ರವರನಿಗೆ ಸ್ವಲ್ಪ ಲೌಕಿಕವನ್ನು ಹೇಳಿಕೊಟ್ಟು "ಆನಂದನೇ ಬ್ರಹ್ಮವೆಂದು ಹೇಳಿರುವ ಪ್ರಾಜ್ಞರ ಅಂತರ್ಬುದ್ಧಿಯನ್ನು ಊಹಿಸು!" ಎಂದು ಸಮರ್ಥಿಸಿ ಹೇಳುವುದಕ್ಕೆ ಪ್ರಯತ್ನಿಸಿದರೂ, ಲಾಭವಿಲ್ಲದಂತಾಯಿತು. ಪ್ರವರನ ಆದರ್ಶವಾದಕ್ಕೆ ಪ್ರತಿಯಿಲ್ಲದಂತಾಯಿತು.

ಹೋಗಲಿ, ಇವರೆಲ್ಲಾ ಪುಸ್ತಕದೊಳಗಿನ ಮನುಷ್ಯರು–ನಮ್ಮನ್ನು ಹಾಗೇನು ಬಾಧಿಸುವುದಿಲ್ಲವೆಂದುಕೊಂಡು ತೃಪ್ತಿಪಡುವುದಕ್ಕೆ ಆಸ್ಪದ ವಿಲ್ಲದೆ, ಇಂದಿಗೆ ಕೂಡ ಇವರು ನಿತ್ಯಜೀವನದಲ್ಲಿ ತಲೆಹೋರುತ್ತಿ-ರುವುದು ಈತಿಬಾಧೆಗಳಲ್ಲಿ ಒಂದಲ್ಲದೆ ಮತ್ತೇನು? ಈ ಆದರ್ಶವಾದಿ ಗಳಲ್ಲಿ ಇನ್ನೂ ವಿಧವಿಧದವರಿರುವರು. ಪ್ರಪಂಚದ ರಾಜಕೀಯ ಸ್ವರೂಪ ವನ್ನು ಪರಿವರ್ತಿಸಲು ಪ್ರಯತ್ನಿಸುವವರು ಮೊದಲ್ಗೊಂಡು, ಅಪಕ್ವಾ-ಹಾರವನ್ನು ಎಲ್ಲರಿಂದಲೂ ತಿನಿಸಬೇಕೆಂದು ತಾಪತ್ರಯಪಡುವವರ ವರೆಗೂ ತರಹತರದ ಆದರ್ಶಗಳ ಅಂತಸ್ತುಗಳಿವೆ. ಇವರಲ್ಲಿ ಕೆಲ ವರ ಆದರ್ಶಗಳು ಇನ್ನೂ ವಿಚಿತ್ರವಾಗಿರುತ್ತವೆ ಕಾಲೇಜು ಓದುವಾಗ ನನಗೆ ಒಬ್ಬ ಸ್ನೇಹಿತನಿರುತ್ತಿದ್ದ. ಆತನು ವೀರೇಶಲಿಂಗಂ ಪಂತರವರ ಪುಸ್ತಕಗಳನ್ನು ಕಡಿಮುಕೊಂಡು ಬೀಳುವಷ್ಟು ಓದಿ, ಕೊನೆಗೆ–ಜೀವಿ-ತಾದರ್ಶಗಳಲ್ಲಿ ಪರಮಾರ್ಥವೇನೆಂದರೆ, ವಿತಂತುವಿನ್ನು ವಿವಾಹವಾಗು ವುದು– ಎಂಬ ನಿಶ್ಚಯಕ್ಕೆ ಬಂದನು. ಅಷ್ಟೆ; ಒಂದು ಸುಪ್ರಭಾತ ದಲ್ಲಿ ತನ್ನ ಭೀಷ್ಮಪ್ರತಿಜ್ಞೆಯನ್ನು ತನ್ನ ತಾಯಿಗೆ ತಿಳಿಸಿದನು. ಆಕೆ ಬಾಲವನ್ನು ತುಳಿದ ಸರ್ಪದಂತೆ ಎದ್ದು "ನೀನು ವಿತಂತುವಿನ ವಿವಾಹ ವನ್ನು ಮಾಡಿಕೊಂಡರೆ, ನಾನು ಭಾವಿಯೊಳಕ್ಕೆ ಬಿದ್ದು ಸಾಯುವೆನು," ಎಂದು ತಾನೂ ಒಂದು ಭೀಷ್ಮಪ್ರತಿಜ್ಞೆ ಮಾಡಿದಳು. ಇಬ್ಬರೂ ಆದರ್ಶ ವಾದಿಗಳೇ. ತಾಯಿಯ ಆದರ್ಶ ಬಾಲ್ಯವಿವಾಹ.... ಮಗನ ಆದರ್ಶ ವಿತಂತುವಿವಾಹ. ಇನ್ನೆಲ್ಲಿ ದಾರಿ? ಇಬ್ಬರೂ ಮಾತನಾಡಿಕೊಳ್ಳ ತ್ತಿದ್ದರೆ, ವಿಸ್ಫುಲಿಂಗಗಳು ಏಳುತ್ತಿದ್ದುವು. ಒಂದು ದಿನ ಇಂತಹ ಘಟ್ಟ ವನ್ನೇ ನಾನು ಕಣ್ಣಾರೆ ನೋಡಿ ಭರಿಸಲಾರದೆ, ಸ್ನೇಹಿತನನ್ನು ಮನೆಗೆ ಕರೆದು ಕೇಳಿದೆನು: "ಭಾಯೀ! ನಿನ್ನ ಆದರ್ಶವು ದೊಡ್ಡದೇ. ನಾನು ಇಲ್ಲವೆನ್ನುವುದಿಲ್ಲ. ಆದರೆ, ನೀನು ಮದುವೆಯಾಗಲು ಯೋಚಿಸಿ ಕೊಂಡ ಆ ವಿತಂತುರತ್ನವು ಯಾರೋ ಹೇಳು!" ಸ್ನೇಹಿತನು ಮುಸಿ-ನಗೆ ನಕ್ಕು "ಅರೆರೆ! ಪ್ರತ್ಯೇಕವಾಗಿ ಇಂತಹ ವಿತಂತುವೆಂದು ಯಾರೂ ಇಲ್ಲ; ನಾನು ಮದುವೆಯಾಗತಕ್ಕ ಯುವತಿ ವಿತಂತುವಾ ಗಿರಬೇಕು, ಇಷ್ಟೆ!" ಎಂದ. "ಆದರೆ ಆದಿಗೆ ಮೊದಲು ಈ ರಗಳೆ ಏಕೆ? ಆ ಸಮಯ ಬಂದಾಗ ನೋಡಿಕೊಳ್ಳೋಣವಲ್ಲ" ಎಂದೆ. ಆತ ಹೊಗ್ಗಲಿಲ್ಲ. ತನ್ನ ಆದರ್ಶವನ್ನು ಅಲ್ಲಗಳೆಯಲು ತಾಯಿಗೆ ಹಕ್ಕು ಇಲ್ಲವೆನ್ನುತ್ತಾನೆ. ಒಂದು ದಿನ ಈ ಆದರ್ಶಗಳ ಚರ್ಚೆ ಮತ್ತಿಷ್ಟು ಹೆಚ್ಚಾಗಿ, ತಾಯಿಯು ಅಂತಿಷ್ಟು ಕೆಲಸವನ್ನು ಮಾಡಿ ದಳು. ಹಾಗೇ ಭಾವಿಯೊಳಕ್ಕೆ ಹಾರಿಕೊಂಡು ಸತ್ತುಹೋದಳು. ನಮ್ಮವನು ಕಿಂಚಿತ್ತಾದರೂ ಬಾಧೆಪಡಲಿಲ್ಲ. .... ಸ್ವಾರಸ್ಯ ಎಲ್ಲಿದೆ

ಎಂದರೆ, ಇಂದಿಗೂ ನನ್ನ ಸ್ನೇಹಿತನಿಗೆ ಮದುವೆಯಾಗಿಲ್ಲ.—ಆತನಿಗೆ ಒಪ್ಪಿಗೆಯಾದ ವಿತಂಡುವು ದೊರಕದೆ ಇರುವುದರಿಂದ. ನನಗೆ ಇಂದಿಗೂ ಅರ್ಥವಾಗದುದು ಏನೆಂದರೆ: ಯಾವ ಆದರ್ಶಕ್ಕಾಗಿ ಆ ತಾಯಿ ಬಲಿಯಾಗಿಹೋದಂತೆ?

ಕಾಸಿಗೆ ರಾಣೀಪ್ರೂಫ್ ಇದ್ದಂತೆ, ಈ ಆದರ್ಶಗಳಿಗೆ ಕೂಡ ರಾಣೀಪ್ರೂಫ್ ಇರುವುದೆಂದು ನನಗೆ ತೋರುತ್ತದೆ. ಮೂರ್ತಿಗೆ ಛಾಯೆ ಯಂತೆ ಪ್ರತಿ ಆದರ್ಶವನ್ನೂ ಬೆನ್ನಂಟಿ ಕೆಲವು ಅನಾನುಷವಾದ ಕ್ರೌರ್ಯ ಗಳು ಇರದೆ ತಪ್ಪವು. ಅನೇಕ ಆದರ್ಶವಾದಿಯ ಪ್ರತಿಬಂಧಗಳನ್ನು ಅನಿರ್ವಾಹಕವಾಗಿ ಅನುಭವಿಸಬಹುದು. ಇನ್ನೊಂದು: ನಾಣ್ಯಗಳಲ್ಲಿ ಪೋಟೊ ಪರಕೀನಂತೆ ಯಾವುವು ನಿಜವಾದ ಆದರ್ಶಗಳು? ಯಾವುದು ಕಬ್ಬಿನ ತುದಿಗಿರುವ ಸೋಗೆಯಂತಹವು?— ಈ ಧರ್ಮಸೂಕ್ಷ್ಮವನ್ನು ತಿಳಿದುಕೊಳ್ಳುವುದು ನನ್ನಂತಹ ಹಾದಿಹೋಕನಿಗೆ ಬುದ್ಧಿಗೆ ನಿಲುಕದ ಕೆಲಸ. ಜೀವನವು ಸರಿಯಾಗಿ ಅರ್ಥವಾಗದ ಯಾರಾದರೂ ಒಬ್ಬನು ಅವಾಯಕ ಕಳಾಪರಿಶೀಲಕ, ತನ್ನ ಜೀವನವನ್ನೆಲ್ಲ ಚಿತ್ರಕಾರನಾಗಿ ಕಳೆಯಬೇಕೆಂದು ನಿಶ್ಚಯಿಸಿಕೊಳ್ಳುವನೆಂದುಕೊಳ್ಳಿ. ಅದರಲ್ಲೂ ತನಗೆ ತೋಚಿದ ಆದರ್ಶ ಚಿತ್ರಕಲೆಯನ್ನೇ ಆರಾಧಿಸುವನೇ ವಿನಾ ವ್ಯಾಪಾರಿಕ ಚಿತ್ರಕಲೆಯ ತಂಟೆಗೆ ಹೋಗುವುದಿಲ್ಲ; ಬೇರೆ ವೃತ್ತಿಯನ್ನು ನೋಡಿಕೊಳ್ಳುವುದಿಲ್ಲ; ತಾನು ಹೊತ್ತಿಕೊಂಡು ಹೋಗುವುದಲ್ಲದೇ ಹೆಂಡರುಮಕ್ಕಳನ್ನೂ ಹೊತ್ತಿಸಿಬಿಡುವನು. ಇಂತಹವನು ನಮ್ಮ ಜೀವನದಲ್ಲಿ ಕಾಣಿಸಿದರೆ ಏನು ಮಾಡಬೇಕು? ಚಿತ್ರಗಾರನ ಆದರ್ಶ ಅಲ್ಲಿಗೇ ಅಂತ್ಯವಾದರೆ ಸ್ವಲ್ಪ ನಯ. ಕೆಲವು ಸಾಧಾರಣವಾಗಿ ಅ ರೀತಿಯಾಗಿ ಅಂತ್ಯವಾಗುವುದುಂಟೂ ಇರಬಹುದು. ಆತನಿಗೆ ಚಿತ್ರಕಲೆ ಮಾತ್ರವಲ್ಲವೆ ತಿಳುನೋದವು ಕೂಡ ಒಂದು ಆದರ್ಶವೆಂದುಕೊಳ್ಳಿ. ಹೆಂಡತಿಗೆ ಜಡ್ಡಾಗಿ ಸಾವು-ಬದುಕುಗಳಲ್ಲಿದ್ದರೂ ರೋಗಿಯನ್ನು ಕಾಪಾಡುವುದು ಇನ್ನೊಂದು ವಿಧವಾದ ವೈದ್ಯಕನೆಂದು ತಿಳಿದಿದ್ದರೂ, ಜಪ್ಪೆಂದರೂ ಲಾಭವಿಲ್ಲ. ಹೆಂಡತಿ ಸತ್ತರೆ ಆಗುವ ಬಾಧೆಗಿಂತಲೂ ತನ್ನ ಆದರ್ಶವನ್ನು ಬಿಟ್ಟುಕೊಟ್ಟರೆ ಬರುವ ಬಾಧೆ ಹೆಚ್ಚಿನದು. ಅದು ದರಿಂದ ಹೆಂಡತಿಯನ್ನು ಬಿಟ್ಟುಕೊಟ್ಟು ಆದರ್ಶವನ್ನು ಅಂಟಿಕೊಂಡಿರತ್ತಾನೆ. ತಾನು ನಂಬಿದ ಆದರ್ಶವು ತನ್ನನ್ನು ಯಾವ ವಿಧವಾಗಿಯೂ ದಡಕ್ಕೆ ಸೇರಿಸದು. ಅದೇನು, ಅದನ್ನು ಬಿಚ್ಚುವುದರಲ್ಲಿಯೇ ಏನೋ ಒಂದು ಪರಮಾರ್ಥವಿದೆ.

ಈ ರೀತಿಯು ಮನುಷ್ಯರನ್ನು ಪರಿವರ್ತಿಸಿ ಪರಿಸ್ಥಿತಿಗಳಿಗೆ ಅನುಗುಣವಾಗಿ ನಡೆದುಕೊಳ್ಳುವಂತೆ ಮಾಡುವುದು ನಮಗೆ ತಲೆಗೆ ಮೀರಿದ ಕೆಲಸ. ಇವರು ಅನುಸರಿಸುವ ಆದರ್ಶಗಳಲ್ಲಿ ಕೆಲವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಅವು ಆದರ್ಶಗಳಲ್ಲ, ಸ್ವಭಾವಗಳೆನಿಸುತ್ತವೆ. "ನನ್ನ ಆದರ್ಶವೇನೆಂದರೆ ಎಲ್ಲರಿಂದಲೂ ಒಳ್ಳೆಯವನೆನಿಸಿಕೊಳ್ಳುವುದು" ಎಂದೊಬ್ಬನೆನ್ನುವನು. ಅವನ್ನು ಆದರ್ಶವೆನ್ನುವುದಕ್ಕಿಂತ, ಗಟ್ಟಿಗ-ತನದಿಂದ, ಗಾಯಗಳನ್ನು ತಿನ್ನದೆ, ಸುಖಮಯವಾಗಿ ಜೀವನವನ್ನು ಸಾಗಿಸಿಕೊಳ್ಳುವ ಸ್ವಭಾವವೆಂದೆನ್ನುವುದುಚಿತ. ಆದರ್ಶಗಳು ಇಲ್ಲ-ದಿರುವಿಕೆ ಎನ್ನುವುದೂ, ಆದರ್ಶವೆನ್ನುವುದೂ, ಮಾತಿನ ಚಮತ್ಕಾರ ವಾಗುತ್ತದೆ. ಆದರ್ಶಕ್ಕೆ ಒರೆಗಲ್ಲು—ಯಾವುದೋ ಒಂದು ಅವಧಿ-ಯನ್ನು ಸೇರಿಕೊಳ್ಳುವುದಕ್ಕೆ ಪ್ರಯತ್ನಿಸುವುದು; "ಬಾಬಾ! ಏಕೆ ಇಲ್ಲದ ಸಲ್ಲದ ರಗಳೆ? ನೀನು ಬಯಸಿದ ಹೆಣ್ಣನ್ನು ಮಾಡಿಕೊಂಡರೆ ನಿನ್ನ ತಂದೆಯವರ ಆಸ್ತಿಯಲ್ಲಿ ನಿನಗೆ ಒಂದು ಬಿಡಿ ಕಾಸೂ ದೊರಕುವುದಿಲ್ಲ" ಎಂದರೆ ಯುವಕನು ಕೇಳನು. "ಹುಚ್ಚಾ, ನಿನ್ನ ದೇಶಭಕ್ತಿ ಕೊನೆಗೆ ನಿನ್ನನ್ನು ಉರುಲಿಗೆ ಒಯ್ಯುತ್ತದೆ" ಎಂದರೆ, ದೇಶ ಭಕ್ತನು ಕೇಳನು. "ಉಪ್ಪು, ಗೊಂಬೆ ಗೀಚುವುದು, ಕವಿತ್ವವನ್ನು ಮಾಡುವುದು ಬಿಟ್ಟುಕೊಟ್ಟು ಸಾಬೂನುಗಳನ್ನೂ, ಪಕೋಡಾಗಳನ್ನೂ ಮಾರಿಕೊ, ಸುಖವಾಗಿ ಬದುಕಿಕೊಳ್ಳುವೆ" ಎಂದರೆ, ಕಳಾವೇತ್ತನನ್ನು ಕೇಳಿನು; "ಸ್ವಾಮೀ, ಈ ಸಂಘ-ಸಮಾಜಗಳಲ್ಲಿನ ಕೊಳಕನ್ನು ಕಡಿತ ಬೇಡಿ, ಅವನ್ನು ಹಾಗೆಯೇ ಉಳಿಸಿ, ನಿಮ್ಮ ಕೆಲಸ ನೀವು ನೋಡಿ-ಕೊಳ್ಳಿ" ಎಂದರೆ, ಸಂಘಸಂಸ್ಥರ್ತ ಕೇಳನು "ಏನಯ್ಯೋಯ್ಯೋ! ತಿಂದು ಕೂಡಲಾರದೆ ಗೌರೀಶಂಕರ ಶಿಖರ ಹತ್ತುತ್ತೇನೆನ್ನುವೆ ಏನು? ಗಡ್ಡಿ ಕಟ್ಟಿ ಹೋಗುವೆ. ಇಷ್ಟೂ ಮಾಡಿದರೆ ಅಲ್ಲೇನಿರುತ್ತೆ, ಮಂಜು ಬಿಟ್ಟು?" ಎಂದರೆ ಸಾಹಸಿಕನು ಕೇಳನು..... .....

ಆದರೆ ಇಂತಹ ಆತ್ಮವಂತರೇ ಜಗತ್ತನ್ನು ಪ್ರಗತಿಗಾಮಿಯ-ನ್ನಾಗಿ ಮಾಡುವರು. *

---

* ಶ್ರೀಯುತ ಜಿ. ರಾಮಾ ಶಾಸ್ತ್ರಿಗಳು ಅಖಿಲ ಭಾರತ ಬಾನುಲಿ (ಮದ್ರಾಸ್ ಕೇಂದ್ರ)ಯಲ್ಲಿ ಮಾಡಿದ ಭಾಷಣ.

ಗುಡಗೇರಿಯಲ್ಲಿ ನಮ್ಮ ಏಜಂಟರು
ಶ್ರೀ. ಡಿ. ಎನ್. ಹುಲಕೋಟ್ಟಿ ನ್ಯೂಜ್ ಏಜಂಟ್

ಜಮಖಂಡಿಯಲ್ಲಿ ನಮ್ಮ ಏಜಂಟರು
ಕುಲಕರ್ಣಿ ಬಂಧುಗಳು, ನ್ಯೂಜ್ ಏಜಂಟ್

ಪಂಚವಾರ್ಷಿಕ ಯೋಜನೆ

ಡಿ. ವಿ. ಸಿ. ಶಿಕ್ಷಲಕುಮಿ, ಬಿ.ಎಸ್ಸಿ. (ಆನ್ರ್ಸ್) ಅರಸೀಕೆರೆ ಪ್ರಾದೇಶ

ಲೇಖಾಂಕ ೪

●

ಭಾರತ ರಾಷ್ಟ್ರವೆಂಬ ಭಾರತದ ಜನತೆ. ಬಡತನವನ್ನು ನಿವಾರಿಸುವುದೇ ಈ ಯೋಜನೆಯ ಮುಖ್ಯೋದ್ದೇಶ.

●

ಸಾರ್ವಜನಿಕ ಕಲ್ಯಾಣ ಕಟ್ಟುಬಿಡುವೋಜನೆ ಜನಾಂಗದ ನಗರಗಳನ್ನು ಬಿಟ್ಟು ಪಟ್ಟಿಣ್ಯ ನಗರದ ಜನಾಂಗದವರ ಜೀವನ ವಿಧಾನ, ಶಿಕ್ಷಣಾಭಿವೃದ್ಧಿ, ಸಾರ್ವಜನಿಕ ಆರೋಗ್ಯ ರಕ್ಷಣೆ, ಭೂಸ್ಥಿರ ನೀರಿನ ವ್ಯವಸ್ಥೆ, ಆಪತ್ಕಾಲದ ಪರಿಹಾರ ಮುಂತಾದವು. ಪ್ರಥಮ ಪಂಚವರ್ಷ ಪ್ರಣಾಳಿಕೆ ಮೊದಲಾದ ವಿಷಯಗಳಲ್ಲಿ ಲಕ್ಷ್ಯವಿಟ್ಟುವುದು ರಾಷ್ಟ್ರದ ಕರ್ತವ್ಯವೆನಿಸಿದೆ. ಸ್ವತಂತ್ರ ಭಾರತದಲ್ಲಿ ಪ್ರತಿಯೊಬ್ಬನಿಗೂ ಒಂದಿಷ್ಟಾದರೂ ಉದ್ಯೋಗ ಸೌಲಭ್ಯ, ತಿನ್ನಲು ಅನ್ನ, ಉಡಲು ಬಟ್ಟೆ ಅವಕಾಶ ಮೊದಲಾದ ಪ್ರಥಮ ಜೀವನಾವಶ್ಯಕತೆಗಳನ್ನು ಅವಶ್ಯವಿರುವ ಜನಾಂಗ ಮೊದಲಿಸಬೇಕಾಗಿದೆ. ಬಾಳಿಗೆ ಅವಶ್ಯವಿರುವ ಸಾಮಾಜಿಕ ಸೌಕರ್ಯ, ಸೌಲಭ್ಯಗಳೆಲ್ಲವೂ ಕೈಗೂಡಿ ಮೊದಲಾಗಲೇ ಪಂಚವಾರ್ಷಿಕ ಯೋಜನೆಯು ಯಶಸ್ವಿನ್ನು ಆಗಿಯುವುದು ಸಾಧ್ಯವಾಗಿದೆ. ಪ್ರತಿಯೊಬ್ಬರೂ ಉದ್ಯೋಗದಲ್ಲಿ ಕಲಸವನ್ನು ತೊಡಗಿಸಿಕೊಳ್ಳುವುದು ಅವನ ಆದ್ಯ ಕರ್ತವ್ಯವಾಗಿದೆ. ಎಲ್ಲರೂ ಕಲಸವನ್ನು ಏರ್ಪಾಡು ಮಾಡಿಕೊಡುವುದು ಸರಕಾರದ ಕರ್ತವ್ಯವಾಗಿದೆ. ಉದ್ಯೋಗಗಳಲ್ಲಿ ಸೇರಲು-ಕೊಡುವುದು ಕಲಸವನ್ನು ಪಡೆಯುವುದು ಸಾಧ್ಯವಾಗಿದೆ. ಸಾಮಾಜಿಕ ಸೌಲಭ್ಯಗಳು

ಸಾಮಾಜಿಕ ಸೌಲಭ್ಯಗಳು

ಪ್ರತಿಯೊಬ್ಬ ಸಾರ್ವಜನಿಕರಿಗೂ ಸಾಮಾಜಿಕ ಸ್ವಾಸ್ಥ್ಯವನ್ನು ಭದ್ರಪಡಿಸಬೇಕಾಗಿದೆ. ಜನತೆಯ ಸಹಕಾರದಿಂದ ಸರಕಾರ ಈ ಭದ್ರತೆಯನ್ನು ನಿರ್ವಹಿಸಬೇಕಾಗಿದೆ. ಉತ್ತಮ ಜೀವನಾಭಿವೃದ್ಧಿಯನ್ನು ಬಯಸುವ ನಾವು ಮೂಲಭೂತ ಆವಶ್ಯಕ ಅಗತ್ಯಗಳನ್ನು ಪೂರೈಸುವುದು ನಮ್ಮ, ನಮ್ಮ ಹಿಚ್ಚಿನವನ್ನು ಪಡೆದಿರಬೇಕಾಗಿದೆ. ಪ್ರತಿಯೊಬ್ಬ ನಾಗರಿಕನಿಗೆ ಸರಿಸಮಾನವಾಗಿಯೂ ಬಾಳು ಪೂರ್ಣಗೊಳಿಸುವಂತಾಗಿ

ಮಹಿಳಾಕಲ್ಯಾಣ

ಮಾನವಕುಲದಲ್ಲಿ ಅರ್ಧಭಾಗವನ್ನು ಪೆಣ್ಣು ಮಕ್ಕಳಿದ್ದಾರೆ. ಸಮಾಜದ ಮೂಲಸ್ತಂಭವಾಗಿ ಬಹು ಪಾಲು ಅವರಿಗೆ ಸೇರಿದ್ದಾಗಿದೆ. ಶಾಸ್ತ್ರಜ್ಞರ ಪ್ರಕಾರವೆಯೂ ಮಹಿಳೆಯರಿಗೆಗಳು ಪೂರ್ಣ ಜೀವಾಗಿ ಅವರಲ್ಲಿ ಅಡಗಿರುವ ಏಕೆ. ಅದರ ಎಳ್ಳೆ, ಪ್ರಗತಿ, ಸುಧಾರಣೆಗಳಲ್ಲಿವೆ ಭವಿಷ್ಯದ ಆಶಾಕಿರಣವೆಂದು ಅಭಿಪ್ರಾಯಪಟ್ಟಿದ್ದಾರೆ. ಅಧ್ಯಕ್ಷಾನಸ್ಥಿಕ ಪೆಣ್ಣು ಮಕ್ಕಳು ಮಹಿಳಾ ಪೌಲ್ಯಾಭಿವೃದ್ಧಿಯಾಗಿ ಅಧಿಕಾರ ತೊಂದರೆಗಳ ಪರಿಹಾರಾರ್ಥವಾಗಿ ವೇಶ್ಯಾವೃತ್ತಿ ಮುಸ್ಸು ಕೈಗೊಳ್ಳಿಕ್ಕಾಗಿದ್ದಾರೆ. ವೇಶ್ಯಾವೃತ್ತಿಯು ಭಯಂಕರವಾದ ಸಾಧ್ಯವೇ ಎಂಬುದನ್ನು ಈಗಾಗಲೇ ಆ ವಿಚಾರದಲ್ಲಿ ಕಾರ್ಯರೂಪಕ್ಕೆ ಬಂದಿರುವ ಕಾಯ್ದೆಗಳ ಪರಿಣಾಮದಿಂದ ವೃತ್ತಿಪರಿಷ್ಕಾರ ಪರಿಹಾರಾರ್ಥವಾಗಿ ವೃಜುಕ್ಕಗಳನ್ನು ಕೈಗೊಳ್ಳುವುದಾಗಿದೆ. ಮಹಿಳೆಯರ ಕಲ್ಯಾಣಕ್ಕಾಗಿ ಪೋಲೀಸಲ್ಲಿ ಅಂತೋಲನವೇ ನಡೆದಿದೆಯೆನ್ನಬಹುದು. ಸಾಮಾಜಿಕ ಮುಕ್ತ ಸಹಕಾರ್ಯ ಸಂಸ್ಥೆಗಳು ಈ ವಿಚಾರದಲ್ಲಿ ಗಮನಾರ್ಹ ಕಾರ್ಯ ಗತಿಯಾಗಿದೆ. ಮಾಧ್ಯಮ ಮತ್ತು ಉತ್ತರ ವ್ಯಾಸಂಗದ ಸರಕಾರಿ ವೈದ್ಯಕೀಯ ಕಾಲೇಜುಗಳು ಈ ಕಾರ್ಯಾವಶ್ಯಕ್ಕೆ ಸೇರಿಕೊಂಡಿವೆ. ಪೆಣ್ಣಿನ ಕಲುಷವನ್ನು ಸಾರ್ವಜನಿಕರೇ ಇಲ್ಲವು ಮಾಡುವಲ್ಲಿ ಪ್ರಯತ್ನಿಸಿದ್ದಾರೆ. ಕಡಿಮೆ ಪ್ರಾಣಿ ಮಹಿಳಾಮಂದಿರಲ್ಲಿ ಮಹಿಳಾವಶ್ಯಕ ಜೀವನೋಪಾಯಗಳನ್ನು ಮುಂತಾದ ಒಂದು ಉದ್ಯೋಗಾಭ್ಯಾಸ

ಗಿಸಿದೆ. ಬಾರತದ ದಕ್ಷಿಣದ ಪುಸ್ತಿಗಾಲದಲ್ಲಿ ಕನ್ನಡ ಭಾಷೆಯ ಸ್ಥಿತಿ ದಕ್ಷಿಣದ ದಾಖಲೆ. ದಾ. ಸಿ. ಎಂ. ಸ್ಥಿತಿಗಳ ಮಿಶ್ರಣ ಮಾಡಿಕೊಳ್ಳಲಾಗಿದೆ. ಬಾರತದ ಕರಾವಳಿ ಪ್ರದೇಶದ ಬಾಷೆಯಾದ ಮಲಯಾಳಂನಲ್ಲಿ ಗಾಯ್ದು ಇಲ್ಲಿ ಕಾಣಿಸಿದೆ ಮಾಡಿದೆ. ಕನ್ನಡ ಭಾಷೆಯ ಬಾಷೆಯ ಸ್ಥಿತಿಗಳು. ಸಂಸ್ಕೃತ ಮೊಲ್ಲಿನ ಬಡಿಸಿದ್ದ ಕಾರಣಕ್ಕಾಗಿ ಮಾಡಿಸಿದ್ದ ಕಾರಣ ಸೆಲ್ಲಿನ ಸಂಸ್ಕೃತ ಪದಕೋಶ ಮಾಡಿಸಿದ್ದ ಸಿಂಧಿಸಿ

ಸರಿಪಡಿಸುವ ಮಹಾಕಾರ್ಯವನ್ನು ಕ್ಷಿಪ್ರದಲ್ಲಿಯೇ ಸಾಧಿಸುವುದು ಸುಲಭಸಾಧ್ಯವಲ್ಲ. ಜನರನ್ನು ಜ್ಞಾನವಂತರನ್ನಾಗಿ ಮಾಡಿ, ಮನವೊಲಿಸಿದಾಗಲೇ ಈ ಕಾರ್ಯಕ್ಕೆ ಹೆಚ್ಚಿನ ಯಶಸ್ಸು ದೊರೆಯುತ್ತದೆ.

ಸುಮಾರು ಎರಡು ಕೋಟಿಗಳಷ್ಟು ಆದಿವಾಸಿಗಳು ತೀರ ಹಿಂದುಳಿದ ಪ್ರದೇಶಗಳಲ್ಲಿ ನೆಲಸಿದ್ದಾರೆ. ಅರಣ್ಯ, ಗುಡ್ಡಗಾಡುಗಳಲ್ಲಿ ನೆಲಸಿದ ಈ ಜನರು ಆಧುನಿಕ ನಾಗರಿಕತೆಯ ಸೌಲಭ್ಯ ತಿಳಿಯರು. ಅವರು ಹಿಂದುಳಿದಿರುವರೆಂದು ಮುಂದುವರಿದ ಅನೇಕರು, ಉದ್ಧಾರದ ಸೋಗುಹಾಕಿಕೊಂಡು, ಅವರನ್ನು ಉಪಯೋಗಿಸುವ ಕಾರ್ಯಮಾಡ ಬಹುದು. ಆದಿವಾಸಿಗಳಾದರೂ ತಮ್ಮ ಪ್ರದೇಶ ಬಿಟ್ಟು ಹೊರಬರುವ ಮನಸ್ಸಿನವರಾಗಿಲ್ಲ. ಆಯಾ ಸ್ಥಾನಗಳ ಸಾಧನಸಂಪತ್ತುಗಳನ್ನು ಯೋಗ್ಯರೀತಿಯಲ್ಲಿ ಉಪಯೋಗಮಾಡಿಕೊಂಡು, ಆರ್ಥಿಕ ಪರಿಸ್ಥಿತಿ ಸುಧಾರಿಸಿಕೊಂಡು, ಬಹುದಿನಗಳಿಂದ ಬಂದ ರೂಢಿನಂಬುಗೆಗಳನ್ನು ಬಿಟ್ಟು, ಜ್ಞಾನವಂತರಾಗಿ, ಸಂಪನ್ನರಾಗಿ, ಬಾಳುವಂತೆ ಮಾಡಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುವುದು. ಕೇಂದ್ರ ಮತ್ತು ರಾಜ್ಯ ಸರಕಾರಗಳು ಈ ಮೂಲನಿವಾಸಿಗಳ ಏಳ್ಗೆಗಾಗಿ ೬೬ ಕೋಟಿ ರೂಪಾಯಿ ವೆಚ್ಚಮಾಡಲಿವೆ. ಮೂಲನಿವಾಸಿಗಳ ಪ್ರದೇಶಗಳಲ್ಲಿ ರಸ್ತೆಗಳೇ ಇಲ್ಲ. ೨ ಕೋಟಿ ರೂಪಾಯಿ ಖರ್ಚುಮಾಡಿ ರಸ್ತೆ ಮಾಡಿಸಲಾಗುವುದು. ಸ್ವಚ್ಛ ನೀರಿನ ಪೂರೈಕೆ ಅತ್ಯವಶ್ಯ ಆಗಬೇಕಾಗಿದೆ ಅನೇಕಾನೇಕ ಭಾವಿಗಳನ್ನು ನಿರ್ಮಾಣವಾಗುವ ವ್ಯವಸ್ಥೆಯೂ ನಡೆಯಲಿವೆ. ಕಡಿವಿಗಳಲ್ಲಿಯೇ ಬೆಳೆಯುವುದರ ಈ ಜನತೆಗೆ ಆರಣ್ಯಗಳ ಮಹತ್ವ ತಿಳಿಸಿದರೆ, ಅವರು ಆರಣ್ಯನ್ಯವಸಾಯವನ್ನು ಉತ್ತಮ ರೀತಿಯಲ್ಲಿ ಕೈಗೊಳ್ಳುವುದರಲ್ಲಿ ಸಂದೇಹವೇ ಇಲ್ಲ. ಬೇಟೆಯಾಡುವುದನ್ನು ಕಡಿಮೆ ಮಾಡಿ ಒಕ್ಕಲುತನದತ್ತ ಅವರ ಮನಸ್ಸು ಒಲಿಸಲು, ತರಬೇತಿ ಕೊಡಲಾಗುವುದು. ಉಕ್ಕಿನಂತರನ್ನಾಗಿ ಮಾಡುವುದು. ಸಾಂಘಿಕ ಜೀವನ ನಡೆಯಿಸಲು ಕಲಿಸುವುದು. ಪರಿಕಾಯ ಪ್ರವೇಶದ ಕಲಿವು ಮಾಡಿಕೊಡುವುದು. ಆರೋಗ್ಯದ ಪರಿಪೂರ್ಣ ಕಾಪಾಡಲು ಪ್ರಾಥಮಿಕ ಚಿಕಿತ್ಸೋಗ, ಲೈಂಗಿಕ ರೋಗ, ಕೊನ್ನು, ನೆಲ್ಲಿ ಕ್ಷಯ ಮೊದಲಾದ ರೋಗಗಳಿಂದ ಮೂಲ ನಿವಾಸಿಗಳು ಮುಕ್ತರಾಗಿದ್ದಾರೆ. ಅವಶ್ಯಕವಾದ ಔಷಧಿಗಳು ಅವರಿಗೆ ತಿಳಿಯವು. ಅನಾರೋಗ್ಯದ ಪೀಡಾಗ್ರಸ್ಥರಿಗಾಗಿ ವಿಶೇಷ ರೋಗಗಳಿಗೆ ತುತ್ತಾಗಿದ್ದಾರೆ. ಅವರಿಗಾಗಿ ಸುಧಾರಿತ ವಿದ್ಯಾಸಂಸ್ಥೆಗಳನ್ನು ನಿರ್ಮಿಸಲಾಗುವುದು. ಅವರವರ ಮಾತೃಭಾಷೆಗಳಲ್ಲಿಯೇ ಶಿಕ್ಷಣ ಕೊಡುವ ಏರ್ಪಾಡುಮಾಡಲಾಗಿದೆ. ಈ ಜನಾಂಗದಲ್ಲಿ ಕೆಲವು ಅಪರಾಧಿ ಜನಾಂಗಗಳಿವೆ. ಅವರಲ್ಲಿ ಅಂಜಲಿಮಿ ಮಾಡುವುದು, ಕಳ್ಳತನ ಹೊಡೆಯುತ್ತ ಅತ್ತಿಂದಿತ್ತ ಓಡಾಡುವವರೂ ಆಗಿದ್ದಾರೆ. ಜನುವಂಶಿಕವಾಗಿ ಬಂದ ಅವರೆಲ್ಲರನ್ನೂ ಅಪರಾಧಿಗಳೆಂದು ಹೇಳುವುದು ತಪ್ಪೆಂದು, ಸರಕಾರ ಅವರ ಏಳ್ಗೆಗೂ ಪ್ರಯತ್ನ ನಡೆಯಿಸಿದೆ. ಕೇವಲ ಹುಟ್ಟಿನಿಂದ ಯಾವನೂ ಅಪರಾಧಿಯಾಗಲಾರದು. ಅಪರಾಧ ಮಾಡಿ ನ್ಯಾಯಾಲಯಗಳಲ್ಲಿ ಶಿಕ್ಷೆ ವಿಧಿಸಲ್ಪಟ್ಟವನು ಅಪರಾಧಿ– ಈ ವಿಷಯದಲ್ಲಿ ಕಾಯಿದೆ ಮಾಡಿ, ಮುಂದುವರಿದವರು ತಮ್ಮನ್ನು ನೋಡುವ ದೃಷ್ಟಿಯನ್ನು ಬದಲುಮಾಡಿದ್ದಾರೆ. ಯೋಗ್ಯ ಕೆಲಸಗಳಲ್ಲಿ ತೊಡಗುವಂತೆ ಮಾಡಿದಲ್ಲಿ ಅವರು ಕೂಡ ಅನಿಷ್ಟ ಚಟುವಟಿಕೆ ಬಿಟ್ಟು ಉತ್ತಮ ನಾಗರಿಕರಾಗಿ ನೆಮ್ಮದಿಯಿಂದ ಬಾಳುವರು ಎಂಬುದರಲ್ಲಿ ಸಂದೇಹವಿಲ್ಲ.

ನಿರಾಶ್ರಿತರ ಕಲ್ಯಾಣ

ಪಶ್ಚಿಮ ಪಾಕಿಸ್ತಾನದ ಸುಮಾರು ೫೦ ಲಕ್ಷ ಹಿಂದೂ ಮತ್ತು ಶೀಖರು ೧೯೪೭ರಲ್ಲಿ ದೇಶದ ವಿಭಜನೆಯಾದಾಗ, ಹಿಂದುಸ್ತಾನಕ್ಕೆ ಬಂದರು. ಅದರಂತೆ ಪೂರ್ವಪಾಕಿಸ್ತಾನದಿಂದಲೂ ೧೫ ಲಕ್ಷ ಹಿಂದೂ ಜನರು ಕ್ರಮೇಣ ಇತ್ತ ಬಂದರು. ಪೂರ್ವಪಾಕಿಸ್ತಾನದಿಂದ ಬರುವುದು ಇನ್ನೂ ನಡೆದೇ ಇದೆ.

ಪಂಜಾಬ, ಪೆಪ್ಸು, ರಾಜಸ್ತಾನ, ದಿಲ್ಲಿ ಪ್ರಾಂತಗಳಲ್ಲಿಯ ಕೆಲವು ಮುಸಲ್ಮಾನರು ಕೊಲಗಳನ್ನು ಬಿಟ್ಟು ಗುಳೆ ಹೋಗಿದ್ದಾರೆ ಈ ಭೂಮಿಯನ್ನು ಗುಳೆ ಬಂದ ಜನರಿಗೆ ಕೊಡಮಾಡಿರುವರು. ಭಾರತದಲ್ಲಿ ಬಿಟ್ಟುಹೋದ ಭೂಮಿಗಿಂತ, ಪಾಕಿಸ್ತಾನದಲ್ಲಿ ಬಿಟ್ಟು ಬಂದ ಭೂಮಿ ಹೆಚ್ಚಿದೆ. ಈ ಜನರಿಗೆಲ್ಲ ಭೂಮಿಯನ್ನು ಕೊಟ್ಟು, ಒಕ್ಕಲುತನಕ್ಕೆ ಹಚ್ಚುವ ಬಹು ದೊಡ್ಡ ಭಾರದ ಕಾರ್ಯ ನಿರ್ವಹಿಸುವ ಹೊಣೆ ಸರಕಾರದ ಮೇಲೆ ಬಿತ್ತು. ೧೯೪೮–೫೨ರ ತನಕ ಪಶ್ಚಿಮ ಪಾಕಿಸ್ತಾನದ ನಿರಾಶ್ರಿತರಿಗಾಗಿ ಎತ್ತು, ಮೇವು, ಬೀಜ, ಮೊದಲಾದ ಒಕ್ಕಲುತನದ ಸಾಧನಗಳನ್ನು ಕೊಳ್ಳಲಿಕ್ಕೆ ೮೮ ಕೋಟಿ ರೂಪಾಯಿ ಸಾಲ ಕೊಡಲಾಗಿದೆ. ಜಿದೇ ರೀತಿಯಲ್ಲಿ ಪೂರ್ವದ ನಿರಾಶ್ರಿತರಿಗೂ ೮೦ ಕೋಟಿ ರೂಪಾಯಿ ಕೊಡಲಾಗಿದೆ. ೧೯೫೫–೫೬ನೆಯ ವರ್ಷದಲ್ಲಿಯೂ ಇನ್ನೂ ೧೦ ಕೋಟಿ ರೂಪಾಯಿ ಖರ್ಚುಮಾಡಿ, ಉಳಿದ ಪೂರ್ವದ ನಿರಾಶ್ರಿತರಿಗೆ ಮಾರ್ಗ ತೋರಿಸಿಕೊಡಲಾಗುವುದು.

ಪಟ್ಟಣಿಗರಾದ ನಿರಾಶ್ರಿತರ ಸಮಸ್ಯೆ ಗಡುಚಾಗಿದೆ. ಭಾರತದ ಪಟ್ಟಣಗಳಿಂದ ಹೋದವರಲ್ಲಿ ಅನೇಕರು ಕೂಲಿಕಾರರು ಇಲ್ಲವೆ ಚಿಕ್ಕ ಕೈಗಾರಿಕೆಗಾರರು; ಅವರ ಜೀವನಮಟ್ಟ ಕೆಳತರಗತಿಯದು; ಆದೇ, ಪಾಕಿಸ್ತಾನದಿಂದ ಬಂದವರು ಉದ್ದಿಮೆದಾರರು, ಅಂಗಡಿಕಾರರು, ಕಾರಖಾನೆದಾರರು ಇಲ್ಲವೆ ಕೆಲಸಗಾರರು; ಅವರ ಜೀವನ ಮಟ್ಟ ಮೇಲ್ತರಗತಿಯದು. ಹೀಗಾಗಿ ಅವರವರಿಗೆ ತಕ್ಕಂತೆ ಜೀವನದ ಏರ್ಪಾಡು ಮಾಡುವುದು ಕಠಿನವೆನಿಸಿತು. ೨೫ ಲಕ್ಷ ಜನರಿಗೆ ಪಟ್ಟಣಗಳಲ್ಲಿ ವಸತಿಸೌಕರ್ಯ ಒದಗಿಸಬೇಕಾಯಿತು. ೧೯೫೨ನೆಯ ಮಾರ್ಚದ ಒಳಗಾಗಿ, ೩೮ ಕೋಟಿ ರೂಪಾಯಿಗಳ ಮನೆಗಳನ್ನು ನಿರ್ಮಿಸಿತಲ್ಲದೆ, ಮುಂಬರುವ ಎರಡು ವರುಷಗಳಲ್ಲಿ ೨೦ ಕೋಟಿ ರೂಪಾಯಿಗಳ ವೆಚ್ಚದ ಮನೆಗಳನ್ನು ಕಟ್ಟಲಾಗುವುದು. ಹಲಕಲವು ಹೊಸ ಪಟ್ಟಣಗಳನ್ನೇ ನಿರ್ಮಿಸಲಾಗಿದೆ. ಪಂಜಾಬದಲ್ಲಿ ಫರೀದಾಬಾದ, ನಿಲೋಖೇರಿ ಮತ್ತು ಚಾಂದೀಘಡ; ರಾಜಸ್ತಾನದಲ್ಲಿ ರಾಜಪುರ, ಕಚ್ಛದಲ್ಲಿ ಗಾಂಧೀಧಾಮ, ಉತ್ತರಪ್ರದೇಶದಲ್ಲಿ ಗೋವಿಂದಪುರಿ ಮತ್ತು ಹಸ್ತಿನಾಪುರಗಳು ನಿರಾಶ್ರಿತರಿಗಾಗಿಯೇ ಬೆಳೆದುನಿಂತ ಭವ್ಯ ನಗರಗಳಾಗಿವೆ. ಪೂರ್ವದಲ್ಲಿಯೂ ಕೂಡ ಫುಲಿಯಾ, ಹನ್ರಾವೈಗಚಿ ನಗರಗಳು ಇದೇ ಕಾರಣದಿಂದ ಹುಟ್ಟಿನಿಂತಿವೆ.

ನಿರಾಶ್ರಿತರಿಗೆ ವ್ಯಾಪಾರೋದ್ಯೋಗಗಳಿಗೆ ನೆರವು ಕೊಡಲಾಗಿದೆ. ಕೆಲಸಗಳಲ್ಲಿ ಅನೇಕರನ್ನು ಸೇರಿಸಲಾಗಿದೆ; ಶಾಲೆ-ಕಾಲೇಜುಗಳ ನೆಚ್ಚಕ್ಕಾಗಿ ಧನಸಹಾಯ ಮಾಡಲಾಗಿದೆ. ೧೯೩೮ ರ ಒಳಗಾಗಿ ೧,೯೪,೦೦೦ ನಿರಾಶ್ರಿತರಿಗೆ ಉದ್ಯೋಗ ವಿನಿಮಯ ಸಂಸ್ಥೆ ಕೆಲಸಗಳ ಏರ್ಪಾಡು ಮಾಡಿದೆ. ೧೫,೦೦೦ ಜನರನ್ನು ರೇಲ್ವೆಯಲ್ಲಿ ಸೇರಿಸಲಾಗಿದೆ ತರುಣಪೀಳಿಗೆಗೆ ಉದರಪೋಷಣೆಗಾಗಿ ಹಲಕೆಲವು ಉದ್ಯೋಗಗಳಲ್ಲಿ ತರಬೇತಿ ಕೊಡಲಾಗಿದೆ. ಈಗಾಗಲೇ ೬೦೦೦ ತರುಣರು ತರಬೇತು ಹೊಂದಿದ್ದಾರೆ. ಈ ವರುಷದ ಅಂತ್ಯದೊಳಗಾಗಿ ಇನ್ನೂ ೬೪,೦೦೦ ಜನರಿಗೆ ತರಬೇತು ದೊರೆಯುಲಿದೆ.

ಶೈಕ್ಷಣಿಕ, ಜೀವನೋಪಾಯಿಕ ಧಂದೆ ಮೊದಲಾದ ಕಾರ್ಯಗಳಿಗಾಗಿ ಈಗಾಗಲೇ ೭೦ ಕೋಟಿಗಳಿಗೆ ಮಿಕ್ಕಿ ಹಣ ವೆಚ್ಚಮಾಡಲಾಗಿದೆ; ಮುಂಬರುವ ಎರಡು ವರುಷಗಳಲ್ಲಿ ಸುಮಾರು ಇಪ್ಪತ್ತು ಕೋಟಿಗಳಷ್ಟು ಹಣ ವೆಚ್ಚಮಾಡಲಾಗುವುದು.

ಅಲ್ಲದೆ ಅಂಗಡಿ-ಮಳಿಗೆಗಳನ್ನು ಕಟ್ಟಿಸಿಕೊಡುವುದು, ಉದ್ಯೋಗ ಮಂದಿರ ಸ್ಥಾಪಿಸಿಕೊಡುವುದೂ ನಡೆದಿದೆ. ಲಕ್ಷಗಟ್ಟಲೆ ನಿರ್ಗತಿಕರಾದವರನ್ನು ಪತ್ತೆಹಚ್ಚಿ, ಅವರವರ ತಾಣಗಳಿಗೆ ಹೊಂದಿಸುವ ಕಾರ್ಯ ನಡೆದಿದೆ.

ಒಟ್ಟಾರೆ, ೧೯೩೬ ನೆಯ ಮಾರ್ಚ್ ಅಂತ್ಯದ ವರೆಗೆ ನಿರಾಶ್ರಿತರಿಗಾಗಿ ತೊಂಬತ್ತೊಂದರೆ ಕೋಟಿ ರೂಪಾಯಿಗಳು ವೆಚ್ಚವಾಗಿವೆ. ಮುಂಬರುವ ಎರಡು ವರುಷಗಳಲ್ಲಿ ೫೭ ಕೋಟಿಗಳಷ್ಟು ರೂಪಾಯಿಗಳನ್ನು ಖರ್ಚುಮಾಡುವ ಅಂದಾಜಿದೆ. ಈ ಹಣದಲ್ಲಿ ೬೫ ಕೋಟಿಗಳಷ್ಟು ಮಾತ್ರ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸಹೆದಿದ್ದಿರುವುದು.

೭೫ ಲಕ್ಷ ನಿರಾಶ್ರಿತರನ್ನು, ಅವರವರ ಕೆಲಸ-ಧಂದೆಗಳಿಗೆ ಹಚ್ಚುವ ಕಾರ್ಯ ಸಾಮಾನ್ಯವಾದುದೇನೂ ಅಲ್ಲ. ಐದು ವರುಷದ ಈ ಯೋಜನೆಗಳಲ್ಲಿ ನಿರಾಶ್ರಿತರ ಕಲ್ಯಾಣ ಅತಿ ಮಹತ್ವದ ಭಾಗವೆನ್ನಲು ಸಂದೇಹವಿಲ್ಲ.

ಚೆಲ್ಲಿದ ಮುತ್ತುಗಳು

ಶ್ರೀ. ಜ. ಶ್ರೀ. ದೇಸಾಯಿ, ಜರಕುಂಟಿ ಬಿ. ಎ, ಬಿ. ಟಿ. ಕೊಪ್ಪಳ*

೧

ಕೇಳಿತು ತವಳಿದ ನರಜಾರದ ಜನ:
"ಒಲಿವಿರ, ಓ ಖಲೀಫನೆ, ಚಣ:
ಈ ಯಥಿಯೋಪನು ಗುಲಾಮಜೊಳಗತಿ
ನೆಚ್ಚುಗೆ ನಿಮಗಾಗಲು ಕಾರಣ!

೨

"ಅವನಿಲೆ ಕರುಳ ಕತ್ತಲ ತೆರದಲಿ
ಒಡೆಯರು ಅವನಾಯ್ದುದು ಜೋಡ್ಯವಲ!
ಗುಲಾಬಿಗಿರದಿರೆ ವಾಸನೆ ವರ್ಣಗ-
ಳುಲ್ಲಸಕೆಂತಾಯ್ದುದು ಬುಲ್ಬುಲ?"

೩

ಖಲೀಫನಾಗಳೆ ಉಸುರಿದ: "ಸಾಜಪ,
ಸುಂದರನಲ್ಲವು ನೋಡಲು ಜನ;
ಪ್ರೇಮದ ಸೌಂದರ ಪಡೆದವನವನಹ
ನಿಜಕೂ ಪ್ರೇಮವೆ ಆ ವೈಭವ.

೪

"ಬೀಳಲು ಹಿಂಬದುವೊಂಟಿಯ ಹಿಂಡಿನೊ-
ಳೊಂದಮ ಹತ್ತಿಯ ಓಣಿಯಲೊಮ್ಮೆ;
ಹರಿಮದು ಬುಟ್ಟಿಯು, ಉಡಿಯಲಿ ಭರದೊಳು
ಬಹುಜೆಲೆ ಮುತ್ತುಗಳುರುಳಲು ಚಿಮ್ಮೆ.

೫

"ಕೊಳ್ಳಿರಿ; ಎಲ್ಲವ ಹಂಚುವೆ ನಿಮ್ಮಲಿ!
ಎನ್ನುವ ಕಣ್ಣಿನ ಸನ್ನೆಗೆ ಜೇಗ;
ಬಹುಜೆಲೆ ಸೂರೆಯ ಕೇಳಲಿಕೆಲ್ಲ ಗು-
ಲಾಮರು ಒಮ್ಮೆಲೆ ಎರಗಿದಾಗ.

೬

"ಒಬ್ಬನೆ ಒಬ್ಬನು ನನ್ನೆಡೆ ಉಳಿದನು—
ಯಥಿಯೋಪನ ಬಳಿಯೊಬ್ಬರ ಕಾಣೆ;
ಇವನಲ್ಲಾತನು ಒಂಟಿಯೆ ಕುಳಿತನು
ಹಿಡಿಯಲು ಹಿಂಗದೆ ಲಗಾಮು ತಾನೆ.

೭

"ಪಡೆಯುವೆ ಏನನು ಸುಜನನೆ ನೀನೆಲೆ
ನಿಲ್ಲುತನೆನ್ನಯ ಬದಿಯಲಿ ಇಲ್ಲಿ?
ಎನೆ ಮಾರ್ನುಡಿದನು: 'ಓ! ಎನ್ನರಸನೆ!
ಕಾಯ್ವೆ ನಿಮ್ಮನು ಒಮ್ಮನದಲ್ಲಿ!'

೮

"ಯಾವನು ಒಡೆಯನ ಏನೇ ಬೆಲೆಬಹ
ಒತವೆಗು ಅವನನೆ ಮಸೆದೋಡನ್ನೊ,
'ನಚ್ಚಿನ ಸೇವಕ' ನೆಂಬುವ ಬಿರುದಿಗೆ
ಅಂತಹನೊರ್ವನೆ ಸರಿ ತಕ್ಕವನು!"

* ಶ್ರೀ. ಆರ್. ಸಿ. ಟ್ರೆಂಚ್ (R. C. Treanch) ಅವರ "The Spilt Pearls" ಎಂಬ ಕವನದ ಅನುವಾದ.

ಸಾಹಿತ್ಯ ವಿಹಾರ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ಕಲಂಕ' ಎಂಬ ಸಣ್ಣಕತೆಯನ್ನು ವಿಮರ್ಶಿಸಿ ಐದು ಜನರು ಬರಹಗಳನ್ನು ಕಳುಹಿಸ್ದಾರೆ. ಬರಹಗಳು ಬಂದ ಅನುಕ್ರಮ ಹೀಗಿದೆ:

೧. ಶ್ರೀ. ಕೆ. ನಾರಾಯಣನ್, ಕಾಮರ್ಸ್ ಕಾಲೇಜ್, ಹುಬ್ಬಳ್ಳಿ. ೨. ಶ್ರೀ. "ಮುರದೇವ" ಬಿ. ಎ. ಕೆ. ಇ. ಟೀಚರ್ಸ್ ಕಾಲೇಜ್, ಧಾರವಾಡ. ೩. ಶ್ರೀ. ವಿ. ಎ. ಗಾಡಗೀಳ, ಎಂಜನಿಯರಿಂಗ್ ಕಾಲೇಜ್, ಪುಣೆ. ೪. ವಿದ್ವಾನ್ ಕೆ. ಶ್ರೀನಿವಾಸ ಶರ್ಮಾ 'ವಿಶಾರದ' ಕಾಸರಗೋಡು. ೫. ಶೀ. ಎಲ್. ವಿ. ಜೋಶಿ ಬಿ. ಎ., ಬಿ. ಇಡಿ. ಕೂಡ್ಲಿಗಿ.

ಎಲ್ಲ ವಿಮರ್ಶೆಗಳನ್ನೂ ಸಂಪಾದಕ ಮಂಡಲಿಯೇ ಓದಿ ತನ್ನ ನಿರ್ಣಯವನ್ನು ಹೀಗೆ ಕೊಟ್ಟಿದೆ:

'ಐದು ವಿಮರ್ಶೆಗಳು ಏಕೇ ಆದರೂ ಎಲ್ಲ ವಿಮರ್ಶೆಗಳೂ ಒಳ್ಳೆಯವೇ ಆಗಿವೆಯೆಂದು ಹೇಳಬಹುದು. ಕತೆಯಲ್ಲಿಯ ಗುಣ-ದೋಷಗಳ ವಿಚಾರವನ್ನು ಚರ್ಚಿಸುವಾಗ, ಎಲ್ಲ ವಿಮರ್ಶಕರದೂ ಏಕಾಭಿಪ್ರಾಯವಾಗಿರುವುದು ಸಮಾಧಾನದ ಸಂಗತಿ. ಶ್ರೀ. ಎಲ್. ವಿ. ಜೋಶಿ ಬಿ. ಎ., ಬಿ. ಇಡಿ. ಅವರ ವಿಮರ್ಶೆ ಉತ್ತಮವಾಗಿದೆಯಾದರೂ, ನಿಯತ ಪುಟಸಂಖ್ಯೆಯನ್ನು ಮೀರುವಷ್ಟು ದೀರ್ಘವಾಗಿದೆ. ಶ್ರೀ. ವಿದ್ವಾನ್ ಕೆ. ಶ್ರೀನಿವಾಸ ಶರ್ಮರ ಬರಹದಲ್ಲಿ ವಿಮರ್ಶೆಗೆ ಬೇಕಾಗುವಂತಹ ಹದಗೊಂಡ ಶಬ್ದ-ಶೈಲಿಗಳನ್ನು ಕಾಣಬಹುದು. ಮಿಕ್ಕವರು ನಿಜವಾದ ಸವಿಗಾರರಿರುವರಾದರೂ, ಅನುಭವಿಸಿದ ಸವಿಯನ್ನು ಉಚಿತವಾದ ಭಾಷೆಯಲ್ಲಿ ಮೂಡಿಸಿ ತೋರಿಸುವ ರೂಢಿ ಅವರಿಗೆ ಹೆಚ್ಚು ಬೇಕು.

ಇದೊಂದು ಮಾದರಿಯ ಕತೆ: ಇದರಲ್ಲಿ ಕಥಾವಸ್ತುವಿನ, ಪಾತ್ರಪರಿಪುಷ್ಟಿಗಳಿಗಿಂತ ಹಿನ್ನೆಲೆಯ ವಾತಾವರಣದ ಚಿತ್ರಣದ ಕಡೆಗೆ ವಿಶೇಷ ಲಕ್ಷ್ಯಕೊಡಲಾಗಿರುವುದು. ಅತಿಪೂರ್ವದಲ್ಲಿಯ ಯುದ್ಧಕಾಲದ ಪರಿಸ್ಥಿತಿಯೂ ಸಬ್‌ಮರಿನಿನ ಪ್ರಯಾಣದ ಅನುಭವವೂ ಇದರಲ್ಲಿ ಕುತೂಹಲಕಾರಿಯಾಗಿರುವದೇ ಕತೆಯ ವೈಶಿಷ್ಟ್ಯ.

ಈ ವಿಭಾಗದಲ್ಲಿ ಈ ಸಲ ವಿದ್ವಾನ್ ಕೆ. ಶ್ರೀನಿವಾಸ ಶರ್ಮರ ವಿಮರ್ಶೆಯನ್ನೇ ಮುದ್ರಿಸಬಹುದು, ಮುಂದಿನ ತಿಂಗಳಿಗಾಗಿ ಈ ಸಂಚಿಕೆಯಲ್ಲಿ ಪ್ರಕಟವಾದ 'ಜೀರ್ಣೋದ್ಧಾರ' ಎಂಬ ನಾಟಕವನ್ನಾಗಲಿ, 'ಅಡಿಗೆಯನಳು' ಎಂಬ ಕತೆಯನ್ನಾಗಲಿ ವಿಮರ್ಶೆಗೆ ತೆಗೆದುಕೊಳ್ಳಬೇಕು.

ಕಲಂಕ

(ವಿಮರ್ಶೆ)

ಶ್ರೀ. ಕೆ. ಎಸ್. ಶರ್ಮಾ ವಿದ್ವಾನ್
ಕಾಸರಗೋಡು ದ. ಕ.

ನೇತಾಜಿಯವರು ಸ್ಥಾಪಿಸಿದ ಆಝಾದ್ ಹಿಂದ್ ಸರಕಾರದ ವಾತಾವರಣದ ಹಿನ್ನೆಲೆಯಲ್ಲಿ, ಒಂದು ಸ್ವಾರ್ಥಜೀವನದ ಜಾಗೂ ಮತ್ತೊಂದು ನಿಸ್ವಾರ್ಥ ಜೀವನದ ಚಿತ್ರವನ್ನು ಸ್ವರ್ಗ-ನರಕ ಸ್ಥಾನ ಸಾದೃಶ್ಯದಿಂದ ರೂಪಿಸಲು ಲೇಖಕರು ಯತ್ನಿಸಿದ್ದಾರೆ. ಪಾಪಕ ಮಾರ್ಗಾನುಯಾಯೀ ಪುರುಷನ-ತನ್ನಲ್ಲಿ ಬೀಡುಬಿಟ್ಟ ಹೇಡಿತನವನ್ನು ಹೊರತೋರಿಸಿಕೊಳ್ಳದೆ, ತನ್ನ ಬದುಕನ್ನುಳಿಸಲು ಯಾವ ಮಾರ್ಗವನ್ನನುಸರಿಸುವನೆಂಬ ಚಿತ್ರವನ್ನು-ಲೇಖಕರು ಯುಸುಫ್ ಖಾನನ ವ್ಯಕ್ತಿಚಿತ್ರಣದಲ್ಲಿ ಅಳವಡಿಸಿ ರೂಪಿಸಲು ಯತ್ನಿಸಿದ್ದಾರೆ.

ಒಂದು ಸಮಗ್ರಜೀವನದ ಚಿತ್ರವನ್ನು ಕಾದಂಬರಿಯು ಕೊಡುವುದಾದರೆ, ಅದೇ ಜೀವನದ ಕೆಲವು ಅಂಶಗಳನ್ನು ರೂಪಿಸುವ ಕುಶಲತೆ ಸಣ್ಣಕಥೆಗಿರಬೇಕು. ಇಂತಹ ಕತೆಗಳ ಆದಿ-ಮಧ್ಯಗಳು-ಅಂತ್ಯದೊಡನೆ ಸರ್ವವಿಧದಿಂದಲೂ ಕೊನೆಗೊಂದಿರಬೇಕೆಂದು ಮಾತ್ರವಲ್ಲ; ಅವು ಒಂದು ಅನಿರೀಕ್ಷಿತ ಇಲ್ಲವೆ ಅನ್ಯಾದೃಶ ಕೊನೆಯಿಂದ ಓದುಗನ ಭಾವತಂತಿಯನ್ನು ಮಿಡಿಯಬೇಕು. ವಿವಿಧನಾದಸಮ್ಮಿಲನದ ಮಾಧುರ್ಯದಲ್ಲಿ ತಾನೆತ್ತಿಕೊಂಡ ಕಥಾವಸ್ತುವಿನ ಜೀವನವನ್ನು ಓದುಗನೆದೆಯಲ್ಲಿ ತೇಲಿಸಬೇಕು. ಅಂದರೆ ಒಂದು ಸುಂದರಚಿತ್ರವು ಲಲ್ಪಾಲಾವಧಿಯಲ್ಲಿ ರೂಪಿತವಾಗಿ ವಾಚಕನ ಮಾನಸೋಲ್ಲಾಸಕ್ಕೆ ನೆರವಾಗಬೇಕು; ಇಲ್ಲವೆ ವಿಚಾರೋದ್ಬೋಧಕ್ಕೆ ಜಿಳಕಾಗಬೇಕು. ಆಗ ಮಾತ್ರ ಲೇಖಕನು ಕೃತಾರ್ಥನಾಗುವನು.

"ಬ್ರಿಟಿಷ್ ಸೈನ್ಯಖಾತೆಯಲ್ಲಿದ್ದ ಯುಸುಫ್‌ಖಾನನೆಂಬ ಸೈನಿಕನು ತನ್ನ ಇಬ್ಬರು ಸಂಗಡಿಗರೊಡನೆ, ಜಪಾನರಿಂದ ಸೆರೆಹಿಡಿಯಲ್ಪಟ್ಟು, ಕೋಲಾಲಂಪೂರಿನಲ್ಲಿ ಆಜಾದ್ ಹಿಂದ್ ಸರಕಾರದಲ್ಲಿ-

ಸೇರಿಸಲ್ಪಡುತ್ತಾನೆ. ಭಾರತದಲ್ಲಿ ಒಕ್ಕಟ್ಟನ್ನು ಹಾಳುಗೆಡಹುವ ಬ್ರಿಟಿಷರನ್ನು ಹೊಡೆದಟ್ಟಲು, ಭಾರತದಲ್ಲಿ ಏಕ್ಯತೆಯನ್ನುಳಿಸಲು, ಅಝಾದ್ ಸರಕಾರವು ಸೈನಿಕರಿಗೆ ಶಿಕ್ಷಣವೀಯುತ್ತಿದೆ. ಅದರಿಂದ ಪಾರಾಗಲು ಯುಸುಫ್‌ಖಾನನು, ಸರಕಾರದ ಯಾವ ಮರ್ಮವನ್ನು ಅಂತೂ ಏನೋ, ಒಂದು ದಿನ ಮಧ್ಯಾಹ್ನ ತನ್ನ ಗೆಳೆಯರೊಡನೆ ಅಡಿದ "ನಾಡಿನ ರಕ್ಷಣೆಗಾಗಿ ರಕ್ತದ ಕಾಣಿಕೆ ಕೊಡಲು ಸಿದ್ಧರಾಗಿದ್ದೇವೆ." ಎಂಬ ಮಾತಿನಿಂದ ಕರ್ನಲ್ ಭೋಸಲೆಯವರ ನೆಚ್ಚಿಗೆ ಪಾತ್ರನಾಗಿ "ಭಾರತದಲ್ಲಿ ಒಕ್ಕಟ್ಟನ್ನು ಹಿಂದೂ ಮುಸ್ಲಿಂ ಏಕ್ಯತೆಯ ತಳಹದಿಯಲ್ಲಿ ಸಾಧಿಸಲು" ಭಾರತಕ್ಕೆ ಕಳುಹಲ್ಪಡುತ್ತಾನೆ. ಜಪಾನ ಹಡಗಿನಿಂದ–ಅಝಾದ್ ಸರಕಾರವು ಇತ್ತ ಸಲಕರಣೆಗಳೊಡನೆ–ಬಂದಿಳಿದ ಆ ಮೂವರು ಪುನಃ ಬ್ರಿಟಿಷ್ ಸರಕಾರವನ್ನೆ ಆಶ್ರಯಿಸುವರು. ಬ್ರಿಟಿಷ್ ಸೈನ್ಯದಲ್ಲೇ ಇದ್ದ ಯುಸುಫ್‌ಖಾನನ ತಮ್ಮನಾದ ಹಸನ್‌ನು ಅಣ್ಣನ ವಂಚನೆಯನ್ನು ಸಹಿಸಲಾರದೆ, ಅತನು ಬಾನುಲಿಯಿಂದ ಮಾತನಾಡುವ ಅಝಾದ್ ಸರಕಾರದ ಗುಟ್ಟನ್ನು ವಂಚನೆಯೊಡನೆ ಬಿತ್ತರಿಸುವ ಕಾಲದಲ್ಲಿ ಸಹಿಸಲಾರದ ಸಂಕಟದಿಂದ ಉನ್ಮತ್ತನಾಗಿ, ತನ್ನ ಕೈಯಲ್ಲೇ ಇದ್ದ ಪಿಸ್ತೂಲಿನಿಂದ ಬ್ರಿಟಿಷ್ ಸೈನ್ಯದ ಮೇಜರ್ ಅಲೆಕ್ಸ್‌ಾಂಡರ್ ಸಾಹೇಬರನ್ನೂ ಜ–೬ ಇತರ ಅಧಿಕಾರಿಗಳನ್ನೂ ಬಲಿ ತೆಗೆದು, ತಾನು ಮೇಜರನ ಗುಂಡಿಗೆ ಬಲಿಯಾಗಿ "ನನ್ನ ಅಣ್ಣನು ಮನೆತನಕ್ಕೆ ಹಚ್ಚಿದ ಕಲಂಕವನ್ನು ನಾನು ತೊಳೆದೆ; ಜಯ ಹಿಂದ್" ಎಂದೆಂದು ಸಾಯುವನು. 'ವಿಶ್ವಾಸ ಘಾತವು' ಧರ್ಮಬಾಹಿರವೆಂಬ ನೀತಿಯನ್ನು ಹಸನ್‌ನು ಸಾರಿಸತ್ತನು. "ಯಾವ ಸರಕಾರವಾದರೇನು? ಹೇಡಿಯಾಗಿ ವಿಶ್ವಾಸ ಘಾತಕನಾಗಿ ಜೀವವನ್ನುಳಿಸಲು ಹೊರಡುವುದು ಅವನು ನಂಬಿದ, ಅವನಿಗಿರುವ ಧರ್ಮಕ್ಕೆ ತೀರಾ ಒಪ್ಪದ ಮಾತು. ಅಣ್ಣನು ಜಪಾನಿಂದ ಪಾರಾಗಿ ಬಂದಿದ್ದರೆ. ಅದು ಹಸನ್‌ನಿಗೆ ಸಂತೋಷದ ಮಾತಾಗುತ್ತಿತ್ತು; ಆದರೆ ಅಣ್ಣನು ಬಂದುದು ಅಝಾದ್ ಸರಕಾರದ, ವಿಶ್ವಾಸವನ್ನು ಕೆಡಿಸುವುದರೊಡನೆ—ಸ್ವಧರ್ಮವನ್ನು ಅಲ್ಲಗಳೆದು! ಇದನ್ನೆಂತು ಸಹಿಸಬಲ್ಲನು ಹಸನನು?

"ಕಲಂಕ"ವೆಂಬ ಶಿರೋ ಲೇಖನವನ್ನವಲಂಬಿಸಿ ಬೆಳೆದು ಬಂದ ಈ ಕತೆಯು, ಹಸನ್‌ನ ಮರಣದ ಅಸಂಪೂರ್ಣ ಹಾಗೂ ಅಪರಿಪಕ್ವ ಕಥಾಘಟನೆಯಲ್ಲಿ ತುಸು ಕುಸಿದು ಬೀಳುತ್ತಿದೆ ಸ್ವಾರ್ಥ ಜೀವನದ ಪರಮಾವಧಿಯಲ್ಲಿ ನಿಂತ ಯುಸುಫ್‌ಖಾನನ ಚಿತ್ರವು ಯಾವ ದಿಸೆಯಲ್ಲಿ ಈ ಕತೆಯಲ್ಲಿ ಮೂಡಿ ಬಂದಿದೆಯೋ, ಅದೇ ರೀತಿಯಲ್ಲಿ ಹಸನ್‌ನ ವ್ಯಕ್ತಿಚಿತ್ರಣದ. ಹಾಗೂ ದೇಶಪ್ರೇಮದ ಒಲವಿನ ಗತಿಯು ಮೂಡಿ ಬಂದಿಲ್ಲವೆಂಬುದು ಖಂಡಿತ. ಹಸನ್‌ನ ಇತಿ ವೃತ್ತವು ಈ ಕತೆಯ ಪೂರ್ಣತೆಗೆ ಸಾಕಷ್ಟು ಬೇಕಿತ್ತು. ಕಥಾರಂಭವು ಸಿಂಗಾಪೂರ–ಕೋಲಾಲಂಪೂರಿನ ಕತೆಯನ್ನು ಹೇಳುವ ಬದಲು, ಹಸನ್ ಹಾಗೂ ಯುಸುಫರ ಪ್ರೇಮ–ಬಾಂಧವ್ಯದ, ಇಲ್ಲವೆ—ಸಿಂಗಾಪೂರಕ್ಕೆ ಹೋಗುವ ದಿನದ—ಳಗಲಿಕೆಯ ವೇದನೆಯನ್ನಿನೇಶದೊಂದಿಗೆ ಸುರುವಾಗುತ್ತಿದ್ದರೆ, ಈ ಕತೆಯ ಕೊನೆಗೊಂದು, ಕಳೆ ಬರಬಹುದಿತ್ತೋ, ಏನೋ! ಅಂತೂ ಈ ಕತೆಯ ಆರಂಭವು ಕಥೆಗುಚಿತವಾದ ರೀತಿಯಲ್ಲಿರದೆ, ವಸ್ತುಜ್ಞಾನಕ್ಕಿಂತ ಪೀಠಿಕೆಯಂತಿದೆಯೆಂಬದು ಕಂಡಿತಕವಾಯಿತು ಮುಗಿಸಿ ದಣಿದು ಬಂದ ಆ ಮೂವರು "ಅನ್ನವಿಲ್ಲವೆಂದು, ಹವಾಲ್ದಾರನು ಹೇಳುವಾಗ ತಾಳ್ಮೆಯಿಂದಿರುವುದೂ, ತಮ್ಮ ಉದಾರ ಭಾವನೆಯನ್ನು ಪ್ರಕಟಿಸುವುದೂ, ಅದನ್ನು ಕೇಳಿ ಒಡನೆ ಕರ್ನಲ್ ಸಾಹೇಬರು ಮೆಚ್ಚುವುದೂ ಮುಗಿದು ಹೋಗಿದ್ದ ಅನ್ನವನ್ನು ಪುನಃ ಕೊಡಿಸುವದೂ–ಸಂದರ್ಭವನ್ನು ಒದಗಿಸುವದೂ–ಇವೆಲ್ಲವೂ ಘಟನಾವಿರುದ್ಧ ಸನ್ನಿವೇಶವಾಗಿ ಅಗದಿರಬೇಕಾಗಿದ್ದರಿ, ಲೇಖಕರು ಮೋಸಮಾಡಬಯಸಿದ್ದ ಯುಸೂಫ್‌ಖಾನ್ ಹಾಗೂ ಅವನ ಗೆಳೆಯರಿಗೆ ಅಝಾದ್ ಸರಕಾರದ ಮರ್ಮವನ್ನರಿವ ಬಗೆಯ ಪ್ರಸಂಗವನ್ನು ಕೈಕೊಳ್ಳಬೇಕಿತ್ತು. ಅದನ್ನರಿಸಿಕೊಳ್ಳದ ಈ ಸಂದರ್ಭವು ಪುಷ್ಕಲವಾಗಿಲ್ಲ. ಅಝಾದ್ ಸರಕಾರದ ಬಲೆಯಿಂದ ಬಿಡಿಸಿಕೊಳ್ಳಲು, ಬೇಕೆಂದೇ ಉಪಾಯ ಹೂಡಿದ ಆ ಮೂವರ ಬೂಟಾಟಿಕೆಯ ಮಾತುಗಳಿಗೆ ನಂಬಿ ಬೀಳುವ ಅಝಾದ್ ಸರಕಾರವು ಅನ್ನವಿಲ್ಲವೆಂದು ಬಂಗ್ಲೆಯನ್ನು ತೋರಿದ ಬಳಿಕ "ಚಲೋ ದಿಲ್ಲಿ–ದಿಲ್ಲಿ ಚಲೋ" ಎಂಬ ಮಾತನ್ನು ಕೇಳಿ ಅನ್ನವನ್ನು ಕೊಡಿಸುವ ಸ್ವಾರ್ಥ ನ್ಯಾಯದ ಸಂದರ್ಭಕ್ಕೆ ಅವಕಾಶ ಬರುವಂತೆ ಕಥೆಯನ್ನು ಹೊಂದಿಸಿಕೊಂಡುದು ಸರಿಯಲ್ಲ!

ಮುಂದೆ ಸಬ್‌ಮರೀನಿನಲ್ಲಿ ಕಳೆದ ದಿನಗಳೂ, ಜಪಾನೀ ಕಮಾಂಡರ್ ಮುಸಾಕಾನೊಡನಾದ ಮಾತುಗಳೂ, ಕಥಾಗರ್ಭದಲ್ಲಿದ್ದು–ತೊಡಗಿಸದೆ ಸಾಗುವ ಸನ್ನಿವೇಶಗಳು. ಈ ಸನ್ನಿವೇಶದಲ್ಲಿ ಲೇಖಕರು ಯುಸುಫ್‌ಖಾನನಲ್ಲಡಗಿರುವಾದ ಭೀತಿಯನ್ನು ವ್ಯಕ್ತವಾಗಿ ಚಿತ್ರಿಸಿದ್ದಾರೆ. ಖಾನನಂತಹ ಹೇಡಿಗಳು ಹಾಗಾಗುವದರಲ್ಲಿ ಸಂಶಯವಿಲ್ಲ. "ನೀರ ಮೇಲೆಯೇ ಸಾಗುತ್ತಿರುವ ಸಬ್‌ಮರೀನಿನ್ನು ಕಂಡು ಖಾನನ ಪ್ರಶ್ನೆಗಳು, ಕಲಾತ ಸಂಸ್ಥಾನವ ಕಡಲಿನ ತುವನ್ನೈದಬೇಕಾದ ಪ್ರಸಂಗವನ್ನು ಮುಸಾಕಾನು ಹೇಳತ್ತಿದ್ದಾಗ, ಎದೆ ಡವ ಡವ ಹೊಡೆದುಕೊಂಡದೇತಿ–ಇವು ಅಧೈರ್ಯಕ್ಕೆ ಸಾಕ್ಷಿಗಳಾಗಿವೆ; ಆದರೆ ಅವೇ ಖಾನನು "ದೋಣಿಯುವನೊಬ್ಬನಷ್ಟು ಇವರು ಮೂವರ ಸುಗಮನಕ್ಕಾಗಿಯೇ ಮುಸಾಕನು ಕೊಲ್ಲಲು ಯತ್ನಿಸಿದಾಗ" ಬಂದೂಕಿಗೆ ಅಡ್ಡವಾಗಿ ನಿಂತು "ಅವನೂ ಒಬ್ಬ ಭಾರತೀಯ, ಅವನ ಜೀವ ತೆಗೆಯಲು ಬಿಡಲಾರೆನು" ಎಂದು ಎನ್ನುವಾಗ ನಾವು ಬೆರಗಾಗುತ್ತೇವೆ. ಜೀವಗಳೈರಾಗಿ ಪಾರಾಗಬೇಕೆಂದು ಬಗೆದಿದ್ದ ಆ ಮೂವರ ಪರವಾಗಿ ಖಾಶಕ್ತು ಮುಸಾಕನೆದುರಲ್ಲಿ ಹಾಗೆ ಮಾತನಾಡಿದುದು ಒಪ್ಪುವ ಮಾತೇ? ಒಂದು ಸರಕಾರದ ನ್ಯಾಯವರ್ತನೆಯನ್ನು ತೀರಾಕೆಡಿಸಿ–ಸ್ವಾರ್ಥದಿಂದ ಬದುಕುವ ಲಾಲಸೆಯಿಂದ ಬರುವ ಆ ಮೂವರು, ಸರಿಪಡಿಸಿದ ರಬ್ಬರ ದೋಣಿಗಳನ್ನು ನಂಬುವುದಕ್ಕಿಂತ–ಅದೇ ದೋಣಿಯನ್ನು ನಂಬುವುದು ಲೇಸಿತ್ತು. ಇಲ್ಲಿ ಅವರು ಈ ಬಗೆಯ ಕಡುವರ್ತನೆಯನ್ನು ಮಾಡಿ–ತಮ್ಮ ಉದಾರವರ್ತನೆಯಿಂದ ಮುಸಾಕನನ್ನು ಮೆಚ್ಚಿಸುವ ಅವಶ್ಯಕತೆಯಿಲ್ಲವಾಗಿತ್ತು.

ಮುಂದಿರಿಕ್ರಿಯೇತನ್ ತಂಬುವಿನಲ್ಲಿ ಆಕಾಶವಾಣೀ ಶ್ರವಣವು. ಹಸನನಿಗೆ ಅಣ್ಣನ ಮೇಲಿದ್ದ ಪ್ರೀತಿಯೂ, ಅವನಲ್ಲುಂಟಾಗುವ ತಿರಸ್ಕಾರವೂ ಅಂತ್ಯಭಾಗದಲ್ಲಿ ಕೊನೆಗೊಳ್ಳುವ ಈ ಘಟನೆಯು ಸುಂದರವಾಗಿದೆಯೆನ್ನಲು ಅಡ್ಡಿಯಿಲ್ಲ. ಆಕಾಶವಾಣಿಯಿಂದ ಕೇಳಿಸಿದ ಭಾಷಣವು ಯುಸುಫ್‌ಜಾನನ ಚಿತ್ರಣಕ್ಕೆ ಸಹಜವಾಗಿದೆ. ವಿಶ್ವಾಸಘಾತುಕನ ಭಾಷಣದ ಅಂತ್ಯವು ಆಗುವ ಮೊದಲೇ ಹಸನ್‌ನ ಪಿಸ್ತೂಲು ಗುಂಡನ್ನು ಹಾರಿಸಿದುದು ಹಸನ್‌ನ ಧರ್ಮ–ಹಾಗೂ ದೇಶ ಪ್ರೀತಿಗೆ ಸಾಕ್ಷಿಯಾಗಿದೆ. ಅಂತೂ ಈ ಕಥಾಭಾಗದಲ್ಲಿ ಸರಿಸ್ಫುಟವಾಗಿ ಕಳೆಗೊಂಡ ಒಂದು ಭಾಗವೆಂದರೆ ಸುಂದರವಾದ ಒಂದು ಕೊನೆಯ ಭಾಗ. ಈ ಭಾಗಕ್ಕೆ ಉಳಿದ ಭಾಗಗಳೂ ತುಂಬ ಸಹಕಾರಿಗಳಾಗಿರುತ್ತಿದ್ದರೆ ಇದು ಒಂದು ಉತ್ತಮಕತೆ ಆಗುತ್ತಿತ್ತು.

ವಿಶಿಷ್ಟ ರೂಪದಲ್ಲಿಲ್ಲವಾದರೂ—ಭಾಷೆಯು ಸುಲಭಗ್ರಾಹ್ಯವಾಗಿದ್ದು ಸನ್ನಿವೇಶಗಳೊಂದಿಗೆ ಹೊಂದಿ ಕುಸಿಯದೆ ಬಂದಿದೆ. ಕಥಾವಸ್ತುವು ವಿಶಿಷ್ಟವಾಗಿದ್ದರೂ, ಸಣ್ಣಕಥೆಯೆಂದೆಯೆನಿಸಿಕೊಂಡ ಈ ಕಲಂಕದಲ್ಲಿ–ರೂಪಿಸಿದ ಬಗೆಯಲ್ಲಿ– "ಸಾಮಾನ್ಯ"ವೆಂದೆನ್ನುವ ಮಟ್ಟದಲ್ಲಿಯೆ ನಿಂತಿದೆಯೆಂದು ತೋರಿಬರುತ್ತಿದೆ. ಸ್ವಾರ್ಥಜೀವನದಲ್ಲಿ ನರಕವು ತುಂಬಿ ಬಂದಂತೆ–ಸ್ವರ್ಗಜೀವನದಲ್ಲಿ ನಿಃಸ್ವಾರ್ಥ ಜೀವನದ ಗತಿಯು ಸಮರಸವಾಗಿ ಮೂಡಿಬರಲ್ಲಿಲ್ಲವೆಂದು ಹೇಳಬೇಕು ಕಥಾವಸ್ತುವಿಗೆ ಪ್ರಾಶಸ್ತ್ಯವನ್ನಿತ್ತಂತೆ ಮುಂದೆ ಲೇಖಕರು ಕಥನ ಕೌಶಲ ಹಾಗೂ ಸನ್ನಿವೇಶರಚನೆಗೂ ಮನಗೊಟ್ಟರೆ ಚೆನ್ನಾಗಬಹುದು.

ಪುಸ್ತಕವಿಮರ್ಶೆ

ಇಸ್ಪೀಟ್ ಡ್ಯೂಟಿಬಿಲ್ :

(ವಾರಸಾಕರ ಮುಸೂದೆ). ಬರೆದವರು ಶ್ರೀ. ವಿ. ಎಸ್. ಕುಲಕರ್ಣಿ ಬಿ. ಎ., ಎಲ್‌ಎಲ್. ಬಿ. ಅಡ್ವೋಕೇಟ್ ಪುಣೆ. ಪ್ರಕಾಶಕರು. ಲಾ ಬುಕ್ ಹೌಸ್, ಪುಣೆ. ಪು. ೧೦೮ ಬೆಲೆ ೩ ರೂಪಾಯಿ.

ಈ ಪುಸ್ತಕವು ಇಂಗ್ಲಿಶ್‌ಭಾಷೆಯಲ್ಲಿ ಬರೆಯಲಾದುದು ಇದೆ.

ಪತ್ರಿಕೆಗಳನ್ನು ಓದುತ್ತಿರುವವರಿಗೆ ಈಗ ಸಂಪತ್ತಿನಲ್ಲಿ ಚರ್ಚೆಗೆ ಬಂದಿದ್ದ ಈ ವಾರಸಾಕರ ಮುಸೂದೆಯ ಬಗ್ಗೆ ಸ್ಥೂಲಮಾನದಿಂದ ತಿಳಿವಳಿಕೆಯಾಗಿರಲು ಸಾಕು. ಈ ಪುಸ್ತಕವು ಮುಸೂದೆಯನ್ನು ಕಲಮುವಾರ ಚರ್ಚಿಸಿ, ಸಮಾಜದ ಮೇಲೆ ಯಾವ ಬಗೆಯ ಪರಿಣಾಮವುಂಟು ಮಾಡುವುದು ಎಂಬುದನ್ನು ತೋರಿಸುತ್ತದೆ. ಸಾಮಾನ್ಯ ನಾಗರಿಕರಿಗೂ ವಕೀಲರಿಗೂ ಉಪಯುಕ್ತವಾದ ಗ್ರಂಥವಾಗಿದೆ.

ಸಮಾಜದಲ್ಲಿ ಸುಖ ಶಾಂತತೆ ಸಮಾಧಾನಗಳು ನೆಲಸಬೇಕಾದರೆ, ಆರ್ಥಿಕ ವಿಷಮತೆಯು ದೂರವಾಗಬೇಕು. ನಾಗರಿಕರ ಸಾಮಾನ್ಯ ಜೀವನಮಟ್ಟವು ಹೆಚ್ಚಾಗುವುದರ ಜೊತೆಗೆ ವ್ಯಕ್ತಿ-ವ್ಯಕ್ತಿಗಳಲ್ಲಿ ಆರ್ಥಿಕ ವಿಷಮತೆಯನ್ನು ದೂರಮಾಡಲು ಅನೇಕ ಸಾಧನಗಳು ಇವೆ. ಅವುಗಳಲ್ಲಿ ಕರಭಾರ ಹೇರುವುದು ಒಂದು ಮುಖ್ಯ ಸಾಧನ. ಆದಾಯ ಕರ ಹೇರುವುದರಿಂದ ಸರಕಾರದ ಬೊಕ್ಕಸಕ್ಕೆ ಸಂಪತ್ತು ದೊರೆಯುವುದು. ಆದಾಯಕರದ ವಿಚಾರ ಬಹುಜನರಿಗೆ ತಿಳಿದ ವಿಷಯ. ವಾರಸಾಕರವು ಇನ್ನೊಂದು ಸಾಧನ. ಇದು ನಮ್ಮ ದೇಶದಲ್ಲಿ ಪ್ರಥಮತಃ ಪ್ರಾರಂಭವಾಗುತ್ತಿದೆ.

ಈ ಕರ ಹೇರುವುದರಲ್ಲಿ ಒಂದು ಹಿನ್ನೆಲೆಯ ವಿಚಾರವಿರುವುದು. ಸಂಪತ್ತಿನ ಉಪಭೋಗ ಮಾಡುವ ಅಧಿಕಾರ ಸಾಮಾನ್ಯವಾಗಿ ಗಳಿಸುವವನಿಗೆ ಇದೆ. ಯಾರೋ ಯಾವುದೋ ಕಾಲಕ್ಕೆ ಗಳಿಸಿದ ಸಂಪತ್ತನ್ನು ಅಂತಹರ ಮಕ್ಕಳು-ಮೊಮ್ಮಕ್ಕಳು ಎಂಬ ಕಾರಣಶ್ಯಾಗಿ ಮಾತ್ರ ಉಪಭೋಗಿಸುವುದು ಪ್ರಜಾಪ್ರಭುತ್ವದ ತತ್ತ್ವಕ್ಕೆ ವಿರುದ್ಧ. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ನಾಗರಿಕನೂ ತನ್ನ ಭಾಗದ ಕಾರ್ಯವನ್ನು ಮಾಡಲೇಬೇಕು. ಸಾಕಷ್ಟು ಸಂಪತ್ತು ಕೂಡಿಬಿದ್ದಿದೆಯೆಂದು ಆಲಸಿಗನಾಗಿ ಸಂಪತ್ತನ್ನು ಹಾಳುಮಾಡುತ್ತ ಕೂಡುವುದು ವೈಯಕ್ತಿಕವಾಗಿಯೂ ಸಾಮಾಜಿಕವಾಗಿಯೂ ವಿಘಾತಕವಾದುದು. ಆದುದರಿಂದ ಯಾವ ಸಂಪತ್ತನ್ನು ಗಳಿಸುವ ಕಾರ್ಯದಲ್ಲಿ ಯಾರು ಪ್ರತ್ಯಕ್ಷವಾಗಿ ಅಪ್ರತ್ಯಕ್ಷವಾಗಿ ದುಡಿದಿರುವುದಿಲ್ಲವೊ, ಆದರ ಲಾಭದ ಸುಖ ಪಡೆಯಲು ಅವರಿಗೆ ಅಧಿಕಾರ ಹುಟ್ಟದು. ಬಂಡವಲುವಾದದ ಸಮಾಜರಚನೆಯಲ್ಲಿ ಕೂಡಿಬೀಳುವ ಸಂಪತ್ತು ಶ್ರಮಿಕರ ಶೋಷಣದಿಂದಲೇ—ಇದು ಅಪ್ರತ್ಯಕ್ಷವಾಗಿರುವುದು — ಕೂಡಿಬೀಳುವುದಾದ್ದರಿಂದ, ಅದು ಕಾಲಾಂತರದಲ್ಲಿ ಅವರಿಗೆ ಮುಟ್ಟಬೇಕು. ಹಾಗೆ ಮುಟ್ಟುವಂತಾಗಬೇಕಾದರೆ ವಾರಸಾಕರ ಹೇರಿ, ಅದನ್ನು ಸರಕಾರದ ವಶಪಡಿಸಿಕೊಂಡು, ಸಾಮಾಜಿಕರಿಗೆ ಹೆಚ್ಚಿನ ಸೌಕರ್ಯ ಒದಗಿಸಲಾಗುವುದು. ಈ ಕರದ ರೀತಿಯಿಂದ ಕಾರ್ಯ ನಡೆದರೆ ಮುರು ನಾಲ್ಕು ತಲೆಮಾರು ದಾಟುದ ಹೊತ್ತಿಗೆ ಎಂತಹ ವೈಷಮ್ಯವುಳ್ಳ ಸಂಪತ್ತು ಕೂಡ ಸಾಮಾನ್ಯ ಮಟ್ಟಕ್ಕೆ ಇಳಿವುದು. ಅಷ್ಟುಮಟ್ಟಿಗೆ ಆ ಹೆಚ್ಚಿನ ಸಂಪತ್ತು ಸಮಾಜದ ಉಪಯೋಗಕ್ಕೆ ದೊರೆವುದು.

ಆದಾಯಕರವನ್ನು ಸರಕಾರದ ಕಣ್ಣು ತಪ್ಪಿಸಿ ಉಳಿಸಿಕೊಳ್ಳುವ ಅನೇಕ ವ್ಯಕ್ತಿಗಳು ಇರುವುವೆಂಬುದಕ್ಕೆ ಇತ್ತೀಚೆ ಪ್ರಕಟವಾದ ಸುದ್ದಿ ಸಂಗತಿಗಳು ಸಾಕ್ಷಿಯಾಗಿವೆ. ಆದಾಯಕರ ತಪ್ಪಿಸಿಕೊಂಡಂತೆ ವಾರಸಾಕರವನ್ನು ತಪ್ಪಿಸುವ ಹೆವ್ಯಾಸ ಕಂಡುಬರಬಹುದಾಗಿದೆ.

ತನ್ನ ಜೀವಮಾನದಲ್ಲಿಯ ವಿಲಾಸೀಜೀವನ ನಡೆಯಿಸಿ, ಸಾಯುವ ಕಾಲಕ್ಕೆ ಸಾಕಷ್ಟು ಸಂಪತ್ತು ಉಳಿಸದೇ ಹೋಗಬಹುದು. ಇದು ಜೀವನವನ್ನು ಹೋಗಲಾಡಿಸುವುದಲ್ಲದೆ, ಅಷ್ಟುಮಟ್ಟಿಗೆ ಸಂಪತ್ತು ಸಮಾಜದಲ್ಲಿ ವಿತರಣವಾಗಿಬಿಡುವುದು. ಇನ್ನು ತನ್ನ ಸಂಬಂಧಿಕರಿಗೆ ತನ್ನ ಜೀವಮಾನದಲ್ಲಿ ದಾನ-ದತ್ತಿಗಳನ್ನು, ಬಕ್ಷೀಸುಗಳನ್ನು ಕೊಡ ಬಹುದು. ಅದು ಕೂಡ ಒಳ್ಳೆಯದೆ. ಒಬ್ಬನ ಹತ್ತಿರ ಹೆಚ್ಚು ಸಂಪತ್ತು ಕೂಡಿಬೀಳುವ ಬದಲು, ಹತ್ತು ಜನರಲ್ಲಿ ವಿತರಣವಾಗುವುದು. ವಾರಸಾಹಕ್ಕು ಹುಟ್ಟಿದೇ ಇದ್ದವ್ಯಕ್ತಿಗಳಿಗೂ ಇವರಿಂದ ಲಾಭ ಮುಟ್ಟುವುದು. ಇದೂ ಒಂದು ಸಂಪತ್ತನ್ನು ಸಮಾಜದಲ್ಲಿ ವಿತರಣಮಾಡಿಸುವುದು. ಸಾರ್ವಜನಿಕ ಸಂಘ-ಸಂಸ್ಥೆಗಳಿಗೂ ದಾನಕೊಡುವ ವಿಚಾರವು ಬೆಳೆಯಬಹುದು. ಸರಕಾರದ ಸ್ವಾಧೀನವಾಗುವುದನ್ನು ತಪ್ಪಿಸಬೇಕೆಂದರೂ ಸಮಾಜದ ಸ್ವಾಧೀನವಾಗುವುದನ್ನು ಇದು ತಪ್ಪಿಸಲಾರದು. ಇದೇ ಇದರಲ್ಲಿರುವ ದೊಡ್ಡ ಗುಣ. ಆದರೆ ಇದನ್ನು ಮಾಡಲು ಮಾನವನಿಗೆ ಸಮತೂಕ ಬುದ್ಧಿಯೂ ಯೋಜನಾಬದ್ಧ ಜೀವನವೂ ಇರುವುದೂ ಅವಶ್ಯವಾಗಿದೆ. ಮರಣವು ಯಾವ ಕಾಲಕ್ಕೆ ಉಂಟಾಗುವುದು ಎಂಬುದು ತಿಳಿಯದುದರಿಂದ " ಅಕಾಲೋ ನಾಸ್ತಿ ಧರ್ಮಸ್ಯ " ಎಂಬ ಸೂತ್ರವನ್ನು ಕಾರ್ಯಾಚರಣೆಯಲ್ಲಿ ತರಿಸುವುದು ಈ ಕರವು,

ಉಳಿದ ದೇಶಗಳಲ್ಲಿಯ ಕರಭಾರವನ್ನು ನೋಡಿದರೆ, ನಮ್ಮ ದೇಶದಲ್ಲಿಯ ಕರದ ದರದ ಆಕಾರವು ಕಡಿಮೆಯದೆಂದೇ ಹೇಳಬೇಕು. ಆದರೂ ಸಮಾಜದಲ್ಲಿ ಕೆಲವೇ ಸಿರಿವಂತರಿದ್ದು ಬಹುಜನರು ಬಡಜರು ಆಗಿರುವ ಸಮಾಜದ ಸ್ಥಿತಿಯನ್ನು ಸುಧಾರಿಸಲು ಆವಶ್ಯಕವಾಗುವಷ್ಟು ಇದೆ. ಪ್ರಾರಂಭಾವಸ್ಥೆಯಲ್ಲಿ ಇದು ಹೀಗೆ ಇರುವುದೂ ಒಳ್ಳೆಯದೆ.

ಈ ಪುಸ್ತಕದಲ್ಲಿ ಉಳಿದ ಸಂಬಂಧಿಸಿದ ಕಾಯಿದೆಗಳಲ್ಲಿಯ ಎಂದರೆ ರಾಜ್ಯಶೋಟನೆ, ವಾರಸಾ ಕಾಯಿದೆ, ಹಿಂದೂ ಕಾಯಿದೆ, ಮುಂತಾದುವುಗಳಲ್ಲಿಯ ಸಂಬಂಧಿಸಿದ ಕಲಮುಕಟ್ಟೆಗಳನ್ನು ಕೊಡಲಾಗಿದೆ. ಆವುಗಳು ಯಾವ ಬಗೆಯಲ್ಲಿ ಪರಿಣಮಿಸಲ್ಪಡುವವು ಎಂದೂ ಸೂಚಿಸಲಾಗಿರುವುದರಿಂದ, ಒಟ್ಟಿನಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ಎಲ್ಲ ಕಾಯಿದೆಗಳ ವಿಷಯವೂ ಸಾಮಾಜಿಕ ಬದಲಾವಣೆಯ ಸೂಚನೆಯೂ ಇರುವುದರಿಂದ ಪುಸ್ತಕದ ಉಪಯುಕ್ತತೆ ಇನ್ನೂ ಹೆಚ್ಚು ಆಗುವುದು.

ಇಂತಹ ಪುಸ್ತಕವು ಕನ್ನಡದಲ್ಲಿಯೂ ಆಗುವುದು ಅಗತ್ಯವಿದೆ. ಇಂಗ್ಲಿಶ್ ಬಂದವರಿಗೆ ಇದರ ಉಪಯೋಗ ಹೆಚ್ಚಾಗುವುದು.

—ನೇರಂಗ

ಸಿಡಿದ ಕಿಡಿಗಳು

[ಸಂಕಲನ]

ಕುಂಜಾಲ್ ಶಾಂತಾರಾಮರ ಹೆಸರು ಹರಟೆಯ ಪ್ರಪಂಚದಲ್ಲಿ ತೀರ ಹೊಸದೆನಿಸಿದರೂ, ಅವರ ಹರಟೆಯ ನಿಪಯಗಳ ಅಯ್ಕೆ ನಮಗೆ ಯಾವ ರೀತಿಯಿಂದಲೂ ಹೊಸದಲ್ಲ. 'ಸಿಡಿದ ಕಿಡಿಗಳು' ಎಂಬ ಶೀರ್ಷಿಕೆ ಸೂಚಿಸುವಂತೆ ಈ ಹೊತ್ತಗೆಯಲ್ಲಿ ವಿವಿಧ ವಿಚಾರಲಹರಿಗಳಿವೆ. "ಇನ್ನು ಈ ಸಿಡಿದ ಕಿಡಿಗಳೆಲ್ಲವೂ ಸರ್ವಾಂಗಸುಂದರ ವಾದುವುಗಳೆಂದು ಹೇಳುವಷ್ಟು ದಿಟ್ಟತನ ತೋರಿಸದೆ, ಬೇಜಾರೆನಿಸಿದಾಗ ಕನ್ನಡಿಗರು ಓದಿ ಪರವಾ ಇಲ್ಲ ಅಂದುಬಿಟ್ಟರೆ ಸಾಕು," ಎಂಬ ಲೇಖಕರ ಮೊದಲುಮಾತಿನಲ್ಲಿ ಸೌಜನ್ಯದೊಡನೆ ಸತ್ಯಾಂಶವೂ ಸಾಕಷ್ಟಿದೆ. 'ಆಡು ಮುಟ್ಟದ ಗಿಡವಿಲ್ಲ' ಎಂಬ ಉಕ್ತಿಯಂತೆ ಕುಂಜಾಲರವರು ತಮ್ಮ ವಿಚಾರಕ್ಷೇತ್ರದಲ್ಲಿ ತಾರದ ವಿಷಯವೇ ಉಳಿದಿಲ್ಲವೆನ್ನಬಹುದು. ಆದರೆ ವಸ್ತುಗಳು ಅಸಂಖ್ಯ ಸಲ ತೀರ ಸಾಮಾನ್ಯವಾಗಿದ್ದು, ಹರಟೆಯ ಹೃದಯವನ್ನೇ ತೆರೆದು ತೋರಿಸುವವು. ಪ್ರಧಾನಿ ನಾನಾದರೆ ....?, ಮಹಾಭಾರತ ಯುದ್ಧ, ಸಾಹಿತಿ ಯಾಕೆ? ಜಾಹೀರಾತು—ಎಂಬುವು ವಿಚಾರಪ್ರಚೋದಕ ಬರೆಹಗಳೆನಿಸಿ, ಅಡುಗೆಯಲ್ಲಿ ಉಪ್ಪಿನಕಾಯಿಯಂತೆ ರುಚಿಕಟ್ಟಾಗಿ ಪರಿಣಮಿಸಿದಂತೆ, ಟೀ, ತಾಂಬೂಲ ಚರ್ವಣ, ಧೂಳು, ಸಿನೇಮಾ, ಸಿಗರೇಟು, ಸಲೂನಿನಲ್ಲಿ—ಮೊದಲಾದುವು ಕುಂಜಾಲರವರ ಕಲ್ಪನಾತ್ಮಕತೆಯನ್ನು, ತರ್ಕದ ಸ್ಪಷ್ಟತೆಯನ್ನು, ಸೂಕ್ಷ್ಮನಿರೀಕ್ಷಣ ಶಕ್ತಿಯನ್ನು ಪ್ರಕಟಿಸುವವು. ಇನ್ನುಳಿದ ಆರೇಳು ಲೇಖನಗಳಲ್ಲಿ ಅಂತಹ ಹೇಳಿಕೊಳ್ಳಬಹುದಾದ ಯಾವ ವೈಶಿಷ್ಟ್ಯವಿಲ್ಲ. ಒಟ್ಟಿನಲ್ಲಿ ಪ್ರಸ್ತುತ ಲಘುಪ್ರಬಂಧಕಾರರ ವಿಚಾರವಾಹಿನಿಗೆ ಮೊದಲಿನಿಂದ ಕೊನೆಯವರೆಗೆ ಅಡೆತಡೆ ಇಲ್ಲವೆನಿಸಿದರೂ, ಶೈಲಿಯ ಸೌಂದರ್ಯದೆಡೆಗೆ ಏಕೆ ಅವರ ಮನಸ್ಸು ಹರಿಯಲಿಲ್ಲವೋ ಎಂದು ಹಳಹಳಿ ಎನಿಸುವದು. ಮುದ್ರಣದೋಷಗಳು ಹೇರಳವಾಗಿ ಅಲ್ಲಲ್ಲಿ ಕಣ್ಣಿಗೆಬಿದ್ದು, ಸೌಂದರ್ಯೋಪಾಸಕನಿಗೆ ಅನಿವಾರ್ಯವಾಗಿ ಈ ಹರಟೆಗಳು ಅತಿ ನಿರಾಶೆ ಉಂಟುಮಾಡಿದಂತೆ, ಅಚ್ಚುಕಟ್ಟುತನವೂ ಹೊತ್ತಗೆಯ ಬಹಿರಂಗ ಸೌಂದರ್ಯವೂ ಮಟ್ಟುಮಾಯವಾಗಿ ಲೇಖಕನನ್ನು ಇನ್ನೂ ವಿಡಂಬನೆಗೆ ಗುರಿಮಾಡಿದೆ ಎಂದು ಉದ್ಗಾರ ತೆಗೆಯದೆ ಗತ್ಯಂತರವಿಲ್ಲ.

ಏನೇ ಇರಲಿ, ಕುಂಜಾಲರವರ ಹರಟೆಗಳು ವಿಚಾರಧಾರೆಯ ಮೂಲಕ ರಸವತ್ತಾಗಿ ಎನಿಸುವವು. ಅನುಭವ, ಭಾಷೆಯ ಲಾಲಿತ್ಯ, ಇನ್ನೂ ಹೆಚ್ಚು ಸಾಧಿಸಿದಂತೆ, ನಿಜವಾಗಿ ಅವು ಪರಿಪೂರ್ಣವೆನಿಸುವುದರಲ್ಲಿ ಸಂದೇಹವಿಲ್ಲ. ಮುಂದಿನ ಅವರ ಹರಟೆಯ ಹೊತ್ತಗೆಗಳಲ್ಲಿ ಇಂಥ ಬೆಳಕು ಬೀಳಲೆಂದು ನಮ್ಮ ಹಾರೈಕೆ.

—ಎನ್. ಎಸ್. ಜ.

ಕೆಲವರು; ತಿರಸ್ಕರಿಸಿ ಮಾತನಾಡುವವರು ಕೆಲವರು. ಅದರಂತೆಯೆ ತಕ್ಷಣ ನಿಲುಮೆಯನ್ನು ಎತ್ತಿಹಿಡಿಯುವವರು ಕೆಲವರು; ಬೀಳುಗಳೆಯುವವರು ಕೆಲವರು. ಅಮೇರಿಕೆಯ ಬಾತಾವಳವಾದ, ರಷ್ಯದ ಸಮತಾವಾದ, ಇನ್ನೆರಡೂ ಕೈಚಳಕ ನಡೆಯಿಸಿ ಸತ್ಯವಾವುದು— ಸಾಧುವಾದವನು ಯಾರೆಂಬುದನ್ನೇ ಲೋಕಕ್ಕೆ ತಿಳಿಯದಂತೆ ಮಾಡಿವೆ. ಯಾವಾಗಲೂ ಕುಟಿಲರಾಜಕಾರಣವ ಹೆಣಬರಿಸವೇ ಇಷ್ಟು: ಸಂದೇಹ, ಭೀತಿ, ಕಲಹ ಕ್ಯಾಂತಿ! ಇವಾಗಲೂ ಇಂದು ಕುಟಿಲ ರಾಜಕಾರಣದ ಕೈಯೊಳಗಿನ ಗೊಂಬೆಯಾಗಿದೆ. ಈಗ ದೊರೆಯಾಗಿರುವ ಶಕ್ತಿಗೂ ಇನ್ನೆಷ್ಟು ಕಾಲದ ಬಾಳಿಗಾಲವೋ ಎಂಬುದನು ಯಾರಿಗೂ ಹೇಳಲು ಬರುವಂತಿಲ್ಲ.

ಅಮೆರಿಕೆಯ ಕಣ್ಣುಮುಚ್ಚಾಟ

ಭಾರತದೊಂದಿಗೆ ಅಮೇರಿಕೆಯು ರಾಜಕಾರಣದ ಕಣ್ಣುಮುಚ್ಚಾಟವನ್ನೇ ನಡೆಯಿಸಿದೆಯೆಂದು ಹೇಳಬಹುದು. ಕಾಶ್ಮೀರದಲ್ಲಿಯ ಹೊಣೆಗಾರ ಮುಖಂಡರ ಬಾಯಿಂದಲೇ, ಅಲ್ಲಿದ್ದ ಅಮೇರಿಕನ್ ಅಧಿಕಾರಿಗಳು ಮಾಡಿದ ಅಪಪ್ರಚಾರದ ಸುದ್ದಿಗಳು ಪ್ರಕಟವಾದುವು. ಪಾಕಿಸ್ತಾನದಲ್ಲಿಯ ಜಾತೀಯವಾದಿ ಪ್ರತಿಗಾಮಿಗಳ ಕೆವಿಯನ್ನು ಭಾರತದ ವಿಷಯದಲ್ಲಿ ಕಚ್ಚುತ್ತಿರುವ ವಾರ್ತೆಗಳು ನಿತ್ಯ: ನಿತ್ಯವೂ ಹವೆಯಲ್ಲಿ ಹಾರಾಬರುತ್ತಲಿವೆ. ಕೋರಿಯಾ ಶಾಂತಿಪರಿಷತ್ತಿನಲ್ಲಿ ಭಾರತಕ್ಕೆ ಪ್ರಾತಿನಿಧ್ಯ ದೊರೆಯಬಾರದೆಂಬ ಪ್ರಯತ್ನವನ್ನು ಪ್ರಾಮುಖ್ಯವಾಗಿ ಅಮೇರಿಕೆಯೆ ಮಾಡಿತು. ಇದನ್ನೆಲ್ಲ ನೋಡಿದರೆ, ಭಾರತದ ಮುಖದ ಮೇಲೆ ಕೈಯೆಳೆಯುತ್ತ ಬರುತ್ತಿರುವ ಅಮೇರಿಕನ್ ರಾಜಕಾರಣಿಗಳನ್ನು ಭಾರತೀಯರು ಅದರ-ವಿಶ್ವಾಸಗಳಿಂದ ಏಕೆ ಕಾಣಬೇಕೆಂಬುದು, ಹೇಗೆ ಕಾಣಬೇಕೆಂಬುದು ತಿಳಿಯದಂತಾಗಿದೆ. ಭಾರತದ ವಿಷಯದಲ್ಲಿ ಅಮೇರಿಕನರು ನಡೆಯಿಸಿರುವ ರಾಜಕಾರಣ ಹುಡುಗಾಟಕ್ಕಿಳಿದಂತಾಗಿದೆ. ಗುಂಪಿನಲ್ಲಿ ಪ್ರಭಾವಶಾಲಿಯಾಗಿರುವ ಹುಡುಗನೊಬ್ಬನನ್ನು, ಅವನ ಪ್ರಭಾವ ಸಹಿಸದ ಹೇಡಿ ಹುಡುಗನೊಬ್ಬ ಮೇಲೆಮೇಲೆ ಸ್ನೇಹಿತನಾಗಿದ್ದುಕೊಂಡಂತೆ ನಟಿಸಿ, ಒಳಗೊಳಗೆ ಅವನ ವಿಷಯದಲ್ಲಿ ವಿರೋಧವಾಗಿ ನಡೆದುಕೊಳ್ಳುತ್ತಿರುವನು. ವಿರೋಧದ ಮಾತುಗಳು ಬಯಲಿಗೆ ಬಿದ್ದಾಗ, ಹೆಚ್ಚಿನ ಸ್ನೇಹವನ್ನು ತೋರಿಸುತ್ತ ತನ್ನ ಮೇಲಿನ ಅಪರಾಧದ ಹೊಣೆಯನ್ನು ಹಾರಿಸಿಕೊಳ್ಳುವನು. ಭಾರತದ ವಿಚಾರದಲ್ಲಿ ಅಮೇರಿಕೆ ಈ ಹೇಡಿಹುಡುಗನಂತೆಯೇ ನಡೆದುಕೊಳ್ಳುತ್ತಲಿದೆಯೆಂಬುದು ದಿನದಿನವೂ ಪ್ರತ್ಯಕ್ಷ ನಿದರ್ಶನಕ್ಕೆ ಬರುತ್ತಲಿದೆ.

ಸತ್ಯದ ಮತ್ತು ಲೋಕಶಾಂತಿಯ ಧೈರ್ಯವನ್ನೇ ಮುಂದಿಟ್ಟುಕೊಂಡು ಹೊರಟಿರುವ ಭಾರತೀಯ ರಾಜಕಾರಣ, ಡಾಲರಿನಿಂದ ಜಗತ್ತನ್ನು ಗೆಲ್ಲಬೇಕೆಂದಿರುವ ಅಮೇರಿಕೆಯ ಮಾರ್ಗದಲ್ಲಿ ಅಡ್ಡಗಾಲನ್ನು ಹಾಕುತ್ತಲಿದೆ. ಇದನ್ನು ಬಹಿರಂಗವಾಗಿ ಎದುರಿಸುವ ಧೈರ್ಯ ಇಂದು ಅಮೇರಿಕೆಗಿಲ್ಲ. ಭಾರತವು ತನ್ನ ನೈತಿಕ ಬಲದಿಂದ ಜಗತ್ತಿನ ಜನಮನವನ್ನೇ ತನ್ನ ಕಡೆಗೆ ಸೆಳೆದುಕೊಳ್ಳುತ್ತಿರುವುದನ್ನ ಅಮೇರಿಕೆಯಿಂದು ಅಸಹನೆಯಿಂದ ಕಾಣುತ್ತಲಿದೆ. ಇದರ ದುಷ್ಫಲವನ್ನು ಅಮೇರಿಕೆ ಅನುಭವಿಸಬೇಕಾದ ಸಂದರ್ಭ ಬಂದೇಬರುವುದಾದರೂ, ಭಾರತ ರಾಷ್ಟ್ರವು ಅಮೇರಿಕೆಯ ರಾಜಕಾರ್ಯದ ವಿಷಯದಲ್ಲಿ ತಕ್ಷಣ ಮುನ್ನೆಚ್ಚರಿಕೆಯಿಂದ ನಡೆದುಕೊಳ್ಳಬೇಕಾದುದು ಅತ್ಯಗತ್ಯ.

ದಿವಂಗತರಿಗೆ ಶ್ರದ್ಧಾಂಜಲಿ

ಕಳೆದ ೫ ಂಗಳಲ್ಲಿ ಕರ್ನಾಟಕ ಸಾಹಿತ್ಯಾಕಾಶದಲ್ಲಿಯು ಎರಡು ತಾರೆಗಳು ಮರೆಯಾಗಿ, ಕನ್ನಡಿಗರನ್ನು ದುಃಖಕ್ಕೆ ಗುರಿಮಾಡಿದುವು.

ಹಲಸಂಗಿಯ ಚೆನ್ನಮಲ್ಲಪ್ಪನವರು ಎಲೆಯ ಮರೆಯಲ್ಲಡಗಿ ಹೂವಿನಂತೆ, ಸಾಹಿತ್ಯಸುರಭಿಯನ್ನು ನಾಡಿನಲ್ಲಿ ಹರಡಿದವರು. ಹಳ್ಳಿಯಲ್ಲಿ ಹುಟ್ಟಿ ಹಳ್ಳಿಯಲ್ಲಿಯೇ ಬೆಳೆದವರಾದರೂ, ಅವರ ಸಂಘಟನಾಶಕ್ತಿ ದೊಡ್ಡದು. ಅಲ್ಲೊಂದು ಗೆಳೆಯರ ಗುಂಪನ್ನು ಕಟ್ಟಿಕೊಂಡು, ಸಾಹಿತ್ಯ ಸಂಸ್ಕೃತಿ ಪ್ರಚಾರಕವಾದ ಹಲವು ಚಟುವಟಿಕೆಗಳನ್ನು ನಡೆಯಿಸುತ್ತಿದ್ದರು. ಶ್ರೀ. ಚೆನ್ನಮಲ್ಲಪ್ಪನವರ ಮನಸ್ಸು ಹೆಚ್ಚಾಗಿ ಅಧ್ಯಾತ್ಮವಿಚಾರದ ಕಡೆಗೆ. ಶ್ರೀ ಅರವಿಂದರ ತತ್ತ್ವಜ್ಞಾನದ ಅಭ್ಯಾಸ ಅನುಷ್ಠಾನಗಳಲ್ಲಿಯೆ ಅವರ ಹೆಚ್ಚಿನ ವೇಳೆ ಹೋಗುತ್ತಿದ್ದಿತು. ಜಾನಪದಸಾಹಿತ್ಯದಲ್ಲಿಯ ತಿರುಳನ್ನು ಬಯಲಿಗೆ ತಂದ ಮೊದಲಿಗರಲ್ಲಿ ಇವರೂ ಒಬ್ಬರು. ಕಳೆದ ತಿಂಗಳ ೧೩ ನೆಯ ತಾರೀಖಿನಂದು ತಮ್ಮ ೫೦ನೆಯ ವಯಸ್ಸಿನಲ್ಲಿಯೆ ಚೆನ್ನಮಲ್ಲಪ್ಪನವರು ದಿವಂಗತರಾದರು.

ಧಾರವಾಡದ ಸುಪ್ರಸಿದ್ಧ ಇತಿಹಾಸ ಸಂಶೋಧಕರಾದ ಶ್ರೀ. ನಾ. ಶ್ರೀ. ರಾಜಪುರೋಹಿತರೂ ಕಳೆದ ತಿಂಗಳು ೩೦ರಂದು ತಮ್ಮ ಜೀವನಯಾತ್ರೆಯನ್ನು ಮುಗಿಸಿದರು. ಇವರು ಮಾಡಿದ ಇತಿಹಾಸ ಸಂಶೋಧನೆಗಳು ಸಂಶೋಧನ ಪ್ರಪಂಚದಲ್ಲಿ ವಿಶೇಷ ಮನ್ನಣೆ ಪಡೆದಿವೆ. ಯಾವ ಸರಕಾರವ ಇಲ್ಲವೆ ಸಂಸ್ಥೆಯ ಸಹಾಯ-ಸಹಕಾರಗಳಲ್ಲದಾಗಲೂ, ಕೇವಲ ಸ್ವಯಂಪ್ರೇರಣೆಯಿಂದ ಸಂಶೋಧನ ಕಾರ್ಯವನ್ನು ನಡೆಯಿಸಿದ ವೀರ ತಪಸ್ವಿಗಳವರು. ಬಹುಶ್ರುತರು. ಸವಿಯಾಗಿ ಮಾತನಾಡುವ ಸ್ವಭಾವದವರಲ್ಲವಾದರೂ, ಅವರ ಮಾತುಗಳಲ್ಲಿ ಹುದುಗಿರುವ ಅನೇಕ ಐತಿಹಾಸಿಕ ಸತ್ಯಸಂಗತಿಗಳ ಮೂಲಕ, ಎರಡೆರಡು ತಾಸು ಅವರೊಂದಿಗೆ ಮಾತನಾಡಿದರೂ ಬೇಸರು ಬರುತ್ತಿರಲಿಲ್ಲ. ಅವರ ಕಾರ್ಯದ ಬೆಲೆಯನ್ನರಿಯದ ವಾತಾವರಣದಲ್ಲಿಯೆ ಬದುಕಿರಬೇಕಾಗಿ ಬಂದುದರಿಂದ, ಕೊನೆಯವರೆಗೂ ಅವರು ಬಡತನದಲ್ಲಿಯೆ ಜೀವಿಸಬೇಕಾಯಿತು. ಅವರೂ ಬಡತನದ ಚಿಂತೆಯನ್ನು ಅವರೆಂದೂ ಮಾಡಿದವರಲ್ಲ. ನಿಷ್ಕಾಮ ಕರ್ಮಯೋಗಿಯ ಜೀವನ ಅವರದು.

ಇಬ್ಬರೂ ದಿವಂಗತರ ಅಗಲಿಕೆ ನಾಡಿಗೆ ತುಂಬಾರದ ಹಾನಿ. ಇಬ್ಬರಿಗೂ ನಮ್ಮ ಶ್ರದ್ಧಾಂಜಲಿಗಳು!

ಹೂವಿನಂತೆ ಮುಖಚರ್ಯೆ.

ಕಾಳಕಳ್ಳ, ಮೃದುತ್ವ ವಿಲುಪ್ತತೆ : ಈ ವಿಶೇಷ ಸಂಗಮದಿಂದ
ಮುಖವನ್ನು ಅಂದಗೊಳಿಸಲು ಇದನ್ನು ಬಿಟ್ಟರೆ ಇನ್ನೊಂದಿಲ್ಲ.

AFGHAN SNOW

Leading Beauty Cream of the East

Patanwala

FOR PERFUMES & COSMETICS

CS

ಶರತ್‌ಪ್ರಕಾಶನ ಮಂದಿರ. ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು!
ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ
ಬೆಲೆಗೆ ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

ಆನಂದಕಂದ'ರ ಕಥೆ, ಕಾದಂಬರಿ, ಕವನಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು ಎಲ್ಲವೂ ನಮ್ಮಲ್ಲಿ ದೊರೆಯುವವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮೀಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು.

ನಮ್ಮ ಮಂದಿರ ಪ್ರಕಟಿಸಿದ 'ಆನಂದಕಂದ'ರ ಸಾಮಾಜಿಕ ಕಾದಂಬರಿ:

ಮಗಳ ಮದುವೆ

೧೯೩೦ನೆಯ ಸತ್ಯಾಗ್ರಹ ಚಳವಳಿಯ ಹಿನ್ನೆಲೆಯಲ್ಲಿ ಉತ್ತರಕರ್ನಾಟಕದ ಸಾಮಾಜಿಕ ಜೀವನವನ್ನು ವಿವಿಧ ಮುಖದಲ್ಲಿ ಚಿತ್ರಿಸಿ ತೋರಿಸಿದ ರಮ್ಯ ಕಥಾನಕ. ಓದಲು ಕೈಯ್ಯಲ್ಲಿ ತೆಗೆದುಕೊಂಡರೆ, ಮುಗಿಸುವ ವರೆಗೂ ಪುಸ್ತಕವನ್ನು ಕೆಳಗೆ ಇರಿಸಲಿಕ್ಕಾಗದಂತಹ ಆಕರ್ಷಕವಾದ ಕತೆಗಾರಿಕೆ. ಓದಿದ ರಸಿಕರಿಂದ ಧನ್ಯವಾದಗಳ ಸುರಿಮಳೆ!

ಕ್ರೌ. ಅ. ೩೫೦ ಪುಟಗಳು ಸಾದಾ ಪ್ರತಿಗೆ ೪-೦-೦; ಸುಂದರ ಪ್ರತಿಗೆ ೪-೧೨-೦

ಬೆಳವಡಿ ಮಲ್ಲಮ್ಮ
(ಶರಂಗನಾಟಕ ಸಂಕಲನ)
ಕ್ರೌ. ಅ. ೧೧೩ ಪುಟ. ಬೆಲೆ ೧-೮-೦

ಕಾರಹುಣ್ಣಿವೆ
(ಕವನಸಂಕಲನ)
ಕ್ರೌ. ಅ. ೧೩೮ ಪುಟ. ಬೆಲೆ ಸಾದಾ ೨-೦-೦
ಸುಂದರ ೨-೮-೦

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ವಿರಹಿಣಿ	ಬಡತನದ ಬಾಳು	ಕರ್ನಾಟಕ ಜನಜೀವನ
ಸುದರ್ಶನ	ಒಡನಾಡಿ	ನಮ್ಮ ಬದುಕು	ಜೀವನ ಚರಿತ್ರ
ಅಕಾಂತಿಪರ್ವ		ಸಂಸಾರ ಚಿತ್ರ	ಶ್ರೀ ಬಸವಣ್ಣನವರು
ಮಗಳ ಮದುವೆ		ಮಾತನಾಡುವ ಕಲ್ಲು	

ಅಲ್ಲದೆ ಶ್ರೀ ಹುದ್ದಾರರ 'ಚಿತ್ರಕಲಾಪ್ರವೇಶ'ವೂ ಚಾಡಿಯ ಚಾಣಕ್ಯನ 'ಜಾತೀಯ ಸಮಸ್ಯೆ' 'ಕರ್ನಾಟಕ ಏಕೀಕರಣ' ಈ ಕಿರಿಹೊತ್ತಿಗೆಗಳೂ ದೊರೆಯುವವು.

ಶರತ್‌ಪ್ರಕಾಶನ ಮಂದಿರಕ್ಕೆ ಜ ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ
ಸವಲತ್ತುಗಳು. ಬೇಗನೆ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ:

ಎಸ್. ಡಿ. ಧರಮಟ್ಟಿ, ಶರತ್‌ಪ್ರಕಾಶನ ಮಂದಿರ, ಧಾರವಾಡ

Printed by N. A. Hoskeri at the Vijaya Press, Dharwar, and published forhet Proprietors Jayanti Publications, by S. D. Dharmatti at the Jayanti Office, Dharwar